ARS 15 App 90

1928 ನೇ ಸಂಖ್ಯೆಯ ಪುಸ್ತಕವು ಬಾಳು ಪುಸ್ತಿತಿಯಲ್ಲಿದ್ದ ಕಾರಣ ಮೂಕ್ಯ ಚಿತ್ರಕಥೆಯು ಸಾಧ್ಯವಾಗಿಲ್ಲ.

ಸ್ಥಾಪನೆ : ೧೯೬೮

1928-29

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೯೪

ಶತಮಾನೋತ್ತರ ಬೆಳ್ಳಿ ಹಬ್ಬ

(ಎಸ್.ಎಲ್.ಸಿ. ಬ್ಯಾಚ್)

ವರ್ಷ 1928

ಶ್ರೀ. ಚನ್ನಬಸಪ್ಪನವರು

(೧೯೨೩–೧೯೮೧)

ನೆಯ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತತಿ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

Reg. No. B. 19.

ಕನ್ನಡ ಶಾಲಾಪತ್ರಿಕೆ.



ಪುಸ್ತಕ ೫೧. | ಸಂಚಿಕೆ ೫.

ವಿಷಯಾನುಕ್ರಮಣಿಕೆಯು

೧.	ಸ್ಫುಟವಿಷಯಗಳು.	೧–೨
೨	ಹಿರಿಯರು ಹೇಳುವ ಕಥೆಗಳ ಪ್ರಯೋಜನ.	೨–೪
೩.	ರುಗ್ಬಿಯ ಹೆಪ್ ಮಾಸ್ತರನು.	೯–೧೭
೪.	ಹಿಂದೂ ಸಮಾಜದ ಜಾತಿಭೇದದ ವಿಚಾರವು.	೧೭–೨೪
೫.	ಪತ್ರವ್ಯವಹಾರ.	೨೪–೨೬
೬	ವಿದ್ಯಾಖಾಲೆಯ ನೋಟೀಸು.	೨೭–೩೨
೭.	ಪತ್ರಗಳ ಸಾರಾಂಶ.	೩೨–೩೫

Printed by K. H. Mudvedkar at the Karnatak Printing Works Dharwar, and Published by V. B. Joshi B. A. at the Training College for men Dharwar.

1915

ಈ ಸಂಚಿಕೆಯೊಳಗಿನ ಸ್ಪುಟವಿಷಯಗಳು.

೧. ರೇಡಿಯಮ್ ಧಾತುವೂ, ಪೃಥ್ವಿಯ ಉಷ್ಣತೆಯೂ.
೨. ಡಾಂಬರಿನ ಸಂಬುಧದಿಂದ ಜರ್ಮನ್ನರ ಉದ್ಯೋಗವು.
೩. ಕೆಲವು ಬಣ್ಣಗಳ ಮಿಶ್ರಣಗಳು.
೪. ಸಭ್ಯಾಚರಣೆಯ ಇಪ್ಪತ್ತು ನಿಯಮಗಳು.
೫. ದಾರಿದ್ರ್ಯಂ ಪರಮೌಷಧಂ
೬. ಚೇಳು ಕಡಿದದ್ದಕ್ಕೆ ಔಷಧ.

ಶಾಲಾಪತ್ರಕದಲ್ಲಿ ಜಾಹೀರಾತುಗಳನ್ನು ಮುದ್ರಿಸುವ ಹೊಸ ದರಗಳು.

೧ ರಿಂದ ಮೂರು ತಿಂಗಳ ವರೆಗೆ ಇಟ್ಟರೆ ಒಂದು ತಿಂಗಳಿಗೆ ಒಂದು ಸಾಲಿಗೆ ೪ ಆ.
೬ ತಿಂಗಳು ಇಟ್ಟರೆ ಸದರ ಸದರ ೩ ಆ.
೧ ವರ್ಷ ಇಟ್ಟರೆ ಸದರ ಸದರ ೨ ಆ.

ಅಪೂರ್ಣ ಸ್ಥಾಲುಗಳನ್ನು ಪೂರ್ಣ ಸಾಲುಗಳೆಂದು ತಿಳಿಯುವೆವು.

ತಾ॥೧–೧೨–೧೩ } ವ್ಯಾನೇಜರ,
ಕನ್ನಡ ಶಾಲಾಪತ್ರಕ ಧಾರವಾಡ.

ನೋಟೀಸು

ಕೆಳಗೆ ಕಾಣಿಸಿದ ಪುಸ್ತಕಗಳು ವಿದ್ಯಾಖಾತೆಯಿಂದ ಮಂಜೂರ ಮಾಡಲ್ಪಟ್ಟಿದ್ದು ನಮ್ಮಿಂದ ಪ್ರಸಿದ್ಧಿಸಲ್ಪಟ್ಟವೆ. (೧) ಲಘು-ವ್ಯಾಕರಣ. (೨) ಮುಂಬೈ-ಇಲಾಖೆಯ ಭೂಗೋಲ. (೩) ಮೂರನೇ ಭಾಗ ಭೂಗೋಲ. (೪) ಮಗದಾಳಕೃತ ಹಿಂದುಸ್ತಾನದ ಭೂಗೋಲ. (೫) ಹೊಸ ಪದ್ಧತಿಯ ಭೂಮಿತಿ. ಇವಲ್ಲದೆ ಚಂದಾವರಕರಕೃತ ಹೊಸ ಪದ್ಧತಿಯ ಜವಾಖರ್ಚು, ವ ಅಂಕಗಣಿತ ಭಾಗ, ೧. ಮಗದಾಳಕೃತ ಪಶಿಯಾಖಂಡದ ಭೂಗೋಲ ಎಂಬ ಪುಸ್ತಕಗಳು ಅಚ್ಚಿನಲ್ಲಿದ್ದು ತೀವ್ರವೇ ತಯಾರಾಗುವವು. ಬೇಕಾದವರು ಕೆಳಿನ ವಿಳಾಸಕ್ಕೆ ಪತ್ರಗೆ ಬರೆಯಬೇಕು.

ವಿದ್ಯಾರ್ಥಿಗಳು ಪುಸ್ತಕ ಬೇಕಾದಲ್ಲಿ ತಮ್ಮ ಶಾಲೆಯ ಅಧ್ಯಾಪಕರ ಮಾರ್ಫತ ಬರೆಯಬೇಕು.

ಕೆ. ವಿ. ಭಂಡಿವಾಡ, ಪಬ್ಲಿಶರ.
ಕರ್ನಾಟಕ ಪ್ರಿಂಟಿಂಗ ವರ್ಕ್ಸ, ಧಾರವಾಡ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಕನ್ನಡ

ಶಾಲಾ ಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬ಳ	ಜನವರಿ ೧೯೨೫	ಸಂ. ೧೦.

ಸ್ಫುಟವಿಚಾರಗಳು

ಮುಂಬೈ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ.

೧೯೨೫–೨೬ನೇ ಇಸವಿಯ ವಿದ್ಯಾಖಾತೆಯ ವರದಿಯು ಈಗ ಪ್ರಸಿದ್ಧವಾಗಿದೆ. ಆ ವರ್ಷದಲ್ಲಿ ಶಿಕ್ಷಣಸಂಸ್ಥೆಗಳು ಳಷ್ಟಿರಿಂದ ಹೆಚ್ಚಾಗಿ ೧೫,೭೩೨ ಆಗಿವೆ. ಸರಕಾರದಿಂದ ಮುಂಜೂರಾದ ಸಂಸ್ಥೆಗಳ ಸಂಖ್ಯೆಯು ೨೫೭ರಿಂದ ಹೆಚ್ಚಾಗಿ ಒಟ್ಟು ೧೪,೩೭೧ ಸಂಸ್ಥೆಗಳಿರುವವು. ಸರಕಾರದಿಂದ ಮುಂಜೂರಾಗದ ಸಂಸ್ಥೆಗಳು ೧೨೫ರಿಂದ ಕಡಿಮೆಯಾಗಿ ೧,೩೬೧ ಆಗಿವೆ. ೧೪,೩೭೧ ಸಂಸ್ಥೆಗಳಲ್ಲಿ, ೧೪ ಆರ್ಟ್ಸ್ ಕಾಲೇಜುಗಳೂ, ೯ ಉದ್ಯೋಗವನ್ನು ಕಲಿಸುವ ಸಂಸ್ಥೆಗಳೂ, ೪೯೬ ಹಾಯಸ್ಕೂಲುಗಳೂ ೧೩,೪೫೮ ಪ್ರಾ. ಶಾಲೆಗಳೂ, ೪೦೪ ಸ್ಪೆಶಲ್ ಶಾಲೆಗಳೂ ಇರುವವು. ಪ್ರಾ. ಶಾ. ಗಳು ಒಟ್ಟು ೧೦,೨೩೭ ಹಳ್ಳಿ,ಪಟ್ಟಣಗಳಲ್ಲಿ ಅವೆ.

ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೨೫,೩೨,೩೨೮ರಿಂದ ಹೆಚ್ಚಾಗಿ ೧೦,೭೪,೧೦೦ ತಿಗಿದೆ. ಅದರಲ್ಲಿ ೮,೬೮,೩೪೪ ಮಂದಿ ಬಾಲಕರೂ ೨,೦೫,೭೫೬ ಮಂದಿ ಬಾಲಿಕೆಯರೂ ಇರುವರು. ಜಾತಿಯಂತೆ ವರ್ಗೀಕರಣ ಮಾಡಿದರೆ ೪,೯೧೩ ಯುರೋಪಿಯನ್ನರೂ, ೩೧,೯೩೫ ಹಿಂದೀ ಕ್ರಿಸ್ತಿಯನ್ನರೂ ೮,೨೨,೭೭೬ ಹಿಂದುಗಳೂ, ೧,೯೩,೬೮೩ ಮಹಮ್ಮದೀಯರೂ, ೩೪ ಬೌದ್ಧಧರ್ಮಿಗಳೂ, ೧೭,೨೦೫ ಪಾರ್ಶಿ

ಗಳೂ, ಲಂಂ ಶೀಕರೂ, ೨೮ಂಳ ಇತರರೂ ಶಾಲೆಗಳಲ್ಲಿ ಕಲಿಯುತ್ತಿರುವರು. ಶಿಕ್ಷಣದ ಒಟ್ಟು ವೆಚ್ಚವು ೩೭ ಲಕ್ಷದಿಂದ ಹೆಚ್ಚಾಗಿ ೩೭೬ ಲಕ್ಷ ಆಗಿದೆ. ಒಟ್ಟು ವೆಚ್ಚದಲ್ಲಿ ಸರಕಾರದವರು ನೂರಕ್ಕೆ ೫೧.೧ ವನ್ನು, ೨೦.೮ ವನ್ನು ಬೋರ್ಡಿನವರೂ, ೧೬.೫ ವನ್ನು ಫೀ ಹಣದಿಂದಲೂ, ೧೧.೬ ವನ್ನು ಇತರ ಫಂಡಿನಿಂದಲೂ ವೆಚ್ಚವಾಗುತ್ತಿರುವದು.

ಸುಧಾರಣೆಯ ಕಾಯದೆ ಆದಂದಿನಿಂದ.

೧೯೨೧ನೇ ಇಸವಿಯ ಆರಂಭಕ್ಕೆ ಸುಧಾರಣೆಯ ಕಾಯದೆಯು ಅಮಲಿನಲ್ಲಿ ಬಂತು. ಅಂದಿನಿಂದ ೫ ವರ್ಷಗಳಲ್ಲಿ ಸರಕಾರಿ ಮಂಜೂರಿ ಪಡೆದ ಶಾಲೆಗಳ ಸಂಖ್ಯೆಯು ೬೫೩ರಿಂದ ಅಂದರೆ ನೂರಕ್ಕೆ ೪೦೩ ರಿಂದ ಹೆಚ್ಚಿತು. ಹುಡುಗರ ಸಂಖ್ಯೆಯು ೧೫ ಲಕ್ಷ ಅಥವಾ ನೂರಕ್ಕೆ ೧೫೫ ರಂತೆ ಹೆಚ್ಚಿತು. ಈ ಕಾಲಕ್ಕೆ ನಾನ್‌ಕೊಂಪರೇಶನ್ ವಿಲ್ಲದಿದ್ದರೆ ಸಂಖ್ಯೆಯು ಇದಕ್ಕೂ ಹೆಚ್ಚು ಆಗುತ್ತಿತ್ತು. ಈ ಅವಧಿಯಲ್ಲಿ ಒಟ್ಟು ವೆಚ್ಚವು ೨೬೩ ಲಕ್ಷದಿಂದ ೩೭೬ ಲಕ್ಷಕ್ಕೆ ಮುಟ್ಟಿರುವದು. ಅಂದರೆ ನೂರಕ್ಕೆ ೪೨.೯ ದಂತೆ ಹೆಚ್ಚಾಯಿತು. ಸರಕಾರಿ ಫಂಡಿನಿಂದ ಕೊಡುವ ವೆಚ್ಚವೇ ೧೪೯ ಲಕ್ಷದಿಂದ ೧೯೫ ಲಕ್ಷಕ್ಕೆ ಮುಟ್ಟಿರುವದು.

ಬ್ರಿಟಿಶ್ ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ೧೩ ಕಾಲೇಜುಗಳು ಸಂಸ್ಥಾನಗಳಲ್ಲಿ ೪ ಕಾಲೇಜುಗಳೂ ಇರುವವು. ಈ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೩೩೩ರಿಂದ ಹೆಚ್ಚಾಗಿ ೭,೩೮೩ಕ್ಕೆ ಮುಟ್ಟಿತು. ಇವರಲ್ಲಿ ೧,೮೮೯ ಮಂದಿ ಕಾಲೇಜಿನ ವಸತಿಗೃಹಗಳಲ್ಲಿ ಇರುವರು. ಎಲ್ಲ ಆರ್ಟ್ಸ್ ಕಾಲೇಜುಗಳ ವೆಚ್ಚವು ೧೬,೭೫,೯೦೯ ರೂ. ಆಗುತ್ತಿದ್ದು ಅದರಲ್ಲಿ ನೂರರಲ್ಲಿ ೨೫.೯ ದಷ್ಟು ಹಣವು ಪ್ರಾಂತಿ ಉತ್ಪನ್ನದಿಂದ ದೊರೆಯುತ್ತಿರುವದು. ಯುನಿವರ್ಸಿಟಿ ರಿಫಾರ್ಮ ಕವಿಟಿಯವರ ವಿಶ್ವವಿದ್ಯಾಲಯದ ಘಟನೆಯಲ್ಲಿ ಬದಲಾವಣೆಗಳು ಆಗುವದಕ್ಕಾಗಿ ಮಾಡಿದ ಬಿಲ್ಲು ಕಾಯದೆಕೌನ್ಸಿಲಿನ ಮುಂದೆ ಇರುವದು.

ಪ್ರಾಥಮಿಕ ಶಿಕ್ಷಣ.

೧೯೨೬–೨೭ನೇ ವರ್ಷವು ಮುಗಿಯುವದರೊಳಗಾಗಿ ಸಿಂಧದಲ್ಲಿ ೧ ಗುಜರಾತದಲ್ಲಿ ನಾಲ್ಕು ಜಿಲ್ಲೆಗಳ ಹೊರತು ಎಲ್ಲ ಕಡೆಯಲ್ಲಿ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನವರು ಪ್ರಾಥಮಿಕ ಶಿಕ್ಷಣದ ಕಾರ್ಯ ಸರ್ವಸ್ವವನ್ನು ಸ್ವೀಕರಿಸಿದರು. ಮುಂಬಯಿ ಬಾಂದ್ರಾ ಸಾತಾರಾ, ಧುಳೆ, ಸೂರತ, ಬ್ಯಾಡಿಗಿ ಈ ಆರು ಮುನಿಸಿಪಾಲಟಿಗಳ ಹದ್ದಿನೊಳಗೆ ಒತ್ತಾಯದ ಶಿಕ್ಷಣವು ಪ್ರಾರಂಭವಾಗಿರುವದು.

ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆಯು ೫೫೬ರಿಂದ ಅಂದರೆ ನೂರಕ್ಕೆ ೪,೩ರಿಂದ ಬೆಳೆಯಿತು. ವಿದ್ಯಾರ್ಥಿಗಳ ಸಂಖ್ಯೆಯು ೫೮,೦೩೭ರಿಂದ ಅಥವಾ

ಂಕ್ಕೆ ೬ಲದಿಂದ ಹೆಚ್ಚಾಗಿ ೯,೧೩,೧೬೮ ಆಗಿದೆ. ಮುಖ್ಯವಾಗಿ ಮುಂಬೈ ಶಹರದ ರಡು ವಾರ್ಡುಗಳಲ್ಲಿ ಒತ್ತಾಯದ ಶಿಕ್ಷಣಕ್ಕೆ ಪೂರ್ವಸಿದ್ಧತೆಯೆಂದು ಆರಂಭಿಸಿದ ಕ್ಷಣ ಪ್ರಸಾರದ ದೆಸೆಯಿಂದಲೂ ಗುಜರಾಥದ ಕೆಲವು ಮುನಸಿಪಾಲಿಟಿಗಳಲ್ಲಿದ್ದ ಇಷ್ಟೀಯ ಶಾಲೆಗಳು ಮುರಿದು ಹೋದದರಿಂದಲೂ ಸಂಖ್ಯೆಯು ಬೆಳೆಯಲಿಕ್ಕೆ ಾರಣವಾಯಿತು. ಇದರಿಂದ ೧೦೦ ಚೌರಸಮೈಲಿನ ಕ್ಷೇತ್ರಕ್ಕೆ ಒಂದು ಗಂಡು ುಡುಗರ ಪ್ರಾಥಮಿಕ ಶಾಲೆಯು ಇದ್ದಂತೆಯೂ ೨೦೨ ಹಳ್ಳಿಗಳಿಗೆ ಒಂದು ಸಾಲೆಯು ೂರೆತಂತೆಯೂ ಆಗಿರುವದು. ಮತ್ತು ಹುಡುಗರ ಸಂಖ್ಯೆಯು ಹಿಂದಿನ ವರ್ಷ ನಸಂಖ್ಯೆಗೆ ೧೦೦ಕ್ಕೆ ೬೦೮ ಇದ್ದದ್ದು ಈ ವರ್ಷ ೬೦೨ ಆಗಿರುವದು.

ಪ್ರಾಥಮಿಕ ಶಿಕ್ಷಣದ ವೆಚ್ಚವು ೧೪೧ ಲಕ್ಷ ರೂ. ಇದ್ದದ್ದು ೧೧ ಲಕ್ಷ ರೂ. ಳಿಂದ ಬೆಳೆದದೆ. ಇದರಲ್ಲಿ ನೂರಕ್ಕೆ ೬೩೪ ರಂತೆ ಸರಕಾರಿ ಫಂಡಿನಿಂದಲೂ ೫೦೮ ರಂತೆ ಬೋರ್ಡಿನ ಫಂಡಿನಿಂದಲೂ ೩೦೩ ದಷ್ಟು ಫೀಯಿಂದಲೂ ೨೦೫ ಷ್ಟು ಇತರ ಬಾಬುಗಳಿಂದಲೂ ದೊರೆಯುತ್ತದೆ. ವಿದ್ಯಾಖಾತೆಯ ಒಟ್ಟು ವೆಚ್ಚದಲ್ಲಿ ಪ್ರಾಥಮಿಕ ಶಿಕ್ಷಣದ ವೆಚ್ಚವು ನೂರರಲ್ಲಿ ೪೮ ಕ್ಕಿಂತ ಹೆಚ್ಚು ಇರುವದು. ಗಂಡು ುಡುಗರ ಪ್ರಾಥಮಿಕ ಶಾಲೆಯಲ್ಲಿ ಒಬ್ಬ ಹುಡುಗನ ಶಿಕ್ಷಣಕ್ಕೆ ಸರಾಸರಿ ವೆಚ್ಚವು ರೂ. ೮ ೩. ಬರುತ್ತಿದ್ದು ಅದರಲ್ಲಿ ಸರಕಾರದಿಂದ ಕೊಡಲ್ಪಡುವ ಭಾಗವು ೦-೩-೦ ಇರುತ್ತದೆ.

ದೊಡ್ಡ ಸವಕಳಿಯು.

ರಿಪೋರ್ಟಿನಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಆಗುವ ಸವಕಳಿಯನ್ನು ಕುರಿತು ೇಚಿಸಿರುತ್ತದೆ. ಬಾಲಕರ ಇಯತ್ತೆಗೆ ಬಂದ ಹುಡುಗರಲ್ಲಿ ನೂರಕ್ಕೆ ೧೨ ರಿಂದ ೫ ರಷ್ಟು ಹುಡುಗರು ೫ ವರ್ಷಗಳ ಮೇಲೆ ನಾಲ್ಕನೇ ಇಯತ್ತೆಯಲ್ಲಿ ತೇರ್ಗಡೆ ಾಂದುವರು. ಮತ್ತು ೧೦೦ಕ್ಕೆ ೫೦ರಂತೆ ಹುಡುಗರೂ ೬೫ರಂತೆ ಹುಡುಗಿಯರೂ ಇಲ್ಲವೆ ೧ನೇ ಇಯತ್ತೆಯಲ್ಲಿ ಉಳಿಯುವರು. ಹುಡುಗರು ೪ನೇ ಇಯತ್ತೆಗೆ ಕ ಕಲಿತ ಹೊರಕು ಅಕ್ಷರಸ್ಥರಾಗುವದಿಲ್ಲ. ಪರಂತು ಹಳ್ಳಿಗಳಲ್ಲಿ ೪ನೇ ಇಯತ್ತೆ ನ್ನು ಮುಗಿಸಿ ಹೋದ ಹುಡುಗರಲ್ಲಿ ಬಹಳಷ್ಟು ಮಂದಿ ಸ್ವಲ್ಪ ಕಾಲದಲ್ಲಿಯೇ ತದ್ವನ್ನೆಲ್ಲ ಮರೆತು ಪುನಃ ನಿರಕ್ಷರಿಗಳಂತೆ ಆಗುತ್ತಾರೆಂದು ತಿಳಿದದೆ. ಪ್ರಾಥಮಿಕ ಣದ ಸಲುವಾಗಿ ೧೪೧ ಲಕ್ಷ ರೂ. ವೆಚ್ಚವಾಗುವಾಗ ಈ ತರದ ಸವಕಳಿಯು ಷ್ಟವಾದದ್ದು. ಈ ಸವಕಳಿಗೆ ಜನತೆಯ ಸಾಂಪತ್ತಿಕ ಸ್ಥಿತಿಯೇ ಮುಖ್ಯ ಕಾರಣ ಗಿದೆ. ಹಳ್ಳಿಗಳಲ್ಲಿ ಹೊಲದೊಳಗಿನ ಕೆಲಸಗಳನ್ನಾಗಲಿ, ಬೇರೆ ಕೈಕೆಲಸಗಳನ್ನಾ ಜನರು ಹುಡುಗರ ಕಡೆಯಿಂದ ಮಾಡಿಸಿಕೊಳ್ಳುತ್ತಾರೆ. ದೇಶಭಾಷೆಗಳಲ್ಲಿ ಹುಡು ಗೆ ಓದಲಿಕ್ಕೆ ಮನೋರಂಜಕವಾದ ಸುಲಭ ಪುಸ್ತಕಗಳು ಕಡಿಮೆಯಾಗಿರುವದೂ,

ಅಂಥ ಪುಸ್ತಕಗಳು ಅವರಿಗೆ ದೊರೆಯದಿರುವದೂ, ಅದಕ್ಕೆ ಕಾರಣವಾಗಿದೆ. ಅದರಿಂದ ಹುಡುಗರು ಓದುವ ಹವ್ಯಾಸವನ್ನೇ ಬಿಟ್ಟು ಶಾಲೆಯಲ್ಲಿ ಕಲಿತದ್ದನ್ನೂ ಮರೆತು ಬಿಡುತ್ತಾರೆ. ಆದ್ದರಿಂದ ಹಳ್ಳಿಗಳಲ್ಲಿ ಪುಸ್ತಕಾಲಯಗಳನ್ನೂ ಸ್ಥಾಪಿಸುವ ವಿಷಯದಲ್ಲಿ ಸರಕಾರದವರು ವಿಚಾರವನ್ನು ಮಾಡುತ್ತಿದ್ದಾರೆ. ಮುಖ್ಯವಾಗಿ ಹಳ್ಳಿಗಳ ಈಗಿನ ಪಾಠಕ್ರಮ ಹಾಗು ಅವರು ಓದಬಹುದಾದ ಪ್ರಾಥಮಿಕ ಪುಸ್ತಕಗಳು ಇವನ್ನು ಆಲೋಚಿಸಿ ಯೋಗ್ಯ ಅಭಿಪ್ರಾಯವನ್ನು ಪ್ರಸಿದ್ಧ ಮಾಡುವದರ ಸಲುವಾಗಿ ಒಂದು ಕಮಿಟಿಯು ಸದ್ಯದಲ್ಲಿಯೇ ಏರ್ಪಟ್ಟಿರುತ್ತದೆ.

ಹೆಣ್ಣುಮಕ್ಕಳ ಶಿಕ್ಷಣ.

ಹೆಣ್ಣು ಮಕ್ಕಳ ಎಲ್ಲತರದ ಶಾಲೆಗಳ ಸಂಖ್ಯೆಯು ೧೭೪೪ ಈ ವರ್ಷ ೨೫ ರಿಂದ ಹೆಚ್ಚಾಗಿದೆ. ಶಿಕ್ಷಣ ಹೊಂದುತ್ತಿರುವ ಹುಡುಗಿಯರ ಸಂಖ್ಯೆಯು ಹಿಂದಿನ ವರ್ಷ ೧,೯೬,೩೨೨ ಇದ್ದದ್ದು ಈಗ ೨,೦೫,೭೬೬ ಆಗಿದೆ. ಈ ಸಂಖ್ಯೆಯಲ್ಲಿ ೧,೩೬,೮೫೫ ಹೆಣ್ಣುಮಕ್ಕಳು ಗರ್ಲ್ಸ್‌ಶಾಲೆಗಳಲ್ಲಿಯೂ ೬೮,೯೨೧ ಗಂಡುಮಕ್ಕಳ ಶಾಲೆಯಲ್ಲಿಯೂ ಇರುವರು. ಕಲಿಯುವ ಹುಡುಗಿಯರ ಸಂಖ್ಯೆಯು ಇಲಾಖೆಯ ಹೆಂಗಸರ ಸಂಖ್ಯೆಗೆ ಹಿಂದಿನ ವರ್ಷ ನೂರಕ್ಕೆ ೨೦೪ ಇದ್ದದ್ದು ಈ ವರ್ಷ ೨೦೨೫ ದಷ್ಟು ಆಗಿದೆ. ಈ ಪ್ರಮಾಣವು ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿ ಹೀಗೆ ಇರುವದು:- ಮುಂಬಯಿ ೨೦೨, ಮಧ್ಯಭಾಗ ೧೦೮, ಉತ್ತರಭಾಗ ೩೦೭, ದಕ್ಷಿಣಭಾಗ ೧೦೯ ಮತ್ತು ಸಿಂಧ ೧೦೬ ಸರಕಾರಿ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವ ಹೆಣ್ಣುಮಕ್ಕಳಲ್ಲಿ ೪೬೭ ಕಾಲೇಜುಗಳಲ್ಲಿ (ಹಿಂದಿನ ವರ್ಷದ ಸಂಖ್ಯೆ ೪೨೯.) ಅಂದರೆ ೩೯೮ ಆರ್ಟ್ಸ್ ಕಾಲೇಜುಗಳಲ್ಲಿ ೬೯ ವ್ಯವಸಾಯದ (ಮೆಡಿಕಲ್ ಮೊದಲಾದ) ಕಾಲೇಜುಗಳಲ್ಲಿ, ೧೨,೬೦೬ ಮಾಧ್ಯಮಿಕ ಶಾಲೆಗಳಲ್ಲಿ ೧,೪೨,೦೪೬ ಪ್ರಾಥಮಿಕ ಶಾಲೆಗಳಲ್ಲಿ, ೧೯ ಕಲಾ ಶಾಲೆಗಳಲ್ಲಿ, ೬೧ ಚಿಕಿತ್ಸಾ ಶಾಲೆಗಳಲ್ಲಿ, ೬೪೩ ಟ್ರೇನಿಂಗ ಸ್ಕೂಲುಗಳಲ್ಲಿ, ೪೧೭ ಯಂತ್ರಕಲೆಯ ಮತ್ತು ಕೈಗಾರಿಕೆಯ ಶಾಲೆಗಳಲ್ಲಿ, ೨೩ ವ್ಯಾಪಾರೀ ಶಿಕ್ಷಣದ ಶಾಲೆಗಳಲ್ಲಿ, ೨೩ ಊನರ ಶಾಲೆಗಳಲ್ಲಿ, ೭೨೨ ವಯಸ್ಕರ ಶಾಲೆಗಳಲ್ಲಿ ಹಾಗು ೯೪೪ ಬೇರೆ ವಿಶಿಷ್ಟತರದ ಶಾಲೆಗಳಲ್ಲಿ ಇರುವರು.

ವಿದ್ಯೆಯಲ್ಲಿ ಹಿಂದುಳಿದ ವರ್ಗಗಳು.

ಇಲಾಖೆಯ ವಿದ್ಯಾಪ್ರಸಾರದ ಸಾಮಾನ್ಯ ಯೋಜನೆಯಲ್ಲಿ ಮಧ್ಯಮ ಹಾಗು ಹಿಂದುಳಿದ ವರ್ಗಗಳ ವಿದ್ಯಾವೃದ್ಧಿಗೋಸ್ಕರ ಉಪಾಯಗಳನ್ನು ಕೈಕೊಂಡಿರುತ್ತದೆ. ಕೆಳಗೆ ಹೇಳಿದ 'ಸ್ಕಾಲರಶಿಪ್'ಗಳ ಹೊರತು ಮಧ್ಯಮ ವರ್ಗಗಳ ಹುಡುಗರ ಸಂಖ್ಯೆಗೆ ನೂರಕ್ಕೆ ೨೬೭ ಪ್ರಮಾಣದಿಂದ ಮಾಫಿಯನ್ನು, ಸರಕಾರಿ ಮಾಧ್ಯಮಿಕ ಶಾಲೆ

ಗಳಲ್ಲಿ ಇಟ್ಟಿರುತ್ತದೆ. ಇದಲ್ಲದೆ ಕುಲಾಬಾ, ರತ್ನಾಗಿರಿ ಜಿಲ್ಲೆಗಳ ಕೊಂಕಣ ಮರಾಠಾ ಜಾತಿಯ ಬಡ ಹುಡುಗರಿಗೆ ವಾರ ಸರ್ವಿಸಿನ ಸವಲತ್ತೆಂದು ಎಲ್ಲತರದ ಶಾಲೆಗಳಲ್ಲಿ ಮೋಫತ್ ಶಿಕ್ಷಣವು ದೊರೆಯುತ್ತದೆ. ಈ ಬಗ್ಗೆ ಏಡೆಡ್ ಸ್ಕೂಲುಗಳಿಗೆ ಸರಕಾರದಿಂದ ಫೀ ಗ್ರಾಂಟು ಕೊಡಲ್ಪಡುತ್ತದೆ.

ಮಧ್ಯಮ ವರ್ಗದ ಹಿಂದು ಹುಡುಗರ ಸಂಖ್ಯೆಯು ಎಲ್ಲತರದ ಶಾಲೆಗಳಲ್ಲಿ ಕೂಡಿ ೪,೮೬,೮೪೪ ಇದ್ದು ೫೯,೬೫೧ ರಿಂದ ಬೆಳೆದದೆ, ಅಂದರೆ ನೂರಕ್ಕೆ ೭.೯ ರಿಂದ ಹೆಚ್ಚಿರುತ್ತದೆ. ಮುಖ್ಯವಾಗಿ ಪ್ರಾಥಮಿಕ ಶಾಲೆಗಳಲ್ಲಿ ಆ ಸಂಖ್ಯೆಯು ನೂರಕ್ಕೆ ೮.೨ ರಂತೆ ಏರಿದ್ದರಿಂದ ಈಗಿದ್ದ ಒಟ್ಟು ಸಂಖ್ಯೆಯು ೩,೮೭,೮೬೬ ಆಗಿರುವದು. ಕಾಲೇಜುಗಳಲ್ಲಿ ೬೫೮ ಮಾಧ್ಯಮಿಕ ಶಾಲೆಗಳಲ್ಲಿ ೧,೪೯೭ ವಿದ್ಯಾರ್ಥಿಗಳೂ ಇರುವರು.

ಹಿಂದುಳಿದ ಹಿಂದುಗಳು ಅಂದರೆ ಅಸ್ಪೃಶ್ಯರು, ಮೂಲನಿವಾಸಿಗಳು, ಗುಡ್ಡಗಾಡು ಜನರು, ಸೆಟ್ಲ್‌ಮೆಂಟಿನವರು ಸರಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಮಾಫಿಯಿಂದ ತೆಗೆದು ಕೊಳ್ಳಲ್ಪಡುವರು. ಅಸ್ಪೃಶ್ಯ ಹುಡುಗರ ಸಂಖ್ಯೆಯು ಇಲಾಖೆಯಲ್ಲಿ ೫೫,೧೯೧ ಇದ್ದದ್ದು ೫,೪೭೧ರಿಂದ ಅಂದರೆ ನೂರಕ್ಕೆ ೧೨ ರಂತೆ ಬೆಳೆದದೆ. ಇವರ ಹೆಚ್ಚು ಸಂಖ್ಯೆಯು ಪ್ರಾಥಮಿಕ ಶಾಲೆಗಳಲ್ಲಿ ಇರುವದು. ಈ ವರ್ಷದಲ್ಲಿ (೨೫-೨೬) ಶಿಕ್ಷಣ ಹೊಂದುತ್ತಿರುವ ಮೂಲನಿವಾಸಿ ಹಾಗು ಗುಡ್ಡಗಾಡು ಹುಡುಗರ ಸಂಖ್ಯೆಯು ನೂರಕ್ಕೆ ೨೫ ರಂತೆ ಬೆಳೆದು ೧೪೯೬೬ ಆಗಿರುವದು. ಸೆಟ್ಲ್‌ಮೆಂಟಿನವರ ಸಂಖ್ಯೆಯು ೯,೨೩೫ ಇದ್ದದ್ದು ಕಡಿಮೆಯಾಗಿ ೫೮೧೭ ಆಗಿರುವದು. ಜಾತಿವಾರಿಯ ಪದ್ಧತಿಯಲ್ಲಿ ಹೆಚ್ಚು ಕಡಿಮೆಯಾದ್ದರಿಂದ ಈ ಸಂಖ್ಯೆಯು ಕಡಿಮೆಯಾದಂತೆ ತೋರುತ್ತದೆ. ಮಾಧ್ಯಮಿಕ ಹಾಗು ಹಿಂದುಳಿದವರಿಗೆ ಸರಕಾರದವರು ಹೆಚ್ಚು ಸ್ಕಾಲರಶಿಪ್ಪುಗಳನ್ನು ಕಾದಿಟ್ಟಿದ್ದಾರೆ.

ಮುಸಲ್ಮಾನರ ಶಿಕ್ಷಣ.

ಸರಕಾರಿ ವ್ಯವಸಾಯದ ಕಾಲೇಜುಗಳಲ್ಲಿ ಮುಸಲ್ಮಾನರಿಗೋಸ್ಕರ ನೂರಕ್ಕೆ ೧೨ರಂತೆ ಮಾಧ್ಯಮಿಕ ಶಾಲೆಗಳಲ್ಲಿ ೧೫ರಂತೆ (ಸ್ಥಳಗಳು ಕಾದಿಡಲ್ಪಟ್ಟಿವೆ.) ಸಿಂಧದೊಳಗಿನ ಜಿಲ್ಲೆಗಳಲ್ಲಿ ಮುಸಲ್ಮಾನರ ಜನಸಂಖ್ಯೆಗೆ ಅನುಸಾರವಾಗಿ ಈ ಸ್ಥಳಗಳು ಕಾದಿಡಲ್ಪಟ್ಟಿವೆ.

ಮಾಧ್ಯಮಿಕ ಶಾಲೆಗಳಲ್ಲಿ, ನೂರಕ್ಕೆ ೨೨.೫ ದಷ್ಟು ಇಲಾಖೆಯಲ್ಲಿ ಫ್ರೀ ಶಿಪ್ಪುಗಳು ಸಿಂಧದಲ್ಲಿ ೩೦ರಷ್ಟು ಫ್ರೀ ಶಿಪ್ಪುಗಳು ದೊರೆಯುವವು. ವಿದ್ಯೆಯಲ್ಲಿ ಹಿಂದುಳಿದವರ ಉತ್ತೇಜನಾರ್ಥವಾಗಿ ಸನ್ ೧೯೨೪-೨೫ರಲ್ಲಿ ಸರಕಾರದಿಂದ ಮಂಜೂರಾದ ಎಲ್ಲ ಸ್ಕಾಲರಶಿಪ್ಪುಗಳನ್ನು ಆಯಾ ವರ್ಗಗಳಿಗೆ ಕೊಟ್ಟುಬಿಟ್ಟಿದೆ.

ಹಿಂದಿನ ವರ್ಷ ಸರಕಾರವಿಂದ ಮಂಜೂರಾದ ಸಂಸ್ಥೆಗಳಲ್ಲಿ ಶಿಕ್ಷಣ ಹೊಂದುತ್ತಿದ್ದ ಮುಸಲ್ಮಾನ ಹುಡುಗರ ಸಂಖ್ಯೆಯು ೧,೧೪,೪೪೪ ಇದ್ದು ರಿಪೋರ್ಟಿನ ವರ್ಷ

೧,೧೯,೪೧೫ ಆಗಿರುವದು. ಒಟ್ಟು ಕಲಿಯುವ ಹುಡುಗರ ಸಂಖ್ಯೆಯು ೧,೪೬೨ ರಿಂದ ಬೆಳೆದು ೧,೫೬,೨೬೭ ಆಗಿರುವದು. ಸರಕಾರೀ ಶಾಲೆಗಳಲ್ಲಿ ಸಂಖ್ಯೆಯು ೪,೯೬೬ ರಿಂದ ಬೆಳೆದಿದೆ; ಆದರೆ ಮುಂಜೂರ ಆಗದಿದ್ದ ಶಾಲೆಗಳಲ್ಲಿ ೩,೫೦೪ ರಿಂದ ಕಡಿಮೆಯಾಗಿದೆ. ಉಳಿದ ವರ್ಗಗಳ ಒಟ್ಟು ಸಂಖ್ಯೆ ಮುಸಲ್ಮಾನ ವಿದ್ಯಾರ್ಥಿಗಳ ಸಂಖ್ಯೆಯು ನೂರಕ್ಕೆ ೧೩ ರಂತೆ ಇರುವದು. ಇಲಾಖೆಯಲ್ಲಿ ಶಿಕ್ಷಿತ ಮುಸಲ್ಮಾನರ ಪ್ರಮಾಣವು ಒಟ್ಟು ಸಂಖ್ಯೆಗೆ ನೂರಕ್ಕೆ ೯.೬ರಂತೆ ಇದ್ದು ಉಳಿದ ಜಾತಿಯವರ ಪ್ರಮಾಣವು ೫.೯ ಇರುತ್ತದೆ. ಮುಂದರಿದ ಜಾತಿಗಳಲ್ಲಿ ಶಿಕ್ಷಕರ ಪ್ರಮಾಣವು ೧೬.೧ ಇದ್ದು ಮುಸಲ್ಮಾನೇತರ, ಮಾಧ್ಯಮಿಕ, ಮತ್ತು ಹಿಂದುಳಿದ ಜಾತಿಗಳಲ್ಲಿ ಈ ಪ್ರಮಾಣವು ೪.೧ ಇರುತ್ತದೆ. ಇದರ ಮೇಲಿಂದ ನೋಡಿದರೆ ಮುಸಲ್ಮಾನರು, ಮುಂದರಿದ ಜಾತಿಗಳ ಹಿಂದೆ ಹಾಗು ಹಿಂದುಳಿದ ಜಾತಿಗಳ ಮುಂದೆ ಇರುವರೆಂದು ತಿಳಿಯುತ್ತದೆ. ಇದಲ್ಲದೆ ಈ ಸಂಖ್ಯೆಯು ಹಿಂದುಸ್ತಾನದ ಯಾವದೊಂದು ಪ್ರಾಂತದೊಳಗಿನ ಸಂಖ್ಯೆಗಿಂತ ಹೆಚ್ಚಿರುವದು. ಮುಸಲ್ಮಾನರ ಒಟ್ಟು ಸಂಖ್ಯೆಗೆ ಮುಸಲ್ಮಾನ ವಿದ್ಯಾರ್ಥಿಗಳ ಸಂಖ್ಯೆಯು, ಮುಂಬಯಿ ೯.೬, ಮದ್ರಾಸ ೭.೮, ಬಂಗಾಲ ೩.೯, ಸಂಯುಕ್ತಪ್ರಾಂತ ೩.೨, ಪಂಜಾಬ ೪.೬ ಬ್ರಹ್ಮದೇಶ ೪.೨, ಬಿಹಾರ ಮತ್ತು ಓಡಿಸಾ ೩.೬, ಮಧ್ಯಪ್ರಾಂತ ೬.೧, ಅಸಾಮು ೨.೭, ವಾಯವ್ಯಸರಹದ್ದಿನ ಸೀಮೆ ೨.೦, ಇರುವದು.

ಸಿಂಧದ ಉದಾಸೀನತೆ.

ಸಿಂಧದಲ್ಲಿ ವಿದ್ಯೆಯನ್ನು ಕಲಿಯುವ ಮುಸಲ್ಮಾನ ಹುಡುಗರ ಸಂಖ್ಯೆಯು ೬,೪೫೨ರಿಂದ ಬೆಳೆದು ೬೩,೪೬೬ ಆಗಿರುವದು. ಇವರಲ್ಲಿ ೫೪,೧೩೮ ಸರಕಾರೀ ಶಾಲೆಗಳಲ್ಲಿಯೂ ೯,೩೩೮ ಖಾಸಗೀ ಶಾಲೆಗಳಲ್ಲಿಯೂ ಇರುವರು. ಸರಕಾರೀ ಪ್ರಾಥಮಿಕ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಪ್ರಮಾಣವು ೯೪.೪ ಇದ್ದು ಇವರಲ್ಲಿ ೫೨.೩ರಷ್ಟು ವಿದ್ಯಾರ್ಥಿಗಳು 'ಮುಲ್ಲಾ' ಶಾಲೆಗಳಲ್ಲಿ ಇರುವರು. ಸರಕಾರೀ ಶಾಲೆಗಳಲ್ಲಿ ಮುಸಲ್ಮಾನ ಹುಡುಗರ ಸಂಖ್ಯೆಯು ಹೋದವರ್ಷ ೬೭,೬೦೫ ಇದ್ದದ್ದು ಹೆಚ್ಚಾಗಿ ೫೪,೧೩೮ಕ್ಕೆ ಮುಟ್ಟಿರುತ್ತದೆ. ಮುಸಲ್ಮಾನರ ಜನಸಂಖ್ಯೆಯು ನೂರಕ್ಕೆ ೨೩.೪ವಿದ್ದು ಅಲ್ಲಿ ಕಲಿಯುವ ಹುಡುಗರ ಸಂಖ್ಯೆಯು ೪೩.೮ದಿಂದ ೪೫.೭ ಆಗಿರುವದು. ಶಿಕ್ಷಿತ ಹುಡುಗರ ಸಂಖ್ಯೆಯು ಎಲ್ಲ ಜಾತಿಗಳದು ೩.೯ ಇದ್ದು ಅವರಲ್ಲಿ ಮುಸಲ್ಮಾನರ ಸಂಖ್ಯೆಯು ೨.೬ ಇರುತ್ತದೆ. ಮುಂದರಿದವರ ಸಂಖ್ಯೆಯು ೧೩.೨ ಮತ್ತು ಮುಸಲ್ಮಾನೇತರ ಮಧ್ಯಮ ಹಾಗೂ ಹಿಂದುಳಿದ ಹುಡುಗರ ಪ್ರಮಾಣವು ೧.೬ ಇರುತ್ತದೆ. ಈ ಸಂಖ್ಯೆಯು ಇಲಾಖೆಯ ಉಳಿದ ಭಾಗದೊಳಗಿನ ಮುಸಲ್ಮಾನರ ಪ್ರಮಾಣಕ್ಕಿಂತಲೂ ಮಧ್ಯಮವರ್ಗದ ಹಿಂದುಗಳಿಗಿಂತಲೂ ಕಡಿಮೆ ಇರುವದು. ಸಿಂಧದಲ್ಲಿ ಮುಸಲ್ಮಾನರಿಗೆ ಮೊದಲೇ ವಿದ್ಯೆಯಲ್ಲಿ ಅಭಿರುಚಿಯು ಕಡಿಮೆ ಇದ್ದು ವಸತಿಯು ವಿರಲವಾಗಿರುವಸ

ರಿಂದ ಅವರಲ್ಲಿ ಶಿಕ್ಷಣ ಪ್ರಸಾರವಾಗಲಿಕ್ಕೆ ಅಡ್ಡಿಯಾಗಿದೆ. ಆದರೂ ಸಿಂಧದ ಮುಸ ಲ್ಮಾನ ಮುಂದಾಳುಗಳು ತಮ್ಮ ಜನರ ಶಿಕ್ಷಣದ ಅಭಿವೃದ್ಧಿಗಾಗಿ ಯತ್ನಿಸುತ್ತಿರು ವದು ಸಮಾಧಾನದ ಸಂಗತಿಯು.

ಇಲಾಖೆಯಲ್ಲಿ ಮುಸಲ್ಮಾನರ ಶಿಕ್ಷಣಕ್ಕೋಸ್ಕರ ವೆಚ್ಚವಾಗುವ ರಕಮು ೩೪ ಲಕ್ಷ ರೂ. ಇದರಲ್ಲಿ ೧೮ ಲಕ್ಷ ಅಂದರೆ ನೂರಕ್ಕೆ ೫೦ಕ್ಕಿಂತ ಹೆಚ್ಚು ರಕಮು ಪ್ರಾಂತಿಕ ಫಂಡಿನಿಂದ ಕೊಡಲ್ಪಡುತ್ತದೆ. ಸಿಂಧದಲ್ಲಿಯೇ ೧೭೪೪ ಲಕ್ಷ ರೂ. ವೆಚ್ಚವಾಗುತ್ತಿದ್ದು ಅದರೊಳಗಿನ ೯೨ಲಕ್ಷ ರೂ. ಪ್ರಾಂತಿಕ ಉತ್ಪನ್ನದಿಂದ ದೊರೆಯುವದು.

ಲೋಕಲ್ ಬೋರ್ಡುಗಳಿಗೆ ಹೇಳುವ ಮಾತು.

ಮೇಲೆ ಕೊಟ್ಟ ಅಂಕೆಗಳನ್ನು ನೋಡಿದರೆ, ರಿಪೋರ್ಟಿನ ವರ್ಷ ಶಿಕ್ಷಣ ಪ್ರಸಾ ರವು ಸ್ಥಿರವಾಗಿ ನಡೆದದೆ ಎಂದು ಕಂಡಾಗ್ಯೂ ಅದು ಪ್ರಾಥಮಿಕ ಶಿಕ್ಷಣದಲ್ಲಿ, ಸರಕಾ ರವು ಎಣಿಸಿದಷ್ಟು ತೀವ್ರವಾಗಿ ಆಗಿಲ್ಲವೆಂದು ತಿಳಿಯುತ್ತದೆ. ಸರಕಾರದಲ್ಲಿ ಹಣದ ಕೊರತೆ ಇರುವದರಿಂದ ಪ್ರಾಥಮಿಕ ಶಿಕ್ಷಣದ ಕಾಯದೆಗನುಸಾರವಾಗಿ ಶಿಕ್ಷಣದ ಪ್ರಸಾ ರಮಾಡಲಿಕ್ಕೆ ಸರಕಾರಕ್ಕೆ ಕಠಿಣವಾಗಿದೆ. ಇದಕ್ಕಾಗಿ ಸರಕಾರದಿಂದ ಪ್ರೆಸ್‌ನೋಟು ಹೊರಡಿಸಿ ಲೋಕಲ್‌ಬೋರ್ಡಿನವರು ಕರವನ್ನು ಹಾಕಿ ಅದಕ್ಕೆ ಸರಕಾರದ ಮಂಜೂ ರಿಯನ್ನು ಪಡೆದುಕೊಳ್ಳಬೇಕೆಂದು ಪ್ರಸಿದ್ಧಮಾಡಿದೆ. ಪ್ರಾಥಮಿಕ ಶಿಕ್ಷಣದ ಕಾಯದೆ ಯಂತೆ ಕ್ಷೇ ಗ್ರಾಂಟು ಸರಕಾರದಿಂದ ದೊರೆಯದಿದ್ದರೂ ಲೋ. ಬೋ. ನವರು ತಮ್ಮ ಉತ್ಪನ್ನವನ್ನು ಬೆಳಿಸಿ ಪ್ರಾ. ಶಿ. ದ ಪ್ರಸಾರವನ್ನು ಯಾಕೆ ಮಾಡಬಾರದೆಂಬದು ತಿಳಿ ಯುವಂತಿಲ್ಲ. ಈ ತರದ ಪ್ರಯತ್ನಕ್ಕೆ ಯಾವ ಲೋ. ಬೋ. ಗಳು ತೊಡಗುವವೊ ಅವುಗಳಿಗೆ ಸರಕಾರದ ಆರ್ಥಿಕ ಪರಿಸ್ಥಿತಿಯು ಅನುಕೂಲವಾದ ಕೂಡಲೆ ಸಹಾಯವು ನಿಶ್ಚಯವಾಗಿ ದೊರೆಯುವದೆಂದು ನಂಬತಕ್ಕದ್ದು.

ಹೀಗೆ ಶಿಕ್ಷಣದ ವಿವಿಧ ಶಾಖೆಗಳಿಗೆ ಹೆಚ್ಚು ಹೆಚ್ಚು ಹಣವನ್ನು ವೆಚ್ಚಮಾಡುವ ಆರ್ಥಿಕ ಜವಾಬದಾರಿಯು ಸರಕಾರದ ಮೇಲೆ ಬೀಳಹತ್ತಿದೆ. ವಿದ್ಯಾಖಾತೆಯ ಮೇಲೆ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ, ವಿದ್ಯಾಪೀಠಗಳ ಸುಧಾರಣೆ, ಔದ್ಯೋಗಿಕ ಶಿಕ್ಷಣದ ಪ್ರಸಾರ ಮೊದಲಾದ ಅನೇಕ ಕಾರ್ಯಗಳ ಭಾರವು ಬಿದ್ದದರಿಂದ ಕೆಲಸವು ಬಹಳ ಬೆಳೆದು ಹೋಗಿರುತ್ತದೆ.

ಅನೇಕ ಹೊಸ ಯೋಜನೆಗಳ ಮೂಲಕ ಕೆಲಸವಾಡುವ ಪದ್ಧತಿಯಲ್ಲಿಯೂ ಧೋರಣದಲ್ಲಿಯೂ ಹೆಚ್ಚುಕಡಿಮೆಯಾಗಿದ್ದರೂ ಮುಂದಿನ ಬಡತಿ ಸಂಬಂಧವಾಗಿ ಅನೇಕರಿಗೆ ಸಂಶಯ ಉಂಟಾಗಿದ್ದರೂ ಕೂಡ ಮೆ॥ ಡೈರೆಕ್ಟರರೂ ಅವರ ಕೈಕೆಳಗಿನ ವಿದ್ಯಾಖಾತೆಯ ಅಧಿಕಾರಿಗಳೂ ಸಮಾಧಾನಕರವಾಗಿ ಕೆಲಸ ಮಾಡುತ್ತಿದ ದ್ದನ್ನು ನೋಡಿ ಸರಕಾರವು ಸಂತೋಷಪಡುತ್ತದೆ.

ಪ್ರಕಟನೆ ೧.

ಮೆ. ಎ. ಇ. ದ. ಭಾ. ರವರ ಪತ್ರ ನಂ. 47/p. 7607 ತಾ. 13-1-28 ನೇದ್ದರ ಪ್ರಕಾರ ಮಂಜೂರಾದ ಪುಸ್ತಕಗಳು.

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರಾಗಿವೆ.
೧	ಅರ್ಥಮೆಟಿಕ್ ಪಾರ್ಟ್ II	ಮ. ಎನ್. ಆರ್ ಬಾಲಿನ್	ಮ. ಎನ್. ಆರ್. ಬಾಲಿನ್ P. H. E. ಸ್ಕೂಲ ಟಾಲೇ ನಾಡಿ ಕಿನ್ನಿಗೋಳಿ ಪೋಷ್ಟ ಆಫೀಸ ಸೌಥ ಕ್ಯಾನರಾ.	೦–೫–೦	ಪ್ರಾಥಮಿಕ ಶಾಲೆಗಳ ಲಾಯಬ್ರರಿಗೋಸ್ಕರ
೨	ಮಕ್ಕಳ ಸಲುವಾಗಿ ಕಥೆಗಳು	ಮ. ಟಿ. ಎನ್. ಅಮ್ಮಿನಭಾವಿ	ಟಿ. ಎನ್ ಅಮ್ಮಿನಭಾವಿ ಧಾರವಾಡ	೦–೮–೦	ಪ್ರಾಥಮಿಕ ಶಾಲೆಗಳ ಇನಾಮಿಗೋಸ್ಕರವಾಗಿಯೂ ಲಾಯಬ್ರರಿಗೋಸ್ಕರವಾಗಿಯೂ
೩	ಗೋಪಾಳ ಕೃಷ್ಣ ಗೋಖಲೆ ಇವರ ಚರಿತ್ರ				
೩A	ನೆಪೋಲಿಯನ್ನನ ಚರಿತ್ರ				
೪	ಝಾಂಸಿ ಲಕ್ಷ್ಮೀಬಾಯಿ ,,	ಕೆ. ಜಿ. ಸಂಗಮ	ಕೆ. ಜಿ. ಸಂಗಮ ಧಾರವಾಡ	೦–೪–೦	,,
೫	ದಾದಾಭಾಯಿ ನವರೋಜಿ ,,				
೬	ಅಹಲ್ಯಾಬಾಯಿ ,,				
೭	ಶ್ರೀ ರಾಮದಾಸರ ಚರಿತ್ರ	ಜಿ. ಎಚ್. ಹೊನ್ನಾಪುರಮಠ	ಜಿ. ಎಚ್. ಹೊನ್ನಾಪುರಮಠ ವಕೀಲ ಧಾರವಾಡ	೧–೦–೦	ಪ್ರಾಥಮಿಕ ಶಾಲೆಗಳ
೮	ಸಾವಿತ್ರಿ ,,			೦–೪–೦	ಇನಾಮಿಗೋಸ್ಕರ

ಜಿ. ವ್ಹಿ. ಗೋಕಿ,
ಫಾರ ಎಜ್ಯುಕೇಶನಲ್ ಇನಸ್ಪೆಕ್ಟರ ಸ. ಡಿ.

ಕವಿತೆಗಳು

ಧ್ರುವ ಚರಿತ್ರೆ

ಭಾ.ಷ॥ ಪರಮಹರುಷದಿ ತಾತನೆಡೆಗವ ।
ಬರಲು ಸುರಚಿಯು ಕಂಡು ಮನದೊಳ್ ।
ಜರೆಯುತವನಂ ಕ್ರೋಧದಿಂದೊದೆಯುತ್ತ ನೂಕಿದಳು ॥
ಧರೆಗೆ ಬಿದ್ದ ಸುನೀತಿ ಪುತ್ರನು ।
ಹೊರಳುತೆದ್ದನು ಘೋರದುಃಖದಿ ।
ತ್ವರದಿ ಬಂದನು ತನ್ನ ತಾಯಿಯ ಕಡೆಗೆ ಶೋಕದಲಿ ॥೧॥

ಕಂದ ನಿನ್ನನು ಆರು ಹೊಡೆದರು ।
ಚಂದದಿಂದುಸರಯ್ಯ ತನುಜನೆ ।
ಎಂದು ಕೇಳಿದಳವಳು ಮರಗುತ ಕೊರಗುತಾತುರದಿ ॥
ಒಂದುದಿನ ನಾ ಪ್ರೇಮದಿಂದತಿ ।
ತಂದೆಯನು ಕಂಡಪ್ಪಿಕೊಳ್ಳಲು ।
ಅಂದು ಸುರುಚಿಯು ಕರೆಯದೆನ್ನನು ಒದೆದು ಕೆಡವಿದಳು ॥೨॥

ಆರುಗತಿಯುಂಟಿನಗೆ ಜಗದೊಳು ।
ಆರು ಕರೆವರು ಮುಂದಕೆನ್ನನು ।
ಆರು ನನ್ನೀದುಃಖಪರಿಹರಿಸುವರು ಪೇಳಂಬೆ ॥
ಆರು ನನ್ನನು ಅಪ್ಪಿಕೊಳ್ಳುವ ।
ರಾರು ನನ್ನನು ಮುದ್ದಿಸುವರು ।
ಮಾರಹರನೇ ಎನುತ ದುಃಖದಿ ಬಿದ್ದನವನಿಲಕೆ ॥೩॥

ಅವನ ದುಃಖವ ನೋಡಿ ಕೋಗಿಲೆ ।
ಜವದಿ ಬಿಟ್ಟಿತು ತನ್ನ ಗಾನವ ।
ರವಿಯು ಮುಳುಗದೆ ಧ್ರುವನ ಶೋಕವ ನೋಡಿ ಮರುಗಿದನು ।
ಭವನ ಸೇರುವವೆಲ್ಲ ಖಗಗಳು ।
ತವಕದಿಂದಲಿ ಅವನದುಃಖವ ।
ತವಿಸಲಾಗದೆ ಮರೆತುಕೂತವು ತಮ್ಮ ಮರಿಗಳನು ॥೪॥

ಭರದಿ ಬೀಸುವ ತಂಪುಗಾಳಿಯು ।
ತೆರೆಗಳೇಳುತ ಹರಿವ ಶರಧಿಯು ।
ಬೆರೆತು ನಿಂತವು ಧ್ರುವನ ಶೋಕವ ನೋಡಿ ಮರುಗುತಲಿ ॥

ದುರುಳ ಸುರುಚಿಯು ಮನವದೆಂಥದು ।
ಕರುಣಬಾರದೆ ಹೋಯಿತಲ್ಲಾ ।
ಹರನೆ ನೋಪೈ ಮನುಷ್ಯಮನುಜರ ನಡತೆರೀತಿಯನು ॥೫॥

—ನಿ. ಬಾ. ಕಾಡಣ್ಣವರ ಕರೀಕಟ್ಟಿ.

---

೪೩೭ ಈ ಸಂಖ್ಯೆಯು ಬಹು ಚಮತ್ಕಾರವದೆ. ಇದಕ್ಕೆ ಬೇಕಾದ ಒಂದ ಸಂಖ್ಯೆಯಿಂದ ಗುಣಿಸಿ ಬಂದ ಗುಣಾಕಾರದಲ್ಲಿಯ ಯಾವದಾದರೊಂದು ಅಂಕಿಯನು ತೆಗೆಯಬೇಕು. ಬಾಕಿ ಉಳಿದ ಅಂಕಿಗಳ ಬೇರೀಜು ಮಾಡಬೇಕು. ಅದಕ್ಕೆ ೯ರಿಂ ಭಾಗಿಸಬೇಕು. ಬಾಕಿ ಉಳಿದ ಅಂಕಿಯು ೯ಕ್ಕಿಂತ ಎಷ್ಟರಿಂದ ಕಡಿಮೆ ಇರುವದೊ ಆ ಅಂತರವೇ ಆ ಬಿಟ್ಟ ಅಂಕಿಯು. ಹೀಗೆ ಯಾಕೆ?

ಸ್ಪಷ್ಟವಾತಾಡಿದ ಗಾನಕಾರನು.

ತೈಮೂರಲಿಂಗನು ಕುಂಟನಿದ್ದನೆಂದು ಇತಿಹಾಸ ವಾಚಕರೆಲ್ಲರಿಗೂ ಗೊತ್ತ ಅವನು ಗುಣವಂತರೆಲ್ಲರಿಗೂ ಮೆಚ್ಚುತ್ತಿದ್ದನು. ಒಂದುದಿವಸ ಒಬ್ಬ ಕುರು ಗಾಯಕನು ಅವನ ಹತ್ತರ ಬಂದು ಉತ್ತಮರೀತಿ ಹಾಡಿದನು. ಅದರಿಂ ಬಾದಶಹನು ಬಹಳ ಸಂತಸಬಟ್ಟನು. ಬಳಿಕ ಗಾಯಕನನ್ನು ಕುರಿತು ಗಾಯ ಕನೇ ನಿನ್ನ ಹೆಸರೇನು? ಪ್ರತ್ಯುತ್ತರವಾಗಿ ಅವನು— ನನ್ನ ಹೆಸರು ದೌಲತ್ಖಾನ ಬಳಿಕ ತೈಮೂರನು— ದೌಲತವು ಕುರುಡವು ಹೇಗೆ? ಬಳಿಕ ಗವಯಿಯು ಜಾ ತನದಿಂದ ಪರವರದಿಗಾನ, ಅದು ಕುರುಡವೇ ಅದೆ ಅದೆಂದು ಕುಂಟನಿಗೆ ದೊರೆ ತೆಂದು ಉತ್ತರಕೊಟ್ಟನು.

—ಎಸ್. ಜಿ. ಕಟ್ಟಿ. ಹೈ. ವಿ. ಧಾರವಾಡ.

ಖಂಡೋಜಿ ಮಾನಕರ.

ಖಂಡೋಜಿ ಮಾನಕರನು ಪೇಶ್ವೆಯ ಸರದಾರನಾಗಿದ್ದನು. ಚಿಮಣಾ ಅಪ್ಪಾನು ವಸಯಿ ಕೋಟೆಗೆ ವಸಯಿಗೆ ಮುತ್ತಿಗೆ ಹಾಕಿದಾಗ ಶತ್ರುಗಳ ಗುಪ್ತಕಾ ಸ್ಥಾನವನ್ನು ತಿಳಿಯುವದಕ್ಕೋಸ್ಕರವಾಗಿ ಹೋಗಿ ಖಂಡೋಜಿಯು ಸೋಗು ಹಾ ಕೊಂಡು ಕಿಲ್ಲೆಯ ಬಂದೋಬಸ್ತ ಸಹಿತವಾಗಿ ಎಲ್ಲ ಸಂಗತಿಯನ್ನು ತಿಳಿದುಕೊಂಡ ಬಂದನು. ಆಗ ಪೇಶ್ವೆಯ ಸೈನ್ಯಕ್ಕೆ ಒಳಗೆ ಪ್ರವೇಶಿಸಲಿಕ್ಕೆ ಸುಲಭವಾಗಿ ಕಿಲ್ಲೆಯ ತೀವ್ರ ಹಸ್ತಗತವಾಯಿತು. ಆಂಗ್ರೆ ಹಾಗು ನಾನಾಸಾಹೇಬ ಇವರ ಯುದ್ಧದಲ್ಲಿ ಈ ಖಂಡೋಜಿಯ ಶೌರ್ಯವು ಚನ್ನಾಗಿ ತಿಳಿಯಿತು. ಪೋರ್ತುಗೀಜರ ರೇವದಾಂಡ ಕಿಲ್ಲೆಯನ್ನು ಇವನೇ ತೆಗೆದುಕೊಂಡನು.

ವಿಚಾರತರಂಗಗಳು

(೧)

ಪೃಥ್ವಿಯು ತನ್ನ ಮೈಸುತ್ತು ತಿರುಗಿಕೊಳ್ಳುತ್ತ ಸೂರ್ಯನ ಸುತ್ತಲು, ತಿರುಗುತ್ತದೆ. ಆ ಸೂರ್ಯನು ಈ ಪೃಥ್ವಿಯಂಥ ಅನೇಕ ಗೋಲಗಳಿಂದ ಕೂಡಿಕೊಂಡು ಮತ್ತೊಂದು ಸೂರ್ಯನ (ನಕ್ಷತ್ರದ) ಸುತ್ತು ತಿರುಗುತ್ತಾನೆ. ಆ ಹಿರಿಯ ಸೂರ್ಯನು ಮತ್ತೊಂದು ದೊಡ್ಡ ಸೂರ್ಯನ ಸುತ್ತು ತಿರುಗುತ್ತಾನೆ. ಹೀಗೆ ಸಣ್ಣ ಗೋಲಗಳು ದೊಡ್ಡ ಗೋಲಗಳ ಸುತ್ತು ತಿರುಗುತ್ತವೆ. ಎಂದು ಆಧುನಿಕ ಪಂಡಿತರ ಮತವಿದೆ. ಆದರೆ ಕೊನೆಯ ಅತಿ ದೊಡ್ಡ ಸೂರ್ಯನು (ನಕ್ಷತ್ರವು)ಯಾವದರ ಸುತ್ತಲು ತಿರುಗುತ್ತಿರಬಹುದು?

(೨)

ಉಲ್ಕೆಗಳು ತಮ್ಮ ಸ್ಥಳದಿಂದ ಪತನವಾಗಲು ಅವಕ್ಕೆ ಪೃಥ್ವಿಯುಂತಾದ ಗ್ರಹಗಳ ಪ್ರದೇಶವಾಗಲೀ, ವಾತಾವರಣವಾಗಲೀ, ಸ್ಪರ್ಶವಾಗದಿದ್ದರೆ, ಅವು ಹಾಗೇ ಎಲ್ಲಿಯವರೆಗೆ ಹೋಗಿ ಯಾತರ ಮೇಲೆ ಬೀಳುತ್ತಿರಬಹುದು?

(೩)

ಸೂರ್ಯಗೋಲದ ಕೆಲವು ಭಾಗವು ಸಿಡಿದು ಈಗಿರುವ ಭೂಮಿಯೂ, ಗ್ರಹಗಳೂ, ಉತ್ಪನ್ನವಾದವು. ಆದರೆ ಆ ಸೂರ್ಯಗೋಲವು ಒಡೆಯಲಿಕ್ಕೆ ಏನುಕಾರಣವು ಸಂಭವಿಸಿರಬಹುದು?

(೪)

ಸೂರ್ಯನಿಂದ ಸಿಡಿದ ಈ ಪೃಥ್ವಿಯು ಮೊದಲು ತಪ್ತವಾದ ವಾಯುರೂಪ, ರಸರೂಪದಲ್ಲಿ ಇದ್ದದ್ದು ಈಗಿರುವ ಘನರೂಪವಾಗಲು ಕಾರಣವೇನಿರಬಹುದು?

(೫)

ಆದಿಯಲ್ಲಿ ಪ್ರಾಣಿಗಳ ಉತ್ಪತ್ತಿಯು ಹೇಗಾಗಿರಬಹುದು ಮತ್ತು ಯಾತರಿಂದ? ಯಾರಿಂದ? ಯಾಕೆ? ಉಂಟಾಗಿರಬಹುದು?

(೬)

ಈ ಭೂಮಿಗೆ ಆದಿಯುಂಟು- ಆದರೆ ಇದರ ಅಂತ್ಯವು ಯಾವ ತರದಿಂದಲಾಗಬಹುದು? ಅದರಂತೆ ಈ ಎಲ್ಲ ಸೃಷ್ಟಿಯೂ "ಹುಟ್ಟಿದ್ದು" ಇರುವದರಿಂದ ಎಲ್ಲವೂ ನಾಶವಾಗಲಿಕ್ಕೇ ಬೇಕು. ಯಾತರಲ್ಲಿ ನಾಶವಾಗಬಹುದು? ಕೊನೆಗೆ ಏನು ಉಳಿಯಬಹುದು?

(೭)

ಪ್ರತಿಯೊಂದು ಗೋಲದಲ್ಲಿ ಆಕರ್ಷಣಶಕ್ತಿ ಇರುತ್ತದೆ. ಆದರೆ ಬುನಾದಿಯಲ್ಲಿ ಪೃಥ್ವಿಯ ಒಂದು ಭಾಗವು ಸಿಡಿದುಹೋಗಿ ಚಂದ್ರನಾಗಿದೆಯಂತೆ; ಈ ಭೂಗೋಲದಲ್ಲಿರುವ ಆಕರ್ಷಣಶಕ್ತಿಯನ್ನು ಯಾರು ಜುಕ್ಕುಜುಲುಮೆಯಿಂದ ಬೇರ್ಪಡಿಸಿ, ಈ ದೊಡ್ಡ ಭೂಮಿಯಿಂದ ಒಂದು ಮುದ್ದೆ(ಚಂದ್ರ)ಯನ್ನು ಯಾಕೆ ಬೇರೆ ತೆಗೆದಿಟ್ಟಿದ್ದಾರು?

(೮)

ಪರಮಾಣುಗಳಿಂದ ಈ ಸೃಷ್ಟಿಯು ಆಗಿದೆಯೆಂದು ಕಣಾದ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆಯಂತೆ. ಆ ಪರಮಾಣುಗಳ ಆಕಾರವು ಗೋಲರೂಪವಾಗಿರುವದಷ್ಟೇ? ಹಾಗಾದರೆ ಇಂಥ ಅನೇಕ ಗೋಲಗಳಿಂದ ಪದಾರ್ಥವು ಸಿದ್ಧವಾಗಲು ನಡುವೆ ಪೊಳ್ಳು (ಅವಕಾಶ) ಉಳಿಯಲಿಕ್ಕೇಬೇಕು. ಅಂದ ಮೇಲೆ ಆ ಪೊಳ್ಳಿನಲ್ಲಿ ಆ ಪರಮಾಣುವಿನ ವ್ಯತಿರಿಕ್ತವಾವ ಸ್ಥಳವು ಉಳಿಯುವದು. ಅಲ್ಲಿ ಏನಿರಬಹುದು?

(೯)

"ಏಕಮೇವಾದ್ವೀತಿಯವರ್" ಎಂಬಂತೆ ಇರುವ ಒಬ್ಬನೇ ಒಬ್ಬ ದೇವರಿಂದ ಈ ಭಿನ್ನವಾದ ವಿಚಿತ್ರ ಸೃಷ್ಟಿಯು ಹೇಗೆ? ಮತ್ತು ಯಾಕೆ? ಮತ್ತು ಯಾತರಿಂದ ಉಂಟಾಗಿರಬಹುದು?

(೧೦)

ಈ ಮಿಥ್ಯವಾದ (ಅಸ್ಥಿರವಾದ) ಸೃಷ್ಟಿಯನ್ನು ಪರಮಾತ್ಮನು ಯಾಕೆ ನಿರ್ಮಿಸಿರಬಹುದು? ಮತ್ತು ಇದರಿಂದ (ಅವನಿಗೆ) ಪ್ರಯೋಜನವೇನಿರಬಹು?

ಮೇಲಿನ ವಿಚಾರತರಂಗಗಳ ವಿಷಯವಾಗಿ ಬಲ್ಲವರು ತಮ್ಮ ಅಭಿಪ್ರಾಯವನ್ನು ಕೆಳಗಿನ ವಿಳಾಸಕ್ಕಾಗಲೀ ಅಥವಾ ಶಾಲಾಪತ್ರವೇ ಮೊದಲಾದ ಮಾಸಪತ್ರಿಕೆಗಳಲ್ಲಾಗಲೀ ಬರೆದು ತಿಳಿಸೋಣವಾಗಬೇಕಾಗಿ ಸವಿನಯ, ಸಪ್ರೇಮ ವಿನಂತಿಯದೆ.

ವಿದ್ವಜ್ಜನ ವಿಧೇಯ ತಮ್ಮ
ವಿಜಾಪುರದ ಕೊನ್ಹೇರಾಯರ ಮಗ
ಸ್ವಾಮಿರಾಯ.

ಮಾಡಲಗೇರಿ(ತಾ॥ ರೋಣ)
ಶಾಳಾ ೧ನೇ. ಅ–ಮಾಸ್ತರು
೧–೧೦–೧೮೮೪

ಜಂತು (ಹುಳ) ಗಳು

ಲೋಕದಲ್ಲಿರುವ ಸಕಲ ಜೀವರಾಶಿಗಳಲ್ಲಿ ಕ್ರಿಮಿಕೀಟಕಾದಿಗಳು ಅಸಂಖ್ಯವಾಗಿವೆ. ಅವುಗಳ ವ್ಯಾಪ್ತಿ ನೋಡಿದರೆ ಅವು ಇಲ್ಲದಂಥ ಸ್ಥಳ ದೊರಕುವದೇ ದುರ್ಲಭವು. ಅವುಗಳಿಗೆ ಆಹಾರವಾಗದಂಥ ಪ್ರಾಣಿಗಳಂತು ಜಗತ್ತಿನಲ್ಲಿ ಸಿಗುವದೇ ಅಪರೂಪವು.

ಹುಳಗಳಿಗೆ ವಿಲಕ್ಷಣ ಜ್ಞಾನವಿರುತ್ತದೆ. ಅಂಥಾ ಜ್ಞಾನವು ಬಾಕಿ ಪಶುಪಕ್ಷ್ಯಾದಿಗಳಿಗೆ ಇರುವದಿಲ್ಲ. ಹಾಗೆಯೇ ಇವುಗಳಿಗೆ ಆಗುವ ರೂಪಾಂತರಗಳೂ ಬಹು ವಿಲಕ್ಷಣವಾಗಿವೆ. ಇವುಗಳ ತರತರದ ಆಕಾರಗಳನ್ನೂ ಸ್ಥಿತ್ಯಂತರಗಳನ್ನೂ ನೋಡಿದರೆ ಇವು ವಿಶೇಷವಾಗಿ ಬೇರೆ ಪ್ರಾಣಿನರ್ಗಗಳಿಗೆ ಹೊಂದಲಾರವು.

ಹುಳಗಳಿಗೆ ಆಹಾರ ಬಹಳ ಬೇಕು. ಕೆಲವು ಹುಳಗಳಿಗೆ ವಿಷವಿರುವದು. ಅದದರಿಂದ ಇವು ದಂಶಮಾಡಿದರೆ ಬಹು ವೇದನೆ ಉಂಟಾಗುವದು ಮನುಷ್ಯನ ಮೈಮೇಲೆಯೂ ಪಶುಗಳ ಮೈಮೇಲೆಯೂ ನಡೆದು ಇಲ್ಲವೆ ಕಿವಿಯೊಳಗೆ ಗುಣು ಗುಣಿಸಿ ಹುಳಗಳು ಬಹಳ ಉಪದ್ರವ ಕೊಡುತ್ತವೆ. ಈ ವಿಧದ ವಿಚಾರಗಳನ್ನೆಲ್ಲ ಮನಸ್ಸಿಗೆ ತಂದರೆ ಭೂಮಿಯಲ್ಲಿ ಹುಳಗಳ ಪ್ರಯೋಜನವೇನೂ ಇಲ್ಲದ್ದಲ್ಲದೆ ಅವು ಬೇರೆ ಜೀವಿಗಳಿಗೆ ನಿರರ್ಥಕ ವ್ಯಾಧಿಗಳಾಗಿವೆ ಎಂದು ತೋರುವದು.

ಆದರೆ ಈ ಜಂತುಗಳು, ನಿರುಪಯೋಗಿಗಳೆಂದು, ಹೇಳುವದು ಸರಿಯಲ್ಲ. ಯಾಕಂದರೆ ಅದರಿಂದ ಸೃಷ್ಟಿಕರ್ತನ ಚಾತುರ್ಯಕ್ಕೆ ಕುಂದು ಉಂಟಾಗುವದು. ಸ್ವಲ್ಪ ವಿಚಾರ ಮಾಡಲಾಗಿ, ಹುಳಗಳು ಭೂಮಿಯಲ್ಲಿ ವ್ಯಾಧಿಗಳೆಂದು ಚಿಂತಿಸುವದಕ್ಕೆ ನಮ್ಮ ಅಜ್ಞಾನವೇ ಮೂಲವೆಂದು ತಿಳಿಯುವದು. ಹುಳಗಳಲ್ಲಿ ಮೇಲೆ ಹೇಳಿದ ದೋಷಗಳಿದ್ದಾಗ್ಯೂ ಅವು ನಮ್ಮ ಮೇಲೆ ಎಷ್ಟೋ ಉಪಕಾರ ಮಾಡುತ್ತವೆ. ಅವು ಭೂಮಿಯಲ್ಲಿ ಕೆಟ್ಟು ದುರ್ಗಂಧಿಸುವ ಪದಾರ್ಥಗಳನ್ನು ತಿಂದು ರೋಗಗಳ ಪ್ರಸಾರವನ್ನು ಕಡಿಮೆ ಮಾಡುತ್ತವೆ. ಇವು ನಮ್ಮ ಸ್ವಂತ ಆಹಾರವನ್ನು ಇಲ್ಲವೆ ಶರೀರವನ್ನು ಬಾಧೆ ಪಡಿಸಿ ಉಪದ್ರವ ಮಾಡುವವು ನಿಜವು. ಆದರೆ ಮನುಷ್ಯನಿಗೆ ಆಹಾರವಾದ ಪಕ್ಷಿಗಳೂ ಮೀನುಗಳೂ, ಹುಳಗಳನ್ನು ತಿಂದೇ ಬದುಕುವವು. ಇದಲ್ಲದೆ ರೇಷ್ಮೆಯ ಹುಳಗಳಿಂದ ರೇಷ್ಮೆಯೂ, ಜೇನುಹುಳಗಳಿಂದ ಜೇನುತುಪ್ಪವೂ ಪ್ರಾಯಶಃ ಭ್ರಮರಗಳ ಸಂಚಾರದಿಂದ ಕಾಯಿಗಳ ಉತ್ಪತ್ತಿಯೂ ಆಗುವದರಿಂದ ಇವು ಶ್ರೇಷ್ಠತರದ ಜಂತುಗಳೆಂದು, ಹೇಳಬಹುದು.

ಕೆಲವು ಜಾತಿಯ ಹುಳಗಳ ಮುಸ್ತಕವು ಶರೀರದಿಂದ ಪ್ರತ್ಯೇಕಿಸಲ್ಪಟ್ಟಿರುತ್ತದೆ. ಇಂಥ ಹುಳಗಳಿಗೆ ಆರು ಕಾಲುಗಳಿರುವವು. ಮತ್ತು ಕಣ್ಣುಗಳ ಮೇಲೆ ಕೊಂಬುಗಳ ಹಾಗೆ ಎರಡು ಅವಯವಗಳಿರುತ್ತವೆ. ಆ ಕೊಂಬುಗಳಿಂದ ಅವು ಪದಾರ್ಥಗಳನ್ನು ಸ್ಪರ್ಶಮಾಡಿ ಪರೀಕ್ಷಿಸುವವು. ಅವಕ್ಕೆ ಉಸುರು ಆಡುವದಕ್ಕೋಸ್ಕರ ಸಣ್ಣ ಕೊಳವೆಗಳಿರುತ್ತವೆ. ನೊಣ, ಇರಿವೆ, ನೊರಜು ಮುಂತಾದವುಗಳೇ ಈ ಜಾತಿಯ ಹುಳಗಳು.

ಹುಳಗಳಲ್ಲಿ ಇನ್ನೊಂದು ವಿಶೇಷ ಚಮತ್ಕಾರ ಉಂಟು. ಅದು ಬೇರೆ, ಯಾವ ಪ್ರಾಣಿಗಳಲ್ಲಿಯೂ ಕಾಣುವದಿಲ್ಲ. ಅದೇನಂದರೆ ಅವಕ್ಕೆ ರೂಪಾಂತರವಾಗುತ್ತದಲ್ಲ.

ಆಗ ಹೊಸ ರೂಪವು ಎಷ್ಟುಮಾತ್ರವೂ ಮೊದಲಿನ ರೂಪಕ್ಕೆ ಹೋಲುವದಿಲ್ಲ. ಭೂಮಿಯ ಮೇಲೆ ನಡೆಯುವ ಹುಳವು ರೂಪಾಂತರವಾಗಿ ಆಕಾಶದಲ್ಲಿ ಹಾರಬಲ್ಲದ್ದಾಗಿರುತ್ತದೆ. ಕುದುರೆಮೋತಿಯ ಹುಳವು ಮೊದಲು ಹೇಸಿಗೆಯ ನೀರೊಳಗೆ ಕ್ರಿಮಿಯಾಗಿರುತ್ತದೆ. ಅದಕ್ಕೆ ರೂಪಾಂತರದಿಂದ ರೆಕ್ಕೆ ಉಂಟಾಗಿ ಹಾರಲರ್ಹವಾಗುತ್ತದೆ.

ಕೆಲವು ಹುಳಗಳಿಗೆ ಎರಡು ಮೂರು ರೂಪಾಂತರಗಳಾಗುವವು. ಮೊಟ್ಟೆ ಒಡೆದು ಹೊರಗೆ ಬಂದಾಗ ಹುಳವಿನ ರೂಪ ಬೇರೆ ಇರುತ್ತದೆ. ಅದು ಕೆಲಕಾಲ ಆ ಅವಸ್ಥೆಯಲ್ಲಿ ನಿಂತು ಬೇರೆ ಇನ್ನೊಂದು ಆಕಾರ ಹೊಂದುವದು. ಆಗಲದಕ್ಕೆ ಕೋಶವಾಸಿ ಎಂಬ ಹೆಸರು. ಈಸ್ಥಿತಿಯಲ್ಲಿ ಅದು ಭೂಮಿಯೊಳಗೆ ಇಲ್ಲವೆ ಮರಗಳ ಬೊಡ್ಡೆಯ ಹತ್ತರ ಇರುತ್ತದೆ. ಆಗಲವಕ್ಕೆ ಒಂದು ವಿಧದ ಕವಚವಿರುತ್ತದೆ. ಈ ಅವಸ್ಥೆಯಲ್ಲಿ ಸ್ವಲ್ಪಕಾಲ ಕಳೆದ ಬಳಿಕ ಅದು ಸಕಲ ಅವಯವಗಳಿಂದ ಪೂರ್ಣವಾದ ಜಂತುವಿನ ಸ್ವರೂಪ ಹೊಂದಿ ಕವಚ ಬಿಟ್ಟು ಹೊರಗೆ ಒರುವದು, ಅದಕ್ಕೆ ನಾವು ಪತಂಗವೆನ್ನುತ್ತೇವೆ.

ಕೋಶವಾಸಿ ಎಂಬ ಅವಸ್ಥೆಗೆ ಸೇರುವದಕ್ಕೆ ಮುಂಚೆ ಆ ಹುಳವು ತನ್ನ ವಾಸಕ್ಕೋಸ್ಕರ ಮನೆ ಅಂದರೆ ಗೂಡುಮಾಡಿಕೊಳ್ಳುವದರಲ್ಲಿ ಬಹಳ ಚಾತುರ್ಯವು ಪ್ರಕಟವಾಗುವ ಹಾಗೆ ಮಾಡುತ್ತದೆ. ಅದು ಕೋಶವೊಳಗೆ ತಾನು ಮುಚ್ಚಿಕೊಂಡು ನಿಲ್ಲುವಾಗ ಒಂದು ತಂತುವಿನಿಂದ ಗೂಡಿನ ಒಂದು ತುದಿಯನ್ನು ಮರದ ಕೊಂಬೆಗೆ ತೂಗಿಡುತ್ತದೆ. ರೇಷ್ಮೆಯ ಹುಳವು ತನ್ನ ಸಲುವಾಗಿ ತನ್ನ ಹೊಟ್ಟೆಯೊಳಗಿಂದ ತೆಗೆದ ತಂತುರೂಪ ಪದಾರ್ಥವೇ ರೇಶಿಮೆಯು ಒಂದು ರೇಶಿಮೆಯ ಹುಳದ ಕವಚದಿಂದ ಸುಮಾರು ೬೫೦ ಮೊಳ ರೇಶಿಮೆಯು ಹೊರಡುವದು.

ನೊಣ ಚಿಕ್ಕಾಡು ಮೊದಲಾದ ಹುಳಗಳಿಗೆ ಎರಡೇ ರೂಪಾಂತರಗಳಾಗುತ್ತವೆ.

—ವಿ. ರಾ. ಪ್ರಭು.

ಸ್ಕೂಲ ಲಾಯಬ್ರರಿಗಳು

ರಾಷ್ಟ್ರದ ಸಾಮೂಹಿಕ ವಿದ್ಯಾಭಿವೃದ್ಧಿಯನ್ನು ಮಾಡುವ ವಿಷಯದ ಶಿಕ್ಷಣ ಸಂಸ್ಥೆಗಳು ಅಂದರೆ ಸಾಲೆಗಳು, ಕಾಲೇಜಗಳು, ಇವೂ, ವರ್ತಮಾನಪತ್ರ, ಮಾಸಿಕ ಪುಸ್ತಕಗಳು, ಪಂಡಿತರ ವ್ಯಾಖ್ಯಾನಗಳು ಇವೂ ಮುಖ್ಯಾಂಗಗಳಾಗಿವೆ. ಹಾಗೆಯೇ ಲಾಯಬ್ರರಿಗಳು ರಾಷ್ಟ್ರೀಯ ವಿದ್ಯಾಭಿವೃದ್ಧಿಯಲ್ಲಿ ಮಹತ್ವವಾದ ಕಾರ್ಯಗಳನ್ನು ಮಾಡುತ್ತವೆ. ಸಾಲೆ ಅಥವಾ ಕಾಲೇಜ ಬಿಟ್ಟ ವಿದ್ಯಾರ್ಥಿಗಳ ಶಿಕ್ಷಣವನ್ನು ಮುಂದೆ ಅವರು ಸಾಯುವವರೆಗೆ ಅವ್ಯಾಹತವಾಗಿ ಸಾಗಿಸುವ ಶಿಕ್ಷಣಾಲಯಗಳೆಂದರೆ ಲಾಯಬ್ರರಿಗಳು ಎಂದು ಹೇಳ ಹುದು.

ಲಾಯಬ್ರರಿಯು ಅರ್ಥವು ಸರ್ವಸಾಮಾನ್ಯವಾಗಿ ಎಲ್ಲ ವಾಚಕರಿಗೂ ವಿದಿತವಾದ ವಿಷಯವು. ಮನುಷ್ಯನ ಬೌದ್ಧಿಕ, ನೈತಿಕ, ಶಾರೀರಿಕ ಶಕ್ತಿಗಳನ್ನು ವಿಕಾಸಗೊಳಿಸುವ, ಮತ್ತು ಬೇಸರ ದುಃಖಗಳು ಕಡಿಮೆಯಾಗುವ ವಿನೋದಪರ ಕಥೆ ಕಾದಂಬರಿಗಳು ಮುಂತಾಗಿ ಎಲ್ಲತರದ ಜ್ಞಾನವಿಕಾರಕ್ಕೆ ಸಾಧನವಾದ ಪುಸ್ತಕಗಳನ್ನು ಸಂಗ್ರಹಿಸಿಡುವದೇ ಲಾಯಬ್ರರಿಯು.

ಈ ಲಾಯಬ್ರರಿಗಳಲ್ಲಿ ಮನೆಯ ಲಾಯಬ್ರರಿಗಳು, ಸಾರ್ವಜನಿಕ ಲಾಯಬ್ರರಿಗಳು, ಸ್ಕೂಲ ಲಾಯಬ್ರರಿಗಳು, ಎಂದು ಭೇದಗಳುಂಟು. ಈ ಹಲವುತರದ ಲಾಯಬ್ರರಿಗಳಲ್ಲಿ ಆ ಆ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆ ಪುಸ್ತಕಗಳನ್ನು ಕೂಡಿಸಬೇಕಾಗುವದು. ಸದ್ಯಕ್ಕೆ ಸ್ಕೂಲ ಲಾಯಬ್ರರಿಯ ಬಗ್ಗೆ ವಿವೇಚಿಸುವದು ಮುಖ್ಯ ಉದ್ದೇಶವು.

ಈಗಿನ ಸಾಲೆಗಳಲ್ಲಿ ಲಾಯಬ್ರರಿಗಳಿಲ್ಲದಿರುವದು, ಒಂದು ಶಿಕ್ಷಣದ ದೊಡ್ಡ ಕೊರತೆಯಾಗಿದೆ. ತಜ್ಞರು ಸ್ವಲ್ಪು ವಿಚಾರಿಸಿದರೆ ಇದರ ಮುಪ್ಪರಿಣಾಮವು ಸ್ಪಷ್ಟವಾಗಿ ಕಂಡುಬರುವದು. ಸದ್ಯಕ್ಕೆ ನಮ್ಮ ಶಾಲೆಗಳಲ್ಲಿ ಸಿಗುವ ಶಿಕ್ಷಣದ ಉಪಯೋಗವನ್ನು ವಿದ್ಯಾರ್ಥಿಗಳು ಸಾಲೆಬಿಟ್ಟ ತರುವಾಯ ಯಾವರೀತಿಯಿಂದ ಮಾಡಿಕೊಳ್ಳುವರೆಂಬದನ್ನು ನಾವು ನೋಡಿದರೆ, ಈ ಶಿಕ್ಷಣದ ಕ್ಷಿಪಷ್ಟು ಅಥವಾ ಪೂರ್ಣಭಾಗವು ವ್ಯರ್ಥವಾಗಬಹುದೆಂದು ಹೇಳಬಹುದು. ಈಗ ಸಾಲೆಬಿಟ್ಟ ವಿದ್ಯಾರ್ಥಿಗಳಲ್ಲಿ ಕೆಲವರು ಮಾಸ್ತರರು, ಹಲವರು ವ್ಯಾಪಾರಸ್ಥರಲ್ಲಿ ಕಾರಕೂನರು, ಬೇರೆ ಕೆಲವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲಿಷ ಸ್ಕೂಲುಗಳಿಗೆ ಹೋಗುವವರು ಇರುವರಷ್ಟೆ ? ಇವರೆಲ್ಲ ಸ್ವಲ್ಪ ಜನರು. ಇವರ ಸಂಖ್ಯೆಯು ಸುಮಾರು ನೂರಕ್ಕೆ ಮೂವತ್ತು (೩೦) ಇರಬಹುದು, ಆದರೆ ಇನ್ನುಳಿದ ನೂರಕ್ಕೆ ಎಪ್ಪತ್ತು ಜನರು ೫-೬ ಇಯತ್ತೆ ಅಥವಾ ಮುಲ್ಕೀ ಪರೀಕ್ಷೆ ಪಾಸಾಗಿ ಸಾಲೆಬಿಟ್ಟು, ತನ್ನು ತಮ್ಮ ಉದ್ಯೋಗಗಳಲ್ಲಿ ಸೇರಿಕೊಳ್ಳುವರು. ಇವರು ತಾವು ಕಲಿತ ವಿದ್ಯೆಯನ್ನು ಸಾಲೆಯಲ್ಲಿಯೇ ಸಂಪೂರ್ಣವಾಗಿ ಬಿಟ್ಟು ಹೋಗುವರೆಂದು ಹೇಳುವದಕ್ಕೆ ಯಾವ ಪ್ರತ್ಯಯವೂ ತೋರುವದಿಲ್ಲ. ಅವರ ವಿದ್ಯೆಯು ಸಹಿಮಾಡುವುದರಲ್ಲಿ ಮಾತ್ರ ಉಪಯೋಗವಾಗುವುದು. ಈ ದುಃಸ್ಥಿತಿಯನ್ನು ಹೋಗಲಾಡಿಸಿ, ಸಾಲೆಯನ್ನು ಬಿಟ್ಟ ವಿದ್ಯಾರ್ಥಿಗಳ ಶಿಕ್ಷಣವನ್ನು ಪರ್ಯಾಯದಿಂದ ಮುಂದೆ ಸಾಗಿಸುವ ಕೆಲಸವನ್ನು ಸ್ಕೂಲು ಲಾಯಬ್ರರಿಗಳು ಜರುಗಿಸುವವೆಂದು ಸಾರಿಸಾರಿ ಹೇಳಬಹುದು.

ಈಗ ಸಾಲೆಯಲ್ಲಿ ನಮ್ಮ ವಿದ್ಯಾರ್ಥಿಗಳು ಸ್ವಲ್ಪ ಗಣಿತ, ವ್ಯಾಕರಣ, ವಾಚನ, ಪದ್ಯ ಮುಂತಾದ್ದನ್ನು ನಿರಿಚ್ಛೆಯಿಂದ ಕಲಿಯುವರು. ೬-೭ ಇಯತ್ತೆಗಳಿಗೆ ಹೋದರೂ ಅವರಲ್ಲಿ ವಾಚನಾಭಿರುಚಿಯು ಹುಟ್ಟಿದ್ದು ಕಂಡುಬರುವದಿಲ್ಲ. ಸ್ವಯಂಪ್ರೀತಿಯಿಂದ ಹೆಚ್ಚಿನ ಪುಸ್ತಕಗಳನ್ನು ಓದುವ ಅಭಿಲಾಷೆಯೇ ಅವರಲ್ಲಿ ಉದ್ಭವಿಸದ್ದು ನೂರಕ್ಕೆ ೯೯

ವಿದ್ಯಾರ್ಥಿಗಳಲ್ಲಿ ಕಂಡುಬರುವದಿಲ್ಲ. ಈ ಶೈಕ್ಷಣಿಕ ದೋಷವನ್ನು ದೂರ್ಪಡಿಸ ಬೇಕಾದರೆ ಲಾಯಬ್ರರಿಗಳಲ್ಲದೆ ಬೇರೆ ಸಾಧನಗಳು ಇಲ್ಲ. ಬಾಲಕರಲ್ಲಿ ಕುತೂಹಲ ಬುದ್ಧಿಗೇನೂ ಕೊರತೆಯಿರುವದಿಲ್ಲ. ಹೊಸ ಸಂಗತಿಯನ್ನು ತಿಳಿದುಕೊಳ್ಳಲಿಕ್ಕೆ ಲವ ಲವಿಕೆಯು ಅವರಲ್ಲಿ ಕಡಿಮೆಯಿರುವದಿಲ್ಲ. ಮಹಾಪುರುಷರಂತೆ ತಾವೂ ಆಗಬೇಕೆಂಬ ಉತ್ಕಟೇಚ್ಛೆಯು ಅವರಲ್ಲಿ ವಿಶೇಷವು. ಅನುಕರಣಶೀಲತೆಯು ಅವರಲ್ಲಿ ಉಕ್ಕುತ್ತಿ ರುವದು. ಆದರೆ ಈ ಎಲ್ಲ ಗುಣಗಳಿಗೆ ತಕ್ಕ ಪ್ರೋತ್ಸಾಹವು ಮಾತ್ರ ನಮ್ಮ ಈಗಿನ ನಿರ್ಬಂಧಿತ ಮತ್ತು ನಿಯಮಿತ ಶಿಕ್ಷಣದಲ್ಲಿ ದೊರೆಯುತ್ತಿರುವದಿಲ್ಲ. ಲಾಯಬ್ರರಿಗಳು ಅವರವರ ರುಚಿಗೆ ತಕ್ಕ ವಿಷಯಗಳ ಮೇಲಿನ ಪುಸ್ತಕಗಳನ್ನು ಅವರವರಿಗೆ ಒದಗಿಸಿ ಕೊಟ್ಟು, ಅವರಲ್ಲಿ ವಾಚನಾಭಿರುಚಿಯನ್ನು ಬಳಿಸುವವು. ಗಣಿತ, ವಾಚನ, ವ್ಯಾಕರಣ, ಭೂಗೋಲ, ಇತಿಹಾಸ ಮುಂತಾದ ನಿಯಮಿತ ವಿಷಯಗಳನ್ನು ಕಲಿಯಬೇಕೆಂಬ ಕಟ್ಟಿನಿಂದ ಉಂಟಾಗುವ ಬೇಸರ, ಅಪ್ರೇಮ ಮುಂತಾದವುಗಳನ್ನು ಹೋಗಲಾಡಿಸಿ ಶಾಲೆಯ ಅಭ್ಯಾಸದಲ್ಲಿ ಪ್ರೇಮವನ್ನೂ ರುಚಿಯನ್ನೂ ಹುಟ್ಟಿಸುವದು; ಮತ್ತು ವಿದ್ಯೆ ಯನ್ನು ಮುಂದೆ ಕಲಿಯುವದು, ದೊಡ್ಡವರಂತೆ ದೀರ್ಘಪ್ರಯತ್ನದಿಂದ ತಾವು ದೊಡ್ಡ ವರಾಗುವದು, ಶಾಲೆಯನ್ನು ಬಿಟ್ಟರೂ ಓದುವದನ್ನು ಮಾತ್ರ ಬಿಡಬಾರದು, ಎಂಬ ಮಹತ್ತರವಾದ ಅಭಿಲಾಷೆಗಳು ಅವರಲ್ಲಿ ಹುಟ್ಟುವದು, ಲಾಯಬ್ರರಿಗಳಿಂದಾಗುವ ಕೆಲಸವು.

ಇದಲ್ಲದೆ, ಶಾಲೆಗಳಲ್ಲಿ ಲಾಯಬ್ರರಿಗಳು ಇನ್ನೊಂದು ಮಹತ್ವದ ದೋಷವನ್ನು ತೆಗೆದುಹಾಕುವವು. ಏನಂದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ವಿಚಾರ ಮರ್ಯಾದೆಯೂ ಜ್ಞಾನವೂ ಬಹಳ ಸಂಕುಚಿತವಿರುವವು. ಅವರಿಗೆ ಸದ್ಯದಲ್ಲಿ ದೇಶ ದೊಳಗೆ ಏನು ನಡೆದದೆ, ಹೇಗೆ ನಡೆದವೆ ಮುಂತಾದ ಸಂಗತಿಗಳು ಗೊತ್ತಿರುವದಿಲ್ಲ. ಬೇರೆಬೇರೆ ದೇಶಗಳಲ್ಲಿ ಆಗಿಹೋದ, ಮತ್ತು ಸದ್ಯಕ್ಕೆ ಇರುವ ಮಹಾಪುರುಷರ ಹೆಸರು ಗಳು ಸಹಿತ ಅವರಿಗೆ ಗೊತ್ತಿರುವದಿಲ್ಲ. ಒಟ್ಟಿಗೆ ಅವರ ವಿಚಾರಗಳು ಅತಿಕಯ ಸಂಕು ಚಿತಸ್ಥಿತಿಯಲ್ಲಿರುವವು. ಲಾಯಬ್ರರಿಗಳು ವಿದ್ಯಾರ್ಥಿಗಳಲ್ಲಿದ್ದ ಆ ದೋಷವನ್ನು ವರ್ತಮಾನಪತ್ರಗಳ, ದೊಡ್ಡ ದೊಡ್ಡ ಮಹಾಪುರುಷರ ಚರಿತ್ರಗಳ, ಅನೇಕ ಇತಿ ಹಾಸಗಳ ಮುಖಾಂತರ ತೆಗೆದುಹಾಕಿ, ಅವರ ಜ್ಞಾನಮರ್ಯಾದೆಯನ್ನೂ ವಿಚಾರ ಕ್ಷೇತ್ರವನ್ನೂ ಹೆಚ್ಚಿಸುವವು; ಮತ್ತು ವಿದ್ಯಾರ್ಥಿಗಳಲ್ಲಿ ಶಾಲೆಬಿಟ್ಟಮೇಲೆ ಕೂಡ ವರ್ತಮಾನಪತ್ರಗಳನ್ನು ಓದುವ ಹವ್ಯಾಸವನ್ನೂ ಹಂಬಲವನ್ನೂ ಹುಟ್ಟಿಸುವವು.

ಶಾಲೆಯು ವಿದ್ಯಾರ್ಥಿಗಳ ವಯೋಮಾನ, ಜ್ಞಾನಕ್ಷೇತ್ರ, ಹಣದ ಪೂರ್ತಿಕೆ ಮತ್ತು ಮೇಲೆ ಹೇಳಿದ ಉದ್ದೇಶ ಮುಂತಾದ ಸಂಗತಿಗಳ ಕಡೆಗೆ ಲಕ್ಷ್ಯಗೊಟ್ಟು, ವಿಚಾರಿಕರು (ಅನುಭವಿಕ ಶಿಕ್ಷಕರು) ಲಾಯಬ್ರರಿಯಲ್ಲಿ ಯಾವ ಯಾವ ಪುಸ್ತಕಗಳನ್ನು

ಸಂಗ್ರಹಿಸಬೇಕೆಂಬದನ್ನು ಯೋಚಿಸಬೇಕು. ಹಡುಗರಲ್ಲಿ ಕಥೆಗಳನ್ನು ಓದುವ ಒಲವು ಬಹಳವಿರುತ್ತದೆ. ಕಥೆ-ಕಾದಂಬರಿಗಳು ಅವರಿಗೆ ಬೆಲ್ಲವು. ಅವುಗಳನ್ನು ಕೊಟ್ಟಷ್ಟು ಓದಿಬಿಡುವರು; ಆದುದರಿಂದ ಅಲ್ಲಿ ಅನೇಕ ತರದ ಉತ್ತಮ ಕಥೆಗಳನ್ನೂ ಕಾದಂಬರಿಗಳನ್ನೂ ವಿಶೇಷವಾಗಿ ಸೇರಿಸುವದು. ಸ್ಕೂಲಲಾಯಬ್ರರಿಗಳಲ್ಲಿ ಕಥೆ-ಕಾದಂಬರಿಗಳಿಗೆ ಮೊದಲನೇ ಸ್ಥಾನವು ಸಲ್ಲತಕ್ಕದ್ದು ಯೋಗ್ಯವು. ಶ್ರೀಯುತ ರಾ. ರಾ. ಬಿ. ವೆಂಕಟಾಚಾರ್ಯರ ಕಾದಂಬರಿಗಳು, ಗಳಗನಾಥರ ಕಾದಂಬರಿಗಳು, ರಾಮಾಯಣ ಮಹಾಭಾರತ ಕಥೆಗಳು, ಬೇರೆ ಸುಪ್ರಸಿದ್ಧ ಕಥೆ-ಕಾದಂಬರಿಗಳು ಇವನ್ನು ಸಂಗ್ರಹಿಸಬೇಕು. ಇನ್ನು ಎರಡನೇ ಸ್ಥಾನವು ಮಹಾಪುರುಷರ ಚರಿತ್ರೆಗಳಿಗೆ ಸಂಬಂಧಿಸಿದ್ದು. ಶಿವ ಜಿ, ಅಕಬರ, ಅಲೆಕ್ಸ್ಯಾಂಡರ, ಗ್ಲ್ಯಾಡಸ್ಟನ್, ಲಿಂಕನ್, ಬುಕಂಟಿ ವಾಶಿಂಗಟನ್, ನೆಪೋಲಿಯನ್, ಸಾಕ್ರೇಟೀಸ, ವಿವೇಕಾನಂದ ಮುಂತಾದ ಹಿಂದಿನ ಮತ್ತು ಈಗಿನ ಶೂರ ಪುರುಷರ, ತತ್ವಜ್ಞಾನಿಗಳ, ಮಹಾಪುರುಷರ, ದೇಶಾಭಿಮಾನಿಗಳ ಚರಿತ್ರಗಳನ್ನು ನಾವು ಅವಶ್ಯವಾಗಿ ಸಂಗ್ರಹಿಸಬೇಕು. ಮತ್ತು ಸದ್ಯದ ಇತಿಹಾಸವನ್ನು ತಿಳಿಸುವಂಥ ದೈನಿಕ ಮತ್ತು ಸಪ್ತಾಹಿಕಪತ್ರ, ಹಾಗೂ ಮಾಸಿಕಗಳನ್ನು ಲಾಯಬ್ರರಿಗಳಿಗೆ ಅವಶ್ಯವಾಗಿ ತರಿಸಿಕೊಳ್ಳುವದು; ಇವುಗಳಿಂದ ಹುಡುಗರಿಗಷ್ಟೇ ಹಿತವಾಗದೆ, ಮಾಸ್ತರರಿಗೂ ಬಹಳ ಉಪಯೋಗವಾಗುವದು. ಮಾಸ್ತರರ ಈಗಿನ ಜಡಸ್ಥಿತಿಯನ್ನು ಹೋಗಲಾಡಿಸಿ ಹೆಚ್ಚಿನ ಹುರುಪಿನಿಂದ ಕೆಲಸಮಾಡಲಿಕ್ಕೆ ಲಾಯಬ್ರರಿಗಳು ಹಚ್ಚುವವು. ಇವಲ್ಲದೆ ಜೈಮಿನಿ ಮುಂತಾದ ಸುಲಭಕಾವ್ಯಗಳು, ಸಂಸಾರಸುಖ, ಕವಿತಾ ಕುಸುಮಮಂಜರಿ ಮುಂತಾದ ವಿವಿಧ ವಿಷಯಗಳ ಮೇಲಿನ ಪುಸ್ತಕಗಳು, ಇತಿಹಾಸಗಳು ಒಕ್ಕಲತನದ ಮೇಲಿನ ಪುಸ್ತಕಗಳು ಇವೆಲ್ಲವು ಸಂಗ್ರಾಹ್ಯವಾಗಿರಬೇಕು.

ಮೇಲೆ ಹೇಳಿದ ಕ್ರಮವನ್ನು ಸಾಮಾನ್ಯವಾಗಿ ಅನುಸರಿಸಿ ಲಾಯಬ್ರರಿ ಹಣವೆನ್ನು ವಿನಿಯೋಗಿಸಬೇಕು.

ಸಾಲೆಯಲ್ಲಿ ಈ ಲಾಯಬ್ರರಿಗಳ ಉಪಯೋಗವನ್ನು ಹೇಗೆ ಮಾಡಿಕೊಳ್ಳಬೇಕೆಂಬದರ ಬಗ್ಗೆ ಹುಡುಗರಿಗೆ ಕಲಿಸಲಿಕ್ಕೆ ವಾರಕ್ಕೆ ತೀರ ಕನಿಷ್ಟ ಎರಡು ತಾಸುಗಳನ್ನಾದರೂ ಇಡಬೇಕಾಗುವದು. ಈ ವೇಳೆಯು ಸರಕಾರಿ ಟಾಯಮ್ಮಿನ ಹೊರಗಿನದಾಗಿರಲಿಕ್ಕೆಬೇಕು. ಕಥೆ—ಕಾದಂಬರಿಗಳಲ್ಲಿ ಕೆಲವನ್ನು ಆರಿಸಿ, ಆ ಪುಸ್ತಕಗಳಲ್ಲಿ ಸ್ವಲ್ಪ ಭಾಗವನ್ನು ಓದಿತೋರಿಸಿ ದಾರಿಗೆ ಹಚ್ಚುವುದು. ದೇಶದಲ್ಲಿ ನಡೆದ ಸಂಗತಿಗಳ ಬಗ್ಗೆ ಮಾಹಿತಿ ಮಾಡಿಕೊಟ್ಟು, ವರ್ತಮಾನಪತ್ರಗಳು ತಿಳಿಯುಂತೆ ಅವರಿಗೆ ದಾರಿ ತೋರಿಸಬೇಕು. ಮಹಾಪುರುಷರ ಚರಿತ್ರಗಳನ್ನು ಕಥೆಮಾಡಿ ಹೇಳಿ ಅವರಲ್ಲಿ ಜಿಜ್ಞಾಸೆ ಹುಟ್ಟಿಸಿ ಅವರ ಚರಿತ್ರಗಳನ್ನು ಓದುವಂತೆ ಮಾಡಬೇಕಾಗುವದು. ಈ ಮೇರೆಗೆ ಶಾಲೆಯ ಲಾಯಬ್ರರಿಗಳ ಉಪಯೋಗದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಗೆ ಮಾರ್ಗದರ್ಶಕರಾಗಬೇಕೆಂಬದನ್ನು ವಿವೇಚಿಸಿದ್ದಾಯಿತು.

ಸಾಲೆಯ ಪಂಚರು, ಅಲ್ಲಿನ ಸಭ್ಯಗೃಹಸ್ಥರು, ಶಿಕ್ಷಕರು, ಇವರೆಲ್ಲರು ಒಮ್ಮನಸ್ಸಿನಿಂದಲೂ ಹುರುಪಿನಿಂದಲೂ ರಾಷ್ಟ್ರೀಯಭಾವನೆಯನ್ನನುಸರಿಸಿ ಪ್ರತಿಯೊಂದು "ಫುಲ್ ಪ್ರಾಯಮರಿ ಸ್ಕೂಲುಗಳಲ್ಲಿ" ಲಾಯಬ್ರರಿಗಳನ್ನು ಸ್ಥಾಪಿಸುವ ಕೆಲಸವನ್ನು ಮೊದಲಿಗಿಂತ ಒತ್ತರದಿಂದ ನಡೆಸಿದರೆ ಈ ಬರಹದ ಸಾರ್ಥಕವು ಆಗುವದು.

—ನರಸಪ್ಪ ರಾಮಪ್ಪ ಆರೇರ, ಅಸಿ. ಮಾಸ್ತರ
ದಿಡಗೂರ ತಾಲೂಕ ಕಿತ್ತೂರ.

ಬೌದ್ಧ ಧರ್ಮದ ಸಂಕ್ಷಿಪ್ತ ಇತಿಹಾಸ



ಲೇಖಕ— ಮಡಿವಾಳಪ್ಪ ಸಾಸನೂರ ಹೆ. ಮಾ. ಕಲಕೇರಿ, ಜಿ. ವಿಜಾಪುರ.

ತಿಬೇಟದ ಬೌದ್ಧ-ಧರ್ಮದ ಪರಿಚಯವು Siculo–Hungarian ರವರ ಕೃಪೆಯಿಂದ ಆಯಿತು. ಚೀನದ ಬೌದ್ಧಧರ್ಮದ ಪರಿಚಯವು 'Abel * Remusat' ಎಂಬ ಫ್ರೆಂಚ ಪಂಡಿತನ ಅನುಕಂಪದಿಂದ ಉಂಟಾಯಿತು. ಅವನು ೧೮೩೭ರಲ್ಲಿ ಚೀನೀಭಾಷೆಯನ್ನು ಕಲಿತು, ಚೀನೀಭಾಷೆಯಿಂದ ಫಾಹಿಯನ್ನನ ಪ್ರವಾಸ ವೃತ್ತವನ್ನು ಫ್ರೆಂಚ ಭಾಷೆಯಲ್ಲಿ ಅನುವಾದ ಮಾಡಿರುತ್ತಾನೆ. ಅದೇ ಸಮಯದ ಸಂಬಂಧವಾಗಿ ಪಂಡಿತ ಮಂಡಲಿಗೆ ಗೊತ್ತಾದದ್ದೇನಂದರೆ—ಬೌದ್ಧರು ಚೀನದಿಂ ಧರ್ಮಸಂಪಾದನೆಗೋಸುಗ ಭರತಖಂಡವಲ್ಲಿಯ ತೀರ್ಥಸ್ಥಾನಗಳ ದರ್ಶನಕ್ಕಾ ಬರುತ್ತಿದ್ದರು. † ಅವನ ತರುವಾಯ ೧೮೫೩ರಲ್ಲಿ Stanislas Julien ನೆಂ ಮತ್ತೊಬ್ಬ ಫ್ರೆಂಚ ಪಂಡಿತನು ಹುಯೆನ್‌ಸಾಂಗನ ಭ್ರಮಣ ವೃತ್ತಾಂತವನ್ನು ಚೀನಿ ಭಾಷೆಯಿಂದ ಫ್ರೆಂಚ ಭಾಷೆಗೆ ಅನುವಾದ ಮಾಡಿದನು. ಅವರ ತರುವಾಯ ಒಬ್ಬ ಬ್ಬರು ಇಂಗ್ಲಿಷ ಪಂಡಿತ (Beal; Giles) ರು ಈ Sinology ಯ ಕ್ಷೇತ್ರದ

---

* ಅವನು 'College de France, ಇದರಲ್ಲಿ ಚೀನೀ ಭಾಷೆಯ ಅಧ್ಯಾಪಕನಿದ್ದನು ಅವನ ಪುಸ್ತಕವು–Foe Koue Kirelation of Baddhisr Kingdoms ಎಂಬುದ ಇದೆ.

† Burnouf ನು ೧೮೫೨ರಲ್ಲಿ ಚೀನೀ ಪುಸ್ತಕವಾದ Mian-fa-lien-hwa King ವನ್ನು ಫ್ರೆಂಚ ಭಾಷೆಗೆ ಅನುವಾದ ಮಾಡಿದನು. ಅದೇ Lotus of the good Law ಸದ್ಧರ್ಮ ಪುಂಡರೀಕವು.

ಬಂದರು. Beal * ಸಾಹೇಬರು ೧೮೫೭ರಲ್ಲಿ ಫಾಹಿಯನ್ನನ ಮತ್ತು ೧೮೮೪ರಲ್ಲಿ ಹುಯೆನ್‌ಸಾಂಗನ ಗ್ರಂಥಗಳನ್ನು ಇಂಗ್ರೇಜಿ ಭಾಷೆಯಲ್ಲಿ ಅನುವಾದ ಮಾಡಿದರು. Giles ನೂ ೧೮೭೭ ರಲ್ಲಿ ಫಾಹಿಯನನ ಗ್ರಂಥವನ್ನು ಅನುವಾದ ಮಾಡಿದನು. ಈ ಭ್ರಮಣ ವೃತ್ತಾಂತಗಳು ಇಂಗ್ರೇಜಿಯಲ್ಲಿ ಅನುವಾದವಾದ ಕೂಡಲೇ ಬಹುಜನ ಪಂಡಿತರ ದೃಷ್ಟಿಯು ಇದಗಕಡೆಗೆ ಆಕರ್ಷಿಸಲ್ಪಟ್ಟಿತು. ಇದರ ಹೊರತು ಚೀನದ ಬೌದ್ಧ ಧರ್ಮದ ಸಂಬಂಧದಿಂದ ೧೮೭೩ರಲ್ಲಿ Dr, E. J. Eitel ಎಂಬವನು Buddhism ಮತ್ತು ತರುವಾಯ Hand-book for the Stndent of chincse Buddhism ವನ್ನು ಬರೆದನು. Edkins (೧೮೮೦) ಮತ್ತು Beal(೧೮೮೪) ಇವರ ಚೀನಾ ಬೌದ್ಧಧರ್ಮ ಸಂಬಂಧದ ಗ್ರಂಥಗಳೂ ಉಲ್ಲೇಖ ಯೋಗ್ಯಗಳು. ವರ್ತಮಾನಯುಗದ ಚೀನ ಶಾಸ್ತ್ರಬಲ್ಲ ಬಲ್ಲಿದರಲ್ಲಿ ಶ್ಯಾವ್ಯಾನ್ನ್ಸ (Chavannes', ಪೇಲಿಯೊ (Pelliot) ಮತ್ತು ಸಿಲ್ವ್ಹಾನ್‌ಲೇವಿ (S. Levi) ಇವರ ಹೆಸರುಗಳು ಬರುವವು. ಈ ಎಲ್ಲ ಪಂಡಿತರ ಸಹಾಯದಿಂದ ಚೀನೀ ಬೌದ್ಧ ಧರ್ಮದೊಡನೆ ನಾವು ಪರಿಚಯವನ್ನು ಮಾಡಿಕೊಂಡಿದ್ದೇವೆ.

ಅಶೋಕನ ಪ್ರಯತ್ನದಿಂದ ಬೌದ್ಧಧರ್ಮವು ಮೂರು ಮಹಾದೇಶಗಳಲ್ಲಿ ಹೇಗೆ ಪ್ರಸಾರವಾಯಿತೆಂಬದನ್ನು ಮೊದಲೇ ಹೇಳಿದ್ದೇವೆ. ಅಶೋಕನ ಅಳಿಕೆಯು ಬೌದ್ಧ ಧರ್ಮದ ಬೆಳಿಗೆಯ ಯುಗವಾದರೂ ಆ ಹಬ್ಬುಗೆಯ ಹೊತ್ತಿನಲ್ಲಿಯೇ ಬೌದ್ಧ ಭಿಕ್ಷುಗಳಲ್ಲಿ ಒಡಕು ಉಂಟಾಯಿತು.

ಅಶೋಕನ ಸಾಮ್ರಾಜ್ಯವು ಅಳಿದುಹೋದರೂ ಅವನು ಬೌದ್ಧ ಧರ್ಮಕ್ಕೆ ಕೊಟ್ಟ ಉಚ್ಚಾಸನವನ್ನು ಯಾರಿಂದಲೂ ಬಹುದಿನಗಳ ವರೆಗೆ ಕುಗ್ಗಿಸುವದಾಗಲಿಲ್ಲ. ಅನಂತರ ಶಕರಾಜನಾದ ಕನಿಷ್ಕನು ಸದ್ಧರ್ಮದ ಆಶ್ರಯವನ್ನು ಗ್ರಹಣಮಾಡಿ ಅದಕ್ಕೆ ರಾಜಾಸನದಲ್ಲಿ ಪುನಃ ಪ್ರತಿಷ್ಠಿತವಮಾಡಿದನು. ಈ ಕುಶಾನ ಅಥವಾ ಇಉಚಿ ಜಾತಿಯು ಮೊದಲು, 'Oxes, ನದಿಯ ತೀರದಲ್ಲಿ ವಾಸಮಾಡುತ್ತಿತ್ತು. ಕ್ರಮದಿಂದ ಅನೇಕ ಕಾರಣದಿಂದ ಅವರು ಹಿಂದುಸ್ತಾನದ ಕಡೆಗೆ ಆಕೃಷ್ಟರಾಗಿ ಭಾರತದ ಪಶ್ಚಿಮ ಪ್ರಾಂತದಲ್ಲಿ ಬಂದು ರಾಜ್ಯವನ್ನು ಸ್ಥಾಪಿಸುವ ಪ್ರಯತ್ನಮಾಡಿದರು. ಕಾಲಕ್ರಮದಿಂದ ಪಶ್ಚಿಮ ಭಾರತದಲ್ಲಿ 'ಕುಶಾನ' ಸಾಮ್ರಾಜ್ಯಸ್ಥಾಪನೆ ಮಾಡಿದರು. ಅನಂತರ ಬೌದ್ಧ ಧರ್ಮದ ಆಶ್ರಯದಲ್ಲಿ ಬಂದು ಅವರು ಬೌದ್ಧ ಧರ್ಮದ ಉನ್ನತಿಯ ಪ್ರಯತ್ನವನ್ನು ಮಾಡಿದರು.

* Beal ಸಾಹೇಬರು London ದಲ್ಲಿಯ University College ದಲ್ಲಿ ಚೀನೀಭಾಷೆಯ ಅಧ್ಯಾಪಕರಿದ್ದರು. ಅವರು ಚೀನೀಭಾಷೆಯಿಂದ A catene of Buddhist Sesiptures ಮತ್ತು The Romantic Legend of Sakya Buddh. (Edkins chinese Buddhism P. B) ಎಂಬವುಗಳನ್ನು ಸಂಕಲನಮಾಡಿದರು.

ಬೌದ್ಧ ಧರ್ಮದ ಬೆಳವಣಿಗೆಯ ಇತಿಹಾಸದಲ್ಲಿ ಪಶ್ಚಿಮ ಭಾರತವು, ಎಷ್ಟೋ ಸಹಾಯವನ್ನು ಮಾಡಿತು. ಈ ಪಶ್ಚಿಮ ಭಾರತವು ಎಂದರೆ ಪಂಜಾಬ ಅಫಗಾನಿ ಸ್ತಾನ ಮತ್ತು ಕಾಶ್ಮೀರಗಳು, ಅನೇಕ ವಿಭಿನ್ನ ಜಾತಿಗಳ ಕೂಟದ ಸ್ಥಳವಾಗಿತ್ತು. ಇಲ್ಲಿ ಗ್ರೀಕರು, ಬಾಕ್ತ್ರಿಯನ್ನರು, ಶಕರು, ಭಾರತೀಯರು ಮತ್ತು ಏಸಿಯಾದ ಬೇರೆ ಬೇರೆ ಜಾತಿಗಳು ಒತ್ತಟ್ಟಿಗೆ ಕೂಡುತ್ತಿದ್ದವು. ಮತ್ತು ಇಲ್ಲಿಯ ಜನರೇ ನಾನಾದೇಶ, ವಿದೇಶಗಳಿಗೆ ಹೋಗಿ ಬೌದ್ಧ ಧರ್ಮದ ಪ್ರಚಾರವನ್ನು ಮಾಡುತ್ತಿದ್ದರು.

ಕನಿಷ್ಕನು ಬೌದ್ಧಧರ್ಮದ ಉನ್ನತಿಗೋಸುಗ ಎಷ್ಟೋ ವಿಹಾರಗಳನ್ನೂ ಮಠಗಳನ್ನೂ ಸ್ಥಾಪಿಸಿದನು. ಅವನ ಕಾಲದಲ್ಲಿಯೇ ಜಲಂದರದಲ್ಲಿ ಬೌದ್ಧ ಸಂಘದ ಅಧಿವೇಶನವಾಯಿತು. ಈ ಸಭೆಯಲ್ಲಿಯೇ ಬೌದ್ಧ ಭಿಕ್ಷುಗಳಲ್ಲಿ ವಿಶೇಷವಾಗಿ ಒಡಕು ಉಂಟಾಯಿತು. ಆನಂತರ ಅವರಲ್ಲಿ ಎರಡು ಪಂಗಡಗಳುಂಟಾದವು. ಮಹಾಯಾನ ಮತದವರು ಅಂದದ್ದೇನೆಂದರೆ— ನಿರ್ವಾಣವನ್ನು ಎಲ್ಲರೂ ಸಂಪಾದನೆ ಮಾಡಲು ಸಮರ್ಥರು. ಅದು ಯಾವನೊಬ್ಬನ ಸ್ವತ್ತು ಅಲ್ಲ; ಆದರೆ ಹೀನಯಾನದವರು ಇಲ್ಲ. ನಿರ್ವಾಹವು ಕೇವಲ ಕೆಲವು ವಿಶಿಷ್ಟ ಜನರಿಗೋಸುಗ ಇರುವದು. ಎಲ್ಲರೂ ಸೌಭಾಗ್ಯವಂತರೂ, ನಿರ್ವಾಣಕ್ಕೆ ಯೋಗ್ಯರೂ ಆಗುವದು ಅಶಕ್ಯವು ಹೀನಯಾನವು ಸಿಂಹಲ ಬ್ರಹ್ಮ, ಶ್ಯಾಮ ದೇಶಗಳಲ್ಲಿಯೂ ಮಹಾಯಾನವು ಪೂರ್ವ ಏಸಿಯಾದಲ್ಲಿಯೂ ಹಬ್ಬುಗೊಂಡಿತು.

ಪಶ್ಚಿಮ ಭಾರತವು ಮಹಾಯಾನ ಮತದ ಒಂದು ಮುಖ್ಯ ಕೇಂದ್ರವಾಯಿತು. ಅಂತೇ ಅಲ್ಲಿಂದ ಬೌದ್ಧ ಧರ್ಮವು ಹಬ್ಬಿದ ದೇಶಗಳಲ್ಲೆಲ್ಲ ಮಹಾಯಾನ ಮತವು ಈಗಲೂ ಪ್ರಚಲಿತವಾಗಿರುತ್ತದೆ. ಚೀನ ದೇಶದಲ್ಲಿಯಾವ ಬೌದ್ಧ ಧರ್ಮದ ಪ್ರವಾಹವು ಹೋಯಿತೋ ಆ ಪ್ರವಾಹದ ಉಗಮಸ್ಥಾನವು ಈ ಪಶ್ಚಿಮ ಭಾರತವೇ, 'ಕುಶಾನ'ರು ಈ ಪ್ರಚಾರಕಾರ್ಯದಲ್ಲಿ ಎಷ್ಟೋ ಸಹಾಯವನ್ನು ಮಾಡಿದರು. ಅವರ ರಾಜಸಭೆಯಿಂದ ಒಬ್ಬ ದೂತನು ಮೊದಲು ಚೀನದೇಶದಲ್ಲಿ ಹೋಗಿ ಅಲ್ಲಿ ಬುದ್ಧನ ವಾಣಿಯನ್ನು ಪ್ರಚಾರಮಾಡಿದನು. ಆಚಾರ್ಯ ಸಿಲ್ವನ ಲೇವ್ಹಿ (S. Levi * ಯು ಅನ್ನುವದೇನಂದರೆ— ಅವನು ಕುಶಾನ ರಾಜಸಭೆಯಿಂದ ಹೋದದ್ದೇನೋ ನಿಜ. ಆದರೆ ನಿಜವಾಗಿ ಅವನು ಚೀನದ ರಾಜದೂತನು. ಕುಶಾನ ದೂತನಲ್ಲ. ಅವನು ಚೀನದಿಂದ ಕುಶಾನ ರಾಜ್ಯದಲ್ಲಿ ಬಂದು ಬುದ್ಧನ ವಾಣಿಯಿಂದ ಮುಗ್ಧನಾಗಿ ಚೀನಕ್ಕೆ ತಿರುಗಿ ಹೋಗಿ ಆ ವಾಣಿಯನ್ನು ಪ್ರಚಾರಮಾಡಿದನು. ಈಗ ಚೀನ ದೇಶದಲ್ಲಿ ಬೌದ್ಧ ಧರ್ಮದ ಪ್ರಥಮ ಪ್ರವೇಶವಾಯಿತು.

ಇದಾದ ಕೆಲವು ದಿನಗಳನಂತರ ಚೀನದ 'Ming' ಎಂಬ ಒಬ್ಬ ರಾಜನು ಒಂದು ಕನಸುಕಂಡನು. ಅದರಲ್ಲಿ— ಸ್ವರ್ಗದಿಂದ ಒಬ್ಬ ಸಾಧುಪುರುಷನು ಅವನ

*Les Voyageurs chinsis (chayannes') P. H.

ಸಿಂಹಾಸನದ ಕಡೆಗೆ ಮುಂದಾದನು. ಈ ಸ್ವಪ್ನದ ಅರ್ಥವು ಏನೆಂಬದನ್ನು ವಿಚಾರಿಸುವದಕ್ಕಾಗಿ ಪಂಡಿತರನ್ನು ಕರೆಯಿಸಿದನು. ಆಗ ಪಂಡಿತರು:– 'ಭಾರತವರ್ಷದಿಂದ ಒಬ್ಬ ಸಾಧುವು ಬರುವನು. ಅವನು ಚೀನಕ್ಕೋಸುಗ ಕೆಲವು ವಸ್ತುಗಳನ್ನು ತಂದು ಕೊಡುವನು,' ಎಂದು ಹೇಳಿದರು. Ming ರಾಜನು ಈ ಸಂಗತಿಯನ್ನು ಕೇಳಿ ದೂತನನ್ನು ಭಾರತವರ್ಷದಿಂದ ಆ ಅಜ್ಞಾತವು ರುಷನನ್ನು ಕರೆತರಲಿಕ್ಕೆ ಕಳುಹಿದನು. ಆ ದೂತನು ಎಷ್ಟೋ ಗುಡ್ಡ ಬೆಟ್ಟಗಳನ್ನು ದಾಟಿ ಮರುಭೂಮಿಯ ಉಸುಕು ನೆಲದೊಳಗಿಂದ ಗಾಂಧಾರಕ್ಕೆ ಬಂದನು. ಗಾಂಧಾರದಲ್ಲಿ ಅವನಿಗೆ ಮಾತಂಗನೆಂಬ ಒಬ್ಬ ಭಾರತೀಯ ಭಿಕ್ಷುವು ಭೆಟ್ಟಿಯಾದನು. ಕಾಶ್ಯಪಕುಲದಲ್ಲಿ ಅವನ ಜನನವಾಗಿತ್ತೆಂದೇ ಚೀನೀ ಗ್ರಂಥದಲ್ಲಿ ಅವನು ಕಾಶ್ಯಪ ಮಾತಂಗನೆಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾನೆ. ಅವನ ಮನೆಯು ಮಗಧದೇಶದಲ್ಲಿತ್ತು. ಮಗಧದಿಂದ ಅವನು ಗಾಂಧಾರಕ್ಕೆ ಬಂದಿದ್ದನು. ಆ ಚೀನಾ ದೂತನ ಹೇಳಿಕೆಯಲ್ಲಿ (ಇವನ ಹೆಸರು ಸ್ಯಾಯಿನ್ (Tsai-yin) ಕಾಶ್ಯಪಮಾತಂಗನು ಕೆಲವು ಬೌದ್ಧ ಗ್ರಂಥ ಮತ್ತು ಬುದ್ಧನ ಮೂರ್ತಿಗಳನ್ನು ಒಯ್ದು ಆ ದೂತನೊಡನೆ ಚೀನದೇಶದ ಕಡೆಗೆ ನಡೆದನು. ಅಲ್ಲಿ Illin- Ti, ಎಂಬ ರಸನು ಅವನಿಗೆ ಸಾದರದಿಂದ ಬರಮಾಡಿಕೊಂಡನು. ಅವನು ಇರುವದಕ್ಕೋಸುಗ ವ್ಯವಸ್ಥೆ ಮಾಡಿಕೊಟ್ಟನು. ಬಹು ಬೇಗನೆ ಅವನು ರಾಜನ ಅನುಗ್ರಹವನ್ನು ಸಂಪಾದನೆ ಮಾಡಿದನು. ಮತ್ತು ರಾಜನು ಅವನನ್ನು ತನ್ನ ಪುರೋಹಿತನನ್ನಾಗಿ ನೇಮಿಸಿದನು. ಅವನೇ ಚೀನದೇಶದಲ್ಲಿ ಮೊದಲು ಬೌದ್ಧ ಧರ್ಮವನ್ನು ಪ್ರಚಾರಮಾಡಿದನು.

ಅವನು ಸುಮಾರು ಕ್ರಿ. ಶ. ೬೭ ರಲ್ಲಿ ಚೀನಕ್ಕೆ ಹೋದನು. ಆಚತಿ Beal ಸಾಹೇಬರು ಕ್ರಿ. ಶ. ೭೧ ರಲ್ಲಿ ಎಂದು ಅನ್ನುವರು. ಅದು ಏನೇ ಆಗಲಿ, ಕ್ರಿ. ಶ. ದ ಗಿನೇ ಶತಮಾನದಲ್ಲಿ ಭಾರತ ವರ್ಷದಿಂದ ಬೌದ್ಧಧರ್ಮವು ಚೀನದಲ್ಲಿ ಪ್ರವೇಶಮಾಡಿತೆಂಬದಂತೂ ನಿಶ್ಚಿತವಾದ ಮಾತು.

ಅವನು Po-nash ಅಥವಾ ಶ್ವೇತ-ಅಶ್ವ-ಮಠದಲ್ಲಿ (Loyan ದಲ್ಲಿ) ಒಂದು ಬೌದ್ಧ ಸೂತ್ರವನ್ನು ಚೀನಾ ಭಾಷೆಯಲ್ಲಿ ಅನುವಾದ ಮಾಡಿದನು * ಚೀನೀ ಭಾಷೆಯಲ್ಲಿ ಬೌದ್ಧ ಗ್ರಂಥಗಳ ಅನುವಾದ ಮಾಡಿದ ಭಾರತೀಯ ಪಂಡಿತರಲ್ಲಿ ಇವನೇ ಮೊದಲಿಗನು. ಆ ಮಠದಲ್ಲಿಯೇ ಇವನು ಸ್ವಲ್ಪ ದಿನಗಳ ತರುವಾಯ ಮರಣ ಹೊಂದಿದನು. †

---

* ಆ ಪುಸ್ತಕವು Sutra of Forty-two Sections (Edkins—P. 88)

† Nanjio's Catalogue, Appendix.

ಈ ರೀತಿಯಲ್ಲಿ ಭಾರತದಿಂದ ಭಗವಾನ್ ಬುದ್ಧದೇವನ ಧರ್ಮದ ಪ್ರವಾಹವು ಆ ಬಹುದೂರದ ಚೀನದೇಶದಲ್ಲಿ ಹೋಗಿ ಹರಿಯಹತ್ತಿತು. ಆ ದೇಶದಲ್ಲಿ ಹೋದ ಬೌದ್ಧಧರ್ಮವು ಮಹಾಯಾನಮತದವರದು. ಯಾಕಂದರೆ ಆ ಬೌದ್ಧ ಧರ್ಮವು ಗಾಂಧಾರದೇಶದಿಂದ ಬಂದಿತ್ತು. ಅದು ಕನಿಷ್ಕನ ಆಧೀನದಲ್ಲಿ ಇತ್ತು. ಮತ್ತು ಅಲ್ಲಿ ಮಹಾಯಾನ ಮತದ ಪ್ರಾಧಾನ್ಯವು ಪ್ರಚಲಿತವಿತ್ತು.

ಆನಂದದ ವಿಷಯವೇನಂದರೆ–ಆ ಸಮಯದಲ್ಲಿ ಕಾಸ್ಯಪ ಮಾತಂಗನನ್ನು ಬಿಟ್ಟಿರೂ ಭಾರತದಲ್ಲಿ ಇಂತಹ ಹಲವು ಜನರಿದ್ದರು. ಇವರು ಸ್ವೇಚ್ಛೆಯಿಂದ ತಮ್ಮ ದೇಶವನ್ನು ಬಿಟ್ಟು ಆ ಅಪರಿಚಿತ ದೇಶದಲ್ಲಿ ಹೋಗಲು ಒಡಂಬಟ್ಟರು. ಅಂತೇ ಕಾಶ್ಯಪ ಮಾತಂಗನ ಕೆಲಕಾಲದ ನಂತರ ಮತ್ತೊಬ್ಬ ಭಾರತವಾಸಿ ಭಿಕ್ಷುವು ಚೀನಕ್ಕೆ ಹೋದನು. ಅವನ ಹೆಸರು ಧರ್ಮರಕ್ಷನೆಂದಿತ್ತು. ಆ ಶ್ರಮಣನ ಮನೆಯು ಮಧ್ಯ ಭಾರತದಲ್ಲಿ ಇತ್ತು. ಅವನು ವಿನಯಪೀಠವನ್ನು ಚನ್ನಾಗಿ ಬಲ್ಲವನಾಗಿದ್ದನು. ಚೀನದೇಶದಿಂದ ಅವನಿಗೆ ಆಮಂತ್ರಣ ಬಂದಾಗ್ಗೆ ಅವನ ರಾಜನಿಗೆ ಅವನನ್ನು ಬಿಡಲಿಕ್ಕೆ ಒಪ್ಪಿಗೆ ಇದ್ದಿಲ್ಲ. ಆದರೆ ಅವನಿಗೆ ಹೋಗುವ ಇಚ್ಛೆಯು ಬಹಳವಿದ್ದುದರಿಂದ, ರಾಜನಿಗೆ ಹೇಳದೆ ಗುಪ್ತರೀತಿಯಿಂದ ಚೀನಕ್ಕೆ ಹೋದನು–ಕಾಶ್ಯಪನು ಹೋದ ಕೆಲಕಾಲದ ಮೇಲೆ ಚೀನದಲ್ಲಿ ಹೋದ ಅವನಿಗೆ ಕಾಶ್ಯಪನೊಡನೆ ಬಂಧುತ್ವ ಉಂಟಾಯಿತು. ಅಂತೇ ಚೀನದಲ್ಲಿ ಬೌದ್ಧ ಧರ್ಮದ ಪ್ರಸಾರಕ್ಕೋಸುಗ ಅವರಿಬ್ಬರು ಕೂಡಿ ಒಂದು ಬೌದ್ಧ ಸೂತ್ರದ ಅನುವಾದ ಮಾಡಿದರು. ಅದು ಬುದ್ಧನಿಂದ ಹೇಳಲ್ಪಟ್ಟ ಒಂದು ಸೂತ್ರವು. ಚೀನಾತ್ರಿ ಪಿಟಕದ ೬೭೮ ನಂಬರ ಪುಸ್ತಕವು (See Nanjis's Catalogue)

ಕಾಶ್ಯಪಮಾತಂಗನ ಮೃತ್ಯುವಿನ ತರುವಾಯದಲ್ಲಿಯೂ ಧರ್ಮರಕ್ಷನು ತನ್ನ ಕೆಲಸವನ್ನು ಸಡಿಲು ಬಿಡಲಿಲ್ಲ. ಅವನ ತರುವಾಯ ಅವನು ಮತ್ತೆ (೬೮–೭೦ ವರ್ಷಗಳಲ್ಲಿ) ಐದು ಬೌದ್ಧ ಗ್ರಂಥಗಳನ್ನು ಚೀನಾಭಾಷೆಯಲ್ಲಿ ಅನುವಾದ ಮಾಡಿದನು. ಯಾಕಂದರೆ ಯಾವದನ್ನು ಓದುವದರಿಂದ ಚೀನದ ಧರ್ಮಪಿಪಾಸುಗಳು ಶಾಂತಿಯನ್ನು ಹೊಂದುವರೋ ಅಂತಹ ಬೌದ್ಧ ಗ್ರಂಥಗಳು ಚೀನಾಭಾಷೆಯಲ್ಲಿ ಇದ್ದಿಲ್ಲ. ಅಂತೇ ಬೌದ್ಧಧರ್ಮದ ಪ್ರಸಾರದ ಪ್ರಥಮ ಯುಗದಲ್ಲಿ ಭಾರತೀಯ ಶ್ರಮಣರೇ ಅನುವಾದ ಕಾರ್ಯಕ್ಕೆ ಕೈಗೊಡಬೇಕಾಯಿತು, ಅನಂತರ ಅವರು ಚೀನಾಶ್ರಮಣರ ಸಹಾಯವನ್ನು ಹೊಂದಿದರು. ಅವನು, (೧) ಬುದ್ಧ ಚರಿತ ಸೂತ್ರ, (೨) ದಶಭೂಮಿ ಕ್ಲೇಶಛೇದಿಕ ಸೂತ್ರ, (೩) ಧರ್ಮ ಸಮುದ್ರ ಕೋಷ ಸೂತ್ರ (೪) ಜಾತಕ (೫) ಶೀಲ ಸಂಬಂಧದ ಸೂತ್ರ ಇವನ್ನು ಅನುವಾದ ಮಾಡಿದ್ದನು. ಕಾಶ್ಯಪಮಾತಂಗನು ಮತ್ತು ಧರ್ಮರಕ್ಷಕನು ಸಂಭವತಃ ಒಂದೇ ಮಠದಲ್ಲಿ ವಾಸಮಾಡುತ್ತಿದ್ದರು. Loyan ಇದರ ಅದೇ ಮಠದಲ್ಲಿ ಧರ್ಮರಕ್ಷಕನು ೭೦ ವರ್ಷ ವಯಸ್ಸಿನಲ್ಲಿ ಮೃತ ಪಟ್ಟನು.

(ಅಪೂರ್ಣ)

ತಿಲಶರ್ಕರತ್ರಯಾರ್ಪಣವು

[illegible]

ಲೇಖಕ:— ನಾ. ಗೋ. ದೇಸಾಯಿ, ಪೆ. ಮಾ. ಮುತ್ತಿಗಿ ತಾ॥ ಕಲಘಟಗಿ.

(ವಿಕಾರಿ ಸಂವತ್ಸರ ಪುಷ್ಯ ವದಿ ೬.)

ಅಯ್ಯಾ, ಮಹನೀಯರಾದ ಶಾಲಾಪತ್ರಿಕಾಕರ್ತರಿರಾ,

ಈ ಕೆಳಗಿನ ಪದ್ಯರೂಪೀ **ತಿಲಶರ್ಕರೆ**ಯನ್ನು ಸ್ವೀಕರಿಸಿ, ಮಿತ್ರವೃಂದಕೆಲ್ಲ

ಕೊಡುವದಕ್ಕಾಗಿ ತಮ್ಮ ಮಾಸಪತ್ರಿಕೆಗೆ ಸಮರ್ಪಿಸಿದ್ದೇನೆ.

ಭಾವಿನಿ॥ ದಕ್ಷಿಣಾಯನ ಕಳೆದುದೀಗ ಪ್ರ ।
ದಕ್ಷಿಣಾಕಾರ್ಯದಲಿ ದಿನಪನು ।
ದಕ್ಷನಾಗಿಹನೆಂಬ ನೇಮದ ತನ್ನ ಕಾರ್ಯವನು ॥
ಈಕ್ಷಣದಿ ಸಾಗಿಸಿದನೆಂಬುವ ।
ಸಾಕ್ಷಿಯೋಲ್ ಬರೆ ಮಕರರಾಸಿಗೆ ।
ಈ ಕ್ಷಿತಿಯ ಜನ ಪುಣ್ಯಕಾಲವು ಎನುತ ಭಾವಿಪುದು ॥ ೧ ॥

ಉತ್ಪಲ॥ ಬಂದಿಹುದುತ್ತರಾಯಣದ ಪರ್ವಣಿಕಾಲವು ಸರ್ವ ಮಂದಿಗೆ ।
ಇಂದಿನ ಕಾಲದಲ್ಲಿ " **ತಿಲಶರ್ಕರೆ**" ಕೂಡಿಸುತೊಬ್ಬರೊಬ್ಬರುಂ ॥
ಚಂದದಿ ನೀಡುವಂದದಲಿ ಬಂದಿರುವೆನು ನಾಂ **ಶಾಲಪತ್ರಿಕಾ** ।
ತಂದಿಹ **ಎಳ್ಳು-ಬೆಲ್ಲವನು** ಭುಂಜಿಸಿ ನೀಂ ಸಖವೃಂದಕೀವುದೆ ॥ ೨ ॥

ಕಂದ॥ **ಸುನಯದಿಂ ಬೆಲ್ಲದಲ್ಲಿಯು** .
ಜನಿತಾ ಮಧು ವಿಷವ ನೂಕಬೇಕೆಂದೆಳ್ಳು ॥
ನೆನಗೊಳ್ಳೀ ಮಾತೇ ಬೀ ।
ಕ್ಕೆನುತೆರಡಂ ಬೆರಸಿ ಕೊಡುವೆಯೆಳ್ಳುಂ ಬೆಲ್ಲಂ ॥ ೩ ॥

ಸೀತಾಸ್ವಯಂವರ

ಲೇಖಕ:— ಸಿ. ಬಾ. ಕಾಡಣ್ಣವರ, ಕಲಕಟ್ಟೆ.

ಭಾ॥ ಷ॥ ಜನಕರಾಜನು ತನ್ನ ಪುತ್ರಿಯ ।
ಮನದ ಬಯಕೆಯ ಗೃಹಿಸಿಕೊಂಡು ।
ಮನದ ಬಯಕೆಯಂತೆ "**ಶಿವಧನುಸ್ಸನ್ನು**" ತರಿಸಿದನು ॥
ಧನಸು ತಾಗಿಸುವಂಥ ವರನಂ ।
ಘನತರೋತ್ಸವದಿಂ ವರಿಸುವೆ ।
ಧನಸು ತೂಗಿಸುವಂಥ ವೀರರಿಗಿಂತು ಸಾರಿದಳು ॥ ೧ ॥

ಧನಸು ತೂಗಿಸುವಂಥ ಯೋಧರು ।
ಜನಕರಾಜನ ಸಭೆಯ ಸ್ಥಳಕೆ ।
ಘನತರೋತ್ಸವದಿಂದ ಬಂದುಪವಿಸಿದರೊಲವಿನಲಿ ॥
ಜನಪತಿಯ ರಘುವಂಶ ಪಾಲಕ ।
ಜನರನೊಡಗೊಂಡೀ ಸ್ಥಾನಕೆ ।
ಘನತರೈಶ್ವರ್ಯದಲಿ ಸೇರಿಪನಾ ಸಭೆಯನ್ನು ॥ ೨ ॥

ಬಾರಿಬಾರಿಗೆ ವೀರ ನೃಪರು ।
ಜೋರಿನಿಂದಲಿ ಮಣಿಸ ಪೋಗಲು ।
ಆರಿಗಾಗದೆ ಲಜ್ಜೆಯಿಂ ತಿರುಗಿದರು ಸ್ಥಳಗಳಿಗೆ ॥
ವೀರ ದಶರಥತನಯನತಿಗಂ- ।
ಧೀರತನದಿಂ ಬಂದು ಧನುಸನು ।
ಧೀರತನದಿಂ ತಾಗಿಸಿದನಂಬಿನಲಿ ಭಂಗಿಸಿದ ॥ ೩ ॥

ಧನ್ಯ ಧನ್ಯನು ವೀರ ರಾಮನು ।
ಧನ್ಯ ಧನ್ಯನು ತ್ರೀಜಗದೊಳು ।
ಧನ್ಯ ಮಾನ್ಯನೆಂದು ಸಾರಿದರೆಲ್ಲ ಪಂಡಿತರು ॥
ಅನ್ಯಗಂ ಪ್ರಿಯ ಜನಕಸುತೆಯು ।
ತನ್ನ ಕರದೊಳಿರುವ ಮಾಲೆಯ ।
ನುನ್ನತನುರಾಗದಲಿ ನಿಜವರನೆಂದು ಹಾಕಿದಳು ॥ ೪ ॥

ಪ್ರೇಮದಿಂ ಭೂಮಿಜಯೆಯು ।
ರಾಮಚಂದ್ರನನ್ನು ಬೆಂಬಿಸಿ ।
ಸೋಮನಂತೆ ಕೀರ್ತಿಯಂ ಪೊಂದಿದಳು ಜಗದೊಳಗೆ ॥

ಇತಿಹಾಸ-ಭೂಗೋಲದ ಟಿಪ್ಪಣಿ

ಲೇಖಕರು:— ಲ. ಹ. ಜಗಲಾಟ ಶಾ. ವಸ್ತಾ. ಖಾನಾಪೂರ, ಗುಂಗಾಪೂರ.

ನಮ್ಮ ಈ ಸೃಷ್ಟಿಯು ದಿನದಿನಕ್ಕೆ ಕ್ರಮಕ್ರಮವಾಗಿ ಹೊಸ ಹುರುಪನ್ನು ಹೊಂದುತ್ತಿರುವದು. ಆಗ ಜಲವಿದ್ದಲ್ಲಿ ಈಗ ನೆಲವಿರುವದು. ಈಗ ನೆಲವಿದ್ದಲ್ಲಿ ಮುಂದೆ ಪರ್ವತವು ತಲೆಯೆತ್ತಿಕೊಂಡು ನಿಲ್ಲಬಹುದು. ಕಾರಣ ಸೃಷ್ಟಿಯು ಸತತವಾಗಿ ಪ್ರಾಕೃತಿಕ ಬದಲಾವಣೆಯನ್ನು ಹೊಂದುತ್ತಿರುವದು.

ಪೃಥ್ವಿಯು ಪ್ರಾಚೀನಕಾಲದಲ್ಲಿ ಸಪ್ತದ್ವೀಪಗಳುಳ್ಳದ್ದು ಆಗಿತ್ತೆಂತಲೂ, ಅವುಗಳಲ್ಲಿ ನವಖಾಂಡ, ನವವರ್ಷಗಳು ಉಪಭಾಗಗಳಾಗಿದ್ದವೆಂತಲೂ, ಆಖ್ಯಾಯಿಕೆಯದೆ. ಇವೆಲ್ಲವುಗಳಿಗೆ ಈಗ ನೂತನವಾದ ಹೆಸರುಗಳು ಪ್ರಾಪ್ತವಾಗಿವೆ. ಇಷ್ಟೇಅಲ್ಲ. ಪ್ರಾಚೀನ ಕಾಲದ ದೇಶ, ಪರ್ವತ, ಪತ್ತನಗಳ ಹೆಸರುಗಳು ಸಹ ಈಗ ರೂಪಾಂತರವನ್ನು ಹೊಂದಿರುವವು. ಈ ಬಗ್ಗೆ ಕೆಲವು ಟಿಪ್ಪಣಿಗಳನ್ನು ವಾಚಕವೃಂದಕ್ಕೆಕೊಟ್ಟು ಪ್ರಾಚೀನ ಅರ್ವಾಚೀನ ಭೂಗೋಲ ಇತಿಹಾಸ ಜ್ಞಾನವನ್ನು ಕೆಲಮಟ್ಟಿಗೆ ಮಾಡಿಕೊಡುತ್ತೇನೆ.

ಜಂಬೂಪ್ಲಕ್ಷಕುಶಕ್ರೌಂಚ ಶಾಕ ಶಾಲ್ಮಲಿ ನಾಮಕಹಿಃ ।
ಪುಷ್ಕರಶ್ಚೇತ್ಯಮೀಲೋಕೇ ಸಪ್ತದ್ವೀಪಃಪ್ರಕೀರ್ತಿತಃ ।

ಈ ಏಳು ದ್ವೀಪಗಳಾಗಿ ಪ್ರಾಚೀನರಿಂದ ವಿಭಾಗಿಸಲ್ಪಟ್ಟಿರುವದು.

	ಪ್ರಾಚೀನಹೆಸರು.	ಅರ್ವಾಚೀನಹೆಸರು.
(೧)	ಜಂಬೂದ್ವೀಪ	ಏಶಿಯಾಖಂಡ
(೨)	ಕ್ರೌಂಚದ್ವೀಪ	ಆಫ್ರಿಕಾಖಂಡ
(೩)	ಪುಷ್ಕರದ್ವೀಪ	ಉತ್ತರ ಅಮೇರಿಕಾ
(೪)	ಪ್ಲಕ್ಷದ್ವೀಪ	ದಕ್ಷಿಣಅಮೇರಿಕಾ
(೫)	ಶಾಕದ್ವೀಪ	ಯುರೋಪಖಂಡ
(೬)	ಶಾಲ್ಮಲೀದ್ವೀಪ	ಆಸ್ಟ್ರೇಲಿಯಾ
(೭)	ಕುಶದ್ವೀಪ	ಓಶಿಯಾನಿಯಾ

ಪುನಃ ಇವುಗಳಲ್ಲಿ ಭರತಖಂಡ, ಚರೂಖಂಡ, ಇಂದ್ರುಖಂಡ, ನಾಗಖಂಡ, ಗಭಸ್ಥಿಖಂಡ, ತಾಮ್ರುಖಂಡ, ಸೌಖ್ಯಖಂಡ, ಗಂಧರ್ವಖಂಡ, ವಾರುಣಖಂಡವೆಂದೂ ಭಾರತವರ್ಷ, ಹರಿವರ್ಷ, ಕಿಂಪುರುಷವರ್ಷ, ವಿಲಾವೃತವರ್ಷ, ಹೈರಣ್ಯಕವರ್ಷ, ರಮ್ಯಕವರ್ಷ, ಕುರುವರ್ಷ, ಕೇತುಮೂಲವವರ್ಷ, ಭದ್ರಾಶ್ವವರ್ಷ ಎಂಬ ಉಪವಿಭಾಗಗಳಿರುವವು.

ದೇಶ ಪಟ್ಟಣ ಮೊದಲಾದವುಗಳು.

	ಪ್ರಾಚೀನಹೆಸರು.	ಅರ್ವಾಚೀನಹೆಸರು.
(೧)	ಮಕ್ಷಿಕ	ಮೆಕ್ಸಿಕೋ
(೨)	ಸೌವೀರ	ಸೈಬೀರಿಯಾ
(೩)	ಸ್ಯಂದನವ್ಯ	ಸ್ಕ್ಯಾಂಡಿನೇವಿಯ
(೪)	ಕಪಿಶ	ಕಾಬೂಲ
(೫)	ತಾಮ್ರಲಿಪ್ತಿ	ಮಿಡ್ನಾಪೂರ
(೬)	ಕರ್ಣಸುವರ್ಣ	ಮುರ್ಶದಾಬಾದ
(೭)	ಗಾಂಧಾರ	ಆಫಗಾಣಿಸ್ಥಾನ
(೮)	ತುರುಷ್ಕಸ್ಥಾನ	ತುರ್ಕಸ್ಥಾನ
(೯)	ಮೂಲಸ್ಥಾನಪುರ	ಮುಲ್ತಾನಪಟ್ಟಣ
(೧೦)	ಸ್ತುಪ್ನ	ಹರಿದ್ವಾರ
(೧೧)	ಕಾಮರೂಪ	ಆಸಾಮ
(೧೨)	ಅಂಗವಂಗ	ಬಂಗಾಲ ಇಲಾಖೆ
(೧೩)	ಮಹಿಷರಾಜ್ಯ	ಮೈಸೂರ
(೧೪)	ಚೋಳರಾಜ್ಯ	ಮದ್ರಾಸ ಇಲಾಖೆಯ ಪೂರ್ವ ಉತ್ತರ ಹಾಗೂ ಪಶ್ಚಿಮದ ಕೆಲವುಭಾಗ
(೧೫)	ವನವಾಸ	ರಾಜಸ್ಥಾನ
(೧೬)	ಅಪರಾಂತಕ	ಪಶ್ಚಿಮ ಪಂಜಾಬ ದೇಶ

(೧೬)	ಯವನ ಲೋಕ	ಬಾಕ್ಟ್ರಿಯಾ ಹಾಗೂ ಗ್ರೀಸ
(೧೮)	ಸೌರಾಷ್ಟ್ರ	ಗುಜರಾತ (ಕಾಠೇವಾಡ ಸಹಿತ)
(೧೯)	ಪಾಂಡ್ಯ	ಮದ್ರಾಸ ಇಲಾಖೆಯೊಳಗಿನ ದಕ್ಷಿಣ ಭಾಗ ಹಾಗೂ ಪಶ್ಚಿಮದ ಕೆಲವು ಭಾಗ
(೨೦)	ಚೇರರಾಜ್ಯ	ತ್ರಾವಣಕೋರ, ಮಲಬಾರ ಹಾಗೂ ಕೊಡಗು
(೨೧)	ಕೊಂಗ ಹಾಗೂ ಗಂಗರಾಜ್ಯ	ಸದರಿ
(೨೨)	ಯವ	ಜಾವಾದ್ವೀಪ

ಕುಲಾಚಲಗಳು ಹಾಗೂ ಉಳಿದ ಪರ್ವತಗಳು

	ಪ್ರಾಚೀನ ಹೆಸರು.	ಅರ್ವಾಚೀನ ಹೆಸರು.
(೧)	ಮಹೇಂದ್ರ	ಪೂರ್ವಘಟ್ಟ
(೨)	ಮಲಯ	ಮಲಯ
(೩)	ಸಹ್ಯ	ಸಹ್ಯ
(೪)	ಶುಕ್ತಿಮಾನ	ಗಿರನಾರ ಪರ್ವತ
(೫)	ಋಕ್ಷವಾನ	ಅರವಲೀ ಗುಡ್ಡ
(೬)	ವಿಂಧ್ಯ	ವಿಂಧ್ಯ
(೭)	ಪಾರಿಯಾತ್ರ	ಸುಲ್ಮೈಮಾನ

ಹಿಮಾಲಯದ ಉತ್ತರಕ್ಕಿರುವವೆಂದು ಹೇಳಿರುವ ಹೇಮಕೂಟನಿಷಧ ಪರ್ವತಗಳು ಈಗಿನ ಕುವೆನ್‌ಲನ್ ಆಲತಾಯಿ ಪರ್ವತಗಳ ಪೂರ್ವ ಪಶ್ಚಿಮ ಶಾಖೆಗಳೆಂದು ಗೊತ್ತಾಗಿರುವದು.

ಪೃಥ್ವಿಯ ಮೇಲಿನ ಈಗಿರುವ ಎಷ್ಟೋ ರಾಷ್ಟ್ರಗಳಿಗೂ ನದಿ ಪರ್ವತ ಪತ್ತನಗಳಿಗೂ ಪ್ರಾಚೀನಕಾಲದಲ್ಲಿ ಇರುವ ಹೆಸರುಗಳು ಇನ್ನೂ ಗೊತ್ತಾಗಿಲ್ಲ. ಒಂದೇ ಒಂದಾದ ಹಿಂದುಸ್ಥಾನದಲ್ಲಿ ೧೫೬ ದೇಶಗಳಿದ್ದವು ಅವುಗಳಲ್ಲಿ ೫೦ ದೇಶಗಳು ದಕ್ಷಿಣ ಹಿಂದುಸ್ಥಾನದಲ್ಲಿ ಇದ್ದವು ಒಂದು ಇತಿಹಾಸವು ಹೇಳುವದು. ಇವೆಲ್ಲವುಗಳ ಪ್ರಾಚೀನ ಅರ್ವಾಚೀನ ಹೆಸರುಗಳನ್ನು ಭೂಗೋಲ ಇತಿಹಾಸ ಪಂಡಿತರು ಪ್ರಕಟಿಸಿ ಹೊಸ ಹಳೆಯ ಕಾಲಗಳ ದೇಶ ಪರಿಸ್ಥಿತಿ ಮುಂತಾದವುಗಳ ಜ್ಞಾನವನ್ನುಂಟಾಡಿಕೊಡುವದು ಅತ್ಯಗತ್ಯವಾವದ್ದು.

ತಾಳೀಕೋಟೆ ಶ್ರೀಶರಣರಿಂದ ನೀತಿಬೋಧಕ್ಕಾಗಿ ಹೇಳಲ್ಪಟ್ಟ ಕಥೆಗಳು

(೧) ಮನಸ್ಸೇ ತಾರಕ ! ಮನಸ್ಸೇ ಮಾರಕ !!

ಕಾಶೀಪಟ್ಟಣದಲ್ಲಿ ಇಬ್ಬರು ಗೃಹಸ್ಥರು ವಾಸಮಾಡಿಕೊಂಡಿದ್ದರು. ಇಬ್ಬರಿಗೂ ಬಹಳ ಗೆಳೆತನ. ಅವರಲ್ಲಿ ಒಬ್ಬನು ಬಹು ಕರ್ಮಶೀಲನಿದ್ದನು. ಬೆಳಗ್ಗೆ ಮುಂಜಾನೆ ಏಳುತ್ತಿದ್ದನು. ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ದೇವರ ಗುಡಿಗೆ ಹೋಗಿ, ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡುತ್ತಿದ್ದನು. ದೇವರ ಸೇವೆಯಲ್ಲಿ ಬಹಳ ವೇಳೆಯನ್ನು ಕಳೆಯುತ್ತಿದ್ದನು.

ಎರಡನೆ ಗೃಹಸ್ಥನು ವ್ಯಸನಿಯೂ ಪರದಾರಾಲಂಪಟನೂ ಇದ್ದನು ವೇಶ್ಯೆಯರ ಮನೆಯಲ್ಲಿ ಬಿದ್ದಿರುತ್ತಿದ್ದನು. ಅವರ ಗೂಡ ವಿಲಾಸಭೋಗವನಾಡಿ ವೇಳೆ ಕಳೆಯುತ್ತಿದ್ದನು.

ಮೊದಲನೆ ಗೃಹಸ್ಥನು ಸದಾ ದೇವಾಲಯದಲ್ಲಿ ವೇಳೆ ಕಳೆದರೂ ಅವನ ಮನಸ್ಸು ಮಿತ್ರನ ಕಡೆ ಇತ್ತು. ನನ್ನ ಮಿತ್ರನಂತೆ ನಾನು ಭೋಗಿಯಾಗಲಿಲ್ಲವಲ್ಲವೆಂದು ಮನಸ್ಸಿನಲ್ಲಿ ಚಡಪಡಿಸುತಿದ್ದನು. ಇದೇ ವಿಚಾರದಲ್ಲಿ ಅವನ ಮನಸ್ಸು ಓಡಾಡುತ್ತಿರಲು ತನ್ನ ಸ್ಥಿತಿಯ ದೆಶೆಯಿಂದ ಬಹಳೇ ಚಡಪಡಿಸುತ್ತಿದ್ದನು.

ಎರಡನೆಯವನ ಸ್ಥಿತಿಯು ಇದಕ್ಕೆ ವಿರುದ್ಧವಾಗಿತ್ತು. ತನ್ನ ಹೀನ ಆಚರಣೆಯ ದೆಶೆಯಿಂದ ಬಹಳೇ ದುಃಖಪಡುತ್ತಿದ್ದನು. ನನ್ನ ಮಿತ್ರನಂತೆ ನನಗೆ ಸದಾಚರಣೆಗಳು ಆಗಲಿಲ್ಲವಲ್ಲವೆಂದು ಮನಸ್ಸಿನಲ್ಲಿ ಚಡಪಡಿಸುವನು.

ಹೀಗೆ ಎಷ್ಟೋದಿವಸಗಳು ಸಂದವು. ಮುಂದೆ ಅವರಿಬ್ಬರು ಮರಣಹೊಂದಿದರು. ಮೊದಲನೆಯ ಗೃಹಸ್ಥನಿಗೆ ನರಕವಾಸವು ಪ್ರಾಪ್ತವಾಯಿತು. ಎರಡನೆಯವನಿಗೆ ಸ್ವರ್ಗವು ಸಿಕ್ಕಿತು.

ನಾರದರು ಇವರಿಬ್ಬರ ಅಂತ್ಯದ ಪರಿಣಾಮವನ್ನು ತಿಳಿದರು. ಈಶ್ವರನ ಸನ್ನಿಧಿಯನ್ನು ಸಾರ್ದು ಹೇ ದೇವಾಶಂಕರಾ ಯಾವನು ನಿನ್ನ ಸೇವೆಯಲ್ಲಿ ಆಯುಷ್ಯ ಕಳೆದನೋ ಅವನಿಗೆ ನರಕವಾಸಭೋಗಿಸಲಿಕ್ಕೆ ಹಚ್ಚಿದೆ. ಯಾವನು ಕ್ಷಣವಾದರೂ ನಿನ್ನ ನೆನಪುಮಾಡಿರುವದಿಲ್ಲವೋ ಅವನಿಗೆ ಸ್ವರ್ಗವು ಲಭಿಸಬೇಕೇ ! ನೀನು ಸರ್ವಸಮರ್ಥ ಇದ್ದು, ಹೀಗೆ ನೋಡಿ ನೋಡಿ ಅನ್ಯಾಯಮಾಡಬೇಕೇ ! ಹೀಗಾದರೆ ಜಗತ್ತಿನಲ್ಲಿ ನಿನ್ನ ಸೇವೆಯನ್ನಾದರೂ ಯಾರು ಯಾಕೆ ಮಾಡಬೇಕು ಎಂದು ಕೇಳಿದನು.

ಈಶ್ವರನು ಈ ಶಬ್ದಗಳನ್ನು ಕೇಳಿ ನಗುತ್ತ ಅಂದದ್ದೇನೆಂದರೆ ಎರಡನೆ ಗೃಹಸ್ಥನು ಎಂದೂ ದೇವಾಲಯಕ್ಕೆ ಹೋಗದೆ ಇದ್ದರೂ ಅವನ ಮನಸ್ಸು ದೇವರ ಕಡೆಗೆ

ಇತ್ತು. ಆದ್ದರಿಂದ ಅವನಿಗೆ ಸ್ವರ್ಗವನ್ನು ಕೊಟ್ಟೆ! ಮೊದಲನೆಯ ಗೃಹಸ್ಥನು ಸದಾ ದೇವಾಲಯದಲ್ಲಿಯೇ ಇದ್ದರೂ ಅವನ ಮನಸ್ಸು ಸ್ಥಿರವಿದ್ದಿಲ್ಲವಾದ್ದರಿಂದ ವಿಷಯದ ಕಡೆಗೇ ಮನಸ್ಸು ಇತ್ತು. ದೇವರಕಡೆ ಇದ್ದಿದ್ದಿಲ್ಲ. ಆದ್ದರಿಂದ ಅವನ ಪಾಲಿಗೆ ನರಕವು ಪ್ರಾಪ್ತವಾಯಿತು.

ಸಾರಾಂಶ:—ಮರಣಾನಂತರ ಪ್ರಾಪ್ತವಾಗತಕ್ಕ ಜಲೋ ಕೆಟ್ಟ ಅವಸ್ಥೆಗಳು ಮುಖ್ಯವಾಗಿ ಮನಸ್ಸಿನ ಶುದ್ಧತೆಯ ಮೇಲೆ ಅವಲಂಬಿಸಿವೆ. ದೇಹದಿಂದ ಎಷ್ಟು ಭಕ್ತಿಯಿಂದ ಕರ್ಮಗಳನ್ನು ಮಾಡಿದರೂ ಮನಸ್ಸೊಂದಿಲ್ಲದಿದ್ದರೆ ಮಾಡಿದ್ದೆಲ್ಲ ವ್ಯರ್ಥವು. ಬಾಹ್ಯದಲ್ಲಿ ದೇವರಲ್ಲಿ ಭಕ್ತಿ ತೋರಿಸದಿದ್ದರೂ ಮನಸಿನಲ್ಲಿ ದೇವರ ಚಿಂತನೆಮಾಡುವ ಮನುಷ್ಯನಿಗೆ ದೇವರು ಲಭಿಸುವನು. ಆದ್ದರಿಂದ ಮನುಷ್ಯನು ಸರ್ವ ಕರ್ಮಗಳನ್ನೂ ಮಾಡಿದರೂ ಅದರಲ್ಲಿಯೇ ಮಗ್ನನಾಗದೆ ಮನಸ್ಸನ್ನು ದೇವರ ಚರಣದಲ್ಲಿಯೇ ಇರಿಸಬೇಕು. ಅಂದರೇನೇ

ಈಶ್ವರನ ಕೃಪೆಯಾಗುವದು.

ಕಥೆ (೨)

ದೇವರು ಇಟ್ಟ ಸ್ಥಿತಿಯೇ ಸರಿಯಾದದ್ದಿರುವದು.

ಹಿಂದಕ್ಕೆ ಕರಿಕಾಲ ಚೋಳರಾಯನ ಕಾಲದಲ್ಲಿ ಈ ಮಹಾರಾಜನ ಪುಣ್ಯಪ್ರಭಾವದಿಂದ ಭಂಗಾರದ ಮಳೆಯು ಸುರಿಯಿತು. ಎಲ್ಲಿ ನೋಡಿದಲ್ಲಿ ಭಂಗಾರವು. ಈ ಭಂಗಾರದ ಮಳೆಯ ಹೊಡತದಿಂದ ರಾಜವಾಡೆಯ ಒಂದು ಮಗ್ಗುಲಿನ ಗೋಡೆಯು ಬಿದ್ದುಬಿಟ್ಟಿತು. ಗೋಡೆಯನ್ನು ಕಟ್ಟಲಿಕ್ಕೆಂದು ಆಳುಗಳನ್ನು ಕರೆಯಲು ರಾಜದೂತರು ಹೋಗಲು, ಎಲ್ಲರಲ್ಲಿಯೂ ಎಗ್ಗಳಬಂಗಾರವು ಕಣ್ಣೆದುರಿಗೆ ಕಾಣುತಿದ್ದದರಿಂದ ಯಾರೂ ಕೆಲಸಕ್ಕೆ ಬರಲಿಲ್ಲ.

ಕರಿಕಾಲ ಚೋಳರಾಯನು ಇದನ್ನು ತಿಳಿದು ದೇಶದ ಸುಸ್ಥಿತಿಯ ದೆಶೆಯಿಂದ "ಮೇಲೆಬಿದ್ದ ಬಂಗಾರವು ಇದ್ದಲಿಯಾಗಲಿ ಒಳಗಿದ್ದ (ಭೂಮಿಯ ಒಳಗಿದ) ಬಂಗಾರವು ಸ್ಥಿರವಾಗಿದ್ದುಕೊಳ್ಳಲಿ!" ಎಂದು ಒಡನಾಡಿದನು. ಈ ಮಹಾತ್ಮನ ಶಾಪವು ಗ್ರಹಶಕ್ತಿಯಿಂದೆ ಹಾಗೆಯೇ ಆಯಿತು.

ಮಜೂರದಾರರು ನಾಳೆಯ ತಮ್ಮ ಹೊಟ್ಟೆಯ ಪಾಡೇನೆಂದು ಚಿಂತಿಸುತ್ತ ಅರಸನ ಹತ್ತರ ಅಂಗಲಾಚಿಬಿದ್ದು ಗೋಡೆಕಟ್ಟುವ ಕಾಮಗಾರಿಯನ್ನು ಹಿಡಿದರು.

ಸಾರಾಂಶ:—ಸಿರಿಬಂದ ಕಾಲಕ್ಕೆ ಹೆಮ್ಮೆ ಪಡಬಾರದು. ಪೂರ್ಣ ಎಚ್ಚರಿಕೆಯಿಂದೆ ನಡೆಯಬೇಕು. ದೇವರು ಇಟ್ಟಸ್ಥಿತಿ!

ದೇವರ ನಿಯಮವು ಸರಿಯಾದದ್ದಿರುವದು. ಎಂದು ಭಾವಿಸಬೇಕು.

ಪ್ರಕಟನೆ

ಮೆ. ಎ. ಇ. ಸಾ॥ ಬಾ॥ ಸ. ಡಿ. ಸಾ॥ ರವರ ಪತ್ರ ನಂ 47/P, 123
29-12-2

ಪ್ರಕಾರ ಕೆಳಗೆ ಬರೆದ ಪುಸ್ತಕವು ಸೆಕಂಡರಿ ಸ್ಕೂಲದ ಉಪಯೋಗಕ್ಕಾಗಿ
ಮೆ. ಡಿರೆಕ್ಟರ ದೊರೆಗಳಿಂದ ಮಂಜೂರವಾಡಲ್ಪಟ್ಟಿತು.

ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಕಿಮ್ಮತ್ತು.	ಯಾಚಕ್ಕೋಸ್ಕರ ಮುಂಜೂರ.
ವ್ಯಾಪಾರವೆಂದರೇನು	ಜಿ. ಆರ್. ಜೋಸ್ಯರ	ಜೋಸ್ಯರ ಅ್ಯಂಡ ಕಂ। ಮೈಸೂರ	೬-೧೨-೦	ಸ್ಕಾಲರರ ಲಾಯ ಬ್ರರಿಗೋಸ್ಕರ

ಕೆ. ಡಿ. ಥಾಸ್ ಡಿ. ಅಭ್ಯಂಕರ
ಫಾರ್ ಡಿರೆಕ್ಟರ ಪಬ್ಲಿಕ್ ಇನ್‌ಸ್ಟ್ರಕ್ಷನ

ಹೆಣ್ಣುಮಕ್ಕಳ ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆಯು
ದಕ್ಷಿಣ ಭಾಗ.

೧೯೨೯ ರಲ್ಲಾಗುವ ಹೆಣ್ಣುಮಕ್ಕಳ ವ್ಹರ್ನಾಕ್ಯುಲರ ಫಾಯನಲ್ ಪರೀ
ಗಾಗಿ ಡಿಪಾರ್ಟಮೆಂಟದ ಒನೇ ಪುಸ್ತಕದ ಪಾಠಗಳು ನಿಯಮಿಸಲ್ಪಟ್ಟಿವೆ.

ಗದ್ಯ ಭಾಗ ೧— ೧–೨–೬–೮–೧೦–೧೧–೧೨–೧೩–೧೪–೧೫–೧೬–೧೯–೨೦
೨೨–೨೪–೨೫–೨೬–೨೯–೩೦–೩೧–೩೨–೪೨–೪೪
(ಒಟ್ಟು ೨೩ ಪಾಠಗಳು)
ಭಾಗ ೨— ೫೬–೫೭–೫೮–೫೯–೬೦ (ಒಟ್ಟು ೫ ಪಾಠಗಳು)
ಭಾಗ ೩— ೬೭–೬೮–೬೯–೭೦–೭೧ (ಒಟ್ಟು ೫ ಪಾಠಗಳು)
ಒಟ್ಟು ೩೩ ಪಾಠಗಳು

ಪದ್ಯ ,, ೪–೯–೧೬–೨೧–೨೮–೩೪ (ಅಂತು ೬ ಪಾಠಗಳು)

ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ರ
ಕಚೇರಿ ಧಾರವಾಡ.
ತಾ॥ ೭–೧–೨೮

ಜೆ. ಎಸ್. ಕಾದ್ರಿ
ಎಜ್ಯುಕೇಶನಲ್ ಇನಸ್ಪೆಕ್ಟರ ಎಸ್ ಡಿ

ಶಿವ್ಧ ನಾಳ ಹೂಂ, ಮೂಡಿ

ಶ್ರೀ. ಸಿ. ಸಿ. ಹುಲಕೋಟಿ,

ಬಿ. ಎ., ಎಲೆಲ್. ಬಿ.

ಪ್ರೆಸಿಡೆಂಟ, ಡಿಸ್ಟ್ರಿಕ್ಟ ಲೋಕಲ್‌ಬೋರ್ಡ,

ಧಾರವಾಡ.

ಶ್ರೀ. ಸಿ. ಕೆ. ಹೊಸಮನಿ,

ಬಿ. ಎ., ಎಲೆಲ್. ಬಿ.

ಚೇರಮನ್, ಡಿಸ್ಟ್ರಿಕ್ಟ ಸ್ಕೂಲ್

ಬೋರ್ಡ, ಧಾರವಾಡ.

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ
ಸ್ಕೂಲ್ ಬೋರ್ಡ ಪತ್ರಿಕೆ

ಸಂಪುಟ ೧ | ಎಪ್ರಿಲ ೧೯೨೮ | ಸಂಚಿಕೆ ೧

ಪ್ರಕಟನೆಯ ಉದ್ದೇಶ

ಮೊಂಟಿಗೂ ಚೇಮ್ಸಫರ್ಡ ಸುಧಾರಣೆಗಳು ರೂಢಿಯಲ್ಲಿ ಬಂದಂದಿನಿಂದ ಶಿಕ್ಷಣ ಖಾತೆಯು ಜನತೆಯ ಕಡೆಗೆ ಒಪ್ಪಿಸಲ್ಪಟ್ಟಿದೆ. ಅಂದರೆ ಸರಕಾರದವರು ಕಾಯದೆ ಕೌನ್ಸಿಲಿನ ಲೋಕನಿಯುಕ್ತ ಸಭಾಸದರಲ್ಲಿ ಒಬ್ಬರನ್ನು ಶಿಕ್ಷಣ ಮಂತ್ರಿಯನ್ನಾಗಿ ನೇಮಿಸಿ ಶಿಕ್ಷಣ ಖಾತೆಯನ್ನು ಆ ಮಂತ್ರಿಯ ಆಡಳತೆಯಲ್ಲಿ ಇಟ್ಟಿದ್ದಾರೆ. ನಾ. ಡಾ. ಪರಾಂಜಪೆಯವರು ನಮ್ಮ ಇಲಾಖೆಯ ಮೊದಲನೆಯ ಶಿಕ್ಷಣ ಮಂತ್ರಿಗಳು. ಇವರ ಕಾಲಕೀರ್ದಿಯಲ್ಲಿ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಅತ್ಯಂತ ಮಹತ್ವದ ಸುಧಾರಣೆಗಳು ಜರುಗಿದವು. ಇಲಾಖೆಯ ಪ್ರಾಥಮಿಕ ಶಿಕ್ಷಣದ ವಿಷಯವನ್ನು ಚನ್ನಾಗಿ ಪರಿಶೀಲಿಸುವದಕ್ಕೋಸ್ಕರ ಚಂದಾವರಕರ ಕಮೀಟಿಯು ೧೯೨೧ರಲ್ಲಿ ನೇಮಿಸಲ್ಪಟ್ಟಿತು. ಆ ಕಮೀಟಿಯವರು ಒತ್ತಾಯದ ಪ್ರಾಥಮಿಕ ಶಿಕ್ಷಣವು ಉಚಿತವಾಗಿ ಯಾವತ್ತು ಬಾಲಬಾಲಕಿಯರಿಗೆ ದೊರೆಯುವ ಬಗ್ಗೆ ತಮ್ಮ ವರದಿಯನ್ನು ಸಾದರ ಪಡಿಸಿದರು. ಆ ಮೇಲೆ ಕಾಯಿದೆ ಕೌನ್ಸಿಲಿನಲ್ಲಿ ಈ ವಿಷಯದ ಬಗ್ಗೆ ಚನ್ನಾಗಿ ವಿಮರ್ಶೆಯಾಗಿ ಪ್ರಾಥಮಿಕ ಶಿಕ್ಷಣ ಕಾನೂನು ೧೯೨೩ರಲ್ಲಿ ಪಾಸಾಗಿ ಪ್ರಾಥಮಿಕ ಶಿಕ್ಷಣವು ಸರಕಾರದ ಪ್ರತ್ಯಕ್ಷ ಆಡಳತೆಯಿಂದ ದೂರಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆ (ಡಿಸ್ಟ್ರಿಕ್ಟ ಲೋಕಲ್ ಬೋರ್ಡು ಮತ್ತು ಸಿಟಿ ಮುನ್ಸಿಪ್ಯಾಲಿಟಿ) ಗಳ ಆಡಳತೆಗೆ ಒಳಪಟ್ಟಿತು. ಇದೇ ಕಾಲಕ್ಕೆ ಕಾಯದೆ ಕೌನ್ಸಿಲಿನಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಹೊಸ ಕಾನೂನು ಪಾಸಾಯಿತು. ಅಂದಿನಿಂದ ಪ್ರಾಥಮಿಕ ಶಿಕ್ಷಣದ ಆಡಳತೆಗಾಗಿ ಪ್ರತಿಯೊಂದು ಜಿಲ್ಲೆಗೆ ಡಿಸ್ಟ್ರಿಕ್ಟ ಸ್ಕೂಲಬೋರ್ಡು ಎಂಬ ಹೊಸ ಸಭೆಯು ನಿರ್ಮಾಣವಾಯಿತು. ನಮ್ಮ ಜಿಲ್ಲಾ ಸಭೆಗೆ ಮು॥ ರಾ॥ ರಾ॥ ಚನ್ನಪ್ಪ ಹುಲಕೋಟಿ ಬಿ. ಎ. ಎಲೆಲ್. ಬಿ, ಇವರು ಮೊದಲನೆಯ ಲೋಕ

ನಿಯುಕ್ತ ಅಧ್ಯಕ್ಷರು ಮತ್ತು ಮ॥ ರಾ॥ ರಾ॥ ಶಿದ್ದಪ್ಪ ಹೊಸಮನಿ ಬಿ. ಎ. ಎಲೆಲ್. ಬಿ. ಇವರು ಮೊದಲನೆಯ ಸ್ಕೂಲಬೋರ್ಡು ಜೀರಮನ್ನರು ಆಗಿದ್ದಾರೆ. ಹೀಗೆ ಶಿಕ್ಷಣ ಖಾತೆಯು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರಭಾರಕ್ಕೆ ಒಳಪಟ್ಟಂದಿನಿಂದ ಶಿಕ್ಷಣ ಪ್ರಪಂಚದಲ್ಲಿ ಅಪೂರ್ವವಾದ ಉತ್ಸಾಹವು ಮತ್ತು ಚಟವಟಿಕೆಯು ಕಂಡು ಬರುತ್ತವೆ. ಅದರಲ್ಲಂತೂ ನಮ್ಮ ಸ್ಕೂಲಬೋರ್ಡಿನವರ ಉತ್ಸಾಹವು ಶ್ಲಾಘನೀಯವಾಗಿದೆ. ಅವರು ತಮ್ಮಿಂದ ಜನತೆಗೆ ನಿಜವಾದ ಕಲ್ಯಾಣವು ಬಹು ಪ್ರಮಾಣದಿಂದ ಆಗಬೇಕಾದರೆ ತಮ್ಮ ಕಾರಭಾರವು ನಿರಾತಂಕವಾಗಿ ತಮ್ಮ ಇಚ್ಛೆಯಂತೆ ಸಾಗುವದು ಅತ್ಯವಶ್ಯವೆಂದು ಬಗೆದು ಸರಕಾರೀ ಶಿಕ್ಷಣ ಖಾತೆಯ ಕಾಮದಾರರನ್ನು ನಿರಾಕರಿಸಿ ತಮ್ಮ ಸ್ವಂತ ಕಾಮದಾರರನ್ನೇ ನೇಮಿಸಿಕೊಂಡಿರುವರು. ಆದರೆ ಸ್ಕೂಲಬೋರ್ಡ ಅ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರನನ್ನು ನೇಮಿಸಿಕೊಳ್ಳುವದರ ವಿಷಯದಲ್ಲಿ ಅವರಿಗೂ ಸರಕಾರಕ್ಕೂ ಮತಭೇದ ಉಂಟಾಗಿರುವದು. ಆದರೂ ಜೀರಮನ್ನರಾದ ಮ॥ ರಾ॥ ರಾ॥ ಶಿದ್ದಪ್ಪ ಹೊಸಮನಿಯವರು ವ್ಹಾಯಿಸ-ಜೀರಮನ್ನರಾದ ಮ॥ ರಾ॥ ರಾ॥ ಗಿರಿಮಲ್ಲಪ್ಪ ನಲವಡಿ ಬಿ. ಎ. ಎಲೆಲ್. ಬಿ. ಇವರ ಮತ್ತು ಬೋರ್ಡಿನ ಉಳಿದ ಯಾವತ್ತು ಮೆಂಬರರ ಸಹಕಾರತೆಯಿಂದ ಅ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರನಿಲ್ಲದೆ ತೀರ ಹೊಸ ಬರಾದ ನೌಕರರಿಂದಲೇ ತಮ್ಮ ಕಾರಭಾರವನ್ನು ಅತಿತೃಪ್ತಕರವಾಗಿ ನಡೆಯಿಸಿರುವರು. ಇದಕ್ಕಾಗಿ ಅವರನ್ನೂ ಬೋರ್ಡಿನ ಉಳಿದ ಸಭಾಸದರನ್ನೂ ಬೋರ್ಡಿನ ಕಾಮದಾರರನ್ನೂ ಸಹ ಅಭಿನಂದಿಸದೆ ಇರಲಾರೆವು. ಬೋರ್ಡಿನವರ ಸ್ತುತ್ಯರ್ಹವಾದ ಪರಿಶ್ರಮವು ಜನ್ನಾಗಿ ಸಫಲವಾಗಬೇಕಾದರೆ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗ್ರತೆಯುಂಟಾಗುವದು ಅತ್ಯವಶ್ಯವು. ಲೋಕಜಾಗ್ರತೆಯಾಗದೆ ಶಿಕ್ಷಣ ಪ್ರಸಾರವು ಸಾರ್ವತ್ರಿಕವಾಗುವದು ಮಃಸಾಧ್ಯವು. ಕಾರಣ ಶಿಕ್ಷಣ ಕಾರಭಾರದೊಂದಿಗೆ ಲೋಕಜಾಗ್ರತೆಯ ಕಾರ್ಯವನ್ನು ಕೂಡ ಬೋರ್ಡಿನವರು ಕೈಕೊಳ್ಳಬೇಕಾಗಿದೆ.

ಬೋರ್ಡಿನ ಪರಿಶ್ರಮವು ಜನ್ನಾಗಿ ಸಫಲವಾಗಬೇಕಾದರೆ ಬೋರ್ಡಿನ ಒಂದು ಸ್ವತಂತ್ರ ಮುಖಪತ್ರವು ಅತ್ಯವಶ್ಯವು. ಇದುವರೆಗೆ ಬೋರ್ಡಿನವರು ಕನ್ನಡಿಗರ ಗಂಡುಮಕ್ಕಳ ಟ್ರೇನಿಂಗ ಸ್ಕೂಲಿನ ಹೆಡ್‌ಮಾಸ್ತರರು ಸ್ವತಃ ಪ್ರಕಟಿಸುತ್ತಿದ್ದ ಶಾಲಾಪತ್ರಿಕೆಯನ್ನು ವರ್ಗಣಿ ಮೂಲಕ ತಮ್ಮ ಎಲ್ಲ ಶಾಲೆಗಳಿಗೆ ತರಿಸಿಕೊಳ್ಳುತ್ತಿದ್ದರು. ಅದಕ್ಕೆ ಪ್ರತಿ ವರ್ಷ ೮೦ ರೂಪಾಯಿಗಳು ಸಲ್ಲುತ್ತಿದ್ದವು. ಅದು ಎಲ್ಲ ಕನ್ನಡ ಜಿಲ್ಲೆಗಳಿಗೆ ಸಾಮಾನ್ಯವಾಗಿದ್ದರಿಂದ ಅದರಲ್ಲಿ ನಮ್ಮ ಬೋರ್ಡಿಗೆ ಸಾಕಷ್ಟು ಸ್ಥಳವು ದೊರೆಯುವದು ಸಾಧ್ಯವಿದ್ದಿಲ್ಲ. ಅಲ್ಲದೆ ಅದರ ಸಂಪಾದಕರು ಬೋರ್ಡಿಗೆ ಸಂಬಂಧವಿಲ್ಲದ ಸರಕಾರೀ ನೌಕರರಿದ್ದರಿಂದ ಅದರಿಂದ ಬೋರ್ಡಿನ ಎಲ್ಲ ಮನೋರಥವು ಸಾಧಿಸುವದು ಸಾಧ್ಯವಿಲ್ಲೆಂಬದು

ಬೋರ್ಡಿನ ಕಳೆದ ಎರಡು ವರ್ಷದ ಅನುಭವದಿಂದ ಕಂಡು ಬಂದಿದೆ. ಆದ್ದರಿಂದ ಅದನ್ನು ನಿಲ್ಲಿಸಿ ಅದಕ್ಕೆ ಸಲ್ಲುತ್ತಿದ್ದ ಹಣದಲ್ಲಿಯೇ ಬೋರ್ಡಿನ ಸ್ವತಂತ್ರ ಮಾಸ ಪತ್ರಿಕೆಯನ್ನು ಹೊರಡಿಸುವದು ಸುಸಾಧ್ಯವಿದ್ದವರಿಂದಲೂ ಇದು ಅತ್ಯಂತ ಲಾಭ ದಾಯಕವಾದುದರಿಂದಲೂ ಬೋರ್ಡಿನವರು ಇದರ ಪ್ರಕಟನೆಯ ಮಹತ್ಕಾ ರ್ಯವನ್ನು ಕೈಕೊಂಡಿರುವರು. ಇದರಲ್ಲಿ ವಿವೇಚಿಸಲ್ಪಡುವ ವಿಷಯಗಳನ್ನು ಅವಲೋಕಿಸಿದರೆ ಇದರಿಂದ ಎಷ್ಟೊಂದು ಹಿತವಾಗುವದೆಂಬದು ಕಂಡುಬರುತ್ತದೆ.

ಇದರಲ್ಲಿ ವಿವೇಚಿಸಲ್ಪಡುವ ವಿಷಯಗಳು.

ಬೋರ್ಡಿನ ಕಾರಭಾರವು ಹೇಗೆ ಪ್ರಗತಿಪರವಾಗಿ ಸಾಗಿದೆ; ಅದರ ಪರಿಶ್ರ ಮದ ಫಲವು ಎಷ್ಟು ಲಭಿಸಿದೆ; ಸರಕಾರದ ಸಹಾಯವು ಎಷ್ಟರ ಮಟ್ಟಿಗೆ ದೊರೆ ತಿದೆ ಮತ್ತು ಎಷ್ಟು ದೊರೆಯಬೇಕಾಗಿದೆ; ಜನತೆಯ ಸಹಾನುಭೂತಿ ಸಹಾಯ ಗಳು ಎಷ್ಟು ಅವಶ್ಯವಾಗಿದೆ, ಶಾಲಾಧ್ಯಾಪಕರು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ; ಅವರ ಇರುವಿಕೆಯು ಹೇಗದೆ; ವಿದ್ಯಾರ್ಥಿಗಳ ಪಾಲಕರು ಯಾವ ರೀತಿಯಲ್ಲಿ ಎಚ್ಚರಪಡಬೇಕಾಗಿದೆ; ಪರಜಿಲ್ಲೆಗಳ ಬೋರ್ಡುಗಳು ಯಾವ ವಿಧದಲ್ಲಿ ಮುಂದರಿಯಹತ್ತಿವೆ; ಕಾಯದೆ ಕೌನ್ಸಿಲ್, ವಿದ್ಯಾಖಾತೆ, ವಿಶ್ವವಿದ್ಯಾ ಲಯ ಮೊದಲಾದ ಶಿಕ್ಷಣ ಸಂಸ್ಥೆಗಳ ಧೋರಣವು ಹೇಗೆ ಪರಿಣಮಿಸಹತ್ತಿದೆ; ಲೋಕಮತದ ಪ್ರವಾಹವು ಎತ್ತ ಸಾಗಿದೆ; ಸುಧಾರಿಸಿದ ಪರರಾಷ್ಟ್ರಗಳು ಶಿಕ್ಷಣದ ವಿಷಯದಲ್ಲಿ ಯಾವ ಎತ್ತುಗಡೆಗಳನ್ನು ಮಾಡಿರುವರು ಮತ್ತು ಎಷ್ಟರಮಟ್ಟಿಗೆ ತೇರ್ಗಡೆ ಹೊಂದಿರುವರು; ಶಿಕ್ಷಣ ಶಾಸ್ತ್ರಜ್ಞರು ಶಿಕ್ಷಣ ಪದ್ಧತಿಯಲ್ಲಿ ಯಾವ ಅನುಭವವನ್ನು ಪಡೆದಿರುವರ. ಮತ್ತು ಯಾವ ಹೊಸ ಪದ್ಧತಿಗಳನ್ನು ರೂಢಿಯ ಲ್ಲಿ ತರಲು ಪ್ರಯತ್ನಿಸುತ್ತಿರುವರು; ಶಿಕ್ಷಣದಲ್ಲಿ ಮುಂದುವರಿದ ದೇಶಗಳು ಹೇಗೆ ಅಭಿವೃದ್ಧಿಯನ್ನು ಪಡೆಯುತ್ತಲಿರುವವು ಮತ್ತು ಹಿಂದುಳಿದ ರಾಷ್ಟ್ರಗಳು ಹೇಗೆ ಹೀನಾವಸ್ಥೆಗೆ ಈಡಾಗಿರುವವು. ಪ್ರಪಂಚದಲ್ಲಿ ಶಾಸ್ತ್ರೀಯ, ಔದ್ಯೋಗಿಕ, ಕಲಾ ಕೌಶಲ್ಯ ಮುಂತಾದ ಪ್ರಚಲಿತ ವಿಷಯಗಳಲ್ಲಿ ಎಷ್ಟೊಂದು ಕ್ರಾಂತಿ ಮತ್ತು ಪ್ರಗತಿ ಉಂಟಾಗಿರುವವು. ಈ ಎಲ್ಲ ವಿಷಯಗಳು ಇದರಲ್ಲಿ ಸುಲಭ ಭಾಷೆಯಲ್ಲಿ ಚರ್ಚಿಸಲ್ಪಡುವವು. ಐತಿಹಾಸಿಕ, ವಾಙ್ಮಯಾತ್ಮಕ, ವಿನೋದಪರ, ನೀತಿಪರ, ಇತ್ಯಾದಿ ನಿಬಂಧನೆಗಳು ಬರೆಯಲ್ಪಡುವವು. ಚಿಕ್ಕಚಿಕ್ಕ ಕಥೆಗಳು ಇದರಲ್ಲಿ ಪ್ರಕಟಿಸಲ್ಪಡುವವು. ಇದರ ಮೇಲಿಂದ ಈ ಪತ್ರಿಕೆಯನ್ನು ಹೊರಡಿಸುವ ಉದ್ದೇ ಶವು ಎಷ್ಟು ವಿಸ್ತಾರವಾಗಿದೆ ಎಂಬದು ಗೋಚರವಾಗುವದು. ಇದು ಬೋರ್ಡಿ ಗಾಗಲಿ ಶಾಲಾಧ್ಯಾಪಕರಿಗಾಗಲಿ ವಿದ್ಯಾರ್ಥಿಗಳಪಾಲಕರಿಗಾಗಲಿ ಮತ್ತು ಬಾಲ ಶಿಕ್ಷಣ ವಿಷಯದಲ್ಲಿ ಮನಸ್ಸು ಹಾಕಿದ ವಿದ್ಯಾಭಿಮಾನಿಗಳಿಗಾಗಲಿ ಎಷ್ಟೊಂದು ಪ್ರಯೋಜನಕರವೆಂಬದು ಸ್ಪಷ್ಟ ತಿಳಿದುಬರುತ್ತದೆ.

ಇದು ಶಿಕ್ಷಣ ಪ್ರಸಾರದ ಜಯಭೇರಿ,
ಇದು ಜೋಡಿನ ಆಡಳತೆಯ ವಿಮಲ ದರ್ಪಣ,
ಇದು ಶಿಕ್ಷಣ ಶಾಸ್ತ್ರದ ಗೊತ್ತು,
ಇದು ಶಿಕ್ಷಣ ಕಲಾವಿಶಾರದ ಕೈಪಿಡಿ,
ಇದು ದೇಶೋನ್ನತಿಯ ರಾಜಮಾರ್ಗ,
ಇದು ವಾಙ್ಮಯದ ಭಾಂಡಾರ,
ಇದು ವಿದ್ಯೆಯ ನೆಲಗಟ್ಟು,
ಇದು ಕೋಮಲ ಬಾಲಕರ ವಿನೋದಾಗರ.

ಹೀಗಿರುವ ಈ ತಿಳಿಗನ್ನಡ ಮಾಸಪತ್ರಿಕೆಗೆ ಸಕಲ ವಿದ್ಯಾಭಿಮಾನಿಗಳು ಆದರದಿಂದ ಸ್ವಾಗತವನ್ನೀಯುವರೆಂದೂ ಶಿಕ್ಷಣ ಕಲಾವಿಶಾರದರು ತಮ್ಮ ಪರಮಾನುಭವದ ನೆರವನ್ನು ಲೇಖನಗಳ ಮೂಲಕ ಸದಾ ದಯಪಾಲಿಸುವರೆಂದೂ ಕೋರುವೆವು.

ಸಂಪಾದಕ

ಭಾವಿನಿ

ವಿದ್ಯೆಯಿಂದಲೆ ಧರ್ಮರಕ್ಷಣ।
ವಿದ್ಯೆಯಿಂದಲೆ ಜ್ಞಾನವರ್ಧನ।
ವಿದ್ಯೆಯಿಂದಲೆ ಸ್ವಾವಲಂಬನ, ಮಾನ ಮರ್ಯಾದೆ॥
ವಿದ್ಯೆಯಿಲ್ಲದ ನರನು ದಾಸನು।
ವಿದ್ಯೆಯಿಲ್ಲದ ಸ್ತ್ರೀಯು ಮಾರಿಯು
ವಿದ್ಯೆಯಲಿ ಹಿಂದುಳಿದ ದೇಶವು ದುಃಖದಾಗರವು॥

ಸಂಪಾದಕ.

ಪತ್ರಿಕೆಯ ವ್ಯವಸ್ಥೆ

ಸಂಪಾದಕ ಮಂಡಲ

(Editorial Committee)

೧ ಶ್ರೀ. ಎಸ್. ಕೆ. ಹೊಸಮನಿ ಬಿ. ಎ ಎಲೆಲ್. ಬಿ.
(ಚೇರಮನ್ ಡಿ. ಎಸ್. ಬಿ.)

೨ ,, ಜಿ. ಆರ್. ನಲವಡಿ ಬಿ. ಎ. ಎಲೆಲ್. ಬಿ.
(ವ್ಹಾಯಿಸ್ ಚೇರಮನ್ ಡಿ. ಎಸ್. ಬಿ.)

೩ ,, ಡಿ. ಎಲ್. ಪಾಟೀಲ್ ಬಿ. ಎ. ಎಲೆಲ್. ಬಿ.

೪ ,, ವ್ಹಿ. ಬಿ. ಜೋಶಿ ಬಿ. ಎ. ರಿಟಾಯರ್ಡ್ ಎಜ್ಯುಕೇಶನಲ್ ಇನ್ಸ್ಪೆಕ್ಟರ

೫ ಮೆ॥ ಫಕರುದ್ದೀನ ಸಾಹೇಬ

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ

(Managing Editor, Publisher & Printer)

ಶ್ರೀ. ಎಚ್. ಎಫ್. ಕಟ್ಟಿಮನಿ ಬಿ. ಎ. (ಲಾಯಿಫ್ ಮೆಂಬರ ಕೆ. ಎಲ್. ಇ. ಸೊಸಾಯಿಟಿ).

ಇದು ಧಾರವಾಡ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಆಫೀಸಿನಲ್ಲಿ ಪ್ರತಿತಿಂಗಳ ಕೊನೆಯ ಒಳಗಾಗಿ ಪ್ರಕಟವಾಗುತ್ತದೆ.

ಇದು ಸಧ್ಯಕ್ಕೆ ಧಾರವಾಡಕಿಲ್ಲೆಯಲ್ಲಿರುವ ತೋಂಟದಾರ್ಯ ಮುದ್ರಾಲಯದಲ್ಲಿ ಅಚ್ಚಾಗುತ್ತದೆ.

ಇದು ಸಧ್ಯಕ್ಕೆ ಹೊದಿಕೆ ಸಹಿತ ಅಷ್ಟಪತ್ರಿಕೆ ಡೆಮಿ ೬೬ ಪುಟಗಳುಳ್ಳದ್ದಾಗಿದೆ.

ಇದರ ವರ್ಷದ ವೆಚ್ಚಕ್ಕಾಗಿ ೯೯೨ ರೂಪಾಯಿ ಗಳು ಕಾದಿಡಲ್ಪಟ್ಟಿವೆ.

ಇದು ಸರ್ವಾಂಗಸುಂದರವಾಗಿ ಸಕಲ ವಿದ್ಯಾಭಿಮಾನಿಗಳಿಗೆ ಆದರಣೀಯ ಯವಾಗುವದೆಂದು ಹಾರೈಸುತ್ತೇವೆ.

ಸಂಪಾದಕ

ವಿದ್ಯಾರ್ಥಿಗಳ ನೈತಿಕ ಶಿಕ್ಷಣವು.

-ಇಂಗ್ಲಿಷ್ ಪ್ರಬಂಧದಿಂದ-

ಮನುಷ್ಯನ ಸುಧಾರಣೆಗೆ ಶಿಕ್ಷಣವು ಅತ್ಯವಶ್ಯವು. ಅದರಲ್ಲಿ ಶಾರೀರಿಕ, ಮಾನಸಿಕ, ನೈತಿಕಗಳೆಂದು ಮೂರು ಮುಖ್ಯಭಾಗಗಳು; ಇವು ಮೂರೂ ಸಮಾನ ಯೋಗ್ಯತೆಯುಳ್ಳವುಗಳು ಇವುಗಳಲ್ಲಿ ಯಾವದನ್ನೂ ಅಲಕ್ಷಿಸ ಕೂಡದು. ಈ ಮೂರೂ ಶಿಕ್ಷಣಗಳನ್ನು ಸಮನಾಗಿ ಬೆಳಿಯಿಸಿಕೊಂಡವರೇ ಇಹಪರಗಳಲ್ಲಿ ಸೌಖ್ಯವನ್ನು ಹೊಂದುವರು, ಇದರಿ ಇತ್ತೀಚ್ಛಲಾಗಿ ಅನೇಕ ಜನರು ಕೇವಲ ಮಾನಸಿಕ ಬೆಳವಣಿಗೆಯ ಕಡೆಗೇ ವಿಶೇಷ ಲಕ್ಷ್ಯಗೊಟ್ಟು ಶಾರೀರಿಕ, ನೈತಿಕ ಉನ್ನತಿಗಳನ್ನು ಅಲಕ್ಷಿಸುವದು ಕಂಡುಬರುತ್ತದೆ. ಇದರಿಂದಲೇ ದೇಶದ ಅವನತಿಯಾಗಹತ್ತಿದೆ,

ಭಾವೀಪ್ರಜೆಗಳ ಭವಿತವ್ಯವು ವಿಶೇಷವಾಗಿ ಶಿಕ್ಷಕರಮೇಲಿ ಅದರೊಳಗೂ ಪ್ರಾಥಮಿಕ ಶಿಕ್ಷಕರಮೇಲಿ ಹೆಚ್ಚಿಗೆ ಅವಲಂಬಿಸಿರುತ್ತದೆ. ಆದ್ದರಿಂದ ಸಚ್ಛಿಕ್ಷಕನು ತನ್ನ ವಿದ್ಯಾರ್ಥಿಗಳಮೇಲೆ ಹೆಚ್ಚಿಗೆ ಮಮತೆಯುಳ್ಳವನಾಗಿದ್ದು ಅವರ ಮಾನಸಿಕ, ಶಾರೀರಿಕ, ನೈತಿಕ ಉನ್ನತಿಗಳಾಗುವಂತೆ ತನ್ನ ಶಿಕ್ಷಣ ಕಾರ್ಯ ಸಾಗಿಸಲಿಕ್ಕೆ ಬೇಕು. ಪರೀಕ್ಷೆಗಳೇ ತಮ್ಮ ಧ್ಯೇಯಗಳಿಂತಲೂ, ಪರೀಕ್ಷೆಯಲ್ಲಿ ಹೆಚ್ಚು ಹುಡುಗರು ಪಾಸಾದರೆ ತೀರಿತು, ತಮ್ಮ ಕಾರ್ಯವು ಕೈಗೂಡಿತೆಂತಲೂ ಎಷ್ಟೋಜನ ಶಿಕ್ಷಕರ ಗ್ರಹಿಕೆಯುಂಟು. ಆದರೆ ತತ್ವಶಃ ವಿಚಾರಮಾಡಿದರೆ ಈ ಮಾತು ಯಾರಿಗೂ ಸರಿದೋರಲಿಕ್ಕಿಲ್ಲ. ಎಷ್ಟೋ ಹುಡುಗರು ಸ್ವಾಭಾವಿಕವಾಗಿ ತೀಕ್ಷ್ಣಬುದ್ಧಿಯವರೂ, ಸುಸ್ವಭಾವದವರೂ, ಸತ್ಯವಂತರೂ ಆಗಿರುತ್ತಾರೆ. ಆದರೆ ಇಂಥ ವಿದ್ಯಾರ್ಥಿಗಳು ಅನೇಕಕಾರಣಗಳ ಮೂಲಕ ಶಾಲೆಯ ಪರೀಕ್ಷೆಯಲ್ಲಿ ತೇರ್ಗಡೆಹೊಂದದಿದ್ದರೆ ಅವರಿಗೆ ದಡ್ಡರೆನ್ನಬಹುದೇ ಹೇಗೆ? ಅಥವಾ ಒಬ್ಬ ದುಷ್ಟಸ್ವಭಾವದ ಉಡಾಳ ಮಂದಬುದ್ಧಿಯ ಹುಡುಗನು ಏನಕೇನಪ್ರಕಾರೇಣ ಪರೀಕ್ಷೆಯಲ್ಲಿ ಪಾಸಾದರೆ ಅತನು ಜಾಣನೆಂದು ಅನ್ನಲಿಕ್ಕಾಗುವದಿಲ್ಲ. ಅಂದರೆ ಪರೀಕ್ಷೆಗಳೇ ವಿದ್ಯಾರ್ಥಿಗಳ ಬುದ್ಧಿವಂತಿಕೆ (ಯೋಗ್ಯತೆ) ಯನ್ನು ತೂಗುವತಕ್ಕಡಿಗಳಲ್ಲ. ಆದ್ದರಿಂದ ಭಾವೀರಾಷ್ಟ್ರದ ಹಿತೇಚ್ಛುಗಳೂ, ದೇಶೋದ್ಧಾರಕರೂ, ದೇಶಹಿತಚಿಂತಕರೂ ಆದ ಪ್ರಾಥಮಿಕ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲಿ ಹೆಚ್ಚಿಗೆ ಪಾಸುಮಾಡಿಕೊಂಡು ಅವರನ್ನು ಅವ್ಯವಹಾರಿಗಳನ್ನು ಮಾಡುವ ಗೊಂದಲಕ್ಕೆ ತಾವು ಬೀಳದೆ ನಿಜವಾದ ಶಿಕ್ಷಣವು ಅವರಿಗೆ ದೊರೆಯುವಂತೆ ತಮ್ಮ ಧೋರಣವನ್ನಿಟ್ಟು ತಮ್ಮ ದಿನದ ಕಾರ್ಯವನ್ನು ಸಾಗಿಸತಕ್ಕದ್ದು.

ಈಗಿನ ಪ್ರಾಥಮಿಕ ಶಾಲೆಗಳಲ್ಲಿ ಮಾನಸಿಕ ಉನ್ನತಿಗೆ ಹಲಕೆಲವು ಪುಸ್ತಕಗಳೂ, ಅಂಕಗಣಿತ, ಭೂಮಿತಿ ಮೊದಲಾದ ವಿಷಯಗಳೂ - ಸ್ವಲ್ಪಮಟ್ಟಿಗೆ

ಸಹಾಯಕಾರಿಗಳಾಗಿವೆ. ಅದರಂತೆ ಶಾರೀರಿಕ ಬೆಳವಣಿಗೆಗೆ ತಾಲೀಮು, ಡ್ರಿಲ್, ಓಟ ಮೊದಲಾದ ಕೆಲವು ವಿಷಯಗಳೂ ಅನುಕೂಲವಾಗಿವೆ. ಆದರೆ ನೈತಿಕ ಬೆಳವಣಿಗೆಗೆ ಮಾತ್ರ ಯಾವ ಗ್ರಂಥಗಳೂ ಯಾವ ಉಪಕರಣಗಳೂ ಸಹಾಯಕಾರಿಗಳಿಲ್ಲ. ಆದ್ದರಿಂದಇದರ ಬೆಳವಣಿಗೆಯು ವಿದ್ಯಾರ್ಥಿಗಳಲ್ಲಿ ಹೆಚ್ಚಾಗುವಂತೆ ಪ್ರಯತ್ನಿಸುವದು ಅತಿ ಕಷ್ಟದ ಕೆಲಸವು. ಆದಕಾರಣ ನೈತಿಕ ಶಿಕ್ಷಣದ ಬೆಳವಣಿಗೆಯನ್ನು ಕೆಲಮಟ್ಟಿಗಾದರೂ ಶಾಲೆಗಳಲ್ಲಿ ಹ್ಯಾಗೆ ಮಾಡತಕ್ಕದ್ದೆಂಬಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಹೇಳುವೆವು.

ಚಿಕ್ಕಮಕ್ಕಳಿಗೆ ನೈತಿಕ ಶಿಕ್ಷಣದ ಅನುಕರಣೀಯ ವಸ್ತುಗಳೆಂದರೆ ತಂದೆ ತಾಯಿ, ಗುರು-ಹಿರಿಯರು, ಮಿತ್ರರು ಮೊದಲಾದವರು. ನಮ್ಮ ದೇಶದ ತಂದೆ-ತಾಯಿಗಳಂತೂ ಕೇವಲ ಅಜ್ಞಾನಾಂಧಃಕಾರದಲ್ಲಿ ಮುಳುಗಿರುವರು. ಇವರಿಂದ ನಮ್ಮ ಮಕ್ಕಳಿಗೆ ನೈತಿಕ ಶಿಕ್ಷಣವು ದೊರೆಯಬೇಕೆಂದು ಎಳ್ಳಷ್ಟಾದರೂ ನಂಬಿಕ್ಕಾಗದು. ಯಾಕಂದರೆ ನೀತಿ ಅನೀತಿಗಳ ಕಲ್ಪನೆಯೇ ಅವರಿಗಿರುವದಿಲ್ಲ. ಳಿತು ಹೀನಗಳ ಭೇದಾಭೇದಾತ್ಮಕ ವಿಚಾರವು ಅವರ ತಲೆಯಲ್ಲಿ ಹುಟ್ಟುವದೇ ಇಲ್ಲ. ತಾವು ಆಡುವದು ಕೆಟ್ಟಮಾತು ಮಾಡುವದು ದುಷ್ಕೃತಿ ಅಂದಮೇಲೆ ಂದೆ-ತಾಯಿಗಳ ಅನುಕರಣ ಮಾಡುವಂಥ ಬಾಲಕನು ಅವರಂತೆಯೇ ಆಗುವದು ಸಹಜವು. ಆದ್ದರಿಂದ ಶಿಕ್ಷಕಬಾಂಧವರೇ ನೀವೇ ಆ ಮಹತ್ತರ ಜವಾಬಾರಿಯನ್ನು ವಹಿಸಿ ನಿಮ್ಮ ಕೈಯಲ್ಲಿ ಸಿಕ್ಕ ಕೋಮಲಮನಸ್ಸಿನ ಬಾಲಕರನ್ನು ದ್ದಿ ಅವರನ್ನು ನೀತಿವಂತರನ್ನಾಗಿ ಮಾಡತಕ್ಕದ್ದು. ಅದಕ್ಕಾಗಿ ಬೇಕಾಗುವ ಕ್ಕ ಉಪಕರಣ, ವಿಷಯಗಳ ಜೋಡಣೆಯನ್ನಾದರೂ ನೀವೇ ತಯಾರಿಸಿಕೊಳತಕ್ಕದ್ದು. ನಮ್ಮ ಮೇಲಿನ ವರಿಷ್ಠರಮೇಲೆ ಅಥವಾ ಸಂಸ್ಥೆಯಮೇಲೆ ಆ ಜವಾರಿಯನ್ನು ಹಾಕಿ ನೀವು ಕೈಮುಚ್ಚಿಕೊಂಡು ಕೂಡ್ರುವದು ಸರಿಯಲ್ಲ. ಮೆಂಚಿಲ್ಡ ಸಾಹೇಬರು ತಾವು ಬರೆದ "(Youth's Noble Path)" ಎಂಬ ಗ್ರಂಥದಲ್ಲಿ ನೀತಿಪಾಠವಕ್ರಮವನ್ನು ಚನ್ನಾಗಿ ವಿವರಿಸಿರುತ್ತಾರೆ. ಬಾಲಕನು ಶಾಲೆಗೆ ಬಂದ ದಿವಸವೇ ಅವನ ಶಿಕ್ಷಣವು ಪ್ರಾರಂಭವಾಗಲಿಕ್ಕೆಬೇಕು. ಶಾಲೆಯು ಮನೆಯೆಂದರೆ ಬಾಲಕನಿಗೆ ಒಳ್ಳೇ ನೀತಿಯನ್ನು ಕಲಿಸುವಂಥ ಮತ್ತು ಮಾನಸಿಕ, ಶಾರೀರಿಕ ಬೆಳವಣಿಗೆಗಳನ್ನು ಮಾಡುವಂಥ ಗುರುಕುಲವಾಸವೆಂತ ಈ ಶಿಕ್ಷಕನೆಂದರೆ ನೀತಿವಂತ ಮೂರ್ತಿಯೆಂತಲೂ ಗೃಹಿಕೆಯಾಗಲಿಕ್ಕೆಬೇಕು. ಕ್ಷಕನ ಆಚಾರ-ವಿಚಾರಗಳು ವಿದ್ಯಾರ್ಥಿಗಳಿಗೆ ಸದಾ ಅನುಕರಣೀಯವಾಗಿರಲಿಬೇಕು. ಸುಳ್ಳುಹೇಳಬಾರದೆಂದು ವಿದ್ಯಾರ್ಥಿಗಳಿಗೆ ಪಾಠ ಕಲಿಸುವದು, ವು ಮಾತ್ರ ಎಂದೂ ಸತ್ಯಮಾತನ್ನಾಡದಿರುವದು. ಚುಟ್ಟಾ ಸೇದಕೂಡದು, ಹಾ-ಕಾಫಿ ಕುಡಿಯಲಾಗದೆಂದು ಹುಡುಗರಿಗೆ ನೀತಿಯನ್ನು ಹೇಳುವದು ತಾವು ವರ ಕೈಯಿಂದಲೇ ತಂಬಾಕ, ಸಿಗರೇಟುಗಳನ್ನು ತರಿಸಿ ಅವರ ಎದುರಿಗೇ

ಸೇವುವದು, ಇದೆಂಥ ನೈತಿಕ ಶಿಕ್ಷಣವು! ಇಂಥ ಡಾಂಭಿಕ ಶಿಕ್ಷಣದಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಎಳ್ಳಷ್ಟಾದರೂ ಪರಿಣಾಮವಾಗಲಾರದು. ಅಡಿಡಂತೆ ಮಾಡುವವನೇ ರೂಢಿಯೊಳಗುತ್ತಮನು. ಆದ್ದರಿಂದ ಶಿಕ್ಷಕನು ಮಾತಿನಿಂದಲೂ ಕೃತಿಯಿಂದಲೂ ತನ್ನ ವಿದ್ಯಾರ್ಥಿಗಳಿಗೆ ಉದಾಹರಣೆ ತಕ್ಕೊಳ್ಳತಕ್ಕ ವಸ್ತುವಾಗಿರಬೇಕು.

ಚಿಕ್ಕ ಮಕ್ಕಳಿಗೆ ನೈತಿಕ ಶಿಕ್ಷಣದ ಅಭಿರುಚಿಯನ್ನುಂಟುಮಾಡಲಿಕ್ಕೆ ಉತ್ತಮ ಕಥೆಗಳೂ, ಸತ್ಪುರುಷರ ಚರಿತ್ರೆಗಳೂ ಸಹಾಯಕಗಳು. ವಿದ್ಯಾರ್ಥಿಗಳಿಗೆ ಹೇಳತಕ್ಕ ಪ್ರತಿಯೊಂದು ನೀತಿಪಾಠವನ್ನು ಶಿಕ್ಷಕನು ಸ್ವಂತವಾಗಿ ರಚಿಸಿಕೊಳ್ಳಬೇಕು. ಅವುಗಳನ್ನು ಹುಡುಗರ ವಯೋಮಾನಕ್ಕನುಸರಿಸಿ ಸುಲಭ ಹಾಗು ಕಠಿಣ ಭಾಷೆಗಳಲ್ಲಿ ಹೇಳತಕ್ಕದ್ದು. ತಾನು ಹೇಳತಕ್ಕ ಕಥೆಯು ವ್ಯವಹಾರದೊಳಗಿನದಿದ್ದು ಯಾವದಾವರೊಂದು ನೀತಿಯು ಅದರಿಂದ ಹೊರಡಲಿಕ್ಕೆ ಬೇಕು. ಚಿತ್ರಗಳಿಲ್ಲದೆ ಕಥೆಯನ್ನು ಹೇಳುವದು ಸಣ್ಣ ಬಾಲಕರ ಮನಸ್ಸಿನ ಮೇಲೆ ಅಷ್ಟೊಂದು ಪರಿಣಾಮಕಾರಿಯಾಗಲಾರದು. ದಿನದ ಅಭ್ಯಾಸಕ್ರಮದಲ್ಲಿ ಈ ಕಥೆಯ ಪಾಠವನ್ನಿಟ್ಟುಕೊಂಡು ಪ್ರತಿಯೊಂದು ಪಾಠ ಮುಗಿದ ಬಳಿಕ ಅದರೊಳಗಿನ ನೀತಿಯ ಮಾತನ್ನು ಅವರಿಗೆ ಸ್ಪಷ್ಟವಾಗಿ ಹೇಳಿ ಅವರನ್ನು ಆ ನೀತಿಯಂತೆ ನಡೆಯಲಿಕ್ಕೆ ಹಚ್ಚಬೇಕು. ರಾಮಾಯಣ, ಮಹಾಭಾರತ, ಕುರಾನ ಇಸೋಪನೀತಿ ಮೊದಲಾದ ಗ್ರಂಥಗಳೊಳಗಿನ ಉತ್ತಮ ಕಥೆಗಳನ್ನಾರಿಸಿಕೊಂಡು ಭೂತದಯೆ, ಪರೋಪಕಾರ, ಒಕ್ಕಟ್ಟು, ಸತ್ಯತೆ, ಭಕ್ತಿ, ಸಾಹಸ ಮೊದಲಾದ ಸದ್ಗುಣಗಳು ಅವರಲ್ಲಿ ನೆಲೆಗೊಳ್ಳುವಂತೆ ಸುಲಭ ಹಾಗು ಸರಳ ಭಾಷೆಯಲ್ಲಿ ಕಥೆಗಳನ್ನು ಹೇಳತಕ್ಕದ್ದು. ಪಾರಿಭಾಷಿಕ ಶಬ್ದಗಳೂ, ಕಠಿಣಶಬ್ದಗಳೂ, ಆ ಕಥೆಯಲ್ಲಿ ಬರಲಾಗದು. ದೊಡ್ಡ ಕ್ಲಾಸಿನ ಹುಡುಗರಿಗೆ ಅವರ ನಿಬಂಧ ಪಾಠಗಳಲ್ಲಿ ಇಂಥ ನೈತಿಕ ನಿಬಂಧಗಳನ್ನೇ ಆರಿಸಿ ಬರೆಯಿಸಬೇಕು. ಮತ್ತು ಶಾಲೆಗಳಲ್ಲಿ ಪ್ರತಿದಿನ ಈ ನೀತಿಪಾಠವನ್ನು ಕಲಿಸುವದಲ್ಲದೆ ವಾರಕ್ಕೊಮ್ಮೆ ೧ ತಾಸು ಎಲ್ಲ ವಿದ್ಯಾರ್ಥಿಗಳನ್ನು ಒತ್ತಟ್ಟಿಗೆ ನೆರೆಯಿಸಿ, ಶಿಕ್ಷಕನಾಗಲಿ, ಮೇಲಿನ ಕ್ಲಾಸಿನ ವಿದ್ಯಾರ್ಥಿಗಳಾಗಲಿ ನೀತಿಯ ಪಾಠಗಳಬಗ್ಗೆ ವ್ಯಾಖ್ಯಾನ ಕೊಡತಕ್ಕದ್ದು. ಇದರಿಂದ ವಿದ್ಯಾರ್ಥಿಗಳಲ್ಲಿ ವಕ್ತೃತ್ವವೂ ಧೈರ್ಯವೂ ನೆಲೆಗೊಳ್ಳುವವು. ಮತ್ತು ದಿನಾಲು ತಪ್ಪದೆ ಸರಿಯಾಗಿ ಶಾಲೆಗೆ ಬರುವಂಥ, ಸತ್ಯವಾತಾಡುವಂಥ, ಸಂಭಾವಿತ ಹುಡುಗರನ್ನು ಹುಡುಕಿ ಆರಿಸಿ ಅವರಿಗೆ ತಕ್ಕ ಉತ್ತೇಜನವನ್ನು ಕೊಟ್ಟು ಉಳಿದವರೂ ಅವರಂತೆಯೇ ಆಗಬೇಕೆಂಬ ಏರಾಟವನ್ನು ಹುಡುಗರಲ್ಲಿ ಹುಟ್ಟಿಸಬೇಕು. ಪೂರ್ವಕಾಲದ ಸತ್ಪುರುಷರು ಅಂದರೆ ಹರಿಶ್ಚಂದ್ರ, ನಳರಾಜ, ಶ್ರೀರಾಮಚಂದ್ರ, ಧರ್ಮರಾಜ, ಗೌತುಮಬುದ್ಧ, ಸಾಕ್ರೆಟೀಸ, ಜ್ಞಾನದೇವ, ಹಾಗೆ ಮತಾಯಿ, ಶಿವಾಜಿ ಮೊದಲಾದವರ ಚರಿತ್ರೆಗಳನ್ನು, ಅವರ ಗುಣಾನುವರ್ಣ

ನಾತ್ಮಕ ಭಾಗಗಳನ್ನು ಬೇರೆ ಬೇರೆಯಾಗಿ ಹೇಳಿ ಅವರಂತ ತಾವೂ ಪ್ರಸಿದ್ಧ ಪುರುಷರಾಗಬೇಕೆಂಬ ಲವಲವಿಕೆಯನ್ನು ಹುಡುಗರಲ್ಲಿ ಹುಟ್ಟಿಸತಕ್ಕದ್ದು.

ಯೋಗ್ಯ ಶಿಕ್ಷಣವನ್ನು ಪಡೆದ ಶಿಕ್ಷಕನು ತನ್ನ ದೇಶದಲ್ಲಿ ಉಪಲಬ್ಧವಾಗಿರುವ ಅನೇಕ ಉದಾಹರಣೆಗಳನ್ನೂ ಬೇರೆ ಬೇರೆ ಗ್ರಂಥಗಳಲ್ಲಿಯ ಉತ್ತಮ ಕಥೆಗಳನ್ನೂ ಆರಿಸಿಕೊಂಡು ಅವುಗಳ ಸಹಾಯದಿಂದ ನೀತಿ ಪಾಠವನ್ನು ವಿದ್ಯಾರ್ಥಿಗಳಿಗೆ ಕಲಿಸಲಿಕ್ಕೆ ಶಕ್ತನಾಗುತ್ತಾನೆ. ಅಪರಿಚಿತ ಕಥೆಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವದಿಲ್ಲ. ಆದ್ದರಿಂದ ಅವರಿಗೆ ಗೊತ್ತಿದ್ದ ವಸ್ತುಗಳ ಸಂಬಂಧಿಸಿದ ಕಥೆಗಳನ್ನೇ ಹೇಳಿ ಪಾಠ ಕಲಿಸುವದರಿಂದ ವಿದ್ಯಾರ್ಥಿಗಳಲ್ಲಿ ಮನೋರಂಜನೆಯೂ ತಿಳುವಳಿಕೆಯೂ ಚನ್ನಾಗಿ ಆಗುತ್ತವೆ. ಇಂಥ ಪಾಠಗಳನ್ನು ಹೇಳುವದು ಮಹತ್ವದ್ದೆಂದೂ ಇದು ಒಂದು ಪ್ರಕಾರದ ನೈತಿಕ ಶಿಕ್ಷಣವಾಗಿರುವದೆಂದೂ ಎಲ್ಲರೂ ಎಂದೂ ಮರೆಯಲಾಗದು. ಸರಳತೆಯಿಂದ ಆಟಗಳನ್ನಾಡುವದೂ, ನಿಯಮಗಳಿಗನುಸಾರವಾಗಿ, ನಡೆಯುವದೂ ಸದಾಚಾರವನ್ನೂ ಕ್ರಮವನ್ನೂ ವೇಳೆಗೆ ಸರಿಯಾಗಿ ಯಾವದೊಂದು ಕೆಲಸವಾಡುವ ಗುಣವನ್ನೂ ಒಳಕೊಂಡು ನಡೆಯುವದೂ, ನೀತಿಶಿಕ್ಷಣದ ಪ್ರಗತಿಗೆ ಉತ್ತಮ ಸಾಧನಗಳಾಗಿರುವವು. ಒಟ್ಟಿಗೆ ಶಿಕ್ಷಕನ ಆಚರಣೆಯು ಶಾಲೆಯಲ್ಲಿಯಾಗಲಿ ವ್ಯವಹಾರದೊಳಗಾಗಲಿ ವಿದ್ಯಾರ್ಥಿಗಳ ನೀತಿಶಿಕ್ಷಣದಲ್ಲಿ ಒಳ್ಳೇ ಪರಿಣಾಮವನ್ನುಂಟುಮಾಡುವಂಥಾದ್ದಾಗಿರತಕ್ಕದ್ದು.

ನಮ್ಮ ಶಾಲೆಯಲ್ಲಿ ಇದೇ ಕ್ರಮದಿಂದ ಪ್ರತಿದಿನ ವಿಷಯದ ಸಂಗಡಲೂ, ವಾರಕ್ಕೊಮ್ಮೆ ಒಂದು ತಾಸು (ಪ್ರತಿಶನಿವಾರ) ನೈತಿಕ ಶಿಕ್ಷಣದ ವಿಷಯವನ್ನು ಇಡೀ ಶಾಲೆಯ ಹುಡುಗರಿಗೆ ಕಲಿಸುತ್ತ ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ, ಒಕ್ಕಟ್ಟು, ಪರಸ್ಪರ ಪ್ರೇಮಭಾವ, ಸಹಾನುಭೂತಿ ಮೊದಲಾದ ಸದ್ಗುಣಗಳು ನೆಲೆಗೊಳ್ಳುವಂತೆ ಪ್ರಯತ್ನ ನಡೆಯಿಸಿರುವೆವು. ಹುಡುಗರಾದರೂ ವಿಶೇಷ ಹುರುಪಿನಿಂದ ನಮ್ಮ ಹೇಳಿಕೆಯ ಮೇರೆಗೆ ಆಯಾ ಗುಣಗಳನ್ನು ಅನುಕರಣಮಾಡಿ ಪ್ರತಿದಿನ ಸುಧಾರಿಸಹತ್ತಿದ್ದಾರೆ. ಶಾಲೆಯ ವಿಷಯವಾಗಿ ಹುಡುಗರಲ್ಲಿ ಪ್ರೇಮಾದರಗಳು ಹುಟ್ಟಿ ಹುಡುಗರ ಸಂಖ್ಯೆಯು ಮಿತಿಮೀರಿ ಬೆಳೆಯ ಹತ್ತಿದೆ. ವಿದ್ಯೆ, ವಿನಯಗಳ ಕಡೆಗೆ ಹುಡುಗರ ಹಾಗೂ ಪಾಲಕರ ಲಕ್ಷ್ಯವು ಹೆಚ್ಚಾಗಹತ್ತಿದೆ. ಈದೇ ನಮಗೆ ಚನಂದವು. ವ್ಯವಸಾಯಬಂಧುಗಳೆಲ್ಲರೂ ತಾವೂ ಆದಷ್ಟು ಮಟ್ಟಿಗೆ ನೈತಿಕ ಸುಧಾರಣೆಯ ಕಡೆಗೆ ಲಕ್ಷ್ಯಗೊಟ್ಟು ಭಾವೀ ಪ್ರಜೆಗಳನ್ನು ಉತ್ತಮ ಮಾರ್ಗಕ್ಕೆ ಹಚ್ಚುವಿರೆಂದು ನಂಬಿದ್ದೇನೆ.

ಫ. ನಾ. ಕಾಳಪ್ಪನವರ

ಹೆ. ಮಾ. ಕುರ್ತಕೋಟಿ.

ಉತ್ತಮ ಶಿಕ್ಷಕನೆಂದರೆ ಯಾರು?

"ನಮ್ಮ ಹುಡುಗನು ಏನಿಲ್ಲದಿದ್ದರೂ ಸಾಲೆಯ ಮಾಸ್ತರಿಕೆಯನ್ನಾದರೂ ಮಾಡಲಾರನೋ?" ಎಂಬೀ ನುಡಿಯು ಅನೇಕರ ಬಾಯಿಯಿಂದ ಹೊರಡುವದನ್ನು ನಾವು ಕೇಳಬಹುದು. ಇದರ ಮೇಲಿಂದ ಸಮಾಜದೊಳಗಿನ ಬಹುತೇಕ ಜನರಲ್ಲಿ ಶಿಕ್ಷಕನ ಕೆಲಸವು ಎಂಥ ಮನುಷ್ಯನಿಗಾದರೂ ಸಾಧ್ಯವಿದೆಯೆಂಬ ಕಲ್ಪನೆಯು ಉಂಟೆಂಬದು ವ್ಯಕ್ತವಾಗುತ್ತದೆ. ಪರಂತು ಈ ಕಲ್ಪನೆಯು ತಪ್ಪು. ಕವಿಗಳಲ್ಲಿ ಹ್ಯಾಗೆ ವರಕವಿಗಳು ಮತ್ತು ನರಕವಿಗಳೆಂಬ ಪ್ರಕಾರಗಳಿವೆ, ಹಾಗೆಯೇ ಶಿಕ್ಷಕರಲ್ಲಿಯೂ ವರಶಿಕ್ಷಕರು ಮತ್ತು ನರಶಿಕ್ಷಕರೆಂಬ ಭೇದಗಳನ್ನು ನಾವು ಮಾಡಬಹುದು. ಎಂಥ ಕವಿಯಾದರೂ ಶೇಕ್ಸಪಿಯರ ಮತ್ತು ಕಾಲಿದಾಸ ಕವಿಗಳ ಸಾಲಿಗೆ ಹೇಗೆ ಬರಲಾರನೋ ಅವರಂತೆ ಎಂಥ ಶಿಕ್ಷಕನಾದರೂ ಪೆಸ್ತಾಲೊಟ್ಜಿ ಎಂಬ ಸ್ವಿಟ್ಸರ್ಲಂಡಿನ ಪ್ರಸಿದ್ಧ ಶಿಕ್ಷಕನ ಸಾಲಿಗೆ ಬರಲಾರನು. ಇದರ ಮೇಲಿಂದ ವರಶಿಕ್ಷಕರಲ್ಲದ ಉಪಾಧ್ಯಾಯರು ತಮ್ಮ ಜೀವನವು ವ್ಯರ್ಥವೆಂದು ನಿರಾಶರಾಗಲು ಕಾರಣವಿಲ್ಲ. ಉತ್ತಮ ಶಿಕ್ಷಕನ ಉದಾಹರಣೆಯನ್ನು ಮನಸ್ಸಿನ ಮುಂದೆ ಇಟ್ಟುಕೊಂಡು ಮನಃಪೂರ್ವಕವಾಗಿಯೂ ಎಡೆಬಿಡದೆಯೂ ದುಡಿದರೆ ಸಾಮಾನ್ಯ ಮನುಷ್ಯನಾದರೂ ಕಾಲಕ್ರಮೇಣ ಉತ್ತಮ ಶಿಕ್ಷಕನಾಗಬಹುದು. ಹಾಗಾದರೆ ಈ ಉತ್ತಮ ಶಿಕ್ಷಕನ ಲಕ್ಷಣಗಳಾವವೆಂಬದನ್ನು ನಾವು ವಿಚಾರಿಸುವಾ.

ಯೋಗ್ಯ ಶಿಕ್ಷಕನು ತನ್ನ ಹೋರೆಯ ಮೇಲೆ ನಿಜವಾದ ಪ್ರೇಮ ಉಳ್ಳವನಾಗಿರುವನು. ಬರೇ ಹೊಟ್ಟೇಕಿಚ್ಚಿಗೋಸ್ಕರ ಶಿಕ್ಷಕನ ವೃತ್ತಿಯನ್ನು ಮಾಡುವವನಿಗೆ ಹುಡುಗರ ಪ್ರೀತಿಯನ್ನು ಸಂಪಾದಿಸುವದೂ ಅವರ ಉನ್ನತಿಯನ್ನು ದೊರಕಿಸಿಕೊಳ್ಳುವದೂ ಅಸಾಧ್ಯವು. "ಇದು ನಮ್ಮ ಮನೇ ಕೆಲಸವಲ್ಲ, ನಾವೇಕೆ ಇಷ್ಟು ದುಡಿಯಬೇಕು" ಎಂಬ ಮಾತು ಎಷ್ಟೋ ಶಿಕ್ಷಕರ ಬಾಯಿಯಿಂದ ಹೊರಬೀಳುವದು ನಮ್ಮ ಲಕ್ಷ್ಯಕ್ಕೆ ಬಂದದೆ. ಈ ತರಹದ ವಿಚಾರವುಳ್ಳ ಶಿಕ್ಷಕನು ತಾನು ಕೈಕೊಂಡ ಉದ್ಯೋಗದಲ್ಲಿ ಯಾವ ಸುಧಾರಣೆಯನ್ನೂ ಹೊಂದಲಾರನು, ಹಾಗೂ ಅತನ ಶಿಕ್ಷಣವು ಹುಡುಗರ ಮೇಲೆ ಯೋಗ್ಯರೀತಿಯಿಂದ ಪರಿಣಮಿಸಲಿಕ್ಕಿಲ್ಲ.

ಉತ್ತಮ ಶಿಕ್ಷಕನು ತನ್ನ ಕರ್ತವ್ಯದ ಉದ್ದೇಶವನ್ನು ಚೆನ್ನಾಗಿ ಅರಿತಿರುವನು. ಅದಾವದೆಂದರೆ ತನ್ನ ಕೈಕೆಳಗಿನ ಬಾಲಕರನ್ನು ಮುಂದೆ ಪ್ರಪಂಚದಲ್ಲಿ ಯೋಗ್ಯ ಸಂಸಾರಿಕರಾಗುವಂತೆಯೂ ರಾಷ್ಟ್ರದಲ್ಲಿ ಉತ್ತಮ ನಾಗರಿಕರಾಗುವಂ

ತೆಯೂ ತಯಾರಿಸುವದೇ. ಆವದರಿಂದ ಹುಡುಗರಿಗೆ ಕಲಿಸುವ ವಿಷಯಗಳನ್ನು ಅವರ ಕಾಯಿಕ ಮಾನಸಿಕ ಶಕ್ತಿಗಳನ್ನು ಬಲಪಡಿಸುವಂತೆ ಮಾತ್ರವಲ್ಲ, ಮುಂದೆ ಅವರಿಗೆ ವ್ಯವಹಾರದಲ್ಲಿ ಉಪಯೋಗವಾಗುವಂತೆ ಕಲಿಸಬೇಕು. ಅನೇಕ ಸಾರೆ ಡಿಪ್ಯುಟಿಯವರು ಯಾವದಾದರೊಂದು ವಿಷಯದಲ್ಲಿ "ಈ ಸಂಗತಿಗಳನ್ನು ನೀವು ಯಾಕೆ ತಿಳಿಸಲಿಲ್ಲ?" ಅಥವಾ "ಈ ವಿಷಯವನ್ನು ಹೀಗೆ ಕಲಿಸಿರಿ" ಎಂದು ಆಕ್ಷೇಪವಾಡಿದರೆ ಅಥವಾ ಸೂಚಿಸಿದರೆ, ವಾಡಿಕೆಯಾಗಿ ಶಿಕ್ಷಕರು "ಇದನ್ನು ಹಿಂದಿನ ಡಿಪ್ಯುಟಿಯವರು ನಮಗೆ ಕೇಳಲೂ ಇಲ್ಲ, ಹೇಳಲೂ ಇಲ್ಲ ಮತ್ತು ಹೀಗೆ ಕಲಿಸಿದರೆ ಸಿಟ್ಟು ಮಾಡುತ್ತಿದ್ದರು" ಮೊದಲಾದ ಉತ್ತರ ಕೊಡುವರು. ಹೀಗೆ ಮಾಡುವದರ ಬದಲು ವಿಚಾರವಂತನಾದ ಶಿಕ್ಷಕನು ಡಿಪ್ಯುಟಿಯವರ ಆಕ್ಷೇಪವು ಅಥವಾ ಸೂಚನೆಯು (ಮೇಲೆ ಹೇಳಿದ) ತನ್ನ ಕರ್ತವ್ಯದ ಉದ್ದೇಶಕ್ಕೆ ಅನುಕೂಲವಸೆಯೋ ಅಥವಾ ಪ್ರತಿಕೂಲವಡೆಯೋ ಎಂಬದನ್ನು ವಿಚಾರಿಸಿ, ಅನುಕೂಲನಿದ್ದರೆ ಅದನ್ನು ಸ್ವೀಕರಿಸುವನು. ಯಾಕಂದರೆ ಶಿಕ್ಷಕರು ಸಾಲೆಯಲ್ಲಿರುವದು ಯಾವನಾದರೊಬ್ಬ ಡಿಪ್ಯುಟಿಯ ದೆಸೆಯಿಂದಲ್ಲ, ಅಲ್ಲಿ ನೆರೆದಿರುವ ಹುಡುಗರ ದೆಸೆಯಿಂದ, ಎಂಬದನ್ನು ಅವರು ಚೆನ್ನಾಗಿ ಮನಗಂಡಿರಬೇಕು.

ಉತ್ತಮ ಶಿಕ್ಷಕನು ತಾನು ಕಲಿಸುವ ವಿಷಯಗಳ ಜ್ಞಾನವನ್ನು ಚೆನ್ನಾಗಿ ಮಾಡಿಕೊಂಡವನಿರುವನು. ಮನುಷ್ಯನ ಜೀವಮಾನವೆಂಬ ಮನೆಗೆ ಸಾಲೆಯಲ್ಲಿ ಕೊಡುವ ಶಿಕ್ಷಣವು ಅಸ್ತಿವಾರ (ಪಾಯಾ) ವಾಗಿರುವದು. ಈ ಅಸ್ತಿವಾರವನ್ನು ಕಟ್ಟುವಂಥ ಉಪ್ಪಾರನಾದ ಶಿಕ್ಷಕನು ತನ್ನ ಕೆಲಸವನ್ನು ಚೆನ್ನಾಗಿ ಅರಿತವನಲ್ಲದಿದ್ದರೆ ಅಸ್ತಿವಾರವು ಶಿಥಿಲವಾಗುವದು ಮತ್ತು ಬೇಗನೇ ಮುರಕಳಿಗೆ ಬರುವದು. ಆದ್ದರಿಂದ ಶಿಕ್ಷಕನು ತನ್ನ ವಿಷಯದ ಜ್ಞಾನವನ್ನು ಮಾಡಿಕೊಳ್ಳಬೇಕು ಮಾತ್ರವಲ್ಲ, ಅದನ್ನು ದಿನೇ ದಿನೇ ಬೆಳಿಸುತ್ತಾ ಇರಬೇಕು; ಹಾಗೂ ತಯಾರಿಮಾಡದೆ ಯಾವ ಪಾಠವನ್ನೂ ಕಲಿಸಬಾರದು. ಅವನು ಕಲಿಸುವ ಕಾಲದಲ್ಲಿ ಯಾವದಾನರೊಂದು ಶಬ್ದದ ಅಥವಾ ಸಂಗತಿಯ ನಿಜವಾದ ಅರ್ಥವು ತನ್ನ ಮನಸ್ಸಿಗೆ ಹೊಳೆಯದಿದ್ದರೆ, ಅವನು ಅದನ್ನು ಆ ದಿವಸ ಕಲಿಸದೆ ಅದರ ನಿಜವಾದ ಅರ್ಥವನ್ನು ಮನೆಗೆ ಹೋದಮೇಲೆ ನೋಡಿ ತಿಳಕೊಂಡು ಅವರ ಜ್ಞಾನವು ಚೆನ್ನಾಗಿ ಆದನಂತರ ಮರುದಿವಸ ಅದನ್ನು ಕಲಿಸಬೇಕೇ ಹೊರತು ತತ್ಕಾಲಕ್ಕೆ ಸ್ಥೂಲಮಾನದಿಂದ ಸರಿದೋರುವಂತೆ ಏನಾದರೊಂದು ಅರ್ಥವನ್ನು ಹುಡುಗರಿಗೆ ಹೇಳಿ ಪಾಠ ಸಾಗಿಸಿಕೊಂಡು ಹೋಗಬಾರದು. ಅನೇಕ ಶಿಕ್ಷಕರು ಹೀಗೆ ಮಾಡುವದು ತಮ್ಮ ಅಭಿಮಾನಕ್ಕೆ ಕಡಿಮೆಯೆಂದು ತಿಳಿಯುವರು; ಪರಂತು ತಮ್ಮ ಉದ್ದೇಶವನ್ನು ಅವರು ಚೆನ್ನಾಗಿ ತಿಳಿದಿದ್ದರೆ ಇಂಥ ದುರಭಿಮಾನವನ್ನು ಅವರು ಎಂದೂ ತಾಳಲಿಕ್ಕಿಲ್ಲ.

ಯೋಗ್ಯ ಶಿಕ್ಷಕನು ವಿಷಯಗಳನ್ನು ಕಲಿಸುವ ರೀತಿಯನ್ನು ತನ್ನ ಕೈಕೆಳಗಿನ ಹುಡುಗರ ಯೋಗ್ಯತೆಗೆ ಅನುಸರಿಸಿ ಆಗಿಂದಾಗ್ಗೆ ಅದಲು ಬದಲು ಮಾಡುತ್ತಿರಬೇಕು. ದಡ್ಡ ಹುಡುಗರಿಗೂ ಬುದ್ಧಿವಂತ ಹುಡುಗರಿಗೂ ಒಂದೇ ರೀತಿಯು ಉಪಯೋಗ ಬಿಳಲಿಕ್ಕಿಲ್ಲ. ಆದ್ದರಿಂದ ತನ್ನ ವರ್ಗದಲ್ಲಿರುವ ಹುಡುಗರಿಗೆ ವಿಷಯಗಳನ್ನು ಯಾವ ರೀತಿಯಿಂದ ಹೇಳಿದರೆ ಅವರಿಗೆ ಸ್ವಲ್ಪ ಕಾಲದಲ್ಲಿ ಒಳ್ಳೇ ಜ್ಞಾನವಾಗಬಹುದೆಂಬದನ್ನು ಶಿಕ್ಷಕನು ಯಾವಾಗಲೂ ವಿಚಾರಮಾಡುತ್ತಿರಬೇಕು.

ಉತ್ತಮ ಶಿಕ್ಷಕನು ತನ್ನ ಕೈಕೆಳಗಿನ ಎಲ್ಲ ಹುಡುಗರ ಮೇಲೆ ಸಮ ದೃಷ್ಟಿಯುಳ್ಳವನಾಗಿರುವನು; "ಗೌಡನ ಮಗನಿಗೆ, ದೇಸಾಯಿಯರ ಮಗನಿಗೆ ಚಲೋ ಕಲಿಸಿದರಾಯಿತು" ಇತ್ಯಾದಿ ವಿಚಾರಕ್ಕೆ ಅವನು ಎಂದೂ ಆಸ್ಪದ ಕೊಡಲಾರನು.

ಉತ್ತಮ ಶಿಕ್ಷಕನು ಹುಡುಗರ, ಪಾಲಕರ ಮತ್ತು ತಾಯಿ-ತಂದೆಗಳ ಕೂಡ ಸಹಾನುಭೂತಿಯಿಂದ ಇರುವನು, ಹೊರತು "ನಾನು ಕಲಿತು ಹುಶಾರಾದ ಪ್ರೌಂಡ ಶಿಕ್ಷಕನು, ಈ ಹಳ್ಳಿಯ ಜನರು ಅಶಿಕ್ಷಿತರು, ಆದ್ದರಿಂದ ಇವರ ಕೂಡ ಸಹಾನುಭೂತಿಯಿಂದ ಇರಲು ಪ್ರಯತ್ನಿಸುವದು ನನ್ನ ಮರ್ಯಾದೆಗೆ ಕಡಿಮೆಯಾಗುವದು" ಎಂಬಿತ್ಯಾದಿ ವಿಚಾರದ ದುರಭಿಮಾನಕ್ಕೆ ಎಂದೂ ಬೀಳಲಾರನು. ಹಳ್ಳಿಯ ಜನರು ಅಶಿಕ್ಷಿತರಿರುವದು ಅವರ ಕೂಡ ಸಹಾನುಭೂತಿಯಿಂದ ಇರಲಿಕ್ಕೆ ಶಿಕ್ಷಕನಿಗೆ ಹೆಚ್ಚಿನ ಕಾರಣವಾಗಬೇಕು.

ಉತ್ತಮ ಶಿಕ್ಷಕನು ಯಾವಾಗಲೂ ಹುಡುಗರನ್ನು ಕೂಡಿಕೊಂಡು ವರ್ತಿಸುವನು. ಪರಂತು ತಾನು ಅವರೊಳಗೆ ಹಗುರಾಗುವಷ್ಟು ಸಲಿಗೆಯನ್ನು ಅವರಿಗೆ ಕೊಡಲಾರನು. ಅವನು ಹುಡುಗರನ್ನು ಪ್ರೀತಿಸುವನು ಮತ್ತು ಅವರ ಹಿತವನ್ನು ಬಯಸುವನು; ಹಾಗೂ ಅವರಲ್ಲಿ ತನ್ನ ವಿಷಯಕ್ಕೆ ಭಯಭಕ್ತಿಗಳನ್ನು ಹುಟ್ಟಿಸುವನು. ಶಿಕ್ಷಕನು ಕಠೋರನೆಂದಾಗಲೀ ಪ್ರೀತಿಪಾತ್ರನಲ್ಲೆಂದಾಗಲಿ ಹುಡುಗರು ತಿಳಿಯದಹಾಗೆ ಅವನ ವರ್ತನವಿರಬೇಕು.

ಚಿಕ್ಕ ಮಕ್ಕಳಲ್ಲಿ ಅನುಕರಣಶಕ್ತಿಯು ವಿಶೇಷವಾಗಿರುವದು. ಆದಕಾರಣ ಉತ್ತಮನಾದ ಶಿಕ್ಷಕನು ಇದರ ಲಾಭವನ್ನು ತಕ್ಕೊಂಡು, ಅವರಿಗೆ ಸ್ವಚ್ಛತೆ ಸತ್ಯತೆ, ನಿಯಮಿತತನ ಮುಂತಾದ ಸುಗುಣಗಳನ್ನು ಪಾಠಗಳ ಮೂಲಕ ಕಲಿಸುವದರ ಬದಲು ತನ್ನ ವರ್ತನದಿಂದಲೇ ಕಲಿಸುವನು. ಹಾಗೂ ಚುಟ್ಟಿ ಸೇದುವದು ತಂಬಾಕು ಹಾಕಿಕೊಳ್ಳುವದು ಮುಂತಾದ ಚಟಗಳನ್ನು ಎಂದೂ ಹಚ್ಚಿಕೊಳ್ಳಲಾರನು ಅಥವಾ ಹಚ್ಚಿಕೊಂಡರೂ ಬಾಲಕರ ಸಮಕ್ಷಮದಲ್ಲಿ, ವಿಶೇಷತಃ ವರ್ಗದಲ್ಲಿ ಈ ಚಟಗಳನ್ನು ಅನುಭವಿಸಲಾರನು.

ಒಟ್ಟಿನ ಮೇಲೆ ಉತ್ತಮನಾದ ಶಿಕ್ಷಕನು ತನ್ನ ಹೋರೆಯ ಮೇಲೆಯೂ ಕೈಕೆಳಗಿನ ಹುಡುಗರ ಮೇಲೆಯೂ ನಿಜವಾದ ಪ್ರೀತಿಯುಳ್ಳವನೂ, ತನ್ನ ಉದ್ದೇಶವನ್ನು ಚೆನ್ನಾಗಿ ತಿಳಿದವನೂ, ತಾನು ಕಲಿಸುವ ವಿಷಯಗಳ ತಕ್ಕದ್ದಾದ ಜ್ಞಾನವನ್ನು ಸಂಪಾದಿಸಿದವನೂ, ಹುಡುಗರಿಲ್ಲರನ್ನು ಸಮದೃಷ್ಟಿಯಿಂದ ನಡೆಯಿಸಿಕೊಳ್ಳುವವನೂ, ಹುಡುಗರ, ಪಾಲಕರ ವತ್ತು ತಾಯಿ-ತಂದೆಗಳ ಕೂಡ ಸಹಾನುಭೂತಿಯಿಂದ ನಡೆಯುವವನೂ, ಹುಡುಗರು ಅನುಕರಣ ಮಾಡತಕ್ಕದ್ದಾದ ರೀತಿಯಿಂದ ಅವರೊಳಗೆ ತನ್ನ ನರ್ತನವನ್ನು ಇಟ್ಟುಕೊಳ್ಳುವವನೂ, ಅವರ ಪ್ರೀತಿಗೂ ಭಯಭಕ್ತಿಗಳಿಗೂ ಪಾತ್ರನಾಗಿರುವವನೂ ಆಗಿರುವನು.

ನಾಗೇಶ ಸುಬ್ರಾವ ಉಳ್ಳಾಲ.

ಒಕ್ಕಲಿಗರೂ ಮತ್ತು ಒಕ್ಕಲತನವೂ.

ಎಲ್ಲ ಉದ್ಯೋಗಗಳಿಗೂ ಮೂಲಾಧಾರವಾದಂಥ ಒಕ್ಕಲತನದ ಉದ್ಯೋವು ಎಲ್ಲ ದೇಶಗಳಲ್ಲಿಯೂ, ಮತ್ತು ಎಲ್ಲ ಕಾಲದಲ್ಲಿಯೂ ಶ್ರೇಷ್ಠವೆನಿಸಿಕೊಂಡಿರುತ್ತದೆ. ಹೀಗಿದ್ದರೂ, ಕೃಷಿಪ್ರಧಾನವಾದ ನಮ್ಮ ದೇಶದಲ್ಲಿ, ಈ ಉದ್ಯೋಗವು ಸಾಕಷ್ಟು ಚಿತ್ತಾಕರ್ಷಕವಾಗಿರುವದಿಲ್ಲ. ಯಾಕಂದರೆ ಕೃಷಿಕೆಲಸವು ಬಹಳ ಶ್ರಮದ ಹೋರೆಯು. ಮೇಲಾಗಿ ಬಹಳ ಜನರು ಈ ಉದ್ಯೋಗದಲ್ಲಿ ತೊಡಗಿರುವರು. ಅಂದರೆ ಹಿಂದುಸ್ಥಾನದಲ್ಲಿದ್ದ ೩೧೯ ಲಕ್ಷ ಜನಸಂಖ್ಯೆಯಲ್ಲಿ ೧೫೪ ಲಕ್ಷ ಜನರು ಒಕ್ಕಲತನದಲ್ಲಿ ದುಡಿಯುತ್ತಿರುವರು. ಹೀಗಿದ್ದರೂ, ಒಕ್ಕಲತನವು ಸರಿಯಾದ ಸ್ಥಿತಿಯೊಳಗಿರುವದಿಲ್ಲ. ಸುಸ್ಥಿತಿಯಲ್ಲಿಲ್ಲದ ಧಂದೆಯ ಕಡೆಗೆ ಯಾರೂ ಲಕ್ಷ ಹಾಕುವದಿಲ್ಲ. ಹೀಗಾಗಿ ಹಿಂದುಸ್ಥಾನದ ಒಕ್ಕಲತನವು ಹಿಂದೆ ಬಿದ್ದದೆ. ಆದರೆ ಅರ್ಥಶಾಸ್ತ್ರದೃಷ್ಟಿಯಿಂದ ವಿಚಾರಮಾಡಿದಲ್ಲಿ, ಒಕ್ಕಲತನದ ಹೊರ್ತಾಗಿ ನಮ್ಮ ದೇಶದಲ್ಲಿ ಹೊಸದುಡ್ಡು ಮಾಡುವ ಉದ್ಯೋಗಗಳು ಯಾವವೂ ಇರುವದಿಲ್ಲೆಂದು ಕಂಡುಬರುತ್ತದೆ. ಇಷ್ಟಾಗಿಯೂ, ಇದರ ಏಳ್ಗೆಗಾಗಿ ಸುಶಿಕ್ಷಿತರು ಮನಸ್ಸು ಹಾಕುವದಿಲ್ಲ. ಅಶಿಕ್ಷಿತರಾದ ರೈತಭಾಂಧವರಿಗೆ, ಇದರ ಏಳ್ಗೆಯು ಹೇಗೆಯಾಗುವದೆಂಬುದು ಹೊಳೆಯದಾಗಿದೆ. ಏನಾದರೂ ಮಾಡಬೇಕೆಂದು ಕೆಲವರು ಬಯಸಿದರೆ, ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯೊಳಗೆ ಇಲ್ಲದಂತಾಗಿ, ಎಣ್ಣೆ ತೀರಿದ ದೀಪವು ಮಿಣಿಮಿಣಿ ಮಿಣಕುವಂತೆ, ಅವರು ಮನಸ್ಸಿನಲ್ಲಿಯೇ ಮಿಣಕುತ್ತಿರುವರು.

ಯಾವದಾದರೊಂದು ಉದ್ಯೋಗವು ಪ್ರಿಯಕರ ಮತ್ತು ಲಾಭಕರವಾಗ ಬೇಕಾದರೆ, ಆ ಉದ್ಯೋಗವನ್ನು ಮಾಡುವವರು ಅದರಲ್ಲಿ ತುಂಬಾ ಮನಸ್ಸು ಹಾಕಬೇಕಾಗುವದು. ಹಾಗೆ ಆಗಬೇಕಾದರೆ, ಅವರು ಸುಶಿಕ್ಷಿತರಿರಬೇಕು. ಸುಶಿಕ್ಷಿತರೆಂದರೆ ದೊಡ್ಡ ದೊಡ್ಡ ಪರೀಕ್ಷೆ ಪಾಸಾಗಿ, ಪರರಾಷ್ಟ್ರದವರನ್ನು ಮರಿಸುವಂಥ ಉಡುಪನ್ನು ಉಡುವವರಷ್ಟೇ ಅಲ್ಲ, ತಮ್ಮ ಪ್ರತಿದಿವಸದ ಕಾರ್ಯ ಗಳನ್ನು ನಿರ್ವಿಘ್ನವಾಗಿ ಸಾಗಿಸಿಕೊಂಡು ತಾನು ಹ್ಯಾಗೆ ದುಡಿದರೆ ತನಗೆ ಹೆಚ್ಚು ಲಾಭವಾದೀತೆಂದು ತಿಳಕೊಳ್ಳುವಷ್ಟು ಓದು, ಬರಹದ ಜ್ಞಾನ ವಿದ್ದವನಿಗೆ ಸುಶಿ ಕ್ಷಿತನೆಂದರೆ ತಪ್ಪಾಗದು. ಸಾಧಾರಣವಾಗಿ, ಮನುಷ್ಯರಲ್ಲಿ, ಈ ತರದ ಜ್ಞಾನವು ಉತ್ಪನ್ನವಾಗಬೇಕಾದರೆ, ಅವರಿಗೆ ತಕ್ಕ ಮಟ್ಟಿಗೆ ಸರಿಯಾದ ಪ್ರಾಥಮಿಕ ಶಿಕ್ಷ ಣವು ದೊರೆಯಬೇಕು. ಸರಿಯಾದ ಪ್ರಾಥಮಿಕ ಶಿಕ್ಷಣವೆಂದರೆ, ಅದು ಆ ದೇಶದ ಮುಖ್ಯ ಉದ್ಯೋಗದ ಪ್ರಗತಿಗೆ ಅನಕೂಲ ವಾಗದ್ದಿರಬೇಕು. ಆದರೆ ದುರ್ದೈ ವದಿಂದ ನಮ್ಮಲ್ಲಿ ಸದ್ಯಕ್ಕೆ ದೊರೆಯುವ ಪ್ರಾಥಮಿಕ ಶಿಕ್ಷಣವು, ನಮ್ಮ ದೇಶದ ಮುಖ್ಯೋದ್ಯೋಗವಾದ ಒಕ್ಕಲತನಕ್ಕೆ ಅನಕೂಲವಾಗಿರುವ ಬದಲು ಪ್ರತಿಕೂಲ ವಾಗಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ನಮ್ಮ ದೇಶದ ಪ್ರಗತಿಯಾಗಬೇಕಾದರೆ, ನಮ್ಮ ದೇಶದ ಜನರ ಮತ್ತು ನಮ್ಮ ದೇಶದ ಉದ್ಯೋಗದ ಪ್ರಗತಿಯಾಗಲಿಕ್ಕೇಬೇಕ.. ಇವೆರಡರಲ್ಲಿ ಗನೆ ಯದು ಬಹಳ ಮಹತ್ವವಾದದ್ದು. ಯಾಕಂದರೆ ಎರಡನೆಯದು, ಮೊದಲನೆಯ ದರ ಮೇಲೆ ಅವಲಂಬಿಸಿರುತ್ತದೆ. ಕಾರಣ ಗನೆಯದರ ಬಗ್ಗೆಯೇ ಇಲ್ಲಿ ಹೆಚ್ಚಾ ಗಿ ವಿವೇಚಿಸೋಣ. ನಮ್ಮ ದೇಶದ ಜನರ ಪ್ರಗತಿಯಾಗಬೇಕಾದರೆ, ನಮ್ಮ ದೇಶದ ಎಲ್ಲ ಜನರಿಗೂ ಪ್ರಾಥಮಿಕ ಶಿಕ್ಷಣವು ದೊರೆಯಬೇಕು. ಮತ್ತು ಪರಿ ಸ್ಥಿತಿಗೆ ಸರಿಯಾಗಿ, ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯಾಗತಕ್ಕದ್ದು. ಆದರೆ ಪ್ರಾಥಮಿಕ ಶಿಕ್ಷಣವು ಇನ್ನೂ ಎಲ್ಲರಿಗೂ ಸಿಗುವದಿಲ್ಲ. ಯಾಕಂದರೆ ಒತ್ತಾಯದ ಶಿಕ್ಷಣವು ಅಮಲಿನಲ್ಲಿ ಬಂದಿರುವದಿಲ್ಲ. ಯಾವದಾದರೊಂದು ಸುಧಾ ರಿಸಿದ ರಾಷ್ಟ್ರದ ಇತಿಹಾಸವನ್ನು ನೋಡಿದಲ್ಲಿ, ಆ ದೇಶವು ಪ್ರಬುದ್ಧವಾಗಲು, ಒತ್ತಾಯದ ಶಿಕ್ಷಣವೇ ಅವರ ಮೊದಲನೇ ಮೆಟ್ಟಾಗಿರುವದೆಂದು ತಿಳಿದುಬರು ತ್ತದೆ. ಈಗ ಸುಧಾರಿಸಿದ ರಾಷ್ಟ್ರಗಳಲ್ಲಿ, ಸಕ್ತಿಶಿಕ್ಷಣವು ಅಮಲಿನಲ್ಲಿರುವದು. ೬ ರಿಂದ ೨೬ ವಯಸ್ಸಿನೊಳಗಿನ ತಮ್ಮ ಮಕ್ಕಳನ್ನು ಯಾವ ತಾಯಿ-ತಂದೆಗಳೂ ಸಾಲೆಗೆ ಕಳಿಸದೆ ಇರಲಾರರು. ೧೪ ವಯಸ್ಸಿನೊಳಗಿನ ಹುಡುಗರನ್ನು ಯಾರಾ ದರೂ ಆಳಿನಂತೆ ಉಪಯೋಗಿಸಿದರೆ, ಅಂಥವರಿಗೆ ಸ್ವಿಜರಲಂಡದಲ್ಲಿ ಕಠಿಣ ಶಿಕ್ಷೆ ಯಾಗುವದು. ಹೀಗಿದ್ದಮೇಲೆ, ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಸಿಗದೆ ಏನು ಮಾಡೀತು? ನಮ್ಮಲ್ಲಿ ಮಾತ್ರ ಹೀಗೆ ಇರುವದಿಲ್ಲ. ಸರಕಾರದವರು ಪ್ರಾಥ ಮಿಕ ಶಿಕ್ಷಣದ ಭಾರವನ್ನು ಸ್ಥಾನಿಕ ಸಂಸ್ಥೆಯವರು ಸಾಕಷ್ಟು ದುಡ್ಡಿಲ್ಲೆನ್ನು

ವರು. ಹೀಗಾಗಿ, ಸಕ್ತಿಶಿಕ್ಷಣದ ಬಿಲ್ಲು ಪಾಪಾಗಿ ಅನೇಕ ವರ್ಷಗಳಾಗಿದ್ದರೂ ಸಕ್ತಿ ಶಿಕ್ಷಣದ ಲಾಭವು ನಮಗೆ ದೊರೆಯುದಾಗಿದೆ. ಪರದೇಶದವರು ಪ್ರತಿವರ್ಷ ಪ್ರಾಥಮಿಕ ಶಿಕ್ಷಣದ ಲಾಭವು ಪರಮಾವಧಿಯಾಗಲೆಂದು, ಹಲಕೆಲವು ಮಾರ್ಪಾಟುಗಳನ್ನು ಮಾಡುತ್ತಿರುವರು. ಹುಡುಗರ ನಿರೀಕ್ಷಣ ಬುದ್ಧಿ, ದುಡಿಯುವ ಗುಣ, ಕೈಗಾರಿಕೆಯ ವಿದ್ಯೆ ಮುಂತಾದವುಗಳನ್ನು ಹೆಚ್ಚಿಸುತ್ತಿರುವರು. ಆದರೆ ನಮ್ಮ ದೇಶದಲ್ಲಿ ಈಗ ೫೦ ವರ್ಷಗಳಿಂದ ನಡೆದುಬಂದ ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯಾಗಿರುವದಿಲ್ಲ.

ಪ್ರಾಥಮಿಕ ಶಿಕ್ಷಣದಿಂದ ಜನರಿಗೆ ಮತ್ತು ದೇಶಕ್ಕೆ ಎಷ್ಟರಮಟ್ಟಿಗೆ ಹಿತಾಹಿತಗಳಾಗುತ್ತಿರುತ್ತವೆಂಬುದನ್ನು ನೋಡುವವರಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಕೊಡುವ ಅಧ್ಯಾಪಕರ ಮನಸ್ಸು ತೃಪ್ತಿಕರವಾಗಿರುವದಿಲ್ಲ. ಅವರ ಮನಸ್ಸು ತೃಪ್ತಿಕರವಾಗದಿರುವದರಿಂದ, ಅವರಲ್ಲಿ ತಾವು ಕೊಡುವ ಶಿಕ್ಷಣದಬಗ್ಗೆ ಕಳಕಳಿ ಇರುವದಿಲ್ಲ. ಹೀಗಾದಮೇಲೆ, ಪ್ರಾಥಮಿಕ ಶಿಕ್ಷಣದ ಪ್ರತಾಪವು ಹೇಗಿರಬೇಕು? ಇದಕ್ಕೆ ಒಂದೇ ಒಂದು ಉದಾಹರಣೆಯಂತರೆ ರೈತರು ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಕಳಿಸುವದರಿಂದ, ತಮ್ಮ ಮಕ್ಕಳು ತಮಗೆ ಮತ್ತು ತಮ್ಮ ಧಂದೆಗೆ ಬಹಳ ನಿರುಪಯೋಗಿಗಳಾಗುವರೆಂದು ಅನ್ನುತ್ತಿರುವರು. ಹೀಗೇಕೆ ಅನ್ನುತ್ತಿರಬಹುದು? ಇದರೊಳಗೆ ಎಷ್ಟರಮಟ್ಟಿಗೆ ಸತ್ಯವದೆ ನೋಡೋಣ.

(೧) ಸದ್ಯಕ್ಕೆ ದೊರೆಯುವ ಪ್ರಾಥಮಿಕ ಶಿಕ್ಷಣದಲ್ಲಿ ಹುಡುಗರ ಪ್ರಕೃತಿ ಸುಧಾರಿಸುವಂತೆ ಯೋಜನೆ ಮಾಡಿರುವದಿಲ್ಲ.

(೨) ಈಗಿನ ಪ್ರಾಥಮಿಕ ಶಿಕ್ಷಣದಿಂದ ಧಂದೆಯ ಜ್ಞಾನವಾಗುವದಿಲ್ಲ. ಮೈಮುರಿದು ದುಡಿಯುವ ಗುಣವು ಬರುವದಿಲ್ಲ.

(೩) ಕೆಟ್ಟ ಚಟಗಳು ಬೆಳೆಯಹತ್ತಿವೆ. ಒಕ್ಕಲತನದ ಬಗ್ಗೆ ಮತ್ತು ಒಕ್ಕಲಿಗರ ಬಗ್ಗೆ ಸ್ವಾಭಾವಿಕ ಉಪೇಕ್ಷೆಯುಂಟಾಗುತ್ತಿರುವದು.

(೪) ೫ ನೆಯ ಇಯತ್ತೆ ಮತ್ತು ೬ ನೆಯ ಇಯತ್ತೆ ಕಲಿತು ಸಾಲೆಬಿಟ್ಟ ಹುಡುಗರು ದುಡಿಯಲು ಅಶಕ್ತರಿರುವರು. ಕೈಗಾರಿಕೆಯ ಯಾವ ಉದ್ಯೋಗವು ಗೊತ್ತಾಗುವದಿಲ್ಲ.

(೫) ಮುಲ್ಕೀ ಪರೀಕ್ಷೆ ಪಾಸಾದವರು ವಿದ್ವಾಂಸರೆಂದು ತಿಳಿದುಕೊಳ್ಳುವರು. ಅವರು ಮುಂದಿನ ವಿದ್ಯೆಯಬಗ್ಗೆ ಯೋಜನೆ ಇರುವದಿಲ್ಲ. ಮಾಸ್ತರಕಿ ಹೊರ್ತಾಗಿ, ಉಳಿದ ಉದ್ಯೋಗಗಳು ಅವರಿಗೆ ಸೇರುವದಿಲ್ಲ ಮತ್ತು ಸಿಗುವದಿಲ್ಲ ಮತ್ತು ಬರುವದಿಲ್ಲ.

(೬) ಸ್ವಲ್ಪ ವಿದ್ಯಾವಂತರಾದಾಗ್ಯೂ, ಅವರ ಆಹಾರ, ಬಟ್ಟೆ ಮೊದಲಾದ ವುಗಳಲ್ಲಿ ಮಾತ್ರ ಹೆಚ್ಚಿನ ಬದಲಾವಣೆಯಾಗಿದೆ. ಆದರೂ ಉತ್ಪನ್ನ ಹೆಚ್ಚಿಸುವದ ಕಡಿಗೆ ಲಕ್ಷವೇ ಇಲ್ಲದಾಗಿದೆ.

(೭) ಈ ಪ್ರಕಾರ ಅಲ್ಪ ವಿದ್ಯೆ ಪಡೆದವರು ತಾವು ದುಡಿಯುವದಿಲ್ಲವಲ್ಲದೆ, ತಮ್ಮ ದುಡಿಯುತ್ತಿದ್ದ ತಾಯಿತಂದೆಗಳು ದುಡಿಯುವದನ್ನು ನೋಡುವದು ಸಹ ಅವರಿಗೆ ಆಗುವದಿಲ್ಲ.

ಈ ಪ್ರಕಾರ ಮೇಲೆ ಕಾಣಿಸಿದ ಸ್ಥಿತಿಗಳುಂಟಾಗುವದರಿಂದ, ಈ ತರದ ಪ್ರಾಥಮಿಕ ಶಿಕ್ಷಣವನ್ನು ಸಕ್ತಿಯಿಂದ ಕೊಡದೆ ಇದ್ದದ್ದೇ ವಿಹಿತವೆಂದು ಅನಿಸುತ್ತದೆ. ಆದರೆ ಇವೆಲ್ಲ ದೋಷಗಳನ್ನು ತಿಳಿದು, ಪ್ರಾಥಮಿಕ ಶಿಕ್ಷಣದಲ್ಲಿ ತಕ್ಕ ಮಟ್ಟಿಗೆ ಬದಲಾವಣೆಮಾಡಿ, ಸರಿಯಾದ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡುವದು ಸಮಂಜಸವಾದದ್ದು ಸರಿಯಾದ ವಿದ್ಯೆಯ ಮುಖ್ಯ ಲಕ್ಷಣಗಳು.

(೧) ಬುದ್ಧಿ ಮತು ಮನಸ್ಸು ವಿಕಾಶಹೊಂದಿ, ಪ್ರಕೃತಿಯು ಬಲಪಡಬೇಕು.

(೨) ತಮ್ಮ ಚರಿತಾರ್ಥದಬಗ್ಗೆ ತಾವು ತಮ್ಮ ಕಾಲಿನ ಮೇಲೆ ನಿಲ್ಲಬೇಕು.

(೩) ತಮ್ಮ ಮತ್ತು ತಮ್ಮ ದೇಶದ ಉತ್ಪನ್ನವನ್ನು ಸ್ವಲ್ಪ ಮಟ್ಟಿಗಾದರೂ ಹೆಚ್ಚಿಸುತ್ತಾ ಹೋಗಬೇಕು.

ಈ ಮೂರು ಮೇಲು ಗುಣಗಳು ದೊರೆಯಲು ಅನುಕೂಲವಾದ ಶಿಕ್ಷಣವನ್ನು ಪ್ರಚಾರದಲ್ಲಿ ತರುವದು ಉತ್ತಮವಾದದ್ದು. ಸಧ್ಯಕ್ಕೆ ಪ್ರಯೋಗಾರ್ಥವಾಗಿ ಹೊರಟಿರುವ ಒಕ್ಕಲತನದ ಬಾಯಸ್ ಕ್ಲಾಸಗಳಿಂದ ಕೆಲಮಟ್ಟಿಗೆ ಸರಿಯಾದ ಶಿಕ್ಷಣವು ದೊರೆಯುತ್ತಿರುವದು. ಅಂದರೆ ಮೇಲೆ ಕಾಣಿಸಿದ ಮೂರು ಲಾಭಗಳು ಸಿಗುವವು. ಆದರೂ ಈ ಸಾಲಿಗಳಬಗ್ಗೆ ನಮ್ಮ ಮುಂದಾಳುಗಳು ಸಾಕಷ್ಟು ವಿಚಾರ ಮಾಡುತ್ತಿರುವದಿಲ್ಲ. ಈ ತರದ ವಿದ್ಯೆಯಿಂದ ಸಧ್ಯದ ಪ್ರಾಥಮಿಕ ಶಿಕ್ಷಣದಿಂದಾಗುವ ಹಾನಿಗಳಾಗದೆ, ಸರಿಯಾದ ವಿದ್ಯೆಯಿಂದಾಗುವ ಲಾಭಗಳಾಗುತ್ತವೆ. ಆದ್ದರಿಂದ ಈ ಒಕ್ಕಲತನದ ಬಾಯಸ್ ಕ್ಲಾಸುಗಳಿಗೆ ತಕ್ಕ ಉತ್ತೇಜನ ಕೊಟ್ಟು, ಇಂಥ ಕ್ಲಾಸುಗಳನ್ನು ಹೆಚ್ಚಾಗಿ ಬೆಳಿಸುವದು ಅವಶ್ಯವೆನಿಸುತ್ತದೆ.

ಈ ತರದ ವಿದ್ಯೆಕಲಿತು ಮುಲ್ಕೀ ಪರೀಕ್ಷೆ ಪಾಸಾದವರು ನೌಕರೀ ಮಾಡಬಹುದು. ಒಕ್ಕಲತನದ ಜ್ಞಾನವಾಗುವದರಿಂದ ಮತ್ತು ಪ್ರಕೃತಿ ಸದೃಢವಾಗುವದರಿಂದ, ಒಕ್ಕಲತನ ಮಾಡಬಹುದು. ಉಪದಂಧೆಗಳ ಜ್ಞಾನವಾಗಿರುವದರಿಂದ ಗುಡಾರ, ಪಂಜೆ ಮುಂತಾದವುಗಳನ್ನು ನೇಯಬಹುದು, ಕಂಬಾರಿಕೆ ಮತ್ತು

ಬಡಿಗತನ ಮಾಡಬಹುದು. ಈ ಪ್ರಕಾರ ಅವರು ಅನೇಕರೀತಿಯಿಂದ ಸಮಾಜಕ್ಕು ಮತ್ತು ದೇಶಕ್ಕು ಉಪಯೋಗವಾಗುವರು. ಹೀಗಿದ್ದರೂ, ಇಂಥ ಉಪಯುಕ್ತ ಸಾಲೆಗಳನ್ನು ಹೆಚ್ಚಿಸಲು ಯಾರೂ ಮನಸ್ಸು ಹಾಕುವದಿಲ್ಲ. ಇಂಥ ಸಾಲೆಗಳು ಈ ಹೊತ್ತಿಗೆ ನಮ್ಮ ಕರ್ನಾಟಕದಲ್ಲಿ ೧೬ ಇರುವವು. ಅವುಗಳಲ್ಲಿ ೭ ಬೆಳಗಾಂವ ಜಿಲ್ಲೆಯಲ್ಲಿ, ೪ ಧಾರವಾಡ ಜಿಲ್ಲೆಯಲ್ಲಿ, ೩ ಬಿಜಾಪೂರ ಜಿಲ್ಲೆಯಲ್ಲಿ, ಮತ್ತು ೨ ಕಾರವಾರ ಜಿಲ್ಲೆಯಲ್ಲಿ ಇರುವವು. ಮೇಲಾಗಿ ಬೆಳಗಾಂವ ಜಿಲ್ಲೆಯಲ್ಲಿ ೫ ಸಾಲೆಗಳನ್ನೂ ಬಿಜಾಪೂರ ಜಿಲ್ಲೆಯಲ್ಲಿ ೪ ಸಾಲೆಗಳನ್ನೂ ಬೇಗನೇ ತಗೆಯುವವರಿದ್ದಾರೆ.

ಈ ತರದ ಒಕ್ಕಲತನದ ಬಾಯಸ್ ಕ್ಲಾಸುಗಳ ಸಾಲೆಗಳು ಬೆಳೆಬೆಳೆದಂತೆ, ಒಕ್ಕಲಿಗರ ಮತ್ತು ಒಕ್ಕಲತನದ ಪ್ರಗತಿಯು ಆಗುತ್ತದೆ. ಒಕ್ಕಲತನವೇ ಪ್ರಾಮುಖ್ಯವಾಗಿರುವ ನಮ್ಮ ಭರತಖಂಡದ ಪ್ರಗತಿಯಾಗುವದು. ಹೀಗಿದ್ದ ಮೇಲೆ, ತಮ್ಮ ಮತ್ತು ತಮ್ಮ ದೇಶದ ಅಭ್ಯುದಯವನ್ನು ಬಂಟುಮಾಡುವ ಸರಿಯಾದ ಪ್ರಾಥಮಿಕ ಶಿಕ್ಷಣವನ್ನು ಶಕ್ತಿಯಿಂದ ಕೊಡುವ ಅವಶ್ಯಕತೆಯು ಈಗ ಎಷ್ಟಿರುತ್ತದೆಂಬುದನ್ನು ನಮ್ಮ ಮುಂದಾಳುಗಳು ಒಮ್ಮನಸ್ಸಿನಿಂದ ವಿಚಾರ ಮಾಡಬೇಕಾಗಿ ಆಶಿಸುವೆನು.

ವಿ. ಸಿ. ಹಾನಗಲ್, ಬಿ. ಏಜಿ.
ಹೆಡ್‌ಮಾಸ್ತರ ಒಕ್ಕಲತನದ ಶಾಲೆ,
ದೇವೀಹೊಸೂರ.

ಶಿಕ್ಷಣ ಪ್ರಪಂಚ.

ಕ್ವೀನ್ಸ್‌ಲ್ಯಾಂಡಿನಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸಾಯ.

ಶಿಕ್ಷಣವೇ ರಾಷ್ಟ್ರದ ಯೋಗ್ಯತೆಯ ನಿಜವಾದ ಮಾಪಕ ಯಂತ್ರವು ರಾಷ್ಟ್ರದ ಸುಸಂಘಟನೆಯ ಅನೇಕ ಮಹದುಪಾಯಗಳಲ್ಲಿ ಸ್ತುತ್ಯವಾದ ಶಿಕ್ಷಣ ಪದ್ಧತಿಯೇ ಶ್ರೇಷ್ಠವಾದದ್ದು. ಶಿಕ್ಷಣವು ಯಾವ ಪ್ರಕಾರದ್ದಿರುವದೋ ಆ ಪ್ರಕಾರದ ಪ್ರಗತಿಯು ದೇಶದಲ್ಲಿ ನೆಲೆಗೊಳ್ಳುವದು. ಕಾರಣ ಈಗಿನ ಸುಧಾರಿಸಿದ ರಾಷ್ಟ್ರಗಳು ಶಿಕ್ಷಣದ, ವಿಶೇಷತಃ ಪ್ರಾಥಮಿಕಶಿಕ್ಷಣದ ಮಹತ್ವವನ್ನು ಮನಗಂಡು ಸರಿಯಾದ ಶಿಕ್ಷಣವನ್ನು ಬಾಲ-ಬಾಲಕಿಯರಿಗೆ ದೊರೆಯಲು ಅವಿಶ್ರಾಂತ ಶ್ರಮಬಡುತ್ತಿರುವವು. ಈ ವಿಷಯದಲ್ಲಿ ಇಂಗ್ಲಿಷರ ವಸಹಾತವಾಗಿದ್ದ ಆಷ್ಟ್ರೇಲಿಯಾ ದ್ವೀಪದ ಒಂದು ಭಾಗವಾದ ಕ್ವೀನ್ಸ್‌ಲ್ಯಾಂಡಿನ ಉದಾಹರಣೆಯನ್ನು ಇಲ್ಲಿ ಕೊಡುವೆವು. ಸಾಮಾನ್ಯವಾಗಿ ಇದರಂತೆಯೇ ಉಳಿದ ಆ ಖಂಡದ ಭಾಗಗಳು ಇರುವವು.

ಕ್ವೀನ್ಸ್‌ಲ್ಯಾಂಡಿನ ಕ್ಷೇತ್ರಫಲವು ಹಿಂದುಸ್ಥಾನದ ೧/೩ ದಷ್ಟು ಇರುವದು. ಜನಸಂಖ್ಯೆಯು ಸುಮಾರು ೮ ಲಕ್ಷ ಇರುವದು. ನಮ್ಮ ಜಿಲ್ಲೆಯಷ್ಟು ಸಹ ಆಗಲಿಲ್ಲ. ಜನವಸತಿಯು ಸಮುದ್ರದ ದಂಡೆಗುಂಟ ನಿಬಿಡವಾಗಿದೆ. ಮಧ್ಯ ಪ್ರದೇಶದಲ್ಲಿ ಅತಿ ವಿರಳವಾಗಿದೆ. ಇಲ್ಲಿಯ ಚಿಕ್ಕ ಮಕ್ಕಳ ವಿದ್ಯಾಭ್ಯಾಸದ ಕಾರ್ಯವು ಬಹು ಪ್ರಯಾಸಕರವಾಗಿದೆ. ಆದರೂ ಅಲ್ಲಿಯ ಸರಕಾರವೂ ಜನರೂ ಮಾಡುತ್ತಿರುವ ಸಾಹಸವು ಅಭಿನಂದನೀಯವಾಗಿದೆ.

ಸಾರ್ವತ್ರಿಕ ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣವು ರೂಢಿಯಲ್ಲಿದೆ. ಎಲ್ಲಿ ನಿಧಾನ ೧೫ ಜನ ವಿದ್ಯಾರ್ಥಿಗಳು ಕೂಡಬಹುದೋ ಅಲ್ಲಿ ಒಂದು ಶಾಲೆಯು ಅವಶ್ಯವಾಗಿ ಸ್ಥಾಪಿಸಲ್ಪಡುವದು. ಸುಮಾರು ೧೬೫೦ ಶಾಲೆಗಳು ಇರುವವು. ವಿದ್ಯಾರ್ಥಿಗಳಾದರೂ ನಾಲ್ಕೈದು ಮೈಲು ದೂರದಲ್ಲಿರುವ ಊರುಗಳಿಂದಾದರೂ ಬರಬೇಕಾಗುವದು. ಅವಕ್ಕೂ ದೂರದಲ್ಲಿದ್ದ ವಿದ್ಯಾರ್ಥಿಗಳಿಗೆ ಕೂಡ ಶಿಕ್ಷಣದ ಲಾಭವು ದೊರೆಯಬೇಕೆಂದು ಟಪಾಲಿನ ದ್ವಾರ ಶಿಕ್ಷಣವು ಕೊಡುವ ಏರ್ಪಾಟನ್ನು ೧೯೨೩ ರಲ್ಲಿ ಮಾಡಿದ್ದಾರೆ. ಪ್ರತಿವಾರ ಟಾಯಿಪಮಾಡಿ ಪಾಠಗಳು ಹುಡುಗರ ಪಾಲಕರಿಗೆ ಕಳಿಸಲ್ಪಡುವವು. ಹುಡುಗರ ಎಕ್ಷರ ಸಾಯಿಜಗಳು ಬ್ರಿಸ್ಬೇನದ ಶಿಕ್ಷಣಾಧಿಕಾರಿಗಳಿಗೆ ಕಳಿಸಲ್ಪಟ್ಟು ಅಲ್ಲಿ ಪರೀಕ್ಷಿಸಲ್ಪಡುವವು. ಈ ಬಗೆಯ ಶಿಕ್ಷಣವನ್ನು ಸುಮಾರು ೨೫೦೦ ವಿದ್ಯಾರ್ಥಿಗಳು ಹೊಂದುತ್ತಲಿರುವರು. ಅವರ ಪಾಲಕರು ಅಶಿಕ್ಷಿತರಿದ್ದಲ್ಲಿ ಈ ಯೋಜನೆಯ ಲಾಭವೂ ಕೂಡಾ ಲಭಿಸಲಾರದು. ಅದು ಕಾರಣ ಇನ್ನೊಂದು ಯೋಜನೆಯನ್ನು ಸರಕಾರದವರು ಮಾಡಿರುವರು. ಊರಿಂದೂರಿಗೆ ಸಂಚಾರಮಾಡುವ ಶಿಕ್ಷಕರನ್ನು ನೇಮಿಸಿರುವರು. ಕೇವಲ ಪಶ್ಚಿಮ ಭಾಗದಲ್ಲಿಯ ೧೪ ಜಿಲ್ಲೆಗಳು ಈ ಶಿಕ್ಷಕರ ಅಧಿಕಾರವಲ್ಲಿ ಅವೆ. ಅವರು ಪ್ರತಿವರ್ಷ ಒಟ್ಟು ೬೦೦೦ ಮೈಲು ಮೋಟಾರುಗಳಿಂದ ಸಂಚರಿಸುವರು. ಸಂಚಾರದ ಕ್ಷೇತ್ರವು ೩ ಲಕ್ಷ ಚೌ. ಮೈಲು ಆಗುವದು. ಕುರುಡರು, ಮೂಕರು ಹುಚ್ಚರು ಆದ ಹುಡುಗರಿಗೂ ಕೂಡ ಶಾಲೆಗಳನ್ನು ತೆಗೆದಿರುವರು. ಧಂದೆಯ ಶಿಕ್ಷಣವನ್ನು ದೊಡ್ಡ ಶಾಲೆಗಳಲ್ಲಿ ಕೊಡುವರು. ಬಾಲಕರಿಗೆ ಲೋಹ, ಚರ್ಮ ಕಟ್ಟಿಗೆ ಮುಂತಾದವುಗಳಲ್ಲಿ ಕೆಲಸಮಾಡಲು ಕಲಿಸುವರು. ಬಾಲಕಿಯರಿಗೆ ಅಡಿಗೆ ಮಾಡುವದನ್ನೂ ಹೊಲಿಯುವದನ್ನೂ ಹೆಣೆಯುವದನ್ನೂ ಕಲಿಸುವರು ಅಲ್ಲದೆ ಆ ದೇಶದ ಮುಖ್ಯ ಉದ್ಯೋಗ ಒಕ್ಕಲತನದ ವಿದ್ಯೆಯನ್ನು ವಿಶೇಷ ಕಲಿಸುವರು.

೧೬೫೦ ಪ್ರಾಥಮಿಕ ಶಾಲೆಗಳಲ್ಲಿ ೩/೪ ತೀರ ಸಣ್ಣ ಸಾಲೆಗಳಿರುವವು ಇವೆಲ್ಲ ಒಬ್ಬ ಶಿಕ್ಷಕನಿಂದಲೇ ನಡೆಯುತ್ತಿರುವವು. ಕಳೆದ ಮಹಾ ಯುದ್ಧದ ಪೂರ್ವದಲ್ಲಿ ಟ್ರೇಂಡ ಶಿಕ್ಷಕರು ತೀರ ಕಡಿಮೆ ಇದ್ದರು. ಈಗ ಎಲ್ಲರೂ ಟ್ರೇಂಡ ಶಿಕ್ಷಕರೇ ಇರುವರು. ಮತ್ತು ಉತ್ತಮ ತರಗತಿ ಶಿಕ್ಷಣವು ದೊರೆಯುವದಕ್ಕಾಗಿ ೧೯೧೪ ರಲ್ಲಿ ಪ್ರಾಥಮಿಕ ಶಿಕ್ಷಣರ ಟ್ರೇನಿಂಗ ಕಾಲೇಜು ಸ್ಥಾಪಿಸಲ್ಪ

ಟ್ಟಿತು. ಇದಲ್ಲದೆ ಅಮೇರಿಕಾ ಮತ್ತು ಇಂಗ್ಲಂಡಗಳಿಗೆ ಉಚ್ಚತರದ ಶಿಕ್ಷಣ ಪದ್ಧತಿಯನ್ನು ಕಲಿಯುವದಕ್ಕೋಸ್ಕರ ಅನೇಕ ವಿದ್ವಾಂಸರನ್ನು ಸರಕಾರದವರು ಕಳಿಸುತ್ತಿರುವರು. ಇದೆಲ್ಲದರ ವೇಲಿಂದ ಆಸ್ಟ್ರೇಲಿಯಾದಲ್ಲಿ ಸರಕಾರವೂ ಜನರೂ ಪ್ರಾಥಮಿಕ ಶಿಕ್ಷಣದ ಬಗ್ಗೆ ಎಷ್ಟು ಜಾಗ್ರತರಾಗಿರುವರೆಂಬದು ಗೊತ್ತಾಗುವದಲ್ಲದೆ ನಮ್ಮ ದೇಶದಲ್ಲಿ ಈ ವಿಷಯದಲ್ಲಿ ಎಷ್ಟು ದುರ್ಲಕ್ಷ್ಯ ವಿರುವದೆಂಬದು ಒಡೆದು ಕಾಣುವದು.

---

೨ ಬೆಳಗಾಂವ ಜಿಲ್ಲಾ ಸ್ಕೂಲಬೋರ್ಡ ಗ್ಯಾಝೀಟು:—

ಬೆಳಗಾಂವ ಜಿಲ್ಲಾ ಸ್ಕೂಲಬೋರ್ಡಿನವರು ತಮ್ಮದೊಂದು ಸ್ವಂತ ತ್ರೈಮಾಸಿಕವನ್ನು ಬೇಗನೆ ಹೊರಡಿಸುವವರಿದ್ದಾರೆಂದು ಸ್ಕೂಲಬೋರ್ಡ ಚೇರಮನ್ನರಾದ ಶ್ರೀಯುತ ಬಿ. ಬಿ. ಮುಮದಾಪೂರ ಇವರು ತಿಳಿಸುತ್ತಾರೆ.

೩ ಸಿನೇಮಾ ದ್ವಾರ ಶಿಕ್ಷಣ:—

ಲಾಹೋರದ ಮುನಸಿಪ್ಯಾಲಿಟಿ ಸ್ಕೂಲಬೋರ್ಡಿನವರು ಸಿನೇಮಾದ ಸಹಾಯದಿಂದ ವಿದ್ಯಾರ್ಥಿಗಳಿಗೆ ವಸ್ತುಜ್ಞಾನವನ್ನು ಮಾಡಿಕೊಡುವದು ಒಳ್ಳೇ ಲಾಭದಾಯಕವೆಂದು ಬಗೆದು ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದವರು ಮನೋರಂಜಕ ಮತ್ತು ಪ್ರಯೋಜನಕ ಫಿಲ್ಮಗಳನ್ನು ಸಿದ್ಧಪಡಿಸುವರು. ಎಳೆ ಮಕ್ಕಳಿಗೆ ಕೇವಲ ಪುಸ್ತಕಗಳ ಮೇಲಿಂದ ಅಧ್ಯಯನ ಮಾಡಿಸುವದಕ್ಕಿಂತಲೂ ದೃಶ್ಯಗಳ ಸಹಾಯದಿಂದ ಕಲಿಸುವದು ಸುಲಭವು. ನಿಧಾನ ಮ್ಯಾಜಿಕ್‌ಲ್ಯಾಂಟರ್ನ ಸಹಾಯದಿಂದ ಆರೋಗ್ಯ ವಿಜ್ಞಾನ, ಶಾಸ್ತ್ರೀಯವಿಷಯ, ಭೂವರ್ಣನೆ ಮುಂತಾದ ವಿಷಯಗಳನ್ನು ತಿಳಿಸುವದು ಅತ್ಯಂತ ಲಾಭದಾಯಕವು.

ವಿನೋದ.

(೧)

ಪಂಡಿತ:—ನೀನು ಯಾರು ?

ವಿದ್ಯಾರ್ಥಿ:—ನಾನು ಹುಡುಗ.

ಪಂಡಿತ:—ಎಲೋ ನಿನ್ನ ಹೆಸರೇನು ?

ವಿದ್ಯಾರ್ಥಿ:—ನನ್ನ ಹೆಸರೇ ! ಶಿರೋಮಣಿ.

ಪಂಡಿತ:—ಮೂರ್ಖನಲ್ಲವೇನು.

ವಿದ್ಯಾರ್ಥಿ:—ಇವೆರಡೂ ಕೂಡಿದರೆ ಇಬ್ಬರಿಗೂ ನಡೆಯುತ್ತದೆ.
ಪಂಡಿತ:—ಅದು ಹೇಗೆ.
ವಿದ್ಯಾರ್ಥಿ:—ಶಿರೋಮಣಿ ಅಂದರೆ ನನಗೆ ನಡೆಯುತ್ತದೆ ಮೂರ್ಖನಂದರೆ ತಮಗೆ ನಡೆಯುತ್ತದೆ. ಆದ್ದರಿಂದ ಇವೆರಡನ್ನೂ ಕೂಡಿಸಿ ಮೂರ್ಖ ಶಿರೋಮಣಿ ಅಂದರೆ ಇಬ್ಬರಿಗೂ ಸಮಾಧಾನವಾಗುತ್ತದೆ.
ಪಂಡಿತ:—ಹೌದೊ ಧೂರ್ತಾ!

---

(೨)

ಶಿಕ್ಷಕ:—ಆರಡಿ ಅಂದರೇನು?
೧ನೇ ವಿ:—ಷಟ್ಪದಿ.
ಶಿ:— ಷಟ್ಪದಿ ಅಂದರೆ ಏನು?
೧ನೇ ವಿ:—ಆರಡಿ.
ಶಿ:—ಏನು ಮೂರ್ಖಾ ಒಂದಕ್ಕೊಂದು ಹೇಳಿದರೆ.
೧ನೇ ವಿ:—ಹೌದರಿ ಶಬ್ದಾರ್ಥದಲ್ಲಿ ಹೀಗೇ ಬರೆದದೆ.
ಶಿ:—(೨ನೇ ವಿದ್ಯಾರ್ಥಿಗೆ) ನೀ ಹೇಳು ನೋಡುವಾ.
೨ನೇ ವಿ:—ಆರಡಿ ಅಂದರೆ ಆರು ಕಾಲುಳ್ಳದ್ದು.
ಶಿ:—ಹಾಗಾದರೆ ಒಂದು ಉದಾಹರಣೆಯನ್ನು ಕೊಡು.
೨ನೇ ವಿ:—ಬೆಂಚ.

ಶಿ:—ಶಾಬಾಶ್ ಒಳ್ಳೇ ಉದಾಹರಣೆಯನ್ನು ಕೊಟ್ಟೆ (೩ನೇ ವಿದ್ಯಾರ್ಥಿಗೆ) ನೀನು ಸರಿಯಾದ ಉದಾಹರಣೆಯನ್ನು ಕೊಡು.
೩ನೇ ವಿ:—ಮಾಸ್ತರ ನೀವರಿ.
ಶಿ:—ಏನಂದೆ!
೩ನೇ ವಿ:—ಹೌದರಿ ನಿಮಗೆ ಎರಡುಕಾಲು ನಿಮ್ಮ ಕುರ್ಚಿಗೆ ನಾಲ್ಕಂತೂ ನಿಮಗೆ ಆರುಕಾಲರಿ.

ಶಿ:—ಹಾ! ಹಾ! ನೀನು ಅವನಕಿಂತ ಹೆಚ್ಚಿನ ಪಂಡಿತ (೪ನೇ ವಿದ್ಯಾರ್ಥಿಗೆ) ಆರಡಿ ಅಥವಾ ಷಟ್ಪದಿ ಎಂತ ಯಾವದಕ್ಕೆ ನೀನು ಓದಿದ ಕವಿತೆಯಲ್ಲಿ ಹೇಳಿದೆ.
೪ನೇ ವಿ:—ಆರಡಿ ಅಂದರೆ ಭ್ರಮರ, (ಗುಂಗೀಹುಳ).
ಶಿ:—(ಸಂತೋಷದಿಂದ) ಸೈ ಹುಡುಗರೇ ಎಲ್ಲರೂ ಕೇಳಿಕೊಳ್ಳಿ ಮತ್ತು ನೆನಪಿನಲ್ಲಿಡರಿ. ಜೇನ್ನೊಣಕ್ಕೆ ಆರುಕಾಲುಗಳಿರುತ್ತ

ಅದಕ್ಕೆ ಕವಿಗಳು ವಾಡಿಕೆಯಾಗಿ ಷಟ್ಪದಿ, ಆರೆಡಿ ಅಂದರೆ ಆರುಕಾಲುಳ್ಳದ್ದು ಅಂತ ಅನ್ನುವರು.

---

(೩)

ಪರೀಕ್ಷಕ:—ಪಂಚತ್ವವನ್ನು ಹೊಂದು ಅಂದರೆ ಏನು ?

ವಿದ್ಯಾರ್ಥಿ:—ಸಾಯು ಎಂದರ್ಥ.

ಪಂಡಿತ:—ಅದು ಹೇಗೆ ಬಂತು.

ವಿದ್ಯಾರ್ಥಿ:—ಶವವನ್ನು ನಾಲ್ಕು ಜನರು ಹೊತ್ತಿರುವರು, ಐದನೇಯವನು ಮುಂದೆ ಬೆಂಕಿಯನ್ನು ಹಿಡಿದುಕೊಂಡು ಹೋಗುತ್ತಿರುವನು, ಆದ್ದರಿಂದ ಪಂಚತ್ವವನ್ನು ಹೊಂದು ಅಂದರೆ ಐದು ಮಂದಿಯುಳ್ಳವನಾಗು ಅಂದರೆ ಸಾಯು ಎಂದು ಬಂತು.

ಪಂಡಿತ:—ಶಾಬಾಶ್ ಚನ್ನಾಗಿ ತಿಳಿದುಕೊಂಡಿರುವೆ.

---

(೪)

ಪರೀಕ್ಷಕ:—ನೀನು ವೈಕುಂಠರಾಯರ ಮಗನೋ ?

ವಿದ್ಯಾರ್ಥಿ:—ಹೌದರಿ.

ಪಂಡಿತ:—ಅವರು ಎಲ್ಲಿ ಇದ್ದಾರೆ.

ವಿದ್ಯಾರ್ಥಿ:—ಸವಾಮುಂದಿರದಲ್ಲಿ.

ಪಂಡಿತ:—ಅವರು ನನ್ನ ಪರಮ ಸ್ನೇಹಿತರು, ಅವರನ್ನು ಕಾಣಬೇಕೆನ್ನುವೆನು. ಅವರಿಗೆ ನಾನು ಬಂದದ್ದು ತಿಳಿಸುವಿಯಾ.

ವಿದ್ಯಾರ್ಥಿ:—ಇಷ್ಟು ಬೇಗನೆ ತಿಳಿಸುವದು ನನ್ನಿಂದಾಗದು.

ಪಂಡಿತ:—ಹಾಗಾದರೆ ಅವರಿದ್ದಲ್ಲಿಗೆ ನನ್ನನ್ನು ಕರೆದುಕೊಂಡು ನಡೆ.

ವಿದ್ಯಾರ್ಥಿ:—ಅದೂ ನನ್ನಿಂದ ಆಗದು, ನಿಮಗೆ ಜೀವ ಬೇಡಾಗಿದ್ದರೆ ನೀವೇ ಹೋಗಬಹುದು.

ಪಂಡಿತ:—ಏನು ಹುಚ್ಚಾ ಹೀಗಂದರೆ.

ವಿದ್ಯಾರ್ಥಿ:—ನಾನು ಹಚ್ಚನಲ್ಲರಿ ನನ್ನ ತಂದೆಯವರು ಸದಾ ಮುಂದಿರದಲ್ಲಿ (ಸುಡುಗಾಡಿನಲ್ಲಿ) ಇರುವರು.

ಪಂಡಿತ:—ಹೀಗೋ ವೈಕುಂಠರಾಯರು ವೈಕುಂಠ ವಾಸಿಗಳಾಗಿರುವರೋ !

ಸಂಪಾದಕ.

ಸ್ಕೂಲಬೋರ್ಡಿನ ಕಾರಭಾರ.

ಸ್ಕೂಲಬೋರ್ಡಿನಲ್ಲಿ ಪಾಸಾದ ಮಹತ್ವದ ಠರಾವುಗಳು.

ತಾರೀಖು ೨೭-೨-೨೪

ಹಾಜರ ಇದ್ದ ಸಭಾಸದರು.

೧ ಶ್ರೀ. ಎಸ್. ಕೆ. ಹೊಸಮನಿ. (ಚೇರಮನ್.)
೨ ,, ಜಿ. ಆರ್. ನಲವಡಿ. (ವ್ಹಾಯಿಸ್ ಚೇರಮನ್.)
೩ ,, ವ್ಹಿ. ಬಿ. ಜೋಶಿ.
೪ ,, ಡಿ. ಎಲ್. ಪಾಟೀಲ.
೫ ,, ಬಸನಗೌಡಾ ಪಾಟೀಲ.
೬ ,, ಲಿಂಗಪ್ಪಾ ಬೂದಿಹಾಳ.
೭ ,, ಚನ್ನಪ್ಪಗೌಡಾ ಪಾಟೀಲ.
೮ ,, ಬಸಪ್ಪಾ ಕಲ್ಲಣ್ಣವರ.
೯ ,, ಯಲ್ಲಪ್ಪಾ ಸಾಂಬ್ರಾಣಿ.
೧೦ ಖಾ. ಸಾ. ಖುದಾವಂದ.

೧ ವಿದ್ಯಾಖಾತೆಯ ಡಾಯರೆಕ್ಟರರಿಂದ ೫೧ ಜನ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ಮಂಜೂರ ಬಂದದ್ದರಿಂದ ಕಡೆಗೆ ಕಾಣಿಸಿದ ೫೧ ಜನ ಉಮೇದವಾರರನ್ನು ನೇಮಿಸಿಕೊಳ್ಳತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೨ ಸರಕಾರದ ಟ್ರಿಝುರಿಯಲ್ಲಿಟ್ಟರೆ ಬಡ್ಡಿ ಬರುವದಿಲ್ಲೆಂದೂ ಕರ್ನಾಟಕ ಸೆಂಟ್ರಲ್ ಬ್ಯಾಂಕಿನಲ್ಲಿ ಇಟ್ಟರೆ ಬಡ್ಡಿಯು ಬರುತ್ತದೆಂದೂ ಒಂದು ಲಕ್ಷ ರೂಪಾಯಿಗಳನ್ನು ಒಂದು ವರ್ಷದ ಮುದ್ದತಿ ಠೇವಿನಲ್ಲಿ ಇಡತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೩ ಆಫೀಸಿನಿಂದ ತಯಾರಿಸಲ್ಪಟ್ಟ ೧೯೨೩-೨೪ ಸಾಲಿನ ಮೂಲ ಅಂದಾಜು ಪತ್ರಿಕೆಯು ಸರ್ವಾನುಮತದಿಂದ ಪಾಸಾಯಿತು.

೪ ಬೋರ್ಡಿನಿಂದ ಹೊಸದಾಗಿ ತೆಗೆಯಲ್ಪಟ್ಟ ಹೆಂಣುಮಕ್ಕಳ ಶಾಲೆಗಳಿಗೆ ಕಸೂತಿಬಾಯಿ ಮತ್ತು ಚಾಕರೀಬಾಯಿ ನೇಮಣೂಕಿಯನ್ನು ಮಂಜೂರ ಮಾಡಲಿಕ್ಕೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೫ ಶಿಕ್ಷಣ ಖಾತೆಯ ತಾರೀಖು ೨೧-೧೦-೨೪ ನಂ. ಇ. ಜಿ. ೧೫೨೯ನೇ ಪತ್ರವು ಓದಲ್ಪಟ್ಟು ವಿಚಾರ ಮಾಡಲ್ಪಟ್ಟಿತು ಮತ್ತು ಸರಕಾರವು ಅಗ್ರಿಕಲ್ಚರಲ್ ಬಾಯಸ್ ಸ್ಕೂಲುಗಳಿಗೆ ಮಂಜೂರ ಕೊಡುವವರೆಗೆ ದೇವಿಹೊಸೂರ ಶೇತಕಿ ಶಾಲೆಗೆ ಬೋರ್ಡಿನ ಯಾವ ಶಿಕ್ಷಕರನ್ನು ಕಳಿಸತಕ್ಕದ್ದಲ್ಲವೆಂದು ಸರ್ವಾನುಮತದಿಂದ ನಿರ್ಧಾರವಾಯಿತು.

೨೯-೩-೨೪.

೧ ಶ್ರೀ. ಎಸ್. ಕೆ. ಹೊಸಮನಿ. (ಚೇರಮನ್)
೨ ,, ಜಿ. ಆರ್. ನಲವಡಿ. (ವ್ಹಾಯಿಸ್ ಚೇರಮನ್)
೩ ,, ಎಸ್. ಕೆ. ಬಣಗಾರ.
೪ ,, ಲಿಂಗಪ್ಪಾ ಬೂದಿಹಾಳ.
೫ ,, ಚನ್ನಪ್ಪಗೌಡಾ ಪಾಟೀಲ.
೬ ,, ಬಸನಗೌಡಾ ಪಾಟೀಲ.
೭ ,, ಯಲ್ಲಪ್ಪಾ ಸಾಂಬ್ರಾಣಿ.
೮ ,, ಬಸಪ್ಪಾ ಕಲ್ಲಣ್ಣವರ.
೯ ಮೇ. ಸೈಯ್ಯದ ಫಕರುದ್ದೀನ.
೧೦ ಶ್ರೀಮತಿ ಲಕ್ಷ್ಮೀಬಾಯಿ ಕುಂಭಕೋಣಂ.

೧ ನಾನ್‌ಲೋಕಲ್ ಅಥಾರಿಟಿ ಮುನಸಿಪ್ಯಾಲಿಟಿ ಸಾಲೆಗಳ ಬಗ್ಗೆ ೧೯೨೪-೨೫ ನೇ ಸಾಲಿನ ಅಂದಾಜು ಪತ್ರಿಕೆಯು ಸರ್ವಾನುಮತದಿಂದ ಪಾಸಾಯಿತು.

೨ ದ. ಭಾ. ಎ. ಇನಸ್ಪೆಕ್ಟರರ ತಾರೀಖು ೧೦-೩-೨೪ ನೇ ಇಸ್ವಿಯ ೫೭೪-೨೩೪೮ನೇ ಪತ್ರವು ಓದಲ್ಪಟ್ಟು ವಿಚಾರಿಸಲ್ಪಟ್ಟಿತು ಮತ್ತು ಸದ್ಯಕ್ಕೆ ಟ್ರೇಂಡ ಶಿಕ್ಷಕರ ಪ್ರಮಾಣವು ೧೦೦ ಕ್ಕೆ ೭೭ ರಂತೆ ಇದ್ದು ಬಹಳೇ ಹೆಚ್ಚಾಗಿರುವದರಿಂದ ಧಾರವಾಡ ಟ್ರೇನಿಂಗ ಕಾಲೇಜಕ್ಕೆ ಉಮೇದವಾರರನ್ನು ಕಳಿಸುವ ಅವಶ್ಯವಿಲ್ಲೆಂದು ಬೋರ್ಡಿನವರು ಬರೆಯತ್ತಾರೆ. ಆದರೆ ಪ್ರಾ. ಶಿ. ೩ ನೆಯ ನಿಯಮಕ್ಕನುಸರಿಸಿ ರೋಣ ಧೇಡ ಸಾಲೆಯ ದುರ್ಗಪ್ಪ ಹವಳಪ್ಪ ಮಾದರ ಎಂಬ ಶಿಕ್ಷಕನನ್ನು ಟ್ರೇನಿಂಗ ಸ್ಕೂಲಿಗೆ ನಿಯಮದಲ್ಲಿ ಹೇಳಿದಷ್ಟು ವೇತನವನ್ನು ಕೊಟ್ಟು ಈ ವರ್ಷ ಕಳಿಸತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೩ ಕೆಳಗೆ ಕಾಣಿಸಿದ ಹೊಸ ಶಾಲೆಗಳ ಕಟ್ಟಡಗಳನ್ನು ೧೯೨೪-೨೫ ನೇ ಸಾಲಿನಲ್ಲಿ ಕಟ್ಟಿಸುವ ಕೆಲಸವನ್ನು ಲೋ. ಬೋರ್ಡಿನವರು ಕೈಕೊಳ್ಳಬೇಕೆಂದು ಮತ್ತು ಇನ್ನೂ ಕೆಲವು ಕಟ್ಟಡಗಳ ಬಗ್ಗೆ ಸಿಫಾರಸ ಮಾಡಬೇಕೆಂದು ಸರ್ವಾನುಮತದಿಂದ ಪಾಸಾಯಿತು.

ನಂ.	ಗ್ರಾಮದ ಹೆಸರು.	ತಾಲೂಕ.	ಹುಡುಗರಿಗೆ ಇಂಬು
೧	ನವಲೂರ (ಕನ್ನಡ-ಉರ್ದು).	ಧಾರವಾಡ.	೧೨೦ + ೪೦
೨	ಗುತ್ತಲ (ಉರ್ದುಶಾಲೆ)	ಕರ್ಜಗಿ.	೬೦
೩	ಕುಸ್ಕೂರ.	ರಾಣೇಬಿನ್ನೂರ.	೧೦೦
೪	ನೇಸ್ವಿ.	ಕೋಡ.	೮೦
೫	ಚಿನ್ನಮುಳಗುಂದ.	,,	೧೨೦
೬	ನೀರಲಗಿ.	ಬಂಕಾಪೂರ.	೪೦
೭	ಶರೀವಾಡ.	ಹುಬ್ಬಳ್ಳಿ.	೮೦
೮	ಶಿವಳ್ಳಿ.	ಧಾರವಾಡ.	೪೦
೯	ಹಾವನೂರ (ಬೆಳಿಸಿದ್ದು).	ಕರ್ಜಗಿ.	೧೪೦
೧೦	ನದಿಹರ್ಲಹಳ್ಳಿ.	ರಾಣೇಬಿನ್ನೂರ.	೬೦
೧೧	ಗುಜಮಾಗಡಿ.	ರೋಣ.	೪೦

ಧಾರವಾಡ ಜಿಲ್ಲೆಯೊಳಗಿನ ಲೊ. ಬೋ. ಹೊಸ ಶಾಲೆಗಳು.

ಉರ್ದು ಗಂಡುಹುಡುಗರ ಶಾಲೆಗಳು.

೧ ದೇವಿಹೊಸೂರ.
೨ ಹೆಬಸೂರ.
೩ ಹತ್ತಿಮತ್ತೂರ.
೪ ಶಿರೋಳ.
೫ ಬೆಳಗಾಲಪೇಠ.

ಉರ್ದು ಹೆಣ್ಣುಮಕ್ಕಳ ಶಾಲೆಗಳು.

೬ ನವಲಗುಂದ.
೭ ಹಿರೇಕೇರೂರ.

ಕನ್ನಡ ಹೆಣ್ಣುಮಕ್ಕಳ ಶಾಲೆಗಳು.

೮ ಇಂಗಳಗಿ.
೯ ಹರ್ತಿ.
೧೦ ಬ್ಯಾಹಟ್ಟಿ.
೧೧ ಉಣಕಲ್ಲ.
೧೨ ಹಾಂಸಭಾವಿ.
೧೩ ಕೊಂಣೂರ.
೧೪ ಶಿರೋಳ.
೧೫ ಹೊಳೆ ಆಲೂರ.

ಕನ್ನಡ ಗಂಡು ಹುಡುಗರ ಶಾಲೆಗಳು.

(ಬಂಕಾಪೂರ ತಾಲೂಕ).
೧೬ ಮುಂತ್ರೋಡಿ.
೧೭ ಮುಗಳಿ.
೧೮ ಪಾಣೇಗಟ್ಟಿ.
೧೯ ಧುಂಡಸಿ (ಲಮಾಣಿ ತಾಂಡೆ.)
(ಧಾರವಾಡ ತಾಲೂಕ).
೨೦ ಮಾರಡಗಿ.
೨೧ ಸಿಂಗನಹಳ್ಳಿ.
೨೨ ಬೇಲೂರ.
(ಗದಗ ತಾಲೂಕ).
೨೩ ನಾಗಸಮುದ್ರ.
೨೪ ಬಿಂಕದಕಟ್ಟಿ.
(ಹಾನಗಲ್ಲ ತಾಲೂಕ).
೨೫ ಹಿರೇಹುಲ್ಲಾಳ.
೨೬ ಯಳವತ್ತಿ.
೨೭ ಕೂಡಲ.
(ಹುಬ್ಬಳ್ಳಿ ತಾಲೂಕ).
೨೮ ಗೋಕುಲ.
೨೯ ಕಂಪ್ಲಿಕೊಪ್ಪ.
೩೦ ಬಿಳೇಬಾಳ.
(ಕಲಘಟಗಿ ತಾಲೂಕ).
೩೧ ರಾಮನಾಳ.
(ಕರ್ಜಗಿ ತಾಲೂಕ).
೩೨ ಭರಡಿ.
೩೩ ಹಳೇರಿತ್ತಿ.
೩೪ ಗುಂಡೇನಹಳ್ಳಿ.
೩೫ ಕೊರಡೂರ.
೩೬ ಬಸಾಪೂರ.
೩೭ ಹಿರೇಲಿಂಗಧಳ್ಳಿ.
(ಕೋಡ ತಾಲೂಕ).
೩೮ ಚಿಕ್ಕ ಕಬ್ಬೂರ.
೩೯ ಅರಳಿಕಟ್ಟಿ.
೪೦ ಮತ್ತೂರ.
೪೧ ಫಲಪುಜ.
(ನವಲಗುಂದ ತಾಲೂಕ).
೪೨ ಬೆಳಹಾರ.
೪೩ ಗೊಬ್ಬರಗುಂಪಿ.
(ರಾಣೆಬೆನ್ನೂರ ತಾಲೂಕ).
೪೪ ಬೇಲೂರ.
೪೫ ಚಿಕ್ಕಕುರವತ್ತಿ.
೪೬ ಲಿಂಗಧಳ್ಳಿ.
೪೭ ಮಾಗೋಡ.
೪೮ ಮೋಟಿಬೆನ್ನೂರ (ಥೇಡಸ್ಕೂಲ).
೪೯ ಎರೆಕುಪ್ಪಿ.
(ರೋಣ ತಾಲೂಕಾ).
೫೦ ಕಳಕಾಪೂರಿ.

ಹೊಸದಾಗಿ ತೆಗೆದ ಶಾಲೆಗಳಬಗ್ಗೆ ನೇಮಿಸಿದ ಶಿಕ್ಷಕರು.

ಮುಸಲ್ಮಾನರು.

೧ ಅಬ್ದುಲ್ ಮುನಾಫ, ಮಹಮೂದಸಾಬ, ಉಪ್ಪಿನ ಬೆಟಗೇರಿ (ಉರ್ದು)
೨ ಮಹಮ್ಮದಹುಸೇನ, ಮಕ್ತುಮಸಾಬ ಸೋಮನಕೊಪ್ಪ (,,)
೩ ಮೋದೀನಸಾಬ ಮದಾರಸಾಬ ಮುಲ್ಲಾ, ಬದಲೀಮಾಸ್ತರ ಸವಡಿ (,,)
೪ ಬಿ. ಜಿ. ಕಾಗದ, ಬದಲೀ ಮಾಸ್ತರ ಪಾಪನಾಶಿ (ಕನ್ನಡ)
೫ ಕೆ. ಬಿ. ಪಿಂಜಾರ ,, ,, ಶಿಂಗಟರಾಯನಕೇರಿ (,,)
೬ ಕೆ. ಜಿ. ಕಿಲ್ಲೇದಾರ ,, ,, ಕುಡುಪಲಿ (,,)
೭ ಇಮಾಮಸಾಬ ನೂರಸಾಬ ಯಾಲಕ್ಕಿ, ಅಬ್ಬಿಗೇರಿ (,,)

ಇತರ ಜಾತಿಯವರು

೧ ಬಸವ್ವಾ ಸುಣಗಾರ ಆಲೂರ ಹಾನಗಲ್ಲ ಕಲಾಲ.
೨ ಹನಮಂತಪ್ಪಾ ಭೀಮವ್ವಾ ನಾವಳ್ಳಿ ಗುಡಿನಾಗರ ಗೊಲ್ಲ.
೩ ರಾಮಪ್ಪಾ ಬಸಪ್ಪಾ ಅನವಾಲ ಸಾ॥ ಹೆಬಸೂರ ,,
೪ ಎಲ್ಲಪ್ಪಾ ಸಂಣಪ್ಪಾ ಗೊಂದಲಗೇರ ಸಾ॥ ಯಾವಗಲ್ಲ ಗೊಂದಲಗೇರ
೫ ಶಿವನಗೌಡಾ ಬಸನಗೌಡಾ ಸಂಕನಗೌಡರ ಸಾ॥ ಪಡೇಸೂರ ಜೈನ.
೬ ಮಹಾದೇವ ಜಿನ್ನಪ್ಪಾ ಅಪ್ಪಣ್ಣವರ ಸಾ॥ ಮಲ್ಲಿಗವಾಡ ,,
೭ ಭೀಮದಾಸ ವೆಂಕದಾಸ, ಬಾಸರನಾಗನೂರ ನವಲಗುಂದ ದಾಸರ.
೮ ತಿರಕಪ್ಪಾ ಭರಮಪ್ಪಾ ಮಾದರ ಸಾ॥ ಕುಸ್ಕೂರ ಅಸ್ಪೃಶ್ಯ
೯ ಹುನುಮಂತ ತಲ್ಲಘಟ್ಟಿ ,,
೧೦ ಅಮೃತರಾವ ಮಾಧವರಾವ ಘೋರ್ಪಡೆ, ನೂಲ್ವಿ ಮರಾಠಾ
೧೧ ತಿಪ್ಪಣ್ಣಾ ಎಲ್ಲಪ್ಪಾ ಗಂಗಾಧರ (ಬದಲೀಮಾಸ್ತರ) ಧುಮ್ಮವಾಡ ,,
೧೨ ಹಣಮಾಬಾಯಿ ಬೆಗಳ್ಳಿ ಬದಲೀ ಮಿಸ್ಟ್ರೆಸ್ ಕಳಸ ,,
೧೩ ಜೀವಪ್ಪಾ ಫಕೀರಪ್ಪಾ ತಳವಾರ ಕೋಟುಮಚಗಿ ತಳವಾರ
೧೪ ಮುಡಿಯಪ್ಪಾ ಫಕೀರಪ್ಪಾ ಗುಳಗುಂಡಿ ಬಳಗಾನೂರ ,,
೧೫ ಬಾಲಪ್ಪಾ ಪರಸಪ್ಪಾ ಮ್ಯಾಗೇರಿ ಎರಿಬೇಲೇರಿ ,,
೧೬ ಬಸಪ್ಪಾ ಫಕೀರಪ್ಪಾ ತಳವಾರ, ಅಡ್ಡೂರ ,,

೧೭ ಶಿದ್ದಪ್ಪಾ ಲಿಂಗಪ್ಪಾ ಜ್ಯಾಬಂಣವರ ಸಾ॥ ಕುಸುಗಲ್ಲ ಕುರಬರು.
೧೮ ಫಕೀರಪ್ಪಾ ಭರಮಪ್ಪಾ ಕೊಂಗವಾಡ ,,
೧೯ ಹೊನಕೇರಪ್ಪಾ ಜುಮ್ಮಪ್ಪಾ ನಾಯಕರ ಅಬ್ಬೀಗೇರಿ ,,
೨೦ ರಾಮಪ್ಪಾ ಫಕೀರಪ್ಪಾ ಮುಶಿಪ್ಪನವರ ಸಾ॥ ಯರಗುಪ್ಪಿ ,,
೨೧ ಮಹಾದೇವಪ್ಪಾ ಎಲ್ಲಪ್ಪಾ ಕುಸುಗಲ್ಲ ಇಂಗಳಹಳ್ಳಿ ,,
೨೨ ಬಸಪ್ಪಾ ಎಲ್ಲಪ್ಪಾ ಗಿರಡ್ಡಿ ಹಳ್ಳೀಕೇರಿ (ನವಲಗುಂದ) ರಡ್ಡೇರ.
೨೩ ಭೀಮಪ್ಪಾ ಕೃಷ್ಣಪ್ಪಾ ಕಿತ್ತೂರ ಕರ್ಲವಾಡ ,,
೨೪ ಭೀಮನಗೌಡಾ ಹನಮಂತಗೌಡಾ ಪಾಟೀಲ ಕೊಂಣೂರ. ,,
೨೫ ಚಿನ್ನಪ್ಪಗೌಡಾ ಮುದಿಗೌಡಾ ಗಡ್ಡೀಗೌಡರ
ಸಾ॥ ರಡ್ಡೇರ ನಾಗನೂರ. ,,
೨೬ ರಿಂದವ್ವಾ ಕೋಂ ತಿಮ್ಮಪ್ಪಾ ನಲವಡಿ ,

ಬ್ರಾಹ್ಮಣರು.

೧ ಮಹಾದೇವ ಜೀವಾಜಿ ಗಳಿಗಿ ಲಕ್ಕುಂಡಿ
೨ ಜಗನ್ನಾಥ ಲಕ್ಷ್ಮಣ ಕುಲಕರ್ಣಿ ಕಲಘಟಗಿ (ಬದಲೀ ಅ.) ನವಲಗುಂದ
೩ ಸೋಮರಾವ ವೆಂಕಟೇಶ ಕುಲಕರ್ಣಿ ಹಳ್ಳೀಕೇರಿ (ಗದಗ)
೪ ಭೀಮಾಜಿ ಹನುಮಂತ ಸಬ್ನೀಸ ಧುಂಡಸಿ
೫ ವಿನಾಯಕ ಹಣಮಂತ ಕಾನಡೆ ಕರ್ಜಗಿ

ಲಿಂಗಾಯತರು

೧ ರುದ್ರಗೌಡಾ ಉಜ್ಜನಗೌಡಾ ಪಾಟೀಲ
೨ ವೀರಪ್ಪಾ ರಾ. ಎಲಿಗಾರ (ಬದಲೀ ಮಾಸ್ತರ) ನಿಗದಿ ದೀವಿಗಿಹಳ್ಳಿ.
೩ ಶಿದ್ರಾಮಪ್ಪಾ ಅಂಗಡಿ ಕರ್ಲವಾಡ
೪ ಗೂಳಯ್ಯಾ ಬಸಯ್ಯಾ ಮಠದ ಬದಲಿ ಮಾಸ್ತರ ಶಲವಡಿ
೫ ವಿರುಪಾಕ್ಷಪ್ಪಾ ರಾಮಾಣಿ (ಬದಲಿ ಮಾಸ್ತರ) ಹುಲಕೋಟಿ
೬ ಲಕ್ಷ್ಮಣಗೌಡಾ ದಾನಪ್ಪಗೌಡಾ ಪಾಟೀಲ ಸಾ॥ ಬಲ್ಲರವಾಡ
ತಾ॥ ನವಲಗುಂದ
೭ ಬಸವಂಣಯ್ಯಾ ರಾಚಯ್ಯಾ ಕಂಬಾಳಿಮಠ
೮ ಭೀಮನಗೌಡಾ ಲಿಂಗನಗೌಡಾ ಪಾಟೀಲ ಬೆನಕನಕೊಪ್ಪ
ತಾ॥ ನವಲಗುಂದ
೯ ಲಿಂಗಪ್ಪಾ ಬಸಪ್ಪಾ ಡೊಣಗಣ್ಣವರ ಸಾ॥ ಹಳ್ಳಿಯಾಳ
೧೦ ಫಕೀರಪ್ಪಾ ಚನ್ನಪ್ಪಾ ಕೋಳಿವಾಡ ಸಾ॥ ಕೋಳಿವಾಡ
೧೧ ತಿಮ್ಮಪ್ಪಾ ಸಂಗಪ್ಪಾ ಸವಡಿ ಸಾ॥ ರೋಣ
೧೨ ಮಲ್ಲನಗೌಡಾ ರೇಕನಗೌ ಪಾಟೀಲ ಬಳಗಾನೂರ

ಶಿಕ್ಷಕರು ಕಡಿಮೆ ಇದ್ದ ಶಾಲೆಗಳಿಗೋಸುಗ ನೇಮಿಸಲ್ಪಟ್ಟ ೫೧ ಜನ ಅಸಿಷ್ಟಂಟ ಶಿಕ್ಷಕರು.

ಅಸ್ಪೃಶ್ಯರು.

೧ ದೇವಪ್ಪಾ ಗಂಗವ್ವಾ ಕಾಳಿ ಹಾವನೂರ (ಕರ್ಜಗಿ)
೨ ಯಲ್ಲಪ್ಪಾ ಕೆಂಜಪ್ಪಾ ಮಚಿಗಾರ (ಕಲಘಟಗಿ).

ಮುಸಲ್ಮಾನರು.

ಉರ್ದುಶಾಲೆಗಳಬಗ್ಗೆ.

೧ ಮಹಾಬೂಬ ಜಕಾತಿ, ಬಂಕಾಪೂರ
೩ ರಾಜೇಖಾನ ಅಬ್ದುಲ್‌ಖಾನ ಲೋಡಿ, ನರಗುಂದ
೩ ಮಹಮ್ಮದಸಾಬ ಮಹಾಬೂಬಸಾಬ, ಕೋಟಮುಚಗಿ
೪ ಅಮೀನಸಾಬ ರಾಜೇಸಾಬ ಕಿಲ್ಲೇದಾರ
೫ ಅಬ್ದುಲ್‌ಖಾದರ ಅಬ್ದುಲ್‌ಕಾಸೀಮ ಸಿಗ್ಲಾಂವ
೬ ಪಖುರುದ್ದೀನ ಬುಡನಸಾಬ ತುಮ್ಮಿನಕಟ್ಟಿ
೭ ಅಬ್ದುಲ್‌ವಹಾಬ ಮೋದಿನಸಾಬ ಖಾಜಿ, ಅಂಣಿಗೇರಿ
೮ ಮುಸ್ತಾಫಾ ಮಖಾನದಾರ, ಗದಗ

ಕನ್ನಡ ಶಾಲೆಗಳಿಗೆ.

೯ ಮಹಮ್ಮದಗೌಸ ಹುಶೇನಸಾಬ ಸಿವಮೊಗ್ಗಾ, ಹಿರೇಕೆರೂರ
೧೦ ಹುಸೇನಸಾಬ ಇಮಾಮಸಾಬ ಪಿಂಜಾರ, ಹುಲಕೋಟಿ
೧೧ ಅಬ್ದುಲ್ ಗಫಾರ ರಾಜೇ ಅಮ್ಮದ ಪೀರಜಾದೆ, ನವಲಗುಂದ

ಇತರ ಜಾತಿಯವರು.

೧ ಭರಮಪ್ಪಾ ರಾಮಪ್ಪಾ ವಡ್ಡರ) ಸಿರಗುಪ್ಪಿ	ವಡ್ಡರ
೨ ರಾಮಾ ಧನಜಿ ಲಮಾಣಿ	ಲಮಾಣಿ
೩ ಕೆಂಜಪಾ ಲಿಂಗಪ್ಪಾ ತಳವಾರ, ದಾಸ್ತಿ ಕೊಪ	ತಳವಾರ
೪ ಪಕ್ಕೀರಪ್ಪಾ ಯಮನಪ್ಪಾ ತಳವಾರ ಲೋಗನೂರ	,,
೫ ದೇವೇಂದ್ರಪ್ಪಾ ಉಡಚಪ್ಪ ಅಡವಿಯವರ ಕಾಡನಪೂರ	,,
೬ ಹನಮಂತಪ್ಪಾ ಯಲ್ಲವ್ವಾ ತಳವಾರ	,,
೭ ಪಕ್ಕೀರಪ್ಪಾ ಹನಮಪ್ಪಾ ನಾಯಕರ, ಅಮರಗೊಳ ನವಲಗುಂದ	ಕುರಬರ
೮ ಮಹಾದೇವಪ್ಪಾಸಿಂಗಪ್ಪಾ ಹೊನ್ನಿಹಳ್ಳಿ ಸಿರಗುಪ್ಪಿ, ಹುಬ್ಬಳ್ಳಿ	,,
೯ ಸಿದ್ದಪ್ಪಾ ಪಕ್ಕೀರಪ್ಪಾ ಬಡಪಕ್ಕೀರಪ್ಪನವರ ಮಲ್ಲಿಗವಾಡ	,,
೧೦ ಬಸಲಿಂಗಪ್ಪಾ ಮಲ್ಲಪ್ಪಾ ಕಸವಾಲ, ಡಂಬಳ ಗದಗ	,,
೧೧ ಶಿವರಾಯಪ್ಪಾ ಸಂಗಪ್ಪಾ ಗ್ಯಾನಪ್ಪನವರ ಅಮರಗೋಳ ನವಲಗುಂದ	,,

೧೨ ಯಲ್ಲಪ್ಪಾ ರಾಜಪ್ಪಾ ಖೇತ್ರಿಖಾನನವರ, ಕಲಘಟಗಿ ಮರಾಠರು.
೧೩ ಸಂಗಪ್ಪಾ ರಾಮಪ್ಪಾ ಹವಾಲದಾರ ಅಂಣೀಗೇರಿ ,,
೧೪ ಪಕ್ಕೀರಪ್ಪಾ ಬಸಪ್ಪಾ ಆರೇರ, ಕೊಂಕಣ ಕುರಹಟ್ಟಿ, ಹುಬ್ಬಳ್ಳಿ ,,
೧೫ ತಾರಾಸಿಂಗ ಗೋವಿಂದಸಿಂಗ ಬಳಗಾನೂರ ರಜಪೂತ.
೧೬ ರಾಮಚಂದ್ರ ವೆಂಕಟೇಶ ಬಸಿಡೋಣಿ ಕುರಗೋವಿನಕೊಪ್ಪ ನವಲಗುಂದ ಇತರ.
೧೭ ಹನಮಂತಪ್ಪಾ ಪರಶುರಾಮಪ್ಪಾ ಪತಂಗಿ ಕೋಟಮುಚಗಿ ಗದಗ ,,
೧೮ ಸೋಮಪ್ಪಾ ಮಲ್ಲಪ್ಪಾ ವಿಭೂತಿ ರಾಣೇಬಿನ್ನೂರ ,,
೧೯ ಮಾನಪ್ಪಾ ಲಿಂಗಪ್ಪಾ ಕಮ್ಮಾರ ಅಳಗವಾಡಿ ನವಲಗುಂದ ಪಂಚಾಳರು.
೨೦ ಚಿಕ್ಕನಗೌಡಾ ಮರಿಗೌಡಾ ಪಾಟೀಲ ನವಲಗುಂದ ಜೈನರು.

ರಡ್ಡೇರು.

೧ ವೆಂಕಪ್ಪಾ ಪಕ್ಕೀರಪ್ಪಾ ಮಾಕೊಳ್ಳ, ಹೆಬಸೂರ ಹುಬ್ಬಳ್ಳಿ
೨ ಬಸವರಡ್ಡಿ ವೆಂಕರಡ್ಡಿ ನಾವಳ್ಳಿ ತಿರ್ಲಾಪೂರ
೩ ಗೋವಿಂದಪ್ಪಾ ಅಡಿವೆಪ್ಪಾ ಕುರಟ್ಟಿ ಅಳಗವಾಡಿ
೪ ಭೀಮರಡ್ಡಿ ಹನಮರಡ್ಡಿ ರಡ್ಡೇರ ಹುಲಿಹಳ್ಳಿ ರೋಣ

ಲಿಂಗಾಯತರು.

೧ ಎ. ಎಚ್. ಹಿರೇಮಲ್ಲಾಪೂರ ಮುಂಟೂರ ಹುಬ್ಬಳ್ಳಿ
೨ ಸೊಲಬಯ್ಯಾ ಸೋಮಯ್ಯಾ ಸಾಲೀಮಠ, ಬೆಳವಟಗಿ, ನವಲಗುಂದ
೩ ಕ್ಯಾತಪ್ಪಾ ಬಸಪ್ಪಾ ಕಮಡೊಳ್ಳಿ, ಕಿರೇಸೂರ, ಹುಬ್ಬಳ್ಳಿ
೪ ಸೋಮಪ್ಪಾ ಯಲ್ಲಪ್ಪಾ ಕಮಡೊಳ್ಳಿ, ಕಿರೇಸೂರ, ಹುಬ್ಬಳ್ಳಿ
೫ ತೋಟಪ್ಪಾ ಸಂಕಪ್ಪಾ ಚಿಪ್ಪಡಿ, ಇಬ್ರಾಹಿಮಪೂರ, ನವಲಗುಂದ
೬ ಅಡವೆಯ್ಯಾ ಸಂಗಯ್ಯಾ ಹಾಳಕೇರಿ, ಅಬ್ಬಿಗೇರಿ, ರೋಣ
೭ ಹೊಳಿಯಪ್ಪಾ ಅಯ್ಯಪ್ಪಾ ಕುರಹಟ್ಟಿ, ಸವಡಿ, ರೋಣ
೮ ಚನ್ನಪ್ಪಾ ಮರಿಯಪ್ಪಾ ಮುಂಗಲಿ, ದಾಸ್ತೀಕೊಪ್ಪ, ಕಲಘಟಗಿ
೯ ವೀರಪ್ಪಾ ನಾಗಪ್ಪಾ ನೆಗಳೂರ, ಬೆಳಗಾಲಪೇಟ
೧೦ ಬಸಪ್ಪಾ ಮಲ್ಲಪ್ಪಾ ಬೆಂತೂರ, ಕುರ್ತಕೋಟಿ, ಗದಗ
೧೧ ಲಿಂಗಪ್ಪಾ ಸಿವಪ್ಪಾ ನಾಯಕರ, ನಲವಡಿ, ನವಲಗುಂದ
೧೨ ಸಿದಲಿಂಗಪ್ಪಾ ಸಿದಬಸಪ್ಪಾ ಹೊಸೂರ, ಸಿಡೇನೂರ
೧೩ ಮಹಾದೇವಪ್ಪಾ ದೊಡ್ಡ ಹಾಲಪ್ಪಾ ಹರಿಹರ, ಇಟಗಿ, ರಾಣೇಬಿನ್ನೂರ
೧೪ ಗದಿಗೆಪ್ಪಾ ಸೋಮಪ್ಪಾ ಕೆರೂರ, ಹತ್ತೀಮತ್ತೂರ, ಕರ್ಜಗಿ

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ

ಸನ್ ೧೯೨೮-೨೯ ಸಾಲಿನ ಅಂದಾಜ ಪತ್ರಿಕೆಯ

ಆಯದ ಬಾಬುಗಳು.

ಬಾಬುಗಳು.	ರೂ.	ಅ.	ಪೈ
ಎಜ್ಯುಕೇಶನ್ ಸೆಸ್ಸ.	೬೭೦೭೪	೦	೦
ಜಬಕಾರಿ ಉತ್ಪನ್ನ.	೫೮೧೯	೦	೦
ಶಾಲೆಗಳಿಂದ ಫೀ. ವಸೂಲ.	೧೬೦೪೧	೦	೦
ಸರಕಾರದಿಂದ ಗ್ರ್ಯಾಂಟು.	೭೩೫೪೪೬	೦	೦
ಡೆಡ್‌ಸ್ಟಾಕ ಮತ್ತು ಪುಸ್ತಕಗಳ ಮಾರಾಟ.	೧೫೦	೦	೦
ಸರಕಾರದಿಂದ ಸಾಲ.	೧೦೦೦೦	೦	೦
ಕಂಟ್ರಾಕ್ಟರರಿಂದ ಅಡ್ವಾನ್ಸ	೧೨೦೩೭	೦	೦
ವಾರಲೋನದ ಮೇಲಿನ ಬಡ್ಡಿ	೬೦೦	೦	೦
ಶಾಲೆಗಳ ಕಟ್ಟಡಗಳ ಬಗ್ಗೆ ಸರಕಾರದಿಂದ ಗ್ರ್ಯಾಂಟು....	೪೫೧೫೭	೦	೦
ಒಟ್ಟು ಬೆರೀಜು.	೮೯೨೧೯	೦	೦
ಹೋದ ವರ್ಷದ ಶಿಲ್ಕು.	೨೬೬೦೧೮	೦	೦
ಅಂತೂ.	೧೧೫೫೧೭೭	೦	೦

ಧಾರವಾಡ ಜಿಲ್ಲಾ ಸ್ಕೂಲಬೋರ್ಡಿನ

ಸನ: ೧೯೨೮-೨೯ ಸಾಲಿನ ಅಂದಾಜಪತ್ರಿಕೆಯ

ವ್ಯಯದ ಬಾಬುಗಳು.

ಬಾಬುಗಳು.	ರೂ.	ಆ.	ಪೈ.
ಶಿಕ್ಷಕರ ಪಗಾರ.	೬೦೩೪೦೭	೦	೦
ಟ್ರೇಂಡ ಶಿಕ್ಷಕರಿಗೆ ಭಡತಿ.	೬೭೪೪	೦	೦
ಅನ್‌ಟ್ರೇಂಡ ಶಿಕ್ಷಕರಿಗೆ ಭಡತಿ.	೫೬೦	೦	೦
ಹೆಡ್‌ಮಾಸ್ತರರ ಮತ್ತು ೧ನೇ ಅಸಿಸ್ಟಂಟರ ಅಲಾವನ್ಸು. ...	೫೦೪೬೬	೦	೦
ಕಸೂತಿ ಬಾಯಿ ಪಗಾರ.	೬೭೩೦	೦	೦
ಡಾಕರರ ಪಗಾರ.	೬೪೪೪	೦	೦
ಬಾಡಿಗಿ.	೯೯೫೦	೦	೦
ಸಾದಿಲವಾರ.	೧೫೦೨೫	೦	೦
ಟ್ರಾವಲಿಂಗ ಅಲಾವನ್ಸು.	೧೮೦೦	೦	೦
ಫರ್ನಿಚರ.	೧೫೦೦	೦	೦
ಪುಸ್ತಕ ಮತ್ತು ನಕಾಶೆಗಳು.	೭೧೦	೦	೦
ಇನಾಮು.	೩೮೦	೦	೦
ಟ್ರೇನಿಂಗ್ ಟ್ರಾಯಿಬ ಹುಡುಗರಿಗೆ ಪುಸ್ತಕ	೩೮೦	೦	೦
೬ಂದುಳಿದ ವರ್ಗದ ಜಾತಿಯ ವಿದ್ಯಾರ್ಥಿಗಳಿಗೆ ಪುಸ್ತಕ ...	೫೦೦	೦	೦
ಅಸ್ಪೃಸ್ಯ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಪಾಟೀ ...	೨೫೮೮	೦	೦
ಕಾರ ಅಲಾವನ್ಸು.	೭೪೪೦	೦	೦
ಡ್ರಿನಿಸ್ಟ್ರೇಟಿವ್ಹ ಆಫೀಸರ ಪಗಾರ.	೪೦೦೦	೦	೦
೦ಟು ಜನ ಸುಪರವಾಯಝುರರ ಪಗಾರ.	೮೦೪೦	೦	೦
ರುಜನ ಕಾರಕೂನರ ಪಗಾರ.	೪೭೧೦	೦	೦
ನ್ನೆರಡುಜನ ಟಪಾಯರ ಪಗಾರ.	೨೧೯೬	೦	೦
ಓ. ಆಫೀಸರ ಸಾದಿಲವಾರ.	೨೫೮	೦	೦
ಸುಪರವಾಯಝುರರ ಸಾದಿಲವಾರ.	೬೦೦	೦	೦
ಓ. ಸ್ಟೇಶನರಿ.	೫೦೦	೦	೦
ಓ. ಟಪಾಲ ಖರ್ಚು.	೧೫೦೦	೦	೦
ಸುಪರವಾಯಝುರರ ಟಪಾಲ ಖರ್ಚು.	೨೦೦	೦	೦
ಡ್ರಿನಿಸ್ಟ್ರೇಟಿವ್ಹ ಆಫೀಸರನ ಫಿರ್ತಿ ಅಲಾವನ್ಸು	೯೮೦೦	೦	೦
ಪರವಾಯಝುರರ ಫಿರ್ತಿ ಅಲಾವನ್ಸು	೪೨೦೦	೦	೦
ಅರಮನ್ನರ ಫಿರ್ತಿ ಅಲಾವನ್ಸು.	೧೨೦೦	೦	೦
೦ಬರ ಫಿರ್ತಿ ಅಲಾವನ್ಸು.	೨೪೦೦	೦	೦
ಓ. ಮತ್ತು ಸ್ಟಾಫ್ ಪ್ರಾರಂಭದ ಖರ್ಚು	೧೨೫೦	೦	೦
ಸ್ಕೂಲಬೋರ್ಡ ಆಫೀಸ ಲಾಯಬ್ರರಿ ಪುಸ್ತಕಗಳು	೨೦೦	೦	೦
ಮೆ ಜನ ಶಿಕ್ಷಕರಿದ್ದ ಶಾಲೆಗಳ ಬಗ್ಗೆ ೫೧ ಜನ ಹೆಚ್ಚಿನ ಅಸಿಸ್ಟಂಟರ ಪಗಾರ. ...	೧೪೧೨೦	೦	೦

ಬಾಬುಗಳು.	ರೂ.	ಆ.	ಪೈ.
ಹೊಸದಾಗಿ ತೆಗೆಯುವ ೫೦ ಶಾಲೆಗಳ ಬಗ್ಗೆ	೨೦೦೦೦	೦	೦
ಸೆಕ್ಷನ್ನು ೨೭ (೩) ನೇದರ ಪ್ರಕಾರ ಪ್ರಾಕ್ಟಿಕಲ್ ಶಿಕ್ಷಣ ಬಗ್ಗೆ ...	೫೦೦೦	೦	೦
ಗಾವಟಿ ಶಾಲೆಗಳ ಶಿಕ್ಷಕರ ಪಗಾರ.	೨೧೬	೦	೦
ಗಾವಟಿ ಶಾಲೆಗಳ ಸಾದಿಲವಾರ.	೯೬೦	೦	೦
ಗಾವಟಿ ಶಾಲೆಗಳ ಬಾಡಗಿ.	೨೯೨	೦	೦
ಕಾಂಟ್ರಾಕ್ಟರಿಗೆ ಡಿಪಾಜಿಟ ಹಣ ಪರತ ಕೊಡುವದು. ...	೫೦೦	೦	೦
ಸೆಕ್ಷನ್ನು ೨೯ ನೇ ಪರ ಪ್ರಕಾರ ರಿಫಂಡು.	೪೦೦	೮	೦
ಮ್ಯಾಜಿಕಲ್ಯಾನಿನ ಖರ್ಚು.	೭೫	೦	೦
ಸ್ಕೂಲಬೋರ್ಡ ಆಫೀಸಿನ ಬಾಡಗಿ.	೫೭೬	೦	೦
ಕ್ರಮಿನಲ್ ಟ್ರಾಯಬ ಶಾಲೆಗಳಿಗೆ ಮುನಸಿಪಾಲ್ಟಿ ಗ್ರ್ಯಾಂಟು. ...	೬೦೦	೦	೦
ಗಾವಟ ಶಾಲೆಗಳಿಗೆ ಗ್ರ್ಯಾಂಟು.	೧೫೫೬೬	೦	೦
ಪ್ರೈವೆಟ ಶಾಲೆಗಳಿಗೆ ಸ್ಕಾಲರಶಿಪ್ಪು.	೨೬೪೦	೦	೦
ಮುಸಲ್ಮಾನ ಹೆಂಣು ಮಕ್ಕಳಿಗೆ ಸ್ಕಾಲರಶಿಪ್ಪು ...	೪೦೦	೦	೦
ಪೆನ್ಸನ್ ಫಂಡ.	೫೫೦	೨	೦
ಖಾಸಗಿ ಛಾಪಖಾನೆಯಲ್ಲಿ ಮಾಡಿಸಿದ ಛಾಪನಾವಳಿ. ...	೫೦	೦	೦
ಸರಕಾರಿ ಛಾಪಖಾನೆಯಲ್ಲಿ ಮಾಡಿಸಿದ ಛಾಪನಾವಳಿ. ...	೫೦	೦	೦
ಇತರ ಮುತ್ತು ಆಕಸ್ಮಿಕ ಕಾರಣಗಳ ಬಗ್ಗೆ	೫೦೦೦	೦	೦
ಹೊಸ ಕಟ್ಟಡಗಳ ಬಗ್ಗೆ.	೬೩೬೪೪	೦	೦
ಪಳೆ ಶಾಲೆಗಳ ಸ್ಪೇಶಲ್ ರಿಪೇರಿ.	೧೦೩೦೦	೦	೦
ಸಾಧಾರಣ ರಿಪೇರಿ	೬೦೦೦	೦	೦
ವಾರಲೋನ ಬಾಂಡಿನಲ್ಲಿ ತೇವು.	೧೦೦೦೦	೦	೦
ಒಟ್ಟು ಖರ್ಚು.	೯೧೪೬೩೫	೦	೦
೩೧-೩-೩೪ ದಿವಸದ ಶಿಲ್ಕು.	೨೪೩೭೧೧	೦	೦
ಅಂತೂ	೧೧೫೮೧೪೬	೦	೦

ಟೀಪು— ಡಿ॥ ಲೋಕಲ್ ಬೋರ್ಡಿನ ಆಡಳತೆಯಲ್ಲಿದ್ದ ಮುನಸಿಪ್ಯಾಲಿಟಿ ಶಾಲೆಗಳ ಆಯವ್ಯಯದ ಅಂದಾಜು ಪತ್ರಿಕೆಯು ಮುಂದಿನ ಸಂಚಿಕೆಯಲ್ಲಿ ಕೊಡಲ್ಪಡುವದು.

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಮೇ ೧೯೨೮ | ಸಂಚಿಕೆ ೨

ಶಾಲೆಯ ಚಿಕ್ಕಮಕ್ಕಳ ಬಂಧ ವಿಮೋಚನೆ.

ಕಳೆದ ಶತಮಾನದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಹಸು ಮಕ್ಕಳು ಹಲವು ಬಗೆಯ ಬಂಧನಗಳಿಗೆ ಗುರಿಯಾಗಿದ್ದರು. ಆದರೆ ಇತ್ತೀಚಿಗೆ ಶಿಕ್ಷಣ ಶಾಸ್ತ್ರಜ್ಞರ ಚಳವಳಿಯಿಂದಲೂ, ಮೇಲಾಧಿಕಾರಿಗಳ ಪ್ರಯತ್ನದಿಂದಲೂ, ಚಿಕ್ಕಮಕ್ಕಳು ಒಂದೊಂದೇ ಬಂಧನದಿಂದ ವಿಮೋಚನೆಯನ್ನು ಹೊಂದುತ್ತಲಿರುವರು. ಇದು ಶಿಕ್ಷಣ ಪದ್ಧತಿಯಲ್ಲಿ ಜರಗುತ್ತಿದ್ದ ಅತ್ಯಂತ ಮಹತ್ವದ ಆಧಾರಣೆಯಾಗಿದೆ.

೧ನೆಯ ನಿರ್ಬಂಧ:—ತಾಯಿತಂದೆಗಳು, ಅಕ್ಕತಂಗಿಯರು, ಅಣ್ಣತಮ್ಮಂದಿರು ಮೊದಲಾದ ಪ್ರೇಮದ ಬಳಗದವರ ಬಳಿಯಲ್ಲಿ ನಲಿದಾಡುತ್ತಿರುವ ಉಲ್ಲಾಸ ವೃತ್ತಿಯ ಕೋಮಲ ಬಾಲಕನನ್ನು ಶಾಲೆಗೆ ಹಾಕುವದು ಬಹು ಪ್ರಯಾಸದ ಕಾರ್ಯವು. ಇದು ಚಿಕ್ಕ ಮಕ್ಕಳ ಆಯುಷ್ಯ ಕ್ರಮದಲ್ಲಿಯ ಮೊದಲನೆಯ ಅತ್ಯಂತ ಮಹತ್ವದ ಕ್ರಾಂತಿಯು. ಹಿಂದಕ್ಕೆ ಚಿಕ್ಕಮಕ್ಕಳನ್ನು ಶಾಲೆಗೆ ಹಾಕುವದೆಂದರೆ, ಅವರಿಗೆ ಶಿಕ್ಷೆಯನ್ನು ವಿಧಿಸಿದಂತೆಯೇ ಆಗುತ್ತಿತ್ತು. ಈ ಮಾತನ್ನು ಆಗಿನ ಕಾಲದ ವಿದ್ಯಾರ್ಥಿಗಳು, ಆರಂಭದಲ್ಲಿ ಹೊಂದುವ ಅನುಭವವನ್ನು ನಿರೀಕ್ಷಿಸಿದರೆ ತಿಳಿದು ಬರುವದು.

೧ ಶಾಲೆಗೆ ಹೊಸದಾಗಿ ಸೇರಿದ ಬಾಲಕನು ಶಿಕ್ಷಕನು ಏನು ಮಾಡುತ್ತಿರುವನು, ವಿದ್ಯಾರ್ಥಿಗಳು ಏನು ಮಾಡುತ್ತಿರುವರು, ಮತ್ತೆ ಬೇರೆ ಏನು ವರ್ಗದಲ್ಲಿ ನಡೆದಿರುವದೆಂಬದನ್ನು ಅತ್ತಿತ್ತ ಟಕಮಕ ಕುತೂಹಲದಿಂದ ನೋಡುವನು; ಗುರುಗಳು ಬಾಲಕರಿಗೆ ಮೂಲಾಕ್ಷರಗಳನ್ನು ಓದಲಿಕ್ಕೂ ಬರೆಯಲಿಕ್ಕೂ

ಕಲಿಸುವದನ್ನೂ, ಬಾಲಕ ತಪ್ಪಿದಲ್ಲಿ ಗುರುಗಳು ರೊಚ್ಚಿಗೆದ್ದು ಗದ್ದರಿಸುತ್ತಾ ಬಡಿತದ ಸುರಿಮಳೆಯನ್ನು ಸುರಿಸುವದನ್ನೂ, ಬಾಲಕ ಗಾಬರಿಯಾಗಿ ಗದಗದ ನಡುಗುತ್ತ ಅಳುತ್ತ ತಪ್ಪಿನ ಮೇಲೆ ತಪ್ಪು ಮಾಡುವದನ್ನೂ ಗುರುಗಳು ಏಟಿನ ಮೇಲೆ ಏಟು ಹಾಕುವದನ್ನೂ ನೋಡುವನು. 'ಗುದ್ದದೆ ವಿದ್ಯೆ ಬಾ ರದೆಂಬ' ಗುಟ್ಟನ್ನು ನಂಬಿದ ಶಿಕ್ಷಕನು, ಅಂತಃಕರುಣದಿಂದ ತುಂಬಿ ತುಳುಕುವ, ಮೂರ್ತಿಯೆಂತೆ ಕಾಣದೆ, ರೋಷದಿಂದ ಉಕ್ಕುವ ಉಗ್ರಯಮನಂತೆ ಕಾಣುವನು. ಬಾಲಕನು ಅಂಜಿಕೆಯಿಂದ ಹಿರಿಯ ಹುಡುಗರ ಪಕ್ಕದಲ್ಲಿ ಹುದುಗಿ, ಯಾವಾಗ ಮನೆಯನ್ನು ಕಾಣುವೆನೋ ಎಂದು ಆತುರ ಪಡುವನು; ಒಮ್ಮೆ ಮನೆಯನ್ನು ಮುಟ್ಟಿದ ಮೇಲೆ ಪುನಃ ಶಾಲೆಯ ಮೆಟ್ಟನ್ನು ಹತ್ತಲೊಲ್ಲದೆ ಗಟ್ಟಿಯಾಗಿ ಹಟ ಹಿಡಿಯುವನು. ಹುಡುಗನು ಪಡ್ಡನಾದಾನೆಂಬ ಭಯದಿಂದ ಹೊಡೆದು ಬಡೆದು ಪಾಲಕನು ಅತನನ್ನು ಒತ್ತಾಯದಿಂದ ಶಾಲೆಗೆ ದಬ್ಬುವನು. ಹುಡುಗನ ಹಟ ಮಾರಿತನವನ್ನು ಕಂಡು ಸಿಟ್ಟಿಗೆದ್ದ ಶಿಕ್ಷಕನು ಅತನಿಗೆ ಬುದ್ಧಿ ಕಲಿಸಬೇಕೆಂದು ಕಠೋರರೀತಿಯಿಂದ ದಂಡಿಸಲು ಉಪಕ್ರಮಿಸುವನು, ಇತ್ಯಾದಿ ಆರಂಭದ ಶಿಕ್ಷಣ.

ಈರೀತಿ ಪ್ರಥಮಾನುಭವವನ್ನು ಹೊಂದುವ ಹಸುಮಕ್ಕಳಿಗೆ ಶಾಲೆಯು ಶಾಲೆಯಂತೆ ಕಾಣದೆ ಸೆರೆಮನೆಯಂತೆ ಕಾಣುವದು ಸೋಜಿಗವಲ್ಲ. ಇಂಥ ಗುರುಗಳಿಂದ ಮಂಡಿತವಾದ, ಇಂಥ ಶಿಕ್ಷಣ ಪದ್ಧತಿಯಿಂದ ಪೆಸರಾದ ಶಾಲೆಗೆ ಹೋಗುವದು ಒಂದು ಕಠೋರತರವಾದ ಬಂಧನವೇ ಸರಿ. ಆದರೆ ಶಿಕ್ಷಣ ಶಾಸ್ತ್ರ ವಿಶಾರದರು ಮತ್ತು ಶಿಕ್ಷಣಾಧಿಕಾರಿಗಳ ಪ್ರಯತ್ನದಿಂದ ಈ ತೆರನಾದ ಬಂಧನದಿಂದ ಚಿಕ್ಕಮಕ್ಕಳು ಈಗ ಮುಕ್ತತೆಯನ್ನು ಹೊಂದಿರುವರು. ಶಿಕ್ಷಕರು ಅಂತಃಕರುಣದಿಂದಲೂ ಪ್ರೇಮದಿಂದಲೂ ಬಾಲಕರ ಮನಸ್ಸನ್ನು ಒಲಿಸಿಕೊಂಡು ಅವರೊಡನೆ ಆಡುತ್ತಾ ನಿರಾಯಾಸದಿಂದ ನಿಧಾನವಾಗಿ ಅಕ್ಷರಾಭ್ಯಾಸವನ್ನು ಮಾಡಿಸುವ ಮತ್ತು ಬಾಲಕ ಉಲ್ಲಾಸ ವೃತ್ತಿಗೆ ಕುಂದುತರದೆ ವಿಷಯ ಜ್ಞಾನವನ್ನು ಮಾಡಿಕೊಡುವ ಪದ್ಧತಿಯು ರೂಢಿಯಲ್ಲಿ ಬರಹತ್ತಿದೆ. ಶಿಕ್ಷಣ ಪದ್ಧತಿಯಲ್ಲಿ ಅನುಭವಪೂರ್ವವಾದ ಸುಧಾರಣೆಯು ದಿವಸದಿವಸಕ್ಕೆ ಈಡೇರಹತ್ತಿದೆ.

ಶಾಲೆಯ ನಿರ್ಬಂಧ:—ಗಾಳಿ ಬೆಳಕಿಲ್ಲದ, ಕಲುಷಿತ ಹವೆಯಲ್ಲಿರುವ, ಸಂದಿಗೊಂದಿಯಲ್ಲಿಯ, ಹಗೆಯಂಥ ಮನೆಯಲ್ಲಿ ಶಾಲೆಯನ್ನು ಹಾಕುವದು; ವಿದ್ಯಾರ್ಥಿಗಳನ್ನು ೨-೩ ಘಂಟೆಗಳ ವರೆಗೆ ಹೊರಗೆಬಿಡದೆ ಇಂಥ ಮನೆಯಲ್ಲಿ ಬಂಧಿಸುವದು. ಶಾಲೆಯ ಇರುವಿಕೆಯೂ ಪರಿಸ್ಥಿತಿಯೂ ಮೋಹಕರವಾಗಿರದೆ ಅಸಹ್ಯವಾಗಿರುವದು. ಇಂಥ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಾಲಕಳೆಯುವದೂ, ಉಲ್ಲಾಸ ವೃತ್ತಿಯಿಂದಲೂ ನಿರ್ಭಯದಿಂದಲೂ ಸ್ವತಂತ್ರವಾಗಿ ಅತ್ತಿತ್ತ ಹಾರಾಡುವ ಗಿಳಿಯ

ಮರಿಯನ್ನು ಪಂಜರದಲ್ಲಿ ನಿರ್ಬಂಧಿಸುವದೂ ಒಂದೇ. ಆದರೆ ಇತ್ತೀಚೆಗೆ ಅಧಿಕಾರಿಗಳು ಉತ್ತಮ ಹವೆಯುಳ್ಳ ಬೈಲು ಪ್ರದೇಶದಲ್ಲಿ ಚನ್ನಾಗಿ ಗಾಳಿ ಬೆಳಕುಳ್ಳಂಥ, ಮನೋಹರ ಕಟ್ಟಡಗಳಲ್ಲಿ ಶಾಲೆಗಳನ್ನು ಹಾಕುವ ಯೋಜನೆಯನ್ನು ಯಥಾಶಕ್ತಿ ನಡಿಸಿ ಬಂದರು. ಮತ್ತು ಇವುಗಳಿಗೆ ವಿಶಾಲವಾದ ಬೈಲು ಪ್ರದೇಶವನ್ನು ಜೋಡಿಸಿ ಶಿಕ್ಷಕರು ವಿದ್ಯಾರ್ಥಿಗಳನ್ನು ಆಗಾಗ್ಗೆ ಬಯಲಲ್ಲಿ ಒಯ್ದು ಅವರೊಡನೆ ಕಲಿತು ಆಡುತ್ತ ವೃಷ್ಟಿಜ್ಞಾನವನ್ನು ಮಾಡಿಕೊಡುವ ಪದ್ಧತಿಯನ್ನು ರೂಢಿಯಲ್ಲಿ ತರಹತ್ತಿರುವರು. ಇದರಿಂದ ಬಾಲಕರ ಶರೀರ ಸಂಪತ್ತು ಅಭಿವೃದ್ಧಿ ಹೊಂದುವದು, ಶೋಧಕ ಬುದ್ಧಿಯು ಬಲಪಡುವದು, ಮತ್ತು ಜ್ಞಾನ ಸಂಪಾದನೆಯು ನಿರಾಯಾಸವಾಗಿ ಲಭಿಸುವದು.

೩ ನೆಯ ನಿರ್ಬಂಧ :—ಗುರುಗಳು ಹುಡುಗರಿಂದ ಪ್ರತಿಯೊಂದು ವಿಷಯವನ್ನು ಅವರಿಗೆ ತಿಳಿಯಲಿ ತಿಳಿಯದೆ ಇರಲಿ ಬಾಯಪಾಠ ಮಾಡಿಸುವರು; ವಿದ್ಯಾರ್ಥಿಗಳ ಗುಣ, ಸ್ವಭಾವ, ಬುದ್ಧಿ, ಪ್ರವೃತ್ತಿ, ಮನೋಬಲ ಮೊದಲಾದವುಗಳನ್ನು ಎಷ್ಟೂ ಲಕ್ಷಿಸದೆ ಪ್ರತಿಯೊಬ್ಬನಿಗೂ ಸ್ವಾಭಾವಿಕವಾಗಿ ರುಚಿಸುವ ಮತ್ತು ರುಚಿಸದಿರುವ ಸಕಲ ವಿಷಯಗಳನ್ನು ಪಾಠಮಾಡಿಸುವದು; ಭಾಷಾಜ್ಞಾನವಿಲ್ಲದಲೇ ವ್ಯಾಕರಣದ ಬಿಕ್ಕಟ್ಟಿನ ನಿಯಮಗಳನ್ನು ಪಾಠಮಾಡಿಸುವದು; ಲಕ್ಕದ ಅರ್ಥ ತಿಳಿಯದೆ ರೀತಿಯನ್ನು ಕಲಿಸುವದು; ಕಠಿಣ ಶಬ್ದಗಳ ಅರ್ಥವನ್ನು ಸಂದರ್ಭದಿಂದ ತಿಳಿಸದೆ ಕೇವಲ ಶಬ್ದಾರ್ಥಗಳನ್ನು ಪಾಠಮಾಡಿಸುವದು; ಆರೋಗ್ಯಶಾಸ್ತ್ರ, ಭೂವರ್ಣನೆ, ಶಾಸ್ತ್ರೀವಿಷಯಗಳನ್ನು ಕ್ರಮವಾಗಿ ಚಿತ್ರ, ನಕಾಶೆ ಮತ್ತು ಉಪಕರಣಗಳ ಸಹಾಯವಿಲ್ಲದಲೆ ಮುಖಪಾಠ ಮಾಡಿಸುವದು; ಅತ್ಯಂತ ಉಪಯುಕ್ತವಾದ ವಿಷಯಗಳನ್ನು ವರ್ಜಿಸಿ ಅನಾವಶ್ಯಕ ವಿಷಯಗಳನ್ನೇ ನಿತ್ಯ ಪಟ್ಟಿಯಲ್ಲಿ ಕಲಿಸುವದು; ಈ ರೀತಿಯಾಗಿ ಶಿಕ್ಷಣಶಾಸ್ತ್ರವಿರುದ್ಧವಾದ ಪದ್ಧತಿಯ ಉತ್ಪತ್ತಿಯು ಬಾಲಕರಿಗೆ ಒಂದು ಕಠಿಣವಾದ ಶಿಕ್ಷೆಯೇ ಸರಿ. ವಿದ್ಯಾರ್ಥಿಗಳು ಈ ನಿರ್ಬಂಧದಿಂದ ಮುಕ್ತರಾಗಲಿಕ್ಕೆ ಶಿಕ್ಷಕರು ಸಾಕಷ್ಟು ಟ್ರೇನಿಂಗ ಹೊಂದಿದವರು ಇರಬೇಕು.

ಈ ನಿರ್ಬಂಧಗಳಲ್ಲದೆ ಇನ್ನೂ ಅನೇಕ ಸಣ್ಣದೊಡ್ಡ ಬಂಧನಗಳಿಗೆ ವಿದ್ಯಾರ್ಥಿಗಳು ಗುರಿಯಾಗಿದ್ದಾರೆ. ಚಿಕ್ಕ ಮಕ್ಕಳನ್ನು ಈ ಎಲ್ಲ ಬಂಧನೆಗಳಿಂದ ಮುಕ್ತ ಮಾಡುವದು ಅತ್ಯಂತ ಪವಿತ್ರಕಾರ್ಯವು. ಆದರೆ ಶಿಕ್ಷಕರ ಕರ್ತವ್ಯ ಪರಾಂಗ್ಮುಖತೆಯಿಂದ ಈ ಕಾರ್ಯವು ಸಾಕಷ್ಟು ಬಲವತ್ತರವಾಗಿ ಸಾಗಿಲ್ಲವೆಂಬದನ್ನು ಅರುಹಲು ವಿಷಾಧವೆನಿಸುತ್ತದೆ. ಶಿಕ್ಷಣಾಧಿಕಾರಿಗಳು ತಮ್ಮ ಮೇಲೆ ಇರುವ ಈ ಭಾರವನ್ನು ಅವಲೋಕಿಸಿ ಯಥಾಶಕ್ತಿ ವ್ಯವಸಾಯವನ್ನು ಮಾಡುತ್ತಲಿರುವರು. ಆದರೆ ಈ ಕಾರ್ಯದ ಭಾರವು ವಿಶೇಷವಾಗಿ ಪ್ರಾಥಮಿಕ ಶಾಲಾಗುರುಗಳ ಮೇಲೆ

ಇರುವದು. ಶಿಕ್ಷಕರೆಂಬ ಬಹು ಗೌರವದ ಹೆಸರು ಅವರಿಗೇ ಸಲ್ಲುವದರಿಂದ ಅವರು ಬಾಲಶಿಕ್ಷಣ ವಿಷಯದಲ್ಲಿ ಲಕ್ಷದಲ್ಲಿಡಬೇಕಾದ ವಿಷಯಗಳನ್ನು ಇಲ್ಲಿ ವಿವರಿಸುವೆವು.—

೧. ಬಾಲಕರ ಶರೀರ ಸಂಪತ್ತಿನಕಡೆಗೆ ಮೊದಲು ಲಕ್ಷ ಕೊಡಬೇಕು. ಶುದ್ಧ ಹವೆಯ ಬೈಲಲ್ಲಿ ಅವರನ್ನು ಆಗಾಗ್ಗೆ ಒಯ್ದು ಸೃಷ್ಟಿಸೌಂದರ್ಯವನ್ನು ತೋರಿಸಿ ಉಲ್ಲಾಸಗೊಳಿಸಬೇಕು. ಪ್ರತಿನಿತ್ಯ ಸಾಯಂಕಾಲಕ್ಕೆ ಹಗುರಾದ ದೇಶೀಯ ಆಟಗಳನ್ನು ಆಡಿಸಬೇಕು. ಕೆಲಕೆಲವು ವೇಳೆ ಬೆಳದಿಂಗಳಲ್ಲಿ ಸಹ ಆಟವಾಡಲಿಕ್ಕೂ ವಿನೋದಕ್ಕೂ ಪ್ರೋತ್ಸಾಹಗೊಳಿಸಬೇಕು.

೨. ವಿದ್ಯಾರ್ಥಿಗಳ ಶೋಧಕ ಬುದ್ಧಿಯನ್ನು ಹುಟ್ಟಿಸಬೇಕು. ಪ್ರಶ್ನೆಗಳಿಗೆ ಉತ್ತರಗಳನ್ನು ಅವರಿಂದಲೇ ಪಡೆಯಬೇಕು. ತಾವೇ ಪ್ರಶ್ನೆ ಕೇಳಿ ತಾವೇ ಉತ್ತರ ಕೊಡುವಂತೆ ಅವರಿಗೆ ಉತ್ತೇಜನ ಕೊಡಬೇಕು. ಸ್ಮರಣಶಕ್ತಿಯು ಬೆಳೆಯಲಿಕ್ಕೆ ಐತಿಹಾಸಿಕ ಮೊದಲಾದ ಕಥೆಗಳನ್ನು ಒಮ್ಮೆ ಹೇಳಿ ಅವುಗಳನ್ನು ಆಗಾಗ್ಗೆ ಕೇಳಬೇಕು. ಅವರಿಗೆ ತಿಳಿಯದ ಮತ್ತು ಬೇಸರಿಕೆಯ ವಿಷಯಗಳನ್ನು ಗಟ್ಟಿಮಾಡಿಸುವ ಸ್ಮರಣ ಶಕ್ತಿಯನ್ನು ವರ್ಧಿಸುವದರ ಬದಲು, ಅದನ್ನು ಕುಗ್ಗಿಸುತ್ತದೆಂಬದನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು. ಅವ ಲ್ಲಿ ವಿಚಾರ ಶಕ್ತಿಯನ್ನು ಬಲಬಡಿಸಬೇಕು; ಸ್ವಾವಲಂಬನವನ್ನು ಕಲಿಸಬೇಕು; ಧೈರ್ಯ, ಸಾಹಸ, ಸ್ವಾಭಿಮಾನಗಳ ಬೀಜಗಳನ್ನು ಊರಬೇಕು. ಬಂಧುಪ್ರೇಮ, ಭೂತದಯ, ಆಜ್ಞಾದಾರಕತ್ವ, ವಿನಯ, ಸತ್ಯಪ್ರೀತಿ. ನಿಯಮಿತತನ, ಕರ್ತವ್ಯದಕ್ಷತೆ, ಉದ್ಯೋಗತತ್ಪರತೆ, ಮತ್ತು ಮಿತವ್ಯಯ ಮುಂತಾದ ಅತ್ಯುತ್ತಮ ಸದ್ಗುಣಗಳನ್ನು ಅವರಲ್ಲಿ ಅಂಕುರಿಸಬೇಕು.

೩. ವಿದ್ಯಾರ್ಥಿಗಳಲ್ಲಿ ಹುದುಗಿಕೊಂಡಿದ್ದ ಸ್ವಾಭಾವಿಕವಾದ ಉತ್ತಮ ಗುಣಗಳನ್ನು ಕಂಡು ಹಿಡಿದು ಅವುಗಳು ವಿಕಾಸಹೊಂದುವದಕ್ಕೆ ಸಾಕಷ್ಟು ಅವಕಾಶ ಕೊಡಬೇಕು. ಅವರವರ ಪ್ರವೃತ್ತಿಯನ್ನು ತಿಳಿದು ಅವರವರಿಗೆ ರುಚಿಯಾವ ಯಾವದೊಂದು ವಿಷಯದಲ್ಲಿ ಹಂಬಲವನ್ನುಂಟುಮಾಡಬೇಕು. ಸುಶಿಕ್ಷಿತರೂ ಸ್ವಾವಲಂಬಿಗಳೂ ಆಗಬೇಕೆಂಬ ಅಭಿಮಾನವನ್ನು ಅವರಲ್ಲಿ ತುಂಬಬೇಕು. ದೇಶದ ಎಳಿಗೆಗೂ ಸಮಾಜದ ಅಭಿವೃದ್ಧಿಗೂ ಮಾನವ ಪ್ರಾಣಿಯ ಪ್ರಗತಿಗೂ ಸಹಾಯಕರಾಗಬೇಕೆಂಬ ಹವ್ಯಾಸವು ಅವರಲ್ಲಿ ಹುಟ್ಟುವಂತೆ ಐತಿಹಾಸಿಕ ಮತ್ತು ಆಧುನಿಕ ಪ್ರಸಿದ್ಧ ಪುರುಷರ ಜೀವನ ಚರಿತ್ರೆಗಳನ್ನು ಪದೇ ಪದೇ ಹೇಳಬೇಕು. ಆತ್ಮಹಿತಕ್ಕಿಂತ ರಾಷ್ಟ್ರದ ಮತ್ತು ಜನತೆಯ ಹಿತವು ಹೆಚ್ಚಿನದೆಂಬ ಪಾಠವನ್ನು ಬೋಧಿಸಬೇಕು. ಇದೆಲ್ಲ ಚಿಕ್ಕಮಕ್ಕಳಿಗೆ ಅತ್ಯಂತ ಗಹನ ವಿಷಯವಾದಾಗ್ಯೂ ಇವುಗಳ ಪ್ರಥಮ ಪಾಠಗಳು ಪ್ರಾಥಮಿಕ ಶಾಲೆಯಲ್ಲಿಯೇ ಕಲಿಸಲ್ಪಡಬೇಕು.

ಮೂರು ವರುಷದ ಬುದ್ಧಿ ನೂರು ವರುಷದವರೆಗೆ " ಎಂಬ ಗಾದೆಯಂತೆ, ಚಿಕ್ಕ ಮಕ್ಕಳಲ್ಲಿ ಸದ್ಗುಣಗಳು ನೆಲಿಸುವಂತೆ ಪಾಲಕರು, ಶಿಕ್ಷಕರು, ಮತ್ತು ಶಿಕ್ಷಣಾಧಿಕಾರಿಗಳು ಸತತ ಪ್ರಯತ್ನ ಮಾಡಬೇಕಾಗುತ್ತದೆ. ಒಮ್ಮೆ ದುರ್ಗುಣಗಳು ಬಾಲಕರಲ್ಲಿ ಮನೆಮಾಡಿದವೆಂದರೆ ಅವುಗಳನ್ನು ತೆಗೆದು ಹಾಕುವದು ದುಃಸ್ಸಾಧ್ಯವು. ಯಾವದೊಂದು ದೇಶದ ಉನ್ನತಿಯೂ ಅವನತಿಯೂ ಆ ದೇಶದ ಬಾಲ ಬಾಲಿಕೆಯರಿಗೆ ಚಿಕ್ಕಂದಿನಲ್ಲಿ ದೊರೆಯುವ ಶಿಕ್ಷಣದ ಮೇಲೆಯೇ ಅವಲಂಬಿಸಿರುತ್ತದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣದ ಬಗ್ಗೆ ಎಷ್ಟು ಲಕ್ಷ್ಯ ಪೂರೈಸಿದರೂ ಕಡಿಮೆಯೇ ಸರಿ. ಇದರ ಮಹತ್ವವನ್ನು ಕಂಡುಹಿಡಿದು ಅನೇಕ ಆಧುನಿಕ ಶಿಕ್ಷಣ ಶಾಸ್ತ್ರಜ್ಞರು ಅನೇಕ ಶೋಧಗಳನ್ನು ಮಾಡಿರುವರು. ಅವುಗಳಲ್ಲಿ ಸರ್ ಬೇಡೆಸ್ ಪಾವೆಲ್ ಎಂಬ ಪ್ರಸಿದ್ಧ ಆಂಗ್ಲ ಸದ್ಗೃಹಸ್ಥರು ಸ್ಕೌಟ ಶಿಕ್ಷಣವೆಂಬ ಹೊಸ ಪದ್ಧತಿಯನ್ನು ಹುಡುಕಿ ತೆಗೆದಿದ್ದಾರೆ. ಈ ಪದ್ಧತಿಯು ಈಗ ಜಗತ್ತಿನ ಸುಧಾರಿಸಿದ ಯಾವತ್ತೂ ರಾಷ್ಟ್ರಗಳಲ್ಲಿ ಒಳ್ಳೇ ಜೋರಿನಿಂದ ಪ್ರಸಾರವಾಗುತ್ತಿದೆ. ನಮ್ಮ ಭಾಗದಲ್ಲಿಯೂ ಈ ಶಿಕ್ಷಣ ಪ್ರಸಾರವು ದಿನಾಲು ಅಭಿವೃದ್ಧಿಯನ್ನು ಹೊಂದುತ್ತಲಿದೆ. ನಮ್ಮ ಬೋರ್ಡಿನವರು ಅನೇಕ ಪ್ರಾಥಮಿಕ ಶಿಕ್ಷಕರಿಗೆ ಈ ಶಿಕ್ಷಣವನ್ನು ಕೊಡಹತ್ತಿದ್ದಾರೆ. ಇದರಿಂದ ನಾವು ಮೇಲೆ ನಿವರಿಸಿದ ಸದ್ಗುಣಗಳ ಸಂವರ್ಧನೆಯು ಅನಾಯಾಸವಾಗಿ ಲಭಿಸುವದು. ಆದ್ದರಿಂದ ಶಿಕ್ಷಕರು ಸ್ಕೌಟ ಶಿಕ್ಷಣವನ್ನು ಪಡೆದು ಅದರ ಲಾಭವನ್ನು ತಮ್ಮ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಾಡಿಕೊಡುವರೆಂದು ಆಶಿಸುತ್ತೇವೆ. ಶಿಕ್ಷಕರು ತಾವು ಮಾಡುತ್ತಿದ್ದ ಜಗನ್ಮಾನ್ಯವಾದ ಶಿಕ್ಷಣ ಕಾರ್ಯವು ಉದರನಿರ್ವಾಹಕ್ಕಾಗಿ ಎಂಬ ಸಂಚಿತ ಕಲ್ಪನೆಯನ್ನು ತಂದೆ, ದೇಶೋದ್ಧಾರದ ಮಹತ್ಕಾರ್ಯವೆಂದು ತಿಳಿದು ಅದರಂತೆ ಬದ್ಧಕಂಕಣರಾಗಬೇಕು. ತಮ್ಮ ಶ್ರಮಕ್ಕೆ ದೇಶದ ಉದ್ಧಾರವೇ ಪ್ರತಿಫಲವು. ಮೇಲಾಧಿಕಾರಿಗಳಿಂದಾಗಲಿ, ಜನತೆಯಿಂದಾಗಲಿ ಹೆಚ್ಚು ಉತ್ತೇಜನ ಮತ್ತು ಮನ್ನಣೆ ದೊರೆಯದೇ ಇದ್ದರೂ ತಾವು ಕೈಕೊಂಡ ಈ ಕಾರ್ಯವನ್ನು ಉತ್ಸಾಹತೆಯಿಂದ ನಡೆಸಬೇಕಾಗಿ ಬಿನ್ನಹ.

ಪ್ರಾಥಮಿಕ ಶಿಕ್ಷಣದಲ್ಲಿ ಅಗತ್ಯದ ತಿದ್ದುಪಡೆಯು.

ಸದ್ಯದ ಪ್ರಾಥಮಿಕ ಶಾಲೆಗಳ ಶಿಕ್ಷಣವೆಂದರೆ ಹುರಳಿಲ್ಲದ ಶಿಕ್ಷಣವಾಗಿದೆ. ಇದರಲ್ಲಿ ತಯಾರಾದ ವಿದ್ಯಾರ್ಥಿಗಳು, ಕೇವಲ ನೌಕರಿಕಾಂಕ್ಷಿಗಳು, ಅಲ್ಪಸಂತೋಷಿಗಳೂ, ಸ್ವಾರ್ಥಿಗಳೂ, ಅಲ್ಪವಿಚಾರಿಗಳೂ, ದುರ್ಬಲರೂ, ವಿಹೀನರೂ ಆಗಿರುವರು. ಇವರಿಂದ ಯಾವತರದ ಪರಹಿತವೂ, ದೇಶಹಿತವೂ ಆಗುವದೊತ್ತಟ್ಟಿಗಿರಲಿ, ಅವರ ಮನೆತನದ ಹಿತವೂ ಸಾಧಿಸುವದಿಲ್ಲ. ಅಂ ಮೇಲೆ ಇಂಥ ಶಿಕ್ಷಣಕ್ಕೆ ಎಂಥ ಶಿಕ್ಷಣವೆನ್ನಬೇಕು? ಕೇವಲ ಹೊಟ್ಟೆಯ ಪಾ ಗಾಗಿ ಇದ್ದಬಿದ್ದ ನೌಕರಿ ದೊ ಕಿಸುವ ಶಿಕ್ಷಣವೆನ್ನಬಹುದು. ಇನ್ನು ನೌಕ ಗಳಾದರು ಎಷ್ಟು ಜನರಿಗೆ ಶಿಗುವವು; ಅವುಗಳ ಬಾಗಿಲಗಳೂ ಬಂದಾಗಿವ ಹೀಗಾಗಿ ಸದ್ಯದ ಶಿಕ್ಷಣಾಲಯಗಳೆಂದರೆ, ದುರ್ಬಲ ನೌಕ ನ್ನು ತಯಾರಿಸು ಯಂತ್ರಗಳಾಗಿ ವವು. ಇದರಿಂದ ನಮ್ಮ ಆರ್ಥಿಕ ಸ್ಥಿತಿಯು ಎತ್ತೋಮಾಯ ವಾಗಿ, ದರಿದ್ರತೆಯು ಹೆಚ್ಚಿಚ್ಚು ಕಾಲುಚಾಚುತ್ತ ನಡದದೆ. ಇದರಿಂ ಬಂಗಾರದಹೊಗೆ ಹಾಯುತ್ತದೆಂಬ ನಮ್ಮ ಭರತ ಭೂಮಿಯಲ್ಲಿ ಈಗ ಬಿಂಗಿ ಹೊಗೆಯೂಕೂಡ ಹಾಯುವದು ಕಠಿಣವಾಗಿದೆ. ಇದೆಲ್ಲ ಶಿಕ್ಷಣದ ಪ್ರತಾಪ ಹೀಗೆ ಶಿಕ್ಷಣವನ್ನು ಹಳಿಯುತ್ತಕೂತರೆ ಉಪಯೋಗವೇನು? ಶಿಕ್ಷಣದ ಗ ಡುಮೆಟ್ಟಾದ ಪ್ರಾಥಮಿಕ ಶಿಕ್ಷಣವೇ ನಮ್ಮವರ ಕೈಯಲ್ಲಿ ಬಂದಿರುವದು. ಇ ರಿಂದ ಶಿಕ್ಷಣದ ಬೇಕಾದ ಸುಧಾರಣೆಯನ್ನು ಮಾಡಿಕೊಳ್ಳಲು ಬರುವದು ಹೀಗಾದರೆ ಸದ್ಯದ ಶಿಕ್ಷಣದ ದೋಷಗಳೆಲ್ಲ ಅಳಿದು ನಮ್ಮವರ ಹಿತವಾಗುವ ದೆಂಬದರಲ್ಲಿ ಂಶಯವಿಲ್ಲ.

ಸದ್ಯದ ಶಿಕ್ಷಣದಲ್ಲಿ ತಿದ್ದುಪಡೆಯಾಗುವದೆಂದರೆ, ಅಲ್ಲಿ ಕಲಿತ ವಿದ್ಯಾರ್ಥಿ ಗಳು ಸದೃಢರೂ, ಸ್ವಾವಲಂಬಿಗಳೂ, ಪರೋಪಕಾರಿಗಳೂ ಆಗಬೇಕಲ್ಲದೆ, ತನ್ನಾಡು, ತನ್ನನುಡಿ, ತನ್ನ ತಿಳಲುಗಳ ತಿಳವಳಿಕೆಯುಳ್ಳವರಾಗಬೇಕು! ಇದೆ ನಿಜವಾದ ಶಿಕ್ಷಣವು!! ಇದರ ಸಲುವಾಗಿ ನಮ್ಮವರು ಯಾವ ಎತ್ತುಗಡೆ ಮಾ ಬೇಕೆಂಬ ಬಗ್ಗೆ, ನಮ್ಮ ಸುತ್ತಲಿನ ಪರಿಸ್ಥಿತಿಯನ್ನು ಅಳೆದು ತಿಳಿಯಬೇಕು. ದರೆ ನಮ್ಮ ಉದ್ಯೋಗ, ಭೂಮಿ, ಪಶು, ಮಳೆ, ಖನಿಜ, ವನಸ್ಪತಿ ಇವುಗಳ ತ ತಮ್ಯವನ್ನು ತಿಳಿದು ಅವು ಶಿಕ್ಷಣದಲ್ಲಿ ಅಡಕವಾಗುವಂತೆ ಮಾಡಬೇಕು. ಅಥ

ತ್ ಶಾಲೆಯ ಶಿಕ್ಷಣದಲ್ಲಿ ಸಾಮಾನ್ಯ ವಿಷಯಗಳಲ್ಲದೆ ಒಕ್ಕಲತನ, ಕೈಗಾರಿಕೆ, ರಾಜಕೀವಿದ್ಯೆಗಳನ್ನು ಜೋಡಿಸಬೇಕು. ಹಾಗು ಸೂರ್ಯನಮಸ್ಕಾರ, ಆಸನ ಮೊದಲಾದ ಅಂಗಸಾಧನಗಳಿಂದ ಹುಡುಗರ ದೇಹಾರೋಗ್ಯವು ಬೆಳೆಯುವಂತೆ ಮಾಡಬೇಕು. ಅಂದರೆ ನಮ್ಮ ಬಯಕೆಗಳು ಕೈಗೂಡಿ ಸದ್ಯದ ಪ್ರಾಥಮಿಕ ಶಿಕ್ಷಣವು ಪ್ರಯೋಜನಕ.

ಒಕ್ಕಲತನದ ಶಿ ಣವೆಂದಮಾತ್ರಕ್ಕೆ ಬಹುಜನರು ಬೆಚ್ಚಿಬಿದ್ದು ಮೂಗು ಮುರಿಯುವರು. ಇಷ್ಟೇಅಲ್ಲ; ಇದು ದಡ್ಡ, ಹುಂಬಜನರ ಕೆಲಸವೆಂದು ಅಲ್ಲಗಳೆಯುವರು. ಇದಕ್ಕೆ ಅವರ ಅಲ್ಪಶರೀರ, ಅಲ್ಪವಿಚಾರ, ಸಂಕುಚಿತದೃಷ್ಟಿಗಳೇ ಕಾರಣವಾಗಿವೆ. ಅದೆ ಸಂಪತ್ತಿನಿಂದ ಮೂಗುಮೇಲಾಗಿ ಮೆರೆಯುವ ನಮ್ಮಂತೆ ಒ ಕ್ಕಲತನದ ದೇಶಗಳಾದ ಅಮೇರಿಕಾ, ಆಷ್ಟ್ರೇಲಿಯಾದ ಕಡೆಗೆ ಹೊರಳಿ ನೋಡಿರಿ! ಒಕ್ಕಲತನವೆಂದರೆ ಪ್ರೀತಿ, ಒಕ್ಕಲಿಗನೆಂದರೆ ಪ್ರೇಮ, ಅಂತೆ ಯಾವನು ಜಾಣನು, ಸದೃಢನು, ಉತ್ಸಾಹಿಯು ಇರುವನೋ ಅವನು ಒಕ್ಕಲತನದ ಮಾರ್ಗವನ್ನು ಹಿಡಿಯುವನು. ಯಾವನು ಜಡನು, ದುರ್ಬಲನು, ನಿರುತ್ಸಾಹಿಯು ಇರುವನೋ ಅವನು ನೌಕರಿಯ ಮಾರ್ಗವನ್ನು ಹಿಡಿಯುವನು. ಅಲ್ಲ ಸಭೆ, ಸಮ್ಮೇಲನಗಳಲ್ಲಿ ಒಕ್ಕಲಿಗರಿಗೇ ಅಗ್ರಸ್ಥಾನಗಳು ದೊರೆಯುವವು. ಅದೇ ನಮ್ಮಲ್ಲಿ ವಿಪರೀತ ಪರಿಸ್ಥಿತಿಯನ್ನು ನೋಡಿ ನಗೆಬರುತ್ತದೆ, ಅಂತೆ ನಮ್ಮ ಒಕ್ಕಲತನವು ಹಿಂದುಳಿದದೆ, ಅದರಿಂದ ನಮ್ಮ ಬಾಳು ಹಾಳಾಗಿದೆ, ಕಾರಣ ಇನ್ನಾದರೂ ನಮ್ಮ ಹೀನ ದೀನ ಸ್ಥಿತಿಯನ್ನು ನೋಡಿ ನಡೆಯುವ ದಾಗಬೇಕು; ದಿನಮಾನವು ಗತಿಸಿದಂತೆ ಪ್ರತಿಯೊಂದು ಬಾಬಿನಲ್ಲಿ ಅದಲುಬದಲಾಗುತ್ತವೆ, ಅಂದರೆ, ಆಚಾರ-ವಿಚಾರ, ಆಹಾರ-ವಿಹಾರ, ನಡೆ-ನುಡಿ, ಮಾತು-ಕತೆ, ಉಡಿಗೆ-ತೊಡಿಗೆ ಇವೇ ಮೊದಲಾದವು. ಅದರಂತೆ ನಮ್ಮ ಪವಿತ್ರ ಒಕ್ಕಲತನದಲ್ಲಿ ಹೆಚ್ಚುಕಡಿಮೆಯಾದದ್ದೇನೂ ಆಶ್ಚರ್ಯವಲ್ಲ. ಮೊದಲಿನ ಭೂಮಿಯ ಫಲಕಗಳ ಪ್ರಮಾಣಕ್ಕೂ ಈಗಿನ ಭೂಮಿಗಳ ಫಲಕಗಳ ಪ್ರಮಾಣಕ್ಕೂ ಅಂತರವದೆ ಭೂಮಿಯರಚನೆಯೂ, ಹವೆ-ಮಳೆಗಳೂ ಅದಲು ಬದಲಾಗಿವೆ. ಬೆಳೆಗಳ ರೋಗ ರುಜಿಗಳು ಹೆಚ್ಚಾಗಿವೆ. ಇಂಥ ಪರಿಸ್ಥಿತಿಯಲ್ಲಿ ನಾವು ಮೊದಲಿನ ಕಗ್ಗದಾರಿಯಿಂದ ನಡೆದರೆ ಯಾವಫಲಕಾಣದೆ ಹುಚ್ಚರಾಗುವೆವು. ಕಾರಣ ಶಾಸ್ತ್ರೀಯ ನೂತನ ಮಾರ್ಗವನ್ನೇ ಹಿಡಿಯಬೇಕು. ಅದ್ದರಿಂದ ಒಕ್ಕಲತನ ಇದು ದಡ್ಡ ಹಾಗು ಹುಂಬರ ಹೋರೆಯಲ್ಲ. ಜಾಣರ ಹೋರೆಯಾಗಿರುವದು.

ಒಕ್ಕಲತನಕ್ಕೆ ಜಾಣತನ ಬೇಕಾಗುವದಲ್ಲದೆ ರೂಢಿಯೂ ಬೇಕು. ರೂಢಿಗೆ ಅವಧಿಯುಬೇಕು. ಇದು ಪೂರ್ಣ ಶಾಲೆಯಲ್ಲಿ ಶಿಗಲು ಶಕ್ಯವಿಲ್ಲ ಕಾರಣ ೪-೫-೬-೭ ಇಯತ್ತೆಗಳ ವಿದ್ಯಾರ್ಥಿಗಳಿಗೆ ಒಕ್ಕಲತನದ ಮೂಲತತ್ವಗಳನ್ನೂ ಅದರ

ಕಡೆಗೆ ಗತಿಯನ್ನೂ ಮಾಡಿಕೊಟ್ಟರೆ ಸಾಕು ಮುಂದೆ ಅವರು ತಮ್ಮ ಒಕ್ಕಲತನದಲ್ಲಿ ಮನಸ್ಸು ಹಾಕಿ ಪ್ರಯತ್ನಿಸುವರೆಂಬದಕ್ಕೆ ಪೂರ್ಣನಂಬಿಗೆಯುಂಟು. ಇನ್ನು ಕೃಷಿಜ್ಞಾನದ ಜೋತೆಗೆ ಬಡಗಿತನ, ಕಮ್ಮಾರಿಕೆ ಹಗ್ಗಕಣ್ಣಿ ಮಾಡುವದು ಕಲಿಸಬೇಕಾಗುತ್ತದೆ. ಗುಡಾರ, ಉರಟು ಬಟ್ಟಿ, ಉರಟುಘೋತ ನೇಯುವ ಕಲೆಯನ್ನು ಕಲಿಯಲೇಬೇಕು. ಯಾಕಂದರೆ ಅವರಹೊಲದಲ್ಲಿಯೇ ಬೆಳೆದ ವಿಪುಲ ಹತ್ತಿ ಇರುವದು. ಅದರಿಂದ ತನ್ನ ಮನೆತನಕ್ಕೆ ಬೇಕಾಗುವ ಅರವಿಗಳನ್ನು ಸುಲಭ ಕ್ರಯದಲ್ಲಿ ಮಾಡಿಕೊಳ್ಳಲು ಅನುಕೂಲವಾಗುವದು.

ಎಷ್ಟೋ ಹುಡುಗರು ಚಿತ್ರಕಲೆಯಲ್ಲಿ ಒಳ್ಳೇಕುಶಲರಿರುವರು. ಅವರಿಗೆ ಆ ಜ್ಞಾನದ ಸದುಪಯೋಗ ಮಾಡಿಕೊಟ್ಟು ಚಿತ್ರಗಾರರನ್ನು ಮಾಡಬೇಕು. ಇವಲ್ಲದೆ, ಸಾಬಾಣ, ಊದಬತ್ತಿಗಳನ್ನು ಮಾಡುವದು ಕಾಗದ ತಯಾರಿಸುವದು, ಕಾಗದಕತ್ತರಿಸುವದು, ಸಣ್ಣಾಪುಟ್ಟ ಔಷದಗಳನ್ನು ಮಾಡುವದು ಕಲಿಸಬೇಕು, ಇಷ್ಟೇ ಅಲ್ಲ ಈಗ ಅವಶ್ಯ ಎಲ್ಲರೂ ತಿಳಿಯಲೇ ಬೇಕಾದ ಸ್ಥಾನಿಕ ಸಂಸ್ಥೆಗಳ ಆಢಳಿತೆ,ಮತದಾನ ಪದ್ಧತಿ, ರಾಜಕೀಯ ಘೋರಣ, ನೂತನ ಕಾಯದೆಗಳ ಜ್ಞಾನ ಆಗಲೇಬೇಕು. ಅಂದರೆ ಈಗ ಎಲ್ಲರ ಎದುರಿಗೆ ಬಂದ ಜನೂನ ವಿಭಾಗಣಿ, ಹೊಸಕಂದಾಯದಪದ್ಧತಿ, ದತ್ತಕ ತೆಗೆದುಕೊಳ್ಳುವ ಹಕ್ಕು ಮೊದಲಾದವುಗಳ ಉಹಾಪೋಹಮಾಡಲು ಸಮರ್ಥರಾಗುವರು. ಇದರಿಂದ ಜನಮತವು ಸರಕಾರಕ್ಕೆ ತಿಳಿಯಲು ಅನುಕೂಲವಾಗುವದು.

ಇವೆಲ್ಲ ವಿಷಯಗಳು ಸದ್ಯದ ಪ್ರಾಥಮಿಕ ಶಿಕ್ಷಣದಲ್ಲಿ ದೊರೆಯುವಂತೆ, ತಿದ್ದುಪಡಿ ಮಾಡಲಿಕ್ಕೆಬೇಕು. ಅಂದರೇನೇ ನಾವು ಸ್ಥಾನಿಕ ಸ್ವರಾಜ್ಯದ ಲಾಭ ಪಡದಂತಾಗುವದು.

ಈ ವ್ಯವಸ್ಥೆಯ ಬಗ್ಗೆ ಸ್ವಲ್ಪ ಹೆಚ್ಚು ಖರ್ಚು ಬರುವದೇನೋ ನಿಜ. ಇದರಿಂದ ಒಕ್ಕಲಿಗರ ದುಡ್ಡಿನ ಹೆಚ್ಚಿನ ಭಾಗವು ಅವರ ಮಕ್ಕಳಿಗೆ ಖರ್ಚು ಮಾಡಿದಂತಾಗುವದು. ಇದರಬಗ್ಗೆ ಯಾರೂ ಗುಂಯಿಗುಟ್ಟುವ ಕಾರಣವಿಲ್ಲ. ಕಾರಣ ನಮ್ಮ ಮಹಾಶಯರು ಇತ್ತ ಅವಶ್ಯ ಲಕ್ಷಗೊಟ್ಟು, ತಮ್ಮ ಬೆನ್ನಿಲುವಿನಂತಿರುವ ಒಕ್ಕಲಿಗರ ಹಿತವನ್ನೂ, ದೇಶದ ಹಿತವನ್ನೂ ಸಾಧಿಸುವರೆಂದು ಆಶಿಸುವೆನು.

(ಕ. ಗೋ. ಗೋಲಪ್ಪನವರ, ಹುಲಕೋಟಿ.)

ಸದ್ಯದ ಶಿಕ್ಷಣದಲ್ಲಿಯ ಕೊರತೆಗಳು

೧ ಐತಿಹಾಸಿಕ ಶಿಕ್ಷಣದ ಕೊರತೆ

ಸದ್ಯದ ಇತಿಹಾಸದಲ್ಲಿ ಸತ್ಯಸಂಧ, ನೀತಿಪರಾಯಣ, ಪ್ರಜಾಹಿತದ ನ್ಯಾಯನಿಪುಣ, ಶೂರ-ವೀರ-ಧೀರರಾದ ಅರಸು ಅ ಸಿಯರಾದ ನಮ್ಮವರ ವಿಸ್ತೃತ ಆದರ್ಶವತ್ತಾದ ವರ್ಣನಗಳಿಲ್ಲ. ಜ್ಞಾನ ವಿರಕ್ತಿಗಳಿಂದ ವಿರಾಜಿಸುತ್ತಿರುವ ಸಾಧು-ಸತ್ಪುರುಷರ ಚರಿತ್ರಗಳಿಲ್ಲ. ಪಂಡಿತವರ್ಯರೂ, ಶೋಧಕರೂ, ಮುತ್ಸದ್ದಿಗಳೂ, ರಾಜ್ಯಕಾರಭಾರ ಧುರಂಧರರೂ, ದೇಶಭಕ್ತರೂ, ಇವರೇ ಮೊದಲಾದವರ ಜೀವನ ಚರಿತ್ರಗಳಿಲ್ಲ. ಕರ್ತವ್ಯದರ್ಶಕ ಉಲ್ಲೇಖವಿಲ್ಲ. ಕಲಾಕೋವಿದರ ಸಂಗತಿಗಳಿಲ್ಲ. ಧರ್ಮಸ್ಥಾಪಕರ ಹೆಸರುಗಳ ಹೊರತು, ಹೆಚ್ಚಿನ ವಿಷಯಗಳು ಕಂಡುಬರುವದಿಲ್ಲ.

೨ ಧಾರ್ಮಿಕ ಶಿಕ್ಷಣದ ಅನಾಸ್ಥೆ

ಸದ್ಯದ ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣದ ಸಮಾವೇಶವೇ ಆಗಿರುವದಿಲ್ಲ. ನಮ್ಮ ಧರ್ಮದ ಮಹತ್ವವೇನು? ಧರ್ಮತತ್ವಗಳಾವವು? ಅವುಗಳಿಂದಾಗುವ ಲಾಭ-ಹಾನಿಗಳೇನು? ಇವಾವೂ ಇಲ್ಲವೇ ಇಲ್ಲ. ನೀತಿಶಿಕ್ಷಣಕ್ಕೆ ಧಾರ್ಮಿಕ ಶಿಕ್ಷಣವೇ ತಳಹದಿಯಲ್ಲವೇ? ಧಾರ್ಮಿಕ ಶಿಕ್ಷಣವೇ ಇಲ್ಲದ್ದರಿಂದ ನೀತಿಶಿಕ್ಷಣವೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

೩ ಶಾರೀರಿಕ ಶಿಕ್ಷಣದ ಅಲಕ್ಷ್ಯ

ಸದ್ಯದ ಶಿಕ್ಷಣವು ಶರೀರಸಂವರ್ಧನೆಯ ಕಡೆಗೆ ತುಸುವಾದರೂ ಲಕ್ಷ್ಯ ಗೊಟ್ಟಿರುವದಿಲ್ಲ. ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದವರೆಗೆ ಎಲ್ಲ ಶಿಕ್ಷಣದಲ್ಲಿಯೂ ಹಗಲು-ರಾತ್ರಿಗಳೆನ್ನದೆ, ಹಸಿವು-ನೀರಡಿಕೆಗಳೆನ್ನದೆ, ಕಣ್ಣಲ್ಲಿ ಕಣ್ಣಿಟ್ಟು ಪುಸ್ತಕಗಳನ್ನೋದುವದರಲ್ಲಿಯೇ ವಿದ್ಯಾರ್ಥಿಗಳ ಕಾಲವು ವ್ಯಯವಾಗುತ್ತಿರುವದು. ಶರೀರ ಬೆಳವಣಿಗೆಗೆ ಉತ್ತೇಜನವಿಲ್ಲ.

೪ ಕೈಗಾರಿಕೆಯ ಶಿಕ್ಷಣದ ಅಭಾವ

ಸದ್ಯದ ಶಿಕ್ಷಣ ಕ್ರಮದಲ್ಲಿ ಕೈಗಾರಿಕೆಯ ಶಿಕ್ಷಣವನ್ನೇ ಕೂಡಿಸಿರುವದಿಲ್ಲ. ಸದ್ಯದ ಶಿಕ್ಷಣವು ಪುಸ್ತಕೀ ಶಿಕ್ಷಣವು. ಸೇವಾವೃತ್ತಿಯ ಶಿಕ್ಷಣವು. ಸ್ವತಂತ್ರ ಧನೋತ್ಪಾದನಕ್ರಮವು ಇಲ್ಲವೇ ಇಲ್ಲ.

೫ ಯಾಂತ್ರಿಕ ಶಿಕ್ಷಣದ ನಕಾರ

ಸದ್ಯದ ಯುಗವು ಯಾಂತ್ರಿಕಯುಗವು. ಈ ಕಾಲದಲ್ಲಿ ಯಾಂತ್ರಿಕ ಕಲೆಯಲ್ಲಿ ಬಲ್ಲಿದರೇ ಮುಂದಾಗುವ ೨. ಸದ್ಯದ ಶಿಕ್ಷಣದಲ್ಲಿ ಯಾಂತ್ರಿಕ ಶಿಕ್ಷಣದ ಕಲೆಯೇ ಇಲ್ಲ. ಸ್ವತಂತ್ರ ಯಂತ್ರ ರಚನೆಯ ಜ್ಞಾನವೇ ಇಲ್ಲ. ಈಗಾಗುವ ಜ್ಞಾನವು ನಡಿಸುವ ಮಟ್ಟಿಗೆ ರಿಪೇರಿಮಾಡುವ ಮಟ್ಟಿಗೆ.

೬ ಕೃಷಿ-ಕರ್ಮ ಶಿಕ್ಷಣದ ದುರ್ಲಕ್ಷ

ನಮ್ಮದು. ಕೃಷಿಜೀವನದ ದೇಶವು ನೂರರಲ್ಲಿಯಂ ಕ್ಕಿಂತ ಹೆಚ್ಚಾದ ಜನರು ಕೃಷಿಯಿಂದಲೇ ಜೀವಿಸುವರು. ನಮ್ಮ ದೇಶದಲ್ಲಿ ಪಟ್ಟಣವಾಸಿಗಳು ತೀರ ಕಡಿಮೆ. ಹಳ್ಳಿಯ ನಿವಾಸಿಗಳೇ ಹೆಚ್ಚು. ಅವರ ಮುಖ್ಯ ಉದ್ಯೋಗವು ಒಕ್ಕಲತನವು. ಅವರಿಗೆ ತಕ್ಕ ಶಿಕ್ಷಣವೆಂದರೆ-ಭೂಮಿಯ ಗುಣಾವಗುಣ, ಗೊಬ್ಬರದ ಅವಶ್ಯಕತೆ? ಸ್ವಲ್ಪಭೂಮಿಯಲ್ಲಿ ಹೆಚ್ಚಾದ ಬೆಳೆಯನ್ನು ತೆಗೆದುಕೊಳ್ಳುವ ಜ್ಞಾನ, ಬೆಳೆಯ ಪರಿವರ್ತನದಿಂದಾಗುವಲಾಭ, ಇವೇ ಮುಂತಾದ ಒಕ್ಕಲತನದ ವಿಷಯಗಳೊಂದಿಗೆ ಇತರ ಓದು-ಬರಹಗಳಿರಬೇಕು. ಅಂದರೇ ಪರಿಣಾಮಕಾರಕವಾಗುವದು. ಅಂಥ ಶಿಕ್ಷಣವಂತೂ ಇಲ್ಲವೇಇಲ್ಲ.

ಹೀಗೆ ನಮ್ಮ ದೇಶಕ್ಕೆ ಪರಿಪೋಷಕಗಳಾದ ವಿಷಯಗಳಿಲ್ಲದ ಶಿಕ್ಷಣದಿಂದ, ಉತ್ಪನ್ನಕ್ಕಿಂತ ಖರ್ಚಿನಬಾಬನ್ನು ಬೆಳೆಯಿಸಹುಚ್ಚುವ ದುರ್ಗುಣಗಳನ್ನುಂಟುಮಾಡುವ ಶಿಕ್ಷಣದಿಂದ, ನಿರಭಿಮಾನವನ್ನುಂಟುಮಾಡುವ ನೀರಸ ಶಿಕ್ಷಣದಿಂದ ನಮ್ಮ ದೇಶವು ತೋರಿಕೆಗೆ ಭರಭರಾಟಿಯಲ್ಲಿರುವಂತೆ ಕಂಡುಬಂದರೂ, ನಿಜವಾಗಿ ಹೀನಾವಸ್ಥೆಗೆ ಹೋಗತೊಡಗಿದೆ. ಈಗೀಗ ಶಿಕ್ಷಣದ ದುಷ್ಪರಿಣಾಮಗಳು ನಮ್ಮ ಮುಂದಾಳುಗಳ ಲಕ್ಷದಲ್ಲಿ ಬರಹತ್ತಿವೆ. ಅವನ್ನು ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂದು ವಿಚಾರಪರರಾಗಿದ್ದಾರೆ. ಇದೊಂದು ನಮ್ಮ ದೇಶದ ಸುದೈವವೇಸರಿ.

ತಾ ॥ ೧೨-೭-೧೯೨೪ ಇಸ್ವಿ. { ಕಮಲನಾಭ ರಾಮಚಂದ್ರ ಅಡಬಡ್ಡಿ
ಹೆ. ಮಾಸ್ತರ ನಾಗಾವಿ.
ತಾಲೂಕಾ ಗದಗ.

ಸ್ವಿತ್ಸರ್ಲಂಡದ ಪ್ರಾಥಮಿಕ ಶಿಕ್ಷಣದ ವ್ಯವಸಾಯವು.

ಸ್ವಿತ್ಸರ್ಲಂಡವು ನಮ್ಮ ಭಾರತ ಮಾತೆಯಂತೆ ಫಲವತ್ತಾದ ಸಮನೆಲದ ದೇಶವಲ್ಲ. ಅದು ಗುಡ್ಡಗಾಡ ಪ್ರದೇಶವು. ಅಲ್ಲಿಯ ಹವೆಯು ಅತಿಶೀತವಾದದ್ದು ಅದಾಗ್ಯೂ ಆರೋಗ್ಯಕರವಾದದ್ದು. ಅದು ರಮಣೀಯವಾದ ಸೃಷ್ಟಿಸೌಂದರ್ಯಗಳಿಂದ ಹೆಸರಾಗಿದೆ. ಇದರಿ ಅದು ತೀರ ಸಣ್ಣ ರಾಜ್ಯವು. ವಿಸ್ತಾರದಲ್ಲಿ ನಮ್ಮ ದಕ್ಷಿಣಭಾಗಕ್ಕಿಂತ ಕಿರಿದು. ಜನಸಂಖ್ಯೆಯು ಸುಮಾರು ೪೦ ಲಕ್ಷ ಇರುವದು. ಅದರ ಸುತ್ತಮುತ್ತ ಫ್ರಾನ್ಸ, ಆಸ್ಟ್ರಿಯಾ ಇಟಲಿ ಎಂಬ ಪ್ರಬಲ ರಾಷ್ಟ್ರಗಳಿರುವವು. ಇಷ್ಟು ಸಣ್ಣ ರಾಷ್ಟ್ರದಲ್ಲಿ ಕೂಡ ಅನೇಕ ಭಾಷೆಗಳೂ ಮತಗಳೂ ಜನಾಂಗಗಳೂ ಇರುವವು. ಅಲ್ಲಿ ಕ್ಯಾಂಟನ್ ಎಂಬ ೨೨ ಭಾಗಗಳಿದ್ದು ೧೫ರಲ್ಲಿ ಜರ್ಮನ್, ೪ರಲ್ಲಿ ಫ್ರೆಂಚ, ೨ರಲ್ಲಿ ಇಟಾಲಿ ೧ರಲ್ಲಿ ರೋಮನ್ಸ ಎಂಬ ಭಾಷೆಗಳು ನಡೆಯುತ್ತವೆ. ಇವಲ್ಲದೆ ಇನ್ನೂ ಅನೇಕ ಕಾಡು ಸ್ಥಿತಿಯ ಭಾಷೆಗಳು ಬಳಿಕೆಯಲ್ಲಿವೆ. ಒಂದೇ ಭಾಗದಲ್ಲಿ ಒಬ್ಬರು ಆಡುವ ಮಾತು ಕೆಲವು ಮೈಲಿ ಇನ್ನೊಬ್ಬರಿಗೆ ತಿಳಿಯುವದಿಲ್ಲ. ಜರ್ಮನ್ ಮತ್ತು ಫ್ರೆಂಚ ಎರಡೂ ಸರಕಾರಿ ಸಂಸ್ಥೆಗಳಲ್ಲಿ ನಡೆಯುವವು. ಹೀಗೆ ಭಾಷಾಭೇದ, ಧರ್ಮಭೇದ, ವರ್ಣಭೇದಗಳುಳ್ಳ ಮತ್ತು ಬಲಾಢ್ಯರಾಷ್ಟ್ರಗಳ ಮಧ್ಯದಲ್ಲಿ ಸಿಕ್ಕಿಂಥ ಇಷ್ಟುಸಣ್ಣ ದೇಶವು ಕೂಡ ಪ್ರಾಚೀನಕಾಲದಿಂದ ತನ್ನ ಸ್ವಾತಂತ್ರ್ಯವನ್ನೂ ರಾಷ್ಟ್ರೀಯತ್ವವನ್ನೂ ಕಾಯ್ದು ಕೊಂಡಿರುವದು ಸೋಜಿಗವೇ ಸರಿ. ಇದಕ್ಕೆ ಅಲ್ಲಿಯ ಶಿಕ್ಷಣವೇ ಕಾರಣವು.

ಮೊದಲು ಶಿಕ್ಷಣ ಪ್ರಸಾರದ ಪವಿತ್ರಕಾರ್ಯವು ಫ್ರಾನ್ಸ, ಆಸ್ಟ್ರಿಯಾ ಮೊದಲಾದ ರಾಷ್ಟ್ರಗಳಲ್ಲಿದ್ದಂತೆ ಇಲ್ಲಿಯೂ ಧರ್ಮಗುರುಗಳ ಕೈಯಲ್ಲಿತ್ತು. ಬೇರೆಯವರು ಆ ಕಾರ್ಯಕ್ಕೆ ಅರ್ಹರೆಂಬ ಭಾವನೆ ಇದ್ದಿಲ್ಲ. ಆದರೆ ೧೯ನೆಯ ಶತಮಾನದ ಮಧ್ಯ ಭಾಗದಲ್ಲಿಯೇ ಶಿಕ್ಷಣ ವಿಷಯದಲ್ಲಿ ನೂತನವಾದ ಚಟವಟಿಕೆಯು ಪ್ರಾರಂಭವಾಯಿತು. ಇಲ್ಲಿಯ ಪ್ರಜಾಸತ್ತಾತ್ಮಕ ಸರಕಾರವು ಶಿಕ್ಷಣದ ಕಾರ್ಯವನ್ನು ಸ್ವತಃ ಕೈ ಕೊಂಡು ಅನೇಕ ಸುಧಾರಣೆಗಳನ್ನು ಮಾಡಿತು. ೧೮೭೪ರಲ್ಲಿಯೇ ಒತ್ತಾಯದ ಮತ್ತು ಉಚಿತವಾದ ಪ್ರಾಥಮಿಕ ಶಿಕ್ಷಣದ ಕಾಯದೆಯು ಪಾಸಾಗಿ ಪ್ರಚಾರದಲ್ಲಿ ಬಂದಿತು. ಅಂದಿನಿಂದ ೬ವರ್ಷ ವಯಸ್ಸಿನ ಯಾವತ್ತು ಬಾಲಬಾಲಿಕೆಯರು ಸಾಲೆಗೆ ಹೊಗಲೇಬೇಕಾಯಿತು, ಮತ್ತು ೧೪ ವರ್ಷ ವಯಸ್ಸು ತುಂಬುವವರೆಗೆ ತಪ್ಪದಲೇ ವಿದ್ಯಾಭ್ಯಾಸ ಮಾಡಬೇಕಾಯಿತು. ಅದ್ದರಿಂದ ಪ್ರತಿಯೊಬ್ಬ ಸ್ವಿಸ್ಸನಿಗೆ ನಿದಾನ ೮ವರ್ಷ ಅಧ್ಯಯನವು ಆಗೇ ತೀರುವದು.

ಅಧಿಕಾರಿಗಳು ೬ವರ್ಷ ವಯಸ್ಸಿನ ಬಾಲಬಾಲಿಕೆಯರ ಪಾಲಕರಿಗೆ ಶಾಲೆಯ ಹೊಸವರ್ಷಾರಂಭಕ್ಕೆ ೩ ತಿಂಗಳ ಮುಂಚಿತವಾಗಿಯೇ ಎಚ್ಚರಿಕೆಯನ್ನು ಕೊಡುವರು. ೬ವರ್ಷದಿಂದ ೧೪ ವರ್ಷದ ಒಳಗಿನ ಹುಡುಗ ನ್ನು ಧಂದೆಯಲ್ಲಿ ಸೇರಿಸಿದ ಪಾಲಕರಿಗೂ ದುಡಿಸಿಕೊಳ್ಳುವ ಯಜಮಾನರಿಗೂ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಡುವದು.

ಪ್ರಾ. ಶಿಕ್ಷಣವು ಉಚಿತವಾಗಿ ಕೊಡಲ್ಪಡುವದು. ಆದ್ದರಿಂದ ಪಾಲಕರಿಗೆ ಕೇವಲ ಪಾಟಿ, ಪುಸ್ತಕ, ಪೆನ್ಸಿಲ್ ಮುಂತಾದವುಗಳ ಬಗ್ಗೆ ವೆಚ್ಚ ತಗಲುವದು. ವೆಚ್ಚದ ಅರ್ಧವನ್ನು ಸರಕಾರದವರೂ ಅರ್ಧವನ್ನು ಸ್ಥಾನಿಕ ಸಂಸ್ಥೆಯವರೂ ನೋಡಿಕೊಳ್ಳುವರು. ಜನರಿಂದಲಾದ ೧೦ ದೊಡ್ಡ ದೊಡ್ಡ ದೇಣಿಗೆಗಳು ದೊರಕುವವು.

ಕೇವಲ ಓದು ಬರಹವೇ ಶಿಕ್ಷಣವೆಂದು ಸ್ವಿಸ್ಸರು ಎಂದೂ ತಿಳಿಯುವದಿಲ್ಲ. ಯೋಗ್ಯ ಮತ್ತು ಶಾಸ್ತ್ರೀಯ ಶಿಕ್ಷಣ ಪದ್ಧತಿಯೇ ರಾಷ್ಟ್ರದ ಜೀವಾಳವೆಂದು ಅವರು ತಿಳಿಯುವರು. ಶಿಕ್ಷಣದ ಅಭಿವೃದ್ಧಿಯೇ ರಾಷ್ಟ್ರದ ಉನ್ನತಿಯ ಕಾರಣವೆಂದು ಮನಗಂಡು ಅಲ್ಲಿಯ ಸರಕಾರವೂ ಜನರೂ ಬಹಳ ತತ್ಪರತೆಯಿಂದ ಕೆಲಸ ಮಾಡುತ್ತಿರುವರು. ಧಂದೆಯ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿಯೇ ಆರಂಭಿಸುವರು. ಬಾಲಕರಿಗೆ ಬಡಿಗತನ, ಕಮ್ಮಾರಿಕೆ ಮುಂತಾದ ಕಲೆಗಳನ್ನು ಕಲಿಸುವರು. ಈ ಶಿಕ್ಷಣವು ತೀರ ಕೆಳಗಿನ ವರ್ಗದಿಂದಲೇ ಪ್ರಾರಂಭವಾಗುವದು. ಚಿಕ್ಕ ಹುಡುಗರಿಗೆ ಉಳಿ, ಕೊಡತಿ ಉಚ್ಚಗೊರಡ, ಕರಗ ಮುಂತಾದವುಗಳನ್ನು ಕೊಟ್ಟು ಪಕ್ಷಿಗಳ ಗೂಡು, ಪೆಟ್ಟಿಗೆ ಮುಂತಾದ ಸಾಮಾನುಗಳನ್ನು ಮಾಡಲು ಕಲಿಸುವರು. ಬರಬರುತ್ತ ಖುರ್ಚಿ ಮೇಜು ಮೊದಲಾದ ಬಿಕ್ಕಟ್ಟಿನ ಸಾಮಾನುಗಳನ್ನು ಮಾಡಲಿಕ್ಕೆ ಹಚ್ಚುವರು. ಪಾಶ್ಚಿಮಾತ್ಯ ಬಾಳುವೆಗೆ ಊಟ ಬಟ್ಟೆಗಳ ನಂತರ ಖುರ್ಚಿ ಮೊದಲಾದ ಸಾಮಗ್ರಿಗಳು ಅಗತ್ಯವಾಗಿ ಬೇಕಾಗುವದರಿಂದ ಬಡಿಗತನದ ಶಿಕ್ಷಣವು ಅತ್ಯಂತ ಮಹತ್ವದ್ದಾಗಿದೆ. ಈ ಕಲೆಯನ್ನು ಅರಿಯದವ ಆ ದೇಶಗಳಲ್ಲಿ ದೊರೆಯುವದು ದುರ್ಲಭ. ಬಣ್ಣ ಹಚ್ಚುವದು, ಸುಳುವು ತೆಗೆಯುವದು, ವಾರ್ನಿಶ ಬಡಿಯುವದು ಇತ್ಯಾದಿ ಜ್ಞಾನವನ್ನು ಸಹ ಮಾಡಿಕೊಡುವರು.

ಬಾಲಕರನ್ನು ಕಾರಖಾನೆಗಳಿಗೆ ಮೇಲಿಂದಮೇಲೆ ಕರೆದುಕೊಂಡು ಹೋಗಿ ಅಲ್ಲಿ ನಡೆಯುತ್ತಿರುವ ಯಾವತ್ತು ವಿಷಯಗಳನ್ನು ಪ್ರತ್ಯಕ್ಷ ತೋರಿಸಿ ತಿಳಿಸಿ ಹೇಳುವರು. ದೊಡ್ಡ ದೊಡ್ಡ ಶಾಲೆಗಳಿಗೆ ಧಂದೆಯ ಶಿಕ್ಷಣಕ್ಕಾಗಿ ಕಾರಖಾನೆಗಳನ್ನೂ ಒಕ್ಕಲತನದ ಶಿಕ್ಷಣಕ್ಕಾಗಿ ಫಾರ್ಮ (ಹೊಲ) ಗಳನ್ನೂ ಜೋಡಿಸಿರುವರು. ಹೀಗೆ ಧನೋತ್ಪಾದನೆಯ ವಿದ್ಯೆಯನ್ನು ಪ್ರಾಥಮಿಕ ಶಾಲೆಗಳಲ್ಲಿಯೆ

ಅಕ್ಷರಾಭ್ಯಾಸದಕೂಡ ಮಾಡಿಸುವರು. ಆದ್ದರಿಂದ ಆ ದೇಶದಲ್ಲಿಲ್ಲ ಉದ್ಯೋಗಿಗಳೇ ಇರುವರಲ್ಲದೆ ಉಂಡಾಡುಗಳು ಇರುವದಿಲ್ಲ.

ಬಾಲಿಕೆಯರಿಗೆ ಹೊಲಿಯುವದು, ಹೆಣೆಯುವದು, ಕಸೂತಿ ತೆಗೆಯುವದು, ಚಿತ್ರತೆಗೆಯುವದು ಇತ್ಯಾದಿ ಕಲೆಗಳನ್ನು ಕಲಿಸುವರು. ವರ್ಷಾಂತ್ಯದಲ್ಲಿ ಕಲಾಕೌಶಲ್ಯದ ಪ್ರದರ್ಶನವನ್ನು ಮಾಡಿ ಬಾಲಬಾಲಕಿಯರಿಗೆ ಉತ್ತೇಜನಾರ್ಥವಾಗಿ ಪಾರಿತೋಷಕಗಳನ್ನು ಕೊಡುವರು. ಮೇಲಿನ ಇಯತ್ತೆಗಳಲ್ಲಿ ಅಡಿಗೆ ಮಾಡುವದನ್ನೂ ಮನೆಯನ್ನು ಹೆಸನಾಗಿಯೂ ವ್ಯವಸ್ಥಿತವಾಗಿಯೂ ಇಡುವದನ್ನೂ ಬೇನೆಯವರ ಚಾಕರಿಕೆ ಮಾಡುವದನ್ನೂ ಕೂಸುಗಳ ಸಂಗೋಪನವನ್ನೂ ಕಲಿಸುವರು. ಆದರಿಂದ ಸ್ವಿಟ್ಸರ್ಲಂಡಿನ ಹೆಣ್ಣುಮಕ್ಕಳು ವಿದ್ಯಾವಂತೆಯರೂ ಗೃಹಕೃತ್ಯದ ವಿಷಯವನ್ನು ಚನ್ನಾಗಿ ಬಲ್ಲವರೂ ಆಗಿದ್ದು ಒಳ್ಳೇ ಗೃಹಣಿಯರಾಗಿದ್ದಾರೆ.

ಹುಡುಗರಿಗೆ ಮೇಲಿನ ಇಯತ್ತೆಗಳಲ್ಲಿ ಯುಷ್ಟಿಕಲೆಯನ್ನು ಕಲಿಸುವರು. ಆದರೆ ಆಟ ಮತ್ತು ವ್ಯಾಯಾಮದ ಕಡೆಗೆ ಬಹಳ ಲಕ್ಷ್ಯಕೊಡುವರು. ಸ್ವಿತ್ಸರ್ಲಂಡಿನ ಜನರು ವಾಡಿಕೆಯಾಗಿ ಆಟಗಳಲ್ಲಿ ಬಹಳ ಆಸಕ್ತಿಯುಳ್ಳವರು. ಅಬಾಲವೃದ್ಧರು ಒಂದಿಲ್ಲೊಂದು ಆಟದಲ್ಲಿ ಸೇರಿಕೊಳ್ಳುವರು. ಇಡೀದೇಶದಲ್ಲಿಲ್ಲ ಆಟದ ಸಂಘಗಳು ಇರುವವು.

ಹುಡಿಗೆಯರಿಗೆ ಸಹ ವ್ಯಾಯಾಮ ಮಾಡಿಸುವರು. ಹಿಂದಕ್ಕೆ, ಹಾರಾಡುವದು, ಓಡಾಡುವದು ಸ್ತ್ರೀಯರಸೌಜನ್ಯಕ್ಕೆ ತಕ್ಕದ್ದಲ್ಲವೆಂಬ ಭಾವನೆಯು ದೃಢವಾಗಿತ್ತು. ಆದರೆ ಈಗ ವ್ಯಾಯಾಮದಿಂದ ಸ್ತ್ರೀಧರ್ಮಕ್ಕೆ ಕುಂದು ಉಂಟಾಗುವದರ ಬದಲು ಹೆಚ್ಚಿನ ಕಳೆಯು ಪ್ರಾಪ್ತವಾಗುವದೆಂದು ಅನುಭವಪಟ್ಟಿದ್ದಾರೆ.

ಬಾಲಬಾಲಕಿಯರಿಗೆ ಸ್ವಚ್ಛತೆಯಿಂದಲೂ, ಅಚ್ಚುಕಟ್ಟುತನದಿಂದಲೂ ಇರಲಿಕ್ಕೆ ಕಲಿಸುವರು. ಪಾಲಕರು ಈ ವಿಷಯದಲ್ಲಿ ಚನ್ನಾಗಿ ಜಾಗ್ರತರಾಗಿರುವರೆಂದು ಗ್ರಹಿಸದೆ, ವಾರಕ್ಕೊಂದಾವರ್ತಿ ಎಲ್ಲ ಹುಡುಗರಿಗೆ ಸ್ನಾನಮಾಡಿಸುವರು. ಹುಡುಗರು ಅಂದು ಮನೆಯಿಂದ ಮಡಿಯ ಅರಿವೆಗಳನ್ನು ಸಾಲಿಗೆ ತರುವರು. ಇದಕ್ಕೆ ತಪ್ಪಿದಲ್ಲಿ ಶಿಕ್ಷೆಯು ವಿಧಿಸಲ್ಪಡುವದು.

ಮಿತವ್ಯಯದಿಂದ ಇರುವ ಚಟವನ್ನು ಕಲಿಸುವದಕ್ಕಾಗಿ ಪ್ರತಿಶಾಲೆಯಲ್ಲಿಂದು ಬ್ಯಾಂಕನ್ನು ಸ್ಥಾಪಿರುವರು. ವಾರಕ್ಕೊಂದಾವರ್ತಿ ಹುಡುಗರು ತಮ್ಮ ಪಾಲಕರಿಂದ ತಂದ ಹಣದಲ್ಲಿ ೨ ಆಣೆಯನ್ನಾದರೂ ಉಳಿಸಿ ಇಡತಕ್ಕದ್ದು. ಶಿಕ್ಷಕರೇ ಬ್ಯಾಂಕಿನ ಕೆಲಸವನ್ನು ನೋಡುವರು. ಠೇವಿನ ಮೇಲೆ ೩ ರಂತೆ ಬಡ್ಡಿಯು ಕೊಡಲ್ಪಡುವದು. ಹುಡುಗರಲ್ಲಿ ಈ ವಿಷಯದಲ್ಲಿ ಬಹಳ ಮೇಲಾಟವಿರುವದು. ಇದರಿಂದ ಬ್ಯಾಂಕಿನ ಮಹತ್ವವೂ ಅದನ್ನು ನಡಿಸುವ ವಿದ್ಯೆಯೂ ವಿದ್ಯಾರ್ಥಿಗಳಿಗೆ ಗೊತ್ತಾಗುವದಲ್ಲದೆ ಹಣದ ಮಹತ್ವವಾದರೂ ಅವರಿಗೆ ತಿಳಿಯು

ಪ್ರಾಥಮಿಕ ಶಿಕ್ಷಣವು ಹೀಗೆ ಎಂಟು ವರ್ಷಗಳ ವರೆಗೆ ಸಿಗುವದು. ನಿಧಾನ ಇಷ್ಟು ವಿದ್ಯಾಭ್ಯಾಸವು ಪ್ರತಿಯೊಬ್ಬರಿಗೆ ದೊರೆಯುವದು. ಅವರೆ ಹೆಚ್ಚಿನ ಅಕ್ಷರಾಭ್ಯಾಸವನ್ನಾಗಲಿ, ಔದ್ಯೋಗಿಕ ಶಿಕ್ಷಣವನ್ನಾಗಲಿ ಹೊಂದಬೇಕೆಂಬುವವರು ಮಾಧ್ಯಮಿಕ ಶಾಲೆಗಳಿಗೂ ಆಮೇಲೆ ಕಾಲೇಜುಗಳಿಗೂ ಹೋಗುವರು. ವಿದ್ಯಾರ್ಥಿಗಳ ಪ್ರವೃತ್ತಿ, ಅಭಿರುಚಿ, ಜಾಣತನ ಮುಂತಾದ್ದನ್ನು ಕಂಡುಹಿಡಿದು ಅವರಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸುವರು.

ಶಿಕ್ಷಣವೆಂದರೆ ಕೇವಲ ಓದುಬರಹದ ಜ್ಞಾನವೆಂದಾಗಲೀ ಭಾಷಾಪಾಂಡಿತ್ಯವೆಂದಾಗಲೀ ಸ್ವಿಸ್ಸರು ಬಗೆಯುವದಿಲ್ಲ. ಪ್ರಪಂಚವೆಂಬ ಯುದ್ಧರಂಗದಲ್ಲಿ ಹೋರಾಡಲಿಕ್ಕೆ ವಿದ್ಯಾರ್ಥಿಗಳನ್ನು ವೀರರನ್ನಾಗಿ ಮಾಡುವ ಯುದ್ಧಕಲೆ ಎಂದು ನಂಬುವರು. ಈ ಯುದ್ಧದಲ್ಲಿ ಅವರು ಜಯಪ್ರವರಾಗಲಿಕ್ಕೆ ಅವರವರ ಗುಣ, ಶೀಲ, ಸ್ವಭಾವಗಳಿಗೆ ಸರಿಯಾದ ವಿದ್ಯೆಯನ್ನು ಕೊಡುವದೇ ಶಿಕ್ಷಣದ ಮುಖ್ಯ ಹೇತುವಾಗಿದೆ. ಸ್ವಿತ್ಸರ್ಲಂಡವು ತೀರ ಸಣ್ಣ ದೇಶವಿದ್ದರೂ ಅಲ್ಲಿಲ ಪ್ರಸಿದ್ಧ ವಿಶ್ವವಿದ್ಯಾಲಯಗಳಿರುವವು. ಇಂಗ್ಲಂಡ, ಫ್ರಾನ್ಸ ಜರ್ಮನಿ ಮೊದಲಾದ ಯಾವತ್ತು ರಾಷ್ಟ್ರಗಳಿಂದ ಪ್ರೌಢ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಬರುವರು. ಇದರಿಮೇಲಿಂದ ಆ ದೇಶವು ಎಷ್ಟು ಗಾ ವಕ್ಕೆ ಭಾಜನವಾಗಿರುವದೆಂಬದು ಗೊತ್ತಾಗುವದು. ಈ ಕಾರಣದಿಂದ ಆದೇಶವು ಪ್ರಸಿದ್ಧ ರಾಷ್ಟ್ರಗಳಲ್ಲೊಂದಾಗಿದೆ. ನಮ್ಮ ಇಡೀ ಕರ್ನಾಟಕದಲ್ಲಿ ಒಂದು ಕಾಲೇಜದ ಹೊರ್ತು ಇನ್ನೊಂದಿಲ್ಲ. ಇದರಿಂದ ನಮ್ಮ ದೇಶವು ವಿದ್ಯಾಭ್ಯಾಸದಲ್ಲಿ ಎಷ್ಟು ಹಿಂದುಳಿದಿರುವದೆಂಬದು ಸಹಜವಾಗಿ ಗೊತ್ತಾಗುವದು.

ಕಳೆದ ಸಂಚಿಕೆಯಲ್ಲಿ ಆಸ್ಟ್ರೇಲಿಯಾ ದ್ವೀಪದ ಕ್ವೀನ್ಸಲ್ಯಾಂಡ ಪ್ರಾಂತದ ಶಿಕ್ಷಣದ ವ್ಯವಸಾಯವನ್ನು ಕೊಟ್ಟಿದ್ದೆವು ಮುಂದಿನ ಸಂಚಿಕೆಯಲ್ಲಿ. ಜರ್ಮನಿಯ ವಿಷಯವಾಗಿ ಬರೆಯುವೆವು.

ಸಂಪಾದಕ.

ಶಿಕ್ಷಣದ ನಾಲ್ಕು ಮೆಟ್ಟುಗಳು.

೧ ನೆಯ ಮೆಟ್ಟು—ಬೌದ್ಧಿಕ ಮತ್ತು ನೈತಿಕ ಶಿಕ್ಷಣ.

ಹುಡುಗನು ಜಾಣರೂ ಸದಾಚಾರಿಗಳೂ ಆಗುವಂತೆ ಶಿಕ್ಷಣವನ್ನು ಕೊಡುವದು. ಇದು ಇತಿಹಾಸದ ಮಾರ್ಮಿಕ ಪಾಠಗಳಿಂದಲೂ, ಸತ್ಪುರುಷರ ಮತ್ತು ಪ್ರಸಿದ್ಧ ಪುರುಷರ ಚರಿತ್ರಗಳಿಂದಲೂ, ಸೃಷ್ಟಿಯ ಅಗಾಧ ವ್ಯಾಪಾರ ಮತ್ತು ಸೌಂದರ್ಯಗಳಿಂದಲೂ, ಕಲಾಕೌಶಲ್ಯ ಮತ್ತು ಔದ್ಯೋಗಿಕ ಪ್ರದರ್ಶನದಿಂದಲೂ ಸುಲಭಸಾಧ್ಯವಾಗುವದು.

೨ ನೆಯ ಮೆಟ್ಟು—ಜ್ಞಾನ ಸಂಪಾದನ

ಓದುಬರಹ, ಪ್ರವಾಸ, ಭಾಷಣ, ಪ್ರಯೋಗ, ವೈಶ್ಯ ಮೊದಲಾದವು ಜ್ಞಾನ ಸಂಪಾದನೆಯ ಸಾಧನಗಳು. ಇಲ್ಲಿ 'ಕೆಲವಂ ಬಲ್ಲನರಿಂದೆ' ಎಂಬ ಶತಕವು ನೆನಪಾಗುವದು.

೩ ನೆಯ ಮೆಟ್ಟು—ಭಾವೀಪ್ರಪಂಚದ ಸಿದ್ಧತೆಯ ಶಿಕ್ಷಣ.

ಹುಡುಗನು ಹೀಗೆ ಸಾಮಾನ್ಯ ಶಿಕ್ಷಣವನ್ನು ದೊರಕಿಸಿದಮೇಲೆ, ತನ್ನ ಆತ್ಮೋದ್ಧಾರಕ್ಕೂ ತನ್ನವರ ಪರಿಪಾಲನೆಗೂ ಧನೋತ್ಪಾದನೆಯ ಒಂದಾಗಲಿ ಎರಡಾಗಲಿ ಉದ್ಯೋಗವನ್ನು ಚನ್ನಾಗಿ ಕಲಿಯಬೇಕು. ಅಂದರೆ ಧಂದೆಯ ಶಿಕ್ಷಣವು ಕೊಡಲ್ಪಡಬೇಕು. ಇಲ್ಲಿ ಅದಷ್ಟು ಅವರವರ ಜಾಣತನ ಮತ್ತು ಸೇರಿಕೆಗೆ ಸರಿಯಾದ ಧಂದೆಯು ಕಲಿಸಲ್ಪಡುವದಲ್ಲದೇ ಸಾಮಾನ್ಯ ಕೈಗಾರಿಕೆಯ ವಿದ್ಯೆಯು ಬರಬೇಕು.

೪ ನೆಯ ಮೆಟ್ಟು—ಸಾಮಾಜಿಕ ಶಾಸ್ತ್ರ.

ಮನುಷ್ಯನು ಏಕಾಕಿಯಾಗಿ ಇರದೆ ಸಮಾಜದಲ್ಲಿರಲು ಪ್ರೀತಿಸುವನಾದ್ದರಿಂದ ಹಳ್ಳಿ, ಪಟ್ಟಣ, ದೇಶ, ಸಂಘಗಳು ಮುಂತಾದವು ಅಸ್ತಿತ್ವದಲ್ಲಿ ಬಂದಿವೆ. ಮನುಷ್ಯನು ಸಮಾಜದ ಒಂದು ಘಟಕನಾದ್ದರಿಂದ, ಸಾಮಾಜಿಕನಾಗಿ ವರ್ತಿಸಲು ಕಲಿಯಬೇಕು. ಮತ್ತು ಸಾಮಾಜಿಕ ಚಟವಟಿಕೆಗಳಲ್ಲಿ ತನ್ನ ಶಕ್ತ್ಯನುಸಾರ ಮಾಡಿಯಬೇಕು. 'ಪ್ರತಿಯೊಬ್ಬನು ಎಲ್ಲರ ಸಲುವಾಗಿ' ಎಂಬ ತತ್ವವನ್ನು ಮನಗಂಡು, ಸಹಕಾರ ಚಳವಳಿ, ಸ್ಥಾನಿಕಸ್ವರಾಜ್ಯ, ಗ್ರಾಮಪಂಚಾಯತಿ, ವಿದ್ಯಾವರ್ಧಕಸಂಘ, ವಾಚನಾಲಯ, ವ್ಯಾಯಾಮಸಂಘ, ರೈತರಸಂಘ, ರಾಷ್ಟ್ರೀಯ ಸಭೆಗಳು, ಕೋರ್ಟು-ಕಚೇರಿ, ಕಾಯದೆ ಕಾನೂನ ಸಭೆ ಮುಂತಾದ ಸಂಕಾರ್ಯ, ಮತ್ತು ಸ್ವತಂತ್ರ ಸಂಸ್ಥೆಗಳು ನಡೆಯುತ್ತಿರುವ ಮತ್ತು ಅವುಗಳನ್ನು ನಡೆಯಿಸುತ್ತಿರುವ ಜ್ಞಾನ ಸಂಪಾದನೆಯನ್ನು ಪಡೆಯುವದಲ್ಲದೆ ತಾನೂ ಸಾಂಘಿಕ ಕಾರ್ಯಗಳಲ್ಲಿ ಅದಷ್ಟು ಸೇರಿಕೊಳ್ಳಬೇಕು. ಸಮಾಜದಲ್ಲಿಯ ಅವನ ಯೋಗ್ಯತೆಯು ಅವನ ಈ ಕಾರ್ಯದಿಂದಲೇ ಗೊತ್ತಾಗುವದು.

ಸಂಪಾದಕ.

ಶಿಕ್ಷಕನು ನೆನಪಿನಲ್ಲಿಡತಕ್ಕ ನಾಲ್ಕು ಮಾತುಗಳು.

೧. ಜ್ಞಾನಕ್ಕಿಂತ ಜಾಣತನ ಮತ್ತು ತಿಳಕೊಳ್ಳುವ ಶಕ್ತಿ ಇವು ಹೆಚ್ಚಿನವು. ಚೀಲದಲ್ಲಿ ಕಾಳು ತುಂಬಿದಂತೆ ಹುಡುಗರ ಒಡಲಲ್ಲಿ ಜ್ಞಾನವನ್ನು ತುಂಬುವದು ನಿಷ್ಪ್ರಯೋಜಕವು. ಜ್ಞಾನವನ್ನು, ದೊರಕಿಸುವ ಶಕ್ತಿಯನ್ನೂ ಉಪಯೋಗಿಸುವ ಜಾಣತನವನ್ನೂ ಉಂಟುಮಾಡುವದು ಶಿಕ್ಷಕನ ಕರ್ತವ್ಯವಾಗಿದೆ.

೨. ಹುಡುಗರಿಗೆ ಹಾಗೆ ಮಾಡಬೇಡ ಹೀಗೆ ಮಾಡಬೇಡ ಎಂದು ಅವರನ್ನು ಕಟ್ಟಿನಲ್ಲಿಡುವದಕ್ಕಿಂತ ಇದನ್ನು ಹೀಗೆ ಮಾಡು ಅದನ್ನು ಹಾಗೆ ಮಾಡು ಎಂದು ಹೇಳಿ ಮಾರ್ಗವನ್ನು ತೋರಿಸುವದು ಉಯಾದದ್ದು. ಮಾಡಬೇಡ ಎಂಬುವದು ಹುಡುಗನ್ನು ನಿರುತ್ಸಾಹಿಗಳನ್ನೂ ನಿರುದ್ಯೋಗಿಗಳನ್ನೂ ಮಾಡುವದು. ಮಾಡು ಎಂಬುವದು ಬಾಲಕನ್ನು ಹುಮ್ಮಸ್ಸು ಗೊಳಿಸುವದಲ್ಲದೆ ಕಾರ್ಯತತ್ಪರನನ್ನಾಗಿ ಮಾಡುತ್ತದೆ.

೩. ಸಿಸ್ತಿನ ಕಟ್ಟಿನಲ್ಲಿಡುವದಕ್ಕಿಂತ ಸ್ವೇಚ್ಛೆಯ ಕಾರ್ಯದಲ್ಲಿ ತೊಡಗಿಸುವದು ಲೇಸು. ಕರ್ತವ್ಯಕರ್ಮನೆಂದು ಜುಲುಮೆಯಿಂದ ಮಾಡಹಚ್ಚುವದಕ್ಕಿಂತ ಕೈಕೊಂಡ ಕೆಲಸದಲ್ಲಿ ಅನುರಾಗವನ್ನು ಹುಟ್ಟಿಸಿ ಕೆಲಸಮಾಡಿಸುವದು ಸರಿಯಾದದ್ದು. ಅಂದರೆ ಕರ್ತವ್ಯಕರ್ಮಗಳ ತೀರ್ಪುಗಳಿಗಿಂತ ಆ ಕ್ತಿಯ ಸೆಳವು ಬಲವತ್ತರವಾದದ್ದು. ಅದರಿಂದ ಹುಡುಗರು ಅಗಾಧವಾದ ಕೆಲಸಗಳನ್ನು ಸಹ ಮಾಡುವರು. ಸ್ವಯಂಸ್ಫೂರ್ತಿಯ ಮತ್ತು ಸೇರಿಕೆಯ ಪ್ರಭಾವವು ಪ್ರಗತಿಯಸನ್ನೆ ಕೋಲಾಗಿರುವದು.

೪. ಸ್ವತಂತ್ರ ವಿಚಾರ ಮಾಡಿ ತಿಳಕೊಂಡ ಜ್ಞಾನಲವವು ತಿಳಿಯದೆ ಸಂಚಯಿಸಿದ ಗುಡ್ಡದಷ್ಟು ಜ್ಞಾನಕ್ಕಿಂತ ಪೆಗ್ಗಳವಾದದ್ದು. ಚಿಕ್ಕಮಕ್ಕಳಲ್ಲಿ ಗ್ರಹಣಶಕ್ತಿ, ಅನುಕರಣಶಕ್ತಿ ಮತ್ತು ಚಿಕಿತ್ಸಕ ಬುದ್ಧಿ ಇವುಗಳು ವಿಪುಲವಾಗಿರುವವು. ವಯಸ್ಸಾದಂತೆ ಅವು ಕಡಿಮೆಯಾಗುತ್ತ ವಿಚಾರಶಕ್ತಿ, ವಿವೇಕ ಮೊದಲಾದ ಶಕ್ತಿಗಳು ವಿಕಾಸ ಹೊಂದುವವು. ಕಾರಣ ಅವುಗಳ ಪೂರ್ಣ ಲಾಭವನ್ನು ಹೊಂದುವಂತೆಯೂ, ಅವುಗಳು ಜನ್ಮಾಗಿ ವಿಕಾಸ ಹೊಂದುವಂತೆಯೂ ಶಿಕ್ಷಕನು ಯಾವಾಗಲೂ ಪ್ರಯತ್ನಿಸತಕ್ಕದ್ದು.

ಸಂಪಾದಕ.

ಹಿಂದುಸ್ತಾನದಲ್ಲಿ ಬೌದ್ಧಧರ್ಮವು ಹೇಗೆ ಲಯ ಹೊಂದಿತು?

ಹುವೆನ್‌ತ್ಸ್ಯಾಂಗ ಮತ್ತು ಫಾಹಿಯಾನ ಮೊದಲಾದ ಚಿನೀಯಾತ್ರಿಕರ ವರ್ಣನೆಗಳಮೇಲಿಂದ ಮೊದಲು, ಸಮ್ರಾಟ್ ಅಶೋಕನ ತರುವಾಯ ಕನಿಷ್ಕನು ಬೌದ್ಧಧರ್ಮದ ಪ್ರಚಾರವನ್ನು ಕೆಲಮಟ್ಟಿಗೆ ಮಾಡಿದನು. ಈ ಕನಿಷ್ಕನ ತರುವಾಯ ಹಿಂದುಸ್ತಾನದಲ್ಲಿ ಬೌದ್ಧ ಧರ್ಮದ ನಾಶವು ಆಗ ಹತ್ತಿತು. ಕೆಲವು ಪಾಶ್ಚಿಮಾತ್ಯ ಲೇಖಕರು ದಂತಕಥೆಗಳ ಅಧಾರದ ಮೇಲಿಂದ ಬ್ರಾಹ್ಮಣರೇ ಬೌದ್ಧಜನರಮೇಲೆ ಅತ್ಯಾಚಾರಮಾಡಿ ಅವ ವಿಹಾರಗಳನ್ನು ನಾಶಮಾಡಿದರೆಂದು ಬರೆಯುತ್ತಾರೆ. ಆದರೆ ಇಷ್ಟೇ ಕಾರಣವು ನಿಜವೆಂದು ನಂಬಲಿಕ್ಕಾಗುವದಿಲ್ಲ. ಯಾಕಂದರೆ ಆಕಾಲಕ್ಕೆ ಎಲ್ಲಕಡೆಗೂ ರಾಜ್ಯಕ್ರಾಂತಿಗಳು ನಡದೇ ಇದ್ದವು. ಆ ಗೊಂದಲದಲ್ಲಿ ಅನೇಕ ವಿಹಾರಗಳು ನಾಶಹೊಂದುತ್ತಿದ್ದವು. ವೈರಿಗಳಮೇಲಿನ ಸಿಟ್ಟಿನಿಂದ ದಂಡಾಳುಗಳು ಸುಮ್ಮ ಸುಮ್ಮನೆ ಅವುಗಳನ್ನು ಕೆಡಹಿ ಬಿಡುತ್ತಿದ್ದರು; ಆದಾಗ್ಯೂ ಕಾಶ್ಮೀರ, ಸಿಂಧ, ಮೊದಲಾದ ಪ್ರಾಂತಗಳಲ್ಲಿ ಬೌದ್ಧಧರ್ಮವು ಪ್ರಬಲವಾಗಿಯೇ ಇತ್ತು. ಗಂಗಾ ಯಮುನಾ ನದಿಗಳ ತೀರದಲ್ಲಿರುವ ತೀರ್ಥಗಳಲ್ಲಿ ಮಾತ್ರ, ವೈದಿಕ ಧರ್ಮದ ಪುನರುದ್ಧಾರವು ಒಳ್ಳೇ ಜೋರಿನಿಂದ ಆಗತೊಡಗಿತ್ತು.

ಅದೇ ವೇಳೆಯ ಸುಮಾರಿಗೆ ಕನೋಜದಲ್ಲಿ ಶಿಲಾದಿತ್ಯ (ಶ್ರೀಹರ್ಷ) ನೆಂಬ ಒಬ್ಬ ಬೌದ್ಧರಾಜನು ರಾಜ್ಯವಾಳುತ್ತಿದ್ದನು. ಸನ್ ೬೫೪ನೇ ಇಸವಿಯಲ್ಲಿ ಇವನು ತನ್ನ ರಾಜಧಾನಿಯಲ್ಲಿ ಬೌದ್ಧಧರ್ಮದ ಒಂದು ದೊಡ್ಡ ಉತ್ಸವವನ್ನು ಮಾಡಿದನು. ವೈದಿಕ ಧರ್ಮದ ಬೆಳವಣಿಗೆಗಾದರೂ ಇವನು ಹೆಚ್ಚಿಗೆ ಪ್ರಯತ್ನಮಾಡಿದನು. ಇ. ಸನ್ ೬೫೦ ರಲ್ಲಿ ಹುವೆನ್‌ತ್ಸ್ಯಾಂಗನು ತನ್ನ ಹಿಂದೂದೇಶದ ಯಾತ್ರೆಯನ್ನು ಮುಗಿಸಿಕೊಂಡು ಸ್ವದೇಶಕ್ಕೆ ಮರಳಿ ಹೋದ ಬಳಿಕ ಬೌದ್ಧಧರ್ಮದ ಅವನತಿಗೆ ಮೇರೆಯೇ ಇಲ್ಲದಾಯಿತು. ಯಾಕಂದರೆ ಇದೇಸುಮಾರಿಗೆ ಕುಮಾರಿಲಭಟ್ಟನೆಂಬವನು ಬೌದ್ಧರ ಮತ್ತು ಜೈನರ ಸಂಗಡ ಶಾಸ್ತ್ರಾರ್ಥದ ವಾದವಿವಾದಮಾಡಿ ವೈದಿಕಧರ್ಮದ ಪ್ರಚಾರವನ್ನು ಜೋರಿನಿಂದ ನಡಿಸಿದನು. ಕುಮಾರಿಲಭಟ್ಟರ ನಂತರ ಶ್ರೀಶಂಕರಾಚಾರ್ಯರು ಇಡೀ ಹಿಂದುಸ್ತಾನದಲ್ಲಿ ಸಂಚಾರಮಾಡಿ ಮುಖ್ಯ ಮುಖ್ಯ ಸ್ಥಳಗಳಲ್ಲಿ ವೈದಿಕಧರ್ಮದ ಮಠಗಳನ್ನು ಸ್ಥಾಪಿಸಿದರು, ಮತ್ತು ಅನೇಕ ಶಾಸ್ತ್ರಗಳನ್ನು ಓದಿ ಜನರಿಗೆ ತಿಳಿಸಿಹೇಳುತ್ತ ವೈದಿಕಧರ್ಮವನ್ನು ಪುನರುಜ್ಜೀವನಗೊಳಿಸಿದರು.

ಈ ಬಗೆಯಾಗಿ ವೈದಿಕಧರ್ಮದ ಪ್ರಚಾರಕರು ಒಂದುರೀತಿಯಿಂದ ಬೌದ್ಧಧರ್ಮವನ್ನು ಹೊಡೆದೋಡಿಸುವ ಪ್ರಯತ್ನ ನಡಿಸಿದರು ಮತ್ತು ಇಸ್ಲಾಮಿ ಧರ್ಮವು ಮಧ್ಯ ಏಶಿಯಾದಲ್ಲೆಲ್ಲ ಪ್ರಸಾರವಾಗಿ ಬೌದ್ಧಧರ್ಮವನ್ನು ಅಲ್ಲಿಂದ ಹೊರಗೆ ಹಾಕಿತು. ಸ್ವತಃ ಬೌದ್ಧಧರ್ಮದೊಳಗೇ ಪರಪ್ಪರಲ್ಲಿ ಮತಭೇದ

ಮತ್ತು ಈರ್ಷಾದ್ವೇಷಗಳ ವೃದ್ಧಿಯೂ ಆಗಹತ್ತಿತು. ಭಿಕ್ಷುಕ ಭಿಕ್ಷುಕಿಯರ ಲ್ಲಿ ಸದಾಚಾರ ಮತ್ತು ನೀತಿಗಳ ಅಭಾವವಾಗಹತ್ತಿತು. ಇವರು ತಮ್ಮ ಸದಾ ಚಾರಗಳನ್ನು ದುರ್ಲಕ್ಷಿಸಿ ಸಂಸಾರ ಸುಖವಲ್ಲಿ ನಿಮಗ್ನರಾದರು. ವೈದಿಕಧರ್ಮ ಪ್ರಚಾರಕರ ದೀರ್ಘ ಪ್ರಯತ್ನ, ಮತ್ತು ಬೌದ್ಧ ಸಾಧುಗಳ ಅನಾಚಾರ ಇವುಗ ಳ ಪರಿಣಾಮದಿಂದ ಬೌದ್ಧಧರ್ಮವು ಕಟ್ಟಕಡೆಗೆ ವೈದಿಕಧರ್ಮದಲ್ಲಿ ಕೂಡಿಹೋ ಯಿತು. ಆದರೆ ಬೌದ್ಧ ಭಿಕ್ಷುಗಳ ಮೇಲೆ ಅವರ ವಿಪಕ್ಷೀಯರ ಅತ್ಯಾಚಾ ರವು ಸ್ವಲ್ಪಾದರೂ ನಡೆಯಲೇ ಇಲ್ಲವೆಂದಲ್ಲ ಹುವೆನ್‌ತ್ಸಾಂಗ ಮತ್ತು ಫೋಂಗಪೂ ಎಂಬ ಯಾತ್ರಿಕರು ತಮ್ಮ ಯಾತ್ರಾವರ್ಣನೆಯಲ್ಲಿ ಮಿಹಿರಕುಲನೆಂ ಬ ಕಾಶ್ಮೀರ ರಾಜನು ಗಾಂಧಾರ (ಕಂದಹಾರ) ರಾಜ್ಯದಮೇಲೆ ದಾಳಿಮಾಡಿ ದಾಗ, ತನಗೆ ದಾರಿಯಲ್ಲಿ ಕಂಡ ಯಾವತ್ತು ಬೌದ್ಧ ವಿಹಾರಗಳನ್ನು ನಾಶಮಾ ಡಿ, ಅಲ್ಲಿದ್ದ ಬೌದ್ಧ ಯತಿಗಳನ್ನು ಕೊಂದನೆಂದು ಬರೆಯುತ್ತಾರೆ. "ರಾಜತರಂ ಗಿಣಿ" ಎಂಬ ಕಾಶ್ಮೀರದ ಸಂಸ್ಕೃತ ಇತಿಹಾಸದಲ್ಲಿಯೂ ಈ ರಾಜನ ಕ್ರೂರಕೃ ತ್ಯಗಳ ವರ್ಣನೆಯನ್ನು ನೋಡಬಹುದು. ಈತನು ಹೂಣಜಾತಿಯ ಹಿಂದೂ ರಾಜನಿದ್ದನು. ಈತನು ಸೂರ್ಯೋಪಾಸಕನಾಗಿದ್ದನು. ಮಿಹಿರೇಶ್ವರವೆಂಬ ಒಂದು ಸೂರ್ಯಮಂದಿರವನ್ನು ಕಟ್ಟಿಸಿದನು. ಸನ್ ೫೧೫-೫೪೨ರ ವರೆಗೆ ಇವ ನು ರಾಜ್ಯವಾಳಿದನೆಂದು ಹೇಳಬಹುದು. ಬಂಗಾಲ ದೇಶದ ಶಶಾಂಕ ಮಹಾ ರಾಜನೂ, ಸೂರ್ಯವಂಶದ ಕೊನೆಯ ಅರಸನಾದ ಪುಷ್ಯಮಿತ್ರನೂ, ಕುಮಾರಿಲ ಭಟ್ಟನ ಶಿಷ್ಯನಾದ ಸುಧನ್ವನೆಂಬ ರಾಜನೂ ಬೌದ್ಧಧರ್ಮವನ್ನು ನಾಶಮಾಡಿ ಹಿಂದೂ ಧರ್ಮದ ಬೆಳವಣಿಗೆಯನ್ನು ಮಾಡಲಿಕ್ಕೆ ಕೆಲಮಟ್ಟಿಗೆ ಪ್ರಯತ್ನ ಮಾ ಡಿದರು. ಕಾಶಿಯಹತ್ತ ಸಾರನಾಥ ಎಂಬಲ್ಲಿ ಸಿಕ್ಕ ಬೌದ್ಧ ಕಾಲದ ಪದಾರ್ಥ ಗಳ ಮೇಲಿಂದ ಬೌದ್ಧರ ಮೇಲೆ ನಡೆದ ಅತ್ಯಾಚಾರದ ಕಲ್ಪನೆಯು ಗೊತ್ತಾಗು ತ್ತದೆ. ಪಾಲೀ ಭಾಷೆಯೊಳಗಿನ ಯಾವಗ್ರಂಥಗಳಲ್ಲಿ ಮಾತ್ರ ಈ ಪ್ರಕಾರ ದ ಅತ್ಯಾಚಾರದ ಸ್ವಲ್ಪಾದರೂ ಸೂಚನೆಯು ಹೊಡುವದಿಲ್ಲ. ಇಷ್ಟೇ ಅಲ್ಲ ಬೌದ್ಧ ರೂ ವೈದಿಕರೂ ಪರಸ್ಪರರು ಅತಿ ಪ್ರೇಮದಿಂದ ಬಂಧುಭಾವದಿಂದ ನಡೆದುಕೊ ಳ್ಳುತ್ತಿದ್ದರೆಂತಲೂ, ಒಬ್ಬರು ಮತ್ತೊಬ್ಬರ ಗುಣಾನುವರ್ಣನ ಮಾಡುತಿದ್ದರೆಂತ ಲೂ ಆಧಾರಗಳಿವೆ. ಮಿ. ಹಾಜಸನ್ ಎಂಬ ಇಂಗ್ರೇಜಿ ಗ್ರಂಥಕಾರನು ನೇಪಾ ಳ ಮತ್ತು ತಿಬೇಟ ದೇಶಗಳ ಪ್ರಾಚೀನ ಹಸ್ತಲಿಖಿತ ಗ್ರಂಥಗಳ ಆಧಾರದ ಮೇಲಿಂದ ಬರೆದ ಒಂದು ಇತಿಹಾಸದಲ್ಲಿ, ಶ್ರೀ ಶಂಕರಾಚಾರ್ಯ ಮೊದಲಾದ ಧರ್ಮಪ್ರಚಾರಕರು ಬೌದ್ಧಧರ್ಮದ ಆಚಾರ ವಿಚಾರ ಮತ್ತು ಬುದ್ಧ ಪೂಜಾ ವಿಧಿಗಳನ್ನು ಹಿಂದೂಧರ್ಮದ ಆಚಾರ-ವಿಚಾರ ಮತ್ತು ದೇವಪೂಜೆಗಳ ರೂಪ ದಲ್ಲಿ ಅನುಕರಣ ಮಾಡಿದರೆ ಹೊರತು ಹೆಚ್ಚಿಗೆ ಏನೂ ಮಾಡಲಿಲ್ಲವೆಂದು ಬರೆ ದಿದಾನೆ.

ಡಾಕ್ಟರ ಬೂಲ್ಹರ ನೆಂಬವನು ಹಿಂದುಸ್ತಾನದ ಪಶ್ಚಿಮ, ದಕ್ಷಿಣ ಪ್ರಾಂತಗಳ ಕೆಲವು ಶಿಲಾಲೇಖಗಳನ್ನು ಶೋಧಮಾಡಿರುವನು. ಅವುಗಳ ಮೇಲಿಂದ ೯ನೇ ಶತಕದ ನಂತರದಲ್ಲಿಯೂ, ಹಿಂದುಸ್ತಾನದಲ್ಲಿ ಬಹಳ ಜನರು ಬೌದ್ಧರಿದ್ದರೆಂದು ಗೊತ್ತಾಗುತ್ತದೆ. ಹಾಗು ಇತ್ತೀಚೆಯ ಶಿಲಾಲೇಖಗಳನ್ನು ನೋಡಿದರೂ ಸಹ ಬೌದ್ಧಧರ್ಮವು ಒಮ್ಮೆಲೆ ಹಿಂದುಸ್ತಾನದಿಂದ ನಿರ್ನಾಮವಾಗಿ ಹೋಯಿತೆಂದು ಹೇಳಲಿಕ್ಕಾಗುವದಿಲ್ಲ. ಹಿಂದೂ ದೇಶದ ಕೆಲವು ಪ್ರಾಂತಗಳಲ್ಲಿ ವೈದಿಕ ಅಥವಾ ಹಿಂದೂಧರ್ಮದ ಸಂಗಡ ಬೌದ್ಧ ಧರ್ಮವೂ ಒಂದಿಲ್ಲೊಂದು ರೀತಿಯಿಂದ ಪ್ರಚಾರದಲ್ಲಿತ್ತು. "ಪ್ರಬೋಧ ಚಂದ್ರೋದಯ" ಎಂಬ ಹೆಸರಿನ ಸಂಸ್ಕೃತ ನಾಟಕವು ಹನ್ನೆರಡನೇ ಶತಕದಲ್ಲಿ ಬರೆಯಲ್ಪಟ್ಟಿತು. ಈ ನಾಟಕದ ರಚನಾಕಾಲದಲ್ಲಿ ಬೌದ್ಧಧರ್ಮದ ಅಲ್ಪಸ್ವಲ್ಪ ಹ್ರಾಸವಾಗತೊಡಗಿತ್ತು. ಆದರೆ ಅದರ ನಿರ್ನಾಮವಾಗಿದ್ದಿಲ್ಲ.. ಸನ್ ೧೭೭೬ರಲ್ಲಿ ಶ್ರಾವಸ್ತೀನಗರದಲ್ಲಿ ಒಂದು ಬೌದ್ಧ ಮಂದಿರವು ಕಟ್ಟಲ್ಪಟ್ಟಿತು. ೧೪ನೇ ಶತಕದಲ್ಲಿ (೧೩೫೧) ಗಯಾದ ಬೌದ್ಧ ಮಂದಿರದ ಉತ್ಸವವು ಮಾಡಲ್ಪಟ್ಟಿತು. ೧೫ನೇ ಶತಕದಲ್ಲಿ (೧೪೮೫) ಪರಮ ಭಾಗವತ ಚೈತನ್ಯ ದೇವನ ಜನ್ಮವಾದಾಗ ಅತನು ಅವತಾರೀ ಪುರುಷನೆಂದು ತಿಳಿದು ಹಿಂದೂಗಳು ಉತ್ಸವವನ್ನು ಮಾಡಿದ ಹಾಗೆ ಬೌದ್ಧರೂ ಮಾಡಿದರು. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ೧೬ನೇ ಶತಕದ ಅಂತ್ಯದವರೆಗೆ ಹಿಂದುಸ್ತಾನದಲ್ಲಿ ಬೌದ್ಧರು ಇನ್ನೂ ಅನೇಕ ಕಡೆಯಲ್ಲಿ ಇದ್ದರು. ಯಾಕಂದರೆ ಇದೇ ಕಾಲದ್ದ ತಿಬೇಟದ ಪ್ರಸಿದ್ಧ ಲಾಮಾ ತಾರಾನಾಥನು ಹಿಂದುಸ್ತಾನದಲ್ಲಿ ಬೌದ್ಧಧರ್ಮದ ಸ್ಥಿತಿ ರೀತಿಗಳನ್ನು ನಿರೀಕ್ಷಿಸಲಿಕ್ಕೆಂದು ಇಬ್ಬರು ಪಂಡಿತರನ್ನು ಕಳುಹಿದ್ದನು. ಅವರು ಸಾಕಷ್ಟು ವಿಚಾರಮಾಡಿ ನೋಡಿ ಓಡಿಸಾ ಮತ್ತು ಪಶ್ಚಿಮ ಬಂಗಾಲಗಳಲ್ಲಿ ಇನ್ನೂ ಬೌದ್ಧ ಧರ್ಮವು ಜೀವಂತ ಉಳಿದಿರುವದೆಂದು ಮನಗಂಡರು. ಒಟ್ಟಿನ ಮೇಲಿಂದ ವಿಚಾರಮಾಡಿ ನೋಡಲು ಶ್ರೀಶಂಕರಾಚಾರ್ಯರ ಕಾಲದಲ್ಲಿ ಅಂದರೆ ೮ನೇ ಶತಕದಲ್ಲಿ ಬೌದ್ಧಧರ್ಮವು ಹಿಂದುಸ್ತಾನದಿಂದ ಒಮ್ಮೆಲೆ ಲಯಹೊಂದಲಿಲ್ಲವೆಂತಲೂ ಅವರ ತರವಾಯ ನೂರಾರು ವರ್ಷಗಳ ವರೆಗೆ ಅದು ಪ್ರಬಲಾವಸ್ಥೆಯಲ್ಲಿಯೇ ಇತ್ತೆಂತಲೂ ಹೇಳಬಹುದು. ಆದರೆ ೧೭ನೇ ಶತಕದ ಅಂತ್ಯದವರೆಗೆ ಬೌದ್ಧಧರ್ಮವು ಹಿಂದುಸ್ತಾನದಲ್ಲಿ ಒಂದಿಲ್ಲೊಂದು ಬಗೆಯಿಂದ ಪ್ರಬಲವಾಗಿದ್ದದ್ದು ಕೆಲಕಾಲದಮೇಲೆ ಒಮ್ಮಿಂದೊಮ್ಮೆ ಹೇಗೆ ನಾಶ ಹೊಂದಿತೆಂಬ ಪ್ರಶ್ನೆಯು ಸಹಜವಾಗಿ ಉತ್ಪನ್ನವಾಗುವದು. ಇದಕ್ಕೆ ಉತ್ತರವೇನಂದರೆ ಬೌದ್ಧ ಧರ್ಮದ ಹ್ರಾಸಕ್ಕೆ ಕನಿಷ್ಕನಿಂದಲೇ ಪ್ರಾರಂಭವಾಗಿ ೧೭ನೇ ಶತಕದವರೆಗೆ ಅದು ಮೆಲ್ಲಮೆಲ್ಲಗೆ ಅನೇಕ ಜಾತಿ, ಪಂಥಗಳಲ್ಲಿ ಕೂಡಿಕೊಳ್ಳುತ್ತ ನಡೆಯಿತು. ಬೌದ್ಧರ ಐಕ್ಯತೆಯು ನಷ್ಟವಾವ ಹಾಗೆ ಅವರಲ್ಲಿ ತಮ್ಮ ಮೂಲ ಧರ್ಮದ ಅಭಿಮಾನವು ಉಳಿಯಲಿಲ್ಲ. ಹಾಗು ಇದೇ ಸಂದಿಗೆ

ಹಿಂದೂ ಧರ್ಮಾನುಯಾಯಿಗಳು ಅವರನ್ನು ತಮ್ಮ ಸಮಾಜದಲ್ಲಿ ಸಾವಕಾಶ ವಾಗಿ ಕೂಡಿಸಿಕೊಳ್ಳಹತ್ತಿದರು. ಮುಂದೆ ೧೭ನೇ ಶತಮಾನದ ಅಂತ್ಯದವರೆಗೆ ಅವರು ಹಿಂದೂ ಜನರಲ್ಲಿ ಕೂಡಿಹೋದರು. ಬೌದ್ಧರ ಯಾವ ಆಚಾರ ಧರ್ಮಗಳೂ ಪ್ರತ್ಯೇಕವಾಗಿ ಉಳಿಯಲಿಲ್ಲ. ಮತ್ತು ಅವ ವಿಶಿಷ್ಟ ಸ್ವರೂಪವೂ ನಷ್ಟವಾಗಿ ಹೋಯಿತು. ಉದಾಹರಣಾರ್ಥವಾಗಿ ಕೆಲವು ಜನರು ಬೌದ್ಧರ ಅನುಯಾಯಿಗಳಾಗಿ ಗುರುಮತ್ಸ್ಯೇಂದ್ರನಾಥ ಮತ್ತು ಗುರುಗೋರಖನಾಥ ಇವರನ್ನು ಗೌತಮ ಬುದ್ಧನ ಅವತಾರವೆಂದು ತಿಳಿಯಹತ್ತಿದರು. ಕೆಲವು ಜನರು ಸಹಜವಾಗಿಯೇ ಈ ಪಂಥದಲ್ಲಿ ಕೂಡಿಕೊಂಡು ದೊಡ್ಡ ದೊಡ್ಡ ಯತಿಗಳಾಗಿ ಹೋದರು; ಮತ್ತೆ ಕೆಲವರು ಶಾಕ್ತಪಂಥದಲ್ಲಿ ಕೂಡಿಹೋದರು. ಮುಂದೆ ಮುಸಲ್ಮಾನರ ಆಳಿಕೆಯಲ್ಲಂತೂ ಹಿಂದೂ ಧರ್ಮದಲ್ಲಿ ಕೂಡಲಿಕ್ಕೆ ಬೌದ್ಧರಿಗೆ ವಿಶೇಷ ಅನುಕೂಲವಾಯಿತು. ಯಾಕಂದರೆ ಮುಸಲ್ಮಾನರು ಬೌದ್ಧ ಮತ್ತು ವೈದಿಕ ಈ ಎರಡೂ ಧರ್ಮಗಳಲ್ಲಿ ಏನೂ ಹೆಚ್ಚುಕಡಿಮೆಯನ್ನು ತಿಳಿಯುತ್ತಿದ್ದಿಲ್ಲ. ಎಲ್ಲರಿಗೂ ಹಿಂದೂ ಎಂದು ತಿಳಿಯುತ್ತಿದ್ದರು.

ದಕ್ಷಿಣಹಿಂದುಸ್ತಾನದಲ್ಲಿ ಜೈನಧರ್ಮದ ಪ್ರಘಾತವು ಹೆಚ್ಚಿದ್ದ ಮೂಲಕ ಇಲ್ಲಿ ಬೌದ್ಧಧರ್ಮದ ಪ್ರಾಭಾವವು ಸಾಕಷ್ಟು ಬಿದ್ದಿಲ್ಲವೆಂಬಂತೆ ತೋರುತ್ತದೆ. ಕ್ರಿ. ಶ. ೮ ಅಥವಾ ೯ನೇ ಶತಮಾನಗಳಲ್ಲಿ ಸಮಂತಭದ್ರ, ಮತ್ತು ಅಕಲಂಕದೇವ ಎಂಬ ಇಬ್ಬರು ಜೈನ ಉಪದೇಶಕರು ದಕ್ಷಿಣದಲ್ಲಿ ಪ್ರಬಲರಾಗಿ ಎಲ್ಲ ಬೌದ್ಧ ಪಂಡಿತರನ್ನು ಜಯಿಸಿದರು. ಇವರು ಘನವಿದ್ವಾಂಸರು. ಇವರನ್ನು ಜಯಿಸುವಂಥ ಪ್ರತಿಭಟ ವಿದ್ವಾಂಸರು ಬೌದ್ಧರಲ್ಲಿ ಆಗಿನಕಾಲದಲ್ಲಿ ಯಾರೂ ಇರಲಿಲ್ಲ. ಮುಂದೆ ಕೆಲಕಾಲದ ಮೇಲೆ ಶೈವ, ಮತ್ತು ವೈಷ್ಣವ ಮತಗಳ ಪಂಡಿತರು ಬೌದ್ಧ ಧರ್ಮದ ಮೇಲೆ ತಮ್ಮ ವಿಜಯತ್ಸವನ್ನು ಮೆರೆಯಿಸಿ ಮೆಲ್ಲಮೆಲ್ಲನೆ ಅವರನ್ನು ತಮ್ಮ ಮತದಲ್ಲಿ ಕೂಡಿಸಿಕೊಂಡರು.

ಎಷ್ಟೋಜನ ಬೌದ್ಧರು ತಮ್ಮಿಂದ ತಾವೆ ಹಿಂದುಧರ್ಮದಲ್ಲಿ ಕೂಡಿಕೊಂಡರು. ಸುಮಾರು ೭-೮ ನೂರು ವರುಷಗಳಲ್ಲಿ, ಹಿಂದೂದೇಶದೊಳಗಿನ ಬೌದ್ಧಧರ್ಮದ ಅವತಾರವೇ ಪರಿಸಮಾಪ್ತಿಯಾಯಿತು. ಇದು ಬೌದ್ಧಧರ್ಮದ ನಾಶದ ಸಂಕ್ಷಿಪ್ತ ವಿವರಣೆಯಾಯಿತು. ಇನ್ನು ಅದರ ಕಾರಣಗಳನ್ನು ಕಂಡುಹಿಡಿಯುವಾ.

ಇಸ್ಲಾಮ ಧರ್ಮದ ಪ್ರಸಾರವು ೧ನೆಯ ಕಾರಣವು. ಮಧ್ಯ ಏಶಿಯಾದಲ್ಲಿಂದ ಬೌದ್ಧ ಧರ್ಮವನ್ನು ಕಿತ್ತೊಗೆದು, ಹಿಂದುಸ್ತಾನಕ್ಕೆ ಬಂದಕೂಡಲೆ ಇಲ್ಲಿಯೂ ಎಲ್ಲಕಡೆಗೆ ಅದೇಧರ್ಮದ ಪ್ರಾಬಲ್ಯವೇ ಅವರ ಕಣ್ಣಿಗೆಬಿತ್ತು. ಎತ್ತ ನೋಡಿದತ್ತ ಬೌದ್ಧರ ಚೈತ್ಯಾಲಯ, ಮಠ, ಮತ್ತು ವಿಹಾರಗಳೇ ಅವರ ದೃಷ್ಟಿಗೆ

ಬೀಳಹತ್ತಿದವು. ಇರತಕ್ಕಷ್ಟು ಅದರ ಪ್ರಾಬಲ್ಯವು ಈ ಕಾಲಕ್ಕೆ ಇರದಿದ್ದರೂ ಪೂರ್ವಕಾಲದ ಅದರ ವೈಭವವು ಮುಸಲ್ಮಾನ ಬಂಧುಗಳಿಗೆ ತನ್ನ ತೇಜಸ್ಸನ್ನು ಪ್ರಕಾಶಿಸದೆ ಇರಲಿಲ್ಲ. ಬೌದ್ಧ ಮಠಗಳನ್ನೂ ಸಂಘಗಳನ್ನೂ ನಾಶಮಾಡಿದರು. ಬಖ್ತಿಯಾರ್ ಖಿಲಜಿಯಂಬಾತನು ಸಹ ಗಂಗಾನದಿಯ ಉತ್ತರ ತೀರದಲ್ಲಿದ್ದ "ವಿಕ್ರಮಶಿಲಾ ಎಂಬ ಹೆಸರಿನ ಬೌದ್ಧ ಯೋಗಾಚಾರ ಸಾಂಪ್ರದಾಯದ ಒಂದು ಮುಖ್ಯಸ್ಥಾನವನ್ನೂ ಅದರ ಬಳಿಯಲ್ಲಿಯೇ ಇದ್ದ ಒಂದು ದೊಡ್ಡ ವಿಶ್ವವಿದ್ಯಾಲಯವನ್ನೂ ಅನೇಕ ವಿಹಾರಗಳನ್ನೂ ನಾಶಮಾಡಿದನು. ಇದಕ್ಕೂ ಮೊದಲು ನಾಲಂದ ವಿಶ್ವವಿದ್ಯಾಲಯ ನಾಶವೂ ಮಹಮ್ಮದೀಯರ ಕೈಯಿಂದಲೇ ಆಗಿತ್ತು. ಆದರೆ ಆ ಕಾಲದ ಹಿಂದೂ ರಾಜರು ಮಾತ್ರ ಈ ವಿಷಯದಲ್ಲಿ ಬೌದ್ಧರಿಗೆ ಏನೂ ಸಹಾಯ ಮಾಡಲಿಲ್ಲವೆಂಬಂತೆ ತೋರುತ್ತದೆ. ಸಾವಿರಾರು ಮಹತ್ವದ ಗ್ರಂಥಗಳು ಅಗ್ನಿದೇವನ ತುತ್ತಾಗಿ ಹೋದವು.

ಇನ್ನು ವೈದಿಕಧರ್ಮದ ಅತ್ಯಂತ ಉದಾರತ್ವ, ಮತ್ತು ಅನುದಾರತ್ವಗಳು ಬೌದ್ಧ ನಾಶಕ್ಕೆ ಎನೇ ಕಾರಣವೆಂದು ಹೇಳಬಹುದು. ಮೊದಮೊದಲು ಹಿಂದೂ ರಾಜರೂ ಉಪದೇಶಕರೂ ಬೌದ್ಧರ ಸಂಗಡ ಅತಿ ಉದಾರತನದಿಂದ ನಡೆಯಹತ್ತಿದರು. ಬೌದ್ಧರ ಅನುಯಾಯಿಗಳಿಗೆ ಆಶ್ರಯ ಕೊಡಹತ್ತಿದರು. ಮುಂದೆ ಒನೆ ಶತಮಾನದಲ್ಲಿ ವೈದಿಕಧರ್ಮದ ಬೆಳವಣಿಗೆಯು ಜೋರಿನಿಂದ ಸಾಗಹತ್ತಲು ಅನೇಕಜನ ಬ್ರಾಹ್ಮಣರು ಟೀಕಾ ಗ್ರಂಥಗಳನ್ನು ಬರೆದು ಬೌದ್ಧಮತ್ತುವನ್ನ ಖಂಡಿಸಹತ್ತಿದರು. ಹೀಗೆ ನೂರಾರು ಮಷ ಮಾಡಿದನಂತರ ಬೌದ್ಧರ ತೇಜವು ಅಡಗಹತ್ತಿ ಕಡೆಗೆ ಅದರ ಹ್ರಾಸವೂ ಆಯಿತು. ಕ್ರಿ. ಶ. ಒನೇ ಶತಕದಲ್ಲಿ. ಸೈಯಾಯಿಕಪಂಡಿತನಾಗಿದ್ದ ಉದ್ಯೋತಕರಾಚಾರ್ಯರೂ, ಒನೇ ಶತಮಾನದ ಕುಮಾರಿಲಭಟ್ಟರೂ, ಅನೇ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರೂ, ಒಳ್ಳೇ ಜಾಣತನದಿಂದ ವೈದಿಕಧರ್ಮದ ಪ್ರಚಾರಮಾಡಿದರು. ಮುಂದೆ ೧೦ನೆ ಶತಕದಲ್ಲಿ ವಾಚಸ್ಪತಿ ಮಿಶ್ರ ಎಂಬವರು ಬೌದ್ಧಧರ್ಮದ ಖಂಡನೆಮಾಡಿ ವೇದಗಳು ಈಶ್ವರ ಪ್ರಣೀತವೆಂದು ಸಿದ್ಧಮಾಡಿದರು. ಉದಯನಾಚಾರ್ಯರ ತರುವಾಯ ಜಯಂತಸ್ವಾಮಿ, ರಾಮಾನುಜಾಚಾರ್ಯ ಮಧ್ವಾಚಾರ್ಯ, ವಲ್ಲಭಾಚಾರ್ಯ, ಸರ್ವದರ್ಶನ ಸಂಗ್ರಹ ಕರ್ತರಾದ ಮಾಧವಾಚಾರ್ಯ ಮೊದಲಾದ ವೈದಿಕಧರ್ಮ ಪ್ರಚಾರಕರು ತಮ್ಮ ತಮ್ಮ ಬುದ್ಧಿವಂತಿಕೆಯಿಂದಲೂ, ತರ್ಕ-ವಿತರ್ಕಗಳಿಂದಲೂ ಬೌದ್ಧಮತವ ಖಂಡನೆ ಮಾಡಿದರು.

ತಾಂತ್ರಿಕಧರ್ಮದ ಪ್ರಚಾರವೇ ಬೌದ್ಧರ ನಾಶದನೇ ಕಾರಣವು. ಬೌದ್ಧರಲ್ಲುಂಟಾದ ಮಹಾಯಾನ, ಹೀನಯಾನ ಎಂಬ ಎರಡು ಪಂಥಗಳಿಂದ ಅವರಲ್ಲಿದ್ದ ಒಕ್ಕಟ್ಟು ಇಲ್ಲದಂತಾಯಿತು. ವೈದಿಕ ಧರ್ಮದ ಮಹಿಮೆಯನ್ನು ಬಲ್ಲಂಥ

ಬೌದ್ಧರ ಸಮುದಾಯದಿಂದುಂಟಾದ ಪಂಥವು ಮಹಾಯಾನವು. ಮತ್ತು ವಿಕೃತವಾದ ಪುರಾತನ ಬೌದ್ಧಧರ್ಮವನ್ನು ನುಸರಿಸಿದವರಿಂದುಂಟಾದ ಪಂಥವೇ ಹೀನಯಾನವು. ಇವರಲ್ಲಿ ಮಹಾಯಾನ ಪಂಥದವರೇ ಪ್ರಬಲರಾಗಿ ತಾಂತ್ರಿಕ ಮತದ ಪ್ರಚಾರ ಮಾಡಿದರು. ಹಾಗು ತಾಂತ್ರಿಕ ಮತದ ಶಿವ, ಶಕ್ತಿ, ಭೈರವ, ಹನುಮಾನ, ರುದ್ರ, ಮಹಾಲಕ್ಷ್ಮಿ ಅಜಿತಾ, ಅಪರಾಜಿತಾ, ಉಮಾ, ಭೂತ, ಪಿಶಾಚ ಮೊದಲಾದ ದೇವ ದೇವತೆಗಳನ್ನು ಪೂಜಿಸಹತ್ತಿದರು. ಮತ್ತು ಕೆಲವು ಸಿದ್ಧಿ ಕ್ರಿಯೆಗಳನ್ನು ಮಾಡಹತ್ತಿ ಮಂತ್ರದ ಸಹಾಯದಿಂದ ಹಾಲಿನಿಂದ ನೀರನ್ನೂ ನೀರಿನಿಂದ ಹಾಲನ್ನೂ ಮಾಡಹತ್ತಿದರು. ಭೂಮಿಯನ್ನು ನಡುಗಿಸುವದು, ಸತ್ತವರನ್ನು ಬದುಕಿಸುವದು, ಮೊದಲಾದ ಅತಿರೇಕ ಚಮತ್ಕಾರಗಳನ್ನು ಮಾಡುವದರಲ್ಲಿಯೇ ಪೇಳೆಗಳಿಯಹತ್ತಿದರು. ಇವುಗಳ ಸಂಗಡಲೇ ಧರ್ಮದ ನೆವಮಾಡಿ ಮದ್ಯಪಾನ, ವ್ಯಭಿಚಾರ, ಮಾಂಸಭಕ್ಷಣೆ ಮೊದಲಾದ ಮುಚ್ಚಟೆಗಳ ಉದಯವೂ ಆಯಿತು. ಈಪ್ರಕಾರದ ಇವರ ಅನಾಚಾರಗಳನ್ನು ನೋಡಿ ಉಳಿದ ಬೌದ್ಧರು ಇವರನ್ನು ತಮ್ಮ ಸಮಾಜದಿಂದ ಹೊರದೂಡಿದರು. ಇವರಾದರೂ ತಮಗೆ ಬೌದ್ಧರೆಂಬ ಹೆಸರೇ ಬೇಡವೆಂತಲೂ ತಾವು ವೈದಿಕ ಧರ್ಮವನ್ನು ಕೂಡುವೆವೆಂತಲೂ ಹೇಳಿ ವೈದಿಕ ಧರ್ಮಾನುಯಾಯಿಗಳಾದರು.

ಬೌದ್ಧಧರ್ಮದ ನಾಶದಲ್ಲಿ ನೇ ಕಾರಣವು ಅವರ ನೈತಿಕ ಆಚರಣೆಯ ಕಠೋರತೆಯು. ಪ್ರತಿದಿವಸ ವ್ಯವಹಾರದಲ್ಲಿ ತುಸುಮಟ್ಟಿಗಾದರೂ ಸ್ವಾತಂತ್ರ್ಯವಿರದೆ ಕೇವಲ ಧರ್ಮ ಮತ್ತು ನೀತಿಗಳ ಕಠೋರ ನಿಯಮಗಳಲ್ಲಿ ಸಿಲುಕಿಕೊಂಡಿರುವದು ಎಷ್ಟೋ ಜನರಿಗೆ ಸರಿಬೀಳಲಿಲ್ಲ. ಈಶ್ವರ ಭಕ್ತಿ, ಭಜನೆ, ಪೂಜನಾದಿಗಳಿಗೆ ಅದರಲ್ಲಿ ಏನೂ ಅನುಕೂಲವಿದ್ದಿಲ್ಲ. ಆದ್ದರಿಂದ ಇದಕ್ಕೆ ಬೇಸತ್ತ ಎಷ್ಟೋ ಜನ ಬೌದ್ಧರು ವೈದಿಕಧರ್ಮದಲ್ಲಿಯೇ ಬಂದು ಕೂಡಿದರು.

ಏಶಿಯಾಖಂಡದ ಬಹುತರ ಎಲ್ಲ ದೇಶಗಳಲ್ಲಿ ಪ್ರಚಾರವಾದದ್ದೇ ಈ ಧರ್ಮದ ಅವನತಿಯ ಒಂದೇ ಕಾರಣವು. ಈ ಧರ್ಮವು ಹಬ್ಬಿದಲ್ಲೆಲ್ಲ ಅಲ್ಲಿಯ ಮೊದಲಿನ ಜಾತಿ, ಪಂಥ, ಮತ್ತು ಆಚಾರಗಳಲ್ಲಿ ಇವರು ಕೂಡಿಕೊಂಡರು. ಎಷ್ಟೋ ಜನರನ್ನು ತಮ್ಮ ಸಂಗಡಿಗರನ್ನಾಗಿ ಮಾಡಿಕೊಂಡರು. ಆದ್ದರಿಂದ ಇವರ ಮೂಲ ಸಿದ್ಧಾಂತವು ಕೆಟ್ಟುಹೋಯಿತು. ಬೌದ್ಧಧರ್ಮದ ಯಾವಬಗೆಯ ನಿಶ್ಚಿತ ಸ್ವರೂಪವೇ ಉಳಿಯಲಿಲ್ಲ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಸ್ವರೂಪಗಳು ಇದಕ್ಕೆ ಪ್ರಾಪ್ತವಾದವು. ಕಡೆಗೆ ಹಿಂದುಸ್ತಾನದಲ್ಲಿ ಹಿಂದೂಧರ್ಮದ ಸ್ವರೂಪವನ್ನೇ ಧರಿಸಿತು.

ಇನ್ನು ರಾಜಾಶ್ರಯದಿಂದ ಬೌದ್ಧ ಭಿಕ್ಷುಕ-ಭಿಕ್ಷುಕಿಯರಿಗೆ ದೊರೆಯುತ್ತಿದ್ದ ಸುಖೋಪಭೋಗವೇ ಈ ಧರ್ಮದ ನಾಶದ ಒಂದೇ ಕಾರಣವೆಂದು ಹೇಳಬಹುದು

ದು. ವಿಶುದ್ಧವಾದ ಆಚರಣೆಯನ್ನು ಬಿಟ್ಟು ಭಿಕ್ಷಾವೃತ್ತಿಯಿಂದಲೇ ತಮ್ಮ ಉದ ನಿರ್ವಾಹವನ್ನು ಸಾಗಿಸಿಕೊಳ್ಳುವ ಧರ್ಮಪ್ರಚಾರ ಮಾಡಬೇಕೆಂದು ಭಗವಾನ್ ಬುದ್ಧರ ಉದ್ದೇಶವಿತ್ತೆಂದೇ? ಇದಕ್ಕಾಗಿಯೇ ಆತನು ಬೌದ್ಧ ಸಂಘ, ವಿಹಾರಗಳ ಸ್ಥಾಪನೆ ಮಾಡಿದನು. ಪುಣ್ಯವಶಾತ್ ಅಶೋಕನಂಥ ಸಾರ್ವಭೌ ರಾಜನು ಈ ಧರ್ಮದ ಪ್ರಚಾ ಕ್ಕೆ ಸಹಾಯ ಮಾಡಹತ್ತಿದನು. ಅಂದಮೇಲೆ ಬೇಡಿದಂಥ ಸೌಕರ್ಯವು ಅವರಿಗೆ ಕೂತಲ್ಲಿಯೇ ಸಿಗಹತ್ತಿದಮೆ ಲೆ ಕೇಳುವ ದೇನು? ಎಲ್ಲ ಬೌದ್ಧ ಭಿಕ್ಷುಕರು ಕರ್ಮಹೀನರಾದ ು. ಸುಖಮಯಬಾಳುವೆ ಯಲ್ಲಿ ಅವರ ವಿಲಾಸತ್ವವು ಬೆಳೆದು ಹೋಯಿತು. ಧರ್ಮಾಚ ಣೆಯಲ್ಲಿ ಅನಾ ಚಾರವು ಹೆಚ್ಚಾದ ಕೂಡಲೆ ಬೌದ್ಧಧರ್ಮವು ತನ್ನಿಂದ ತಾನೇ ನಷ್ಟವಾಗಿ ಹೋ ಯಿತು

ಧ ನಾ. ಕಾಳಪ್ಪನವರ.

ಹೆ. ವ್ಹಾ. ಕುರ್ತಕೋಟ



ದೇಶೀಯ ಆಟಗಳು.

ನಮ್ಮ ಪೂರ್ವಜರು ಆಟಗಳನ್ನು ಕಲ್ಪಿಸುವದರಲ್ಲಿ ಅಗಾಧವಾದ ಜಾಣತ ನವನ್ನೂ ಅಮೌಲ್ಯವಾದ ಅನುಭವವನ್ನೂ ತೋರಿಸಿ ವ ು. ಆಟಗಳು ಕೇವ ಲ ಶರೀರ ಸಂಪತ್ತಿಗಾಗಲಿ ಮನೋರಂಜನಕ್ಕಾಗಲಿ ಕಲ್ಪಿಸಲ್ಪಟ್ಟಿಲ್ಲ. ದೇಶ ರಕ್ಷಣೆ, ಧರ್ಮರಕ್ಷಣೆ, ಅನಾಥ ರಕ್ಷಣೆ, ಮುಂತಾದ ಉದಾತ್ತ ವಿಚಾರಗಳಿಂದ ಲೇ ಅನೇಕ ಬಗೆಯ ಆಟಗಳು ಅಸ್ತಿತ್ವದಲ್ಲಿ ಬಂದಿವೆ. ಹಿಂದಿನ ಕಾಲದಲ್ಲಿ ಗ್ರಾಮಗಳನ್ನು ಕೊಲೆ ಸುಲಿಗೆಗಾರರಿಂದ ರಕ್ಷಿಸುವ ಪ್ರಸಂಗಗಳು ಮೇಲೆಂದ ಮೇಲೆ ಒದಗುತ್ತಿದ್ದವು. ಕೋಟಿ ಕೊತ್ತಲಗಳನ್ನು ಕೊಳ್ಳಿಗಾರರಿಂದ ರಕ್ಷಿಸ ಲ್ಪಡಬೇಕಾಗುತ್ತಿತ್ತು. ಅದಕ್ಕೋಸ್ಕರ ಪ್ರತಿಯೊಂದು ಗ್ರಾಮದಲ್ಲಿ ಗರಡೀ ಮನೆ (ವ್ಯಾಯಾಮಶಾಲೆ) ಸ್ಥಾಪಿಸಿ ಕುಸ್ತಿ, ದಾಂಡಪಟ್ಟ ಮುಂತಾದ ಕಲೆಗಳ ಲ್ಲಿ ಮೇಲಾಟಗಳನ್ನಿಟ್ಟು ಇನಾಮುಗಳನ್ನು ಕೊಡುತ್ತಾ ಇದ್ದರು. ಅದರಿಂದ ಊರಲ್ಲಿ ಬಲಿಷ್ಠರಾದ ಪ್ರೌಢ ಯುವಕರು ಗ್ರಾಮರಕ್ಷಣೆಯ ಕಾರ್ಯಕ್ಕೆ ಸಹಾ ಯಕರಾಗುತ್ತಿದ್ದರು. ಇದಂತೆ ಸೂರ್ಯನಮಸ್ಕಾರ, ಮಲಕಂಬ, ಯೋಗಾ ಸನ ಮುಂತಾದ ವ್ಯಾಯಾಮಗಳ ಮೂಲಕ ಶರೀ ಸಂಪತ್ತನ್ನು ಹೊಂದಲು ಶಿಕ್ಷಣವು ಕೊಡಲ್ಪಡುತ್ತಿತ್ತು. ಆದರೆ ಸಂಘಶಕ್ತಿ, ಸಿಸ್ತು, ಒಕ್ಕಟ್ಟು ಮುಂ ತಾದ ಪದ್ಧತಿಗಳಿಂದಾಗುವ ಲಾಭವು ಈ ವೈಯಕ್ತಿಕ ವ್ಯಾಯಾಮಗಳಿಂದ ಆ

ಗುವದಿಲ್ಲ. ಆಮವರಿಂದ ಈ ಲಾಭಗಳು ಸಮಾಜಕ್ಕೂ ಗ್ರಾಮಕ್ಕೂ ದೇಶಕ್ಕೂ ದೊರೆಯಬೇಕೆಂಬ ಉದ್ದೇಶದಿಂದ ನಮ್ಮ ಪೂರ್ವಜ ರು ಮಾಡಿದ ಹಲವೊಂದ ಎತ್ತುಗಡೆಗಳಲ್ಲಿ ಆಟಗಳು ಬ ುವವು.

ಆಟಗಳಲ್ಲಿ ಮನೆಯಲ್ಲಿ ಆಡುವ ಮತ್ತು ಬೈಲಿನಲ್ಲಿ ಆಡುವ ಆಟಗಳಿಂದು ಎ ಡು ವರ್ಗಗಳನ್ನು ಮಾಡಬಹುದು. ಮೊದಲನೆಯ ವರ್ಗದಲ್ಲಿ ಚಕ್ಕ, ಹುಲಿ ಮನಿ, ಪಗಡಿ, ಗಂಜೀಪು, ಚದ ಂಗ, ಮುಂತಾದವು ಬ ುವವು. ಇವು ಬುದ್ಧಿಬ ಲಕ್ಕೆ ಅನಕೂಲವಾದಾಗೂ ಸೋವಾರಿತನಕ್ಕೆ ಆಸ್ಪದ ಕೊಡುವವು. ಎ ಡ ನೆಯ ವರ್ಗದಲ್ಲಿ ಲಿಗ್ಗಿ, ಪಣಿಜಂಡು, ಹುಡುತುತ್ತು, ತಿಳ್ಳಿ, ಖೋಖೋ ಮೊದ ಲಾದವು ಬ ುವವು. ಈ ಲೇಖಾಂ ದಲ್ಲಿ ಎ ಡನೆಯ ವರ್ಗದ ಆಟಗಳ ಬಗ್ಗೆ ಬರೆಯುವೆವು.

ದೇಶೀಯ ಆಟಗಳಿಗೆ ಪಾಶ್ಚಿಮಾತ್ಯರಿಂದ ಈಗ ಪ್ರಚಾರದಲ್ಲಿ ಬಂದಿರುವ ಆಟಗಳಿಗೆ ಬೇಕಾಗುವ ಹಣದ ನೂರಕ್ಕೊಂದು ಪಾಲು ಸಹ ಬೇಕಾಗುವದಿಲ್ಲ. ಅಲ್ಲದೆ ಇವುಗಳಿಂದ ದೊರೆಯತಕ್ಕ ಶಿಕ್ಷಣವು ಪಾಶ್ಚಮಾತ್ಯರ ಆಟಗಳಿಂದ ದೊರೆಯಲಾ ದೆಂದು ನಮ್ಮ ದೃಢ ನಂಬಿಕೆ.

ಲಿಗ್ಗಿ:— ಚಂಡಿನಿಂದ ಹೊಡಬಾಡುವ ಆಟ:— ಈ ಆಟನಿಂದ ಚಿಕ್ಕ ಬಾಲಕರಿಗೆ ಕೈ ಮತ್ತು ಕಣ್ಣುಗುರಿಯ ಅಭ್ಯಾಸವಾಗುವದು. ಬಾಣ, ಭಲ್ಲೆ, ಈಟಿಗಳನ್ನು ಉಪಯೋಗಿಸುವ ವಿದ್ಯಗೆ ಬೇಕಾಗುವ ಗುರಿಯನ್ನು ಈ ಆಟದಿಂ ದ ಪ್ರಾಚೀನ ಋಷಿಗಳು ತಮ್ಮ ಆಶ್ರಮದ ಪ್ರಾಥಮಿಕ ಶಾಲೆಗಳಲ್ಲಿ ಬಾಲಕರಿಗೆ ಕಲಿಸುತ್ತಿದ್ದರು. ಬಿರುಸಾದ ಚಂಡಿನಿಂದ ಒಬ್ಬರಿಗೊಬ್ಬರು ಗುರಿ ಇಟ್ಟು ಹೊಡೆ ಯುವದೂ ಅದನ್ನು ಜಾಗ್ರತೆಯಿಂದ ತಪ್ಪಿಸಿಕೊಳ್ಳುವದೂ ಯುದ್ಧಕಲೆಯ ಆರಂಭದ ಒಂದು ಪಾಠವೆಂದು ತಿಳಿಯತಕ್ಕದ್ದು. ಇದರಿಂದ ಅಂಗದಲ್ಲಿ ಸಾವ: ಧ್ಯ, ಚಪಲತೆ, ತೀಕ್ಷ್ಣ ದೃಷ್ಟಿ ಮುಂತಾದ ಲಾಭಗಳು ಅನಾಯಾಸವಾಗಿ ಆಗು ವವು.

ಪಣಿಜಂಡು:—ಈ ಆಟದಲ್ಲಿ ಹುಡುಗರೆಲ್ಲರೂ ಎರಡುತಂಡವಾಗಿ ತಂಡಕ್ಕೆ ಒಬ್ಬ ಹಿರೇಹುದ್ದರಿಯನ್ನು ಆರಿಸಿ ಅವನ ನಾಯಕತ್ವದಲ್ಲಿ ಆಡುವ ು ಈ ಆಟ ದಿಂದ ಕೈಗುರಿಯ ಅಭ್ಯಾಸವು ಆಗುವದಲ್ಲದೆ ಸಾಮೂಹಿಕವಾಗಿ ವರ್ತಿಸುವ ಶಿಕ್ಷಣವು ದೊರೆಯುವದು.

ಹುಡುತುತ್ತು:—ಈ ಆಟದಲ್ಲಿ ಹುಡುಗರೆಲ್ಲರೂ ಎರಡುಬಾಗವಾಗಿ ಒಬ್ಬ ಬಲಿಷ್ಠನಾದ ಹಿರೆ ಹುದ್ದರಿಯ ನೇತೃತ್ವದಲ್ಲಿ ಆಡುವರು. ಈ ಆಟದಿಂದ ಪರ

ಪಕ್ಷದ ಒಳನುಗ್ಗಿ ಹೋರಾಡುವ ಧೈರ್ಯವು ಉಂಟಾಗುವದು. ಹುಡುತುತ್ತೂ ಎಂದು ಪರಪಕ್ಷದವರಮೇಲೆ ಎರಿಹೋಗುವ ಬಾಲಕರನ್ನು ನೋಡಿದರೆ ಕಾಳಗದಲ್ಲಿ ಕತ್ತಿ ಢಾಲುಗಳನ್ನು ತೆಗೆದುಕೊಂಡು ಧೈರ್ಯದಿಂದ ಪ್ರತಿಭಟ ಮೇಲೆ ಏರಿಹೋಗುವ ವೀರರ ನೆನಪು ಆಗದೆ ಇರಲಾರದು. ವ್ಯಾಯಾಮ ದೃಷ್ಟಿಯಿಂದ ಈ ಆಟದಿಂದ ಪುಪುಸಗಳಿಗೆ ಬಲಬರುವದು.

ತಿಳ್ಳಿ ಅಥವಾ ಸರಮಂಚಃ—ಈ ಆಟದಲ್ಲಿ ಒಂದು ಪಕ್ಷದ ಹುಡುಗರು ಪ್ರತಿಪಕ್ಷದ ಹುಡುಗರನ್ನು ತಡೆದು ತಮ್ಮ ಮನಿಯನ್ನು ರಕ್ಷಣ ಮಾಡಿಕೊಳ್ಳುವರು. ಪ್ರತಿಪಕ್ಷದ ಹುಡುಗರು ಹೊಡಸಿಕೊಳ್ಳದೆ ಜಾಣತನದಿಂದ ತಪ್ಪಿಸಿಕೊಂಡು ಕಡೆಯ ಮನಿಯವರೆಗೆ ಹೋಗಿ ಮರಳಿ ತಮ್ಮ ಪೂರ್ವದ ಮೆಟ್ಟಿಗೆ ಬರುವರು. ಹಿಂದಕ್ಕೆ ದಾಳಿಗಾರರು ಗ್ರಾಮವನ್ನು ಮುತ್ತಿ ಕೈವಶಮಾಡಿಕೊಳ್ಳಲು ಸಾಹಸ ಪಡುವ ಸಮಯದಲ್ಲಿ ಗ್ರಾಮದ ರಕ್ಷಕರು ವೈರಿಗಳನ್ನು ಅಲ್ಲಲ್ಲಿಗೆ ತಡೆದು ಬೀದಿಗಳನ್ನು ರಕ್ಷಿಸಿಕೊಂಡು ಅವರು ಒಳನುಗ್ಗದಹಾಗೆ ಅವರೊಡನೆ ಯುದ್ಧಮಾಡಬೇಕಾಗುತ್ತಿತ್ತು. ಹೀಗೆ ಗ್ರಾಮವನ್ನು ರಕ್ಷಿಸಿಕೊಳ್ಳುವ ಜಾಣತನವನ್ನು ಮತ್ತು ಆಯಾಯ ಭಾಗಗಳನ್ನು ಕೈವಶಮಾಡಿಕೊಂಡು ತಮಗೆ ಬೇಕಾದ ವಸ್ತುಗಳನ್ನೆಲ್ಲ ತಕ್ಕೊಂಡು ಒಬ್ಬರನ್ನು ಬಿಡದಂತೆ ಯಾವತ್ತು ಹಿಂ ಬಾಲಿಗರನ್ನು ಸುರಕ್ಷಿತವಾಗಿ ಕರಕೊಂಡು ಪುನಃ ತಮ್ಮ ಸ್ವಸ್ಥಾನಕ್ಕೆ ಬರುವ ಜಾಣತನವನ್ನು ಈ ಆಟದಲ್ಲಿ ಕಂಡುಹಿಡಿಯಬಹುದು.

ಖೋ ಖೋಃ—ಈ ಆಟವು ವೈರಿಗಳ ಕೈಯಿಂದ ಹೇಗೆ ಚಪಲತನದಿಂದ ತಪ್ಪಿಸಿಕೊಳ್ಳಬೇಕು ಮತ್ತು ಚಪಲತನದಿಂದ ತಪ್ಪಿಸಿಕೊಳ್ಳುವನನ್ನು ಹೇಗೆ ಹಿಡಿಯಬೇಕು ಎಂಬ ಜಾಣತನವನ್ನು ಕೊಡುವದು. ಬಲಿಷ್ಠರಾದ ವೈರಿಗಳಿಂದ ರಣಭೂಮಿಯಲ್ಲಿ ಸೋತು ಅವರ ಕೈಯಿಂದ ಪಾರಾಗುವದಕ್ಕೆ ಯಾವ ಹಂಚಿಕೆ ಮತ್ತು ಚಪಲತೆಯು ಬೇಕಾಗುವವೋ ಅವು ಈ ಆಟದಿಂದ ಬಹುಮಟ್ಟಿಗೆ ಸಾಧಿಸುವವು. ಒಂದೇಸವನೇ ಓಡಿದರೆ ವೈರಿಗಳು ಕುದುರೆಯನ್ನು ಓಡಿಸುತ್ತ ಬಂದು ಹಿಡಿಯಬಹುದು, ಇಲ್ಲವೆ ಬಾಣಗುಂಡುಗಳಿಂದ ಹೊಡೆದು ಕೆಡವಬಹುದು. ಆದರೆ ಅಡ್ಡ ತಿಡ್ಡ ಓಡುತ್ತ ಮಾರ್ಗದಲ್ಲಿ ಆಯಾಯ ವಸ್ತುಗಳಿಗೆ ಮರೆಯಾಗುತ್ತ ವೈರಿಗಳ ಕೈಗೆ ಶಿಕ್ಕದೆ ಪಾರಾಗಬಹುದು. ಈ ಜಾಣತನವು ಈ ಆಟದಲ್ಲಿ ಉಂಟು. ಈ ಪ್ರಕಾರವಾಗಿ ಈ ಎಲ್ಲ ಆಟಗಳನ್ನು ನಮ್ಮ ಪ್ರಾಚೀನರು ಚಿಕ್ಕ ಬಾಲಕರಿಗೆ ರಾಷ್ಟ್ರೀಯ ಯುದ್ಧಶಿಕ್ಷಣದ ಪ್ರಾಥಮಿಕ ಶಾಲೆಯ ಕ್ರಮಿಕ ಪಾಠಗಳಂತೆ ಕಲಿಸಲು ಕಲ್ಪಿಸಿದರು. ಇವುಗಳಲ್ಲಿ ಕ್ರಮವಿರುವದುಃ—

ಲೆಗ್ಗಿಯು, ದಾಳಿಗಾರರು ಊರನ್ನು ಸುಲಿಯಲಿಕ್ಕೆ ಬಂದರೆ ಅವರನ್ನು ಕಲ್ಲು ಕವಣೆ ಬಾಣ ಮುಂತಾದವುಗಳನ್ನು ಒಗೆಯುತ್ತ ಹೊಡೆದೋಡಿಸುವ ಪಾಠನ್ನು

ಕಲಿಸುವದು. ಇದು ೧ ನೆಯದು. ಸಮಶಕ್ತಿಯ ಎರಡು ಬಣಗಳಿಗೆ ಕಾಳಗವು ಜರುಗಿದರೆ ಹೇಗೆ ಸಾಮೂಹಿಕವಾಗಿ ಹೋರಾಡಬೇಕೆಂಬುವದು ಪಣಿಚಂಡಿನ ಆಟದಿಂದ ಗೊತ್ತಾಗುವದು. ಇದು ಎರಡನೆಯ ಮೆಟ್ಟು. ಕಾಳಗವು ಜೋರಿನಿಂದ ನಡಿದಾಗ್ಗೆ ಬಲಿಷ್ಠನೂ ಧೈರ್ಯಶಾಲಿಯೂ ಆದ ಪ್ರತಿಯೊಬ್ಬ ವೀರನು ವೈರಿಗಳ ಮಧ್ಯದಲ್ಲಿ ನುಗ್ಗಿ ಹೇಗೆ ಶೂರತನದಿಂದ ಕಾದಾಡಬೇಕು ಎಂಬವನ್ನು ಹುಡುಕುತ್ತು ಆಟದಿಂದ ಕಲಿಯುವರು ಇದು ಮೂರನೆಯ ಪಾಠ. ಒಂದು ವೇಳೆ ದಾಳಿಗಾರರು ಏರಿಬರಹತ್ತಲು ಅವರೊಡನೆ ಹೇಗೆ ಹೆಜ್ಜೆ ಹೆಜ್ಜೆಗೆ ಹೋರಾಡಿ ಗ್ರಾಮರಕ್ಷಣೆಯನ್ನು ಮಾಡಿಕೊಳ್ಳಬೇಕೆಂಬ ಉಪಾಯವು ತಿಳಿ ಆಟದಿಂದ ಗೊತ್ತಾಗುವದು. ಆದರೆ ದುರ್ದೈವದಿಂದ ವೈರಿಗಳ ಬಲವು ಹೆಚ್ಚಾಗಿ ಅವರು ಊರನ್ನು ಅಕ್ರಮಿಸಲು ಅವರ ಕೈಗೆ ಸಿಗದಂತೆ ಪಾರಾಗಿ ಹೋಗುವ ಚಪಲತನವು ಖೋ ಖೋ ಈ ಆಟದಿಂದೆ ಬರುವದು, ಇದು ಕಡೆಯ ಪಾಠ. ಹೀಗೆ ನಮ್ಮ ಪೂರ್ವಜರು ಈ ಆಟಗಳನ್ನು ಮೇಲ್ಕಂಡ ಉದ್ದೇಶಗಳನ್ನು ಕುರಿತು ಹುಡುಕಿ ದೇಶದಲ್ಲೆಲ್ಲ ದಕ್ಷತೆಯಿಂದ ಪ್ರಚಾರದಲ್ಲಿ ತಂದಿರುವದು. ಇದರಿಂದ ಅವರ ಬುದ್ಧಿ ಮತ್ತು ಅನುಭವವು ಎಷ್ಟು ಸೋಜಿಗವಾದದ್ದೆಂದು ಗೊತ್ತಾಗುವದು; ಮತ್ತು ದೇಶೀಯ ಆಟಗಳಲ್ಲಿದ್ದ ಗುಟ್ಟು ಮತ್ತು ಲಾಭಗಳು ಈಗ ಪ್ರಚಾರದಲ್ಲಿ ಬರಹತ್ತಿರುವ ಪಾಶ್ಚಿಮಾತ್ಯರ ಆಟಗಳಲ್ಲಿ ಇಲ್ಲವೆಂಬದಾದರೂ ಗೊತ್ತಾಗುವದು; ಆದ್ದರಿಂದ ಪ್ರಾಥಮಿಕ ಶಾಲಾಗುರುಗಳು ಈ ಆಟಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ಆಡಲಿಕ್ಕೆ ಪ್ರೋತ್ಸಾಹ ಕೊಡುವರೆಂದು ಕೋರುತ್ತೇವೆ.

ಸಂಪಾದಕ.

ಕಾಲಗಾಡಿಯ ಚಿಕ್ಕ ಕಥೆ

ಒಬ್ಬ ಮಾರವಾಡದ ವರ್ತಕನು ಒಂದುದಿನ ವ್ಯಾಪಾರಕ್ಕೆಂದು ತನ್ನ ಹಾಳು ದೇಶದಿಂದ ಒಂದು ಕಾಲುಗಾಡಿಯ ಮೇಲಿಂದ ಹೊರಟನು. ಮುಂಜಾವಿನಿಂದ ಮಧ್ಯಾನ್ಹದವರೆಗೆ ಮಾರ್ಗವನ್ನು ಸಾಗಿಸಿದನು. ಆ ಮೇಲೆ ದಣಿದು ಆಹಾರವನ್ನು ತಕ್ಕೊಂಡು ಸ್ವಲ್ಪು ವಿಶ್ರಮಿಸಬೇಕೆಂದು, ಒಂದು ದೊಡ್ಡ ಮರದ ನೆರಳನ್ನು ಸೇರಿ ಕಾಲಗಾಡಿಯನ್ನು ಆ ಗಿಡಕ್ಕೆ ಆನಿಸಿ ತಾನು ಬಳಿಯಲ್ಲಿರುವ ಹೊಂಡದಲ್ಲಿ ಕೈಕಾಲು ಮೋರೆ ತೊಳೆದುಕೊಂಡು ಬಂದು ಬುತ್ತಿಯಗಂಟನ್ನು ಬಿಚ್ಚಿ ಊಟಮಾಡಲು ಕುಳಿತನು. ಇದನ್ನು ನೋಡಿ ಕಾಲಗಾಡಿಯ ಮುಂದಿನ ಗಾಲಿಯು ತನ್ನ ಹಿಂದಿನ ಗಾಲಿಗೆ:—ಎಲೋ ನನ್ನ ಹಿಂದುಳಿದ ಬಾಂಧವನೆ,

ನೋಡು, ನಾನು ಇದುವರೆಗೆ ನೂರಾರು ಮೈಲು ದಾರಿಯನ್ನು ನಡೆದು ನಿಮ್ಮೆಲ್ಲರಿಗೆ ದಾರೀ ತೋರಿಸಿ ಎಷ್ಟು ದಣಿದಿದ್ದರೂ ಆ ಕೃಪಣ ಮಾರವಾಡಿಯು ಸ್ವಲ್ಪು ನೀರನ್ನು ಸಹ ಕುಡಿಸಿ ಶಾಂತಮಾಡಲಿಲ್ಲ. ನಾನಿಲ್ಲದಲೆ ನೀನಾಗಲಿ ಆ ಮಾರವಾಡಿಯಾಗಲಿ ಒಂದು ಹೆಜ್ಜೆಯನ್ನು ಸಹ ಮುಂದಕ್ಕೆ ಇಡಲಾರಿರಿ. ತಿಳಿಯಿತೋ, ಎಂದು ಸಂತಾಪದಿಂದ ನೊಂದು ಪರಿಹಾಸ ಮಾಡಿತು. ಅದಕ್ಕೆ ಹಿಂದಿನ ಗಾಲಿಯುಃ—ಅಯ್ಯಾ ನನ್ನ ಮುಂದೊರೆದ ಬಾಂಧವನೇ, ನಿನ್ನ ಹೆಮ್ಮೆ ಸಾಕು. ನಾನಲ್ಲವೇ ನಿನ್ನನ್ನು ಮುಂದೆ ಮುಂದೆ ದೂಡಿದವನು. ನಾನು ನಿಂತ ಕೂಡಲೆ ನೀನೂ, ಇಡೀ ಗಾಡಿಯೂ, ಆ ಮಾರವಾಡಿಯೂ, ಎಲ್ಲರೂ ನಿಂತು ಕೊಳ್ಳುವಿರಿ. ನನ್ನ ದೂಡಿತದಿಂದಲೇ ನಿಮ್ಮಲ್ಲಿ ಚಲನವಲನವು ತಿಳಿಯಿತೋ, ಎಂದಿತು.

ಈ ಮಾತನ್ನು ಕೇಳಿದ ಕಾಲಚಕ್ರವುಃ—ಅಯ್ಯಾ ಬಾಂಧವರೆ ನಿಮ್ಮಿಬ್ಬರ ಒಣಹೆಮ್ಮೆಯನ್ನು ಕಂಡು ನನಗೆ ನಗೆ ಬರುತ್ತದೆ. ನಾನಲ್ಲವೇ ತಮ್ಮಿಬ್ಬರಿಗೂ ಚಲನೆಯನ್ನು ಕೊಡುವವನು. ನಾನು ಸುಮ್ಮನಿದ್ದರೆ ನೀವು ನಿಂತಲ್ಲಿಯೇ ನಿಲ್ಲುವಿರಿ. ನಿಮ್ಮ ಎಲ್ಲ ಪ್ರಗತಿಯು ನಿಂತು ಹೋಗುವದು. ನನ್ನನ್ನು ನೀವಿಬ್ಬರು ಸ್ಮರಿಸತಕ್ಕದ್ದು ಎಂದು ಅಂದಿತು.

ಸಮೀಪದಲ್ಲಿದ್ದ ಮಾರವಾಡಿಯು ಇವುಗಳ ಮಾತನ್ನು ಕೇಳಿ ಎಲೋ ಮಂದ ಮತಿಗಳೇ ನಿಮ್ಮ ಜಂಭವನ್ನು ಸಾಕುಮಾಡಿರಿ. ನಾನು ನಿಮ್ಮನ್ನು ಇಲ್ಲಿಯವರೆಗೆ ನಡಿಸಿದೆನು. ನಾನು ಮೇಲೆ ಕುಳಿತು ನನ್ನ ಕಾಲಿನಿಂದ ತುಳಿಯಹತ್ತಲು ನೀವು ಚಲಿಸಹತ್ತುವಿರಿ. ನೀವು ಸುಮ್ಮ ಸುಮ್ಮನೆ ಒಬ್ಬ ನ್ನೊಬ್ಬರು ಜರೆಯುವದು ರಿಯಲ್ಲ. ನಾನು ನಿಮ್ಮ ಒಡೆಯನು, ನಿಮ್ಮೆಲ್ಲರ ಕಂಠಕನು. ಇದು ನೋಡು ನಾನು ಸ್ವಲ್ಪು ದೂ ವಿದ್ದ ಕೂಡಲೆ ನೀವು ನಿಮ್ಮ ನಿಮ್ಮೊಳಗೆ ಬಡಿದಾಡುವಿರಿ. ನಿಮ್ಮಿಂದ ಐಕ್ಯ ಮತದಿಂದ ಕೆಲಸ ಮಾಡಿಸಿ ನಿಮ್ಮ ಉದ್ಧಾರವನ್ನು ಬಗೆಯುವ ನನ್ನನ್ನು ನೀವು ಮರೆಯುವಿರಾ! ಇದೋ ನಾನು ಇಲ್ಲಿಯೇ ನಿಮ್ಮನ್ನು ಬಿಟ್ಟು ಹೋದೆನೆಂದರೆ ನೀವು ನಿಮ್ಮ ನಿಮ್ಮೊಳಗೆ ಬಡಿದಾಡುತ್ತ ಇಲ್ಲಿಯೇ ಬಿದ್ದುಕೊಳ್ಳುವಿರಿ ತಿಳಿಯಿತೋ, ಎಂದು ಗರ್ಜಿಸಿದನು. ಮಾರವಾಡಿಯ ಜಂಬದ ಮಾತನ್ನು ಕೇಳುತ್ತ ಅವನು ಕೈಯಲ್ಲಿ ಹಿಡಿದ ತುತ್ತುಃ—ಎಲೊ ಮಾರವಾಡಿಯೇ ನಿನ್ನ ಮಾತನ್ನು ಸಾಕುಮಾಡು. ಸರ್ವರಿಗೂ ಅನ್ನನೀರನ್ನೂ, ಪ್ರಾಣವಾಯುವನ್ನೂ ಕೊಟ್ಟು ಸಲಹುವಂಥ ನಮ್ಮ ಭೂಮಾತೆಯ ಅಂಶವಾದ ನಾನು ನಿಮ್ಮನ್ನು ಸಲಹುತ್ತಿರುವೆನು. ಅನ್ನವಿಲ್ಲದಲೆ ನೀವು ಇಷ್ಟುದಿವಸ ಬಾಳುತ್ತಿರಲಿಲ್ಲ. ಮತ್ತು ಆ ಅನ್ನಕ್ಕಾಗಿಯೇ ನೀನು ನಿನ್ನ ಹಾಳದೇಶವನ್ನು ಬಿಟ್ಟು ಪರದೇಶಕ್ಕೆ ಗಮನ ಹೇಳಿಸಿದ್ದು. ಹೀಗಿದ್ದು

ನಿನ್ನ ದೊಡ್ಡಸ್ತಿಕೆಯನ್ನು ಹೇಳಿಕೊಳ್ಳುತ್ತ ಅನ್ನದಾತಳಾದ ಭೂಮಾತೆಯ ಉಪಕಾರವನ್ನು ಸ್ಮರಿಸದೆ ಯಾವ ಅಘೋಗತಿಗೆ ಹೋಗಬೇಕೆನ್ನುವೆ? ಎಂದು ಅಮೃತಪ್ರಾಯದ ಮಾತನ್ನು ಹೇಳಿ ಸುಮ್ಮನಾಗುವಷ್ಟರಲ್ಲಿ; ಪ್ರಚಂಡ ಪ್ರತಾಪನಾದ ಸೂರ್ಯನು ಗಗನ ಮಧ್ಯಕ್ಕೆ ಏರಿದವನಾಗಿ ಈ ಎಲ್ಲ ಮಾತನ್ನು ಕೇಳಿ ಪ್ರಜ್ವಲಿಸುತ್ತ ಎಲ್ಲಿ ಕುಮತಿಗಳೇ ನಾನು ನನ್ನ ಆಸ್ಥಾನದಿಂದಲೇ ನನ್ನ ಪ್ರಭಾವದಿಂದ ಸಕಲ ಜಗತ್ತನ್ನು ಬೆಳಗಿ ತೊಳಗುವೆನು. ನನ್ನಿಂದಲೇ ಸಕಲ ಚರಾಚ ಜಗತ್ತು ಚೇತನಗೊಳ್ಳುವದು. ನಾನು ಹೋದರೆ ಎಲ್ಲ ವ್ಯವಹಾರವು ನಿಂತು ಹೋಗುವದು. ನಾನೇ ಈ ಜಗತ್ತಿನ ಸಾರ್ವಭೌಮನು. ನನ್ನಲ್ಲಿ ನೀವೆಲ್ಲ ನಿಷ್ಠೆಯಿಂದ ನಡೆಯತಕ್ಕದ್ದು. ಇಲ್ಲವಾದರೆ ನನ್ನ ಪ್ರಚಂಡತಾಪದಿಂದ ನಿಮ್ಮೆಲ್ಲರನ್ನು ಹುರಪಳಿಸಿ ಬಿಟ್ಟೇನು ಎಂದು ಗರ್ಜಿಸಿದನು. ಹೀಗೆ ತಮ್ಮನ್ನು ತಾವೇ ಹೊಗಳಿಕೊಳ್ಳುವ ಈ ತಾಮಾಸಿಗಳು ಸಕಲ ಜಗನ್ನಿಯಾಮಕನಾದ ಸೃಷ್ಟಿಕರ್ತನ ಕೇವಲ ಕೈವಾರ ತಾವೆಂಬುದನ್ನು ಮರೆತು, ದುರಭಿಮಾನ, ಸ್ವಾರ್ಥ, ನಿರ್ದಯಾದಿಗಳಿಗೆ ಗುರಿಯಾಗಿ ಅಘೋಗತಿಗೆ ಹೋಗದ ಹಾಗೆ ಜಗದೀಶನು ಚನ್ನಾಗಿ ಬುದ್ಧಿಗಲಿಸಿ ಕಾಪಾಡಲಿ ಎಂದು ಬೇಡುವೆವು.

ಸಂಪಾದಕ

ಆರೋಗ್ಯ ವಿಷಯ

ಹೆಸರು, ತೊಗರಿ, ಕಡಲಿ ಮುಂತಾದ ಧಾನ್ಯಗಳ ಆಹಾರಕ್ಕಿಂತ ಬೆಲ್ಲಿಗಳ ಆಹಾರವು ಒಳ್ಳೆಯದು. ಹಚ್ಚನ್ನ ಪದಾರ್ಥಗಳಲ್ಲಿ ಶಕ್ತಿವರ್ಧಕ ಕ್ಷಾರಗಳು ಬಹುಅಂಶದಿಂದ ಇರುವವು. ಆದ್ದರಿಂದ ಆದಷ್ಟು ಹಚ್ಚನ್ನ ಪದಾರ್ಥಗಳನ್ನು ಸೇವಿಸುವದು ಹಿತಕರವು.

× × × ×

ಟೊಮ್ಯಾಟೊ (ಚಪ್ಪರಬದನೀ ಕಾಯಿ) ಇದುಲ್ಲಿ ಶಕ್ತಿವರ್ಧಕ ಕ್ಷಾರಗಳು ವಿಪುಲವಾಗಿರುವವು. ಇದನ್ನು ಕುದಿಸಿದರೂ ಆದ್ರವ್ಯಗಳು ನಾಶವಾಗುದಿಲ್ಲ. ಇದರ ರಸವು ಕಿತ್ತಳೆ ಹಣ್ಣಿನ ರಸದಷ್ಟೇ ಹಿತಕಾರಿಯು. ಬೇನೆಯರಿಗೆ ಕಿತ್ತಳೆ ಹಣ್ಣು ದೊರೆಯದೆ ಇದ್ದಲ್ಲಿ ಇದನ್ನು ಕೊಡಬಹುದು. ಇದು ಮಿಳಿಗೆ ಒಳ್ಳೆಯದು.

× × × ×

ಹಣ್ಣು ಹಂಪಲಗಳಷ್ಟು ಆರೋಗ್ಯಕರವಾದ ಪದಾರ್ಥವು ಬೇರೆ ಮತವೂ ಇಲ್ಲವೆಂಬ ಮಾತನ್ನು ಎಲ್ಲ ವೈದ್ಯರು ಒಪ್ಪುವರು. ಇವುಗಳಲ್ಲಿ ಸ್ವಲ್ಪ

ಮಿನ್' ಎಂಬ ಕ್ಷಾರಗಳು ವಿಶೇಷವಾಗಿರುವವು. ಈ ಕ್ಷಾರಗಳು ಎಷ್ಟು ಪ್ರಮಾಣದಿಂದ ದೊರೆಯುವವೋ ಅಷ್ಟು ಒಳ್ಳೇಯದೆಂದು ಯಾವತ್ತು ಪದಾರ್ಥಗಳ ಬಿಲಿಯನ್ನು ಕಟ್ಟಬಹುದು.

× × × ×

ಅಕ್ಕಿಯಲ್ಲಿ "ವಿಟ್ಯಾಮಿನ್" ಎಂಬ ದ್ರವ್ಯಗಳು ತೀ ಸ್ವಲ್ಪ ಪ್ರಮಾಣದಲ್ಲಿರುವವು. ಆದ್ದರಿಂದ ಅಕ್ಕಿಯೇ ಮುಖ್ಯ ಆಹಾರವಾದ ಜನರು ದುರ್ಬಲರಿರುವರು. ಪೌರ್ವಾತ್ಯರ ದೌರ್ಬಲ್ಯಕ್ಕೆ ಈ ಆಹಾರವು ಒಂದು ಮುಖ್ಯಕಾರಣವು. ಅದರಲ್ಲಂತೂ ಈಗ ಗಿರಣಿಗಳಲ್ಲಿ ತಯಾರಾಗುತ್ತಿರುವ ಅಕ್ಕಿಯ ಮೇಲಿನ ಸೂಕ್ಷ್ಮವಾದ ತೌಡು ತರೆದು ಹೋಗುವದರಿಂದ ಅಲ್ಪಪ್ರಮಾಣದಲ್ಲಿದ್ದ ಈ ದ್ರವ್ಯಗಳೂ ಕೂಡ ಹೋಗಿಬಿಡುವವು. ಆದ್ದರಿಂದ ಇಂಥ ಅಕ್ಕಿಯು ಕಣ್ಣಿಗೆ ಚಂದ ಕಂಡಾಗ್ಯೂ ದೇಹಕ್ಕೆ ಮನೆಯಲ್ಲಿ ತಳಿಸಿದ ಅಕ್ಕಿಗಿಂತ ಅತ್ಯಂತ ಅನಾರೋಗ್ಯ.

ಸಂಪಾದಕ.

ಕೆಳಗಣ ಒಡಪುಗಳನ್ನು ಬಿಡಿಸುವದು:—

ಕಂ॥ ಪ್ರಥಾಮಕ್ಷರ ತೊಡೆ ನೇಸರ್ ।
ದ್ವಿತಿಯಾಕ್ಷರಮಂ ತೊಡೆಯಲದಗ್ನಿಯ ನಾಮಂ।
ತೃತಿಯಕ್ಕರಮಂ ತೊಡೆಯಲ್ ।
ಶಿತಿಕಂಠನ ನಾಮಮಾಗಲಾವುದು ಪೇಳ್ ॥೧॥

ಭಾ॥ ಇಂದ್ರನಂತೆ ಸಹಸ್ರಾಕ್ಷ ನಾ ।
ಗೇಂದ್ರನಂತೆ ವಿಶಾಲ ಫಣೆಯ ಖ ।
ಗೇಂದ್ರನಂದದ ಲಂತರಿಕ್ಷದೆ ಸತತ ಸಂಚಾರೀ ।
ಅಂದದೋಳ್ಸಲೆ ಕೇಲಿ ಕೈಮಿಗೆ ।
ಗೇಂದುಕಂಗಳ ನೆಡೆಬಿಡದೆ ಪೂ ।
ರ್ಣೇಂದುಮುಖದಿಂ ನೆತ್ತಿ ಕುಕ್ಕುತೆ ಭರದಿ ದೂಡುವದು ॥೨॥

ಕೆಳಗಿನ ಸಮಸ್ಯೆಯನ್ನು ಪೂರ್ಣ ಮಾಡುವದು:—

ಕಂ॥ ಮಲದಿಂ ಶಂಕರನ ಲಂಕರಿಸಿದಳ್ ಬಾಲೆ ॥

ಸಂಪಾದಕ.

ನಗೆಮಾತು

೪ನೆಯ ಇಯತ್ತೆ (ಇತಿಹಾಸ ಪಾಠ)

೧. ಶಿಕ್ಷಕಃ—(ಹುಡುಗರಿಗೆ ಶಿವಾಜಿಯ ಚಿತ್ರವನ್ನು ತೋರಿಸಿ) ಶಿವಾಜಿಯು ಯಾವ ಜಾತಿಯವನು?

೧ ನೆಯ ವಿದ್ಯಾರ್ಥಿಃ—ಶಿವಾಜಿಯು ಮುಸಲ್ಮಾನನು.

ಶಿಕ್ಷಕಃ—ಅದು ಹೇಗೆ ಹೇಳುತ್ತೀ?

೧ ನೆಯ ವಿಃ—ಶಿವಾಜಿಗೆ ಗಡ್ಡ ಇರುವವು.

ಶಿಃ—(೨ನೇ ವಿದ್ಯಾರ್ಥಿಗೆ) ನೀ ಹೇಳು?

೨ ನೆಯ ವಿಃ—ಖಾಜಿ, ಹಾಜಿ, ಅಂತಾ ಮುಸಲ್ಮಾನರ ಹೆಸರುಗಳು ಇರುತ್ತವೆ. ಆದ್ದರಿಂದ ಶಿವಾಜಿ ಮುಸಲ್ಮಾನನಿರಬೇಕು, ಸರ್.

೨. ಶಿಕ್ಷಕನು—(ಅಕಬರನ ಚಿತ್ರವನ್ನು ತೋರಿಸಿ) ಅಕಬರನು ಯಾವ ಜಾತಿಯವನು?

೩ ನೆಯ ವಿಃ—ಅಕಬರನು ಕುರುಬರವನಿರಬೇಕು.

ಶಿಃ—ಅದು ಹೇಗೆ?

ವಿಃ—ಅಕಬರನಿಗೆ ಗಡ್ಡವಿಲ್ಲ, ಆದ್ದರಿಂದ ಹಿಂದು ಇರಬೇಕು. ಮತ್ತು ಅಕಬರ ಹೆಸರು ನೋಡಿದರೆ ಕುರುಬರ ಜಾತಿಯ ಹಿಂದು ಇರಬೇಕು, ಸರ್.

ಶಿಃ—ಹುಡುಗರು ತಪ್ಪು ಉತ್ತರ ಕೊಟ್ಟಾಗ್ಯೂ ಅವರ ತರ್ಕಶಕ್ತಿಯನ್ನು ನೋಡಿ ಆನಂದಪಟ್ಟು ಇತಿಹಾಸದ ಪಾಠಗಳನ್ನು ಚಿತ್ರಗಳ ಸಹಾಯದಿಂದ ಕಲಿಸತೊಡಗಿದನು.

ಸಿ ಫ ಕಟ್ಟೀಮನಿ, ಹೆಡ್‌ಮಾಸ್ತರ,
೪ನೇ ಗಂ. ಹು. ಸಾಲೆ, ಹುಬ್ಬಳ್ಳಿ.

ಸಾಲೆಯ ಸುದ್ದಿ :—

ನವಲಗುಂದ ತಾಲೂಕ ಕಾಲವಾಡ ಗ್ರಾಮದ ಕನ್ನಡ ಗಂಡು ಹುಡುಗರ ಸಾಲೆಯಲ್ಲಿ, ಮುಲ್ಕೀ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟೀಫಿಕೇಟು ಹಂಚುವ ಸಮಾರಂಭವು ತಾ। ೬-೭-೧೯೨೨ ನೆಯ ದಿವಸ ಅಟ್ಟಹಾಸದಿಂದ ಜರುಗಿದ ಸಂಗತಿಯನ್ನು ಶಾಲೆಯ ಹೆ॥ ಮಾ॥ ಆಡಕಾವರವರು ತಿಳಿಸುತ್ತಾರೆ. ಸಭೆಗೆ ಟಿ. ಎಲ್. ಬಿ. ಮೆಂಬರ, ನಾಗನಗೌಡ ಭ್ಯಾಮನಗೌಡ ಪಾಟೀಲ ಇವರು ಅಧ್ಯಕ್ಷರಿದ್ದು, ೫ನೆಯ ಸುಪರವಾಯಿಜರ ಶ್ರೀ. ಮರಡೂರ ಇವರು ಉಪದೇಶಪರ ಭಾಷಣವನ್ನು ಮಾಡಿದರು.

ಸಾಭಾರ ಸ್ವೀಕಾರ

ಪೂರ್ವಜಾನದೇಶ-ಸ್ಕೂಲ ಬೋರ್ಡ ಗ್ಯಾಝೀಟ್

ಇದು ತ್ರೈಮಾಸಿಕವಾಗಿ ಹೋದ ವರ್ಷ ಆರಂಭವಾಗಿದ್ದು ಈ ವರ್ಷ ದ್ವೈಮಾಸಿಕವಾಗಿ ಹೊರಟಿದೆ. ಇದರಲ್ಲಿ ಇಂಗ್ಲಿಷ ಕವಿತೆಯ ಅನುವಾದವಾದ "ಆಜ್ಞಾಧಾರಕ ಕಾಸಾಬಿಯಂಕಾ" ಎಂಬ ಕವಿತೆಯು ಮನೋಹರವಾಗಿಯೂ ಬೋಧಪ್ರದವಾಗಿಯೂ ಇರುವದು.

*　　*　　*　　*　　*

ಬೆಳಗಾಂವ ಸ್ಕೂಲ ಬೋರ್ಡ ಗ್ಯಾಝೀಟ್

ಇದು ತ್ರೈಮಾಸಿಕ ಪತ್ರಿಕೆಯಿದ್ದು ಪ್ರಥಮ ಸಂಚಿಕೆಯು ಇದೀಗ ನಮ್ಮ ಕ ಗತವಾಗಿದೆ. ಇದರಲ್ಲಿ ಮರಾಠಿ ಲೇಖಗಳಿಗೆ ಕೆಲವು ಪುಟಗಳು ಕಾದಿ ಸಲ್ಪಟ್ಟವೆ.

*　　*　　*　　*　　*

ಡಿಸ್ಟ್ರಿಕ್ಟ ಸ್ಕೂಲಬೋರ್ಡ ವರದಿ ಪುಣೆ (೧೯೨೬-೨೭

ಸಾಮಾನ್ಯ ಪ್ರಗತಿಃ—೧೯೨೬-೨೭ ರಲ್ಲಿ ಸಾಲಿಯ ಸಂಖ್ಯೆ ೧೪ ರಿಂದ ಹೆಚ್ಚಾಗಿ ಒಟ್ಟು ೭೦೫ರ ವರೆಗೆ ಆಗಿರುತ್ತದೆ; ಮತ್ತು ವಿದ್ಯಾರ್ಥಿಗಳ ಸಂಖ್ಯೆ ೨೪೪೪ ರಿಂದ ಹೆಚ್ಚಾಗಿ ಒಟ್ಟು ೩೯೦೫೬ ರ ವರೆಗೆ ಆಗಿರುತ್ತದೆ; ಒಟ್ಟು ೧೧೨೪ ಜನ ಶಿಕ್ಷಕ, ಶಿಕ್ಷಕಿಯರು ಇ ವರು; ಮತ್ತು ಒಬ್ಬ ಶಿಕ್ಷಕನಿಗೆ ೩೦ ಜನ ವಿದ್ಯಾರ್ಥಿಗಳ ಪ್ರಮಾಣ ಬೀಳುವದು.

ಖರ್ಚು ೧೯೨೪ರಲ್ಲಿ ೪೫೨೨೬ ರೂಪಾಯಿಇತ್ತು. ಆದರೆ ೧೯೨೬-೨೭ರಲ್ಲಿ ೫೨,೯೦,೪೬೫ ರೂಪಾಯಿ ಆಗಿ ೨ತ್ತದೆ.

ಯಾವತ್ತೂ ಜನಸಂಖ್ಯೆಯಕ್ಕೆ ತುಲನಾ ಮಾಡಿದರೆ ೧೦೦ಕ್ಕೆ ೪.೪ ಹುಡು ಗ.ು ಶಾಲೆಗೆ ಹೋಗುತ್ತಾರೆ. ಗಂಡಸರ ಜನಸಂಖ್ಯೆಯಕ್ಕೆ ತುಲನಾ ಮಾಡಿದರೆ ಗಂಡಹುಡುಗರು ೧೦೦ಕ್ಕೆ ೪.೧ ಮತ್ತು ಹೆಂಗಸರ ಸಂಖ್ಯೆಯಕ್ಕೆ ತುಲನಾ ಮಾ ಡಿದರೆ ಹೆಣ್ಣುಹುಡಿಗೆಯರು ೧೦೦ಕ್ಕೆ ೧.೫ ಈ ಪ್ರಕಾರ ಶಾಲೆಗೆ ಹೋಗುತ್ತಾರೆ.

ಹೊಸಸುಧಾರಣೆಃ—

(೧) ಸಹಕಾರಿ ತತ್ವದಮೇಲೆ ಹುಡುಗರೇ ನಡಿಸುವಂಥ ಅಂಗಡಿಯುಳ್ಳ ೪೨ ಶಾಲೆಗಳಿವೆ.

(೨) ಹುಡುಗರ ಅಕ್ಷರ ತಿದ್ದಬೇಕೆಂದು ಮೇಲಾಟದ ಪರೀಕ್ಷೆ ತೆಗೆದು ಕೊಂಡು ಇನಾಮು ಕೊಡಲ್ಪಡುತ್ತದೆ.

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತೆಯಲ್ಲಿದ್ದ ಮುನಸಿಪಾಲಿಟಿ ಶಾಲೆಗಳ ಪ್ರಾಥಮಿಕ ಶಿಕ್ಷಣದ ೧೯೨೮-೨೯ ಸಾಲಿನ ಆಯವ್ಯಯದ ಆಂದಾಜ ಪತ್ರಿಕೆ.

ಮುನಸಿಪಾಲಿಟಿಗಳ ಹೆಸರು.	ಆಯ.						ವ್ಯಯ.											
	೧೪ರಿಂದ ೧೫ರಿಂದ.		ನಾನ್ ೧೪ರಿಂದ ೧೫ರಿಂದ.															
	ಸರಕಾರದ ಗ್ರ್ಯಾಂಟು.	ಮುನಸಿಪಾಲಿಟಿ ಗ್ರ್ಯಾಂಟು.	ಸರಕಾರದ ಗ್ರ್ಯಾಂಟು.	ಮುನಸಿಪಾಲಿಟಿ ಗ್ರ್ಯಾಂಟು.	ಸಾಲೆಯ ಫೀ.	ಒಟ್ಟು.	ಶಿಕ್ಷಕರ ಪಗಾರ.	ಹೆಡ್‌ಮಾಸ್ಟರನ ಮತ್ತು ಹೊಡಮಲ ನೆಯ ಶಿಕ್ಷಕಿಯರ ಅಲಾವನ್ಸು.	ಕಸೂತಿ ಬಾಯಿಯ ಪಗಾರ.	ಅಳಿಯನ ಪಗಾರ.	ಕಾಯಂ ಸಾಡಿಲವಾರ ನ ಇತರ ಸಾಡಿಲವಾರ.	ಬಾಡಿಗೆ ನ ರಿಪೇರಿ.	ಪುಸ್ತಾಸದ ಅಲಾವನ್ಸು.	ಸಹಾಯ ಹೊಂದುವ ಖಾಲೆಗಳಿಗೆ ಗ್ರ್ಯಾಂಟು.	ಪೆನ್ಶನ್.	ಸಾಮುನುಗಳು.	ಪುಸ್ತಕಗಳು ಮತ್ತು ನಕಾಶಗಳು.	ಪ್ರಿನ್ಸಿಪಲ್ ನ ಇನಾಪತ್ತುಗಳು.	ಹೊಸ ಕಾಮುಗಿರಿ.	ಒಟ್ಟು.
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦
ಬ್ಯಾಡಗಿ	೧೦೩೬೦	೫೧೮೦	...	...	...	೧೫೫೪೦	೧೨೭೦೭	೬೦೦	೧೬೮೮	೨೧೬	೨೨೪	೧೩೫೦	೫೦	...	...	೧೦೦	೧೨೫	...	೧೫೫೪೦
ಹಾವೇರಿ	೮೫೦೪	೩೯೧೦	೭೦೮೭	೩೫೪೪	೩೩೬	೨೩೩೮೧	೯೬೩೫	೭೮೦	೨೧೬	೧೯೨	೩೬೨	೯೮೦	೫೦	೨೭೬	...	೧೦೦	೧೨೫	೧೦೬೩೧	೨೩೩೭೭
ನರಗುಂದ	೬೨೦೦	೨೪೧೭	...	...	೩೪೮	೯೩೬೫	೭೭೦೭	೬೦೦	೧೩೨	೯೬	೨೩೦	೪೬೦	೬೬	...	೪೪	೧೦೦	೧೨೫	...	೯೩೦೦
ನವಲಗುಂದ	೬೨೪೦	೨೯೬೩	...	...	೩೬೮	೯೫೨೧	೭೫೪೩	೬೦೦	೧೩೦	೯೬	೨೩೦	೭೦೦	೫೦	...		೧೦೦	೧೨೫	...	೯೫೬೦
ರಾಣೆಬಿನ್ನೂರ	೧೧೪೨೮	೬೧೭೦	...	...	೬೪೪	೧೭೨೪೨	೧೩೫೫೭	೪೪೦	೧೬೮೮	೧೪೦	೨೬೦	೪೬೦	೫೦	೧೦೦೨	...	೧೦೦	೧೨೫	...	೧೭೧೪೨
ಒಟ್ಟು	೪೨೭೩	೩೦೦೪೦	೭೦೮೭	೩೫೪೪	೧೬೮೮	೨೫೩೧೬	೨೧೦೬೭	೩೭೦೦	೨೬೦೮	೧೭೬೦	೩೬೨೦	೭೬೦೦	೨೭೦	೧೦೭೨	೪೪	೫೦೦	೬೨೫	೧೦೬೩೧	೨೫೩೧೬

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಜೂನ ೧೯೨೪ | ಸಂಚಿಕೆ ೩

ಜರ್ಮನಿಯ ಶಿಕ್ಷಣ ವ್ಯವಸಾಯ.

ಮಹಾಯುದ್ಧದ ತರುವಾಯ ಜರ್ಮನಿಯ ಶಿಕ್ಷಣದ ವಿಷಯದಲ್ಲಿ ಸಾರ್ವತ್ರಿಕವಾಗಿ ಹೊಸವಿಚಾರಗಳು ನೆಲೆಗೊಳ್ಳಲಾರಂಭಿಸಿವೆ ತತ್ಪೂರ್ವದಲ್ಲಿ ಅಖಂಡ ಜರ್ಮನಿಯು ಪ್ರಶಿಯಾದ ನೇತೃತ್ವದಲ್ಲಿ ಬಹುದಿವಸಗಳಿಂದ ಪ್ರಚಂಡವಾದ ಯುದ್ಧದ ಸಿದ್ಧತೆಯನ್ನು ನಡೆಯಿಸಿತ್ತು. ಕಾರಣ ಅಲ್ಲಿಯ ಶಿಕ್ಷಣವಾದರೂ ಆ ವ್ಯವಸಾಯದ ಒಂದು ಮುಖ್ಯ ಅಂಗವಾಗಿತ್ತು. ದಂಡಾಳುಗಳಿಗೆ ಕೊಡತಕ್ಕ ಶಿಕ್ಷಣದ ಕಠೋರ ಪದ್ಧತಿಯು ಹಸುಮಕ್ಕಳ ಶಿಕ್ಷಣದಲ್ಲಿಯೂ ನೆಲೆಗೊಂಡಿತ್ತು. ಶಿಕ್ಷಕನು ಕಮಾಂಡರನ ಹಾಗೆ ನಿರ್ದಯದಿಂದಲೂ ದರ್ಪನಿಂದಲೂ ತನ್ನ ಕಾರ್ಯವನ್ನು ಸಾಗಿಸುತ್ತಿದ್ದನು ಅವನ ಮೇಲಧಿಕಾರಿಗಳು ಅದೇ ರೀತಿಯಲ್ಲಿ ಅವನನ್ನು ದುಡಿಸಿಕೊಳ್ಳುತ್ತಿದ್ದರು. ಶಾಲೆಗಳೆಂದರೆ ಯುದ್ಧದ ಸಾಮಗ್ರಿಗಳನ್ನು ತಯಾರಿಸುವ ಕಾರಖಾನೆಗಳಾಗಿದ್ದವು. ವಿದ್ಯಾರ್ಥಿಗಳಾದರೂ ಸಜೀವ ಯಂತ್ರಗಳು ಪ್ರತಿಯೊಬ್ಬನೂ ನಿರಣಿಯಲ್ಲಿ ತಯಾರಾದ ಒಡವೆಯಂತೆ ಒಂದೇ ಮಾದರಿಯಲ್ಲಿ ಸಿದ್ಧವಾಗುತ್ತಿದ್ದನು. ಬುಡದಿಂದ ತುದಿಯವರೆಗೆ ಯುದ್ಧದ ಶಿಕ್ಷಣವೇ ದೇಶದಲ್ಲೆಲ್ಲ ಹರಡಿತ್ತು. ಅಂಥ ಶಿಕ್ಷಣದಿಂದ, ಅಂಥ ಶಾಸ್ತ್ರ ಶೋಧದಿಂದ, ಅಂಥ ಯಂತ್ರರಚನೆಯಿಂದ, ಅಂಥ ಮುತ್ಸದ್ದಿತನದಿಂದ, ಜರ್ಮನಿಯ ಹಾಡು ಏನಾಯಿತೆಂಬುದು ಕಳೆದ ಮಹಾಯುದ್ಧದಿಂದ ಜಗತ್ತಿನ ನಿದರ್ಶನಕ್ಕೆ ಬಂದದ್ದಲ್ಲದೆ ಜರ್ಮನಿಯ ಈಗಿನ ಸಾಮಾನ್ಯ ಸ್ಥಿತಿಗೂ ಕೂಡ ಮನವರಿಕೆಯಾಗಿದೆ. ಆದ್ದರಿಂದ ಇತ್ತೀಚೆಗೆ ಶಿಕ್ಷಣ ಮೊದಲ್ಗೊಂಡು ದೇಶದ ಎಲ್ಲ ಚಟುವಟಿಕೆಗಳಲ್ಲಿ ಕ್ರಾಂತಿಯುಂಟಾಗಿದೆ.

ಶಿಕ್ಷಣವಿಷಯದಲ್ಲಿ ಸುಧಾರಣೆಯಾಗುವ ಬಗ್ಗೆ ಚಳವಳಿಯಾಗಿ ಎರಡು ಪ್ರಕಾರದ ಪದ್ಧತಿಗಳು ರೂಢಿಯಲ್ಲಿ ಬಂದಿವೆ ಒಂದು ಸರಕಾರದಿಂದ ಸ್ಥಾಪಿಸಿಲ್ಪಟ್ಟಿದೆ. ಇನ್ನೊಂದು ಸ್ವತಂತ್ರವಾಗಿ ಶಿಕ್ಷಣತಜ್ಞರಿಂದ ರೂಢಿಯಲ್ಲಿ ಬರ

ಹತ್ತಿದೆ. ಈ ಎರಡೂ ಪದ್ಧತಿಗಳಲ್ಲಿ ಬಾಲಕರ ಸ್ವಾಯಂ ಸ್ಫೂರ್ತಿ, ನಿರೀಕ್ಷಣ ಶಕ್ತಿ, ಗ್ರಹಣ ಶಕ್ತಿ, ಉಲ್ಲಾಸವೃತ್ತಿ, ಮೊದಲಾದವುಗಳಿಗೆ ಅವಕಾಶವು ಕೊಡಲ್ಪಡುವದು. ಅಮೇರಿಕಾ, ಫ್ರಾನ್ಸ್, ಇಂಗ್ಲಂಡ ಮೊದಲಾದ ದೇಶಗಳ ಆಧುನಿಕ ಶಿಕ್ಷಣ ಪದ್ಧತಿಯನ್ನು ಕೆಲಮಟ್ಟಿಗಾದರೂ ಸ್ವೀಕರಿಸಿದ್ದಾರೆ. ಆದರೆ ಒಂದನೆಯ ಪದ್ಧತಿಯಲ್ಲಿ ಕಳೆದ ಐವತ್ತು ವರ್ಷಗಳಿಂದ ನಡಿದು ಬಂದಿದ್ದ ಹಳೆಯ ಪದ್ಧತಿಯಲ್ಲಿಯೇ ಆವಶ್ಯಕವಾದ ಸುಧಾರಣೆಗಳು ಬಗೆಯಲಾಗುತ್ತವೆ. ಇವರಲ್ಲಿ ಇನ್ನೂ ಪೋಲೀಸ ಅಮಲು ಕಂಡುಬರುತ್ತದೆ. ಶಿಕ್ಷಕನು ತನ್ನ ವಪೋರ್ಕ್ತಿಯನ್ನು ಪೂರ್ಣ ತೊರೆದಿಲ್ಲ. ನಿಯಮನಿರ್ಬಂಧನಗಳಲ್ಲಿಯ ವಿಶ್ವಾಸವು ಪೂರ್ಣ ಲಯ ಹೊಂದಿಲ್ಲ. ಆದರೂ ಶಿಕ್ಷಕನು ಅಧ್ಯಾಪನ ವಿಷಯದಲ್ಲಿ ಶಿಕ್ಷಣವನ್ನು ಹೊಂದಿದವನಿದ್ದು ಶಿಕ್ಷಣ ಶಾಸ್ತ್ರದ ನಿಯಮಗಳನ್ನು ಬಹುಮಟ್ಟಿಗೆ ಅನುಸರಿಸುವನು. ವಿದ್ಯಾರ್ಥಿಗಳ ನೈಸರ್ಗಿಕ ಗುಣವಿಶೇಷಗಳನ್ನೂ ಅನಕೂಲತೆಗಳನ್ನೂ ಕಂಡು ಹಿಡಿದು ಅವರವರಿಗೆ ಉಚಿತವಾದ ಶಿಕ್ಷಣವನ್ನು ಗೊತ್ತುಪಡಿಸುವನು. ಈ ಕಾರ್ಯವನ್ನು ಶಿಕ್ಷಣ ಖಾತೆಯ ನಿಯಮಗಳಿಗನುಸರಿಸಿ ಮಾಡುವನಲ್ಲದೆ ಸ್ವಯಂ ಸ್ಫೂರ್ತಿಯಿಂದ ಮಾಡುವದಿಲ್ಲ.

ಎರಡನೆಯ ಪ್ರಕಾರದ ಶಾಲೆಗಳಲ್ಲಿ ಪ್ರಶಿಯಾದ ಪೂರ್ವದ ಪೋಲೀಸ ಅಮಲು ತಿಲಮಾತ್ರವಾದರೂ ಇರುವದಿಲ್ಲ. ಶಿಕ್ಷಕನು ಕೇವಲ ಸ್ನೇಹಿತನಾಗಿ ವಿದ್ಯಾರ್ಥಿಗಳೊಡನೆ ಬೆರೆತು ಅವರಲ್ಲಿ ಹುರುಪನ್ನು ಉಂಟುಮಾಡಿ ಅಧ್ಯಯನದಲ್ಲಿ ತೊಡಗಿಸುವನು. ಈ ಶಾಲೆಗಳು ಸ್ವತಂತ್ರವಾಗಿರುವದರಿಂದ ಶಿಕ್ಷಕನು ಸ್ವೇಚ್ಛೆಯ ಪ್ರಕಾರ ಹುಡುಗರಿಗೆ ಶಿಕ್ಷಣವನ್ನು ಕೊಡದೆ ಅವರವರ ಸ್ಥಿತಿಗತಿಗಳನ್ನನುಸರಿಸಿ ಶಿಕ್ಷಣವನ್ನು ಕೊಡುವನು. ಆಧುನಿಕ ಸ್ವಶಾಸ್ತ್ರ ಪದ್ಧತಿಯನ್ನು ಪೂರ್ಣ ಸಾಧಿಸುವ ಆತುರವುಳ್ಳವನಾಗಿರುವನು. ತನ್ನ ಶಾಲೆಗಳಾಗಲಿ ತನ್ನ ಕಾರ್ಯವಾಗಲಿ ಹೀಗೇ ಇರತಕ್ಕದ್ದೆಂದು ಬಗೆಯದೆ ಅವು ಕೇವಲ ಪ್ರಯೋಗಾವಸ್ಥೆಯಲ್ಲಿಯೇ ಇರುವವೆಂದು ತಿಳಿಯುವನಾದ್ದರಿಂದ ಅವನು ಯಾವಾಗಲೂ ಪ್ರಗತಿಪರನಾಗಿರುವನು. ಈ ಎರಡನೆಯ ಪ್ರಕಾರದ ಶಾಲೆಗಳು ಅನೇಕ ಇದ್ದು ಅವೆಲ್ಲವುಗಳಲ್ಲಿ ಸರ್ವಸಾಧಾರಣ ಸಶಾಸ್ತ್ರವಾದ ನಿಯಮವು ನೆಲೆಗೊಳ್ಳುವ ಬಗ್ಗೆ ಶಿಕ್ಷಕರ ಸಮ್ಮೇಲನಗಳು ಮೇಲಿಂದ ಮೇಲೆ ಜರುಗಿ, ಶಿಕ್ಷಕರೆಲ್ಲರು ತಮ್ಮ ತಮ್ಮ ಅನುಭವವನ್ನು ಹೇಳಿ, ಮುಂದಿನ ಯೋಜನೆಯನ್ನೂ ಕಾರ್ಯಪ್ರವಾಹವನ್ನೂ ಗೊತ್ತುಪಡಿಸುವರು ಆದ್ದರಿಂದ ಶಿಕ್ಷಕನಿಗೆ ಶಿಕ್ಷಣಕಾರ್ಯದಲ್ಲಿ ತುಂಬಾ ಸ್ವತಂತ್ರತೆ ಇದ್ದಾಗ್ಯೂ ಈ ಎಲ್ಲ ಶಾಲೆಗಳಲ್ಲಿ ಒಂದು ಸಾಮಾನ್ಯ ಸ್ವರೂಪವು ಇರುವದು. ಈ ಶಾಲೆಗಳು ಈಗ ಹೆಚ್ಚು ಲೋಕಪ್ರಿಯವಾಗಹತ್ತಿವೆ. ಇವುಗಳಿಗೆ ಸರಕಾರದ ಸಹಾಯವು ದೊರೆಯುತ್ತಿದ್ದರೂ ಅವು ವಿಶೇಷತಃ ಜನ ಸಹಾಯವನ್ನೇ ಅವಲಂಬಿಸಿರುವವು.

೧ನೆಯ ಬಗೆಯ ಶಾಲೆಗಳು:—

ಇವು ವಿಶೇಷವಾಗಿ ಸರಕಾರ, ಮುನಸಿಪಾಲಿಟಿ ಮುಂತಾದ ಸಂಸ್ಥೆಯ ಆಶ್ರಯತೆಯಲ್ಲಿರುವವು ಅನೇಕ ಸ್ವತಂತ್ರ ಶಾಲೆಗಳೂ ಇರುವವು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಯೋಜನೆಯಲ್ಲಿ ಮುಖ್ಯವಾಗಿ ಮೂರು ತರಗತಿಯ ಶಾಲೆಗಳು ಇರುವವು. (೧) ಪ್ರಾಯಮರಿ (೨) ಮಿಡ್ಲ (೩) ಸೆಕಂಡರಿ ಶಾಲೆಗಳು ಪ್ರಾಯಮರಿ ಅಥವಾ ಪ್ರಾಥಮಿಕ ಶಾಲೆಗಳಲ್ಲಿ ೪ ವರ್ಗಗಳಿವೆ. ಮೊದಲಿನ ೪ ವರ್ಗಗಳಿಗೆ ತಯಾರಿ ವರ್ಗಗಳೆನ್ನುವರು. ಪ್ರತಿಯೊಬ್ಬ ಹುಡುಗನು ಒನೇ ವಯಸ್ಸಿನಿಂದ ಈ ಶಾಲೆಗಳಿಗೆ ಹೋಗುವ ಒತ್ತಾಯವು ಸಾರ್ವತ್ರಿಕ ವಾಗಿದೆ. ಹುಡುಗರ ಜನ್ಮ, ಸ್ಥಿತಿ ಮುಂತಾದ ವಿಷಯಗಳಬಗ್ಗೆ ಭೇದಭಾವವನ್ನು ಎಣಿಸದೆ ಆರಂಭದ ಈ ೪ ವರ್ಷದ ಶಿಕ್ಷಣವು ಕೊಡಲ್ಪಡುವದು. ವಿದ್ಯಾರ್ಥಿಯು ಈ ಶಾಲೆಯಲ್ಲಿ ಪೂರ್ಣ ೪ ವರ್ಷ ಕಳೆಯಬಹುದು. ಇಲ್ಲವೆ ೪ ವರ್ಷವಾದನಂತರ ಈ ಶಾಲೆಯಿಂದ ಮಾಧ್ಯಮಿಕ ಶಾಲೆಗಾಗಲಿ, ಸೆಕಂಡರಿ ಶಾಲೆಗಾಗಲಿ ಹೋಗಬಹುದು. ಈ ತಯಾರೀ ಶಾಲೆಗಳಲ್ಲಿ ಕಲಿಸಲ್ಪಡುವ ವಿಷಯಗಳು:- ಧರ್ಮ, ದೇಶಭಾಷೆ, ಅಂಕಗಣಿತ, ಡ್ರಾಯಿಂಗ, ಗಾಯನ, ವ್ಯಾಯಾಮ. (ಹುಡಿಗೆಯರಿಗೆ ಹೆಣೆಯುವ ಕಲೆ.) ಈ ವಿಷಯಗಳನ್ನು ಪ್ರತಿನಿತ್ಯ ಒಂದರ ಮೇಲೊಂದು ಹೀಗೆ ಒಂದು ನಿಶ್ಚಿತ ವೇಳಾಪತ್ರಿಕೆ ಎಂತೆ ಕಲಿಸದೆ ಅಭ್ಯಾಸ ಪತ್ರಿಕೆಯ ಪ್ರಕಾರ ಕೊಟ್ಟ ಕಾಲಾವಧಿಯಲ್ಲಿ ಕಲಿಸ ಬೇಕಾಪಷ್ಟು ವಿಷಯವನ್ನು ಶಿಕ್ಷಕನು ತನಗೆ ಸರಿಹೋರಿದಂತೆ ಸಮಯಕ್ಕನುಸರಿಸಿ ಹೇಳುವನು. ಆರಂಭದ ಶಿಕ್ಷಣದಲ್ಲಿ ಚಿಕ್ಕ ಬಾಲಕನಿಗೆ ಸ್ವದೇಶದ ಸಂಬಂಧವಾದ ಅವಶ್ಯವಾದ ಸಂಗತಿಗಳು ಮನವರಿಕೆ ಮಾಡಿಕೊಡಲ್ಪಡುತ್ತವೆ. ಮನೆಯಲ್ಲಿ ಮಾಡುವದಕ್ಕೆ ಏನೂ ಅಭ್ಯಾಸವು ಕೊಡಲಾಗುವದಿಲ್ಲ ಹೆಚ್ಚಿನ ಉಚ್ಚತರದ ಸಾಮಾನ್ಯ ಶಿಕ್ಷಣವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ತಯಾರೀ ಶಾಲೆಗಳಲ್ಲಿ ತೇರ್ಗಡೆ ಹೊಂದಿದ ಮೇಲೆ ಬೇರೆ ಶಾಲೆಗಳಿಗೆ ಹೋಗುವರು ಉಳಿದವರು ಮುಂದೆ ನಾಲ್ಕು ವರ್ಷ ಈ ಪ್ರಾಥಮಿಕ ಶಾಲೆಗಳಲ್ಲಿಯೇ ಕಳೆಯುವರು. ಈ ನಾಲ್ಕು ವರುಷಗಳಲ್ಲಿ ವಿದ್ಯಾರ್ಥಿಗಳಿಗೆ ಅವರವರ ಸ್ವವೃತ್ತಿ, ಗತಿ, ಅನುಕೂಲತೆ. ಮುಂತಾದವನ್ನು ನಿರೀಕ್ಷಿಸಿ ಅವರವರಿಗೆ ಉಚಿತವೆಂದು ಕಂಡುಬಂದ ಯಾವದಾವರೊಂದು ದಂಧೆಯ ಶಿಕ್ಷಣವು ಕೊಡಲ್ಪಡುವದು ಇಲ್ಲಿ ಒಟ್ಟಿಗೆ ೪ ವರ್ಷ ಶಿಕ್ಷಣ ಹೊಂದಿದ ಮೇಲೆ ಉಚ್ಚತರಗತಿಯ ಔದ್ಯೋಗಿಕ ಸಂಸ್ಥೆಗಳಿಗೆ ವಿದ್ಯಾರ್ಥಿಗಳು ಹೋಗಬಹುದು. ಅಲ್ಲದೆ ಈ ವರ್ಗಗಳ ವಿದ್ಯಾರ್ಥಿಗಳು ಸಾಮಾನ್ಯ ಶಿಕ್ಷಣವನ್ನು ಪಡೆಯುವ ಅಭಿಲಾಷೆಯನ್ನು ಕೆಲವು ಕಾಲದನಂತರ ಹೊಂದಿದರೆ ಅವರಿಗೆ ಅನುಕೂಲವಾಗಬೇಕೆಂದು ಮಾಧ್ಯಮಿಕ ಶಾಲೆಗಳಲ್ಲಿ ಜರಗುವ ಮುಖ್ಯವಿಷಯಗಳ ಅಧ್ಯಯನವಾದರೂ ಈ ವರ್ಗಗಳಲ್ಲಿ ಆಗುವದು. ಶಿಕ್ಷಕರು ಪ್ರಾಥ

ಕ್ಟಿಕಲ್ ಟೀಚಿಂಗಿನ ತತ್ವಗಳನ್ನೇ ಪಾಲಿಸುವರು. ಕೈಗೆಲಸದ ಬಗ್ಗೆ ಹೆಚ್ಚು ದಕ್ಷತೆಯುಳ್ಳವರಾಗಿರುವ ೨. ವಿದ್ಯಾರ್ಥಿಗಳು ಕಾಗದ, ಮಣ್ಣು, ಕಟ್ಟಿಗೆ, ಮೊದಲಾದ ಪದಾರ್ಥಗಳಿಂದ ಬಗೆಬಗೆಯ ವಸ್ತುಗಳನ್ನು ಮಾಡುವರು. ಹಗುರಾದ ಶಾಸ್ತ್ರೀಯ ಪ್ರಯೋಗಗಳನ್ನು ಮಾಡುವರು. ತರತರದ ವಸ್ತುಗಳನ್ನು ಸಂಗ್ರಹಿಸುವರು. ಶಾಲೆಯ ತೋಟದಲ್ಲಿ ವನಸ್ಪತಿಯ ಜ್ಞಾನ ಹೊಂಡಗಳಲ್ಲಿ ಜಲಚರ ಜ್ಞಾನ, ಮತ್ತು ಸಂಗ್ರಹಾಲಯಗಳಲ್ಲಿ ವಿವಿಧ ಜ್ಞಾನ ದೊರೆಯುವದು. ಕೈಗಾರಿಕೆ, ಹೆಣಿಯುವಿಕೆ, ಗೃಹ ವ್ಯವಸ್ಥೆ ಈ ವಿಷಯಗಳ ಜ್ಞಾನವು ಹೆಣ್ಣುಮಕ್ಕಳಿಗೆ ಕೊಡಲ್ಪಡುವದು. ಆಗಾಗ್ಗೆ ವಿದ್ಯಾರ್ಥಿಗಳನ್ನು ಒಕ್ಕಲತನದ ಫಾರ್ಮುಗಳಿಗೂ ಗಿರಣಿ ಕಾರಖಾನೆ ಮೊದಲಾದವುಗಳಿಗೂ ಕರೆದು ಕೊಂಡುಹೋಗಿ, ಮಹತ್ವದ ವಿಷಯಗಳನ್ನು ತೋರಿಸುವರು. ವಿದ್ಯಾರ್ಥಿಗಳು ತಾವು ಪ್ರವಾಸ ಮಾಡಿದ ಸ್ಥಳಗಳ ಬಾಹ್ಯರೇಷೆಯಿಂದ ನಕಾಶೆಗಳನ್ನು ತೆಗೆಯುವರು. ಮೇಲಿನ ನಾಲ್ಕು ವರ್ಗಗಳಲ್ಲಿ ಕಲಿಸಲ್ಪಡುವ ಸಾಮಾನ್ಯ ವಿಷಯಗಳು:- ಧರ್ಮ (ಪ್ರಸಿದ್ಧ ಧರ್ಮೋಪದೇಶಕರ ಚರಿತ್ರ ಸಹಿತ) ಜರ್ಮನ್ ಭಾಷೆ, ಇತಿಹಾಸ, ನಾಗರಿಕರ ಹಕ್ಕುಗಳು, ಭೂಗೋಲ, ವಸ್ತುಪಾಠ, ಅಂಕ ಗಣಿತ, ಡ್ರಾಯಿಂಗ, ಗಾಯನ, ವ್ಯಾಯಾಮ ಇತ್ಯಾದಿ.

ಮಾಧ್ಯಮಿಕ ಶಿಕ್ಷಣ.

ಮೇಲ್ತರದ ವಿದ್ಯೆಯನ್ನು ಹೊಂದಬೇಕೆಂಬ ವಿದ್ಯಾರ್ಥಿಗಳು ತಯಾರೀ ಶಾಲೆಗಳಲ್ಲಿ ನಾಲ್ಕು ವರ್ಷ ಕಳೆದ ಮೇಲೆ ಮಾಧ್ಯಮಿಕ ಶಾಲೆಯನ್ನು ಸೇರುವರು. ಇಲ್ಲಿ ೬ ವರ್ಷ ಕಲಿಯ ಬೇಕಾಗುವದು. ಈ ಶಾಲೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಒಟ್ಟು ೧೦ ವರ್ಷ ಶಿಕ್ಷಣವು ದೊರೆತಂತಾಗುವದು. ಈ ಶಾಲೆಗಳಲ್ಲಿ ಫೀ ಕೊಡಬೇಕಾಗುವದು ಫೀ, ವರ್ಗದಪ್ರಕಾರ ತೆಗೆದುಕೊಳ್ಳಲ್ಪಡದೆ ಪಾಲಕರ ಉತ್ಪನ್ನದ ಪ್ರಕಾರ ತೆಗೆದುಕೊಳ್ಳಲ್ಪಡುವದು. ೫೦೦೦ ಮಾರ್ಕ್ ಮೇಲ್ಪಟ್ಟ ಉತ್ಪನ್ನಕ್ಕೆ ಪಾಲಕರು ತಮ್ಮ ಮೊದಲನೆಯ ಹುಡುಗನಿಗೆ ತಿಂಗಳೆಗೆ ೫ ಮಾರ್ಕ್ ಕೊಡಬೇಕಾಗುವದು. ಎರಡನೆಯ ಹುಡುಗನಿಗೆ $3\frac{3}{4}$ ಮಾರ್ಕ್ ಕೊಡಬೇಕಾಗುವದು. ೩ನೆಯ ಹುಡುಗನಿಗೆ $2\frac{1}{2}$ ಮಾರ್ಕ್ ಕೊಡಬೇಕಾಗುವದು. ಳರಿಂದ ಮುಂದೆ ಉಚಿತ ವಿದ್ಯಾಭ್ಯಾಸವು ದೊರಕುವದು. ೩೩೦೦ ರಿಂದ ೫೦೦೦ ದೊಳಗೆ ಉತ್ಪನ್ನ ವಿದ್ದವರು ಹಿರಿಯವನಿಗೆ $3\frac{3}{4}$ ಎರಡನೆ ಹುಡುಗನಿಗೆ $2\frac{1}{2}$ ಹೀಗೆ ಕೊಡಬೇಕಾಗುವದು. ೨೫೦೦ರಿಂದ ೩೩೦೦ರರ ಒಳಗಿದ್ದವರು ಮೊದಲಿನ ಹುಡುಗನಿಗೆ $2\frac{1}{2}$ ಎರಡನೆಯ ಹುಡುಗನಿಗೆ $1\frac{1}{4}$ ಮಾರ್ಕ್ ಕೊಡಬೇಕಾಗುವದು. ಉಳಿದವರಿಗೆಲ್ಲ ಫೀ ಕೊಡಬೇಕಾಗುವದಿಲ್ಲ (೧ ಮಾರ್ಕ್ ಅಂದರೆ ಸುಮಾರು ೧೫ ಆಣೆ) ಈ ಮಾಧ್ಯಮಿಕ ಶಾಲೆಗಳಲ್ಲಿ ೫ ತರಹದ ಶಾಲೆಗಳುಂಟು; (೧) ಪ್ರಾಥಮಿಕ ಶಾಲೆ

ಗಳ ಮೇಲಿನ ನಾಲ್ಕು ಇಯತ್ತ್ರಿಗಳಲ್ಲಿ ಕಲಿಸಲ್ಪಡುವ ಸಾಮಾನ್ಯ ವಿಷಯಗಳು ಇಲ್ಲಿಯೂ ಕಲಿಸಲ್ಪಡುವವು; ಅವರ ಮೇಲೆ ಒಂದು ಪರಭಾಷೆಯು ಕಲಿಸಲ್ಪಡುವದು, ೨ನೆಯ ಮತ್ತು ೪ನೆಯ ತರದ ಶಾಲೆಗಳಲ್ಲಿ ಬಾಲ ಬಾಲಕಿಯರಿಗೆ ಅವರು ಮುಂದೆ ಕೈಕೊಳ್ಳಬೇಕಾದ ಉದ್ಯೋಗವನ್ನು ನಿರೀಕ್ಷಿಸಿ ತಕ್ಕ ಶಿಕ್ಷಣವು ಕೊಡಲ್ಪಡುವದು; ೩ನೆಯ ತರದ ಶಾಲೆಗಳು ಕೇವಲ ಹೆಣ್ಣು ಮಕ್ಕಳಿಗೋಸುಗ ಇದ್ದು, ೩ನೆಯ ಯೋಜನೆಯ ಎಲ್ಲ ವಿಷಯಗಳನ್ನು ಒಳಕೊಂಡಿದ್ದು ಹೆಚ್ಚಿಗೆ ಗೃಹಣೀ ಶಿಕ್ಷಣವು ಕೊಡಲ್ಪಡುವದು; ೫ನೆಯ ತರದ ಶಾಲೆಗಳು ಸೆಕಂಡರಿ ಶಾಲೆಗಳ ಶಿಕ್ಷಣದ ತಯಾರಿಯನ್ನು ಮಾಡುವವು. ಆದ್ದರಿಂದ ಜರ್ಮಾಖರ್ಚು, ಗೃಹಣೀ ಶಿಕ್ಷಣ ಮುಂತಾದವುಗಳು ಬಿಡಲ್ಪಡುವವು ಹೀಗೆ ಮಾಧ್ಯಮಿಕ ಶಾಲೆಗಳಲ್ಲಿ ೫ ಪ್ರಕಾರಗಳುಂಟು ಯುದ್ಧದ ಪೂರ್ವದಲ್ಲಿ ಎರಡೇ (ಬಾಲಕರಿಗೊಂದು, ಬಾಲಿಕೆಯರಿಗೊಂದು) ಪ್ರಕಾರಗಳಿದ್ದವು

ಜರ್ಮನಿಯ ಶಿಕ್ಷಣ ಪದ್ಧತಿಯಲ್ಲಿ ಈ ಮಾಧ್ಯಮಿಕ ಶಾಲೆಗಳೇ ಬಹಳ ಮಹತ್ವದವು ಕೈಗಾರಿಕೆ, ಕಲಾಕೌಶಲ್ಯ, ವ್ಯಾಪಾರ, ಉದ್ಯೋಗ, ಒಕ್ಕಲತನ, ಅರಣ್ಯಶಾಸ್ತ್ರ ಮುಂತಾದ ವಿಷಯಗಳಲ್ಲಿ ಜಗತ್ತಿನಲ್ಲಿ ಪ್ರಚಂಡವಾದ ಪ್ರಗತಿಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ ಇರುವದರಿಂದ ಈ ವಿಷಯಗಳ ಜ್ಞಾನವು ಚನ್ನಾಗಿ ಲಭಿಸಬೇಕಾದರೆ ಸಾಕಷ್ಟು ಸಾಮಾನ್ಯ ಶಿಕ್ಷಣವು ಅವಶ್ಯವಾಗಿದೆ ಈ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳು ಸಾಕಷ್ಟು ಕೊಡಲಾರವು ಮತ್ತು ಎರಡನೆಯ ತರಗತಿಯ ಶಾಲೆಗಳಲ್ಲಿ ಶಾಸ್ತ್ರೀಯ ಪೋಧ ಮುಂತಾದ ವಿಷಯಗಳ ಬಗ್ಗೆ ಬೇಕಾದ ಶಿಕ್ಷಣವು ಕೊಡಲ್ಪಡುವದಾದ್ದರಿಂದ ಅಲ್ಲಿಯೂ ಲಭಿಸಲಾರದು ಆದ್ದರಿಂದಲೇ ಈ ಮಾಧ್ಯಮಿಕ ಶಾಲೆಗಳು ಸ್ಥಾಪಿತವಾಗಿವೆ. ಈಗಿನ ಯಾಂತ್ರಿಕ ಮತ್ತು ಔದ್ಯೋಗಿಕ ಯುಗದಲ್ಲಿ ಜರ್ಮನಿಯಂತ ರಾಷ್ಟ್ರದಲ್ಲಿ ಈ ಶಾಲೆಗಳ ಮಹತ್ವವು ಎಷ್ಟೆಂದು ಹೇಳಲಳವಲ್ಲ ಇವುಗಳನ್ನು ಮ್ಯುನ್ಸಿಪಾಲಿಟಿ ಮೊದಲಾದವುಗಳು ನಡೆಯಿಸುವವು ಈ ಮಾಧ್ಯಮಿಕ ಶಾಲೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಎರಡನೆಯ ತರಗತಿಯ ಶಾಲೆಗಳಿಗೆ ಇಷ್ಟವಿದ್ದಲ್ಲಿ ಹೋಗಬಹುದು.

೨ನೆಯ ತರಗತಿಯ ಶಾಲೆಗಳು

೨ನೆಯ ತರಗತಿಯ ಶಾಲೆಗಳಲ್ಲಿ ೫ ಪ್ರಕಾರಗಳಿವೆ:—

(೧) ಗ್ರಾಮರ (ವ್ಯಾಕರಣ) ಸ್ಕೂಲು, ಕಲಿಸತಕ್ಕ ಹೆಚ್ಚಿನ ವಿಷಯಗಳು:- ಲ್ಯಾಟಿನ್, ಗ್ರೀಕ, ಫ್ರೆಂಚ, ಇಂಗ್ಲೀಷ, ಗಣೀತ, ರಸಾಯನಶಾಸ್ತ್ರ ಶಾಸ್ತ್ರೀಯ ವಿಷಯಗಳು, ಪ್ರಾಣಿಶಾಸ್ತ್ರ ಇತ್ಯಾದಿ

ಈ ಶಾಲೆಗಳಲ್ಲಿ ೯ ಇಯತ್ತ್ರಿಗಳಿರುವವು ಮೊದಲಿನ ನಾಲ್ಕು ಈಯತ್ತ್ರಿಗಳು ತಯಾರಿ ಶಾಲೆಗಳನ್ನು ಹೋಲುವವು ಇದರಿಂದ ಜರ್ಮನಿಯಲ್ಲಿ ಅನೇಕ ಪ್ರಕಾರದ ಶಾಲೆಗಳು ಇರುತ್ತಿದ್ದಾಗ್ಯೂ ೪ ವರ್ಷದ ಶಿಕ್ಷಣವು ಯಾವತ್ತೂ ಶಾಲೆ

ಕ್ಟಿಕಲ್ ಟೀಚಿಂಗಿನ ತತ್ವಗಳನ್ನೇ ಪಾಲಿಸುವರು. ಕೈಗೆಲಸದ ಬಗ್ಗೆ ಹೆಚ್ಚು ವಿಶೇಷತೆಯುಳ್ಳವರಾಗಿರುವರು. ವಿದ್ಯಾರ್ಥಿಗಳು ಕಾಗದ, ಮಣ್ಣು, ಕಟ್ಟಿಗೆ, ಮೊದಲಾದ ಪದಾರ್ಥಗಳಿಂದ ಬಗೆಬಗೆಯ ವಸ್ತುಗಳನ್ನು ಮಾಡುವರು. ಹಗುರಾದ ಶಾಸ್ತ್ರೀಯ ಪ್ರಯೋಗಗಳನ್ನು ಮಾಡುವರು. ತರತರದ ವಸ್ತುಗಳನ್ನು ಸಂಗ್ರಹಿಸುವರು. ಶಾಲೆಯ ತೋಟದಲ್ಲಿ ವನಸ್ಪತಿಯ ಜ್ಞಾನ ಹೊಂಡಗಳಲ್ಲಿ ಜಲಚರ ಜ್ಞಾನ, ಮತ್ತು ಸಂಗ್ರಹಾಲಯಗಳಲ್ಲಿ ವಿವಿಧ ಜ್ಞಾನ ದೊರೆಯುವದು. ಕೈಗಾರಿಕೆ, ಹೆಣಿಯುನಿಕೆ, ಗೃಹ ವ್ಯವಸ್ಥೆ ಈ ವಿಷಯಗಳ ಜ್ಞಾನವು ಹೆಣ್ಣುಮಕ್ಕಳಿಗೆ ಕೊಡಲ್ಪಡುವದು. ಆಗಾಗ್ಗೆ ವಿದ್ಯಾರ್ಥಿಗಳನ್ನು ಒಕ್ಕಲತನದ ಫಾರ್ಮುಗಳಿಗೂ ಗಿರಣಿ ಕಾರಖಾನೆ ಮೊದಲಾದವುಗಳಿಗೂ ಕರೆದು ಕೊಂಡುಹೋಗಿ, ಮಹತ್ವದ ವಿಷಯಗಳನ್ನು ತೋರಿಸುವರು. ವಿದ್ಯಾರ್ಥಿಗಳು ತಾವು ಪ್ರವಾಸ ಮಾಡಿದ ಸ್ಥಳಗಳ ಬಾಹ್ಯರೇಷೆಯಿಂದ ನಕಾಶೆಗಳನ್ನು ತೆಗೆಯುವರು. ಮೇಲಿನ ನಾಲ್ಕು ವರ್ಗಗಳಲ್ಲಿ ಕಲಿಸಲ್ಪಡುವ ಸಾಮಾನ್ಯ ವಿಷಯಗಳು:- ಧರ್ಮ (ಪ್ರಸಿದ್ಧ ಧರ್ಮೋಪದೇಶಕರ ಚರಿತ್ರ ಸಹಿತ) ಜರ್ಮನ್ ಭಾಷೆ, ಇತಿಹಾಸ, ನಾಗರಿಕರ ಹಕ್ಕುಗಳು, ಭೂಗೋಲ, ವಸ್ತುಪಾಠ, ಅಂಕ ಗಣಿತ, ಡ್ರಾಯಿಂಗ, ಗಾಯನ, ವ್ಯಾಯಾಮ ಇತ್ಯಾದಿ.

ಮಾಧ್ಯಮಿಕ ಶಿಕ್ಷಣ.

ಮೇಲ್ತರದ ವಿದ್ಯೆಯನ್ನು ಹೊಂದಬೇಕೆಂಬ ವಿದ್ಯಾರ್ಥಿಗಳು ತಯಾರೀ ಶಾಲೆಗಳಲ್ಲಿ ನಾಲ್ಕು ವರ್ಷ ಕಳೆದ ಮೇಲೆ ಮಾಧ್ಯಮಿಕ ಶಾಲೆಯನ್ನು ಶೇರುವರು. ಇಲ್ಲಿ ೬ ವರ್ಷ ಕಲಿಯ ಬೇಕಾಗುವದು. ಈ ಶಾಲೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಒಟ್ಟು ೧೦ ವರ್ಷ ಶಿಕ್ಷಣವು ದೊರೆತಂತಾಗುವದು. ಈ ಶಾಲೆಗಳಲ್ಲಿ ಫೀ ಕೊಡಬೇಕಾಗುವದು ಫೀ, ವರ್ಗದಪ್ರಕಾರ ತೆಗೆದುಕೊಳ್ಳಲ್ಪಡದೆ ಪಾಲಕರ ಉತ್ಪನ್ನದ ಪ್ರಕಾರ ತೆಗೆದುಕೊಳ್ಳಲ್ಪಡುವದು. ೫೦೦೦ ಮಾರ್ಕ ಮೇಲ್ಪಟ್ಟ ಉತ್ಪನ್ನಕ್ಕೆ ಪಾಲಕರು ತಮ್ಮ ಮೊದಲನೆಯ ಹುಡುಗನಿಗೆ ತಿಂಗಳೆಗೆ ೫ ಮಾರ್ಕ ಕೊಡಬೇಕಾಗುವದು. ಎರಡನೆಯ ಹುಡುಗನಿಗೆ $3\frac{3}{4}$ ಮಾರ್ಕ ಕೊಡಬೇಕಾಗುವದು. ೩ನೆಯ ಹುಡುಗನಿಗೆ $2\frac{1}{2}$ ಮಾರ್ಕ ಕೊಡಬೇಕಾಗುವದು. ೪ರಿಂದ ಮುಂದೆ ಉಚಿತ ವಿದ್ಯಾಭ್ಯಾಸವು ದೊರಕುವದು. ೩೩೦೦ ರಿಂದ ೫೦೦೦ ದೊಳಗೆ ಉತ್ಪನ್ನವಿದ್ದವರು ಹಿರಿಯವನಿಗೆ $3\frac{3}{4}$ ಎರಡನೆ ಹುಡುಗನಿಗೆ $2\frac{1}{2}$ ಹೀಗೆ ಕೊಡಬೇಕಾಗುವದು. ೨೫೦೦ರಿಂದ ೩೩೦೦ರ ಒಳಗಿದ್ದವರು ಮೊದಲಿನ ಹುಡುಗನಿಗೆ $2\frac{1}{2}$ ಎರಡನೆಯ ಹುಡುಗನಿಗೆ $1\frac{1}{4}$ ಮಾರ್ಕ ಕೊಡಬೇಕಾಗುವದು. ಉಳಿದವರಿಗೆಲ್ಲ ಫೀ ಕೊಡಬೇಕಾಗುವದಿಲ್ಲ (೧ ಮಾರ್ಕ ಅಂದರೆ ಸುಮಾರು ೧೫ ಆಣೆ) ಈ ಮಾಧ್ಯಮಿಕ ಶಾಲೆಗಳಲ್ಲಿ ೫ ತರಹದ ಶಾಲೆಗಳುಂಟು; (೧) ಪ್ರಾಥಮಿಕ ಶಾಲೆ

ಗಳ ಮೇಲಿನ ನಾಲ್ಕು ಇಯತ್ತ್ರಿಗಳಲ್ಲಿ ಕಲಿಸಲ್ಪಡುವ ಸಾಮಾನ್ಯ ವಿಷಯಗಳು ಇಲ್ಲಿಯೂ ಕಲಿಸಲ್ಪಡುವವು; ಅವರ ಮೇಲೆ ಒಂದು ಪರಭಾಷೆಯು ಕಲಿಸಲ್ಪಡುವದು, ೨ನೆಯ ಮತ್ತು ೪ನೆಯ ತರವ ಶಾಲೆಗಳಲ್ಲಿ ಬಾಲ ಬಾಲಕಿಯರಿಗೆ ಅವರು ಮುಂದೆ ಕೈಕೊಳ್ಳಬೇಕಾದ ಉದ್ಯೋಗವನ್ನು ನಿರೀಕ್ಷಿಸಿ ತಕ್ಕ ಶಿಕ್ಷಣವು ಕೊಡಲ್ಪಡುವದು; ೩ನೆಯ ತರವ ಶಾಲೆಗಳು ಕೇವಲ ಹೆಣ್ಣು ಮಕ್ಕಳಿಗೋಸುಗ ಇದ್ದು, ೨ನೆಯ ಯೋಜನೆಯ ಎಲ್ಲ ವಿಷಯಗಳನ್ನು ಒಳಕೊಂಡಿದ್ದು ಹೆಚ್ಚಿಗೆ ಗೃಹಣೀ ಶಿಕ್ಷಣವು ಕೊಡಲ್ಪಡುವದು; ೫ನೆಯ ತರವ ಶಾಲೆಗಳು ಸೆಕಂಡರಿ ಶಾಲೆಗಳ ಶಿಕ್ಷಣವ ತಯಾರಿಯನ್ನು ಮಾಡುವವು ಆದ್ದರಿಂದ ಜರ್ಮಾಖರ್ಚು, ಗೃಹಣೀ ಶಿಕ್ಷಣ ಮುಂತಾದವುಗಳು ಬಿಡಲ್ಪಡುವವು ಹೀಗೆ ಮಾಧ್ಯಮಿಕ ಶಾಲೆಗಳಲ್ಲಿ ೫ ಪ್ರಕಾರಗಳುಂಟು ಯುದ್ಧದ ಪೂರ್ವದಲ್ಲಿ ಎರಡೇ (ಬಾಲಕರಿಗೊಂದು, ಬಾಲಿಕೆಯರಿಗೊಂದು) ಪ್ರಕಾರಗಳಿದ್ದವು

ಜರ್ಮನಿಯ ಶಿಕ್ಷಣ ಪದ್ಧತಿಯಲ್ಲಿ ಈ ಮಾಧ್ಯಮಿಕ ಶಾಲೆಗಳೇ ಬಹಳ ಮಹತ್ವವವು ಕೈಗಾರಿಕೆ, ಕಲಾಕೌಶಲ್ಯ, ವ್ಯಾಪಾರ, ಉದ್ಯೋಗ, ಒಕ್ಕಲತನ, ಅರಣ್ಯಶಾಸ್ತ್ರ ಮುಂತಾವ ವಿಷಯಗಳಲ್ಲಿ ಜಗತ್ತಿನಲ್ಲಿ ಪ್ರಚಂಡವಾವ ಪ್ರಗತಿಯು ಏನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ ಇರುವದರಿಂದ ಈ ವಿಷಯಗಳ ಜ್ಞಾನವು ಚನ್ನಾಗಿ ಲಭಿಸಬೇಕಾದರೆ ಸಾಕಷ್ಟು ಸಾಮಾನ್ಯ ಶಿಕ್ಷಣವು ಅವಶ್ಯವಾಗಿದೆ ಈ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳು ಸಾಕಷ್ಟು ಕೊಡಲಾರವು ಮತ್ತು ಎರಡನೆಯ ತರಗತಿಯ ಶಾಲೆಗಳಲ್ಲಿ ಶಾಸ್ತ್ರೀಯ ಕೋಧ ಮುಂತಾದ ವಿಷಯಗಳಿಗೆ ಬೇಕಾದ ಶಿಕ್ಷಣವು ಕೊಡಲ್ಪಡುವದಾದ್ದರಿಂದ ಅಲ್ಲಿಯೂ ಲಭಿಸಲಾರದು ಆದ್ದರಿಂದಲೇ ಈ ಮಾಧ್ಯಮಿಕ ಶಾಲೆಗಳು ಸ್ಥಾಪಿತವಾಗಿವೆ. ಈಗಿನ ಯಾಂತ್ರಿಕ ಮತ್ತು ಔದ್ಯೋಗಿಕ ಯುಗದಲ್ಲಿ ಜರ್ಮನಿಯಂತ ರಾಷ್ಟ್ರದಲ್ಲಿ ಈ ಶಾಲೆಗಳ ಮಹತ್ವವು ಎಷ್ಟೆಂದು ಹೇಳಲಳವಲ್ಲ ಇವುಗಳನ್ನು ಮ್ಯುನ್ಸಿಪಾಲಿಟಿ ಮೊದಲಾದವು ನಡೆಯಿಸುವವು ಈ ಮಾಧ್ಯಮಿಕ ಶಾಲೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಎರಡನೆಯ ತರಗತಿಯ ಶಾಲೆಗಳಿಗೆ ಇಷ್ಟವಿದ್ದಲ್ಲಿ ಹೋಗಬಹುದು.

೨ನೆಯ ತರಗತಿಯ ಶಾಲೆಗಳು

೨ ನೆಯ ತರಗತಿಯ ಶಾಲೆಗಳಲ್ಲಿ ೫ ಪ್ರಕಾರಗಳಿವೆ:—

(೧) ಗ್ರಾಮರ (ವ್ಯಾಕರಣ) ಸ್ಕೂಲು, ಕಲಿಸತಕ್ಕ ಹೆಚ್ಚಿನ ವಿಷಯಗಳು:— ಲ್ಯಾಟಿನ್, ಗ್ರೀಕ, ಫ್ರೆಂಚ, ಇಂಗ್ಲೀಷ, ಗಣೀತ, ರಸಾಯನಶಾಸ್ತ್ರ ಶಾಸ್ತ್ರೀಯ ವಿಷಯಗಳು, ಪ್ರಾಣಿಶಾಸ್ತ್ರ ಇತ್ಯಾದಿ

ಈ ಶಾಲೆಗಳಲ್ಲಿ ೯ ಇಯತ್ತ್ರಿಗಳಿರುವವು ಮೊದಲಿನ ನಾಲ್ಕು ಈಯತ್ತ್ರಿಯು ತಯಾರಿ ಶಾಲೆಗಳನ್ನು ಹೋಲುವವು ಇದರಿಂದ ಜರ್ಮನಿಯಲ್ಲಿ ಅನೇಕ ಪ್ರಕಾರದ ಶಾಲೆಗಳು ಇರುತ್ತಿದ್ದಾಗ್ಯೂ ೪ ವರ್ಷದ ಶಿಕ್ಷಣವು ಯಾವತ್ತೂ ಶಾಲೆ

ಗಳಲ್ಲಿ ಸಾಮಾನ್ಯವಾಗಿದ್ದವರಿಂದ ಜರ್ಮನ್ ಸಂಸ್ಕೃತಿಯ ಪ್ರಭಾವವು ಪ್ರತಿ
ಯೊಬ್ಬ ವಿದ್ಯಾರ್ಥಿಯ ಶಿಕ್ಷಣದಲ್ಲಿ ಮುಖ್ಯಾಂಗವಾಗಿರುವದು ಮತ್ತು ಎಲ್ಲ
ಪ್ರಕಾರದ ಶಾಲೆಗಳಿಗೂ ಒಂದು ಸಾಮಾನ್ಯಸಂಬಂಧವನ್ನು ಕಲ್ಪಿಸುವದು

ಆಧುನಿಕ ಭಾಷಾಶಾಲೆಗಳು

(೨,೩) ವಿಷಯಗಳು - ಲ್ಯಾಟಿನ್, ಫ್ರೆಂಚ, ಇಂಗ್ಲೀಷ ಶಾಸ್ತ್ರೀಯ ವಿಷಯ
ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸ್ಪ್ಯಾನಿಶ್ ಭಾಷಾ ಇತ್ಯಾದಿ,
ಇಂಗ್ಲೀಷ ಮತ್ತು ಫ್ರೆಂಚ ಭಾಷೆಗಳಿಗೆ ಹೆಚ್ಚು ಮಹತ್ವವು ಕೊಡಲ್ಪಡುವದು

ಶಾಸ್ತ್ರೀಯ ಶಾಲೆಗಳು

ಹೆಚ್ಚಿನ ವಿಷಯಗಳು:—ಫ್ರೆಂಚ, ಇಂಗ್ಲೀಷ, ಗಣೀತ, ಶಾಸ್ತ್ರೀಯ
ವಿಷಯ, ರಸಾಯನ ಶಾಸ್ತ್ರ, ಪ್ರಾಣಿಶಾಸ್ತ್ರ, ಇತ್ಯಾದಿ ಲ್ಯಾಟಿನ್, ಮತ್ತು ಸ್ಪ್ಯಾ
ನಿಶ್ ಸ್ವೇಚ್ಛಾ ವಿಷಯಗಳು ಇಂಗ್ಲೀಷ, ಅಥವಾ ಫ್ರೆಂಚದ ಬದಲು ಆಧುನಿಕ
ಸುಧಾರಿಸಿದ ಬೇರೆ ಯಾವುದಾದರೊಂದು ಭಾಷೆಯನ್ನು ತೆಗೆದುಕೊಳ್ಳಬಹುದು

ಪೆಬ್ಬರದ ಶಾಲೆ

(೪) ಹೆಚ್ಚಿನ ವಿಷಯಗಳು:—ಧರ್ಮ, ಜರ್ಮನ್ ಭಾಷೆ, ಇತಿಹಾಸ,
ಭೂಗೋಲ, ಗಣಿತ, ಶಾಸ್ತ್ರೀಯ ವಿಷಯ, ಚಿತ್ರಕಲೆ, ಗಾಯನ, ಇವಲ್ಲದೆ
ನಾಗರಿಕರ ಕರ್ತವ್ಯಗಳು ತತ್ವವಿಚಾರ ಇತ್ಯಾದಿ ವಿಷಯಗಳು ಸ್ವೇಚ್ಛೆಯ ವಿಷ
ಯಗಳು ಈ ಶಾಲೆಗಳಲ್ಲಿ ಇತಿಹಾಸ ಮತ್ತು ಭೂಗೋಲುಗಳಿಗೆ ಹೆಚ್ಚಿನ
ಪ್ರಾಧಾನ್ಯವು

ಅಧ್ಯಾಪನ ಶಾಲೆ.

ವಿಷಯಗಳು:—ಮೂರನೆಯ ಅಥವಾ ನಾಲ್ಕನೆಯ ಪ್ರಕಾರದ ಶಾಲೆಗಳಲ್ಲಿ
ಕಲಿಸಬಹುದಾದ ವಿಷಯಗಳು. ಆದರೆ ಈ ಶಾಲೆಗಳನ್ನು ಶಿಕ್ಷಕ ಶಿಕ್ಷಕಿಯರನ್ನು
ಪ್ರಾಥಮಿಕ ಶಾಲೆಗಳಿಗೆ ತಯಾರು ಮಾಡುವದಕ್ಕೋಸ್ಕರ ಯೋಜಿಸಿದ್ದಾರೆ
ಆದ್ದರಿಂದ ಪ್ರಾಥಮಿಕ ಶಾಲೆಗಳ ಶಿಕ್ಷಣದ ಭಾರವೆಲ್ಲ ಈ ಎರಡನೆಯ ತರಗತಿಯ
ಶಾಲೆಗಳಲ್ಲಿ ತೀರ್ಗಡೆ ಹೊಂದಿದ ಶಿಕ್ಷಕರ ಮೇಲೆ ಇರುವದು. ಇವರಿಗೆ ಕಡೆಯಲ್ಲಿ
ಸ್ಕೂಲ ಲೀವ್ಹಿಂಗ ಎಗ್ಜಾಮಿನೇಶನ್ ಸರ್ಟಿಫಿಕೇಟ ಕೊಡಲ್ಪಡುವದು. ನಮ್ಮ
ಈ ಸರ್ಟಿಫಿಕೇಟಿ ದೊರಕಿಸಲಿಕ್ಕೆ ಪ್ರಾಥಮಿಕ ಶಾಲೆಗಳಲ್ಲಿ ೫ ವರ್ಷ, ಹಾಯಸ್ಕೂ
ಲುಗಳಲ್ಲಿ ೬ ವರ್ಷ ಅಂತೂ ನಿದಾನ ೧೨ ವರ್ಷ ಹಿಡಿಯುವದು.

ಇದರ ಮೇಲಿಂದ ಜರ್ಮನಿಯಲ್ಲಿ ಶಿಕ್ಷಣವು ಆ ದೇಶದ ವ್ಯವಹಾರ ಉದ್ಯೋ
ಗ ಮುಂತಾದ ವಿಷಯಗಳನ್ನು ಅನುಸರಿಸಿರುವದು ಕಂಡುಬರುವದು. ಆದ
ನಮ್ಮ ದೇಶದ ಉದ್ಯೋಗಳಾದ ಒಕ್ಕಲತನ, ವಾಣಿಜ್ಯ, ಕೈಗಾರಿಕೆ ಇವುಗ
ಶಿಕ್ಷಣದ ಅಭಾವದಿಂದ ದೇಶದ ಪ್ರಗತಿಯು ತೀರ ಕುಂಠಿತವಾಗಿದೆ.

೨ನೆಯ ಬಗೆಯ ಶಾಲೆಗಳು.

ಜರ್ಮನಿಯ ಶಿಕ್ಷಣ ಶಾಸ್ತ್ರಜ್ಞರು ಮೇಲ್ಕಂಡ ಶಿಕ್ಷಣ ಪದ್ಧತಿಯಿಂದ ತೃಪ್ತರಾಗದೆ ಹೆಚ್ಚು ಸ್ವಾತಂತ್ರತೆಯಿಂದ ಶಿಕ್ಷಣ ಕಾರ್ಯವನ್ನು ನಡೆಯಿಸುವ ಲವಲವಿಕೆಯಿಂದ ಬೇರೆ ಶಾಲೆಗಳನ್ನು ಸ್ವತಂತ್ರವಾಗಿ ಸ್ಥಾಪಿಸಿ ಅಸ್ತಿಯಿಂದ ನಡೆಯಿಸುತ್ತಿರುವರು. ಈಗಾಗಲೇ ಇಂಥ ಶಾಲೆಗಳು ನೂರಾರು ಅಸ್ತಿತ್ವದಲ್ಲಿವೆ. ಅವುಗಳಲ್ಲಿ ಒಂದನ್ನು ಇಲ್ಲಿ ನಿವರಿಸುವೆವು ಶ್ಯಾಕ್ಸೆನಿ ಪ್ರಾಂತದಲ್ಲಿ ಹೆಲೆರೊ ಎಂಬ ಗ್ರಾಮವಿರುವದು. ಅದು ಯುರೋಪದಲ್ಲೆಲ್ಲ ಅಲ್ಲಿಯ ನರ್ಸರಿ ಶಾಲೆಯ ದೆಶೆಯಲ್ಲಿಯಿಂದ ಹೆಸರಾಗಿದೆ ಅಲ್ಲಿ ಇಂಥದೊಂದು ಪ್ರಾಥಮಿಕ ಶಾಲೆಯುಂಟು. ಆ ಶಾಲೆಯು ಸುಮಾರು ೭೦೦ ವಿದ್ಯಾರ್ಥಿಗಳಿರುವರು. ಈ ಶಾಲೆಯು ಹೊಸ ಮಾದರಿಯ ಶಿಕ್ಷಣ ಪದ್ಧತಿಯನ್ನು ೧೯೨೦ರಿಂದ ಪ್ರಾರಂಭಿಸಿದೆ. ಈ ಶಾಲೆಯಲ್ಲಿ ಶಿಕ್ಷಣದ ಬಹು ಭಾಗವು ಕ್ಲಾಸಿನಲ್ಲಿ ಆಗದೆ ವಿದ್ಯಾರ್ಥಿಗಳನ್ನು ಪ್ರವಾಸದ ಮೇಲೆ ತೆಗೆದುಕೊಂಡು ಹೋಗಿ ಸೃಷ್ಟಿಯ ಅಗಾಧವಾದ ವಿಷಯಗಳನ್ನು ತೋರಿಸುತ್ತ ಅಡವಿಗಳನ್ನೂ ಹೊಲಗಳನ್ನೂ, ಪರ್ವತಗಳನ್ನೂ, ನದಿಗಳನ್ನೂ, ಕೊಳ್ಳಗಳನ್ನೂ, ಸೃಷ್ಟಿಯ ಬಗೆಬಗೆಯ ವಿಷಯಗಳನ್ನೂ ಪ್ರತ್ಯಕ್ಷ ತೋರಿಸಿ ಅವರಿಗೆ ಅವುಗಳ ಬಗ್ಗೆ ಸಾಮಾನ್ಯ ಜ್ಞಾನವನ್ನು ಕೊಡುವರು. ಹುಡುಗರಲ್ಲಿಯಾವರೂ ಅವುಗಳನ್ನು ನೋಡಿ ಆನಂದೋತ್ಸಾಹಗಳು ಜನಿಸುವದಲ್ಲದೆ ನಿರೀಕ್ಷಣ ಶಕ್ತಿಯೂ ಉಂಟಾಗುವದು. ಹುಡುಗರಲ್ಲಿ ಅವುಗಳ ಜ್ಞಾನವಾಗುವ ಬಗ್ಗೆ ಉತ್ಸುಕತೆಯು ಉಕ್ಕೇರುವದು. ಹುಡುಗರನ್ನು ವಸ್ತು ಸಂಗ್ರಹಾಲಯ, ಯಂತ್ರಗಳ ಕಾರಖಾನೆ, ಗಿರಣಿ, ರೇಲ್ವೆ, ಬಂದರ ಮತ್ತು ಮನುಷ್ಯನ ಅಗಾಧವಾದ ಅನೇಕ ವ್ಯವಸಾಯದ ಶಾಲೆಗಳಿಗೆ ಕರೆದುಕೊಂಡು ಹೋಗಿ ಅವರ ಗ್ರಹಣಶಕ್ತಿಗೆ ಸರಿಯಾಗಿ ಆಯಾಯ ವಿಷಯಜ್ಞಾನವನ್ನು ಮಾಡಿಕೊಡುವರು. ಹೀಗೆ ಹೊರಗೆಲ್ಲ ಅಡ್ಡಾಡಿ, ಬಗೆಬಗೆಯ ವಿಷಯಗಳನ್ನು ನೋಡಿ, ಶಾಲೆಗೆ ಬಂದ ನಂತರ ಅಲ್ಲಿ ಕಲಿಯತಕ್ಕ ವಿಷಯಗಳನ್ನು ತಾವು ಸ್ವತಃ ನೋಡಿದಂಥ ವಿಷಯಗಳ ಮೇಲಿಂದ ಸುಲಭವಾಗಿ ತಿಳಿದುಕೊಳ್ಳುವರು ಶಾಲೆಯೆಂದರೆ ಕೇವಲ ಪ್ರಯೋಗಶಾಲೆಯಿಂದು ಭಾವಿಸುವರು ನಿಜವಾದ ಜ್ಞಾನವು ಪ್ರವಾಸದಲ್ಲಿಯೇ ದೊರೆಯುವದು. ಓದು, ಬರಹ, ಗಣಿತ ಇತ್ಯಾದಿ ವಿಷಯಗಳು ಪ್ರವಾಸದಲ್ಲಿಯೇ ಸಾಗುವವು. ಇದರಿಂದ ವಿದ್ಯಾರ್ಥಿಗಳು ಶುದ್ಧ ಹವೆಯಲ್ಲಿ ಸಂಚರಿಸುವದರಿಂದ ನಿರೋಗಿಗಳಾಗಿಯೂ, ಉಲ್ಲಾಸವೃತ್ತಿಯವರಾಗಿಯೂ ಇರುವರು. ಕ್ಲಾಸಿನಲ್ಲಿ ಸಹ ಹುಡುಗರು ಕೂಡ್ರುವ ವ್ಯವಸ್ಥೆಯಾವರೂ ಸ್ವಾಭಾವಿಕವಾಗಿರುವದು. ಹುಡುಗರು ತಮ್ಮ ಮನೆಯಲ್ಲಿ ಕೂತುಕೊಳ್ಳುವ ಹಾಗೆ ಗುಂಪುಗುಂಪಾಗಿ ಕುಳಿತುಕೊಳ್ಳುವರು. ಪ್ರಶಿಯಾದ ಮಾದರಿಯ ಬಾಕುಮೇಜುಗಳನ್ನು ನಿರಾಕರಿಸಿ, ಕುರ್ಚಿ, ಮೇಜು, ಕಪಾಟು ಮುಂತಾದವುಗಳನ್ನು ಇಟ್ಟಿರುವವು. ಹುಡುಗರು, ಶಿಕ್ಷಕರು ಮತ್ತು ಪಾಲಕರು ಸಾಲೆಯನ್ನು ತರತರದಿಂದ ಅಲಂಕರಿಸುವದ

ರಲ್ಲಿ ಆಸ್ತಿಯುಳ್ಳವರಾಗಿರುವರು. ಹುಡುಗರು ಮುಂಜಾನೆ ಎದ್ದಕೂಡಲೆ ಪ್ರಾರ್ಥನಾವಿಧಿಗಳನ್ನು ತೀರಿಸಿಕೊಂಡು ಪ್ರಾರ್ಥನೆ, ಗೀತಗಳನ್ನು ಹಾಡಿ ನಂತರ ತಮ್ಮ ವರ್ಗಗಳನ್ನು ಸ್ವಚ್ಛ ಮಾಡಿ ಎಲ್ಲವನ್ನೂ ಸರಿಯಾಗಿ ಇಡುವರು ಶಾಲೆಯ ಕೆಲಸ ಬೇರೆ, ಮನೆಯ ಕೆಲಸ ಬೇರೆ ಎಂದು ಭಾವಿಸುವದಿಲ್ಲ. ಎಲ್ಲರ ಒಡಹುಟ್ಟಿದವರಂತೆ ಒಬ್ಬರಿಗೊಬ್ಬರು ನೆರವಾಗುವದನ್ನು, ಪ್ರೇಮದಿಂದ ಕೂಡಿ ಕೆಲಸ ಮಾಡುವದನ್ನು ಕಲಿಯುವರು. ಸಾಮೂಹಿಕ ಕಾರ್ಯದಿಂದಾಗುವ ಲಾಭವು ವೈಯಕ್ತಿಕ ಕಾರ್ಯದಿಂದಾಗಲಾರದೆಂಬದನ್ನು ಕಲಿಯುವರು. ಉದಾ— ಒಮ್ಮೆ ಶಾಲೆಯ ಹೊಲವನ್ನು ಕೆಲವು ಹುಡುಗರು ತಮಗೆ ಪ್ರತ್ಯೇಕವಾಗಿ ತುಂಡು ಮಾಡಿಕೊಡಲಿಕ್ಕೆ ಕೇಳಿದರು. ಅದರಂತೆ ಅವರಿಗೆ ಪ್ರತ್ಯೇಕ ತುಂಡುಗಳ ಸಾಮೂಹಿಕವಾಗಿ ಹೊಲ ಮಾಡಿದವರ ಅರ್ಧವಷ್ಟು ಉತ್ಪನ್ನವನ್ನು ಸಹ ಹೊಂದಲಿಲ್ಲ. ಆದ್ದರಿಂದ ಅವರು ಪುನಃ ಎಲ್ಲರೊಡನೆ ಆಗ್ರಹದಿಂದ ಕೂಡಿಕೊಂಡರು. ಈ ಶಾಲೆಗಳು ಈಗ ಬಹಳ ಲೋಕಪ್ರಿಯವಾಗಹತ್ತಿವೆ. ಹಳೆಯ ತರದ ಶಾಲೆಗಳು ಅಡಗಹತ್ತಿವೆ. ಯುದ್ಧದ ಪೂರ್ವದ ಜರ್ಮನಿಗೂ ಈಗಿನ ಜರ್ಮನಿಗೂ ಬಹಳೇ ಅಭ್ಯಂತರವದೆ. ತಾಮಸವೃತ್ತಿಯಿಂದ ಜಗತ್ತನ್ನೇ ನುಂಗಬೇಕೆಂದಿದ್ದ ಜರ್ಮನಿಯು ಈಗ ಉದ್ಯೋಗ ವ್ಯವಸಾಯಗಳಿಂದ ಮುಂದಾಗಬೇಕೆಂದು ಹಾತೊರೆಯುತ್ತಲಿದೆ.

ಒಟ್ಟಿನ ಮೇಲೆ ಈ ಬಗೆಯಾಗಿ ವಿವಿಧ ಶಿಕ್ಷಣವು ನಮ್ಮ ದೇಶದಲ್ಲಿ ದೊರೆಯಲಾರದು. ಒಕ್ಕಲಿಗರ ಮಕ್ಕಳಿಗೂ ಅದೇ ಶಿಕ್ಷಣ, ವರ್ತಕರ ಮಕ್ಕಳಿಗೂ ಅದೇ ಶಿಕ್ಷಣ, ಅಮಲದಾರರ ಮಕ್ಕಳಿಗೂ ಅದೇ ಶಿಕ್ಷಣ, ಸರ್ವರಿಗೂ ಅದೆ ಶಿಕ್ಷಣ ಆದ್ದರಿಂದ ದೇಶದ ಬೇಡಿಕೆಗೆ ಸರಿಯಾದ ಶಿಕ್ಷಣದ ಅಭಾವದಿಂದ, ಅನಾವಶ್ಯಕ ಶಿಕ್ಷಣದ ಜುಲುಮೆಯಾಗುವದರಿಂದ ದೇಶದಲ್ಲೆಲ್ಲ ಈಗಿನ ಶಿಕ್ಷಣದ ಬಗ್ಗೆ ಆದರಬುದ್ಧಿಯು ದಿನೇ ದಿನೇ ಕಡಿಮೆಯಾಗಹತ್ತಿದೆ. ಈ ಕೊರತೆಯನ್ನು ಮಾಡುವ ಪ್ರಯತ್ನವು ಅತಿ ಮಂದವಾಗಿ ನಾಗಿದೆ. ನಮ್ಮ ದೇಶದಲ್ಲಿ ಪದವೀಧರರ ಪ್ರಮಾಣವು ಹೆಚ್ಚಿದ್ದರೂ ಕೂಡ ಈ ಕೊರತೆಗಳ ಮೂಲಕ ಅದು ಇನ್ನೂ ಹಿಂದುಳಿದ ದೇಶವೆಂದು ತಿಳಿಯಲ್ಪಡುವದು.

ಶಿಕ್ಷಕನು ಜನಪ್ರಿಯನಾಗುವ ಸಾಧನಗಳು.

ಈಗಣ ಪ್ರಗತಿಪರವಾದ ೨೦ನೆಯ ಶತಮಾನವು ಸ್ವಾತಂತ್ರ್ಯದ ಯುಗವೆಂದು ಹೇಳಬಹುದು. ಈ ಯುಗದಲ್ಲಿ ಅಧಿಕಾರದ ಮಾನ್ಯತೆಯು ಬಹುಶಃ ಹಮ್ಮೆಟ್ಟಿಹತ್ತಿದೆ. ಪ್ರತಿಯೊಂದು ಸಣ್ಣ ಹಳ್ಳಿಯಲ್ಲಿ ಸಹ ಸ್ವಾತಂತ್ರ್ಯತೆಯು ಪ್ರಿಯಕರವಾಗಹತ್ತಿದೆ. ಒಬ್ಬನು ಇನ್ನೊಬ್ಬನ ಮಾತಿನಂತೆ ನಡೆಯಲು ಹಿಂದು ಮುಂದು ನೋಡುತ್ತಿದ್ದಾನೆ. ಬಹುಶಃ ಮನೆಗೊಬ್ಬರಂತೆ ಹಿರಿಯರಾಗಿದ್ದಾರೆ. ಈ ಪ್ರಕಾರ ಹಳ್ಳಿಯಲ್ಲಿ ಪರಿಸ್ಥಿತಿಯುಂಟಾಗಿದ್ದರೂ ಆ ಪರಿಸ್ಥಿತಿಯು ಪೂರ್ಣ ಕಲಿತವರಿಂದಲೂ, ಏನೂ ಕಲಿಯದವರಿಂದಲೂ ಉಂಟಾಗಿರದೆ ಅರಪಂಡಿತರಿಂದುಂಟಾಗಿದೆ. ಪೂರ್ಣ ಕಲಿತವರು ಶಿಕ್ಷಕರೆಂದರೆ ಭಾವೀ ರಾಷ್ಟ್ರಸುಧಾರಕರೆಂದು ಅವರಿಗೆ ಗೌರವ ಕೊಡುತ್ತಿರುವರು. ಏನೂ ಕಲಿಯದವರು ಶಿಕ್ಷಕರೆಂದರೆ, ತಮ್ಮ ಹಿರಿಯರೆಂದೂ, ಗುರುಗಳೆಂದೂ ಭಾವಿಸಿ ಅವರಲ್ಲಿ ಭಕ್ತಿಯುತರಾಗಿರುವರು; ಆದರೆ ಅರ್ಧಪಂಡಿತರು ಮಾತ್ರ ಸುಧಾರಣೆಯ ಶಬ್ದಗಳ ಅಧಿಕಾರಕ್ಕೆ ಮರುಳಾಗಿ ಶಿಕ್ಷಕರನ್ನು ದನಗಾಹಿಗಳಂತೆ ಭಾವಿಸುವರು. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕ ವರ್ಗದಲ್ಲಿ ಉತ್ತಮ ಕೆಲಸ ಮಾಡಿ, ಒಳ್ಳೆಯ ಯಶಸ್ವಿಗಳಾಗಿ, ಪರಮಾವಧಿ ಜನಪ್ರಿಯರಾಗಬೇಕೆನ್ನುವವರು ಕೆಲವರು. "ಈ ಮಾಸ್ತರನು ಈ ಊರು ಬಿಟ್ಟು ಎಂದು ಹಾಳಾಗಿ ಹೋಗುವನೋ, ನಮ್ಮ ಶಾಲೆಯನ್ನೂ, ಊರನ್ನೂ ಹಾಳು ಮಾಡಿ ಬಿಟ್ಟನು" ಎಂದೆನ್ನಿಸಿಕೊಳ್ಳುವಂಥವರು ಕೆಲವರು. "ಈ ಮಾಸ್ತರನು ಇದ್ದರೂ ಅಷ್ಟೇ ಹೋದರೂ ಅಷ್ಟೇ" ಎಂಬ ಉದಾಸೀನ ಭಾವನೆಯನ್ನುಂಟು ಮಾಡುವವರು ಕೆಲವರು. ಈ ಮೂರು ಪ್ರಕಾರದ ಶಿಕ್ಷಕರಲ್ಲಿ ಜನಪ್ರಿಯ ಶಿಕ್ಷಕರಾಗಲಿಕ್ಕೆ ಬೇಕಿರುವ ಅತ್ಯವಶ್ಯವಾದ ಕೆಲವು ಸಾಧನಗಳನ್ನು ನಿವರಿಸುವದೇ ಈ ಲೇಖದ ಮುಖ್ಯೋದ್ದೇಶವಾಗಿದೆ.

(೧) ಹಳ್ಳಿಯು ಬಹುಶಃ ಬಡರೈತರ ಬೀಡಾದುದರಿಂದ ಅವರೊಡನೆ ಹೊಂದುಗೂಡಿಕೊಂಡು, ಹೋಗುವಂತಹ ಸಮಭಾವದ ಶಿಕ್ಷಕನಾಗಿರಬೇಕು. ಉಚ್ಚಸ್ಥಿತಿಯ ಜನರೊಡನೆ ಹಿತವಂತಿಕೆಯಿಂದಲೂ, ಬಡವರೊಡನೆ ಶಠಂಭಾವದಿಂದಲೂ ವರ್ತಿಸುವದು ಸರಿಯಲ್ಲ. "ನಾನು ೨ನೆಯ, ೩ನೆಯ ವರುಷದ ಪ್ರೀಂಡನು, ಇವರು ನಿರಕ್ಷರ ಕುಕ್ಷಿಗಳು; ನಾನು ಶ್ರೀಮಂತನು, ಇವರು ದರಿದ್ರರು; ಇಂಥವರೊಡನೆ ಮಾತುಕಥೆಗಳೇಕೆ!" ಎಂದೆನ್ನದೆ ನಿರಕ್ಷರಿಗಳೊಡನೆಯೂ, ದರಿದ್ರರೊಡನೆಯೂ ಸುಖಸಲ್ಲಾಪಗಳನ್ನಾಡುತ್ತ, ಅಂಥವರು ತನ್ನ ಶಾಲೆಗೆ ಬಂದಾಗ, ಇಲ್ಲವೆ ಭೆಟ್ಟಿಯಾದಾಗ ತಕ್ಕ ಮನ್ನಣೆ ಮಾಡಿ, ಯೋಗ

ಕ್ಷೇಮದ ನಾಲ್ಕು ಮಾತಾಡಿದರೆ, ಅವರಿಗೆ ಆನಂದವಾಗಿ ಶಿಕ್ಷಕನ ನಿಗರ್ವತನ
ವರ್ತನವನ್ನು ಕಂಡು ಅವನ ಬಗ್ಗೆ ಪೂಜ್ಯಬುದ್ಧಿಯುತ್ಪನ್ನವಾಗುವದು. ನಾವು
ನ್ಯವಾಗಿ ಎಲ್ಲೆಡೆಯಲ್ಲಿಯೂ ಶ್ರೀಮಂತರಿಗಿಂತ ಬಡವರ ಸಂಖ್ಯೆಯೂ, ಕಲಿತವ
ಗಿಂತ ಕಲಿಯದವರ ಸಂಖ್ಯೆಯೂ ಹೆಚ್ಚಿರುವದರಿಂದ ಸಮ ಾವದ ಶಿಕ್ಷಕ
ಬಹುಜನರ ಪ್ರೀತಿಗೆ ಪಾತ್ರನಾಗುತ್ತಾನೆ.

(೨) ಶಿಕ್ಷಕನು ತನ್ನ ವಿದ್ಯಾರ್ಥಿಗಳ ಕಲ್ಯಾಣದ ಬಗ್ಗೆ ಉತ್ಕಟೇಚ್ಛೆಯ
ಳ್ಳವನಾಗಿರಬೇಕು. ತನ್ನಲ್ಲಿ ಕಲಿಯಲು ಬಂದ ವಿದ್ಯಾರ್ಥಿಗಳ ಯೋಗ್ಯತೆಯ
ಕೇಳುತರಬ್ಬೆಂದು ಎಷ್ಟು ಮಾತ್ರವೂ ತಿಳಿಯಕೂಡದು. ಜಾತಿಸಂಬಂಧವಾ
ಪಕ್ಷಪಾತಕ್ಕಾಗಲಿ, ಇವನು ಶೆಟ್ಟಿಸಾವುಕಾರನ ಮಗನು, ಇವನು ಬಡಕೂಲಿಕಾ
ದರಿದ್ರನ ಮಗನು, ಎಂಬ ತಾರತಮ್ಯಕ್ಕಾಗಲಿ, ಇವನು ಗೌಡಕುಲಕರಣಿಯ
ಮಗನು, ಇವನು ಓಲೇಕಾರನ ಮಗನು ಎಂಬ ಭೇದಬುದ್ಧಿಗಾಗಲಿ ಎಳ್ಳಷ
ದರೂ ಇಂಬುಗೊಡದೆ, ತನ್ನ ವಿದ್ಯಾರ್ಥಿಗಳೆಲ್ಲ ಒಂದೇ ಜಾತಿಯವರೂ, ಸಮಾ
ಯೋಗ್ಯತೆಯವರೂ ಎಂದು ಭಾವಿಸುತ್ತಿರಬೇಕು. ಶಿಕ್ಷಣದ ಕಾರ್ಯವೆಂದರೆ
ಪವಿತ್ರವೂ, ದೇಶೋದ್ಧಾರಕಾರಕವೂ ಎಂಬದನ್ನು ತಿಳಿದು, ತನ್ನ ವಿದ್ಯಾರ್ಥಿಗಳೆ
ಭಾವೀ ರಾಷ್ಟ್ರವಾಗುವದರಿಂದ " ಈಗಣ ೨೦ನೆಯ ಶತಮಾನದಲ್ಲಿ ಸದ್ಯಕ್ಕಿರು
ನನ್ನ ದೇಶದ ಸ್ಥಿತಿಗಿಂತ ಮೇಲ್ತರದ ಸುಸ್ಥಿತಿಯನ್ನು ನನ್ನ ವಿದ್ಯಾರ್ಥಿಗಳ
ಮುಂದೆ ಜರಗಿಸುವಂತೆ ಮಾಡುತ್ತೇನೆ " ಎಂಬ ಸದ್ಭಾವನೆಯುಳ್ಳವರಾಗಿ ಬೇಕು
ದುಡಿಯುವದೂ, ಸಂಬಳ ಬೇಡುವದೂ ತನ್ನ ಸಂಸಾರದ ಸಲುವಾಗಿಯಾಗಿದ್ದರೂ
ಸಂಬಳದ ನೆವದಿಂದ ಕೆಲಸದಲ್ಲಿ ಅಲಕ್ಷ್ಯ ಮಾಡುವದು, ವಿದ್ಯಾರ್ಥಿಗಳ ಕಲಾ
ಣದ ದೃಷ್ಟಿಯಿಂದ ಒಳಿತಲ್ಲ.

(೩) " ವಿದ್ವತ್ವಂಚ ನೃಪತ್ವಂಚ । ನೈವತುಲ್ಯಂ ಕದಾಚನ ॥
ಸ್ವದೇಶೇ ಪೂಜ್ಯತೇ ರಾಜಾ । ವಿದ್ವಾನ್ ಸರ್ವತ್ರ ಪೂಜ್ಯತೇ ॥

ಎಂಬಂತೆ ಅಧಿಕಾರದ ಅಮಲಿಗಿಂತ ವಿದ್ವತ್ತಿಗೆ ಹೆಚ್ಚು ಮಾನ್ಯನಿರುವದರಿಂ
ಅಧಿಕಾರದ ವರ್ಚಸ್ಸು ಬೆಳೆಯುವಲು ಪ್ರಯತ್ನಿಸಬೇಕು. ಕಾಯಿದೆಯ ಜಾಣ್ಮೆ
ಯಿಂದ ಊರ ಬಣಗಳಲ್ಲಿ ಸೇರುವ ಬುದ್ಧಿಯುಂಟಾಗಿ, ಶಿಕ್ಷಕರು ತೀವ್ರವೇ ಅ
ಕೀರ್ತಿಗೆ ಗುರಿಯಾಗುತ್ತಾರೆ. ಅಧಿಕಾರ ತೋರಿಸ ಹೋಗಿ, ಬಡವರಿಗೂ
ದುರ್ಬಲರಿಗೂ ಪೀಡಾದಾಯಕರಾಗುತ್ತಾರೆ. ಕೋರ್ಟು-ಕಚೇರಿಗಳಿಗೆಡತಾಗ
ವದರಿಂದ ತಮ್ಮ ಪವಿತ್ರ ಕಾರ್ಯಕ್ಕೆ ನೀರೆರೆದು, ಭಾವೀ ಪ್ರಜೆಗಳ ಪಾಪ ಕಟ್ಟಿ
ಕೊಳ್ಳುತ್ತಾರೆ; ಆದರೆ ಶಿಕ್ಷಕನು ವಿದ್ವಾಂಸನಿರುತ್ತಾನೆಂಬ ಭಾವನೆಯನ್ನುಂಟು
ಮಾಡುವದು ಜನಪ್ರಿಯನಾಗಲಿಕ್ಕೆ ಮೇಲಾದ ಸಾಧನವಾಗಿದೆ. ಇದಕ್ಕಾಗಿ

ಶಿಕ್ಷಕನು ತಾನು ಕಲಿತ ಕನ್ನಡ-ಸಂಸ್ಕೃತ ಕಾವ್ಯಗಳನ್ನು ಅನುಕೂಲ ಪರಿಸ್ಥಿತಿಯ ವೇಳೆಯಲ್ಲಿ ತನ್ನ ಮನೆಯಲ್ಲಾಗಲಿ, ಸಾರ್ವಜನಿಕ ಮಂದಿರದಲಲ್ಲಾಗಲಿ ಒಮ್ಮತ್ತ, ಕಾವ್ಯದೊಳಗಣ ಕಥೆಯ ಸಾರವನ್ನೂ, ನೈತಿಕ ಸಂಗತಿಗಳನ್ನೂ ಒಡೆದು ಹೇಳಹತ್ತಿದರೆ, ಶಿಕ್ಷಕನು ಜಾಣನಿರುವನೆಂಬ ಕಲ್ಪನೆಯು ಜನರಲ್ಲಿ ಸಹಜವೇ ನೆಲೆಗೊಂಡು, ಪೂಜ್ಯನಾಗುವನು.

(೪) ಉಪದೇಶಕ್ಕಿಂತ ಉದಾಹರಣೆಯೇ ನಿಗಿಲಾದುದರಿಂದಲೂ, ಶಿಕ್ಷಕನು ಮಾರ್ಗದರ್ಶಕನಾದುದರಿಂದಲೂ ಸದಾಚಾರಿಯೂ, ಸನ್ಮಾರ್ಗಿಯೂ, ಸತ್ಯವ್ರತನೂ ಆಗಿದ್ದಾನೆಂಬ ಭಾವನೆಯುತ್ಪನ್ನವಾಗುವಂತೆ ತನ್ನ ನಿತ್ಯಾಚರಣೆಯನ್ನಿಡಬೇಕು. ಯಾವ ದುಶ್ಚಟಗಳಿಗೂ ಇಂಬುಗೊಡದೆ, ತನ್ನ ನಿತ್ಯವ್ಯವಹಾರದಲ್ಲಿ ನಿರತನಾಗಿರಬೇಕು. ಶಿಕ್ಷಕನು ಧರ್ಮಲಂಡನೆಂಬ ಭಾವನೆಯುದ್ಭವಿಸದಂತೆ ಧಾರ್ಮಿಕ ಕಾರ್ಯಗಳನ್ನು ಜರುಗಿಸುತ್ತಿರಬೇಕು. ಶೀಘ್ರಕೋಪಿಯಾಗಿರದೆ, ಶಾಂತತಾಪ್ರಿಯನಾಗಿದ್ದಾನೆಂಬ ಭಾವನೆಯು ನೆಲೆಗೊಳ್ಳುವಂತೆ ಎಲ್ಲರೊಡನೆಯೂ ಸಮಾಧಾನದಿಂದಾಚರಿಸಬೇಕು. ನಿಷ್ಕಾರಣವಾಗಿ, ಸಿಕ್ಕಲ್ಲಿ ಕುಳಿತು ಹರಟೆ ಹೊಡೆಯುವದನ್ನೂ ಶಾಲೆಯ ವೇಳೆಯಲ್ಲಿ ಮನಬಂದಂತೆ ಅಡ್ಡಾಡುವದನ್ನೂ ಕಟ್ಟು ಮಾಡಿ ತನ್ನ ನಿತ್ಯ ಕಾಯಕದಲ್ಲಿ ತೊಡಗಿರಬೇಕು. " ನನ್ನ ಕೆಲಸವನ್ನು ನಾನು ಚೆನ್ನಾಗಿ ಮಾಡಿದರೆ, ಯಾರ ಹಂಗೇನು ! " ಎಂದೆನ್ನುವದಕ್ಕಿಂತ ಪ್ರೀತಿಯಿಂದಲೇ ಪ್ರೀತಿ ಬೆಳೆಯುವದೆಂಬ ನೈತಿಕ ಪಾಠವನ್ನು ಕಲಿಸುವ ಹವ್ಯಾಸದಲ್ಲಿದ್ದು, ಆಕ್ಷೇಪಕರ ಆಕ್ಷೇಪವನ್ನು ಸೌಮ್ಯತನದಿಂದ ನಿರಸನ ಮಾಡುತ್ತಿರಬೇಕು. ಬಡಬಗ್ಗರ ಮೇಲೂ, ಹಿಂದುಳಿದವರ ಮೇಲೂ ವಿಶೇಷ ಲಕ್ಷ್ಯ ಪೂರೈಸುತ್ತಿರಬೇಕು. ವಿದ್ಯೆಯ ಮಹತ್ವವನ್ನು ರೈತರೇ ಮೊದಲಾದ ಸಾಮಾನ್ಯ ಜನರಲ್ಲಿ ಬಿಂಬಿಸುವಷ್ಟು ವಾಕ್ಚತುರನಾಗಿರಬೇಕು. ಶಿಕ್ಷಕನು ಸದಾ ಓದುಗುಳಿಯಾಗಿದ್ದು ಸುತ್ತಮುತ್ತಲಿನ ಪರಿಸ್ಥಿತಿಯ ಜ್ಞಾನ ಮಾಡಿಕೊಂಡು, ತಕ್ಕ ಸುಧಾರಣೆಗಳನ್ನು ಪರಿಸ್ಥಿತಿಗನುಸರಿಸಿ ಏರ್ಪಡಿಸುತ್ತಿರಬೇಕು. ಶಿಕ್ಷಕನು ತನ್ನ ವಿದ್ಯಾರ್ಥಿಗಳೊಡನೆ ಪ್ರೇಮದಿಂದಲೂ, ಸಹಾನುಭೂತಿಯಿಂದಲೂ ವರ್ತಿಸುತ್ತಿರಬೇಕು. ಅವರೊಡನೆ ಗಾಂಭೀರ್ಯದಿಂದಿರುವದು ಒಳಿತಲ್ಲ. ತಮ್ಮ ಹೃದಯದಲ್ಲಿರುವ ಸಂಗತಿಗಳನ್ನು ಬಿಚ್ಚಿ ಹೇಳಲಿಕ್ಕೆ ವಿದ್ಯಾರ್ಥಿಗಳು ನಿರಂಕುಶರಾಗಿರತಕ್ಕದ್ದು. ಪರಸ್ಪರೇಚ್ಛೆಗಳನ್ನು ತಿಳಿಸಲಿಕ್ಕೆ ಯಾವ ಪ್ರಕಾರದ ಪ್ರತಿಬಂಧವೂ ಇರಕೂಡದು. ಅರ್ಥಾತ್ " ಶಿಕ್ಷಕರ ಉಪದೇಶವೆಂದರೆ, ಗುರುವಾಕ್ಯ-ದೇವವಾಕ್ಯ ವೆಂಬಿ ವರ್ತಿಸಿದರೆ, ನೆಟ್ಟಗಾಗದು; ಮುಂತಾದ ಭಾವನೆಗಳು ಜನರಲ್ಲಿ ನೆಲೆಗೊಳ್ಳುವಂತೆ ತನ್ನ ವರ್ತನವನ್ನಿಡಬೇಕು.

(೫) ಶಿಕ್ಷಕನೆಂದರೆ, ಎಲ್ಲ ತಿಳಿದವನೆಂಬ ಭಾವನೆಯು ಹಳ್ಳಿಯ ಜನರಲ್ಲಿ ಬೇರೂರಿರುವದರಿಂದ ತಮಗೆ ಅಗತ್ಯ ಬಿದ್ದಾಗ ಮುಹೂರ್ತ ಕೇಳಲು, ಶಿಕ್ಷಕನ

ಮನೆಗೆ ಬರುವ ಪರಿಪಾಠವದೆ. ಕಾರಣ ಶಿಕ್ಷಕನು ತುಸುಮಟ್ಟಿಗಾದರೂ ಫಲ ಜೋತಿಷ್ಯದ ಜ್ಞಾನವನ್ನು ಮಾಡಿಕೊಂಡಿರಬೇಕು. ಬಿತ್ತುವ, ಕೊಯ್ಯುವ, ರಾಶಿ ಮನೆಗೆ ತರುವ, ಲಗ್ನ ಮಾಡುವ, ಮುಂತಾದ ಸರ್ವಸಾಧಾರಣ ಮುಹೂರ್ತಗಳನ್ನು ಕೇಳಿದವರಿಗೆ ಸಮಾಧಾನಕರವಾದ ಉತ್ತರವನ್ನು ಹೇಳಲಿಕ್ಕೆ ಬರುವಷ್ಟು ಪಂಚಾಂಗ ಜ್ಞಾನವಿದ್ದರೆ ಜನಪ್ರಿಯತೆಗೆ ಸಾಧನವಾಗುವದು.

(೬) ಹಳ್ಳಿಯೂರುಗಳಲ್ಲಿ ಓದುಬರಹ ಬಲ್ಲವರೊಳಗೆ ಬಹುಶಃ ಶಿಕ್ಷಕನೇ ಹೆಚ್ಚಿನವನಿರುತ್ತಾನೆ. ಅಜ್ಞ ಜನರು ಶಿಕ್ಷಕನನ್ನು ಒಮ್ಮೆ ನಂಬಿದರೆಂದರೆ, ಅವನು ಸರ್ವಜ್ಞನೆಂದು ಭಾವಿಸಿ, ಸಣ್ಣಪುಟ್ಟ ಬೇನೆಬೇಸರಿಕೆಗಳಿಗೆ ಸಹ ಅವನನ್ನೇ ವಿಚಾರಿಸುವರು. ಆದುದರಿಂದ ಚಳಿಜ್ವರ, ಕೆಮ್ಮು, ನಾರಹುಣ್ಣು, ಹುರುಕು ಮುಂತಾದ ಸರ್ವಸಾಮಾನ್ಯ ಬೇನೆಗಳನ್ನು ಕಳೆಯುವಷ್ಟರ ಮಟ್ಟಿಗೆ ಔಷಧ ಯೋಜನೆಯನ್ನು ಬಲ್ಲವನಾಗಿರಬೇಕು. ಕ್ವಿನಾಯಿನ್, ಪರಮ್ಯಾಂಗೇನೇಟ್, ಈಶ್ವರೀ ಬೇರು, ಚಕ್ರಾಣೀ ಬೇರು ಇತ್ಯಾದಿ ಉಪಯುಕ್ತ ಔಷಧಗಳ ಸಂಗ್ರಹವುಳ್ಳವನೂ, ಪ್ರಥಮೋಪಚಾರದಲ್ಲಿ ನುರಿತವನೂ ಆಗಿರಬೇಕು. ತನ್ನ ವಿದ್ಯಾರ್ಥಿಗಳು ಬೇನೆ ಬಿದ್ದಾಗಂತೂ ತನ್ನ ಮಗನೇ ಬೇನೆ ಬಿದ್ದಿರುವನೆಂದು ತಿಳಿದು, ಔಷಧೋಪಚಾರವನ್ನು ಮಾಡಿಸಬೇಕು. ತಾನು ಪ್ರಥಮೋಪಚಾರ ಯಾದುದರಿಂದ ಕಠಿಣ ಬೇನೆಗಳಿಗೂ, ಗಾಯಗಳಿಗೂ ಡಾಕ್ಟರರನ್ನು ಕರೆಯಿಸಲು ಬೋಧ ಮಾಡಬೇಕು; ಇಲ್ಲವೆ ಡಾಕ್ಟರರಿದ್ದಲ್ಲಿ ಒಯ್ಯಹೇಳಬೇಕು. ಇಂತಹ ಕನಿಕರವುಳ್ಳ ಶಿಕ್ಷಕನ ಪ್ರಯತ್ನದಿಂದ ಹಳ್ಳಿಯೊಳಗಿನ ಒಂದು ಜೀವವು ಕುತ್ತಿನಿಂದ ಪಾರಾದರೆ ಸಾಕು. ಶಿಕ್ಷಕನ ಶ್ರಮಕ್ಕೆ ಮಿತಿಮೀರಿದ ಪ್ರತಿಫಲವಾಗುವದಲ್ಲದೆ, ಜನಸಹಾಯವುಂಟಾಗಿ, ಕೀರ್ತಿಯೂ, ಜನಪ್ರಿಯತೆಯೂ ಹೆಚ್ಚಾಗಿ ಹತ್ತುವವು.

ಸಣ್ಣ ಸಣ್ಣ ಹಳ್ಳಿಗಳಲ್ಲಿ ಸಹ, ಬಹುಶಃ ಒಂದೆರಡು ಬಣಗಳಿದ್ದು, ಒಬ್ಬಿಬ್ಬರು ನಿಷ್ಕಾರಣ ಕಾಡುವ ಸ್ವಪ್ರತಿಷ್ಠಿತ ಪುರುಷರಿರುವ ಸಂಭವವುಂಟು; ಆದರೆ ಶಿಕ್ಷಕನು ಯಾವ ಬಣದಲ್ಲಿಯೂ ಪಾಲುಗಾರನಾಗದೆ, ಮೇಲೆ ಬರೆದಂತೆ ವರ್ತಿಸಿದಲ್ಲಿಯೂ, ಸ್ವಪ್ರತಿಷ್ಠಿತರಿಗೆ ಎದೆಗುಂದದೆ, ಅಂಥವರನ್ನೇ ತನ್ನ ಕೈಯಲ್ಲಿ ತೆಗೆದುಕೊಳ್ಳುವಷ್ಟು ಚತುರನಾದಲ್ಲಿಯೂ ಜನಪ್ರಿಯನಾಗುವದರೊಳಗೆ ಯಾವ ಸಂಶಯವೂ ಇಲ್ಲ.

ಸಜ್ಜನವಿಧೇಯ,

ಕಟ್ಟೀ ಚಿನ್ನಮಲ್ಲಪ್ಪ,

ಹೆಡ್‌ಮಾಸ್ತರ, ಹಿರೇಹೊನ್ನಿ ಹಳ್ಳಿ.

ಹುಲಕೋಟಿ ಒಕ್ಕಲತನದ ಶಾಲೆಯು.

೧೯೨೭-೨೮ನೇ ವರ್ಷದ ವರದಿ

(ಲೇಖಕರು—ಕ. ಗೋ. ಗೋಲಪ್ಪನವರು, ಹುಲಕೋಟಿ).

(೧) ಉಪಕ್ರಮ

ಸದ್ಯದ ಹಳ್ಳಿಯ ಶಿಕ್ಷಣವು ಸದೋಷದ್ದಿರುವದೆಂದು ಎಲ್ಲರೂ ಒಪ್ಪುವರು. ಇದರಲ್ಲಿ ತಯಾರಾಗುವ ವಿದ್ಯಾರ್ಥಿಗಳು, ನಿರುತ್ಸಾಹಿಗಳೂ, ಕೈಲಾಗದವರೂ, ಆಗುವರು ಅವರು ಮುಂದಿನ ತಮ್ಮ ಚರಿತಾರ್ಥವನ್ನು ಸ್ವಾವಲಂಬನದಿಂದ ಸಾಗಿಸಲು ಅನರ್ಹರಾಗಿ ಇದ್ದ ಬಿದ್ದ ನೌಕರಿ ಹುಡುಕಲು ಪ್ರಾರಂಭಿಸುವರು. ನಮ್ಮ ಹಳ್ಳಿಯ ಶಾಲೆಯಲ್ಲಿ ಕಲಿಯುವ ಮಕ್ಕಳು ಒಕ್ಕಲಿಗರ ಮಕ್ಕಳು. ನೂರರಲ್ಲಿ ೯೫-೯೬ ಇವರೇ ಇರುವರು. ಇವರೆಲ್ಲ ಸಾಲೀ ಬಿಟ್ಟು ನೌಕರಿಯ ಕೈವಾರಿಗಳಾದ ಮೇಲೆ ಒಕ್ಕಲತನ ಮಾಡುವವರಾರು? ಒಬ್ಬಿಬ್ಬರು ನೌಕರಿ ಸಿಗದೆ ಒಕ್ಕಲತನ ಮಾಡಹತ್ತಿದರೆ ತೀರಿತು. ಶಾರೀರಿಕ, ಮಾನಸಿಕ, ನೈತಿಕ ಶಕ್ತಿಗಳನ್ನು ಹಿಂಡಿ ಹೀರಿ ಬಿಡುವ ಶಿಕ್ಷಣದಿಂದ ಈ ಹಾಡಾಗಿರುವದು. ಎಲ್ಲರ ಹೊಟ್ಟೆಬಟ್ಟೆ ಸಾಗಿಸುವ ಒಕ್ಕಲತನದ ಮೇಲೆ ಒಳ್ಳೇ ದುರ್ಧರ ಪ್ರಸಂಗ ಬಂದದೆ. ಹೀಗೇ ನಮ್ಮ ಮುಂದಾಳುಗಳು ಇನ್ನು ಕೆಲವು ದಿವಸ ಕೈಮುಚ್ಚಿಕೊಂಡು ಕುಳಿತರೆ ನಮ್ಮ ಬಾಳು ಹಾಳಾಗುವದು ನಿಶ್ಚಿತ! ಕಾರಣ ಸದ್ಯದ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಣ ಮೊಡನೆ ಶಾರೀರಿಕ, ಮಾನಸಿಕ ಸಾಮರ್ಥ್ಯಗಳನ್ನೊಳಕೊಂಡ ಒಕ್ಕಲತನ, ಕೈಗಾರಿಕೆಗಳ ಜ್ಞಾನ ಮಾಡಿಕೊಟ್ಟಿದ್ದಾದರೆ ಈಗಿನಂತೆ ಸಾಲೀ ಬಿಟ್ಟ ವಿದ್ಯಾರ್ಥಿಗಳು ಜೋಲುಮೋರೆಯಿಂದ ಚಾಕರಿ ದಾರಿ ಹುಡುಕದೆ, ಒಕ್ಕಲತನ ಅಥವಾ ಕೈಗಾರಿಕೆಯ ದಾರಿಯನ್ನು ಹಿಡಿಯುವರು; ಇದರಿಂದ ನಮ್ಮ ಸ್ಥಿತಿಯು ಸುಸ್ಥಿತಿಯುಳ್ಳದ್ದಾಗುವದು;

ಈ ಸಂಗತಿ ನಮ್ಮವರಿಗೆ ಅರಿಯದ್ದಲ್ಲ; ಆದರೆ, ಅವರ ತಲೆಯಲ್ಲಿ ಒಕ್ಕಲತನವೆಂಬದು ಮಡ್ಡರ ಹೋರೆಯೆಂಬದು ಶೇರಿರುವದು; ಇದು ತಪ್ಪು; ಇದನ್ನು ನಮ್ಮ ಸುತ್ತಲಿನ ಪರಿಸ್ಥಿತಿ ಅರಿತು ತಿದ್ದಿಕೊಳ್ಳಬೇಕು; ಇದೇ ಹೋದ ಮೇ ತಿಂಗಳ ಸ್ಕೂಲಬೋರ್ಡ ಪತ್ರಿಕೆಯಲ್ಲಿ ಕೊಟ್ಟ ಸ್ವಿಟ್ಸರ್ಲಂಡದ ಶಿಕ್ಷಣ ಪದ್ಧತಿಯನ್ನು ಓದಿದರೆ ನಮ್ಮ ತಪ್ಪು ಗ್ರಹಿಕೆಯು ದೂರಾಗುವದು. ಅವರು ಪ್ರತಿ

ಯೊಂದು ಪ್ರಾಥಮಿಕ ಶಾಲೆಗಳಿಗೆ ಒಂದೊಂದು ಹೊಲವನ್ನು ಒಕ್ಕಲತನ ಶಿಕ್ಷಣದ ಸಲುವಾಗಿ ಕೊಟ್ಟಿರುವದಲ್ಲದೆ ಕಮ್ಮಾರಿಕೆ, ಬಡಿಗತನ, ಬಣ್ಣ ಕೊ ವದು, ಚಿತ್ರ ತೆಗೆಯುವದು ಮುಂತಾದ ಕಲೆಗಳನ್ನು ಕಲಿಸುವರು.

ಇಂಥ ಶಿಕ್ಷಣದ ಬಗ್ಗೆ ನಾವು ಗಾಢನಿದ್ರೆಯಲ್ಲಿದ್ದಾಗಲೆ, ಸರಕಾರದವ ಈ ದೋಷವನ್ನು ತೆಗೆದು ಹಾಕಲು ೧೯೨೨-೨೩ರಿಂದ ಮೇಲಿನ ಇಯತ್ತ್ರೆಗಳು ಪ್ರಾಥಮಿಕ ಶಾಲೆಗಳಲ್ಲಿ ಕೈಗಾರಿಕೆಯಿಂದೊಡಗೂಡಿದ ಒಕ್ಕಲತನದ ವಿದ್ಯೆ ಕೊ ಲುಪಕ್ರಮಿಸಿರುವರು ಅಂಥ ಶಾಲೆಯೇ ಹುಲಕೋಟಿಯಲ್ಲಿ ಸ್ಥಾಪನವಾಗಿ ಇಂದ ನಾಲ್ಕು ವರ್ಷಗಳ ಮೇಲಾಯಿತು ಇಲ್ಲಿಯವರೆಗೆ ತನ್ನ ಕೆಲಸವನ್ನು, ಪಾ ಮೆಂಟಿನ ಮೆಂಬರರಾದ ಶ್ರೀ. ಶಕಲತವಾಲಾರವರು ಮೊದಲ್ಗೊಂಡು, ಮೆ॥ ಡಾ ರ ವ್ಯಾನ ಸಾಹೇಬ ಂಥ ಒಕ್ಕಲತನದ ಮುತ್ಸದ್ದಿಗಳ ಮನಸ್ಸು ಒಪ್ಪುವಂ ಜರಗಿಸಿರುವದು

(೨) ಕಲಿಸುವ ವಿಷಯಗಳು

ಈ ಶಾಲೆಯು ಮೇಲಿನ ೫-೬-೭ನೇ ಇಯತ್ತ್ರೆಗಳಿಗೆ ಜೋಡಿಸಲ್ಪಡುವದ ಇದರಲ್ಲಿ ವಿಷಯಗಳು ಸಾಮಾನ್ಯ ಹಾಗು ಒಕ್ಕಲತನಕ್ಕೆ ಸಂಬಂಧಿಸಿವೆಂ ಎರಡು ಭಾಗ ಮಾಡಬಹುದು ಸಾಮಾನ್ಯ ವಿಷಯಗಳೆಂದರೆ:--ವಾಚನ, ವ್ಯಾ ರಣ, ಆರೋಗ್ಯಶಾಸ್ತ್ರ, ಬ್ರಿಟಿಶ ರಾಜಶಾಸನ ಪದ್ಧತಿ, ಭೂಗೋಲ, ನಿಬಂ ಗಣಿತ, ಜಮಾಖರ್ಚು ಇತ್ಯಾದಿ. ಒಕ್ಕಲತನಕ್ಕೆ ಸಂಬಂಧಿಸಿದವೆಂದರೆ:—ಭೂ ಗಳು, ಅವುಗಳ ಘಟಕಗಳು, ಭೂಮಿ ಸುಧಾರಿಸುವದು, ಹದಗೊಳಿಸುವದು, ಹ ಗೊಳಿಸುವ ಸಾಧನಗಳು, ಗೊಬ್ಬರ, ಬೀಜ, ಬೀಜದ ಆರೈಕೆ, ಬೆಳೆಗಳು, ಬೆಳೆ ಆರೈಕೆ, ಬೆಳೆಯ ಖರ್ಚು, ಉತ್ಪನ್ನ, ದನಗಳ ಸಂಗೋಪನ, ದನಗಳ ರೋ ಗಳು, ರೋಗನಿವಾರಣೋಪಾಯಗಳು, ವನಸ್ಪತಿಗಳು, ಅವುಗಳ ನಿವಾರಣೋಪ ಯಗಳು, ಸಹಕಾರ ಸಂಘಗಳು, ಅವುಗಳ ಪ್ರಕಾರಗಳು ಹಾಗು ರಚನೆಯ ಭೂಮಿ ಅಳತೆ ಮಾಡುವದು (ಮೋಜಣಿ), ಬಡಿಗತನ, ಕಮ್ಮಾರಿಕೆ, ನೇಕಾರ ಇವೇ ಮೊದಲಾದ ವಿಷಯಗಳಿರುವವು. ಸಾಮಾನ್ಯ ವಿಷಯಗಳಲ್ಲಿಯೂ ಭಾಷ ರಾಜಶಾಸನ ಬಿಟ್ಟು ಉಳಿದವೆಲ್ಲವನ್ನು ಒಕ್ಕಲತನಕ್ಕೆ ಸಂಬಂಧಿಸಿ ಕಲಿಸಬೇಕಾ ಗುವದು.

(೩) ಶಿಕ್ಷಣದ ವ್ಯವಸ್ಥೆ.

ಮೇಲಿನ ೫-೬-೭ ಮೂರು ಇಯತ್ತ್ರೆಗಳನ್ನು ಪ್ರತ್ಯೇಕಿಸಿ ಒಕ್ಕಲತನ ಟ್ರೇಂಡ ಶಿಕ್ಷಕರ ಕಡಿಗೆ ಕೊಟ್ಟಿರುವದು ಅವರ ಸಹಾಯಕ್ಕೆ ಒಬ್ಬ ೫ನೆ ವರ್ಷದ ಟ್ರೇಂಡ ಶಿಕ್ಷಕನನ್ನೂ, ಇನ್ನೊಬ್ಬ ಕನ್ನಡ ಹಾಗು ಒಕ್ಕಲತನ ಹೀ

ಎರಡು ಮುಲ್ಕಿ ಪರೀಕ್ಷೆಗಳನ್ನು ಪಾಸಾದ ಶಿಕ್ಷಕರನ್ನೂ ಕೊಟ್ಟಿರುವದು ಸಹಾಯಕ ಟ್ರೇಂಡ ಶಿಕ್ಷಕರು ೬-೭ನೇ ಇಯತ್ತೆಗಳ ಭಾಷಾ, ರಾಜಶಾಸನ ವವ್ಹತಿ ೬ನೇ ಇಯತ್ತೆಯ ಜಮಾಖರ್ಚು, ೫ನೇ ಇಯತ್ತೆಯ ಒಕ್ಕಲತನದ ವಿಷಯಗಳನ್ನು ಕಲಿಸುವರು ಇನ್ನೊಬ್ಬ ಶಿಕ್ಷಕರು ೬-೭ನೇ ಇಯತ್ತೆಯವರಿಗೆ ಬಡಿಗತನ, ಕಮ್ಮಾರಿಕೆ, ನೇಕಾರಿಕೆ ಕಲಿಸುವವಲ್ಲದೆ, ತೋಟದ ಕೆಲಸಕ್ಕೆ ಸಹಾಯ ಮಾಡುವರು ಇವರೀರ್ವರ ಹೊರ್ತು ಉಳಿದ ಎಲ್ಲ ವಿಷಯಗಳನ್ನು ಒಕ್ಕಲತನದ ಟ್ರೇಂಡ ಶಿಕ್ಷಕರು ಕಲಿಸುವರು ಸಹಾಯಕ ಶಿಕ್ಷಕರು, ಸಾಮಾನ್ಯ ಕನ್ನಡ ಶಾಲೆಯಿಂದ ಒಬ್ಬರಿಂದೊಬ್ಬರು ಸಹಾಯಕ್ಕೆ ಬಂದು ಇಬ್ಬರೂ ಕೂಡಿ ಒಟ್ಟು ಒಕ್ಕಲತನದ ಶಾಲೆಯಲ್ಲಿ ೬ ತಾಸು ಕೆಲಸ ಮಾಡುವರು ಉಳಿದ ೬ ತಾಸು ಸಾಮಾನ್ಯ ಕನ್ನಡ ಶಾಲೆಯಲ್ಲಿ ಕೆಲಸ ಮಾಡುವರು

(೪) ಶಾಲೆಯ ತೋಟ

ಈ ವರ್ಷವಾವರೂ ತೋಟದ ಕ್ಷೇತ್ರವು ಹೋದ ವರ್ಷದಂತೆ ೨-೩೫-೧೨ ಎಕರೆ ಇತ್ತು ಇದರಲ್ಲಿ ೨-೩೭-೦ ಎಕರೆ ಭೂಮಿಯನ್ನು ಇಲ್ಲಿಯ ನಾಗರೀಕರೂ, ಪ್ರಮುಖ ಮುಂದಾಳುಗಳೂ ಆದ ಮಾ॥ ರಾ॥ ರಾ॥ ರಂಗನಗೌಡ ಕೃ ಪಾಟೀಲ ಇವರು ಮೂರು ವರ್ಷ ಬಿನ್ ಭಾಡಗಿಯಿಂದ ಕೊಟ್ಟಿರುವರು ಉಳಿದ ೦-೮-೧೨ ಗುಂಟೆ ಭೂಮಿಯನ್ನು ಪ್ರತಿ ತಿಂಗಳ ೧೪ ಆಣೆ ಭಾಡೆ ಕೊಡುವ ಕರಾರಿನಿಂದ ಹಿಡಿದಿರುತ್ತದೆ.

(೫ ತೋಟದಲ್ಲಿ ನಡೆದ ಕೆಲಸಗಳು

ತೋಟದ ಕ್ಷೇತ್ರವಲ್ಲಿ ವಿದ್ಯಾರ್ಥಿಗಳ ಬೇರೆ ಬೇರೆ ನಿರೀಕ್ಷಣೆಯ ತುಂಡು, ಸಾಮೂಹಿಕ ನಿರೀಕ್ಷಣೆಯ ತುಂಡು ಹಾಗೂ ಸಾಮಾನ್ಯ ತುಂಡು ಹೀಗೆ ಮೂರು ಭಾಗಗಳಾಗಿದ್ದವು. ವಿದ್ಯಾರ್ಥಿಗಳ ಪ್ರತ್ಯೇಕ ನಿರೀಕ್ಷಣೆಯ ತುಂಡಿನಲ್ಲಿ ೭ನೇ ಇಯತ್ತೆಯವರಿಗೆ ಒಂದೊಂದು ಗುಂಟೆ, ೬ನೇ ಇಯತ್ತೆಯವರಿಗೆ ೧೫×೯, ೫ನೇ ಇಯತ್ತೆಯವರಿಗೆ ೧೦×೯ ಹೀಗೆ ಭೂಮಿಗಳನ್ನು ಹಂಚಿ ಕೊಟ್ಟಿತ್ತು ೭ನೇ ಇಯತ್ತೆಯವರಿಗೆ ಬೆಳೆಯ ಜ್ಞಾನವಾಗಬೇಕಾದ್ದರಿಂದ ತಮ್ಮ ಒಂದು ಗುಂಟೆ ಭೂಮಿಯಲ್ಲಿ ಹತ್ತಿ, ಜೋಳ, ನವಣೆ ಹೀಗೆ ಮೂರು ಬೆಳೆಗಳನ್ನು ಸರಿಯಾಗಿ ಬೆಳೆದಿರುವರು. ೬ನೇ ಇಯತ್ತೆಯವರಿಗೆ ವನಸ್ಪತಿ ಕುಟುಂಬದ ಕಲ್ಪನೆಯಾಗಬೇಕಾದ್ದರಿಂದ ಹತ್ತಿ, ಪುಂಡಿ, ಬೆಂಡಿ, ಅವರಿ, ಮೆಣಸಿನ ಗಿಡ ಬೆಳಸಿದ್ದರು ೫ನೇ ಇಯತ್ತೆಯವರಿಗೆ ವನಸ್ಪತಿಗಳ ಸಾಧಾರಣ ಜೀವನಕ್ರಮ ಗೊತ್ತಾಗಬೇಕಾದ್ದರಿಂದ ತಮ್ಮ ತುಂಡಿನಲ್ಲಿ ಜೋಳ, ಹುಳಶಿಕ್ಕ, ಚವಳಿ ಹಾಕಿದ್ದರು. ಸಾಮೂಹಿಕ ನಿರೀಕ್ಷಣೆಯ ತುಂಡಿನಲ್ಲಿ ಕಣವಿ, ನಂದ್ಯಾಳ, ಮುದ್ದಿನಂದ್ಯಾಳ, ಮಹಿಸಾಳ,

ಹಳದಿ ಪುಲ್ಲಾರ, ಬಿಳೀ ಪುಲ್ಲಾರ, ಬಿಳಜಿಗನ ಜೋಳ ಹೀಗೆ ಬೇರೆ ಬೇರೆ ಜೋಳ ಗಳನ್ನು ೫ ಗುಂಠೆ ಭೂಮಿಯಲ್ಲಿ ಮೆಣಸಿನ ಗಿಡಗಳನ್ನು ಹಚ್ಚಿ ಬೆಳಸಿದ್ದರು. ಉಳಿ ದ ಸಾಮಾನ್ಯ ೧-೩೨-೦ ಎಕರೆ ಭೂಮಿಯಲ್ಲಿ ಹತ್ತಿಯ ಬೆಳೆಯನ್ನು ಬೆಳಿಸುವ ದಾಗಿತ್ತು

(೬) ಉತ್ಪನ್ನ ಹಾಗೂ ಖರ್ಚು

ವಿದ್ಯಾರ್ಥಿಗಳಿಗೆ ಭೂಮಿಯ ಗುಣ, ಸಸ್ಯಗಳ ಜೀವನಕ್ರಮ ಹಾಗೂ ಅವು ಗಳ ರಚನೆ ಇವೆಲ್ಲವುಗಳ ಜ್ಞಾನವು ಪ್ರತ್ಯಕ್ಷವಾಗಬೇಕೆಂದು ಅವರಿಗೆ ಬೇರೆ ಬೇರೆ ತುಣಕುಗಳನ್ನು ಕೊಡುವ ಯೋಜನೆಯಾಗಿದೆ ಅವರು ತಮ್ಮ ತಮ್ಮ ಭೂಮಿ ಗಳಲ್ಲಿ ಅಗಿಯುವದು, ವನಸ್ಪತಿ ಬೆಳಿಸುವದು, ಕೀಳುವದು, ಹಚ್ಚುವದು ಇತ್ಯಾದಿ ಕಾರ್ಯ ಮಾಡಬೇಕಾಗುತ್ತದೆ ಹೀಗಾಗಿ ವಿದ್ಯಾರ್ಥಿಗಳ ತುಂಡಿನ ಉತ್ಪನ್ನವು ನಿಯಮಿತವಾಗುವದಿಲ್ಲ ಹಾಗೂ ಅವರು ಕಷ್ಟಬಟ್ಟು ಬೆಳೆದ ಫಲದಲ್ಲಿ ಕೆಲ ವಂಶವಾವರೂ ನೀತಿಶಾಸ್ತ್ರದ ದೃಷ್ಟಿಯಿಂದ ಕೊಡಲೇಬೇಕಾಗುತ್ತದೆ ಇದರಿಂದ ವಿದ್ಯಾರ್ಥಿಗಳು ತಮ್ಮ ತಮ್ಮ ತುಂಡಿನ ಕೆಲಸವನ್ನು ಒಳ್ಳೆ ಆಸ್ಥೆಯಿಂದ ಮಾಡು ವರು ಹೀಗಾಗಿ ಹುಡುಗರ ಪ್ಲಾಟಿನ ಉತ್ಪನ್ನ ತೀರ ಕಡಿಮೆ ಒಂದು ವೇಳೆ ಇಲ್ಲವೆಂದರೂ ಸಲ್ಲುವದು ಇನ್ನು ಸಾಮಾನ್ಯ ನಿರೀಕ್ಷಣೆಯ ತುಂಡಿನಲ್ಲಿ ಎಲ್ಲರೂ ಕೂಡಿ ಕೆಲಸ ಮಾಡುವರು ಇದರಿಂದ ಕೆಲವು ಉತ್ಪನ್ನ ಬರುವದು ಸಾಮಾನ್ಯ ತುಂಡಿನಲ್ಲಿ ಹತ್ತಿಯ ಬೆಳೆಯಿಂದ ೩೩-೧೫-೯ ಬಂದದೆ ಉಳಿದ ಪ್ಲಾಟುಗಳಿಂದ ೫-೦-೦ ಬಂದದೆ. ಅಂತು ೩೮-೧೫-೯ ಉತ್ಪನ್ನವಾಗಿರುವದು ಇದರ ಖರ್ಚು ೩೨-೧೧-೬ ಆಗಿದೆ ಇದರಿಂದ ೬-೪-೩ ಲಾಭದೋರಿತು ಈ ಭಾಗದಲ್ಲಿ ಮಳೆ ತೀರ ಕಡಿಮೆಯಾಗಿ ಬೆಳೆಗಳು, ಕೆಲವರಿಗೆ ನಾಲ್ಕು ಆಣೆ ಬಂದಿಲ್ಲ ಲಾವಣಿದಾರರಿಗೆ ಹಾನಿಯೇ ಹೊರತು ಲಾಭವಾಗಿಲ್ಲ ನಮ್ಮ ತುಂಡಿಗೆ ಭಾಡಿ ಇಲ್ಲ ನಮ್ಮ ಜಮೀನ ಸಣ್ಣ ತುಂಡಾದ್ದರಿಂದ ಸಾಗುವಳಿಯ ಖರ್ಚು ಹೆಚ್ಚು ಬರುತ್ತದೆ ಈ ದೃಷ್ಟಿಯಿಂದಲೂ, ವಿದ್ಯಾರ್ಥಿಗಳ ಕಲಿಯುವ ದೃಷ್ಟಿಯಿಂದಲೂ ನೋಡಿದರೆ ನಮಗೆ ೬-೪-೩ ಸೈ ಲಾಭದೋರಿದ್ದೇ ಸುದ್ದಿವವು.

(೭) ಶಾಲೆಯ ವಾರ್ಷಿಕ ಪರೀಕ್ಷೆಯು.

ಒಕ್ಕಲತನದ ಶಾಲೆಯಲ್ಲಿ ಸಾಮಾನ್ಯ ಹಾಗೂ ಒಕ್ಕಲತನಕ್ಕೆ ಸಂಬಂಧಿ ಸಿದ ವಿಷಯಗಳೆಂಬ ಎರಡು ವರ್ಗಗಳು ಸಾಮಾನ್ಯ ವಿಷಯಗಳನ್ನು ಸ್ಕೂಲ್ ಬೋರ್ಡಿನವರು, ಒಕ್ಕಲತನದ ವಿಷಯಗಳನ್ನು ಒಕ್ಕಲತನದ ಖಾತೆಯವರು ತೆಗೆದುಕೊಳ್ಳುವ ಪದ್ಧತಿಯುಂಟು ಆದರಂತೆ ಸ್ಕೂಲಬೋರ್ಡಿನ ಸುಪರವಾಯ್ಜರ ಮೆ॥ ಮುದಕವಿ ಸಾಹೇಬರೂ, ಒಕ್ಕಲತನದ ಖಾತೆಯ ಮೆ॥ ಕುಲಕರ್ಣಿ

ಅಗ್ರಿಕಲ್ಚರ ಓವ್ಹರಶೀಯರ ಗದಗ ಇವರೂ ತಮ್ಮ ತಮ್ಮ ವಿಷಯಗಳನ್ನು ಜೂನ ೩ನೇ ವಾರ ತೆಗೆದುಕೊಂಡರು. ಪರೀಕ್ಷೆಯ ಪರಿಣಾಮ ಕೆಳಗಿನಂತೆ ಇರುತ್ತದೆ.

ಇಯತ್ತೆ.	ಸಂಖ್ಯೆ.	ಹಾಜರ	ಪಾಸ.
೭ನೇ	೧೫	ಮುಲ್ಕಿ ಪರೀಕ್ಷೆಗೆ ಕೂತದ್ದರಿಂದ	ಪರೀಕ್ಷಿಸಲಿಲ್ಲ
೬ನೇ	೯	೭	೬
೫ನೇ	೧೧	೧೧	೮

(ಟೀಪು :—೧೦ ಹುಡುಗರು ಹೊಸದಾಗಿ ಬಂದದ್ದರಿಂದ ಪರೀಕ್ಷಿಸಲಿಲ್ಲ).

ಒಟ್ಟಿನ ಮೇಲೆ ಪರೀಕ್ಷೆಯ ಪರಿಣಾಮ ಒಳ್ಳೆ ಸಮಾಧಾನಕರವಿದೆ.

ಹುಡುಗರ ಒಟ್ಟು ಸಂಖ್ಯೆ ೪೫.

(೮) ಒಕ್ಕಲತನದ ವ್ಹ. ಫಾ. ಪರೀಕ್ಷೆ

ಹೋದ ವರ್ಷದಂತೆ ಈ ವರ್ಷವೂ ಒಕ್ಕಲತನದ ವ್ಹ. ಫಾ. ಪರೀಕ್ಷೆಗೆ ೧೩ ಹುಡುಗರು ಕೂತಿದ್ದರು. ಇವರಲ್ಲಿ ೯ ವಿದ್ಯಾರ್ಥಿಗಳು ಪಾಸಾಗಿರುವರು. ಇಷ್ಟು ಪರೀಕ್ಷೆಗೆ ಕುಳಿತ ಮತ್ತು ಪಾಸಾದ ದೊಡ್ಡ ಸಂಖ್ಯೆಯು ಕರ್ನಾಟಕದಲ್ಲಿ ಇದೊಂದೇ ಶಾಲೆಯು.

(೯) ಶಾಲೆಯ ಸಂದರ್ಶಿಸಿದವರು.

ಈ ಒಕ್ಕಲತನದ ಶಾಲೆಯನ್ನು ಈ ವರ್ಷದಲ್ಲಿ ಶಾಲಾಖಾತೆಯವರು, ಸ್ಕೂಲ ಸೋರ್ಡಿನವರು, ಒಕ್ಕಲತನದ ಖಾತೆಯವರು ಮುಲಕಿ ಖಾತೆಯವರು, ಸೆಟಲ್ ಮೆಂಟ ಖಾತೆಯವರು ಸಂದರ್ಶಿಸಿ ಕೆಲಸ ನೋಡಿ ಆನಂದಪಟ್ಟು ಈ ಶಾಲೆಯು ಮಾದರಿ ಶಾಲೆಯೆಂದು (ಮಾಡೆಲ್‌ಸ್ಕೂಲ) ಅಭಿಪ್ರಾಯ ಪಟ್ಟಿರುವರು. ಶಾಲೆಯ ಸಂದರ್ಶಿಸಿದ ಮಹಾಶಯರ ಹೆಸರುಗಳು.

೧	ಮೆಹರ್ಬಾನ ೨ನೇ ಅ. ಡಿ. ಎ. ಇನಸ್ಪೆಕ್ಟರರು.		೧ ಸಾರಿ.
೨	,,	ಹೆಡ್‌ಮಾಸ್ತರ ಒ. ಶಾ. ದೇವೀಹೊಸೂರ	೨ ,,
೩	,,	ಡಿ. ಎಲ್. ಬಿ. ವ್ಹಾಯಿಸ ಪ್ರೆಸಿಡೆಂಟ ಹಾಗು ಎಸ್. ಬಿ. ಮೆಂಬರ	೧ ,,
೪	,,	ಸುಪರವಾಯಝುರರು ಎಸ್. ಬಿ.	೨ ,,

೫	ಮೆಹರ್ಬಾನ ಡಾಕ್ಟರ ಹೆರಾಲ್ಡ ಮ್ಯಾನ ಡಾಯರೆಕ್ಟರ ಒಕ್ಕಲತನದ ಖಾತೆ	೧	ಸಾರಿ
೬	,, ಡೆ. ಡಾಯರೆಕ್ಟರು ಒಕ್ಕಲತನದ ಖಾತೆ	೧	,,
೭	,, ಸ್ಟಾರ್ಟ ಸಾಹೇಬರು ಸೆಟಲ್‌ಮೆಂಟ	೧	,,
೮	,, ಕಲೆಕ್ಟರ ಸಾಹೇಬ ಧಾರವಾಡ	೧	,,
೯	ಶ್ರೀಮತಿ ಕುಂಭಕೋಣಂ ಎಸ್. ಬಿ. ಮೆಂಬರ	೧	,,
೧೦	ಮೆಹರ್ಬಾನ ಇನಸ್ಪೇಕ್ಟರ ಒ. ಶಾಲೆ ಪುಣೆ	೨	,,
೧೧	,, ಅಜಮಿರದ ರಜಿಸ್ತರರು, (ಸಹಕಾರಿ)	೧	,,
೧೪	,, ಓವ್ಹರ್‌ಶಿಯರ ಒಕ್ಕಲತನದ ಖಾತೆ ಗದಗ	೨	,,
೧೩	,, ಡಿ. ಲೋಕಲ್‌ಬೋರ್ಡ ಪ್ರೆಸಿಡೆಂಟ	೧	,,

(೧೦) ಹಣದ ವ್ಯವಸ್ಥೆ

ಒಕ್ಕಲತನದ ಶಾಲೆಯ ತೋಟದ ಸಾಗುವಳಿಯ ಬಗ್ಗೆಯೂ, ಕ್ಲಾಸಿನ ಸಾದಿಲವಾರದ ನಲುವಾಗಿಯೂ, ನಾರು, ನೂಲು, ಕಟಿಗಿ ಕಬ್ಬಿಣ ಕೊಳ್ಳುವದರ ದೆಶೆಯಿಂದಲೂ, ಹೊಲದ ಭಾಡಿ, ಮನಿ ಭಾಡಿ ಮುಟ್ಟಿಸುವದಕ್ಕೂ ಪ್ರತಿ ತಿಂಗಳ ಹಣವು ಬೇಕಾಗುತ್ತದೆ. ಇದರಂತೆ ಖರ್ಚಾದ ಒಂದು ವರ್ಷದ ಹಣವು ೧೪೦—೧೨—೩ ಆಗಿರುತ್ತದೆ. ಇದರಿಂದ ಪ್ರತಿ ತಿಂಗಳ ಸರಾಸರಿ ಖರ್ಚು ೧೦—೧೨ ರೂಪಾಯಿ ಸಹಜ ಬರುತ್ತದೆ ಇದನ್ನು ನಮ್ಮ ಸ್ಕೂಲಬೋರ್ಡಿನವರು ಲಕ್ಷಿಸಿ ಮುಂಗಡ ಹಣ ಕೊಟ್ಟು ಕೆಲಸ ಸುರಳೀತ ಸಾಗಿಸಿಕೊಳ್ಳಬೇಕಾಗಿ ಸವಿನಯ ವಿನಂತಿಯು.

(೧೧) ಉಪಸಂಹಾರ.

ಈ ಶಾಲೆಗಳ ಉಪಯುಕ್ತತೆಯು ಎಷ್ಟಿರುವದೆಂಬದನ್ನು ಪುನಃ ಪ್ರತ್ಯೇಕ ಹೇಳುವ ಕಾರಣವಿಲ್ಲ ಇದರ ಮಹತ್ವವನ್ನರಿತ ಎಲ್ಲ ಜಿಲ್ಲೆಗಳಲ್ಲೆಯೂ ಒಳ್ಳೆ ಚಟವಟಿಕೆಗಳು ನಡೆದಿರುತ್ತದೆ. ಇಂಥ ಶಾಲೆಗಳು ಬೆಳಗಾಂವ ಜಿಲ್ಲೆಯಲ್ಲಿ ೧೭ ವಿಜಾಪೂರ ಜಿಲ್ಲೆಯಲ್ಲಿ ೮, ಕಾರವಾರ ೨, ಧಾರವಾಡ ೪. ಬೆಳಗಾಂವ ವಿಜಾಪೂರ ಜಿಲ್ಲೆಯವರು ಇಂಥ ಶಾಲೆಗಳ ಬಗ್ಗೆ ಒಳ್ಳೇ ಉತ್ಸುಕತೆಯುಳ್ಳವರಾಗಿ ಪ್ರಾಥಮಿಕ ದೊಡ್ಡ ಶಾಲೆಗಳಿಗೆ ಜೋಡಿಸುವ ವಿಚಾರದಲ್ಲಿದ್ದಾರೆ ಬೆಳಗಾಂಯವರು ಮುಂದಿನ ಶಾಲೆಗಳ ತಯಾರಿಗಾಗಿ ೫ ಜನರನ್ನು, ವಿಜಾಪೂರದವರು ಜನರನ್ನು ಒಕ್ಕಲತನದ ಟ್ರೇನಿಂಗಿಗೆ ಕಳಿಸಿರುವರೆಂದು ಕೇಳುತ್ತೇವೆ ಆದ ಕರ್ನಾಟಕದ (ಮುಂಬೈ) ನಾಲ್ಕು ಜಿಲ್ಲೆಗಳಲ್ಲಿ ಕ್ಷೇತ್ರ, ಉತ್ಪನ್ನ, ಜನಸಂಖ್ಯೆಯ ಮಾನದಿಂದ ದೊಡ್ಡದಾದ ಧಾರವಾಡ ಜಿಲ್ಲೆಯಲ್ಲಿ ನಾಲ್ಕೇ ನಾಲ್ಕು ಶಾಲೆಗಳು

ವವು ಮುಂದೆ ಹೆಚ್ಚಿಸುವದರ ಸಲುವಾಗಿ ಸರಕಾರದವರು ಇಂಥ ಶಾಲೆಗಳ ಬಗ್ಗೆ ಹೆಚ್ಚು ಲಕ್ಷ ಕೊಟ್ಟು, ಉತ್ಪನ್ನದ ಬಾಬಿನಿಂದ ಕೊರಗಿರುವ ಸ್ಕೂಲ ಬೋರ್ಡುಗಳಿಗೆ ಪೂರ್ಣ ಗ್ರ್ಯಾಂಟು ಕೊಟ್ಟು, ಪ್ರೋತ್ಸಾಹಿಸಬೇಕಾಗಿ ವಿನಂತಿಯು ಹೀಗಾದಲ್ಲಿ ಒಕ್ಕಲತನದ ರಾಯಲ್ ಕಮಿಶನ್‌ದವರ ಹೇಳಿಕೆಯಂತೆ ಎಲ್ಲ ಶಾಲೆಗಳಲ್ಲಿ ಈ ತರದ ಯೋಜನೆ ಮಾಡುವದಕ್ಕೆ ಅನುಕೂಲವಾಗುವದು.

ನಾಥ ಹೂಲಿ, ಮೊರಬ

೧೨ ಪರಿಶಿಷ್ಟ.

ಖರ್ಚಿನ ವಿವರ.

೧೯೨೭ನೆಯ ಮಾರ್ಚಿಯಿಂದ ೧೯೨೮ನೆಯ ಫೆಬ್ರುವರಿ ಪೂರ್ಣ.

ಜಮಾ		ಖರ್ಚು	
೧೪೦—೧೨—೩		೨೨—೧೧—೩	ತೋಟದ ಖರ್ಚು
		೫೮— ೧—೦	ಸಾದಿಲವಾರ
		೬೦— ೦—೦	ಮನಿ ಭಾಡೆ
೧೪೦—೧೨—೩	ಅಂತೂ ಜಮಾ	೧೪೦—೧೨—೦	ಅಂತೂ ಖರ್ಚು

ಟೀಪು:—ಸಾದಿಲವಾರದಲ್ಲಿಯೇ ಕಟ್ಟಿಗಿ, ಕಬ್ಬಿಣ, ನಾರು, ಇದ್ದಲಿ ಕೊಂಡದೆ ಈ ೧೪೦—೧೨—೩ ತೋಟದ ಉತ್ಪನ್ನ, ವಿದ್ಯಾರ್ಥಿಗಳ ಫೀ ಕಳಿಯಲು ಬೋರ್ಡಿಗೇನೂ ಹೆಚ್ಚಿನ ಖರ್ಚು ಬರಲಿಕ್ಕಿಲ್ಲ.

ಒಡಪುಗಳು.

ಕಳಿದ ಸಂಚಿಕೆಯ ಒಡಪುಗಳಿಗೆ ಉತ್ತರಗಳುಃ—

(೧) ಪ್ರಥಮಾಕ್ಷರ ತೊಡೆನೇಸರ್.....

ಇದಕ್ಕೆ ಕೆಲವರಿಂದ ಸರಿಯಾದ ಉತ್ತರವು ಬಂದಿದ್ದು ಶ್ಲೋಕರೂಪದ ಲ್ಲಿಯೇ ಉತ್ತರವನ್ನು ಕೊಟ್ಟವ್ವನ್ನು ಇಲ್ಲಿ ಕೊಟ್ಟಿರುವದುಃ—

ವಿರಹವ ತಿರುಗಿಸಿಯೋದಲ್
ಜರಗುವ ಜಲಭಾಂಡತಾನು ಮೊದಲೊಡಪಿಂಗು।
ತ್ವರಮಾಗಿ ನಿರುತ ಮನೆಯೋಳ್ ।
ಹರವಿ ಯ ಪೆಸರನ್ನು ತಾಳ್ದು ರಂಜಿಪುದ್ಯೆ **ಕೇಳ್** ॥

ಚನ್ನಮಲ್ಲಪ್ಪ ಕಟ್ಟಿ.
ಹೆ.। ಮಾ.। ಹಿರೇಹೊನ್ನಿಹಳಿ.

೨ ಇಂದ್ರನಂತೆ.... ಇದಕ್ಕೆ ಸಮರ್ಪಕ ಉತ್ತರವು ದೊರೆಯಿವದು ಬಿಗಿಯಾಗಿದ್ದು, ನವಿಲು, ಸೂರ್ಯ, ಎಂದು ಉತ್ತರ ಬಂಪದೆ, ಆದರೆ **ಗೇಂದುಕ**= ಚಂಡು, **ಈ** ಅರ್ಥವಿದ್ದು ಟೇನಿಸ್ ಬ್ಯಾಟ ಎಂದು ಒಡೆದು ಕಾಣಿಸುವದು.

೩ ಸಮಸ್ಯೆಯನ್ನು ಪೂರ್ಣಮಾಡಿಬಂದ ಶ್ಲೋಕಗಳುಃ—
ಕಂ॥ ಒಲವಿಂ ನುತಿ ಎತೆ ಗಂಗಾ ।
ಜಲದಿಂ ಮೈದೊಳೆದು ಪುಷ್ಪಗಂಧಾಕ್ಷತೆಯಿಂ।
ಚಲುವಾಭರಣ ದೊಳಖಿಲಕ ।
ಮಲದಿಂ ಶಂಕರ ನಲಂಕರಿಸಿದರಾಗಳ್

ರಾ. ಕೃ. ತಿಮ್ಮನಗೌಡರ

ಸಲಹುವ ಹರಿಯಕ್ಷಂ ಚಂ।
ಚಲೆಯೆಂಬಾ ಸಿರಿಯ ವಿಮಲ ಸೊಬಗಿನ ಸದ್ಮಂ ॥
ಬೆಳಗುವ ರವಿಯ ಸತಿಯೆನಿಸೆ ಕ।
ಮಲದಿಂ ಶಂಕರ ನಲಂಕರಿಸಿದರಾಗಳ್ ॥

ಸಂಪಾದಕ

ಬಿಡಿಸಬೇಕಾದದ್ದು.

೧ ಭಾ.॥ ಮೊಟ್ಟೆಯೊಜ್ಜೆಯ ನೆಟ್ಟನೇ ತಾಂ।
ಹೊಟ್ಟೆಯೊಳ್ ಧರಿಸಿರುತೆ ಭರದಿಂ ॥
ತಟ್ಟನೇ ಸಾರುವದು ಕೈಗಳ ಬೀಸುತೇ ಜಲದ ॥
ಬಟ್ಟೆಯೊಳಾಯಾಸ ವಿಲ್ಲದೆ। ಸುಟ್ಟುರಕ್ಕುರೆ ಬಿಪರುತ ನಿಬರ।
ರಟ್ಟೆಗಳ ಸೋಲಿಸು ತಲನಿಮಿಷವ್ಯಂಮಧ್ಯದಲೀ ॥

೨ ಕಂ.॥ ಮೂರಕ್ಕ್ಷರದಾ ಶಬ್ದಂ।
ತೋರುವದದು ಸಕಲ ಜೀವಿಯವಸಾನದೊಳು ॥
ಹಾರಿಸ ಲೊಂದೊಂದಕ್ಷರ।
ವೀರರಕಲೆ, ಯೊಡವೆಭಾರ, ಭೂರುಹ ಮಕ್ಕುಂ ॥

ಸಂಪಾದಕ.

ಹಿಂದುಸ್ಥಾನವು ಹೇಗೆ ಕಾಣುವದು

ನಮ್ಮ ಮಾತೃ ಭೂಮಿಯಾದ ಹಿಂದುಸ್ಥಾನವು ಸುರೂಪಿಯಾದ ಸ್ತ್ರೀಯಂತೆಯೂ, ತಾಯಿಯೆಂತೆಯೂ ಶೋಭಿಸುವದು.

ರಮಣೀಯವಾದ ಸರೋವರಗಳಿಂದ ಒಪ್ಪುವ ಕಾಶ್ಮೀರವೇ ಮುಖ.

ವಿಶಾಲವಾದ ಮತ್ತು ಉನ್ನತವಾದ ಹಿಮಾಚಲವೇ ಚಾಚಿದ ಎಡಗೈ. ಕಾಲಾ ಸುಲೈಮಾನ ಪರ್ವತಗಳೇ ಇಳಿಬಿಟ್ಟ ಬಲಗೈ.

ವಿಂಧ್ಯಾದ್ರಿಯೇ ನಡಪಟ್ಟಿ. ಪೂರ್ವ ಪಶ್ಚಿಮ ಬೆಟ್ಟಗಳ ಸಾಲುಗಳೇ ಬಿಡಿದಾದ ಕಾಲುಗಳು. ಈ ಎಲ್ಲ ಪರ್ವತಗಳೇ ಅಸ್ತಿಪಂಜರ.

ಗಂಗಾ ಸಿಂಧು ಬ್ರಹ್ಮಪುತ್ರಾದಿ ನದಿನದಗಳೇ ಶುದ್ಧರಕ್ತವಾಹಿನಿಗಳು. ಯಮುನೆಯೇ ಅಶುದ್ಧ ರಕ್ತವಾಹಿನಿಯು

ಪ್ರಾಚೀನ ಆರ್ಯಪುರ್ತರ ಮತ್ತು ರಾಜಪುತ್ರರ ನಿವಾಸವಾಗಿದ್ದ ಆರ್ಯಾವರ್ತವೇ ಹರವಾದ ಹೃದಯ. ಈ ಮಾತೆಯು ಬಲಗೈಯನ್ನು ಸಿಂಹದ ಮುಖದಂತಿರುವ ಮತ್ತು ಸಿಂಹಗಳ ನೆಲೆಯಾದ ಕಾಶಿವಾಡದ ಮೇಲಿಟ್ಟಿರುವಳು. ಎಡಗೈಯನ್ನು ಆನೆಯ ಮುಖದಂತಿರುವ ಮತ್ತು ಆನೆಗಳಿಗೆ ನೆಲೆಯಾದ ಇರಾವತಿ ಬೆಟ್ಟದ ಮೇಲೆ ಇಟ್ಟಿರುವಳು. ಸಾಗರವೆಂಬ ಕಾಸಾರದಲ್ಲಿ ಸಿಂಳದ್ವೀಪವೆಂಬ ಅರಳಿದ ಕಮಲದಿಂದ ಎದ್ದು ಆಕಾಶದೆಡೆಗೆ ಏರುವಂತೆ ತೋರುವಳು

ಸಂಪಾದಕ.

ಹಿಂದುಸ್ಥಾನದ ಸ್ತ್ರೀಯರ ಸಂಖ್ಯೆ.

ಹಿಂದುಸ್ಥಾನದಲ್ಲಿ ಸ್ತ್ರೀಯರು ಪುರುಷರಕಿಂತ ಕಡಿಮೆಯಿರುವರು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಸ್ತ್ರೀಯರೇ ಹೆಚ್ಚಿರುವರು. ಗಂಡಸರ ಸಂಖ್ಯೆ ೧೦೦೦ ಹಿಡಿದರೆ ಹೆಂಗಸರ ಸಂಖ್ಯೆಯು ಹಿಂದುಸ್ತಾನದಲ್ಲಿ ೯೪೫ ಇಂಗ್ಲಂಡದಲ್ಲಿ ೧೦೬೮ ಫ್ರಾನ್ಸದಲ್ಲಿ ೧೦೫೮ ಆಸ್ಟ್ರಿಯಾದಲ್ಲಿ ೧೦೫೬ ಇಟಲಿಯಲ್ಲಿ ೧೦೫೨ ಈ ಪ್ರಮಾಣದಲ್ಲಿ ಇರುವದು. ಹಿಂದುಸ್ತಾನದಲ್ಲಿ ಸ್ತ್ರೀಯರ ಸಂಖ್ಯೆಯು ಬರಬರುತ್ತ ಕಡಿಮೆಯಾಗ ಹತ್ತಿರುವದು. ೧೯೦೧ ರಲ್ಲಿ ೧೦೦೦ರಕ್ಕೆ ೯೭೫, ೧೯೧೧ ರಲ್ಲಿ ೯೫೫, ೧೯೨೧ ರಲ್ಲಿ ೯೪೫, ಇರುವದು. ಇದರಿಂದ ಇಲ್ಲಿ ಯುರೋಪದ ರಾಷ್ಟ್ರಗಳಕಿಂತ ಕಡಿಮೆ ಪ್ರಮಾಣದಿಂದ ಹೆಣ್ಣುಮಕ್ಕಳು ಹುಟ್ಟುತ್ತಾರಂತಲ್ಲ ಮತ್ತು ಜನನ ಸಂಖ್ಯೆಯು ಕಡಿಮೆ ಯಾಗಹತ್ತಿದೆಯಂತೂ ಅಲ್ಲ. ಇದರ ನಿಜವಾದ ಕಾರಣವು ಬೇರೆಯದೆ. ಎಲ್ಲ ದೇಶಗಳಕಿಂತಲೂ ಹಿಂದುಸ್ತಾದ ಹೆಣ್ಣು ಕೂಸುಗಳ ಜನನ ಸಂಖೆಯು ಹೆಚ್ಚಿರುವದು. ೦ ಯಿಂದ ೧೦ ವರ್ಷದ ಹುಡುಗರಲ್ಲಿ ೧೦೦೦ ಗಂಡಹುಡುಗರಿಗೆ ಹೆಣ್ಣುಹುಡುಗರ ಸಂಖ್ಯೆಯು ಇಂಗ್ಲಂಡದಲ್ಲಿ ೯೬೬, ಫ್ರಾನ್ಸದಲ್ಲಿ ೯೮೯ ಹಿಂದುಸ್ತಾನದಲ್ಲಿ ೯೯೫ ಇರುವದು. ಆದರೆ ೧೦ ರಿಂದ ೨೦ ವರ್ಷ ದೊಳಗಿನ ಹೆಣ್ಣುಮಕ್ಕಳಲ್ಲಿ ಮರಣ ಸಂಖ್ಯೆಯು ಅತಿಶಯವಿರುವದು. ಯಾವ ಅವಸ್ಥೆಯಲ್ಲಿಯೂ ಸ್ತ್ರೀಯರ ಮರಣ ಸಂಖ್ಯೆಯು ಗಂಡಸರ ಮರಣ ಸಂಖ್ಯೆಗಿಂತ ಹೆಚ್ಚಿರುವದು. ಯುರೋಪದಲ್ಲಿ ಇದರ ಪ್ರಮಾಣವು ವಿಪರೀತವಿರುವದು ಇದಕ್ಕೆ ಗೊಷಾಪದ್ಧತಿ, ಅನಾರೋಗ್ಯಕಾರಕ ಮನೆಗಳು, ಆಹಾರದೋಷ, ವಿಶೇಷತಃ ಬಾಲ ವಿವಾಹ ಇವೇ ಮುಖ್ಯ ಕಾರಣಗಳು. ಆದ್ದರಿಂದ ಜನಸಮುದಾಯವು ಇತ್ತಕಡೆಗೆ ಲಕ್ಷಕೊಟ್ಟು ಸ್ತ್ರೀಯರ ಇರುವಿಕೆಯಲ್ಲಿಯ ಈ ದೋಷಗಳನ್ನು ಹೋಗಲಾಡಿಸಿ ದೇಶದ ಆರೋಗ್ಯರಕ್ಷಣೆಯನ್ನು ಯಥಾಶಕ್ತಿ ಮಾಡುವರೆಂದೂ ದೇಶೋನ್ನತಿಯ ಕಾರ್ಯದಲ್ಲಿ ಹಿಂದುಸ್ಥಾನದ ವೀರಮಾತೆಯರು ಪುರುಷರಿಗೆ ತುಂಬಾ ಸಹಾಯಕರಾಗುವರೆಂದೂ ಆಶಿಸುವೆವು

ಸಂಪಾದಕ.

ಯುವಕರ ಶಿಕ್ಷಣಕ್ಕೆ ಅಧಿಕಾರಿಗಳಾರು? ಅವರ ಬಯಕೆಯಾದರೂ ಏನು?

೧. **ಸರಕಾರಃ**— ಶಿಕ್ಷಣದಿಂದ ಯುವಕರು ರಾಜನಿಷ್ಠರು ಶಾಂತತಾ ಪ್ರಿಯರು ಆಗಿ ಸರಕಾರದ ಕೆಲಸಗಳನ್ನು ನಂಬುಗೆಯಿಂದಲೂ ದಕ್ಷತೆಯಿಂದಲೂ ಮಾಡಲು ಶಕ್ತರಾಗಬೇಕು; ಸರಕಾರದ ಆಡಳಿತೆಯು ಸುಸೂತ್ರವಾಗಿ ಸಾಗುವದಕ್ಕೆ ತುಂಬಾ ನೆರವಾಗಬೇಕು; ಇಷ್ಟಾದರೆ ಸರಕಾರದ ಚಿಂತೆ ಕಡಿಯಿತು; ಹೆಚ್ಚಿ

ವಿಷಯವು ಸ್ವೇಚ್ಛಾ ವಿಷಯವು. ಇಂಥವರು ಸರಕಾರದಲ್ಲಿ ಹೆಚ್ಚಳ ಪಡೆದು ಉನ್ನತ ಪದವಿಗಳಿಗೆ ಭಾಜನರಾಗುವರು.

೨ **ಧರ್ಮಾಧಿಕಾರಿಗಳು** :— ಯುವಕರು ಭಯಭಕ್ತಿಯುಳ್ಳವರೂ, ಧರ್ಮಾಚರಣೆಯಲ್ಲಿ ತುಂಬಾ ಶ್ರದ್ಧೆಯುಳ್ಳವರೂ ಆಗುವಹಾಗೆ ಶಿಕ್ಷಣವಿಷಯದಲ್ಲಿ ಜಾಗ್ರತರಾಗಿರುವರು ಪುರಾಣ ಪುಣ್ಯಕಥೆಗಳ ಶ್ರವಣದಿಂದ ತ್ಯಾಗ ಬುದ್ಧಿಯಿಂದ ಧರ್ಮ ಪೀಠಕ್ಕೆ ತನು-ಮನ ಧನವನ್ನು ಸೂರೆಮಾಡಿದರೆ ಧರ್ಮಾಧಿಕಾರಿಗಳು ತುಂಬಾ ಸಂತುಷ್ಟರಾಗುವರು.

೩ **ಪಾಲಕರು** :— ತಮ್ಮ ಬಾಲಕ ನ ವಿದ್ಯಾರ್ಜನೆಯಿಂದ ತಮಗೂ ತಮ್ಮ ಮನೆತನಕ್ಕೂ ಸುಖಸಂಪತ್ತಿಯನ್ನು ತಂದು ವ್ಯವಹಾರ ಚತುರರಾಗಿ ತಮ್ಮ ಮೇಲಿನ ಪ್ರಪಂಚದ ಭಾರವನ್ನು ಇಳಿಸುವರೆಂದು ಆಶಿಸುವರು. ತಮ್ಮ ಮಕ್ಕಳು ಎಮ್ ಎ., ಎಲ್‌ಎಲ್.ಬಿ ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮಾಮಲೇದಾರ, ಮುನಸೂಬ ಮೊದಲಾದ ಅಧಿಕಾರ ಸಂಪನ್ನರಾಗಿ ಮನ್ನಣೆಯನ್ನು ಹೊಂದಿದರೆ ಅವರ ಆನಂದಕ್ಕೆ ನೆಲೆಯೇ ಇಲ್ಲ

೪ **ಶಿಕ್ಷಕರು** :— ವಿದ್ಯಾರ್ಥಿಗಳು ಆಜ್ಞಾಧಾರಕರಾಗಿ, ಮನಮುಟ್ಟಿ ಅಭ್ಯಾಸ ಮಾಡಿ ಮೇಲಧಿಕಾರಿಗಳು ಬಂದು ಪರೀಕ್ಷಿಸುವಾಗ್ಗೆ ಸರಿಯಾದ ಉತ್ತರಕೊಟ್ಟು ತಮಗೆ ಒಳ್ಳೇ ಶರ ದೊರೆಯಬೇಕೆಂದು ಹಗಲಿರಳು ಚಿಂತಿಸುವರು. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವದೇ ಶಿಕ್ಷಕರ ಧ್ಯೇಯವು

೫ **ಮುಂದಾಳುಗಳು**:— ವಿದ್ಯಾರ್ಥಿಗಳು ಅನಿಯಂತ್ರಿತರಾಗಿ ದೇಶದ ಚಟವಟಿಕೆಗಳಲ್ಲಿ ಚನ್ನಾಗಿ ಶೀರಿ ತಮ್ಮ ನೇತೃತ್ವದಲ್ಲಿ ದಂಡಾಳುಗಳೋಪಾದಿಯಲ್ಲಿ ಹೋರಾಡಲು ಸನ್ನದ್ಧರಾಗಬೇಕೆಂಬ ಉತ್ಕಟೇಚ್ಛೆಯಿಂದ ಅವರ ಶಿಕ್ಷಣ ಕಾರ್ಯದಲ್ಲಿ ಅವಿಶ್ರಾಂತಶ್ರಮ ವಹಿಸುವರು. ದೇಶಭಕ್ತಿ ಸ್ವಾರ್ಥತ್ಯಾಗ ಮೊದಲಾದ ಉಜ್ವಲ ಗುಣಗಳಿಂದ, ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ, ಲೋಕ ಜಾಗ್ರತೆಯ ಕಾರ್ಯದಲ್ಲಿ ತೊಡಗುವ ಹಾಗೆ ಬೋಧಿಸುವರು.

ಈ ರೀತಿಯಲ್ಲಿ ಈ ಐದು ವರ್ಗದ ಶಿಕ್ಷಣಾಧಿಕಾರಿಗಳು ದೇಶದ ಯುವಕರ ಶಿಕ್ಷಣಕ್ರಮದಲ್ಲಿ ತಮ್ಮ ತಮ್ಮ ಧ್ಯೇಯವನ್ನೇ ಸಾಧಿಸಲು ಬಗೆಬಗೆಯಿಂದ ಪರಿಶ್ರಮ ಪಡುವರು. ಈ ನಿಯಂತ್ರಣಾಧಿಕಾರಿಗಳ ಬಲವಾದ ಸೆಳವಿಗೆ ಒಳಗಟ್ಟು, ಅಪಕ್ವದಶೆಯಲ್ಲಿದ್ದ, ಅಸ್ಥಿರ ಬುದ್ಧಿಯ ಯುವಕರು ಎಳೆದತ್ತ ಹೋಗುತ್ತ ಯಾವ ಧಡಕ್ಕೂ ಮುಟ್ಟುವದಿಲ್ಲ. ಯಾವದೇಶದಲ್ಲಿ ಈ ಎಲ್ಲ ಅಧಿಕಾರಿ ವರ್ಗಗಳ ಬಯಕೆಗಳು ಹೊಂದುಕೊಂಡಿರುವವೋ ಆ ದೇಶದ ವಿದ್ಯಾರ್ಥಿಗಳ ಶಿಕ್ಷಣ

ಕ್ರಮವು ಸರ್ವಾಂಗಸುಂದರವಾಗಿರುವದು, ಆದರೆ ಯಾವ ರಾಷ್ಟ್ರದಲ್ಲಿ ಈ ಹಿತ ಸಂಬಂಧಗಳಲ್ಲಿ ವಿಶೇಷ ಒಡಕುಂಟೋ ಅಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣವೂ, ಸನ್ಮಾರ್ಗದರ್ಶಿಗಳೂ ಲಭಿಸದೆ ಅವರು ಮಹದಾಪತ್ತಿಗೆ ಗುರಿಯಾಗುವರು, ಮತ್ತು ದೇಶದ ಸ್ಥಿತಿಯಾದರೂ ಅತ್ಯಂತ ಶೋಚನೀಯವಾಗುವದು. ನಮ್ಮ ದೇಶದಲ್ಲಿ ಈ ಹಿತಸಂಬಂಧಗಳಲ್ಲಿ ಸಮ್ಮೇಲನವು ಉಂಟಾಗುವಹಾಗೆ ಸರ್ವರೂ ಜಾಗ್ರತರಾಗುವರೆಂದು ಆಶಿಸುತ್ತೇವೆ.

ಸಂಪಾದಕ.

ತಿನಿಸು ಲೇಸೋ? ಆಟದ ಒಡವೆ ಲೇಸೋ?

ತಂದೆ ತಾಯಿಗಳು ತಮ್ಮ ಚಿಕ್ಕಮಕ್ಕಳಿಗೆ ಅಕ್ಕರತೆಯಿಂದ ಯಥೇಚ್ಛ ತಿನ್ನಲಿಕ್ಕೆ ಕೊಡುವರು. ಶ್ರೀಮಂತರ ಮಕ್ಕಳಂತೂ ತಿನಿಸುಗಳಲ್ಲಿ ಹೊರಳಾಡುವರು. ತಿಂದಷ್ಟು ಜಾಗ್ರತೆಯಿಂದ ಬೆಳೆಯುವರೆಂದು ಅವರ ಭಾವನೆ. "ನೀರು ಪಿತ್ತ ಕೂಳು ಕುತ್ತ" ಎಂಬದನ್ನು ಅರಿಯರು. ಹುಡುಗರಾದರೂ ಅಚ್ಚಿಚ್ಚಿಯಿಂದ ಬೆಳಿಸಲ್ಪಟ್ಟು ಬಹಳ ಕೋಮಲರಾಗುವರು. ಇದರ ದುಷ್ಪರಿಣಾಮವು ಇಷ್ಟೆಂದು ಹೇಳಲಾರೆವು. ಹುಡುಗರಿಗೆ ಹೆಚ್ಚು ತಿನ್ನುವ ಚಟವನ್ನು ಕಲಿಸುವದಕ್ಕಿಂತ ತರತರದ ಆಟದ ಗೊಂಬೆಗಳನ್ನು ಕೊಟ್ಟು ಅವರನ್ನು ವಿನೋದದಲ್ಲಿಡುವದು ಅತ್ಯಂತ ಹಿತಕರವು. ಹುಡುಗರು ತಿನಿಸಿನಕಿಂತ ಆಟದ ಒಡವೆಗಳನ್ನು ಹೆಚ್ಚು ಪ್ರೀತಿಸುವರು. ಪಾಶ್ಚಿಮಾತ್ಯ ದೇಶಗಳಲ್ಲಿ ಹುಡುಗರಿಗೆ ಆಟದ ಮೋಟಾರು, ಉಗಿಬಂಡಿ, ಹಡಗ ಮೊದಲಾದ ಜ್ಞಾನ ಸಂವರ್ಧಕ ಜೀನಸುಗಳನ್ನು ಕೊಟ್ಟು ಅವರಲ್ಲಿ ನಿರೀಕ್ಷಣ ಬುದ್ಧಿಯನ್ನು ಹೆಚ್ಚಿಸುವರು. ಹೆಣ್ಣು ಮಕ್ಕಳಿಗೆ ಗೊಂಬೆಗಳಿಗೆ ಕರಮಣೆ, ಉಣ್ಣಿ, ನೂಲು ಮೊದಲಾದವುಗಳಿಂದ ಉಡಿಗೆತೊಡಿಗೆಗಳನ್ನು ಮಾಡುವದರಲ್ಲಿ ಬಹಳ ಆಸಕ್ತಿ. ಇವರಿಂದ ಅವರು ವಿನೋದದಿಂದಲೆ ಹೆಣಿಯುವ, ಹೊಲಿಯುವ ಮತ್ತು ಅಲಂಕರಿಸುವ ಕಲೆಯನ್ನು ಕ್ರಮೇಣ ಕಲಿಯುವರು. ಆಟದಲ್ಲಿ ತೊಡಗಿದ ಹುಡುಗರಿಗೆ ಊಟದ ಪರವೆ ಸಹ ಇರುವದಿಲ್ಲ. ಹುಡುಗರ ಸ್ವಭಾವವೇ ಆಟದ್ದಾದ್ದರಿಂದ, ಹುಡುಗರನ್ನು ಆಟವಾಡಿಸುತ್ತಲೇ ಪಾಲಕರು ಮತ್ತು ಶಿಕ್ಷಕರು ಅದಷ್ಟು ಮಟ್ಟಿಗೆ ಜ್ಞಾನ ಸಂಪಾದನೆಯ ಕಾರ್ಯವನ್ನು ಜರುಗಿಸಬೇಕು. ಮಕ್ಕಳ ಮೇಲೆ ವಿವೇಕಮತಿಯುಳ್ಳವರು ತಿನಿಸನ್ನು ಕೊಡುವದಕ್ಕಿಂತ ಆಟದ ಒಡವೆಗಳನ್ನು ಕೊಡುವದು ಅತ್ಯಂತ ಹಿತಕರವು.

ಸಂಪಾದಕ.

ಏಕಮಾನ ಪದ್ಧತಿ.

ಅಂಕಗಣಿತವನ್ನು ಕಲಿಸುವ ವಿಷಯದಲ್ಲಿ ಕೆಲವೊಂದು ರೀತಿಗಳು ಬಳಿಕೆಯಲ್ಲಿ ಬರತಕ್ಕಷ್ಟು ಬಂದಿರುವದಿಲ್ಲ. ಹಳೆಯ ರೀತಿಗಳೇ ರೂಢಿಯಲ್ಲಿವೆ. ಇದಕ್ಕೆ ಶಿಕ್ಷಕರ ಅನಧ್ಯಯನ ಮತ್ತು ಸಾಂಪ್ರದಾಯಾಸಕ್ತಿ ಮತ್ತು ಪರೀಕ್ಷಕರ ಔದಾಸೀನ್ಯ ಇವುಗಳೇ ಕಾರಣ. ಇಲ್ಲಿ ಏಕಮಾನ ಪದ್ಧತಿಯ ಬಗ್ಗೆ ಸ್ವಲ್ಪ ವಿವೇಚನೆ ಮಾಡುವೆವು.

ಪ್ರಾಥಮಿಕ ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ತ್ರೈರಾಸಿಕ ಪಂಚರಾಸಿಕಗಳು ಕಲಿಸಲ್ಪಡುತ್ತವೆ. ಇವುಗಳ ಸಹಾಯದಿಂದಲೇ ಪ್ರಮಾಣ, ಪಟ್ಟು ಮತ್ತು ಪಾಲು ಇವುಗಳಿಗೆ ಸಂಬಂಧಪಟ್ಟ, ಯಾವತ್ತು ಲೆಕ್ಕಗಳು ಅಂದರೆ ಕಾಲಮಾನ, ಪಾಲುಗಾರಿಕೆ, ಬಡ್ಡಿ, ಲಾಭಹಾನಿ, ತೇವು ಮೊದಲಾದ ಲೆಕ್ಕಗಳು ಬಿಡಿಸಲ್ಪಡುವವು. ತ್ರೈರಾಸಿಕ ಪಂಚರಾಸಿಕಗಳಲ್ಲಿ ಇದ್ದ ಸಮ ಮತ್ತು ವ್ಯಸ್ತ ಪ್ರಮಾಣಗಳ ಕಲ್ಪನೆಯು ಚಿಕ್ಕ ಬಾಲಕರಿಗೆ ಸುಲಭವಾಗಿ ಆಗುವದಿಲ್ಲ. ಪ್ರಮಾಣದ ಉತ್ಪತ್ತಿ ಮತ್ತು ಲೆಕ್ಕಗಳು ಬೀಜಗಣಿತದಲ್ಲಿ ಇಂಗ್ಲಿಷ ಒನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಕಲಿಸಲ್ಪಡುತ್ತವೆ; ಅಮಿತಿಯಲ್ಲಿ ಕಾಲೇಜದಲ್ಲಿ ಕಲಿಸಲ್ಪಡುವವು. ಈ ಕ್ಲಾಸುಗಳ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಕೂಡ ಪ್ರಮಾಣದ ಕಲ್ಪನೆಯು ಸುಲಭವಾಗಿ ಆಗುವದಿಲ್ಲ ಅಂದಮೇಲೆ ೧೦-೧೧ ವರ್ಷದ ವಿದ್ಯಾರ್ಥಿಗಳ ಹಾಡೇನು? ಅವರು ಪ್ರಮಾಣದ ಕಲ್ಪನೆ ಇಲ್ಲದೆ ಕೇವಲ ಯಾಂತ್ರಿಕ ಪದ್ಧತಿಯಿಂದ ತ್ರೈರಾಸಿಕ ಪಂಚರಾಸಿಕಗಳನ್ನು ಕಲಿಯುವರು. ಸಮ ಮತ್ತು ವ್ಯಸ್ತ ಇವುಗಳು ಒಮ್ಮೊಮ್ಮೆ ಬಹು ಗೊಂದಲವನ್ನುಂಟುಮಾಡುವವು. ಆದ್ದರಿಂದ ವಿದ್ಯಾರ್ಥಿಗಳಿಗೆ ಆರಂಭದಲ್ಲಿ ತ್ರೈರಾಸಿಕ ರೀತಿಯನ್ನು ಕಲಿಸುವ ಬದಲು ಏಕಮಾನ ಪದ್ಧತಿಯನ್ನು ಕಲಿಸುವುದು ಲೇಮು. ಅಂದರೆ ಹುಡುಗರಿಗೆ ಪಟ್ಟು, ಪಾಲು, ಗುಣೋತ್ತರ ಇವುಗಳ ಕಲ್ಪನೆಯನ್ನು ತಂದು ಕೊಟ್ಟು ಲೆಕ್ಕಗಳನ್ನು ಬಿಡಿಸಲು ತಿಳಿಸಬೇಕು.

(೧) ಉದಾ:—೧೦೦ : ೧೦೦೦ :: ೫ : ಇಷ್ಟ ಸಂಖ್ಯೆ. ಇದನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳುವದು ಬಿಗಿಯಾಗಿದೆ. ೧೦೦ಕ್ಕೆ ೧೦೦೦ ಯಾವ ಪ್ರಮಾಣದಲ್ಲಿರುವದೋ ಅದೇ ಪ್ರಮಾಣವಲ್ಲಿ ೫ಕ್ಕೆ ಇಷ್ಟ ಸಂಖ್ಯೆ ಇರುವದು. ಈ ಕಲ್ಪನೆಯು ಯಾವ ವಿದ್ಯಾರ್ಥಿಯಲ್ಲಿ ಬಿಂಬಿಸುವದೋ ಅವನಿಗೆ ಈ ರೀತಿಯು ತಿಳಿಯಬಹುದು. ಪ್ರಮಾಣ ಹಾಕಲು, $\frac{೧೦೦೦}{೧೦೦} = \frac{\text{ಇ. ಸಂ}}{೫}$ ಈ ಸಮೀಕರಣವು ಆಗುವದು.

ಅಂಶಗಳಿಗೆ ೫ರಿಂದ ಗುಣಿಸಲು, $\frac{೫೦೦೦\times೫}{೧೦೦} = \frac{೫. \text{ ಸಂ.}\times೫}{೫}$; ಸಂಕ್ಷೇಪ ಮಾಡ
ಲಾಗಿ ೫೦ ಉತ್ತರ ಬರುವದು; ಇದೇ ನಿಜವಾದ ರೀತಿ. ಸಮೀಕರಣ ಮೊದಲಾ
ದವನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಶಕ್ಯವಿಲ್ಲ ಆದ್ದರಿಂದ ಸಮ ಪ್ರಮಾಣವಿದ್ದಲ್ಲಿ
ಎನೆಯ, ಸಿನೆಯ ಪದಗಳನ್ನು ಗುಣಿಸಿ ಮೊದಲನೆಯ ಪದದಿಂದ ಭಾಗಿಸಲಿಕ್ಕೆ
ತಿಳಿಸುವದರಲ್ಲಿ ಬರುವದು ಆದ್ದರಿಂದ ಅವರು ಯಂತ್ರಗಳಂತೆ ಲೆಕ್ಕಗಳನ್ನು
ಬಿಡಿಸುವರು. ಕಾರಣ ಈ ತ್ರೈರಾಸಿಕ ರೀತಿಯನ್ನು ಸರ್ವಥಾ ಆರಂಭದಲ್ಲಿ
ತ್ಯಜಿಸಿ ಏಕಮಾನ ಪದ್ಧತಿಯನ್ನು ತಿಳಿಸಬೇಕು.

(೨) ಉದಾ :—

	೫	ಇದು	೧ ರ	ಎಷ್ಟು ಪಟ್ಟು ?		೫	ಪಟ್ಟು
	೮	,,	೨ ರ	,,	,, ?	೪	,,
	೧೦೦	,,	೧೦ ರ	,,	,, ?	೧೦	,,
	೧೦೦೦	,	೧೦೦ ರ	,,	,, ?	೧೦	,,
ಇದರಂತೆ	೧	,,	೫ ರ	ಯಾವ ಪಾಲು ?		$\frac{೧}{೫}$	ಪಾಲು
	೨	,,	೮ ರ	,,	,, ?	$\frac{೨}{೮}$	,,

ಇತ್ಯಾದಿ ಆರಂಭದ ಲೆಕ್ಕಗಳನ್ನು ತಿಳಿಸಿ, ಪಟ್ಟು, ಪಾಲು ಇವುಗಳ ಅರ್ಥವ
ಚನ್ನಾಗಿ ಸರ್ವಸಾಮಾನ್ಯ ವಿದ್ಯಾರ್ಥಿಗೆ ಸಹ ಹೊಳೆದ ಮೇಲೆ ಮುಂದೆ
ಸಾಗಬೇಕು

(೩) ಉದಾ :—೧ ಬಾಕಿನ ಮೇಲೆ ೨ ವಿದ್ಯಾರ್ಥಿಗಳು ಕೂಡುವರು, ಆದ
೧೫ ಬಾಕಿನ ಮೇಲೆ ಎಷ್ಟು ವಿದ್ಯಾರ್ಥಿಗಳು ಕೂಡುವರು ?

೧ ಬಾಕಿಗೆ ೨ ವಿದ್ಯಾರ್ಥಿಗಳು	ಬಾಕಿನ ಸಂಖ್ಯೆ ೧೫ ಪಟ್ಟು ಆದ್ದರಿಂ
೧೫ ಬಾಕಿಗೆ ೩೦ ವಿದ್ಯಾರ್ಥಿಗಳು	ವಿದ್ಯಾರ್ಥಿಗಳ ಸಂಖ್ಯೆಯೂ ೧೫ ಪಟ್ಟು ಆಗುವದು. ೨ × ೧೫ = ೩೦.

ಇಂಥ ಸುಲಭ ಲೆಕ್ಕಗಳನ್ನು ತಿಳಿಸಬೇಕು.

(೪) ಉದಾ :—೫ ಎತ್ತುಗಳಿಗೆ ತಿಂಗಳಿಗೆ ೧೫ ಮಣ ಹತ್ತೀಕಾಳು ಬೇಕು, ಆದರೆ ೧೦ ಎತ್ತುಗಳಿಗೆ ಎಷ್ಟು ಬೇಕು?

೫ ಎತ್ತುಗಳಿಗೆ ೧೫ ಮಣ	೧ ಇದು ೫ರ $\frac{೧}{೫}$ ಪಾಲು
೧ ,, ೩ ಮಣ	∴ ೧೫ರ $\frac{೧}{೫}$ = ೩
೧೦ ,, ೩೦ ಮಣ	೧೦ ಇದು ೧ರ ೧೦ ಪಟ್ಟು
	∴ ೩ರ ೧೦ = ೩೦

ಇಲ್ಲಿ ಆರಂಭದಲ್ಲಿ ೧ ಬಿಡಿಗಾಳಿಗೆ ತೆಗೆದುಕೊಂಡು ಮುಂದೆ ಕೊಟ್ಟ ಸಂಖ್ಯೆಗೆ ಗುಣೋತ್ತರ ತೆಗೆಯಬೇಕು. ಮತ್ತು ಪಟ್ಟು, ಪಾಲುಗಳ ಅರ್ಥವನ್ನೂ ಗುಣೋತ್ತರದ ಅರ್ಥವನ್ನೂ ಚನ್ನಾಗಿ ತಿಳಿಸಿ ಹೇಳಬೇಕು:—೧೫ರಲ್ಲಿ ೫ ಪಾಲು ಮಾಡಿ ೧ ಪಾಲಿಗೆ ಎಷ್ಟು? ಆ ಮೇಲೆ ೧ ಪಾಲಿನ ೧೦ ಪಟ್ಟು ಎಷ್ಟು? ಬಂದುದೇ ಉತ್ತರ.

(೫) ಉದಾ :—೪ ಜನ ಕೂಲಿಕಾರರಿಗೆ ವಾರಕ್ಕೆ ೧೪ ರೂ. ಸಂಬಳ; ಆದರೆ ೭ ಜನ ಕೂಲಿಕಾರರಿಗೆ ವಾರಕ್ಕೆ ಎಷ್ಟು ಸಂಬಳ?

ತ್ರೈರಾಸಿಕ ಹಾಕಿ ಬಿಡಿಸುವದು :—

ಕೂ. ಕೂ. ರೂ. ೪ : ೧೪ :: ೧೪ : ಬರುವ ರೂ.	$\frac{೧೪ \times ೧೪}{೪}$ = ೪೯ ರೂ

ಏಕಮಾನ ರೀತಿಯಿಂದ :—

೪ ಕೂ.....೧೪ ರೂ.	೧೪ರ $\frac{೧}{೪}$ = ೧೪ × $\frac{೧}{೪}$ = $\frac{೭}{೨}$
೧ ಕೂ.....$\frac{೭}{೨}$ ರೂ.	$\frac{೭}{೨}$ದ ೧೪ = $\frac{೭}{೨}$ × ೧೪ = ೪೯
೧೪ ಕೂ.....೪೯ ರೂ	

ಈ ಮೆಟ್ಟನ್ನು ಬಿಡದೆ ತಿಳಿಸಿದ್ದಾಯಿತು. ಇದನ್ನೇ ತುಸು ರೂಢಿಯಾದ ರೀತಿಗೆ ತೆಗೆದುಕೊಳ್ಳುವ ಕಾರಣವಿಲ್ಲ.

ಳ ಕೂ.....ಗಳ ರೂ.	ಗಲ ಇದು ಳರ $\frac{ಗಲ}{ಳ}$ ಪಟ್ಟು
ಗಲ ಕೂ.....ಟಿ. ರೂ.	$\therefore$ ಗಳ $\times \frac{ಗಲ}{ಳ}$ = ಟಿ.

ಇಲ್ಲಿ ಶಿಕ್ಷಕನು ಆರಂಭದಲ್ಲಿ ತಿಳಿಸಿ ಹೇಳಬೇಕಾದದ್ದು.

ಗ ಕೂಲಿಕಾರನಿಗೆ ಳ ಕೂಲಿಕಾರರ ಸಂಬಳದ $\frac{ಗ}{ಳ}$ ಪಾಲು ಕೊಡಬೇಕು

ಅಂದರೆ ಗಳರ $\frac{ಗ}{ಳ}$ ಕೊಡಬೇಕು ಅವರಂತೆ ಗಲ ಜನ ಕೂಲಿಕಾರರಿಗೆ ಗ ಕೂ

ಕಾರನ ಸಂಬಳದ ಗಲ ಪಟ್ಟು ಕೊಡಬೇಕು. ಅಂದರೆ ಗಳ $\times$ $\frac{ಗ}{ಳ}$ ದ ಗ

= ಗಳ $\times \frac{ಗ}{ಳ} \times$ ಗಲ = ಟಿ. ಹೀಗೆ ಅನೇಕ ಸುಲಭ ಲೆಕ್ಕಗಳನ್ನು ಮಾಡಿ

ಮೇಲೆ ವಿದ್ಯಾರ್ಥಿಗಳು ಬಹಳ ಬೆಳಿಸದೆ ಸಂಕ್ಷಿಪ್ತವಾಗಿ ಮಾಡಲು ಶಕ್ತರಾಗುವರು

(೫) ಉದಾ :—ಗಖ ತೊಲಿ ಬಂಗಾರಕ್ಕೆ ೨೭೫ ರೂ. ಆದರೆ ೭ ತೊ
ಬಂಗಾರಕ್ಕೆ ಎಷ್ಟು ರೂಪಾಯಿ ?

ಗಖ. ತೊ.....೨೭ಖ. ರೂ.	$\frac{೨೭ಖ.}{ಗಖ} \times ೭ =$ ೯೪೭
೭ ತೊ.....೯೪೭ ರೂ.	

ಇಲ್ಲಿ ಗಖ. ತೊಲಿಯಿಂದ ಗ ತೊಲಿಗೆ ತೆಗೆದು ಆ ಮೇಲೆ ೭ ತೊಲಿಗೆ ತೆಗೆಯುವವನ್ನೆ
ತುಸು ರೂಢಿಯಾದ ಹುಡುಗರು ಗಖರಿಂದ ಭಾಗಿಸಿ ೭ರಿಂದ ಗುಣಿಸುವದನ್ನು
ಒಮ್ಮೆಲೆ ಮಾಡಿ ಬಿಡುವರು.

(೬) ಉದಾ :—ಗ ಕೆಲವನ್ನು ಮಾಡಲಿಕ್ಕೆ ೯ ಜನ ಕೂಲಿಕಾರರಿಗೆ
ದಿವಸಗಳು ಹಿಡಿಯುತ್ತವೆ. ಆದರೆ ೫ ಜನ ಕೂಲಿಕಾರರಿಗೆ ಎಷ್ಟು ದಿವಸ
ಹಿಡಿಯುವವು ?

ಈ ಲೆಕ್ಕದಲ್ಲಿ ವ್ಯಸ್ತಪ್ರಮಾಣ ಇರುವದರಿಂದ ಇದನ್ನು ಹೀಗೆ ತಿಳಿಸಬೇ

ಗ ಕೂಲಿಕಾರನು ೯ ಕೂಲಿಕಾರರ $\frac{ಗ}{೯}$ ಪಾಲ ಕೆಲಸ ಮಾಡುತ್ತಾನೆ ಆದ್ದರಿ
ಗ ಕೂಲಿಕಾರನಿಗೆ ೯ ಕೂಲಿಕಾರರ ಪಟ್ಟು ದಿವಸ ಹಿಡಿಯುತ್ತವೆ. ಗಖ×೯ = ಗಖ

ಇನ್ನು ೫ ಕೂಲಿಕಾರರು ೧ ಕೂಲಿಕಾರನ ೫ ಪಟ್ಟು ಕೆಲಸ ಮಾಡುವವರಿಂದ ೫ ಕೂಲಿಕಾರರಿಗೆ ೧ ಕೂಲಿಕಾರನ $\frac{೧}{೫}$ ದಿವಸ ಹಿಡಿಯುವವು.

$\therefore$ ೧೩೫ $\times \frac{೧}{೫}$ = ೨೭ ದಿವಸ. ಹೀಗೆ ಪಟ್ಟು, ಪಾಲು ಇವುಗಳನ್ನು ತಿಳಿಸಿದ ಪಂಜರಾಸಿಕದಿಂದ ಬಿಡಿಸುವ ಲೆಕ್ಕಗಳನ್ನು ಹೇಳಬೇಕು.

(೭) ಉದಾ :— ೧೨ ಕೂಲಿಕಾರರು ದಿನಾಲು ೮ ತಾಸಿನಂತೆ ದುಡಿದು ೨೦ ದಿವಸಗಳಲ್ಲಿ ೧೯೬ ರೂ. ಗಳಿಸುವರು. ಆದರೆ ೧೫ ಕೂಲಿಕಾರರು ದಿನಾಲು ೧೦ ತಾಸಿನಂತೆ ಕೆಲಸ ಮಾಡಿ ೩೦ ದಿವಸಗಳಲ್ಲಿ ಎಷ್ಟು ಗಳಿಸುವರು ?

೧೨ ಕೂ.....೧೯೬ ರೂ. ೧೫ ಕೂ.....೨೪೦ ,,	$\frac{೧೯೬}{೧೨} \times ೧೫ = ೨೪೦$
೮ ತಾ.....೨೪೦ ,, ೧೦ ತಾ.....೩೦೦ ,,	$\frac{೨೪೦}{೮} \times ೧೦ = ೩೦೦$
೨೦ ದಿ.....೩೦೦ ,, ೩೦ ದಿ.....೪೫೦ ,,	$\frac{೩೦೦}{೨೦} \times ೩೦ = ೪೫೦$

ಇಪನ್ನೀ ಚನ್ನಾಗಿ ನುರಿತ ವಿದ್ಯಾರ್ಥಿಗಳು ಅತಿ ಸಂಕ್ಷಿಪ್ತವಾಗಿ ಮಾಡಬಹುದು.

ಕೂಲಿಕಾರರ ಸಂಖ್ಯೆ $\frac{೧೫}{೧೨}$ ಪಟ್ಟು ಆಗಿದೆ.

ತಾಸಿನ ,, $\frac{೧೦}{೮}$,, ,,

ದಿವಸ ,, $\frac{೩೦}{೨೦}$,, ,,

ಆದ್ದರಿಂದ ೧೯೬ರ $\frac{೧೫}{೧೨}$ ಪಟ್ಟು, ಬಂದದ್ದರ $\frac{೧೦}{೮}$ ಪಟ್ಟು, ಆ ಮೇಲೆ ಬಂದದ್ದರ $\frac{೩೦}{೨೦}$ ಪಟ್ಟು, ಅಂತೂ ಬಂದದ್ದು ಉತ್ತರ; ಈ ತಿಳುವಳಿಕೆಯುಂಟಾಗಿ ಒಮ್ಮೆಲೆ ಹೀಗೆ ಇಡುವರು.

$$೧೯೬ \times \frac{೧೫}{೧೨} \times \frac{೧೦}{೮} \times \frac{೩೦}{೨೦} = ೪೫೦ \text{ ರೂ. ಉತ್ತರ.}$$

ಈ ರೀತಿಯಲ್ಲಿ ಏಕಮಾನ ಪದ್ಧತಿಯಿಂದ ಕಲಿಸುವದು ಸುಲಭವಾಗುವದು. ಮತ್ತು ವಿದ್ಯಾರ್ಥಿಗಳಿಗೆ ಪಟ್ಟು, ಪಾಲು, ಗುಣೋತ್ತರ ಇವುಗಳ ಕಲ್ಪನೆ ಬರುವ ವಲ್ಲದೆ ಪ್ರಮಾಣದ ಕಲ್ಪನೆಯಾದರೂ ಪಟ್ಟು, ಪಾಲುಗಳ ಮೇಲಿಂದಲೇ ಬರುವದು.

(೮) ಉದಾ :—

೧೦೦ಕ್ಕೆ ವರ್ಷಕ್ಕೆ ೫ ಬಡ್ಡಿಯಾದರೆ ೫೦೦ಕ್ಕೆ ೩ ವರ್ಷದ ಬಡ್ಡಿ ಎಷ್ಟು? ೫೦೦ಕ್ಕೆ ೧ ವರ್ಷದ ಬಡ್ಡಿ ಎಷ್ಟು? ಆ ಮೇಲೆ ೩ ವರ್ಷದ ಬಡ್ಡಿ ಎಷ್ಟು? ಹೀಗೆ ಇದರಲ್ಲಿ ಎರಡು ಪ್ರಶ್ನೆಗಳುಂಟು.

ತ್ರೈರಾಸಿಕದಿಂದ :—

ರೂ.	ರೂ.	ರೂ.	
∴ ೦೦	: ೫೦೦	: . ೫	: ಬರುವ ಬಡ್ಡಿ

$$\frac{೫೦೦ \times ೫}{೧೦೦} = ೨೫ \text{ ರೂ ಬಡ್ಡಿ}$$

ವ	ವ.	ರೂ	
೧	: :	೨೫	: ಬರುವ ರೂ

ಇದರ ಅರ್ಥ :—೧೦೦ಕ್ಕೆ ೫೦೦ ಎಷ್ಟು ಪಟ್ಟೋ ಅಷ್ಟು ಪಟ್ಟು ೫ಕ್ಕೆ ಬರುವ ಬಡ್ಡಿ ಅಂಕಿಗಳ ಮಧ್ಯದಲ್ಲಿದ್ದ ಅಕ್ಷರಗಳ ಬದಲು (:), (::) ಈ ಪ್ರಮಾಣ ಚಿನ್ನಗಳನ್ನು ಇಟ್ಟಿರುವರು ಆದ್ದರಿಂದ ಪ್ರಮಾಣವಾದರೂ ಪಟ್ಟು, ಇಲ್ಲವೆ ಪಾಲು ಎಂಬದು ಗೊತ್ತಾಗುವದು.

೫೦೦ ರೂ. ೧೦೦ರ $\frac{೫೦೦}{೧೦೦}$ = ೫ ಪಟ್ಟು ಆಗುವದು. ಮತ್ತು ಬರುವ ಬಡ್ಡಿ ೫ರ ೫ ಪಟ್ಟು ೨೫ ರೂ ಆಗುವದು. ೩ ವರ್ಷಕ್ಕೆ ೨೫ರ ೩ ಪಟ್ಟು ೭೫ ರೂ. ಆಗುವದು.

ಈ ವಿವೇಚನೆಯಿಂದ ತಿಳಿದು ಬರುವದೇನಂದರೆ :—

(೧) ತ್ರೈರಾಸಿಕ, ಪಂಚರಾಸಿಕಗಳ ಕಾರ್ಯವನ್ನೇ ಈ ಏಕಮಾನ ಪದ್ಧತಿಯು ಚಿಕ್ಕ ಬಾಲಕರಿಗೆ ತಿಳಿಯುವಂತೆ ಮಾಡುವದು.

(೨) ತ್ರೈರಾಸಿಕ ಪದ್ಧತಿಯಿಂದ ಪ್ರೌಢ ವಿದ್ಯಾರ್ಥಿಗಳು ಕೂಡ ಯಂತ್ರಗಳಂತೆ ಪ್ರಮಾಣದ ಕಲ್ಪನೆ ಇಲ್ಲದೆ ಲೆಕ್ಕ ಬಿಡಿಸುವರು. ೧ ತೊಲಿ ಬಂಗಾರಕ್ಕೆ ೨೦ ರೂ. ಆದರೆ ೧೦ ತೊಲಿ ಬಂಗಾರಕ್ಕೆ ಎಷ್ಟು? ಎಂಬ ಸುಲಭ ಪ್ರಶ್ನೆಯನ್ನು ಕೂಡ ಪ್ರೌಢ ವಿದ್ಯಾರ್ಥಿಗಳು ತ್ರೈರಾಸಿಕದಿಂದಲೇ ಬಿಡಿಸಿ ಉತ್ತರ

ಹೇಳುವರೆಂಬದನ್ನು ತಿಳಿದರೆ ಸೋಜಿಗವೆನಿಸಬಹುದು. ತ್ರೈರಾಸಿಕ ಪದ್ಧತಿಯ ರೂಢಿಯೇ ಅಷ್ಟು ಆಗಿರುವದು.

(೩) ಆರಂಭದಲ್ಲಿ ಹುಡುಗರಿಗೆ ಏಕಮಾನ ಪದ್ಧತಿಯನ್ನೇ ಕಲಿಸಬೇಕು. ಯಾವ ಮೆಟ್ಟಿಗಳನ್ನೂ ಬಿಡಬಾರದು.

(೪) ರೂಢಿಯಾದ ಮೇಲೆ ೧ ಬಿಡಿಗಾಳಿನ ಬೆಲೆಯನ್ನು ಕಟ್ಟದೆ ಒಮ್ಮೆಲೆ ಹುಡುಗರು ಲೆಕ್ಕವನ್ನು ಬಿಡಿಸಲು ಸಮರ್ಥರಾಗುವರು.

(೫) ಹುಡುಗರಿಗೆ ಪಟ್ಟು, ಪಾಲು, ಗುಣೋತ್ತರ ಮತ್ತು ಪ್ರಮಾಣಗಳ ಕಲ್ಪನೆಯು ಚನ್ನಾಗಿ ಆದ ಮೇಲೆ ತ್ರೈರಾಸಿಕ ಪಂಚರಾಸಿಕಗಳನ್ನು ಕಲಿಸಬೇಕು

ಈ ವಿಧಾನವನ್ನು ಅನುಸರಿಸಿದರೆ ಏಕಮಾನ ಪದ್ಧತಿ, ತ್ರೈರಾಸಿಕ ಮತ್ತು ಪಂಚರಾಸಿಕ ಇವುಗಳು ಸರಿಯಾಗಿ ಬಳಿಕೆಯಲ್ಲಿ ಬರುವವು ಮತ್ತು ವಿದ್ಯಾರ್ಥಿಗಳಿಗೆ ಅವುಗಳ ಮರ್ಮವು ತಿಳಿಯುವದು.

ಗಣಿತದ ಎಷ್ಟೋ ಭಾಗಗಳು ಸಾಮಾನ್ಯ ವ್ಯವಹಾರಕ್ಕೆ ಪ್ರತ್ಯಕ್ಷ ಉಪಯೋಗ ಬೀಳುವದಿಲ್ಲ. ಆದಾಗ್ಯೂ ಕಲಿಸುವ ಕಾರಣವೇನಂದರೆ, ಗಣಿತದಿಂದ ವಿಚಾರಶಕ್ತಿ ಬೆಳೆಯುತ್ತದೆ. ಗಣಿತದಿಂದ ಈ ಕಾರ್ಯವಾದಷ್ಟು ಬೇರೆ ಯಾವ ವಿಷಯದಿಂದಲೂ ಆಗುವದಿಲ್ಲ. ಆದ್ದರಿಂದ ಶಿಕ್ಷಕರು ವಿದ್ಯಾರ್ಥಿಗಳ ವಿಚಾರಶಕ್ತಿಯ ಬೆಳವಣಿಗೆಗಾಗಿ ಗಣಿತವನ್ನು ಕಲಿಸಬೇಕಲ್ಲದೆ ಕೇವಲ ಗಣಿತವನ್ನು ಬಿಡಿಸಬೇಕು, ಹೇಗಾದರೂ ಮಾಡಿ ಬಿಡಿಸಬೇಕೆಂತ ಕಲಿಸಿದರೆ ವಿದ್ಯಾರ್ಥಿಗಳು ಯಂತ್ರಗಳಂತೆ ಕೆಲಸ ಮಾಡುವರು.

ನಮ್ಮ ಸೂಚನೆ:—ಲೇಖಕರು ಪ್ರಾಥಮಿಕ ಶಾಲೆಯ ತೀರ ಚಿಕ್ಕ ಬಾಲಕರಿಗೆ ಎಂದೂ ಕಲಿಸಿದವರಲ್ಲವಾದ್ದರಿಂದ ಇದರಲ್ಲಿ ಇನ್ನೂ ತಿದ್ದುಪಡಿ ಮಾಡಲು ಅವಕಾಶವಿರಬಹುದು. ಈ ವಿಷಯದಲ್ಲಿ ನುರಿತಂಥ ಟ್ರೇಂಡ ಶಿಕ್ಷಕರು, ಅವಶ್ಯವಾದ ತಿದ್ದುಪಡಿಯನ್ನು ಮಾಡಿ ಬರೆಯಬಹುದು. ಮತ್ತು ಶಿಕ್ಷಕರ ಸಮ್ಮೇಲನಗಳಾದಲ್ಲಿ ತಿಳಿಸಿ ಹೇಳಬಹುದು. ಶಿಕ್ಷಕರ ನಿದರ್ಶನಕ್ಕೆ ಈ ವಿಷಯವನ್ನು ಬರೆದಿರುವದೇ ಈ ಲೇಖನದ ಉದ್ದೇಶ.

ಶಿಕ್ಷಕರು ಕೇವಲ ಸಾಂಪ್ರದಾಯವನ್ನೇ ನೆಚ್ಚದೆ ಸ್ವಂತ ಅನುಭವವನ್ನೂ ವಿಚಾರಣತನವನ್ನೂ ಕೆಲಮಟ್ಟಿಗಾದರೂ ನೆಚ್ಚಬೇಕೆಂದು ವಿನ್ನವಿಸುವೆ.

—ಸಂಪಾದಕ.

ಸ್ಕೂಲಬೋರ್ಡಿನಲ್ಲಿ ತಾ॥ ೨೯-೭-೨೮ನೆಯ ದಿವಸ ಪಾಸಾದ ಠರಾವುಗಳು.

೮. ನಂ. ೩೧. ಬೋರ್ಡಿನ ಕೆಳಗಿರುವ ಯಾವತ್ತು ಧೇಡ ಶಾಲೆಗಳಿಗೆ ಪಂಚಮ ಶಾಲೆಗಳೆಂದು ಹೆಸರಿಡಬೇಕೆಂದು ಮಿ॥ ಸಾಂಬ್ರಾಣಿಯವರು ತಂದ ಠರಾವು ಸ್ಕೂಲ ಬೋರ್ಡಿನವರಿಂದ ಪಾಸಾಯಿತು.

೮. ನಂ. ೪೨. ಹುಲಕೋಟಿ ಶೇತಕೀ ಶಾಲೆಯ ಉಪಯೋಗಕ್ಕಾಗಿ ಸಾ॥ ರಾ॥ ಲಿಂಗನಗೌಡಾ ಪಾಟೀಲ, ಗೋವಿಂದಗೌಡಾ ಪಾಟೀಲ ಮತ್ತು ಹನುಮಂತಗೌಡಾ ಪಾಟೀಲ ಈ ಮೂವರು ಅನುಕ್ರಮವಾಗಿ ೨೨, ೭, ೭ ಗುಂಠೆ ಜಮೀನನ್ನು ೩ ವರ್ಷಗಳವರೆಗೆ ಬಿನ್ ಲಾವಣಿಯಿಂದ ಕೊಟ್ಟದ್ದನ್ನು ಬೋರ್ಡಿನವರು ಸಾಭಾರದಿಂದ ಸ್ವೀಕರಿಸುವರು

ಪಾಲೆಗಳ ಸುದ್ದಿ.

೧. ತಾ॥ ೨೫-೭-೨೮ನೆಯ ದಿವಸ ಅರಳಿಕಟ್ಟಿ (ತಾ॥ ಹುಬ್ಬಳ್ಳಿ) ಕನ್ನಡ ಗಂಡು ಹುಡುಗರ ಶಾಲೆಯಲ್ಲಿ ಕನ್ನಡ ಮುಲ್ಕೀ ಪರೀಕ್ಷೆಯಲ್ಲಿ ಈ ಸಾರೆ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ ಹಂಚುವ ಸಮಾರಂಭವು ಮೆ॥ ಬೂದಿಹಾಳ ಒನೆಯ ಸುಪರವಾಯಿಝರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಾಲಿಯಿಂದ ೩ ಮಂದಿ ವಿದ್ಯಾರ್ಥಿಗಳು ಪಾಸಾಗಿರುವರು.

೭. ಕಲಘಟಗಿ ತಾಲೂಕ ಪೈಕಿ ಜಿನ್ನೂರ ಕನ್ನಡ ಗಂಡು ಹುಡುಗರ ಶಾಲೆಗೆ ಶ್ರೀ. ಜಿ ರಾ. ಮಳಲಿ ಇವರೊಬ್ಬರೇ ಮಾಸ್ತರರು ಇದ್ದು, ಹುಡುಗರ ಸಂಖ್ಯೆಯು ೬೪ ಇರುವದರಿಂದ ಶಾಲೆಯ ಪಂಚರಾದಂಥ ಶ್ರೀಯುತ ಚನಬಸಪ್ಪ ಉಳವಪ್ಪ ತಾವರಗೇರಿ ಮತ್ತು ಚನ್ನಬಸನಗೌಡಾ ಮರಿಗೌಡಾ ದೊಡ್ಡಗೌಡರ ಇವರು ಪ್ರತ್ಯೇಕ ೪೫ ರೂ. ದೇಣಿಗೆಯನ್ನು ಕೊಡಲೊಪ್ಪಿ ಒಬ್ಬ ಅಸಿಸ್ಟಂಟ ಮಾಸ್ತರರನ್ನು ನೇಮಿಸುವ ಸ್ತುತ್ಯ ಯೋಜನೆಯನ್ನು ಮಾಡಿರುತ್ತಾರೆ.

ಎರಡು ಪ್ರಶ್ನೆಗಳು.

೧. ಕನ್ನಡ ಬಾಲಬೋಧಿನಿಯಲ್ಲಿ ಯಾವ ಪಾಠ ಉತ್ಕೃಷ್ಟವಾಗಿದೆ?

೭. ಕಲಿಸುವ ವಿಷಯಗಳಲ್ಲಿ ಯಾವ ವಿಷಯವು ಅತ್ಯಂತ ಮಹತ್ವದ್ದು?

ಈ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಶಿಕ್ಷಣ ತಜ್ಞರು ಉತ್ತರ ಕಳುಹಿಸಬೇಕಾಗಿ ಕೋರಿಕೆ.

—ಸಂಪಾದಕ.

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಜುಲೈ ೧೯೨೮ | ಸಂಚಿಕೆ ೪

ಸರ ಜಗದೀಶಚಂದ್ರ ಭೋಸರವರ ಶೋಧಗಳು.

ಸಾಂಪ್ರತದ ಯಾಂತ್ರಿಕ ಮತ್ತು ಶಾಸ್ತ್ರೀಯ ಶೋಧಗಳ ಯುಗದಲ್ಲಿ ನೇಕ ಪ್ರಖ್ಯಾತ ಶಾಸ್ತ್ರಜ್ಞರು ಅತ್ಯದ್ಭುತ ಶೋಧಗಳನ್ನು ಮಾಡಿ ಅಗಾಧವಾದ ುಂತ್ರಗಳನ್ನು ರಚಿಸಿ ಮಾನವ ಜ್ಞಾನಭಂಡಾರವನ್ನು ಬೆಳೆಯಿಸಿದ್ದಲ್ಲದೆ ಮಾನವ ನಿತದಲ್ಲಿ ಮಹತ್ಕ್ರಾಂತಿಯನ್ನು ಉಂಟುಮಾಡುತ್ತಿರುವರು. ಭೌತಿಕ ಾಸ್ತ್ರಜ್ಞರೇ ಈ ಯುಗದ ವೀರಪುರುಷರು. ಈ ಎಲ್ಲ ವೀರಪುರುಷರಲ್ಲಿ ನಮ್ಮ ರತಖಂಡದ ಪ್ರಖ್ಯಾತ ಶಾಸ್ತ್ರಜ್ಞರಾದ ಸರ ಜಗದೀಶಚಂದ್ರ ಭೋಸರೇ ಅಗ್ರಣಿ ಳು. ಇವರು ತಮ್ಮ ಹೊಸ ಶೋಧಗಳನ್ನೂ ಯಂತ್ರಗಳನ್ನೂ ಪ್ರಯೋಗಗ ಂದ ಸಿದ್ಧಾಂತಗೊಳಿಸಿ ಪಾಶ್ಚಮಾತ್ಯ ಶಾಸ್ತ್ರಜ್ಞರೆಲ್ಲರನ್ನು ಮೆಚ್ಚಿಸಿದ್ದಾರೆ. ವರಿಗೆ 'ಸರ್' ಎಂಬ ಪದವಿಯನ್ನು ಸರಕಾರದವರು ಇವರ ವಿದ್ವತ್ತಿಗಾಗಿಯೇ ಿಟ್ಟಿರುವರು.

ನಮ್ಮ ಭರತಖಂಡವು ಪ್ರಾಚೀನ ಕಾಲದಲ್ಲಿ ಉಪನಿಷತತೃಗಳಾದ ಋಷಿ ಳಿಂದಲೂ, ಆಯುರ್ವೇದ ಶಾಸ್ತ್ರಜ್ಞರಾದ ಚರಕಸುಶ್ರುತಾದಿಗಳಿಂದಲೂ, ರಾಮಾ ಣ ಮಹಾಭಾರತ ಗೀತಾದಿ ಕರ್ತೃಗಳಾದ ವಾಲ್ಮೀಕಿ, ವ್ಯಾಸ ಮಹರ್ಷಿಗಳಿಂ ಲೂ, ಮಾನವ ಕೋಟಿಗೆ ಮಾರ್ಗದರ್ಶಿಯಾಗಿತ್ತು. ಆದರೆ ಶಾಸ್ತ್ರಶ್ರೀರೋಹಣ ಿಯನ್ನು ಅಡರಿದ್ದ ನಮ್ಮ ದೇಶವು ಬರಬರುತ್ತ ಶುಷ್ಕವಾದಕ್ಕೆ ಮನಸೋತು ರ್ತವ್ಯ ಪರಾಙ್ಮುಖತೆಯಿಂದ ಇದೀಗ ಹಿಂದುಳಿದ ದೇಶಗಳಲ್ಲಿ ಒಂದಾಗಿದೆ. ಾಗ್ಯೂ ವೀರಪುರುಷರ ಅಭಾವವಿದೆಯೆಂದು ಹೇಳಲಾಗುವದಿಲ್ಲ, ಅಲ್ಪ

ಪ್ರಮಾಣದಲ್ಲಿಯಾದರೂ ಜಗನ್ಮಾನ್ಯರಾದ ಮಹನೀಯರು ಜನ್ಮವೆತ್ತುತ್ತ ಇ
ವರು. ಕವಿಚಕ್ರವರ್ತಿಗಳಾದ ರವೀಂದ್ರನಾಥರು, ಮಹಾತ್ಮರಾದ ಗಾಂಧಿಯ
ವರು, ಶಾಸ್ತ್ರಜ್ಞರಾದ ಬೋಸರು ಜಗತ್ತಿಗೇ ಅಧ್ಯಾಪಕರಾಗಿರುವರು. ಅದು
ರಿಂದ ನಮ್ಮ ಭರತಖಂಡವು ಮೃತಪ್ರಾಯವಾಗಿ ತೋರಿದರೂ ಈ ಮಹನೀಯ
ರಿಂದ ಸಜೀವವಾಗಿರುವದು ನಮ್ಮ ಪೂರ್ವಜರ ಅತ್ಯಗಾಧವಾದ ಕಲ್ಪನಾ
ಸಾಮರ್ಥ್ಯವು ನಮ್ಮಲ್ಲಿ ಆಗಾಗ್ಗೆ ಮಿಂಚುವದು. ಪೂರ್ವದಂತೆ ಅತ್ಯುಜ್ವಲ
ವೈಭವದಿಂದ ಇನ್ನೊಮ್ಮೆ ಜಗತ್ತಿನ ನೇತೃತ್ವವನ್ನು ಭಾರತೀಯರು ಹೊಂದು
ಹುದೆಂದು ತುಂಬಾ ಆಶೆಯದೆ. ಸರ ಜಗದೀಶಚಂದ್ರ ಬೋಸರವರಲ್ಲಿ ಪಾ
ಮಾತ್ಯರ ವಿಜ್ಞಾನವೂ, ಪೌರ್ವಾತ್ಯರ ಸಂಸ್ಕೃತಿಯೂ ಪೂರ್ಣವಶಿಯನ್ನು
ಹೊಂದಿರುವವು. ಅವರು ವನಸ್ಪತಿ ಶಾಸ್ತ್ರವನ್ನು ಜನ್ಮಾಗಿ ಅಧ್ಯಯನ ಮಾ
ತಮ್ಮ ಅವಿಶ್ರಾಂತ ಶ್ರಮದಿಂದ ಅತ್ಯಗಾಧವಾದ ಶೋಧಗಳಿಂದಲೂ, ಯಂತ್ರ
ಗಳಿಂದಲೂ ಜಗತ್ತನ್ನೇ ವಿಸ್ಮಯಗೊಳಿಸಿರುವರು

ಶಾಸ್ತ್ರಶೋಧಕ್ಕೆ ಬೇಕಾಗುವ ಗುಣವಿಶೇಷಗಳು—(೧) ಅ
ಸೂಕ್ಷ್ಮದೃಷ್ಟಿಯು ಮೊದಲು ಬೇಕು ಈ ಗುಣದಲ್ಲಿ ಭಾರತೀಯರು ಅದ್ವಿತೀ
ಯರು. ಈ ಪ್ರತಿಭಾಶಕ್ತಿಯಿಲ್ಲದೆ ಅಗೋಚರವಾದ ವಸ್ತುಗಳ ತರ್ಕವಾಗದ
(೨) ಪ್ರಯೋಗಗಳನ್ನು ಮಾಡುವ ಜಾಣತನವೂ, ದೀರ್ಘ ಪ್ರಯತ್ನವೂ ಅವ
ವಾದವು. ನಮ್ಮಲ್ಲಿ ಈ ಗುಣಗಳ ಕೊರತೆಯು ಬಹಳುಂಟು; ಆದ್ದರಿಂ
ನಾವು ಏನಾದರೊಂದು ಹೊಸ ತತ್ತ್ವವನ್ನು ಕಾಣಬಹುದು ಆದರೆ ಸತತ ಪ್ರಯ
ತ್ನದಿಂದ ಅವನ್ನು ಸಿದ್ಧಿಗೊಯ್ಯುವದಿಲ್ಲ. (೩) ಅತಿ ಸೂಕ್ಷ್ಮವಾದ ಯಂತ್ರ
ಳನ್ನೂ ಉಪಕರಣಗಳನ್ನೂ ರಚಿಸಿಕೊಳ್ಳುವ ಸಾಮರ್ಥ್ಯವು ಬೇಕು. ಮುಖ್ಯವಾ
ಈ ಮೂರು ಗುಣಗಳಿದ್ದ ಹೊರ್ತು ಶಾಸ್ತ್ರಶೋಧವು ಎರಡು ಹೆಜ್ಜೆಯನ್ನು ಸ
ಇರಲಾರದು.

ತಪ್ಪು ತಿಳುವಳಿಕೆ—ಪ್ರಾಣಿಗಳಿಗೂ, ವನಸ್ಪತಿಗಳಿಗೂ ಯಾವ ಸಾವ
ವೇ ಇಲ್ಲ. ಒಂದು ಸಜೀವ, ಇನ್ನೊಂದು ನಿರ್ಜೀವ. ಪ್ರಾಣಿಗೆ ಜ್ಞಾನೇಂ
ಯಗಳುಂಟು, ಹೃದಯವುಂಟು, ಮನಸ್ಸುಂಟು, ಮಿದುಳುಂಟು, ರುಧಿರಾಭಿಸರ
ವುಂಟು, ಶ್ವಾಸೋಚ್ಛ್ವಾಸವುಂಟು, ಸುಖದುಃಖಗಳುಂಟು. ಇನ್ನೂ ಅನೇ
ಭಾವನೆಗಳುಂಟು. ಆದರೆ ವನಸ್ಪತಿಗಳಲ್ಲಿ ಇವಾವವೂ ಇರುವದಿಲ್ಲ. ಅ
ಸ್ವೇಚ್ಛೆಯಿಂದ ಅತ್ತಿತ್ತ ಹರಿದಾಡಲಾರವು. ಆದ್ದರಿಂದ ಅವುಗಳಲ್ಲಿ ಚೈತನ್ಯ
ಇಲ್ಲ; ಇತ್ಯಾದಿ ತಪ್ಪು ತಿಳುವಳಿಕೆಯು ಅಜ್ಞರಲ್ಲಿ ಏಕೆ ಶಾಸ್ತ್ರಜ್ಞರಲ್ಲಿಗೂ ಕೂ
ಇರುವದು. ಈ ತಿಳುವಳಿಕೆಯನ್ನು ಸರ ಜಗದೀಶರು ದೂರ ಮಾಡಿರುವ
ಪ್ರಾಣಿಗಳಂತೆ ಗಿಡಬಳ್ಳಿಗಳಾದರೂ ಉಸುರಾಡಿಸುತ್ತವೆ. ಅವುಗಳಲ್ಲಿ ರಸ

ಣವುಂಟು. ಅವುಗಳಿಗೂ ಸುಖದುಃಖಗಳುಂಟು, ಸ್ನಾಯುಗಳುಂಟು, ಇಂದ್ರಿ
ಗಳುಂಟು, ಅವಕ್ಕೂ ಪ್ರಾಣವುಂಟು ಇತ್ಯಾದಿ ಶೋಧಗಳನ್ನು, ತಾವು
ತಃ ಸೃಜಿಸಿದ ಯಂತ್ರಗಳ ಸಹಾಯದಿಂದ ಪ್ರಾಧ್ಯಾಪಕರ ನಿದರ್ಶನಕ್ಕೆ ತಂದಿರು
ರು. ಪಾಶ್ಚಿಮಾತ್ಯ ದೇಶದ ಶಾಸ್ತ್ರೀಯ ಶೋಧಗಳ ಕೇಂದ್ರಸ್ಥಾನಗಳಲ್ಲೆಲ್ಲ
ಯೋಗಗಳನ್ನು ಮಾಡಿ ತೋರಿಸಿರುವರು. ಅದರಿಂದ ಈ ತಪ್ಪು ತಿಳುವಳಿಕೆಯು
ರಾಗಹತ್ತಿರುವದು. ಇವರ ಶೋಧದಿಂದ ಪ್ರಾಣಿಶಾಸ್ತ್ರದಲ್ಲಿಯೇ ಕ್ರಾಂತಿ
ಾಗುವದು.

ಸರ ಭೋಸರವರು ತಮ್ಮ ಶೋಧಗಳಿಗಾಗಿ ನಿಧಾನ ಯಂ ಕಲ್ಪನಾತೀತವಾದ
ಸ್ಮ್ರ ಯಂತ್ರಗಳನ್ನು ಸೃಜಿಸಿರುವರು. ಅವುಗಳಲ್ಲಿ ಕೆಲವೊಂದು ಇಲ್ಲಿ
ಡುವೆವು.

೧. ಮ್ಯಾಗ್ನೆಟಿಕ್ ರೇಡಿಯೋ ಮಿಟರ:—ಇದರಿಂದ ಸೂರ್ಯಕಿರಣಗಳ
ಯನ್ನು ಅಳೆಯಲು ಬರುವದಲ್ಲದೆ ವನಸ್ಪತಿಗಳು ಹೇಗೆ ಸೂರ್ಯನ ಕಿರಣ
ಂದ ಶಕ್ತಿಯನ್ನು ಸಂಗ್ರಹಿಸುವ ್ರ ಎಂಬದು ತಿಳಿಯುತ್ತದೆ.

೨. ರೇಡಿಯೋ ಗ್ರಾಫ್:—ಘಳಿಘಳಿಗ್ಗೆ ಹೆಚ್ಚುಕಡಿಮೆಯಾಗುತ್ತಿರುವ
ರ್ಯನ ಉಷ್ಣತೆಯನ್ನು ತೋರಿಸುವದು ಮತ್ತು ಅದ್ರ ಹವೆಯ ಪರಿಣಾಮ
ನ್ನು ತೋರಿಸುವದು

೩. ರಿಜೋನಂಟ ರಿಕಾರ್ಡರ್ ಃ ಈ ಯಂತ್ರವು ಒಂದು ಸೆಕಂಡಿನ
ವಿರದಲ್ಲಿ ಒಂದು ಪಾಲನ್ನು ತೋರಿಸುವದು. ಮತ್ತು ವನಸ್ಪತಿಗಳ ಅತಿ
ಸ್ಮ್ರವಾದ ಸ್ನಾಯು ಸ್ಫುರಣವನ್ನು ತಿಳಿಯುವದು. ಮತ್ತು ಅವುಗಳ ಇಂದ್ರಿ
ವ್ಯಾಪಾರವನ್ನು ತಿಳಿಯುವದು

೪. ಕಂಡಕ್ಟಿವಿಟಿ ಬ್ಯಾಲನ್ಸ್:—ಈ ಯಂತ್ರದಿಂದ ವನಸ್ಪತಿಗಳಿಗೆ ವಿಷ
ರಕ ದ್ರವ್ಯಗಳ ಇಂಜೆಕ್ಶನ್ ಕೊಟ್ಟರೆ ಅದರಿಂದ ಅವುಗಳು ನಿಮಿಷನಿಮಿಷಕ್ಕೆ
ಗೆ ನಿಸ್ತೇಜವಾಗಲಿ, ಸಸ್ತೇಜವಾಗಲಿ ಆಗುವವೆಂಬದನ್ನು ತಿಳಿಯಬಹುದು.

೫. ಇಲೆಕ್ಟ್ರಿಕ್ ಪ್ರೋಬ:—ವನಸ್ಪತಿಗಳ ರಸಾಭಿಸರಣವು ಯಾವ ನಾಳ
ಂದ ಹೇಗೆ ನಡೆದಿರುವದೆಂಬದು ಗೊತ್ತಾಗುತ್ತದೆ.

೬. ಫೋಟೋ ಸಿಂಥೆಟಿಕ್ ರಿಕಾರ್ಡರ:—ಇದರಿಂದ ಕಾರ್ಬನ್‌ವನ್ನು
ಸ್ಪತಿಗಳು ಹೇಗೆ ಸ್ವೀಕರಿಸುತ್ತವೆಂಬದು ತಿಳಿಯುವದು. ೦೦೦೦೦೧೧
ದು ಕಾರ್ಬನ್ ಸ್ವೀಕಾರವು ಇದರಿಂದ ತಿಳಿದುಬರುತ್ತದೆ ಅಂದ

ಮೇಲೆ ಈ ಯಂತ್ರವು ಎಷ್ಟು ಸೂಕ್ಷ್ಮವಾಗಿರುವದೆಂಬದು ಕಲ್ಪನೆಗೆ ಕೂಡ ಅಸ
ಧ್ಯವಾಗಿದೆ.

೭. ಮ್ಯಾಗ್ನೆಟಿಕ್ ಕೆಸೋ ಗ್ರಾಫ :—ಈ ಸೂಕ್ಷ್ಮ ಯಂತ್ರವು ವನಸ್ಪತಿ
ಗಳ ಬೆಳಿಗೆಯನ್ನು ಪ್ರತಿ ನಿಮಿಷಕ್ಕೂ ತೋರಿಸುತ್ತದೆ ಎಂಥ ಶಕ್ತಿಯುಳ್ಳ
ಮಾಯಕ್ರೋ ಸ್ಕೋಪ (ಸೂಕ್ಷ್ಮದರ್ಶಕ ಯಂತ್ರ). ಗಳಿಗೂ ಗೋಚರವಾಗಲ
ಅಸಾಧ್ಯವಾದ ಬೆಳಿಗೆಯನ್ನು ಈ ಯಂತ್ರವು ಅನಾಯಾಸವಾಗಿ ತೋರಿಸುವದ
ಇದರ ಶಕ್ತಿಯು ಅಗಾಧವಾದದ್ದದೆ. ಒಂದು ಸಣ್ಣ ಸಸಿಯು ನಮಗೆ ೧೦ ದಿವಸ
ಗಳಲ್ಲಿ ಎಷ್ಟು ಬೆಳೆಯುವದೆಂಬದು ಗೋಚರವಾಗುತ್ತದೆ. ಆದರೆ ೦೦೧
ಸೆಕಂಡಿನಲ್ಲಿ ಸ್ವಲ್ಪಾದರೂ ಬೆಳೆಯುತ್ತಿರಬಹುದು. ಇದನ್ನು ಈ ಯಂ
ತ್ರವು ೧೦ ಕೋಟಿ ಪಟ್ಟು ಮಾಡಿ ತೋರಿಸುವದರಿಂದ ಸಹಜವಾ
ಅಷ್ಟೊಂದು ಸೂಕ್ಷ್ಮವಾವ ಬೆಳವಣಿಗೆಯು ನಮಗೆ ಗೋಚರವಾಗುವದು ನಮ್ಮ
ಕೂದಲುಗಳ ಬೆಳವಣಿಗೆಯನ್ನು ಈ ಯಂತ್ರದಿಂದ ಪ್ರತಿ ನಿಮಿಷ ಕಾಣಬಹುದು

ಈ ಪ್ರಕಾರ ಜಗತ್ತಿಗೆ ವಿಸ್ಮಯದಾಯಕವಾದ ಅನೇಕ ಯಂತ್ರಗಳನ್ನ
ಸರ ಭೋಸರು ಸ್ವತಃ ಸೃಜಿಸಿದ್ದಾರೆ ಅವುಗಳ ಸಹಾಯದಿಂದ ವನಸ್ಪತಿಗ
ಅಧ್ಯಯನವನ್ನು ಮಾಡಿದ್ದಾರೆ.

ಆಶ್ಚರ್ಯದ ಸಂಗತಿ

ಸರ ಭೋಸರು ಈ ಎಲ್ಲ ಯಂತ್ರಗಳನ್ನು ಪ್ರಯೋಗ ಮಾಡಿ ತಾ
ತ್ಯರ ಸುಪ್ರಸಿದ್ಧ ಶಾಸ್ತ್ರೀಯ ಶೋಧಗಳ ಕೇಂದ್ರಸ್ಥಾನದಲ್ಲಿ ತೋರಿಸಿದ್ದಾ
ಯಂತ್ರರಚನೆಯಲ್ಲಿ ಅದ್ವಿತೀಯ ಪಂಡಿತರು ಇವುಗಳನ್ನು ಚನ್ನಾಗಿ ಪರೀಕ್ಷಿ
ತಿಳಿದುಕೊಂಡಾಗ್ಯೂ ಇವುಗಳಂಥ ಯಂತ್ರಗಳನ್ನು ಮಾಡಿಕೊಳ್ಳಲು ಇಂ
ವರೆಗೂ ಅಸಮರ್ಥರಾಗಿದ್ದಾರೆ. ಇವು ಬೇಕಾದರೆ ಭೋಸರ ಕಾರಖಾನೆಯಿಂದಲೆ
ತರಿಸಿಕೊಳ್ಳುವರು. ಯಂತ್ರರಚನಾಶಾಸ್ತ್ರದಲ್ಲಿ ಪ್ರಖ್ಯಾತರಾದ ಇಂಗ್ಲಿಷರು
ಫ್ರೆಂಚರು, ಜರ್ಮನ್ನರು, ಅಮೇರಿಕದವರು ಈ ಯಂತ್ರಗಳನ್ನು ಚನ್ನಾ
ನೋಡಿಕೊಂಡು ಮಾಡಲರಿಯರು. ಇದು ಖಂಡಿತವಾಗಿ ಆಶ್ಚರ್ಯದ ಮಾ
ಲ್ಲವೇ !

ವನಸ್ಪತಿ ವಿಚಾರ.

ವನಸ್ಪತಿಗಳಲ್ಲಿ ರಸವು ಹೇಗೆ ಹರಿದಾಡುತ್ತದೆ ? ನಮ್ಮ ದೇಹದ ಯ
ತ್ತೂ ಭಾಗಗಳಿಗೆ ರಕ್ತವನ್ನು ಪೂರೈಸುವ ಹೃದಯದಂತೆ ಗಿಡಬಳ್ಳಿಗಳಲ್ಲಿ ಇಂ

ಯವು ಉಂಟೋ? ಈ ಪ್ರಶ್ನೆಯನ್ನು ಪಾಶ್ಚಾತ್ಯ ಪಂಡಿತರು ನೂರಿನ್ನೂರು ವರ್ಷಗಳ ವರೆಗೆ ಪ್ರಯಾಸಪಟ್ಟರೂ ಕೂಡ ಯಥಾರ್ಥ ಜ್ಞಾನವು ಅವರಿಗಾಗಲಿಲ್ಲ. ಮನುಷ್ಯನ ನಾಡಿಗಳ ಸ್ಪುರಣವು ಕೈಗೆ ಹತ್ತುವದು, ಕಣ್ಣಿಗೂ ಕಾಣುವದು ಹೃದಯದ ಸ್ಪುರಣವು ಕಿವಿಗೆ ಕೇಳುವದು. ಆದರೆ ಮರಗಳಲ್ಲಿ ಹೃದಯವಿದೆಯೋ? ಅವುಗಳಿಗೆ ಸ್ಪುರಣವುಂಟೋ? ೪೫೦ ಅಡಿ ಉದ್ದ ಬೆಳೆಯುವ ನೀಲಗಿರಿ (ಯುಕ್ಯಾಲಿಪ್ಟಸ ಎಂಬ ಗಿಡದ ತುದಿಯ ಎಲೆಗಳಿಗೂ ಸಹ ಭೂಮಿಯಿಂದ ರಸವು ಹೇಗೆ ಏರುವದು? ಈ ವಿಚಾರದಲ್ಲಿ ಪಾಶ್ಚಿಮಾತ್ಯ ಪ್ರಖ್ಯಾತ ಶಾಸ್ತ್ರಜ್ಞನಾದ ಸ್ಟ್ಯಾಸ ಬರ್ಗರನೆಂಬವನು ವನಸ್ಪತಿಗಳಲ್ಲಿ ಪ್ರಾಣಿಗಳ ದೇಹದಲ್ಲಿ ಜೀವಜಂತುಗಳಿದ್ದಂತೆ ಇರುವದಿಲ್ಲವೆಂದೂ, ಏನೋ ಒಂದು ಬಗೆಯಿಂದ ರಸವು ಹರಿದಾಡುತ್ತದೆಂದೂ ಖಂಡಿತವಾಗಿ ಅಭಿಪ್ರಾಯಪಟ್ಟನು. ಕೆಲವರು ಎಲೆಗಳಿಂದ ಕೆಳಕ್ಕೆ ಒಂದು, ಬೇರುಗಳಿಂದ ಮೇಲಕ್ಕೆ ಬಂದು ಹೀಗೆ ಎರಡು ಬಗೆಯ ಶಕ್ತಿಗಳ ಪ್ರವಾಹದಿಂದ ಗಿಡಗಳ ಬೆಳವಣಿಗೆಯಾಗುತ್ತದೆಂದು ಬರೆದರು. ಇದಂತೂ ಶುದ್ಧ ತಪ್ಪು ಎಷ್ಟೋ ಗಿಡಗಳು ತುದಿ ಬೇರಿಲ್ಲದೆ ಚಿಗಿಯುವವು. ಇದರಿಂದ ಗಿಡಗಳಲ್ಲಿ ಕೇವಲ ಮಧ್ಯವಲ್ಲಿ ಉದ್ದವಾದ ರಸಪೋಷಕ ಹೃದಯ ನಾಳವಿದ್ದು, ಅದರ ಸ್ಪುರಣದಿಂದ ಅಂದರೆ ಜೀವಜಂತುಗಳಿಂದ ರಸಾಭಿಸರಣವು ಪ್ರಾಣಿಗಳ ರುಧಿರಾಭಸರಣದಂತೆ ಗಿಡಗಳ ಯಾವತ್ತೂ ಭಾಗದಲ್ಲೆಲ್ಲ ಸಂಚರಿಸುವದು. ಸರ ಜೋಸರು ಪ್ಲಾಂಟ ಫೀಲರ ಎಂಬ ಯಂತ್ರದಿಂದ ಗಿಡಗಳ ಹೃದಯಸ್ಪುರಣವನ್ನು ಕಂಡು ಹಿಡಿದಿದ್ದಾರೆ.

ಈ ಪ್ರಕಾರ ವನಸ್ಪತಿಗಳ ಗುಟ್ಟನ್ನು ತಿಳಿದು ಪಾಶ್ಚಿಮಾತ್ಯರ ನಿದರ್ಶನಕ್ಕೆ ಅವರು ಕಳೆದ ೩೦—೩೫ ವರ್ಷಗಳಿಂದ ತಂದುಕೊಡಹತ್ತಿದ್ದಾರೆ ಅವರು ಇವರ ಶೋಧಗಳನ್ನು ಬಹು ದಿವಸ ನಂಬಲಿಲ್ಲ ಈಗೀಗ ಅವರಿಗೆ ಮನವರಿಕೆಯಾಗಿದೆ.

ಇನ್ನೊಂದು ಮಹತ್ವದ ಸಂಗತಿ

ಸರ ಜೋಸರು ೧೮೯೫ರಲ್ಲಿಯೇ ತಂತಿಯ ಸಹಾಯವಿಲ್ಲದೆ ವಿದ್ಯುತ್ ಪ್ರವಾಹದಿಂದ ದೂರದಲ್ಲಿದ್ದ ಯಂತ್ರಗಳನ್ನು ನಡಿಸಿದರು. ಮತ್ತು ಲಾರ್ಡ ಕರ್ಝನ್‌ರ ಸಮಕ್ಷದಲ್ಲಿ ದೂರದಲ್ಲಿದ್ದ ಮದ್ದನ್ನು ಹಾರಿಸಿದರು ಮತ್ತು ತಮ್ಮ ಕಾರಖಾನೆಯಲ್ಲಿ ಸಿದ್ಧಪಡಿಸಿದ ಗ್ಯಾಲಿನಾರಿಸೀವರ ಎಂಬ ಯಂತ್ರದಿಂದ ತಂತಿಯಿಲ್ಲದೆ ಸುದ್ದಿಯನ್ನು ಕಳಿಸುವದನ್ನು ತೋರಿಸಿದರು. ಆದರೆ ಇವರು ತಮ್ಮ ಶೋಧಗಳನ್ನೂ ಯಂತ್ರಗಳನ್ನೂ ಪೇಟೆಂಟ ಮಾಡಿ ಇಡಲಿಲ್ಲ. ಈ ಶೋಧಗಳ ಯಶಸ್ಸು ಮತ್ತು ಲಾಭವು ಮಾರ್ಕೋನಿ ಮೊದಲಾದ ಶಾಸ್ತ್ರಜ್ಞರ ಪಾಲಿಗೆ ಬಿತ್ತು.

ಇದರಿಂದ ನಮ್ಮ ಹಿಂದುಸ್ಥಾನದಲ್ಲಿ ಶಾಸ್ತ್ರಜ್ಞರಿಗೆ ಬೆಲೆಯಿಲ್ಲವೆಂದು ತೋರುವದು ವಾಸ್ತವಾಚಾರ್ಯರುಗಳು ವಿದ್ಯಾಕರ್ಷಣಶಕ್ತಿ ಮೊದಲಾದವನ್ನು ಕಂಡು ಹಿಡಿದಿದ್ದರು ಆದರೆ ಆ ಶೋಧಗಳ ಯಶಸ್ಸು ನ್ಯೂಟನ್ನನಿಗೆ ಸಲ್ಲಿತು. ಸರ ಜಗದೀಶಚಂದ್ರರಿಗೆ ಸಲ್ಲತಕ್ಕ ಯಶಸ್ಸು ಮಾಕ್ರೋನಿಗೆ ಸಲ್ಲಿತು

ಜಗದೀಶರ ಈ ಶೋಧ ಕಿಂಚಾಗುವ ಲಾಭ

ಪ್ರಾಣಿಗಳಲ್ಲಿಯಾಗಲಿ, ವನಸ್ಪತಿಗಳಲ್ಲಿಯಾಗಲಿ ಜೀವಾತ್ಮವು ಒಂದೇ ಬಗೆಯಾಗಿರುವದು ವನಸ್ಪತಿಗಳ ಜೀವನಕ್ರಮದ ಜ್ಞಾನದಿಂದ ಪ್ರಾಣಿಶಾಸ್ತ್ರದ ಅಧ್ಯಯನಕ್ಕೆ ಹೆಚ್ಚಿ ಬಲ ಬರುವದು ಮಾದಕ ಪದಾರ್ಥಗಳಿಂದ ಪ್ರಾಣಿಗಳ ಮೇಲಿಯಾಗುವ ಪರಿಣಾಮ ವನಸ್ಪತಿಗಳ ಮೇಲೆ ಸಹ ಆಗುವದು ಇವರ ಮೇಲಿಂದ ಆಯುರ್ವೇದ ಶಾಸ್ತ್ರದಲ್ಲಿ ಮಹತ್ವದ ಸುಧಾರಣೆಯಾಗುವದು ಈಗಿನ ಪಾಶ್ಚಾತ್ಯರ ಔಷಧೋಪಚಾರಕ್ಕಿಂತ ಪೂರ್ವದ ಪೌರ್ವಾತ್ಯರ ಗಿಡಮೂಲಿಕೆಯ ಔಷಧದ ಮಹತ್ವ ತಿಳಿದುಬಂದು ಹಿತಕರವಾದ ಔಷಧೋಪಚಾರಗಳು ಪುನಃ ಬಳಕೆಯಲ್ಲಿ ಬರಬಹುದು ಅಲ್ಲದೆ ಕ್ರೇಸ್ಕೋಗ್ರಾಫ ಮೊದಲಾದ ಯಂತ್ರಗಳ ಸಹಾಯದಿಂದ ವನಸ್ಪತಿಗಳ ಬೆಳವಣಿಗೆ ಮುಂತಾದ ವಿಷಯದ ಜ್ಞಾನವಾಗಿ ಒಕ್ಕಲತನದಲ್ಲಿ ಕ್ರಾಂತಿಕಾರಕ ಸುಧಾರಣೆಗಳಾಗಬಹುದು ಕೆಲವು ದಿವಸಗಳ ನಂತರ ಸರ ಜೋಸರವರ ಶೋಧಗಳ ಮೂಲಕ ಜಗತ್ತಿನ ಜೀವನಕ್ರಮವೇ ವಿಪರೀತವಾಗುವದರಲ್ಲಿ ಸಂದೇಹವಿಲ್ಲ ಇಂಥ ಮಹರ್ಷಿಗಳನ್ನು ಹೆತ್ತ ತಾಯಿಗೆ ವಂದನೆ

—ಸಂಪಾದಕ

ಪ್ರಾಥಮಿಕ ಶಾಲೆಗಳಲ್ಲಿ ಒತ್ತಾಯದ ಶಾರೀರಿಕ ಶಿಕ್ಷಣ.

ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಶರೀರಸಂಪತ್ತು ಅವಶ್ಯವಾವದ್ದಿರುತ್ತದೆ. ಅದನ್ನು ಸಂಪಾದಿಸಿಕೊಳ್ಳಲಿಕ್ಕೆ ಎಲ್ಲರೂ ಯತ್ನ ಮಾಡಬೇಕು. ಬುದ್ಧಿ ಸಾಮರ್ಥ್ಯವನ್ನು ಬಾಲ್ಯತ್ವದಲ್ಲಿ ವಿಕಾಶಗೊಳಿಸಲು ಯಾವ ರೀತಿ ಪ್ರಯತ್ನ ಬಡುತ್ತೀವೆಯೋ, ಅದರಂತೆ ಶರೀರಸಂಪತ್ತನ್ನಾದರೂ ಬಾಲ್ಯತ್ವದಲ್ಲಿಯೆ ಸಂಪಾದಿಸಿಕೊಳ್ಳಲಿಕ್ಕೆ ಯತ್ನ ಮಾಡುವದು ಯೋಗ್ಯವಾದದ್ದು. ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಜನೆಯ ಬಗ್ಗೆ ಗುರುಶಿಷ್ಯರು ಶಾರೀರ

ಶಿಕ್ಷಣದ ಬಗ್ಗೆ ಯತ್ನ ಮಾಡುವಂತೆ ಕಂಡು ಬರುವದಿಲ್ಲ. ಮೇಲಧಿಕಾರಿಗಳು ವಿಶೇಷವಾಗಿ ಇದರ ಕಡೆಗೆ ಲಕ್ಷಗೊಡದ್ದರಿಂದ ಗುರುಶಿಷ್ಯೋಭಯತರೂ ಅಲಕ್ಷ ಮಾಡುತ್ತಿರುವರು. ಪರೀಕ್ಷೆಯ ದಿವಸಗಳು ಸಮೀಪಕ್ಕೆ ಬಂದಾಗ್ಗೆ ಎಷ್ಟೋ ವಿದ್ಯಾರ್ಥಿಗಳು ಬೇನೆ ಬಿದ್ದು ಇಡೀ ವರ್ಷದ ಅಭ್ಯಾಸದ ದುಡಿತವನ್ನು ನಿರರ್ಥಕ ಮಾಡಿಕೊಂಡ ಉದಾಹರಣೆಗಳನ್ನು ಎಷ್ಟೋ ನೋಡಬಹುದು. ಇದಕ್ಕೆ ಶಾಲೆಯಲ್ಲಿ ದಿನಾಲು ತಕ್ಕ ವ್ಯಾಯಾಮವನ್ನು ಮಾಡಿ ಶರೀರವನ್ನು ನಿರೋಗಿಯಾಗಿ ಇಟ್ಟುಕೊಳ್ಳದಿದ್ದದ್ದೇ ಕಾರಣವೆಂದು ತಿಳಿಯುವದು.

ಶರೀರವನ್ನು ಬಲಪಡಿಸದೆ ಮುಂದೆ ಹಾಗೆಯೇ ಹೆಚ್ಚಿನ ಅಭ್ಯಾಸ ಮಾಡುತ್ತ ನಡೆದರೆ ಮಿದುಳಿಗೆ ಹೆಚ್ಚು ಆಯಾಸವಾಗುವದು. ಅಶಕ್ತರಿಂದ ಯಾವ ಬಗೆಯ ಪರಿಶ್ರಮವೂ ಸರಿಯಾಗಿ ಆಗುವದಿಲ್ಲ. ಈಗಿನ ಎಷ್ಟೋ ಪದವೀಧರರ ದೇಹಪ್ರಕೃತಿಯನ್ನು ನೋಡಿದರೆ ಸಾಕು. ಅವರ ಆಹಾರ ವಿಹಾರಗಳೂ, ಮುಖಕಾಂತಿಯೂ, ಮೈಕಸುವೂ, ಇತ್ಯಾದಿ ನಿಸ್ಸತ್ವವಾದವುಗಳಿದ್ದು ನೋಡುವವರು ಕನಿಕರಪಡುವಂತೆ ಇರುವರು. ಇದು ರಾಷ್ಟ್ರದ ಅವನತಿಯ ಆರಂಭವೆಂದು ಹೇಳಬೇಕಾಗುವದು. ಪೂರ್ವಜರಂತೆ ಬ್ರಹ್ಮಚರ್ಯಾವಸ್ಥೆಯಲ್ಲಿಯೇ ವಿದ್ಯಾಭ್ಯಾಸದ ಜೊತೆಗೆ ಪ್ರಾಣಾಯಾಮ, ನಮಸ್ಕಾರ ಮೊದಲಾದವುಗಳ ಮೂಲಕ ಶರೀರಸಂಪತ್ತನ್ನು ದೊರಕಿಸಿಕೊಳ್ಳುತ್ತ ಬಂದಿದ್ದರೆ ಈಗಿನ ನಿಸ್ತೇಜಾವಸ್ಥೆಯು ಒದಗುತ್ತಿರಲಿಲ್ಲ. ಇದರ ಅಭಾವದ ಮೂಲಕವಾಗಿ ಎಷ್ಟೋ ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸಕ್ರಮವನ್ನು ಬಿಟ್ಟು ಮನೆಗೆ ಬರಬೇಕಾಗುತ್ತದೆ. ಇಂಥ ದೇಹಸ್ಥಿತಿಯುಳ್ಳವರ ಸಂತತಿಯಾದರೂ ಹ್ಯಾಗೆ ಸಶಕ್ತವಾದದ್ದಿರಬೇಕು! ನಮ್ಮ ದೇಶದಲ್ಲಿ ಶಿಶುಗಳ ಮರಣದ ಪ್ರಮಾಣ ಮಿತಿಮೀರಿರುವದಕ್ಕೆ ಇದೊಂದು ಕಾರಣವು. ಬಾಲ್ಯತ್ವದಿಂದಲೇ ಈ ಶಾರೀರಕ ಶಿಕ್ಷಣವನ್ನು ಹೊಂದಿ ಸದೃಢನಿದ್ದವನು ತನ್ನ ಹೆಚ್ಚಿನ ಅಭ್ಯಾಸಕ್ರಮವನ್ನು ಸಾಗಿಸಿಕೊಳ್ಳುವನಲ್ಲದೆ ಉತ್ತಮ ಸಶಕ್ತ ಸಂತತಿಯನ್ನೂ ಪಡೆಯುವನು. ಅಂದ ಮೇಲೆ ಬಾಲ್ಯತ್ವದಲ್ಲಿ ಶರೀರವನ್ನು ಬಲಪಡಿಸುವದು ಅತ್ಯವಶ್ಯವಿದ್ದು ಅದಕ್ಕೆ ತಕ್ಕ ಕಾಲವೂ, ತಕ್ಕ ಸ್ಥಳವೂ, ಶಾಲೆಯೇ ಆಗಿರುವದು. ಆಗ್ಗೆ ದುರ್ಲಕ್ಷ್ಯ ಮಾಡುವದರಿಂದ ಮುಂದಾಗುವ ಅನರ್ಥದ ಕಲ್ಪನೆಯು ಬಾಲಕರಿಗಿರುವದಿಲ್ಲ. ಕಾರಣ ಇವನ್ನು ಪಾಲಕರೂ, ಗುರುಗಳೂ, ತಿಳಿದು ನೋಡಿ ಬಾಲಕರ ಶರೀರಸಂಪತ್ತಿನ ಕಡೆಗೆ ಲಕ್ಷ ಕೊಡಬೇಕು. ಕೆಲವರು ಉಪಕರಣ ಮುಂತಾದ ಅನುಕೂಲತೆಗಳಿಲ್ಲವೆಂದು ಅನ್ನಬಹುದು. ಆದರೂ ನಮಸ್ಕಾರ, ಪ್ರಾಣಾಯಾಮ, ಆಟ ಮೊದಲಾದವುಗಳಿಂದ ಶಿಕ್ಷಣವನ್ನು ಕೊಟ್ಟು ಈ ನಮ್ಮ ಧ್ಯೇಯವನ್ನು ಸಾಧಿಸಬಹುದು. ಇದಕ್ಕೆ ಮುಖ್ಯವಾಗಿ ಗುರುಗಳು ಸಶಕ್ತರೂ, ಉತ್ಸಾಹಿಗಳೂ ಇರಬೇಕಾಗುತ್ತದೆಂಬದು ನಿಜವು. ಕೇವಲ ಅನುಕೂಲತೆಗಳಿಲ್ಲವೆಂದು ಅನ್ನುತ್ತ ಕೂಡ್ರುವದು ಎಷ್ಟು

ಮಾತ್ರವೂ ಸರಿಯಲ್ಲ. ಇದ್ದದರಲ್ಲಿಯೇ ಅನುಕೂಲ ಮಾಡಿಕೊಂಡು ಈ ಶಿಕ್ಷಣವನ್ನು ಕೊಡುತ್ತ ಹೋದರೆ ವಿದ್ಯಾರ್ಥಿಗಳ ಮನಸ್ಸು ಉತ್ತಮ ರೀತಿಯಿಂದ ವಿಷಯ ಗ್ರಹಣಕ್ಕೆ ತಕ್ಕದ್ದಾಗುತ್ತದೆ. ಮತ್ತು ವಿದ್ಯಾರ್ಥಿಗಳ ಮುಖಕಾಂತಿಯೂ, ಪ್ಯೆಕಸುವೂ, ಹೆಚ್ಚಾಗುವವು. ಸಧ್ಯಕ್ಕೆ ಈ ಶಾರೀರಕ ಶಿಕ್ಷಣದ ಅಭಾವದ ಮೂಲಕ ನಮ್ಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಹೇಳಿದ ವಿಷಯಗಳನ್ನು ತಿಳಕೊಳ್ಳುವಷ್ಟು ಮಾನಸಿಕ ಶಕ್ತಿಯು ಇರುವದಿಲ್ಲ. ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳ ವಯಸ್ಸಿನ ಮಾನದಂತೆ ಅವರ ಮಾನಸಿಕ, ಶಾರೀರಕ, ಶಕ್ತಿಗಳು ಬಲಪಡದೆ ಇದ್ದದ್ದು ಪ್ರತಿಯೊಂದು ಶಾಲೆಯವರಿಗೆ ತಿಳಿದ ಮಾತಾಗಿರುತ್ತದೆ. ಇವರ ಅಂತಿಮ ಪರಿಣಾಮವು ತಿಳಿದೂ ತಿಳಿದೂ ಉಭಯತರೂ ಇದನ್ನು ದುರ್ಲಕ್ಷಿಸುವದು ಸರಿಯಾದದ್ದಲ್ಲ.

ಇನ್ನೊಂದು ವಿಚಾರದ ಸಂಗತಿ ಏನಂದರೆ:—ಪ್ರಾಥಮಿಕ ಶಾಲೆಗಳಲ್ಲಿ ತೆಗೆದುಕೊಳ್ಳತಕ್ಕ ವಿದ್ಯಾರ್ಥಿಗಳ ವಯಸ್ಸು (೪) ಕ್ಕೆ ಮೀರಿರಬೇಕೆಂದು ನಿರ್ಬಂಧವಿದೆ ಆ ಕಾಲಕ್ಕೆ ಹುಡುಗರಿಗೆ ಅನುಕರಣ ಶಕ್ತಿಯ ಹೊರತು ಬೇರೆ ಯಾವ ಶಕ್ತಿಗಳೂ ಬಲಪಡುವದಕ್ಕೆ ಅವಕಾಶವಿರುವದಿಲ್ಲ. ಇಂಥಾದ್ದರಲ್ಲಿ ಅನೇಕ ವಿಷಯಗಳನ್ನು ಕಲಿಸುತ್ತ ವಿಚಾರ ಶಕ್ತಿಯನ್ನು ಬಲಪಡಿಸುವದು ಎಷ್ಟು ಮಾತ್ರಕ್ಕೂ ಸರಿಬೀಳಬಾರದು. ಆ ಕಾಲಕ್ಕೆ ವಿದ್ಯಾರ್ಥಿಗಳನ್ನು ನಿರ್ಬಂಧಪಡಿಸದೆ ಸ್ವಚ್ಛಂದದಿಂದ ಮನೆಯಲ್ಲಿಯೇ ಇಟ್ಟು ಶಕ್ಯವಿದ್ದರೆ ಕ್ರಮೇಣ ಅನುಕರಣ ಶಕ್ತಿಯ ಬೆಳವಣಿಗೆಗೆ ಅನುಕೂಲ ಮಾಡಿ ಕೊಡಬಹುದು. ನಮ್ಮ ದೇಶದ ಕಾಲಮಾನಕ್ಕನುಸರಿಸಿ ಈಗಿನ ಒತ್ತಾಯದ ಶಿಕ್ಷಣದಲ್ಲಿ ಸಹ ಈ ವಯೋಮರ್ಯಾದೆಯನ್ನು (೭) ರಿಂದ (೧೨) ರ ವರೆಗೆ ನಿರ್ಬಂಧಪಡಿಸಿರುತ್ತಾರೆಂದು ಕಾಣುತ್ತದೆ. 'ಗರ್ಭಾದಷ್ಟ ವರ್ಷಾಣಿ" ಎಂಬ ಧರ್ಮಶಾಸ್ತ್ರ ವಚನದಿಂದಲಾದರೂ ಪೂರ್ವದವರ ವಿದ್ಯಾಭ್ಯಾಸದ ಆರಂಭವು (೮) ನೇ ವರ್ಷವೆಂದೇ ಸಿದ್ಧವಾಗುತ್ತದೆ. ಅಂದರೆ ಬಾಲಕರ ಶರೀರಸಾಮರ್ಥ್ಯವು ಬೆಳೆಯುತ್ತ ಹೋದಂತೆ ಮಾನಸಿಕ ಸಾಮರ್ಥ್ಯವು ಬೆಳವಣಿಗೆ ಹೊಂದಲಿಕ್ಕೆ ಸಹಾಯವಾಗುವದು. ವಿದ್ಯಾರ್ಥಿಗಳು ಪ್ರಾ. ಶಾಲೆಗಳಲ್ಲಿಯ ಶಿಕ್ಷಣವನ್ನು ಮುಗಿಸಿ ಶಾಲೆಯನ್ನು ಬಿಟ್ಟರೆಂದರೆ, ಅವರು ತಮ್ಮ ಮನೆಯ ಕೆಲಸಕ್ಕೆ ಹೋಗುವರು. ಆಗ ಅವರ ದೇಹಸ್ಥಿತಿಯು ಸಶಕ್ತವಾದದ್ದಿರಬೇಕೆಂಬುವದು ಅವಶ್ಯವು

ಇನ್ನು ಈ ಶಾರೀರಕ ಶಿಕ್ಷಣವನ್ನು ಪ್ರಾ. ಶಾಲೆಯಲ್ಲಿ ಹ್ಯಾಗೆ ಹ್ಯಾಗೆ ಕೊಡಬೇಕೆಂಬದನ್ನು ವಿಚಾರಿಸುವಾ.

ಶಾಲೆಯ ಇಯತ್ತೆಗಳಲ್ಲಿ ಕೆಳಗಿನ ಪ್ರಾಥಮಿಕ ವರ್ಗಗಳು, ಮೇಲಿನ ಪ್ರಾಥಮಿಕ ವರ್ಗಗಳು ಹೀಗೆ (೨) ಭಾಗಗಳನ್ನು ಮಾಡಿಕೊಳ್ಳಬೇಕು. ಬಳಿ

ಕೆಳಗಿನ ಪ್ರಾಥಮಿಕ ವರ್ಗದಲ್ಲಿ ಬಿನ್, ೧ನೇ ಇಯತ್ತೆಗಳ (೧) ಭಾಗ ಹಾಗು ೨, ೩, ೪ನೇ ಇಯತ್ತೆಗಳ ಒಂದು ಭಾಗ ಈ ಪ್ರಕಾರ ಎರಡು ಭಾಗಗಳನ್ನು ಮಾಡಿಕೊಂಡು ಮೊದಲನೇ ಭಾಗದವರಿಗೆ ಸಾಭಿನಯ ಗೀತೆಯಿಂದಲೇ ಈ ವಿಷಯವನ್ನು ಸಾಗಿಸಬೇಕು ಆ ಕಾಲಕ್ಕೆ ವ್ಯವಸ್ಥೆ, ಓರಣ, ಮೊದಲಾದ ಗುಣಗಳನ್ನು ಬೆಳೆಸುವದರ ಕಡೆಗೂ ಲಕ್ಷಕೊಡಬೇಕು ಈಗಿನ ಕೃಮಿಕ ವುಸ್ತಕಗಳಲ್ಲಿ ಇದ್ದವುಗಳಲ್ಲದೆ ಇನ್ನೂ ಹೆಚ್ಚಾಗಿ ಕಲ್ಪಿಸಿಕೊಂಡು ಅವಯವಗಳ ಚಲನವಲನಗಳು ಹೆಚ್ಚಾಗುವ ಹಾಗೆ ಈ ಶಿಕ್ಷಣವನ್ನು ಸಾಗಿಸಬೇಕು ಇನ್ನು ಎರಡನೇ ಭಾಗದವರಿಗೆ ಕೂಡ್ರುವದೂ, ಏಳುವದೂ, ಓಡುವದೂ, ಹಾಗು ಕೈಕಾಲುಗಳನ್ನು ಹಿಂಮುಂದೆ ಮಾಡುವದೂ ಇತ್ಯಾದಿಗಳಿಂದ ಕೂಡಿದ ಕವಾಯತು ಮಾಡಿಸುವದು ಶಕ್ಯವಿದ್ದಮಟ್ಟಿಗೆ ವಿದ್ಯಾರ್ಥಿಗಳಿಗೆ ಮನರಂಜನೆಯಾಗುವಂತೆ ಲೇಜೀಮದ ಆಟಗಳನ್ನೂ, ಕಟ್ಟಿಗೆಯ ಡಂಬೆಲ್ಸುಗಳ ಡ್ರಿಲ್‌ನ್ನೂ ಮಾ. ಸಲಿಕ್ಕೆ ಅಡ್ಡಿಯಿಲ್ಲ. ಸ್ಕೌಟದ ಆಟಗಳನ್ನಾದರೂ ಈ ವಿದ್ಯಾರ್ಥಿಗಳ ಕಡೆಯಿಂದ ಆಡಿಸಬೇಕು ದಂಡತಿರುಗಿಸುವದು ಈಗ ಎಲ್ಲೆಡೆಯಲ್ಲಿ ಪ್ರಚಾರದಲ್ಲಿ ಬರಹತ್ತಿದೆ

ಮೇಲಿನ ಪ್ರಾಥಮಿಕ ವರ್ಗದ ೫, ೬, ೭, ನೇ ಇಯತ್ತೆಯವರಿಗೆ ಪೋಲೀಸ ಪದ್ಧತಿಯ ಲಷ್ಕರೀ ಕವಾಯಿತನ್ನು ಇಂಗ್ಲಿಷ ಶಬ್ದಗಳಿಂದಲೇ ಹೇಳಿ ಎಲ್ಲ ಎಕ್ಸರ್ಸಾಯಿಜಗಳನ್ನು ಮಾಡಿಸತಕ್ಕದ್ದು ಇದುಅಲ್ಲದೆ ಅವರವರ ವಯಸ್ಸಿಗನುಗುಣವಾಗಿ ನಾಲ್ಕೈದು ಪ್ರಕಾರಗಳ ಉಡಾಬೈಸಿ, ಸಾಮು, ಮೊದಲಾದವುಗಳನ್ನು ಕಲಿಸಬೇಕು ಹಾಗು ಜೋಡಿಯ (ಲೋಡು) ಕೈಗಳನ್ನು ೫, ೬, ೭, ನೇ ಇಯತ್ತೆಯವರಿಗೆ ಕ್ರಮೇಣ ಹೆಚ್ಚು ಹೆಚ್ಚು ಮಾಡಿಸುತ್ತ ಹೋಗಬೇಕು, ಇದರಂತೆ ಮಲಖಂಬದಮೇಲಿನ ಕೆಲಸಗಳನ್ನಾದರೂ (ಸಾದಾ ಪೇಚು; ಬಗಲಿ, ಉಲಟಿಬಗಲಿ, ನಾಗಪೇಚು,) ಕ್ರಮೇಣ ಅವರವರ ಯೋಗ್ಯತೆಯಂತೆ ಮಾಡಿಸುತ್ತ ಹೋಗಬೇಕು ಇದರಂತೆ ಪ್ಯಾರ್ಲಲ್ ಬಾರ, ಹಾರಿಜಂಟ್ಲ ಬಾರ, ಇವುಗಳಕೆಲಸಗಳನ್ನಾದರೂ ವಿದ್ಯಾರ್ಥಿಗಳಿಂದ ಕ್ರಮ ಕ್ರಮವಾಗಿ ನೀಗುವಷ್ಟು ಮಾಡಿಸುವದು ವಿಹಿತವು.

ಬಡೋದೆಯ ಪ್ರೊಫೆಸರ ಮಾಣಿಕಪ್ರಭು ಇವರ ಸಾಮುತಗಯಿಸುವ ಪದ್ಧತಿಯು ಹೇಳತಕ್ಕಂಥಾದ್ದಿರುತ್ತದೆ ಇದರಿಂದ ಯಾವ ಅವಯವವನ್ನಾದರೂ ಬಲಪಡಿಸಲಿಕ್ಕೆ ಬರುತ್ತದೆ ಹಾಗು ಪ್ರಸಂಗ ವಿಶೇಷದಲ್ಲಿ ಶರೀರದ ಎಲ್ಲ ಶಕ್ತಿಯನ್ನು ಒಂದೇ ಕಡೆಗೆ ಕೇಂದ್ರೀಕರಿಸಿಕೊಳ್ಳಲಿಕ್ಕೆ ಬರುತ್ತದೆ. ಇದನ್ನು ನಮ್ಮ ಶಾಲೆಗಳಮೇಲಿನ ವರ್ಗದವರಿಗೆ ಕಲಿಸಲಿಕ್ಕೆ ಅಡ್ಡಿಯಿಲ್ಲ ಇವಲ್ಲದೆ ತಿಳ್ಳಿ, ಖೊ, ಚಂಡಾಡುವದು, ಕ್ರಿಕೆಟ್ ಫುಟ್‌ಬಾಲ್ ಇತ್ಯಾದಿ ಆಟಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಆಡಿಸಲಿಕ್ಕೆ ಏನೂ ಆತಂಕವಿಲ್ಲ ಇವುಗಳಿಗೆ ಹೆಚ್ಚಿನ ಉಪಕರಣ

ಗಳೇನೂ ಬೇಕಾಗುವದಿಲ್ಲ. ಅನುಕೂಲತೆಯ ಮೇರೆಗೆ ದಾಂಡಪಟ್ಟೆಗಳನ್ನೂ ಲಾಠಿಗಳನ್ನೂ, ತಿರುವಲಿಕ್ಕೆ ಕಲಿಸಬಹುದು ಹಾಗು ಎತ್ತರ ಜಿಗಿಯುವದೂ, ಉದ್ದಹಾರುವದೂ, ಒಜ್ಜೆಯನ್ನು ಎತ್ತುವದೂ, ಓಡುವದೂ, ಇತ್ಯಾದಿಗಳನ್ನು ಅವರಿಂದ ಮಾಡಿಸಿ ಮೇಲಿಂದಮೇಲೆ ಇಂಥ ಆಟಗಳ ಶರ್ಯತ್ತುಗಳನ್ನು (ಮ್ಯಾಚ್) ಮಾಡಿಸಿ ಉತ್ತೇಜನಾರ್ಥವಾಗಿ ಇನಾಮು ವಗ್ಯೆರೆ ಕೊಡುತ್ತಾ ಹೋಗುವದು ಇದಕ್ಕೆ ಸಹಾಯವಾಗಿರುತ್ತದೆ. ಶಕ್ಯವಿದ್ದಲ್ಲಿ ಈಸುವದನ್ನಾದರೂ ಗುರುಗಳು ಕಲಿಸಬಹುದು. ಕುಸ್ತೀ ಆಡಿಸುವದಾದರೂ ಒಂದು ಪ್ರಕಾರದ ಮೇಲಾಟ ಹುಟ್ಟಿಸುವ ಅಂಗಸಾಧನೆಯ ಆಟವೇ ಸರಿ

ಮೆಲೆ ಹೇಳಿದ ಎಲ್ಲ ಕೆಲಸಗಳನ್ನು ವ್ರಾಥಮಿಕ ಶಾಲೆಗಳಲ್ಲಿ ಮಾಡಿಸುವದರಿಂದ ಇಷ್ಟಕ್ಕೇ ಶಾಲೆಯನ್ನು ಬಿಟ್ಟರೂ ಸಹ ಶರೀರವನ್ನು ಸಶಕ್ತ ಇಟ್ಟುಕೊಳ್ಳಲಿಕ್ಕೆ ಅನುಕೂಲವಾಗುವದು. ಈಗ್ಗೆ ಹಾಯಸ್ಕೂಲ, ಕಾಲೇಜುಗಳಲ್ಲಿ ಸರಕಾರದವರು ಈ ಶಿಕ್ಷಣಕ್ಕಾಗಿ ಪ್ರತ್ಯೇಕ ಒಬ್ಬ ಮಾಸ್ತರರನ್ನು ಇಟ್ಟಿರುವರು. ಹೀಗಿದ್ದು ವರ್ಷದಲ್ಲಿ ಒಮ್ಮೆಯಾದರೂ ಅವರ ಮೇರೆಯನ್ನ ಸಹ ಕಾಣದ ಎಷ್ಟೋ ವಿದ್ಯಾರ್ಥಿಗಳನ್ನು ಕಾಣಬಹುದು. ಟ್ರೇನಿಂಗಕಾಲೇಜ, ಸಬ್ಬ ಇನಸ್ಪೆಕ್ಟರ ಕಾಲೇಜ, ಮೊದಲಾದವುಗಳಲ್ಲಿ ತಾಲೀಮುದ ಬಗ್ಗೆ ಕಂಪಲ್ಸರಿ (ಒತ್ತಾಯ) ಇರುವದರಿಂದ ಅದರಲ್ಲಿ ಪಾಸಾಗಿ ಗುಣಗಳನ್ನು ದೊರಕಿಸದ ಹೊರತು ಮುಂದಿನ ವಿಷಯಗಳಲ್ಲಿ ಪಾಸಾಗಿ ಉಪಯೋಗವಾಗಲಾರದು. ಕಾರಣ ಈ ವಿಷಯದ ಬಗ್ಗೆ ವಾರ್ಷಿಕ ಪರೀಕ್ಷೆಯಲ್ಲಿ ಇಂತಿಷ್ಟು ಗುಣಗಳು ಕಾದಿಡಲ್ಪಟ್ಟಿವೆ ಎಂದು ಗೊತ್ತಾದರೆ ಮಾತ್ರ ಎಲ್ಲರೂ ಇದರ ಕಡೆಗೆ ಲಕ್ಷ ಕೊಡುವರು. ರೋಗಿಗೆ ಒತ್ತಾಯದಿಂದ ಔಷಧಹಾಕಿದಂತೆ ಈ ಚಟವನ್ನು ಬಾಲಕರಿಗೆ ಹಚ್ಚಬೇಕಾದರೆ ಪ್ರಾಥಮಿಕ ಶಾಲೆಗಳಲ್ಲಿಯೂ ಕೂಡ ವಾರ್ಷಿಕ ಪರೀಕ್ಷಾಧಿಕಾರಿಗಳು ಇದರ ಕಡೆಗೆ ದುರ್ಲಕ್ಷ್ಯ ಮಾಡದೆ ಈ ಬಗ್ಗೆ ಗುಣಗಳನ್ನು ತುಂಬಿಯೇ ಕ್ಲಾಸ ರಿಝಲ್ಟ ಮಾಡುತ್ತ ಹೋಗಬೇಕು. ಅಂದರೆ ಎಲ್ಲರೂ ಇದರ ಕಡೆಗೆ ಹೆಚ್ಚು ಎಚ್ಚರಪಡುವರು. ಇದರಿಂದ ಹುಡುಗರ ದೇಹಸ್ಥಿತಿಯು ಸುಧಾರಿಸಿ ಸ್ವಾವಲಂಬನ ಗುಣವು ಪ್ರಬಲವಾಗುವದು. (ಈಗಿನವರಲ್ಲಿ ತಮ್ಮ ಹುಡುಗರು ಪಾಸಾಗಲಿ, ನೌಕರಿಯನ್ನು ಹಿಡಿಯಲಿ, ಎಂಬದಿಷ್ಟೇ ಕಲ್ಪನೆ ಇರುವದು. ಇಂಥವರು ಹುಡುಗರು ಕೇವಲ ಲಠ್ಯಮುಖ್ಯಾಗಿ ಕೋಣನಂತೆ ಬೆಳೆದರೆ ಏನು? ಎಂಬ ಭ್ರಾಮಕ ಕಲ್ಪನೆಗೆ ಆಸ್ಪದ ಕೊಡುವರು. ಈ ತರದ ವಿಚಾರಗಳು ಸರಿಯಾದವುಗಳಲ್ಲವು).

ಈಗಿನ ಪರಿಸ್ಥಿತಿಯ ಒಕ್ಕಲತನದ ಶಿಕ್ಷಣಕ್ಕೆ ಶರೀರ ಸಾಮರ್ಥ್ಯವು ಅತ್ಯವಶ್ಯವಾಗಿ ಬೇಕಾಗುತ್ತದೆ. ಯಾಕಂದರೆ ಇತರ ಶಿಕ್ಷಣದಂತೆ ಈ ಶಿಕ್ಷಣವು ಒಂದೇ ಕಡೆಗೆ ಕುಳಿತು ಓದಿ ವಿಚಾರ ಮಾಡಿ ಕಲಿಯತಕ್ಕದ್ದಿರುವದಿಲ್ಲ. ಮೇಲಿಂದ

ಮೇಲೆ ಭೂಮಿಯಲ್ಲಿ ಹೋಗಿ ಪ್ರತ್ಯಕ್ಷವಾಗಿ ಸ್ವಂತ ಕೈಮುಟ್ಟಿ ಪ್ರಯೋಗ ಮಾಡ ಬೇಕಾಗುತ್ತದೆ. ಅಶಕ್ತನಿದ್ದವನಿಂದ ಯಾವ ಕಾರ್ಯಗಳೂ ಆಗುವದಿಲ್ಲ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಕ ಶಿಕ್ಷಣವು ಅವಶ್ಯವಾಗಿರತಕ್ಕದ್ದೆಂದು ಸಿದ್ಧವಾಗುತ್ತದೆ. ಈಗ ಇದರ ಕೊರತೆಯಿದ್ದದ್ದಕ್ಕಾಗಿ ಈಗಿನ ಪ್ರಜೆಗಳೂ, ಈಗಿನ ವಿದ್ಯಾರ್ಥಿಗಳೂ ಕೂಡಿಯೇ ಅಶಕ್ತರೂ, ನಿಸ್ತೇಜವುಳ್ಳವರೂ, ಆಗಿರುವರು. ಕಾರಣ ಈ ಶಾರೀರಕ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿ ಒತ್ತಾಯದ ಶಿಕ್ಷಣ ವನ್ನಾಗಿ ಮಾಡಬೇಕು, ಅಂದರೆ ಪ್ರತಿಯೊಬ್ಬನು ತನ್ನ ನಿತ್ಯ ನೈಮಿತ್ತಿಕ, ಧಾರ್ಮಿಕ ಕಾರ್ಯಗಳನ್ನು ಮಾಡಲು ಶಕ್ತನಾಗಿ ತನ್ನ ಅತ್ಯೋನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಮನೆಯಲ್ಲಿ ಈ ಶಿಕ್ಷಣದ ವಿಷಯಕ್ಕೆ ಪಾಲಕರು ಲಕ್ಷಗೊಡುವದಿಲ್ಲವೆಂಬದು ದಿನಾಲು ಕಂಡದ್ದೇ ಅದೆ, ಈ ಬಗ್ಗೆ ಅವರಿಗೆ ಹೆಚ್ಚಿನ ದೋಷ ಕೊಡಲಾರೆವು. ಯಾವದೊಂದು ಕ್ಲಾಸಿನ ವಿದ್ಯಾರ್ಥಿಗಳು ಇಂತಿಷ್ಟು ಅಂಗಸಾಧನೆಯ ಕೆಲಸಗಳನ್ನು ಮಾಡಿ ತೋರಿಸದ ಹೊರ್ತು ಅವರು ಮೇಲಿನ ಕ್ಲಾಸಿಗೆ ಹಾಕಲಿಕ್ಕೆ ತಕ್ಕವರಾಗುವದಿಲ್ಲ ಎಂಬದಾಗಿ ನಿರ್ಬಂಧವಿರಬೇಕು. ಅಂದರೆ ನಮ್ಮ ಉದ್ದೇಶವು ಸಾಧಿಸುವದು. ಈ ಮಾತಿಗೆ ಗುರುಗಳ ನಿರ್ಬಂಧ ವಿದ್ದರೆ ಮಾತ್ರ ವಿದ್ಯಾರ್ಥಿಗಳು ಇದರ ಕಡೆಗೆ ಹಣಿಕಿ ಹಾಕುವರು, ವರಿಷ್ಠರು ಲಕ್ಷ ಕೊಡುತ್ತಿದ್ದರೆ ಗುರುಗಳಾದರೂ ಇದರ ಕಡೆಗೆ ಲಕ್ಷ ಕೊಡುವರು.

ಈಗೀಗ ಈ ಶಾರೀರಕ ಶಿಕ್ಷಣವು ಅವಶ್ಯವೆಂಬುದು ಪ್ರತಿಯೊಬ್ಬ ಸುಶಿಕ್ಷಿತರಿಗೆ ತಿಳಿಯಹತ್ತಿದೆ ಅಂತಲೇ ಅಲ್ಲಲ್ಲಿ ವ್ಯಾಯಾಮ ಶಾಲೆಗಳು ಉತ್ಪನ್ನವಾಗಹತ್ತಿವೆ ಎಷ್ಟೋ ಸ್ಥಾನಿಕ ಸಂಸ್ಥೆಗಳವರು ಹಣ, ಸ್ಥಳ ಮುಂತಾದ ಅನುಕೂಲತೆಗಳನ್ನು ಮಾಡಿ ಕೊಡಹತ್ತಿದ್ದಾರೆ. ಕಾರಣ ನಮ್ಮ ಜಿಲ್ಹೆಯ ಸ್ಕೂಲಬೋರ್ಡಿನವರಾದರೂ ಹೆಚ್ಚಿಗೆ ದುಡ್ಡಿನ ಭಾರ ಬೀಳದಂತೆ ವ್ಯಾಯಾಮದ ಸಾಧನಗಳುಳ್ಳ ಕಡೆಗೆ ಆದರೂ ಯೋಗ್ಯ ಲಕ್ಷ ಪೂರೈಸಬೇಕಾಗಿ ವಿನಂತಿ. ಇದು ಅಲ್ಲದೆ ತಜ್ಞ ಜನರ ಹಾಗು ಅನುಭವಿಕ ಶಿಕ್ಷಕರ ಕೂಟಗಳನ್ನು ನೆರೆಯಿಸಿ ಬಾಲಕರ ವಯಸ್ಸಿಗನುಗುಣವಾಗಿಯೂ, ಇಯತ್ತೆಗನುಗುಣವಾಗಿಯೂ ಈ ಶಾರೀರಕ ಶಿಕ್ಷಣವನ್ನು ಯಾವ ಯಾವ ಯೋಗ್ಯ ಕ್ರಮದಿಂದ ಹ್ಯಾಗೆ ಹ್ಯಾಗೆ ಒತ್ತಾಯದ ಶಿಕ್ಷಣವನ್ನಾಗಿ ಮಾಡಬಹುದೆಂಬದನ್ನು ವಿಚಾರಿಸಬೇಕಾಗಿ ಬೇಡಿಕೊಳ್ಳುವೆನು. ಲೇಖನ ವಿಸ್ತಾರಕ್ಕೆ ಕ್ಷಮೆ ಇರಲಿ.

ಅ. ಹ. ಜಾಂಬಳೆ,

ಹೆ. ಮಾ. ತರ್ಲಘಟ್ಟ (ಶಿಗ್ಗಾವ).

ಕನ್ನಡ ನಾಡಿನ ಪ್ರಾಚೀನತೆ.

ಲೇಖಕರು—ಶ್ರೀ. ವೀ. ಗು ಮಂತ್ರಿಗಟ್ಟಿ, ಅಧ್ಯಾಪಕ, ಹೊಸಪೇಟೆ.

ನಾನು ಕನ್ನಡಿಗನು, ನನ್ನ ದೇಶವು ಕರ್ನಾಟಕ ಎಂದು ಹೇಳಿಕೊಳ್ಳುವ, ಪ್ರತಿಯೊಬ್ಬನು ಕರ್ನಾಟಕದ ಅಲ್ಪ ಸ್ವಲ್ಪ ಇತಿಹಾಸವನ್ನು ನಿರೀಕ್ಷಿಸಲೆಂಬ ಸದಭಿಪ್ರಾಯದಿಂದ " ಕರ್ನಾಟಕದ ಮಹಿಮೆ " ಎಂಬ ಲೇಖನವನ್ನು ಅತಿ ಸಂಕ್ಷಿಪ್ತವಾಗಿ ಇದರಡಿಯಲ್ಲಿ ಬರೆದಿರುವೆನು.

ಕನ್ನಡ ನಾಡು ಮೌರ್ಯರು, ಆಂಧ್ರರು, ಕದಂಬರು, ಗಂಗರು ಮೊದಲಾದ ಪುರಾತನ ರಾಜವಂಶದವರ ಆಳಿಕೆಗೆ ಒಳಪಟ್ಟಿದ್ದಿತು. ಮೌರ್ಯ ರಾಜನಾದ ಚಂದ್ರಗುಪ್ತನ ಕಾಲದಲ್ಲಿ ಉತ್ತರ ದೇಶದೊಳಗೆ ದ್ವಾದಶ ವಾರ್ಷಿಕ ಕ್ಷಾಮವುಂಟಾಗಲು, ಕೊನೆಯ ಶ್ರುತಕೇವಲಿಯಾದ ಭದ್ರಬಾಹು ಎಂಬ ಜೈನ ಗುರು ಜೈನ ಸಂಘದೊಡನೆ ದಕ್ಷಿಣ ದಿಕ್ಕಿನಲ್ಲಿರುವ ಪುನ್ನಾಟ ರಾಷ್ಟ್ರಕ್ಕೆ ಪ್ರಯಾಣ ಮಾಡಿದಾಗ, ಚಂದ್ರಗುಪ್ತನು ರಾಜ್ಯವನ್ನು ತ್ಯಜಿಸಿ ಭದ್ರಬಾಹುವಿಗೆ ಶಿಷ್ಯನಾಗಿ ಅವನೊಡನೆ ತಾನೂ ಹೊರಟು ಬಂದಂತೆಯೂ, ಶ್ರವಣಬೆಳುಗೊಳವನ್ನು ಸೇರಿದೊಡನೆ ಭದ್ರಬಾಹುವಿಗೆ ಅವಸಾನ ಕಾಲವು ಪ್ರಾಪ್ತವಾಗಲು, ಅವನ ಆಜ್ಞಾನುಸಾರವಾಗಿ ಸಂಘವನ್ನು ಮುಂದಕ್ಕೆ ಕಳುಹಿಸಿ ಚಂದ್ರಗುಪ್ತನು ಗುರುವಿನ ಪರಿಚರ್ಯಕ್ಕೋಸ್ಕರ ಅಲ್ಲಿಯೇ ನಿಂತಂತೆಯೂ, ಗುರುವಿನ ಮರಣದ ನಂತರ ತಾನು ಅಲ್ಲಿಯೇ ತಪಸ್ಸು ಮಾಡುತ್ತಿದ್ದು ಕೆಲವು ವರ್ಷಗಳ ಮೇಲೆ ಗತಿಸಿದಂತೆಯೂ ಜೈನ ಗ್ರಂಥಗಳಲ್ಲಿ ಉಕ್ತವಾಗಿದೆ. ಭದ್ರಬಾಹುವು ಕ್ರಿಸ್ತ ಶಕದ ಪೂರ್ವದಲ್ಲಿ ೨೯೨ರಲ್ಲಿ ಸತ್ತಂತೆ ತಿಳಿಯುತ್ತದೆ. ಭದ್ರಬಾಹುವೂ ಚಂದ್ರಗುಪ್ತನೂ ಶ್ರವಣಬೆಳುಗೊಳದಲ್ಲಿ ಇದ್ದರು. ಇದಕ್ಕೆ ಕೆಲವು ಆಧಾರಗಳೂ ದೊರೆಯುತ್ತವೆ. ಶ್ರವಣಬೆಳುಗೊಳದ ಚಿಕ್ಕ ಬೆಟ್ಟದ ಮೇಲೆ " ಚಂದ್ರಗುಪ್ತನ ಬಸ್ತಿ " ಎಂಬ ಜಿನಾಲಯವೂ, " ಭದ್ರಬಾಹು ಗವಿ " ಎಂಬ ಗುಹೆಯೂ ಈಗಲೂ ಇರುತ್ತವೆ. ಸುಮಾರು ೭೦೦ನೆಯ ಶತಮಾನದಲ್ಲಿ ಬರೆದ ಶ್ರವಣಬೆಳುಗೊಳದ ೧೭೫ನೆಯ ಶಾಸನದಲ್ಲಿ " ಭದ್ರಬಾಹುಸ ಚಂದ್ರಗುಪ್ತ ಮುನೀಂದ್ರಯುಗ್ಮದಿನೊಪ್ಪಿ " ಎಂದೂ ಸುಮಾರು ೯೦೦ನೆಯ ಶತಮಾನದಲ್ಲಿ ಹುಟ್ಟಿದ ಶ್ರೀರಂಗಪಟ್ಟಣದ ಶಾಸನಗಳಲ್ಲಿ " ಭದ್ರಬಾಹು ಚಂದ್ರಗುಪ್ತ ಮುನಿಪತಿ ಜಿನ ಮುದ್ರಾಂಕಿತ ಜಗಲ್ಲಲಾಮಾಯಿತ ಶ್ರೀ ಕಳ್ಳಿಪ್ಪು ತೀರ್ಥಸನಾಥ ಬೆಳ್ಗೊಳ " ಎಂದೂ ಶ್ರವಣಬೆಳುಗೊಳದ ವಿಷಯವಾಗಿ ಹೇಳಿದೆ. ೯೩೧ರಲ್ಲಿ ಹರಿಷೇಣನಿಂದ ರಚಿತವಾದ ಕಥಾಕೋಶದಲ್ಲಿಯೂ, ಇತರ ಗ್ರಂಥಗಳಲ್ಲಿಯೂ ಈ ವಿಷಯವು ಬರೆದಿದೆ ಮೆ॥ ವಿನ್ಸೆಂಟ್ ಸ್ಮಿತ್ ಇವರ

ಬರೆದಿರುವ ಹಿಂದೂ ದೇಶದ ಪುರಾತನ ಚರಿತ್ರೆಯಲ್ಲಿ ಚಂದ್ರಗುಪ್ತನು ರಾಜ್ಯವನ್ನು ಬಿಟ್ಟು ಜೈನ ಸನ್ಯಾಸಿಯಾಗಿ ಶ್ರವಣಬೆಳುಗೊಳಕ್ಕೆ ಬಂದನೆಂದು ಹೇಳುವ ಕಥೆ ನಿಜವಾಗಿರಬಹುದು ಎಂದು ಹೇಳಿದೆ.

ಚಂದ್ರಗುಪ್ತನ ಮೊಮ್ಮಗನಾದ ಅಶೋಕನ ಶಾಸನಗಳು ಮೈಸೂರ ಸಂಸ್ಥಾನದ ಮೊಳಕಾಲಮುರು ತಾಲೂಕಿಗೆ ಸೇರಿದ ಶಿದಾ ಪುರದ ಬಳಿಯಲ್ಲಿರುವ ಬ್ರಹ್ಮಗಿರಿಯ ಅಕ್ಷರ ಬಂಡೆಯ ಮೇಲೆಯೂ, ಅದೇ ಗ್ರಾಮಕ್ಕೆ ಸಮೀಪದಲ್ಲಿರುವ ಎಮ್ಮೆಣ್ಣಗುಂಡು ಎಂಬ ಗುಡ್ಡದಲ್ಲಿಯೂ, ಅದೇ ಗ್ರಾಮಕ್ಕೆ ನಾಲ್ಕು ಮೈಲು ದೂರದಲ್ಲಿರುವ ಜಟಿಂಗ ರಾಮೇಶ್ವರ ಬೆಟ್ಟದಲ್ಲಿಯೂ ಇರುತ್ತವೆ. ಈ ಬೆಟ್ಟದಲ್ಲಿರುವ ಗವಿರಲ್ಲಿ ಬರೆದ ಒಂದು ಶಾಸನದಿಂದ ಜಟಿಂಗ ರಾಮೇಶ್ವರ ದೇವಸ್ಥಾನವು ಪೂರ್ವದಲ್ಲಿ ಇಟ್ಟಿಗೆಯಿಂದ ಕಟ್ಟಲ್ಪಟ್ಟಿದ್ದು ಆ ವರ್ಷದಲ್ಲಿ ಶಿಲೆಯಿಂದ ನಿರ್ಮಿತವಾಯಿತೆಂದೂ, ಆ ಸ್ಥಳದಲ್ಲಿಯೇ ರಾವಣನು ಜಟಾಯುವನ್ನು ಕೊಂದನೆಂದೂ ಹೇಳಿದೆ. ಈ ಬೆಟ್ಟದ ಪಕ್ಕದಲ್ಲಿರುವ ಮತ್ತೊಂದು ಬೆಟ್ಟದಲ್ಲಿ ಜಟಾಯು ದೇವಸ್ಥಾನವೂ ಇರುತ್ತದೆ. ಈಚೆಗೆ ಹೈದರಾಬಾದ ಸೀಮೆಗೆ ಸೇರಿದ ಮಾಸ್ಕಿ ಎಂಬ ಸ್ಥಳದಲ್ಲಿಯೂ ಒಂದು ಅಶೋಕನ ಶಾಸನವು ಕಂಡು ಹಿಡಿಯಲ್ಪಟ್ಟಿದೆ. ಇತರ ಶಾಸನಗಳಲ್ಲಿ " ದೇವಾನಾಂ ಪ್ರಿಯ " ಎಂಬ ಅಶೋಕನ ಬಿರುದು ಮಾತ್ರ ಹೇಳಿದೆ ಈ ಶಾಸನದಲ್ಲಿ ಅಶೋಕ ಎಂಬ ಹೆಸರೇ ಉಕ್ತವಾಗಿದೆ. ಅಶೋಕನು ಸಿಂಹಳಕ್ಕೆ ಒಬ್ಬ ಬೌದ್ಧ ಸುತೋಪದೇಶಕನನ್ನೂ, ಮಹಿಷಮಂಡಲಕ್ಕೆ ಮತ್ತೊಬ್ಬನನ್ನೂ ಕಳುಹಿಸಿದಂತೆ ಮಹಾವಂಶವೆಂಬ ಗ್ರಂಥದಲ್ಲಿ ಬರೆದದೆ. ಮಹಿಷಮಂಡಲವು ಮಹಿಶೂರ ದೇಶವಲ್ಲ. ನರ್ಮದಾ ನದಿಯ ಸಮೀಪದ ಪ್ರಾಂತವು ಎಂದು ಮೆ॥ ಫ್ಲೀಟ್ ಇವರು ಬರೆದಿದ್ದರೂ ಮೈಸೂರ ಸೀಮೆಗೆ ಮಹಿಷ ರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಕೆಲವು ಶಾಸನಗಳಲ್ಲಿಯೂ, ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತವೆ. ಮೈಸ ಎಂಬದು ಮಹಿಷ ಎಂಬ ಶಬ್ದದ ಅಪಭ್ರಂಶವು. ಮೇಲೆ ಹೇಳಿದ ವಿಷಯಗಳಿಂದ ಮೌರ್ಯರಿಗೂ ಕನ್ನಡ ನಾಡಿಗೂ ಇದ್ದ ಸಂಬಂಧವು ವ್ಯಕ್ತವಾದಂತಾಯಿತು.

ಶಿಕಾರಿಪುರ ತಾಲೂಕಿಗೆ ಸೇರಿದ ಮಳವಳ್ಳಿ ಎಂಬ ಗ್ರಾಮದಲ್ಲಿರುವ ಸುಮಾರು ೨೨ನೆಯ ಶತಮಾನದ ಮಧ್ಯಭಾಗದಲ್ಲಿ ಹುಟ್ಟಿರುವ ಒಂದು ಪ್ರಾಕೃತ ಶಾಸನದಲ್ಲಿ ಆ ಗ್ರಾಮದ ಈಶ್ವರ ದೇವರಿಗೆ ಹಾರೀತಪುತ್ರ ಶಾತಕರ್ಣಿ ಎಂಬ ಆಂಧ್ರ ರಾಜನು ಭೂಮಿಯನ್ನು ಬಿಟ್ಟಂತೆ ಹೇಳಿರುತ್ತದೆ. ಅದೇ ತಾಲೂಕಿನಲ್ಲಿರುವ ತಾಳಗುಂದವೆಂಬ ಗ್ರಾಮದ ಪ್ರಣವೇಶ್ವರ ದೇವಸ್ಥಾನಕ್ಕೆ ಎದುರಿಗಿರುವ ಸುಮಾರು ೨೨ನೆಯ ಶತಮಾನದ ಆದಿಭಾಗದಲ್ಲಿ ಬರೆದ ಒಂದು ಶಾಸನದಲ್ಲಿ ಪ್ರಣವೇಶ್ವರವು ಶಾತಕರ್ಣಿ ಮುಂತಾದವರಿಂದ ಪೂಜಿತವಾಗಿದ್ದನೆಂದು ಬರೆದದೆ ಇದರಿಂದ

ಈ ಎರಡೂ ಗ್ರಾಮಗಳಲ್ಲಿರುವ ಈಶ್ವರ ದೇವಸ್ಥಾನಗಳು ಬಹು ಪುರಾತನದವೆಂದು ತಿಳಿಯುತ್ತದೆ. ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಪ್ರತಿನಿಧಿಯೊಬ್ಬನು ನಿಂತು ಆಳುತ್ತಿದ್ದಂತೆ ಅಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಈ ನಾಣ್ಯಗಳು ಸೀಸದವು; ಇವುಗಳೊಳಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಮುದ್ರಿತವಾಗಿರುವವಲ್ಲದೆ, ಮುಡಾನಂದ, ಚಟುಕಡಾನಂದ ಎಂಬ ರಾಜನಾಮಗಳೂ ದೊರೆಯುತ್ತವೆ. ಪ್ರತಿನಿಧಿಯ ನಾಣ್ಯಗಳಲ್ಲಿ ಅವನ ಹೆಸರೂ, ವೃಷಭವೂ ಕೆತ್ತಲ್ಪಟ್ಟಿರುತ್ತವೆ. ಈ ವಿಷಯಗಳು ಆಂಧ್ರ ರಾಜರ ಸಂಬಂಧವನ್ನು ತೋರಿಸುತ್ತವೆ.

ಮೇಲೆ ಹೇಳಿದ ಮಳವಳ್ಳಿಯ ಪ್ರಾಕೃತ ಶಾಸನದ ಕೆಳಗೆ ಸುಮಾರು೩ನೆಯ ಶತಮಾನದ ಮಧ್ಯಭಾಗದಲ್ಲಿ ಲಿಖಿತವಾದ ಮತ್ತೊಂದು ಪ್ರಾಕೃತ ಶಾಸನವಿದೆ. ಇದರಲ್ಲಿ ಒಬ್ಬ ಕದಂಬ ರಾಜನು ಅದೇ ಈಶ್ವರ ದೇವರಿಗೆ ಭೂಮಿಯನ್ನು ಬಿಟ್ಟಂತೆ ಹೇಳಿದೆ. ಇದಲ್ಲದೆ ಹಿಂದೆ ಹೇಳಿದ ತಾಳಗುಂದದ ಶಾಸನದಲ್ಲಿ ಕದಂಬ ರಾಜನಾದ ಕಾಕುತ್ಸವರ್ಮನು ಪ್ರಣವೇಶ್ವರ ದೇವರಿಗಾಗಿ ಒಂದು ಕೆರೆಯನ್ನು ಕಟ್ಟಿಸಿದಂತೆ ಹೇಳಿದೆ. ಈ ಕೆರೆಯು ಪ್ರಣವೇಶ್ವರ ದೇವಸ್ಥಾನದ ಎದುರಿಗೆ ಇರುತ್ತದೆ. ಇದನ್ನು ಈಗಲೂ ಪಣಮನ ಕೆರೆ ಎಂದು ಕರೆಯುತ್ತಾರೆ. ಪಣಮ ಇದು ಪ್ರಣವ ಎಂಬುದರ ಅಪಭ್ರಂಶವಾಗಿದೆ. ಈ ಕಾಕುತ್ಸವರ್ಮನು ಗುಪ್ತರಾಜರಲ್ಲಿ ಪ್ರಸಿದ್ಧನಾದ ಸಮುದ್ರಗುಪ್ತನ (೩೨೦—೩೭೫) ಸಮಕಾಲದವನಾಗಿ ಅವನೊಡನೆ ವಿವಾಹ ಸಂಬಂಧವನ್ನು ಪಡೆದಿದ್ದಂತೆ ತಿಳಿಯುತ್ತದೆ. ಈ ವಿಷಯಗಳು ಕದಂಬರ ಸಂಬಂಧವನ್ನು ಸೂಚಿಸುತ್ತವೆ.

ಜೈನ ಸಂಘವು ಪುನ್ನಾಟ ರಾಷ್ಟ್ರಕ್ಕೆ ಪ್ರಮಾಣ ಮಾಡಿದಂತೆ ಹಿಂದೆ ಅರುಹಿದೆ. ಪುನ್ನಾಟ ರಾಷ್ಟ್ರವು ಮೈಸೂರ ಸೀಮೆಯ ದಕ್ಷಿಣ ಭಾಗದಲ್ಲಿ ಇದ್ದಿತು. ಇದನ್ನು ರಾಷ್ಟ್ರವರ್ಮನೇ ಮೊನಲಾದ ರಾಜರು ಕೀರ್ತಿಪುರವೆಂಬ ರಾಜಧಾನಿಯಲ್ಲಿ ನೆಲಸಿ ಆಳಿದರು. ಇದಕ್ಕೆ ಕನ್ನಡದಲ್ಲಿ ಪುನ್ನಾಡು ಎಂಬ ಹೆಸರದೆ. ಕೀರ್ತಿಪುರವು ಈಗ ಹೆಗ್ಗಡದೇವನಕೋಟೆ ತಾಲೂಕಿನಲ್ಲಿರುವ ಕಿತ್ತೂರು ೨ನೆಯ ಶತಮಾನದಲ್ಲಿದ್ದ ಟಾಲಮಿ ಎಂಬವನು ಪುನ್ನಾಟ ರಾಷ್ಟ್ರದ ಹೆಸರನ್ನು ಪೌನ್ನಟ ಎಂದು ಹೇಳಿ, ಅದು ಈ ಪ್ರಕಾರ ಅಂದರೆ ವೈಡೂರ್ಯ ರತ್ನಕ್ಕೆ ಹೆಸರುವಾಸಿಯನ್ನು ಹೊಂದಿತ್ತೆಂದು ಬರೆದಿದ್ದಾನೆ.

ಕರ್ನಾಟಕದಲ್ಲಿ ಈಗೀಗ ಪ್ರಸಿದ್ಧಿಯನ್ನು ಹೊಂದಿದ ಕರ್ನಾಟಕದವರ ಅರಸೊತ್ತಿಗೆಗೊಳಪಟ್ಟ ಮೈಸೂರ ಸೀಮೆಯು ಮಹಿಷ ರಾಷ್ಟ್ರ ಅಥವಾ ಮೈಸನಾಡು ಎಂದು ಹಿಂದೆ ಹೇಳಿದೆಯಷ್ಟೇ? ತಮಿಳು ಭಾಷೆಯಲ್ಲಿ ಅಹನಾನೂರು ಎಂಬ ಕವಿಸೂಕ್ತಕದಂಬದಲ್ಲಿ ೨ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ

ಪದ್ಯದಲ್ಲಿ ಎರುಮ್ಮೈನಾಡು (ಎರುಮ್ಮೈ = ಮಹಿಷ) ಎಂಬ ಹೆಸರನ್ನು ಹೇಳಿ, ಇದು ಪಶ್ಚಿಮ ಪ್ರಾಂತದಲ್ಲಿ (ಕುಡನಾಡು) ಎಂದು ಹೇಳಿದೆ. ನಕ್ಕೀರರ್ ಎಂಬ ಮತ್ತೊಬ್ಬ ಪುರಾತನ ಕವಿಯು ನೆಡುಂಜೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರ, ಚೋಳ, ತಿತಿಯನ್, ಎಳಿನಿ, ಎರುಮ್ಮೈಯೂರ್, ಇರುಂಕೋವೇಣ್ಮಾನ್, ಪೊರುನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದನೆಂದು ಹೇಳಿದ್ದಾನೆ. ಅದೇ ಕವಿಯು ಮಹಿಷಪುರದವನು, ಬಡಗರ ಕುಲದವನು ಎಂದು ಹೇಳಿರುತ್ತಾನೆ. ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳು ಗ್ರಂಥದಲ್ಲಿ ಸುಮಾರು ೨ನೆಯ ಶತಮಾನದಲ್ಲಿ ಶೆಂಗುಟ್ಟುವ್ ಎಂಬ ಚೇರ ರಾಜನು ಉತ್ತರ ದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತೆಂಗಿ ಕನ್ನಡರು ಆಡಿದ ಕುಣಿತವನ್ನು ನೋಡಿ ಸಂತೋಷಿಸಿದನು ಎಂದು ಹೇಳಿದೆ. ಈ ಕಾರಣಗಳಿಂದ ಮೈಸೂರ ದೇಶದ ಪ್ರಾಚೀನತೆ ವ್ಯಕ್ತವಾಗುತ್ತದೆ.

ಐದನೆಯ ಶತಮಾನದಲ್ಲಿದ್ದ ವರಾಹಮಿರನು ತನ್ನ ಬೃಹತ್ಸಂಹಿತೆಯಲ್ಲಿ ಕರ್ನಾಟಕ ಎಂಬ ಹೆಸರನ್ನು ಹೇಳಿದ್ದಾನೆ. ಸುಮಾರು ೯೦೦ರಲ್ಲಿದ್ದ ರಾಜಶೇಖರನೆಂಬ ಸಂಸ್ಕೃತ ಕವಿಯು ತನ್ನ ಕಾವ್ಯಮೀಮಾಂಸೆ ಎಂಬ ಗ್ರಂಥದಲ್ಲಿ ಕರ್ನಾಟಕಸ್ಥರು ಹೆಮ್ಮೆಯಿಂದ ಟಂಕಾರದೊಡನೆ ಓದುತ್ತಾರೆ ಎಂದು ಓದುವ ರೀತಿಯನ್ನು ಬರೆದಿದ್ದಾನೆ.

ಈ ಎಲ್ಲ ಕಾರಣಗಳನ್ನು ಪರ್ಯಾಲೋಚಿಸಲು ಕರ್ನಾಟಕವು ಪೂರ್ವದಲ್ಲಿ ಎಷ್ಟು ಮಹತ್ವವುಳ್ಳದ್ದಿದ್ದೀತೆಂದು ಅದರ ಪ್ರಾಚೀನತೆಯು ಧ್ವನಿತವಾಗುತ್ತದೆ.

ಪದ್ಯದ ತುರ್ಕಸ್ತಾನವೂ, ಅದರ ಅಂತರ್ವ್ಯವಸ್ಥೆಯೂ.

ಲೇಖಕ:—ಶ್ರೀ. ಥ ನೀ. ಕಾಳಪ್ಪನವರು, ಹೆ ಮೂ. ಕುರ್ಕಕೋಟೆ.

ಹಿಂದಕ್ಕೆ ಮಹಾಯುದ್ಧದ ಸಮಯದಲ್ಲಿ ಯುರೋಪದ ತುರ್ಕಸ್ತಾನವು ಜರ್ಮನಿಗೆ ಕೂಡಿತ್ತಷ್ಟೇ? ಅದರ ಸಂಗಡಲೇ ಇದಾದರೂ ಸಂಪೂರ್ಣ ಪರಾಜಯವೊಂದಿ ಮೂಲಿಗುಂಪಾಗಿ ಹೋಯಿತು. ಸುಮಾರು ಅರ್ಧಕ್ಕಿಂತ ಹೆಚ್ಚು ರಾಜ್ಯವು ವೈರಿಗಳ ಕೈಸೇರಿತು. "ಕಾನ್‌ಸ್ತಾಂತಿನೋಪಲ್" ಪಟ್ಟಣದ ಸುತ್ತುಮುತ್ತಲಿನ ಅಲ್ಪಸ್ವಲ್ಪ ರಾಜ್ಯವು ಮಾತ್ರ ಬಾದಶಹನ ಪಾಲಿಗೆ ಉಳಿಯಿತು. ಇಂದಾನೊಂದು ಕಾಲದಲ್ಲಿ ಯುರೋಪದೊಳಗೆ ಅತ್ಯಂತ ಪ್ರಬಲ್ಯಾವಸ್ಥೆಗೆ ಬಂದಿ

ವ್ವ ತುರ್ಕಸ್ತಾನವು ಈಗ ನಾಮಶೇಷವಾಗುವ ಹೊತ್ತು ಬಂತು. ಬಹು ದಿವಸ
ಗಳಿಂದ ಯುರೋಪಿನ ರಾಜನೀತಿಕೋವಿದರು ಈ ರಾಜ್ಯದ ಮೇಲೆ ವಕ್ರದೃಷ್ಟಿ
ಯನ್ನಿಟ್ಟು, ಇದನ್ನು ಆದಷ್ಟು ಬೇಗ ಯುರೋಪಖಂಡದಿಂದ ಹೊರದೂಡುವ
ಆಲೋಚನೆಯಲ್ಲಿದ್ದರು. ಅವರ ಆಕಾಂಕ್ಷೆಯು ಈಗ ಬಹುಮಟ್ಟಿಗೆ ಸಫಲವಾದಂ
ತಾಯಿತು. ಯುರೋಪಖಂಡದ ನಕಾಶದೊಳಗಿಂದ ತುರ್ಕಸ್ತಾನದ ನಕಾಶವು
ತಸ್ಸಿನಂದ ತಾನೇ ಹೋಗುವ ಸಮಯವು ಸಹಜವಾಗಿಯೇ ಬಂದೊದಗಿತು.
ತುರ್ಕೀ ಜನರಿಗೆ ಇಂಗ್ಲಿಷರು (Sicka man) "ರೋಗೀ ಮನುಷ್ಯ" ರೆಂದೆ
ನ್ನುತ್ತಿದ್ದರು. ಅವರ ಈ ಅಂಬೋಣವು ನಿಜವಾಗಿ ಹೊನ್ನಿನ ಮಹಾಯುದ್ಧದಿಂದ
ಅದರ ಪೆಸರೇ ಇಲ್ಲದಂತಾಗಿದೆ.

ಆದರೆ ತುರ್ಕಸ್ತಾನಕ್ಕೆ ಈ ವಿಪನ್ನಾವಸ್ಥೆಯುಂಟಾಗಿದ್ದರಲ್ಲಿ ಆಶ್ಚರ್ಯ
ವೇನೂ ತೋರುವದಿಲ್ಲ. ಯಾಕಂದರೆ ಅದರ ರಾಜ್ಯದಾಡಳಿತೆಯ ಅಂತರ್ವ್ಯವ
ಸ್ಥೆಯು ಅತ್ಯಂತ ಕೋಜನೀಯವಾಗಿತ್ತು. ತುರ್ಕೀ ಜನರು ತಮ್ಮ ದೇಶದೊಳ
ಗಿನ ಕ್ರಿಶ್ಚನ್ನರ ಮೇಲೆ ಒಹಳ ಅತ್ಯಾಚಾರವನ್ನು ನಡೆಯಿಸಿದ್ದರು. ಅವರ ಬಗ್ಗೆ
ತಮಗೆ ಸ್ವಲ್ಪ ಅನುಮಾನವುಂಟಾದ ಕೂಡಲೆ ಇಡೀ ಹಳ್ಳಿಗೆ ಹಳ್ಳಿ ಯನ್ನೇ
ಪಟ್ಟಣಕ್ಕೆ ಪಟ್ಟಣವನ್ನೇ ಸುಟ್ಟು ಸೂರೆಗೊಳ್ಳುತ್ತಿದ್ದರು. ಮುಸಲ್ಮಾನರಿ
ಮಾತ್ರ ರಾಜಕೀಯ ಸವಲತ್ತುಗಳಿರುತ್ತಿದ್ದವು. ಮುಸಲ್ಮಾನೇತರರಿಗೆ ಕೋರ್ಟಿ
ನಲ್ಲಿ ಹೋಗಿ ಸಾಕ್ಷಿ ಹೇಳುವ ಅಧಿಕಾರವು ಸಹ ಇದ್ದಿಲ್ಲ. ಯಾವತ್ತು ಕಾಯಿ
ಕಾನೂನುಗಳು ಮುಲ್ಲಾಗಳ ಇಚ್ಛೆಯ ಮೇರೆಗೆ ಮಾಡಲ್ಪಡುತ್ತಿದ್ದವು. ಕ
ವಸೂಲ ಮಾಡುವ ಕೆಲಸವನ್ನು ಒಬ್ಬ ಗುತ್ತಿಗೆದಾರನಿಗೆ ಕೊಟ್ಟು ಬಿಡುತ್ತಿದ್ದರ
ಆತನು ತನ್ನ ಮನಸ್ಸಿಗೆ ಬಂದಂತೆ ಹೆಚ್ಚಿನ ಕರವನ್ನು ವಸೂಲ ಮಾಡಿ ಬಡಜ
ರನ್ನು ಗೋಳಾಡಿಸುತ್ತಿದ್ದನು. ಆ ಗೋಳಾಟವನ್ನು ಕೇಳುವ ಅಧಿಕಾರಸ್ಥ
ಇಲ್ಲದಂತಾಗಿದ್ದರು. ಆದರೆ ಮುಂದೆ ತುಸು ದಿವಸಗಳಲ್ಲಿಯೇ ಅದರ ರಾಜ್ಯವ್ಯ
ಸ್ಥೆಯು ತೀರಾ ಬದಲಾಯಿತು. ೨೦ನೇ ಶತಮಾನದಲ್ಲಿ ಅದು ಒಳ್ಳೇ ಸುಧಾರ
ಯನ್ನು ಹೊಂದಿ, ರಾಜನೀತಿ, ಸಮಾಜಸೇವೆ, ಆರ್ಥಿಕ ವ್ಯವಸ್ಥೆಗಳಲ್ಲಿ ಒಳ್ಳೆ
ಮುಂದುವರಿದ ರಾಷ್ಟ್ರವಾಯಿತು. ಮೊದಲು ರೋಗೀ ಮನುಷ್ಯನೆಂದು ಕರೆಯಿ
ಕೊಳ್ಳುತ್ತಿದ್ದಂಥ ತುರ್ಕಸ್ತಾನವು ಈಗ ಬಲಶಾಲಿಯಾಗಿ, ರಣಾಂಗಣದಲ್ಲಿ ನಿಂ
ಸಡ್ಡು ಹೊಡೆಯುವಷ್ಟು ಸಶಕ್ತವಾಗಿದೆ.

ತುರ್ಕಸ್ತಾನದ ಇತರ ಸುಧಾರಣೆಗಳಿಗಿಂತ ರಾಜನೈತಿಕ ಸುಧಾರಣೆ
ಕೆಲಸವು ಅತಿ ಮಹತ್ವದ್ದಾಗಿದೆ. ಬಹು ದಿವಸಗಳಿಂದ ಸುಲ್ತಾನನ ಅನಿಯಂತ್ರಿ
ಕಾರಭಾರವೇ ನಡೆಯುತ್ತಿತ್ತು. ಅರಸನ ಅಪ್ಪಣೆಯನ್ನು ಮೀರುವದು ಯಾರಿಗೂ
ಶಕ್ಯವಿದ್ದಿಲ್ಲ ಆದರೆ ಮಹಾಯುದ್ಧದ ನಂತರ ಈ ಸ್ಥಿತಿಯು ಉಳಿಯಲಿಲ್ಲ

ರಾಜ್ಯಭಾರವು ಅರನಸೊಬ್ಬನ ಕೈಯಲ್ಲಿಯೇ ಇದ್ದರೆ ಆತನು ಪ್ರಜೆಗಳ ಹಿತಾಹಿತಗಳ ಕಡೆಗೆ ತಕ್ಕಷ್ಟು ಲಕ್ಷ್ಯವನ್ನು ಕೊಡುವದಿಲ್ಲವೆಂತಲೂ, ತನ್ನ ಸ್ವಾರ್ಥಕ್ಕಾಗಿ ಪೆಚ್ಚಿಗೆ ಹಣವನ್ನು ವೆಚ್ಚ ಮಾಡುತ್ತಾನೆಂತಲೂ ತಿಳಿದು ಅವನ ಸರ್ವಾಧಿಕಾರವನ್ನು ಕಿತ್ತೊಗೆದು, ಸುಧಾರಿಸಿದ ವಾಶ್ಚಿಮಾತ್ಯ ಪದ್ಧತಿಗನುಸರಿಸಿ ರಾಜ್ಯ ದಾಡಳತೆಗಾಗಿ ಒಂದು ಪ್ರತಿನಿಧಿಗಳ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಈ ಪ್ರತಿನಿಧಿಗಳ ಅನುಮತಿಯಿಲ್ಲದೆ ಸುಲ್ತಾನನಾಗಲಿ, ಮಂತ್ರಿಯಾಗಲಿ ಯಾವ ಬಗೆಯ ಆಡಳತೆಯನ್ನೂ ನಾಗಿನದಂತಾಯಿತು. ಮತ್ತು ಮೊದಲಿನ ರಾಜಧಾನಿಯಾದ "ಕಾನಸ್ತಾಂತಿನೋಪಲ್" ಪಟ್ಟಣದ ಬದಲು ಈಗ ಹೊಸದಾಗಿ "ಅಂಗೋರಾ" ಪಟ್ಟಣವು ತುರ್ಕಸ್ತಾನದ ರಾಜಧಾನಿಯಾಗಿ ಮಾಡಲ್ಪಟ್ಟಿತು. "ಕಾನಸ್ತಾಂತಿನೋಪಲ್" ಪಟ್ಟಣವು ಯುರೋಪ ಖಂಡದಲ್ಲಿದ್ದು ಅಲ್ಲಿಯ ತುರ್ಕೀ ಜನರು ಸುಧಾರಣೆಗೆ ಅನೇಕ ತೊಂದರೆಗಳು ಒದಗುತ್ತಿದ್ದವು ಮತ್ತು ಪ್ರಾಚೀನ ಕಾಲದ ಅಮೀರ ಮೊದಲಾದವರು ಅಲ್ಲಿಯೇ ವಾಸ ಮಾಡಿಕೊಂಡಿರುವದರಿಂದ, ಅವರು ಪ್ರಜೆಗಳ ಅಭಿವೃದ್ಧಿಗೆ ಆದಷ್ಟು ವಿಘ್ನವನ್ನು ತರುತ್ತಿದ್ದರು ಆದರೆ ಈಗಿನ ಅಂಗೋರಾ ಪಟ್ಟಣವು ಎಲ್ಲ ರೀತಿಯಿಂದಲೂ ಅನುಕೂಲವಿದ್ದು, ತೀವ್ರವೇ ತುರ್ಕಸ್ತಾನದ ಉನ್ನತಿಯಾಗುವದೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ

ರಾಜ್ಯಾಡಳತೆಗೆ ಕಾಯಿದೆ ಕಾನೂನುಗಳಾದರೂ ಈಗ ಹೊಸದಾಗಿ ಅಗಿವೆ ಮೊದಲಿಗೆ ಕುರಾನಿನೊಳಗಿನ ವಾಕ್ಯಗಳೇ ಕಾಯಿದೆಗಳಾಗಿದ್ದವು. ಮುಲ್ಲಾ ಜನರೇ ನ್ಯಾಯಾಧೀಶರಾಗಿದ್ದರು ಆದರೆ ಈಗ ಕಾಯಿದೆಗಳ ಬೇರೆ ಬೇರೆ ಪುಸ್ತಕಗಳು ಬರೆಯಲ್ಪಟ್ಟಿವೆ ಮುಸಲ್ಮಾನನಿರಲಿ, ಕ್ರಿಶ್ಚನ್ನನಿರಲಿ, ಹಿಂದೂ ಇರಲಿ, ಯಹೂದಿ ಇರಲಿ, ಆತನು ಯಾವದೇ ಜಾತಿಯವನಿರಲಿ ಎಲ್ಲರೂ ಸಮಾನಸ್ಕಂದರಂತೆ ತಿಳಿದು, ಈ ಕಾಯಿದೆಗಳಂತೆ ನಡೆಯಿಸಲ್ಪಡುವರು. ಪ್ರತಿಯೊಬ್ಬರಿಗೂ ಕೋರ್ಟಿನಲ್ಲಿ ನಿಂತು ಸತ್ಯವಾದದ್ದನ್ನು ಸಾಕ್ಷಿ ನುಡಿಯಲಿಕ್ಕೆ ಅಡ್ಡಿ ಇಲ್ಲ.

ಬಹು ದಿವಸಗಳಿಂದ ತುರ್ಕಸ್ತಾನದಲ್ಲಿ ಹಿಜರಿ ಶಕವು ರೂಢಿಯಲ್ಲಿತ್ತು. ಅದರ ವರ್ಷಾವಧಿಯ ದಿವಸಗಳು ೩೫೫. ಈಗ ಅಲ್ಲಿ ಕ್ರಿಸ್ತಿ ಶಕವು ಪ್ರಾರಂಭವಾಗಿದೆ ಕೋರ್ಟು ಕಚೇರಿಗಳಲ್ಲಿ ಇದೇ ಇಸವಿ ಸನ್‌ದಂತೆ ಕೆಲಸಗಳು ನಡೆಯುವವು.

ತುರ್ಕೀ ಬಾದಶಹನಿಗೆ ಬಹು ದಿವಸಗಳಿಂದ ಧಾರ್ಮಿಕ ಮತ್ತು ರಾಜಕೀಯ ಈ ಎರಡೂ ಹಕ್ಕುಗಳಿದ್ದವು. ಬಾದಶಹನೇ ಖಲೀಫನಾಗಿ ಧರ್ಮಾಧಿಕಾರವನ್ನು

ತನ್ನ ಮನಬಂದಂತೆ ಸಾಗಿಸುತ್ತಿದ್ದನು ಆದರೆ ಈಗ ಅರಸನು ಧರ್ಮದಲ್ಲಿ ಕೈ ಹಾಕಕೂಡದೆಂತಲೂ ಆ ಕೆಲಸವನ್ನು ಬೇರೊಬ್ಬರು ಮಾಡಬೇಕೆಂತಲೂ ಗೊತ್ತಾಗಿದೆ. ರಾಷ್ಟ್ರಪತಿ ಬೇರೆ, ಧರ್ಮಪತಿ ಬೇರೆಯಾಗಿರುವರು. ಯಾವತ್ತು ಧಾರ್ಮಿಕ ಕಾರ್ಯಗಳು ಕಾಯಿದೆಗನುಸರಿಸಿ ಸಾಗಿಸಲ್ಪಡುವವು

ಖಿಲಾಫತದ ನಾಶವಾದ ಹಾಗೆ ಅಂಗ್ರೋರಾ ಸರ್ಕಾರವು ಮೊದಲು ಧಾರ್ಮಿಕ ಸಂಸ್ಥೆಗಳಿಗೆ ಕೊಡುತ್ತ ಬಂದಿದ್ದ ಧನಸಹಾಯದ ದೇಣಿಗೆಗಳನ್ನು ಬಂದು ಮಾಡಿತು ಪ್ರತಿ ವರುಷ ಮಕ್ಕಾ-ಮದೀನಾಗಳ ಮಸೀದಿಗಳಿಗೆ ಕಳುಹುತ್ತ ಬಂದಿದ್ದ ಸಾವಿರಾರು ರೂಪಾಯಿಗಳ ಉಳಿತಾಯವಾಯಿತು ಮತ್ತು ದೇಶದೊಳಗಿನ ಬಹುತರ ಯಾವತ್ತು ಮಸೀದಿಗಳ ಖಂಡಣೆಗಳು ಬಂದಾದವು

ಇದು ಮೊದಲು ತುರ್ಕಸ್ತಾನದೊಳಗಿನ ಎಲ್ಲ ಶಾಲೆ-ಕಾಲೇಜುಗಳು ಮುಲ್ಲಾ ಜನರ ಅಧಿಕಾರಕ್ಕೊಳಗಾಗಿದ್ದವು ಮತ್ತು ಅವುಗಳಲ್ಲಿ ವಿಶೇಷವಾಗಿ ಧಾರ್ಮಿಕ ಶಿಕ್ಷಣವು ಕೊಡಲ್ಪಡುತ್ತಿತ್ತು ಆದರೆ ಈಗ ಆ ಎಲ್ಲ ಸಂಸ್ಥೆಗಳು ಸರಕಾರದ ಕೈಸೇರಿ ಅಲ್ಲಿ ಹೊಸ ಪದ್ಧತಿಯ ಪ್ರಕಾರ ಶಿಕ್ಷಣವು ಕೊಡಲ್ಪಡುತ್ತದೆ ಹಾಗು ಸರಕಾರದ ಮಂಜೂರಿ ಇಲ್ಲದೆ ಯಾರೂ ಹೊಸದಾಗಿ ಸ್ಕೂಲು-ಕಾಲೇಜುಗಳನ್ನು ತೆರೆಯುವಂತಿಲ್ಲ

ಪೂರ್ವ ಕಾಲದಲ್ಲಿ ಮುಲ್ಲಾ ಮತ್ತು ಶೇಖ ಜನರು ದೇಶದ ಸಾಂಪತ್ತಿಕ ಸ್ಥಿತಿಯನ್ನು ಬೆಳೆಯಗೊಡುತ್ತಿದ್ದಿಲ್ಲ ಒಂದು ವೇಳೆ ಯಾರಾದರೂ ಇವರ ಸಮ್ಮತಿ ಇಲ್ಲದೆ ದೇಶಹಿತದ ಏನಾದರೊಂದು ಮಹತ್ಪದ ಕಾರ್ಯವನ್ನು ಪ್ರಾರಂಭ ಮಾಡಿದರೆ, ಇವರೆಲ್ಲರೂ ಒಂದಾಗಿ ಅದಕ್ಕೆ ಪ್ರತಿಕೂಲವನ್ನುಂಟು ಮಾಡುತ್ತಿದ್ದರು. ಆದರೆ ಈಗ ಆ ಜನರ ಆಟವೆಲ್ಲ ನಿಂತು ಹೋಗಿದೆ ಮತ್ತು ಮುಲ್ಲಾ ಜನರಿಂದ ಅನ್ಯಾಯವಾಗಿ ಸಂತಯಿಸಲ್ಪಟ್ಟ ಹಣದಿಂದ ಸುಲ್ತಾನನು ದೇಶದಲ್ಲಿ ರೇಲ್ವೆ, ತಾರ ಆಫೀಸ ಮೊದಲಾದ ಸಾರ್ವಜನಿಕ ಹಿತದ ಕಾರ್ಯಗಳನ್ನು ಮಾಡಿಸಹತ್ತಿದ್ದಾನೆ ನೋಡಿರಿ, ಸದ್ಯಕ್ಕೆ ತುರ್ಕಸ್ತಾನವು ತನ್ನ ಅಭಿವೃದ್ಧಿಗಾಗಿ ಎಷ್ಟು ಆತ್ಮತ್ಯಾಗ ಮಾಡಲಿಕ್ಕೆ ಸಿದ್ಧವಾಗಿದೆ! ಖಿಲಾಫತದಂಥ ಪುರಾತನ ಸಂಸ್ಥೆಗಳ ನಾಶವಾಗಿ ದೇಶಸುಧಾರಣೆಯ ಕೆಲಸವು ಜೋರಿನಿಂದ ನಡೆದಿರುವದಲ್ಲದೆ ಖಿಲಾಫತನೇ ತಮ್ಮ ನಾಶಕ್ಕೆ ಕಾರಣವಾಯಿತೆಂದು ಅಲ್ಲಿಯ ತಜ್ಞರ ಅಭಿಪ್ರಾಯವು

ಹಿಂದಕ್ಕೆ ಸುಲ್ತಾನ ಹವಿೂದನೆಂಬಾತನ ಕಾಲಕ್ಕೆ ವಿದೇಶೀಯರ ಅಧಿಕಾರ ಕ್ಕೊಳಪಟ್ಟಿದ್ದ ರೇಲವೆ, ಬ್ಯಾಂಕ, ಕಾರಖಾನೆಗಳಿಲ್ಲ ಈಗ ಅಂಗ್ರೋರಾ ಸರಕಾರದ ಕೈಸೇರಿ ಯೋಗ್ಯ ರೀತಿಯಿಂದ ತಮ್ಮ ತಮ್ಮ ಕಾರ್ಯಗಳನ್ನು ಸಾಗಿಸುತ್ತವೆ.

ಸ್ತ್ರೀಯರಲ್ಲಿಯೂ ಈಗ ಬಹಳ ಸುಧಾರಣೆಯಾಗಿದೆ. ಪೂರ್ವ ಕಾಲದಲ್ಲಿ ತುರ್ಕೀ ಸ್ತ್ರೀಯರು ಗುಲಾಮರಂತೆ ಪರದೆಯೊಳಗೇ ಕೊಳೆಯಬೇಕಾಗುತ್ತಿತ್ತು. ಹೊರಗೆ ಹೋಗುವದಾದರೆ ಮುಸುಕು (ಬುರಖಾ) ಹಾಕಿಕೊಂಡು ಹೋಗುತ್ತಿದ್ದರು. ಆದರೆ ಈಗ ಎಲ್ಲ ಸ್ತ್ರೀಯರು ನಿರ್ಭೀತಿಯಿಂದ ಸ್ವತಂತ್ರವಾಗಿ ರಾಜಮಾರ್ಗಗಳಲ್ಲಿ ತಿರುಗಾಡುತ್ತಾರೆ. ಆಟ-ನೋಟಗಳನ್ನು ನೋಡಲಿಕ್ಕೆ ತಮ್ಮ ಗಂಡಂದಿರ ಸಂಗಡ ಅನಂದದಿಂದ ಹೋಗುತ್ತಾರೆ ಎಷ್ಟೋ ಜನ ವಿದ್ಯಾವಂತ ಸ್ತ್ರೀಯರು ಸ್ಕೂಲ್, ಕಾಲೇಜು, ಸಭಾ, ಸೊಸಾಯಿಟಿಗಳಲ್ಲಿ ಪುರುಷರ ಸಂಗಡ ಕೂಡಿಕೊಂಡು ಕೆಲಸ ಮಾಡಹತ್ತಿದ್ದಾರೆ ಕೆಲವರು ನರ್ಸರು, ವಕೀಲರು, ಪ್ರೊಫೇಸರರು ಆಗಿರುವರು. ಸದ್ಯಕ್ಕೆ ಒಬ್ಬ ಸ್ತ್ರೀಯಳು ಜಜ್ಜ ಕೆಲಸ ನೋಡುತ್ತಲಿರುವಳು

ಯುವತಿಯರು ೧೬ ವರುಷದವರಾಗದೆ ಲಗ್ನವಾಗುವಂತಿಲ್ಲ. ಯುವಕರಿಗೆ ಲಗ್ನದ ಕಾಲಕ್ಕೆ ೨೦ ವರುಷ ವಯಸ್ಸಾಗಲಿಕ್ಕೆ ಬೇಕು ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಇರುವಾಗಲೇ ಇನ್ನೊಬ್ಬಳನ್ನು ಮದುವೆಯಾಗಲಿಕ್ಕೆ ಪ್ರತಿಬಂಧನ ವುಂಟು ಒಟ್ಟಿನ ಮೇಲಿಂದ ತುರ್ಕಸ್ತಾನದಲ್ಲಿ ಸ್ತ್ರೀಪುರುಷರೀರ್ವರಿಗೂ ಸಮಾನ ಅಧಿಕಾರಗಳುಂಟು

ಇನ್ನು ಹಿಂದುಸ್ತಾನ ಮತ್ತು ತುರ್ಕಸ್ತಾನಗಳೆರಡನ್ನೂ ಹೋಲಿಸಿ ನೋಡಿದರೆ ಅಲ್ಪಾವಧಿಯಲ್ಲಿಯೇ ತುರ್ಕಸ್ತಾನವು ಸುಲಭವಾಗಿ ತನ್ನ ಉನ್ನತಿಯನ್ನು ಮಾಡಿಕೊಂಡಿತು ಆದರೆ ನಮ್ಮ ಹಿಂದುಸ್ತಾನದ ಸ್ಥಿತಿಯು ಮಾತ್ರ ವಿಚಿತ್ರವಿದೆ ಇಲ್ಲಿ ಯಾವದೊಂದರ ಸುಧಾರಣೆಯಾಗಬೇಕಾದರೆ ಅನೇಕ ಧರ್ಮಶಾಸ್ತ್ರಗಳ ಅಡಚಣೆಯುಂಟು ಎಷ್ಟೋ ಜನರು ಸಣ್ಣ ಸಣ್ಣ ವಿಷಯಗಳ ಸಲುವಾಗಿ ತಂಟೆ-ತಗಾದೆಗಳನ್ನು ಮಾಡುತ್ತ ಕೂಡ್ರುವರು ಆದರೆ ನಾವೆಲ್ಲರು ಹಿಂದೂಗಳು, ಮುಸಲ್ಮಾನರು, ಕ್ರಿಶ್ಚನ್ನರು ಬೇರೆ ಬೇರೆ ಎಂಬ ಬೇಧಭಾವಗಳನ್ನು ಬದಿಗಿಟ್ಟು ಒಮ್ಮನಸ್ಸಿನಿಂದಲೂ, ಪ್ರೀತಿಯಿಂದಲೂ ನಡೆದುಕೊಳ್ಳದಿದ್ದರೆ ಈಗಿನ ನಮ್ಮ ಮಃಸ್ಥಿತಿಯು ಎಂದೂ ದೂರವಾಗಲಾರದು ನಮ್ಮ ತುರ್ಕೀ ಬಾಂಧವರಿಂದ ನಾವು ಅತಿ ಮಹತ್ವದ ಪಾಠವನ್ನು ಕಲಿಯಬೇಕಾಗಿದೆ. ಈ ಬಗ್ಗೆ ನಮ್ಮ ಹಿಂದೀ ಬಾಂಧವರಿಗೆ ದೇವರು ಸದ್ಬುದ್ಧಿಯನ್ನೀಯಲೆಂದು ಪ್ರಾರ್ಥಿಸುವೆವು

ಬಾಲವೀರ (ಬಾಯಸ್ಕೌಟ) ಶಿಕ್ಷಣ

ಈಗಿನ ಶಾಲೆಯ ಶಿಕ್ಷಣವು ಸದೋಪಕಾರವ್ಹೆಂದು ಎಲ್ಲರು ಸರಿ ಹೇಳುವರು. ಗೃಹಶಿಕ್ಷಣವಾವರೂ ಸದೋಷವಾವವ್ಹೇ ಇರುವದು. ಶಿಕ್ಷಣದಲ್ಲಿಯ ದೋಷಗಳನ್ನು ಹೋಗಲಾಡಿಸುವವಕ್ಕೆ ಅನೇಕ ಪ್ರಯತ್ನಗಳು ನಡೆದಿರುವವು. ಅವುಗಳಲ್ಲಿ ಬಾಲವೀರ ಶಿಕ್ಷಣವು ಮಹತ್ವದ್ದಿದ್ದು, ಜಗತ್ತಿನ ಮುಂದೊರೆದ ಎಲ್ಲ ರಾಷ್ಟ್ರಗಳಲ್ಲಿ ಪ್ರಚಾರದಲ್ಲಿ ಬರಹತ್ತಿದೆ. ಇವರ ಉತ್ಪಾದಕರು ಪ್ರಸಿದ್ಧ ಅಂಗ್ಲ ಸದ್ಗೃಹಸ್ಥರಾದ ಸರ ಬೇಡೆನ್ ಪಾವೆಲ್ಲರು. ಈ ಶಿಕ್ಷಣವು ಕಳೆದ ೮-೧೦ ವರ್ಷಗಳಿಂದ ನಮ್ಮ ದೇಶದಲ್ಲಿಯೂ ಜೋರಿನಿಂದ ಸಾಗದೆ ಇದ್ದರಿಂದ ಈ ಶಿಕ್ಷಣದ ಧ್ಯೇಯವೇನಿದೆ, ಇದರಿಂದ ಯಾವ ಲಾಭಗಳಾಗುತ್ತವೆ ಎಂಬದನ್ನು ಸ್ವಲ್ಪದರಲ್ಲಿ ನಿವೇದಿಸುವೇವು:—

ಬಾಲಕರ ಶಿಕ್ಷಣದಲ್ಲಿ ೩ ಅಂಗಗಳಿರುವವು. (೧) ಶಾರೀರಕ ಶಿಕ್ಷಣ. (೨) ಬೌದ್ಧಿಕ ಶಿಕ್ಷಣ. (೩) ನೈತಿಕ ಶಿಕ್ಷಣ. ಸಾಲೆಗಳಲ್ಲಿ ಬೌದ್ಧಿಕ ಶಿಕ್ಷಣವು ಕೆಲಮಟ್ಟಿಗೆ ದೊರೆಯುವದು, ಆದರೆ ಶಾರೀರಕ ಶಿಕ್ಷಣ ಮತ್ತು ನೈತಿಕ ಶಿಕ್ಷಣಗಳ ಕಡೆಗೆ ತೀರ ಕಡಿಮೆ ಲಕ್ಷಪೂರ್ವಕವಿಸಲ್ಪಡುತ್ತದೆ. ಆದುದರಿಂದ ಈ ನ್ಯೂನತೆಗಳನ್ನ ಪೂರ್ವಿಸಲು ಬಾಲವೀರ ಶಿಕ್ಷಣದಿಂದ ತುಂಬಾ ಸಾಧ್ಯವದೆ. ಯುವಕರು ಸಶಕ್ತರೂ, ಬುದ್ಧಿವಂತರೂ, ನೀತಿವಂತರೂ ಆಗಬೇಕೆಂಬುದೇ ಇದರ ಮುಖ್ಯೋದ್ದೇಶವು. ಬಾಲಕರು ನಿರೋಗಿಗಳೂ, ಸೊಲ್ಲಾಸಿಗಳೂ, ಪರೋಪಕಾರಿಗಳೂ ಆವಲ್ಲಿ ದೇಶದ ಸರ್ವತೋ ಮುಖ್ಯವ ಅಭಿವೃದ್ಧಿ ಈಡೇರುವದು.

ಈ ಜಳವಳಿಯು ಯಾವ ಪಂಥಕೂ ಧರ್ಮಕ್ಕೂ ರಾಜಕಾರಣಕ್ಕೂ ಸಂಬಧಿಸಿಲ್ಲ ಆದಾಗ್ಯೂ ಯಾವ ಧರ್ಮಕ್ಕಾಗಲಿ ರಾಜ್ಯಾಡಳತೆಗಾಗಲಿ, ವಿರೋಧವಾಗಿರದೆ ಅನುಕೂಲವಾಗಿರುವದು. ಬಾಲಕರು ಪರಸ್ಪರ ಪ್ರೇಮ, ಆದರ ಬುದ್ಧಿ, ಸಹಾಯಕ ಬುದ್ಧಿ ಮೊದಲಾದ ಉಜ್ವಲ ಗುಣಗಳಿಂದ ದೇಶದ ಧಾರಾಳವಾದ ಸುಖ ಶಾಂತತೆಗೆ ಸಹಾಯಕರಾಗುವದು:—ಬಾಲವೀರ ನಿಯಮಗಳನ್ನು ಪರಿಶೀಲಿಸಿದರೆ ಈ ಶಿಕ್ಷಣವು ಎಷ್ಟು ಮಹತ್ವದ್ದೆಂದು ತಿಳಿದು ಬರುವದು.

(೧) ಬಾಲವೀರನು ಪ್ರಮಾಣಿಕನೂ ಸತ್ಯಪ್ರಿಯನೂ ಇರುವನು.

(೨) ತನ್ನ ರಾಜನಲ್ಲಿಯೂ, ಮಾತೃ ಭೂಮಿಯಲ್ಲಿಯೂ ತುಂಬಾ ನಿಷ್ಠೆಯುಳ್ಳವನಿರುವನು.

(೩) ಯಾವಾಗಲೂ ಪರರಿಗೆ ಸಹಾಯಕನಾಗಿರುವನು.

(೪) ಎಲ್ಲ ಬಾಲವೀರರು ತನ್ನ ಸಹೋದರರೆಂದೂ ಉಳಿದವರೆಲ್ಲರು ಮಿತರೆಂದೂ ಬಗೆಯುವನು.

(೫) ಬಾ. ವೀ. ವಿನಯಶೀಲನಾಗಿರುವನು.
(೬) ಪ್ರಾಣಿಗಳಲ್ಲಿ ಭೂತದಯವುಳ್ಳವನಾಗಿರುವನು.
(೭) ಗುರು ಹಿರಿಯರಿಗೂ, ಮೇಲಾಧಿಕಾರಿಗಳಿಗೂ ವಿಧೇಯನಾಗಿರುವನು.
(೮) ಎಂಥ ಅಪಚಣೆಗಳು ಬಂದರೂ ಉಲ್ಲಾಸವೃತ್ತಿಯಿಂದ ಇರುವನು.
(೯) ಮಿತವ್ಯಯದಿಂದ ಬಾಳುವೆಯನ್ನು ಮಾಡುವನು.
(೧೦) ಕಾಯಾ,ವಾಚಾ, ಮನಸಾ (ತ್ರಿಕರಣ) ಶುದ್ಧವಾಗಿರುವನು.

ಹೀಗೆ ಹತ್ತು ನಿಯಮಗಳನ್ನು .ತಪ್ಪದೇ ಪಾಲಿಸುವನು. ದೇವರಿಗೂ, ರಾಜನಿಗೂ, ತನ್ನ ಭೂಮಿಗೂ ವಿಧೇಯನಾಗಿರುವೆನೆಂದೂ, ಯಾವಾಗಲೂ ಪರರಿಗೆ ಸಹಾಯಕನಾಗುವೆನೆಂದೂ, ಬಾಲವೀರ ನಿಯಮಗಳನ್ನು ಪಾಲಿಸುವೆನೆಂದೂ ಪ್ರತಿಜ್ಞೆಯನ್ನು ಮಾಡಿರುವನು. ಸದಾ ಸಿದ್ಧನಿರುವದೇ ಅವನ ಜೀವದ ಗುಟ್ಟು.

ಜಗತ್ತಿನ ಯಾವತ್ತು ಸ್ಕೌಟರು ಒಂದೇ ಕುಟುಂಬದವರೆಂದು ಭಾವಿಸುವರು. ನಮ್ಮ ಸಾಮ್ರಾಜ್ಯ ಸ್ಕೌಟ ಸಂಘಕ್ಕೆ ಸರ್ ಬೇಡನ್ ಪಾವಲ್ಲರೇ ಮುಖ್ಯ ಸ್ಕೌಟರು. ಅವರ ನೇತೃತ್ವದಲ್ಲಿ ಇದು ಸರಿಯಾಗಿನಡೆದದೆ ಈ ಬಾಲ ಸ್ಕೌಟ ಪದ್ಧತಿಯಿಂದ ಶಿಕ್ಷಣದಲ್ಲಿ ಮತ್ತು ಇರುವೆಕೆಯಲ್ಲಿ ಇರುವ ದೊಷಗಳು ದೂರಾಗುವುದು ಸಮಶಕ್ಯವದೆ

ದೋಷಗಳು:—ಈಗ ನಮ್ಮ ಶಾಲೆ ಮತ್ತು ಮನೆಗಳಲ್ಲಿ ದೊರೆಯುವ ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ವ್ಯವಹಾರ ಚತುರತನವು ಬರುವದಿಲ್ಲ, ಸ್ವಾವಲಂಬನವು ಉಂಟಾಗುವದಿಲ್ಲ, ಪರಸ್ಪರ ಸಹಾಯಕ ಬುದ್ಧಿಯು ಜನಿಸುವದಿಲ್ಲ. ನಾವೂ ಏಕ ಪದ್ಧತಿಯಿಂದ ಕೆಲಸಮಾಡುವ ಗುಣವು ರೂಢಿಸುವದಿಲ್ಲ. ಆದ್ದರಿಂದ ಸ್ವಾರ್ಥ, ಅಹಂಕಾರ, ಪರಾವಲಂಬನ, ಕಲಹಪ್ರೇಮ, ವೈಯಕ್ತಿಕತ್ವ, ಮುಂತಾದ ಅವಗುಣಗಳು ಮನೆಮಾಡಿಕೊಂಡು ಮಹದಾಪತ್ತಿಗೆ ಯುವಕರನ್ನು ಗುರಿಮಾಡುತ್ತವೆ. ಶಿಕ್ಷಣಕ್ಕೂ ದೇಶದ ಪರಿಸ್ಥಿತಿಗೂ ವಿದ್ಯಾರ್ಥಿಗಳ ಸ್ಥಿತಿಗಳಿಗೂ ತಾಳ ಮೇಳವದಿಲ್ಲ. ಆದ್ದರಿಂದ ಈ ಶಿಕ್ಷಣದಿಂದ ಅನೇಕ ವಿದ್ಯಾರ್ಥಿಗಳಿಗೆ ಹೇಳಿಕೊಳ್ಳುವಷ್ಟು ಲಾಭವಾಗುವದಿಲ್ಲ.

ಮಾನಸಿಕ ಸಂಸ್ಕೃತಿಯಾಗದೆ ಈಗಿನ ಶಿಕ್ಷಣದಿಂದ ಪಾಶ್ಚಾತ್ಯ ದೇಶಗಳಲ್ಲಿ ಕೂಡ ವಿದ್ಯಾರ್ಥಿಗಳು ಯಂತ್ರಗಳಂತೆ ಯೋಗ್ಯಾಯೋಗ್ಯ ವಿಚಾರವಿಲ್ಲದೆ ಕಾರ್ಯತತ್ಪರರಾಗುವರು, ಕಾಯದೇ ಕಾನೂನು ಕಟ್ಟಳೆ ಮುಂತಾದವನ್ನು ಶಬ್ದಶಃ ನಡೆನುಡಿಯಲ್ಲಿ ಪಾಲಿಸಬಹುದು. ಅವರೆ ಅವುಗಳ ಇಂಗಿತವು ಮನಸಾ ದುರ್ಲಕ್ಷಿಸಲ್ಪಡುವದು. ಆದ್ದರಿಂದ ಈಗಿನ ಶಿಕ್ಷಣವು ದೇವರಿಲ್ಲದ ಗುಡಿಯಂತೆ, ಗುರುವಿಲ್ಲದ ಮಠದಂತೆ ಅಮಂಗಲವಾಗಿರುವದು.

ಶಾರೀರಕ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವಿಲ್ಲ. ಆಹಾರ ವಿಹಾರಗಳಲ್ಲಿ ಹೇ
ರಬೇಕು, ಆರೋಗ್ಯ ರಕ್ಷಣೆಯನ್ನು ಹೇಗೆಮಾಡಿಕೊಳ್ಳಬೇಕು, ಬೇನೆ ಬೇಸರ
ಗಳಲ್ಲಿ ಯಾವ ಉಪಚಾರಗಳನ್ನು ಮಾಡಿಕೊಳ್ಳಬೇಕು, ಅಂಗಸಾಮರ್ಥ್ಯವನ
ಹೇಗೆ ಬಲಪಡಿಸಬೇಕು? ಇತ್ಯಾದಿ ಜ್ಞಾನ ವಿಶೇಷತಃ ಸರಿಯಾದ ಜೀವನ ಕ್ರಮ
ದ ಅಭ್ಯಾಸವಾಗುವದಿಲ್ಲ. ಜಿದ್ದರಿಂದ ಇವೇ ಮೊದಲಾದ ದೋಷಗಳನ್ನು ಹೊ
ಗಲಾಡಿಸಿ ಈಗಿನ ಶಿಕ್ಷಣದಲ್ಲಿಯ ನ್ಯೂನತೆಗಳನ್ನು ಪೂರ್ಕಿಸುವದೇ ಸ್ಕೌ
ಪದ್ಧತಿಯ ಉದ್ದೇಶ

ಸ್ಕೌಟಿಗ ಕೊಡತಕ್ಕ ಶಿಕ್ಷಣ ಕ್ರಮ:—ಸ್ಕೌಟ ನಿಯಮಗಳನ್ನು ಮ
ನ ಮಾಡಿಕೊಂಡು ಅದರಂತೆ ವರ್ತಿಸುವದು. ಸಾಮೂಹಿಕ ರೀತಿಯಿಂದ ಕೆಲ
ಮಾಡುವದು. ಯಾವಾಗಲೂ ಪರೋಪಕಾರ ನಿರತನಾಗಿ ಲೋಕಸೇವಕನಾ
ರುವದು. ಸದಾ ಉಲ್ಲಾಸವೃತ್ತಿಯಿಂದ ಎಡರಿಗೆ ಎದೆಗುಂದದೆ ಕೆಲಸಮಾ
ಲಿಕ್ಕೆ ಸಿದ್ಧನಾಗಿರುವದು. ಸ್ಕೌಟ ದಂಡದ ಉಪಯೋಗವನ್ನು ತಿಳಿದುಕೊ
ಳ್ಳುವದು. ಸ್ಕೌಟ ಸೀಟಿಯ (ಧ್ವನಿಯ) ಸಂಕೇತಗಳನ್ನು ತಿಳಿಯುವದು
ಮಲಕು, ಕೊಡದ ಮಲವು ಮೊದಲಾದ ಗಂಟುಗಳನ್ನು ಹಾಕುವದೂ ಮತ್ತು
ಅವುಗಳ ಉಪಯೋಗವನ್ನು ಕಲಿಯುವದು ಯೂನಿಯನ್ ಜಾಕ್ (ಬ್ರಿಟಿಶ
ಪತಾಕೆ)ದ ಜ್ಞಾನವನ್ನು ಮಾಡಿಕೊಂಡು ಅದನ್ನು ಬಿಚ್ಚುವದು ಮತ್ತು ಸುತ್ತು
ವದು ಇತ್ಯಾದಿ ವಿಷಯಗಳು ಆರಂಭದಲ್ಲಿ ಕಲ್ಪಿಸಲ್ಪಡುವವು. ಇಷ್ಟು ಶಿಕ್ಷಣ
ವನ್ನು ಗಳಿಸಿದ ಹುಡುಗರಿಗೆ ಸ್ಕೌಟ ದೀಕ್ಷೆ ಕೊಡಲ್ಪಟ್ಟು ದಂಡ, ಬಿಲ್ಲೆ
ಮುಂತಾದವು ಕೊಡಲ್ಪಡುವವು. ಮತ್ತು ಇಂಥವನಿಗೆ ಟೆಂಡರ ಫುಟ್ (ಮೃ
ಡಿ) ಎಂದು ಕರೆಯುವರು

ಮುಂದೆ ೨ನೆಯ ವರ್ಗದ ಸ್ಕೌಟ, ೧ನೆಯ ವರ್ಗದ ಸ್ಕೌಟ, ಕಡೆಗೆ ಕಿಂಗ್
(ಅರಸು) ಸ್ಕೌಟ ಎಂಬ ಹೆಚ್ಚಿನ ತರಗತಿಗಳಿಗೆ ಶಿಕ್ಷಣವನ್ನು ಪಡೆದ ಹಾಗೆ
ಏರುವನು.

ಸ್ಕೌಟನು ನಿರೀಕ್ಷಣ ಶಕ್ತಿಯನ್ನು ಬೆಳಿಸಬೇಕು. ಪಶು, ಪಕ್ಷಿ ವನಸ್ಪತಿ
ಮೊದಲಾದ ವಿಷಯಗಳ ಜ್ಞಾನವನ್ನು ಸಾಕ್ಷಾತ್ ಸೃಷ್ಟಿಯು ನಿರೀಕ್ಷಣದಿಂದ
ಮಾಡಿಕೊಳ್ಳಬೇಕು. ಶುದ್ಧ ಹವೆಯಲ್ಲಿ ಸಂಚರಿಸಿ ಆಟಗಳನ್ನೂ ವಿನೋದಗಳ
ನ್ನೂ ಜೊತೆಗಾರರೊಡನೆ ಆಡಬೇಕು. ಪ್ರಥಮ ಚಿಕಿತ್ಸೆಯನ್ನು ಕಲಿತುಕೊಳ್ಳ
ಬೇಕು. ಆರೋಗ್ಯಕರ ಆಹಾರ, ಹವೆ, ನೀರು ಇವುಗಳ ಲಕ್ಷಣಗಳನ್ನು ತಿಳಿ
ದುಕೊಳ್ಳಬೇಕು. ಸ್ವಾವಲಂಬಿಯಾಗಿ ಪರರಿಗೆ ಸಹಾಯ ಮಾಡುತ್ತ ಏನಾದ
ರೂ ಗಳಿಸಿ ತನ್ನ ಗಳಿಕೆಯ ಕೆಲವೊಂದು ಭಾಗವನ್ನು ಉಳಿತಾಯ ಮಾಡಿ ಬ್ಯಾಂ
ಕಿನಲ್ಲಿಡಬೇಕು. ಬಡಿಗತನ, ಹಗ್ಗ ಹೊಸೆಯುವದು, ಕಟ್ಟಿಗೆ ಕಡಿಯುವದು,
ಹಗ್ಗಗಳ ಶೇತುವೆ ಕಟ್ಟುವದು, ಗುಡಿಸಲ ಕಟ್ಟುವದು, ಹುಲ್ಲಿನ ಗಾಡಿ

ಯುವದು, ಅಡಿಗೆ ಮಾಡುವದು, ಹೆಜ್ಜೆಯಗುರ್ತು ಹಿಡಿಯುವದು, ನ್ನಲ್ ಕಲಿಯುವದು ಮುಂತಾದ ಸಂಸಾರಕ್ಕೆ ಅನಕೂಲವಾದ ಾವತ್ತು ವಿಷಯಗಳ ಜ್ಞಾನವನ್ನು ಸ್ಕೌಟನು ಹೊಂದಬೇಕು. ಲ್ಲದೆ ಬೇರೆ ಇಚ್ಛಾವಿಷಯಗಳ ಅಧ್ಯಯನವನ್ನು ಮಾಡಬೇಕು. ಮತ್ತು ಾವದಾದರೊಂದು ತನಗೆ ಶೀರುವ ವಿಷಯದಲ್ಲಿ ಹವ್ಯಾಸವುಳ್ಳವನಾಗಿ ದರಲ್ಲಿ ಪ್ರತೀತೆಯನ್ನು ಪಡೆಯಬೇಕು. ಯಂತ್ರಗಳ ಜ್ಞಾನವನ್ನಾಗಲ್ಲಿ, ಖ್ಯಪತ್ರಗಳ ಜ್ಞಾನವನ್ನಾಗಲಿ, ತೋಟಿಗನ ಜ್ಞಾನವನ್ನಾಗಲಿ, ತನಗೆ ಾಧ್ಯವಾದ ಯಾವದೇ ಜ್ಞಾನವನ್ನಾಗಲಿ.ಸ್ಕೌಟನು ಸತತ ಸಂಗ್ರಹಿಸಲು ಪ್ರಯ ಸುತ್ತಿರಬೇಕು ಯಾವಾಗಲೂ ಸ್ವಾಂವಲಂಬಿಯಾಗಿ ಒಂದಿಲ್ಲೊಂದು ಕಲೆ ುಲ್ಲಿ ನಿಪುಣನಾಗಿದ್ದು ವ್ಯವಹಾರಕ್ಕೆ ಬೇಕಾಗುವ ಸಾಮಾನ್ಯ ಜ್ಞಾನಾನುಭವ ಳನ್ನು ದಕ್ಷತೆಯಿಂದ ಹೊಂದಿ ತನ್ನ ಬಾಳುವೆಯನ್ನು ಅತ್ಯಂತ ಸುಖಮಯ ುಗಿ ಮಾಡಿಕೊಳ್ಳಬೇಕು ಹೀಗೆ ಸ್ಕೌಟನು ಸರ್ವಾಂಗ ಸುಂದರವಾದ ಂಸ್ಕೃತಿಯುಳ್ಳವನಾಗಿ ದೇಶಕ್ಕಾಗಲಿ, ಸಮಾಜಕ್ಕಾಗಲಿ, ಬಂಧುಗಳಿಗಾಗಲಿ ರಕಾರಕ್ಕಾಗಲಿ, ಸ್ನೇಹದವರಿಗಾಗಲಿ ಭಾರವಾಗದೆ ಪ್ರತಿಯಾಗಿ ಸರ್ವರಿಗೂ ದಾ ಸಹಾಯಕನಾಗಿ ರಾಷ್ಟ್ರದ ಶಾಂತತೆಗೂ ಭೂಮಂಡಲದ ಶಾಂತತೆಗೂ ಹಗಳಿ ಳು ಚಿಂತಿಸುವನಾಗಬೇಕು.

ಈ ಶಿಕ್ಷಣದಿಂದ ಶಾರೀರಿಕ, ಬೌದ್ಧಿಕ ಮತ್ತು ನೈತಿಕ ಸಾಮರ್ಥ್ಯ ಪ್ರ ಜನ್ನಾ ುಂಟಾಗುವದು. ಇದು ಭೂಮಂಡಲವಲ್ಲೆಲ್ಲ ಹಬ್ಬಿ ಅನ್ಯಾಯ, ಜುಲುಮೆ, ಸಮ ದೃಷ್ಟಿ ಮೊದಲಾದ ದೋಷಗಳನ್ನು ತೆಗೆದು ಹಾಕಿ ಅಖಿಲ ದೇಶಗಳಲ್ಲಿ ರಸ್ಪರ ಸಹಕಾರ ಬುದ್ಧಿಯನ್ನೂ, ಸಮಭಾವನೆಯನ್ನೂ ುಂಟು ಮಾಡಿ ಈ ೀ ಭೂಮಂಡಲದ ಶಾಂತತೆಗೆ ಕಾರಣವಾಗುವದೆಂಬ ಚಿತ್ಯ ವಿಶ್ವಾಸವನ್ನು ಚಳವಳಿಯ ಪುರಸ್ಕರ್ತರು ತಾಳಿರುವರು. ನಮ್ಮ ದೇಶವು ಈ ಚಳವಳಿಯಲ್ಲಿ ುಂದಾಗುವದೆಂದು ಆಶಿಸುವೆವು.

ಸಂಪಾದಕ

ಕೆ. ಎಲ್. ಇ. ಎಸ್. ಹಾಯಸ್ಕೂಲ, ಧಾರವಾಡ.

ಸ್ಕವುಟ ಗೀತೆ

ವೀರಬಾಲರೈದಿ ವೆರಸಿ । ಭೂರಿ ನಿಸ್ಪೃನುಡಿಗೆ ಧರಿಸಿ।
ವೀರಜನನಿ ಪುತ್ರರೆನಿಸಿ ಧೀರ ಸತ್ಯವ್ರತವ ಚರಿಸಿ ॥ ೧ ॥
ನಿರುತ ನಿಷ್ಠೆವಂತರಾಗಿ । ಪರಸಹಾಯ ಮೋದದೆಸಗಿ ।
ವೀರಬಾಲ ಭಾತೃವೆಂದು ಉಳಿದರೆಲ್ಲ ಮಿತ್ರರೆಂದು ॥ ೨ ॥

ಕೂಡಿ ನಿನುತ ಸುಜನ ತನವಿ । ಮೂಡಿ ಭೂತದಯವ ಮನದಿ ।
ಶಿಷ್ಟರೊಡನೆ ನಿಷ್ಠೆಯಿಂದೆ । ಕಷ್ಟದಲ್ಲಿ ಲಿಲೇಯಿಂದೆ ॥ ೩ ॥
ನಿವಿಧ ಮಿತಿಯ ಬಾಳ್ವೆಯಿಂದೆ । ತ್ರಿವಿಧ ಶುದ್ಧ ಚರಿತದಿಂದೆ ।
ಪತ್ನಿನಿಯಮ ಪಾಲಿಸುತ್ತೆ । ಪೊತ್ತುಗಳಿವೆ ಬಿನದಿಸುತ್ತೆ ॥ ೪ ॥

ಜಮುಂಗೀತೆ

ವೃಷಭನಂತೆ ನಿಷ್ಠ ಸಲಹಿ । ಸಿಂಹನಂತೆ ಧೈರ್ಯ ನೆಗಹಿ ।
ಆನೆಯಂತೆ ಶಕ್ತಿ ಪಡಿಸಿ। ಶ್ವಾನನಂತೆ ಶ್ರಮವ ಪಡಿಸಿ ॥ ೫ ॥
ಫಲಿತ ವೃಕ್ಷ ಶಾಖೆಯಲ್ಲಿ । ಪುಕಗಳಂತೆ ಮಾತನಾಡಿ ।
ತಳಿವ ಮಾಮರಂಗಳಲ್ಲಿ । ಪಿಕಗಳಂತೆ ಮುದದಿ ಪಾಡಿ ॥ ೬ ॥
ಪಳಕುವೆಸೆವ ಬೆಟ್ಟದಲ್ಲಿ । ಕೇಕಿಯಂತ ದೆಸೆಯ ನೋಡಿ ।
ಪರಿವ ತೊರೆಯ ತಡಿಗಳಲ್ಲಿ । ಸೊಗಯಿಪಂಜೆಯಂತಿರಾಡಿ ॥ ೭ ॥
ಲೀಲೆಯಿಂದ ಲಾಡುನಾ । ಮೋದದಿಂದ ಪಾಡುವಾ ।
ಪ್ರೇಮದಿಂದ ಕೂಡುವಾ । ಪೊಳ್ತನಿಂತು ಕಳೆಯುವಾ ॥ ೮ ॥

ಸ್ವಪುಟ ಪ್ರತಿಜ್ಞೆ

ದೇವದೇವನಂ । ಸಾರ್ವಭೌಮನಂ ।
ಮಾತೃಭೂಮಿಯಂ । ಸ್ತೋತ್ರ ಮಾಳ್ಪಿವೈ ॥
ಪರನಪಾಯವಂ । ನಿರುತಗೈವೆವೈ ।
ಸ್ವಪುಟ ನಿಯಮಮಂ । ನಾವು ಕಾಯ್ವೆವೈ ॥ ೧ ॥

ಸ್ವಪುಟದ ಅಭಿಮಾನ

ಅನ್ಯರ ವಿಶ್ವಾಸಂ ತಾ । ನೆನ್ನೋಳ್ ಸಲೆ ನೆಲಿಸುವಂತೆ ದೇವಗೆ ನರಗೆ
ಜನ್ಮಾಗಿ ಬದ್ಧನೆಂಬುವ ।
ಉನ್ನತ ಭಾವನೆಯದೆನ್ನಭಿಮಾನಂ ದಲ್ ॥ ೨ ॥

ಸ್ವಪುಟ ಘೋಷ.

ವಂದೇ ಈಶ್ವರಂ
ವಂದೇ ಭೂವರಂ
ವಂದೇ ಮಾತರಂ
ವಂದೇ ವಂದೇ ವಂದೇ

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ ೧೯೨೭-೨೮ನೇ ಸಾಲಿನ ಕಾರಭಾರದ ವರದಿಯು.

೧ ನೆಯ ಭಾಗ

ಸಾಮಾನ್ಯಪ್ರಗತಿ.

(೧) ಈ ವರದಿಯ ಕಾಲಾವಧಿಯಲ್ಲಿ ಒಟ್ಟು ೪೯೬ ಪ್ರಾಥಮಿಕ ಶಾಲೆಗಳೂ ೨೭ ಕ್ಲಾಸುಗಳೂ ಇದ್ದು ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೨೩೬೬೭ ಇರುವದು. ಹೋದಸಾಲಿನಲ್ಲಿ ಒಟ್ಟು ೪೮೫ ಶಾಲೆಗಳೂ ೨೬ ಕ್ಲಾಸುಗಳೂ ಇದ್ದು ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೪೮೯೯೬ ಇತ್ತು. ಈ ಒಡೆದು ಕಾಣುವ ಪ್ರಗತಿಗೆ ಸರಕಾರದಿಂದ ೫೦ ಹೊಸ ಶಾಲೆಗಳಬಗ್ಗೆ ಅಪ್ಪಣೆ ದೊರೆತಿದ್ದು ಅವುಗಳಲ್ಲಿ ೩೨ ಶಾಲೆಗಳನ್ನು ವರದಿಯ ವರ್ಷದ ಕೊನೆಯೊಳಗಾಗಿಯೇ ಪ್ರಾರಂಭಿಸಲ್ಪಟ್ಟದ್ದೂ ಶಿಕ್ಷಕರ ಕೊರತೆ ಇದ್ದ ಶಾಲೆಗಳ ಬಗ್ಗೆ ೫೧ ಜನ ಹೆಚ್ಚಿಗೆ ಶಿಕ್ಷಕರನ್ನು ನೇಮಿಸಿಕೊಂಡದ್ದೂ ಕಾರಣವಾಗಿವೆ. ಇದಲ್ಲದೆ ಅನೇಕ ಹೊಸ ಶಾಲೆಗಳನ್ನು ರಜಿಸ್ಟರಮಾಡಿ ದ್ರವ್ಯಸಹಾಯವನ್ನು ಅವುಗಳ ಯೋಗ್ಯತೆಯ ಪ್ರಕಾರಕೊಟ್ಟದ್ದು ಕೆಲಮಟ್ಟಿಗೆ ಕಾರಣವಾಗಿದೆ.

೨. ಹಿರೇಕೇರೂರ ಕನ್ನಡ ಗಂಡುಮಕ್ಕಳ ಶಾಲೆಗೆ ಜೋಡಿಸಿದ ಇಂಗ್ಲೀಷ ಇಯತ್ತೆಗಳ ಕಾರಭಾರವು ಸ್ಕೂಲ ಬೋರ್ಡಿಗೆ ಒಳಪಟ್ಟಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ಹೋದವರ್ಷ ೨೪ ಇದ್ದು ಈ ವರ್ಷ ೨೨ ಇರುವದು.

೩. ನವಲಗುಂದದಲ್ಲಿ ಹೊಸದಾಗಿ ಅಗ್ರಿಕಲ್ಚರಲ್ ಬಾಯಸ್ಕೂಲ (ಶೇತಕೀ ಶಾಲೆ) ಜೂನ ೧೯೨೭ ರಿಂದಲೇ ಪ್ರಾರಂಭವಾಯಿತು. ಅಮುಂಜೆ, ಇಂಥ ಮೂರು ಶಾಲೆಗಳು ಇದ್ದವು. ಇದನ್ನೊಡಗೊಂಡು ನಾಲ್ಕು ಶಾಲೆಗಳಾದಂತಾಯಿತು. ಇವುಗಳಿರುವ ಸ್ಥಳಗಳು:-ಹುಲಕೋಟಿ (ತಾಲೂಕ ಗದಗ) ಹಾಂಸಭಾವಿ (ತಾಲೂಕ ಹಿರೇಕೆರೂರ) ಹೊಸರಿತ್ತಿ (ತಾಲೂಕ ಹಾವೇರಿ) ಮತ್ತು ನವಲಗುಂದ (ತಾಲೂಕ ಸದರ). ಈ ವರ್ಗಗಳು ಚಲೋ ಪ್ರಗತಿಯನ್ನು ಮಾಡಿರುವವು. ಹುಲಕೋಟಿ ಮತ್ತು ಹೊಸರಿತ್ತಿಯ ಕ್ಲಾಸುಗಳಿಂದ ಕ್ರಮವಾಗಿ ೧೭, ೧೧ ಉಮೇದವಾರರು ವ್ಹರ್ನ್ಯಾಕ್ಯುಲರ ಫಾಯಿನಲ್ ಪರೀಕ್ಷೆಗೆ ಕುಳಿತಿದ್ದರು.

೨ನೆಯ ಭಾಗ.

ಆಡಳಿತ.

೪ ೧೯೨೭ನೇ ಜುಲೈ ೧ನೇ ತಾರೀಖಿನಿಂದ ಇನ್ಸಪೆಕ್ಟರರು ಮತ್ತು ಕಾರಕೂನರು ಇವರಲ್ಲಿ ಸಂಪೂರ್ಣ ಬದಲಾವಣೆಯಾಯಿತು. ಯಾವತ್ತು ಸರಕಾರಿ ಇನ್ಸಪೆಕ್ಟರರು ಮತ್ತು ಕಾರಕೂನರು ಸರಕಾರದಿಂದ ತಿರುಗಿ ತೆಗೆದು ಕೊಳ್ಳಲ್ಪಟ್ಟು ಬೋರ್ಡಿನವರು ತಮ್ಮ ಸ್ವಂತ ೮ ಜನ ಸುಪರವ್ಹಾಯಿಜರರನ್ನು ೬ ಜನ ಕಾರಕೂನರನ್ನು ನೇಮಿಸಿಕೊಂಡರು. ಆದರೆ ಸರಕಾರದಿಂದ ಕೊಡಲ್ಪಟ್ಟ ೧೦ ಜನ ಸಿಪಾಯರನ್ನು ಮಾತ್ರ ೩ ವರ್ಷಗಳವರೆಗೆ ಸರಕಾರದವರಿಂದ ಅವರ ಬಗ್ಗೆ ಸಂಪೂರ್ಣ ಗ್ಯಾರಂಟು ದೊರೆಯುವ ಶರ್ತಿನಿಂದ ಕೆಲಸದ ಮೇಲೆ ಇಟ್ಟುಕೊಳ್ಳಲ್ಪಟ್ಟಿದೆ.

೫ ಅಸ್ಸಿಸ್ಟೆಂಟ್ ಇನ್ಸ್ಪೇಕ್ಟರ ಆಫೀಸರನ ನೇಮಣುಕಿಯ ವಿಷಯದಲ್ಲಿ ಬೋರ್ಡಿನವರೂ ಲೋಕಲ್ ಅಥಾರಿಟಿಯವರೂ ಸರಕಾರಕ್ಕೆ ಒಬ್ಬ ಉಮೇದವಾರನನ್ನು ಎರಡಾವರ್ತಿ ಶಿಫಾರಸು ಮಾಡಿದರು. ಆದರೆ ಸರಕಾರದವರು ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲ. ಆದ್ದರಿಂದ ಸರಕಾರದಿಂದ ಕೊಡಲ್ಪಟ್ಟ ಏ. ಓ. ರಾ। ರಾ। ಜಿ. ಬಿ. ಜಮಖಂಡಿ ಇವರು ಜುಲೈ ೧೯೨೭ ರಿಂದ ನಿವೃತ್ತರಾದ್ದರಿಂದ ಆ ಜಾಗೆಯು ತುಂಬಲ್ಪಟ್ಟಿಲ್ಲ.

೩ನೆಯ ಭಾಗ.

ಪ್ರಾಥಮಿಕ ಶಾಲೆಗಳು

೬ **ಲೋಕಲ್ ಬೋರ್ಡ ಶಾಲೆಗಳು**:—(೫೧೫ ಶಾಲೆಗಳೂ ೨೨ ಕ್ಲಾಸುಗಳೂ ಗಂಡು ಹುಡುಗರ ಬಗ್ಗೆ ಮತ್ತು ೭೫ ಶಾಲೆಗಳೂ ೩ ಕ್ಲಾಸುಗಳು ಹೆಣ್ಣು ಮಕ್ಕಳ ಬಗ್ಗೆ) ಹೀಗೆ ೫೯೦ ಶಾಲೆಗಳೂ ೨೫ ಕ್ಲಾಸುಗಳೂ ಇದ್ದು ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೪೩೦೪ ಇರುವದು. ಹೋದವರ್ಷ ೫೫೯ ಶಾಲೆಗಳೂ ೨೫ ಕ್ಲಾಸುಗಳೂ ಇದ್ದು ವಿದ್ಯಾರ್ಥಿಗಳ ಸಂಖ್ಯೆಯೂ ೪೯೬೭ ಇತ್ತು. ನಿಜವಾಗಿ ಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಹೋದವರ್ಷಕ್ಕಿಂತ ಈ ವರ್ಷದಲ್ಲಿ ಹೆಚ್ಚಾಗಿದೆ. ಇದಕ್ಕೆ ಸರಕಾರದವರಿಂದ ೫೦ ಹೊಸ ಶಾಲೆಗಳನ್ನು ತೆಗೆಯುವ ಬಗ್ಗೆ ಅಪ್ಪಣೆ ದೊರೆತುದ್ದೇ ಕಾರಣವು.

೭ **ನಾನ್ ಲೋಕಲ್ ಅಥಾರಿಟಿ ಮುನ್ಸಿಪಾಲಟಿ ಶಾಲೆಗಳು**:— ಜಿಲ್ಲಾ ಸ್ಕೂಲಬೋರ್ಡಿನ ಆಡಳಿತಕ್ಕೆ ಒಪ್ಪಿಸಲ್ಪಟ್ಟ ೫ ಮುನ್ಸಿಪಾಲಟಿ ಹದ್ದಿನಲ್ಲಿ

೨೪ ಶಾಲೆಗಳೂ ೨ ಕ್ಲಾಸುಗಳೂ ಇರುವವು. ಅವುಗಳಲ್ಲಿ ೧೬ ಶಾಲೆಗಳೂ ೨ ಕ್ಲಾಸುಗಳೂ ಗಂಡು ಹುಡುಗರವು ೮ ಶಾಲೆಗಳು ಹೆಣ್ಣು ಹುಡುಗರವೂ ಇದ್ದು ವಿದ್ಯಾರ್ಥಿಗಳ ಸಂಖ್ಯೆಯು ೩೭೧೬ ಇರುವದು. ಹೋದವರ್ಷ ೨೩ ಶಾಲೆಗಳೂ ೨ ಕ್ಲಾಸುಗಳೂ ಮತ್ತು ೩೩೭೫ ವಿದ್ಯಾರ್ಥಿಗಳೂ ಇದ್ದದ್ದಾಗಿತ್ತು. ಅರ್ಥಾತ್ ಹೋದವರ್ಷಕ್ಕೂ ಈ ವರ್ಷಕ್ಕೂ ಅಷ್ಟೇನೂ ಹೆಚ್ಚುಕಡಿಮೆಯಾಗಿರದೆ ನವಲ ಗುಂದದಲ್ಲಿ ೧ ಉರ್ದು ಶಾಲೆಯು ಮಾತ್ರ ಹೊಸದಾಗಿ ಸ್ಥಾಪಿತವಾಗಿದೆ.

೮ ಸಹಾಯ ಹೊಂದುತ್ತಿರುವ ಶಾಲೆಗಳು. ಇಂಥ ೨೧೫ ಶಾಲೆಗಳಿದ್ದು ವಿದ್ಯಾರ್ಥಿಗಳ ಸಂಖ್ಯೆಯ ೭೫೧೩ ಇರುವದು. ಹೋದವರ್ಷ ೧೬೩ ಶಾಲೆಗಳೂ ೬೦೭೪ ವಿದ್ಯಾರ್ಥಿಗಳೂ ಇದ್ದರು. ೧೯೨೩ನೆಯ ಪ್ರಾಥಮಿಕ ಶಿಕ್ಷಣದ ಕಾಯ ದೆಯ ನಿಯಮಗಳ ಪ್ರಕಾರ ಇಂಥ ಶಾಲೆಗಳಿಗೆ ಚನ್ನಾಗಿ ದ್ರವ್ಯಸಹಾಯವು ಮಾಡಲ್ಪಡುವದೆಂದು ಇದ್ದವರಿಂದ ಈ ಶಾಲೆಗಳು ಇಷ್ಟು ಹೆಚ್ಚಾಗಿವೆ.

೯. **ರಾತ್ರಿ ಶಾಲೆಗಳು**:—ಈ ವರ್ಷ ೧೪ ಶಾಲೆಗಳೂ ೨೦೭ ವಿದ್ಯಾರ್ಥಿ ಗಳೂ ಇರುವರು. ಹೋದವರ್ಷ ನಾಲ್ಕು ಶಾಲೆಗಳೂ ೧೧೦ ವಿದ್ಯಾರ್ಥಿಗಳೂ ಇದ್ದರು. ಈ ಪ್ರಗತಿಗೆ ಕಾರಣವು ಮೇಲಿನ ೭ನೆಯ ಪ್ಯಾರಾದಲ್ಲಿ ಹೇಳಲ್ಪಟ್ಟಿದೆ.

೧೦ ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳಲ್ಲಿ ತಾ॥ ೩೧-೩-೧೯೨೪ನೆ ಯ ದಿವಸ ೩೪೦೦ ವಿದ್ಯಾರ್ಥಿಗಳು ಇದ್ದು ಹೋದವರ್ಷ ೪೮೪೦ ವಿದ್ಯಾರ್ಥಿಗಳು ಇದ್ದರು; ಆದರೆ ಕೆಳಗಿನ ಇಯತ್ತೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಈ ವರ್ಷ ೪೪೬೨೧ ಹೋದವರ್ಷ ೪೪೨೬೩ ಇತ್ತು. ಎಲ್ಲ ಶಾಲೆಗಳ ಎಲ್ಲ ವಿಷಯಗಳ ಪರೀಕ್ಷೆಯನ್ನು ಸುಪರವ್ಹಾಯಿಜರರೇ ಈ ವರ್ಷ ತೆಗೆದು ಕೊಂಡಿರುವರು. ಹೋದವರ್ಷ ಡೆಪುಟಿಯವರು ತೆಗೆದು ಕೊಂಡಿದ್ದರು.

೧೧ **ಅಧ್ಯಾಪಕರು**:— ಬೋರ್ಡಿನ ಆಡಳಿತೆಯಲ್ಲಿ ಈ ವರ್ಷ ೧೦೩೪ ಜನ ಟ್ರೇಂಡ ಅಧ್ಯಾಪಕರು ಇದ್ದು ಹೋದವರ್ಷ ೧೦೫೯ ಜನರಿದ್ದರು. ಆದರೆ ಅನ್‌ಟ್ರೇಂಡ ಶಿಕ್ಷಕರ ಸಂಖ್ಯೆ ಹೋದವರ್ಷ ೨೫೨ ಇದ್ದು ಈ ವರ್ಷ ೩೨೪ ಆಗಿ ಪಿ. ಶಿಕ್ಷಕರ ಕೊರತೆ ಇದ್ದ ಶಾಲೆಗಳ ಕೊರತೆಯನ್ನು ಪೂರೈಸುವದಕ್ಕಾಗಿ ಹೊಸ ಉಪಶಿಕ್ಷಕರನ್ನು ನೇಮಿಸಿಕೊಂಡದ್ದಕ್ಕಾಗಿ ಒಟ್ಟಿನಮೇಲೆ ೪೯ ಜನ ಅಧ್ಯಾಪಕರು ಈವರ್ಷಾವಧಿಯಲ್ಲಿ ಹೆಚ್ಚಾಗಿದ್ದಾರೆ.

ಟ್ರೇಂಡ ಜನರ ಸಂಖ್ಯೆಯು ನೂರಕ್ಕೆ ೫೦ ರಂತೆ ಆಗುವವರೆಗೆ ಟ್ರೇಂಡ ಶಿಕ್ಷಕರ ಸಂಖ್ಯೆಯು ಬರಬರುತ್ತ ಕಡಿಮೆಯಾಗುವದು ಮತ್ತು ಅನ್‌ಟ್ರೇಂಡ ಶಿಕ್ಷಕರ ಸಂಖ್ಯೆಯು ಅದೇ ಪ್ರಮಾಣದಂತೆ ಹೆಚ್ಚುಮಾಡಲ್ಪಡುವದು.

೧೨ **ಹಳ್ಳಿಯ ಶಾಲೆಯ ಸಂಚಾರು:** - ಪ್ರಾಥಮಿಕ ಶಿಕ್ಷಣದ ಕಾಯ್ದೆಯ ೧೯೨೪ನೇ ಇಸ್ವಿಯ ನಿಯಮಗಳ ಪ್ರಕಾರ ಸ್ಥಾನಿಕ ಜನ ಸಮುದಾಯದ ಪ್ರತಿನಿಧಿಗಳ ಒಂದು ಪಂಚ ಕಮಿಟಿಯು ಶಾಲೆಯ ಮೇಲ್ವಿಚಾರಣೆಯ ಬಗ್ಗೆ ನಿರ್ಮಿಸಲ್ಪಡಬೇಕೆಂದು ಇದ್ದದರಿಂದ ಮತ್ತು ಈ ಕಮಿಟಿಗಳಿಗೆ ಶಾಲೆಯ ಆಡಳಿತೆಯಲ್ಲಿ ಕೆಲವು ಅಧಿಕಾರಿಗಳನ್ನು ಕೊಡಬೇಕಾದ್ದರಿಂದ ಸ್ಕೂಲ ಬೋರ್ಡಿನವರು ಧಾರವಾಡ, ಕೋಡ, ರೋಣ, ಈ ಮೂರು ತಾಲೂಕುಗಳನ್ನುಳಿದು ಉಳಿದ ಜಿಲ್ಲೆಯ ಯಾವತ್ತೂ ಭಾಗಗಳಲ್ಲಿ ಈ ಕಮಿಟಿಗಳನ್ನು ಈಗಾಗಲೇ ನಿರ್ಮಾಣ ಮಾಡಿರುವರು ಮೇಲ್ಕಂಡ ಮೂರುತಾಲೂಕುಗಳಲ್ಲಿ ಕೂಡಾ ಈ ತರದ ವ್ಯವಸ್ಥೆಯು ಮಾಡಲ್ಪಡುವದರಲ್ಲಿ ಬರುವದು. ಈ ಕಮಿಟಿಗಳಿಂದ ಶಾಲೆಗಳ ಆಡಳಿತ ಮತ್ತು ವ್ಯವಸ್ಥೆಗಳಲ್ಲಿ ಚನ್ನಾಗಿ ಸಹಾಯವು ದೊರೆತಿದೆ.

೧೩ **ಶಾಲೆಯ ಹುಡುಗರ ಸಹಕಾರೀ ಸಂಘಗಳು:** — ಒಟ್ಟು ೨೧ ಸೊಸಾಯಿಟಿಗಳಿರುವವು. ರಜಿಸ್ಟರ ಆಗದೇ ಇದ್ದ ಸೊಸಾಯಿಟಿಗಳ ವ್ಯವಸ್ಥೆಯನ್ನು ಶಿಕ್ಷಕರ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳೇ ಮಾಡುವರು.

೪ನೆಯ ಭಾಗ

ಶಿಕ್ಷಕರ ಟ್ರೇನಿಂಗ

೧೪ ಈ ವರ್ಷ ಟ್ರೇಂಡ ಮತ್ತು ಅನ್ ಟ್ರೇಂಡ ಶಿಕ್ಷಕರ ಪ್ರಮಾಣವು ಕ್ರಮವಾಗಿ ೭೬.೧ ಮತ್ತು ೨೩.೯ ಇರುವದು. ಹೋದವರ್ಷ ೮೦.೯ ಮತ್ತು ೧೯.೧ ಇತ್ತು. ಗಂಡುಮಕ್ಕಳ ಟ್ರೇನಿಂಗ ಸ್ಕೂಲಿಗೆ ಯಾರನ್ನೂ ಕಳಿಸಿಲ್ಲ. ಆದರೆ ಹೆಣ್ಣುಮಕ್ಕಳ ಟ್ರೇನಿಂಗ ಸ್ಕೂಲಿಗೆ ೩ ಜನ ಶಿಕ್ಷಕಿಯರನ್ನೂ ೨ ಉಮೇದವಾರರನ್ನೂ ಹೋದವರ್ಷದಂತೆ ಈ ವರ್ಷವಾದರೂ ಕಳಿಸಲ್ಪಟ್ಟಿರುತ್ತದೆ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದಿಂದ ಈ ವರ್ಷ ೧೪ ಹೊಸ ಟ್ರೇಂಡ ಶಿಕ್ಷಕಿಯರು ತಯಾರಾಗಿದ್ದು ಅವರಲ್ಲಿ ೭ ಶಿಕ್ಷಕಿಯರು ಬೋರ್ಡಿನಿಂದ ನೇಮಿಸಿಕೊಳ್ಳಲ್ಪಟ್ಟಿದ್ದಾರೆ.

೫ನೆಯ ಭಾಗ

ಹೆಣ್ಣುಮಕ್ಕಳ ಶಿಕ್ಷಣ.

೧೫ ಒಟ್ಟು ೮೮ ಶಾಲೆಗಳೂ ೩ ಕ್ಲಾಸುಗಳೂ ಇರುವವು. ಅವುಗಳ ವಿವರ:—೭೫ ಶಾಲೆಗಳೂ ೩ ಕ್ಲಾಸುಗಳೂ ಲೋಕಲ್ ಬೋರ್ಡಿನವು; ೮ ಶಾಲೆ

ಗಳು ಮುನಸಿಪಾಲಟಿಯವು. ೫ ಸಹಾಯ ಹೊಂದುತ್ತಿರುವ ಗಾವಟ ಶಾಲೆಗಳು. ಹೋದ ವರ್ಷ ೮೦ ಶಾಲೆಗಳೂ ೪ ಕ್ಲಾಸುಗಳೂ ಇದ್ದವು. ಈ ಎಲ್ಲ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಹೆಣ್ಣುಮಕ್ಕಳ ಸಂಖ್ಯೆಯು ಈ ವರ್ಷ ೯೦೯ ಹೋದ ವರ್ಷ ೯೦೪. ಹೋದವರ್ಷದಂತೆ ಈ ವರ್ಷವಾವರೂ ಇನಾಮುಗಳು ಶಿಷ್ಯವೃತ್ತಿಗಳೂ ಉತ್ತೇಜನಾರ್ಥವಾಗಿ ಕೊಡಲ್ಪಟ್ಟವು ಶಿಷ್ಯವೃತ್ತಿಗಳಬಗ್ಗೆ ೧೯೬ ರೂಪಾಯಿ ಮತ್ತು ಬಾಲಬಾಲಕಿಯರ ಬಗ್ಗೆ ಮಂಜೂರಾಗಿದ್ದ ಒಟ್ಟು ಇನಾಮಿನ ೭೦ ರೂಪಾಯಿಗಳಲ್ಲಿ ಕೆಲವು ಭಾಗವನ್ನು ಯೋಗ್ಯಕಂಡ ಹೆಣ್ಣುಮಕ್ಕಳಿಗೆ ಕೊಡಲ್ಪಟ್ಟಿತು. ಹೋದವರ್ಷದಂತೆ ಈ ವರ್ಷ ಸ್ಥಾನಿಕ ಸ್ತ್ರೀಯರ ಗ್ಯಾದರಿಂಗಗಳನ್ನು ಮಾಡಲಿಲ್ಲ. ಯಾಕಂದರೆ ಹೋದವರ್ಷ ಈ ಬಗ್ಗೆ ಆದ ಖರ್ಚನ್ನು ಗ್ರ್ಯಾಂಟಿನ ದೆಶೆಯಿಂದ ಸರಕಾರವು ಮಂಜೂರು ಮಾಡಲಿಡ್ಲಾ.

೬ನೆಯ ಭಾಗ

ಮುಸಲ್ಮಾನರ ಶಿಕ್ಷಣ

೧೬ ಒಟ್ಟು ಉರ್ದೂ ಶಾಲೆಗಳ ಸಂಖ್ಯೆಯು ೨೭ ಶಾಲೆಗಳೂ ೩ ಕ್ಲಾಸುಗಳೂ ಆಗುವದು. ಅವುಗಳಲ್ಲಿ ೬೧ ಶಾಲೆಗಳೂ ೩ ಕ್ಲಾಸುಗಳೂ ಲೋಕಲ್ ಬೋರ್ಡಿನವು. ೮ ಶಾಲೆಗಳು ಮುನಸಿಪಾಲಟಿಯವು. ೮ ಸಹಾಯ ಹೊಂದುವ ಖಾಸಗೀ ಶಾಲೆಗಳು. ಹೋದವರ್ಷ ೬೭ ಶಾಲೆಗಳೂ ೩ ಕ್ಲಾಸುಗಳೂ ಇದ್ದವು. ಈ ಶಾಲೆಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ೨೭೬೦. ಹೋದವರ್ಷ ೨೫೯೫ ಇತ್ತು. ಮುಸಲ್ಮಾನ ಹೆಣ್ಣುಮಕ್ಕಳು ಮೇಲಿನ ಇಯತ್ತೆಗಳಲ್ಲಿ ಅಭ್ಯಾಸಮಾಡುವ ಕುರಿತು ಉತ್ತೇಜನ ಕೊಡುವದಕ್ಕಾಗಿ ೩ ೨ ರೂಪಾಯಿ ಶಿಷ್ಯವೃತ್ತಿಗಳು ಯೋಗ್ಯಕಂಡ ವಿದ್ಯಾರ್ಥಿನಿಯರಿಗೆ ಕೊಡಲ್ಪಟ್ಟವೆ. ಆದರೆ ಮುಸಲ್ಮಾನರಲ್ಲಿ ವಿದ್ಯಾಪ್ರಸಾರವನ್ನು ಮಾಡುವ ಎಲ್ಲ ಪರಿಶ್ರಮವು ನಿಷ್ಫಲವಾಗಿದೆಯೆಂದು ಹೇಳಬೇಕಾಗುತ್ತದೆ ಯಾಕಂದರೆ ಅವರಲ್ಲಿ ಬಡತನವು ಹೆಚ್ಚಾಗಿರುವದರಿಂದ ಅವರು ತಮ್ಮ ಹುಡುಗರನ್ನು ಚಿಕ್ಕಂದಿನಲ್ಲಿಯೇ ದುಡಿತಕ್ಕೆ ಹಚ್ಚುವರು.

೭ನೆಯ ಭಾಗ.

ಹಿಂದುಳಿದ ವರ್ಗದವರ ಶಿಕ್ಷಣ.

೧೭ **ಭಿಲ್ಲಜನರು:**—ಈ ವರ್ಷ ಈ ವರ್ಗದವರ ಬಗ್ಗೆ ಮುದ್ದಾಮು ಇಟ್ಟ ಶಾಲೆಗಳು ೫. ಹೋದವರ್ಷ ೪. ಗುಡ್ಡುಗಾಡ ಜನರ ವಿದ್ಯಾರ್ಥಿಗಳ ಸಂಖ್ಯೆಯು ಈ ವರ್ಷ ೧೪೪. ಹೋದವರ್ಷ ೧೧೬

೧೮ ಕ್ರಿಮಿನಲ್ ಟ್ರೈಬ್ಸ್.—(ಗಂಟೀಚವಡಿ ಮೊದಲಾದವರು) ಈ ವರ್ಗಗಳಬಗ್ಗೆ ಬೋರ್ಡಿನಿಂದ ಮುದ್ದಾವು ಶಾಲೆಗಳು ಇಡಲ್ಪಟ್ಟಿಲ್ಲ. ಆದರೆ ಈ ವರ್ಷದ ೪೨ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣವನ್ನು ಹೊಂದುತ್ತಿರುವರು. ಕ್ರಿಮಿನಲ್ ಟ್ರೈಬ್ಸ್ ಸೆಟ್ಲ್‌ಮೆಂಟಿನವರು ಈ ಬಗ್ಗೆ ತಮ್ಮ ಸ್ವಂತ ಶಾಲೆಗಳನ್ನು ನಡಿಸುತ್ತಿರುವರು. ಇವುಗಳಬಗ್ಗೆ ಮಾಹಿತಿ ಸೀನಿಯರ್ ಗವ್ಹರ್ನಮೆಂಟ ಇನ್ಸಪೆಕ್ಟಿಂಗ ಆಫೀಸರ ಧಾರವಾಡ ಇವರಿಂದ ದೊರೆಯುವದು

೧೯ ಅಸ್ಪೃಶ್ಯವರ್ಗ—ಈ ವರ್ಗದಬಗ್ಗೆ ಮುದ್ದಾವು ಇಟ್ಟು ೯ ಶಾಲೆಗಳೂ ಮತ್ತು ೨ ಕ್ಲಾಸುಗಳೂ ಇರುವವು. ಇವುಗಳಲ್ಲಿ ೪ ಶಾಲೆ ೧ ಕ್ಲಾಸು ಲೋಕಲ್ ಬೋರ್ಡಿನವು. ೧ ಶಾಲೆ ೧ ಕ್ಲಾಸು ಮುನಸೀ ಪಾಲಟಿಯವು ಹೋದವರ್ಷ ೮ ಶಾಲೆಗಳೂ ೨ ಕ್ಲಾಸುಗಳೂ ಇದ್ದವು. ಈ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೧೩೨೧ ಹೋದವರ್ಷ ೧೨೬೬. ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಸೀನಿಯರ ಗವ್ಹರ್ನಮೆಂಟ ಇನ್ಸಪೆಕ್ಟಿಂಗ ಆಫೀಸರ ಧಾರವಾಡ ಇವರು ಶಿಷ್ಯವೃತ್ತಿಗಳನ್ನು ಕೊಡುತ್ತಿರುವರು. ಅವರಿಂದ ಈ ಬಗ್ಗೆ ಮಾಹಿತಿ ದೊರೆಯುವದು.

ಮುರಾಟರು

೨೦ ಮುರಾಟಾ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ಹೋದವರ್ಷ ೧೪೯೬ ಇದ್ದು ಈ ವರ್ಷ ೧೬೨೪ ಆಗಿದೆ. ಅಂದಾಜ ಪತ್ರಿಕೆಯಲ್ಲಿ ಹಿಂದುಳಿದ ವರ್ಗದವರಬಗ್ಗೆ ಕಾದಿಟ್ಟ ೧೫೦೦ ರೂಪಾಯಿಗಳಲ್ಲಿ; ಮುರಾಟಾ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಗಳು ಕೊಡಲ್ಪಟ್ಟವು.

ಆನೆಯ ಭಾಗ

ಇತರ

೨೧ ಆರೋಗ್ಯರಕ್ಷಣೆ ಮತ್ತು ಕ್ವಿನಾಯಿನ್ ಹಂಚೋಣ-ದುಡ್ಡಿನ ಅಡಚಣಿಯ ಮೂಲಕ ಎಷ್ಟೋ ಶಾಲೆಗಳನ್ನು ಅಸಮಾಧಾನಕರವಾದಂಥ ಅನಾರೋಗ್ಯಕರವಾದಂಥ ಮನೆಗಳಲ್ಲಿ ಉಪಾಯವಿಲ್ಲದೆ ಹಾಕಲ್ಪಡಬೇಕಾಗುತ್ತದೆ. ಹೊಸ ಶಾಲೆಯನ್ನು ಕಟ್ಟಿಸುವ ವ್ಯವಸಾಯವು ಈ ಕೊರತೆಯನ್ನು ದೂರ ಮಾಡುವದಕ್ಕಾಗಿ ಪ್ರತಿವರ್ಷ ಮಾಡಲ್ಪಡುತ್ತದೆ. ಆದರೆ ಬೋರ್ಡಿನ ಯಾವತ್ತೂ ಶಾಲೆಗಳಿಗೆ ಸರಿಯಾದ ಕಟ್ಟಡಗಳು ಉಂಟಾಗುವದಕ್ಕೆ ಎಷ್ಟೋ ದಿವಸಗಳು

ಹತ್ತುವವು. ಕ್ವಿನಾಯಿನ್ ಸಮ್ಮಂಧವಾಗಿ ಹಾನಗಲ್ಲ ಕಲಘಟಗಿ ಮುಲ್ಲಾಡ ತಾಲೂಕುಗಳಲ್ಲಿ ೨೧ ಶಾಲೆಗಳಲ್ಲಿ ಪ್ರಯೋಗವು ನಡೆದಿರುವದು. ಹೋದವರ್ಷ ೧೩ ಶಾಲೆಗಳು ಮಾತ್ರ ಈ ಪ್ರಯೋಗಕ್ಕೊಸ್ಕರ ಆರಿಸಲ್ಪಟ್ಟಿದ್ದವು.

೨೨ ಬಡಿಗತ್ತದವರ್ಗ: ಹೋದವರ್ಷದಂತೆ ಈ ವರ್ಷವಾದರೂ ಇಂಥ ೯ ಕ್ಲಾಸುಗಳಿರುವವು. ಆದರೆ ಬಹುಶಃ ಇವುಗಳಿಗೆ ಉಪಕರಣಗಳ ಕೊರತೆ ಇದ್ದದರಿಂದಲೂ ಯೋಗ್ಯ ಶಿಕ್ಷಣದ ಕೊರತೆ ಇದ್ದದರಿಂದಲೂ ಈ ವಿಷಯವನ್ನು ಕುರಿತು ಬೋರ್ಡಿನವರು ಒಂದು ಮಸೂದೆಯನ್ನು ತಯಾರಮಾಡಿ ಸರಕಾರಕ್ಕೆ ಮಂಜೂರಿಯ ಬಗ್ಗೆ ಸಾದರ ಪಡಿಸಿದ್ದಾರೆ. ಆದರೆ ದುರ್ದೈವದಿಂದ ಸರಕಾರದಿಂದ ಇದುವರೆಗೂ ಮಂಜೂರಿ ದೊರೆಯದೆ ಈ ಪ್ರಕರಣವು ಅಲ್ಲಿಯೇ ಉಳಿದದೆ.

ಶಾರೀರಿಕ ಶಿಕ್ಷಣ

೨೩ ಟ್ರೇಂಡ್ ಶಿಕ್ಷಕರು ಇದ್ದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕವಾಯತು ಕಲಿಸಲ್ಪಡುತ್ತದೆ. ಆಟದ ಮೈದಾನದ ಅನಕೂಲತೆ ಇದ್ದ ಶಾಲೆಗಳಲ್ಲಿ ತಿಳ್ಳೀ, ಕೊಕ್ಕೊ, ಮುಂತಾದ ಆಟಗಳನ್ನು ಹುಡುಗರು ಆಡುವರು. ದುರ್ದೈವದಿಂದ ಬಹಳ ಸ್ವಲ್ಪ ಶಾಲೆಗಳಿಗೆ ಮಾತ್ರ ಆಟದ ಬೈಲುಗಳ ಅನುಕೂಲತೆಯುಂಟು. ಅನೇಕ ಕಡೆಯಲ್ಲಿ ಸುಗ್ಗಿಯು ತೀರಿದನಂತರ ಹೊಲಗಳನ್ನೂ ಅಡವಿಗಳನ್ನೂ ಹುಡುಕುತ್ತ ವಿದ್ಯಾರ್ಥಿಗಳು ಹೋಗ ಬೇಕಾಗುತ್ತದೆ. ಕೆಲವು ಶಾಲೆಗಳಲ್ಲಿ ಮಾತ್ರ ತಾಲೀಮಿನ ಸಾಮಾನುಗಳು ಪೂರೈಸಲ್ಪಟ್ಟಿದ್ದು, ವಿದ್ಯಾರ್ಥಿಗಳಿಗೆ ತಾಲೀಮು ಮಾಡಿಸಲ್ಪಡುವದು.

ನೈತಿಕ ಶಿಕ್ಷಣ

೨೪ ಪ್ರತ್ಯಕ್ಷವಾಗಿ ನೈತಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಕೊಡಲ್ಪಡದಿದ್ದಾಗ್ಯೂ ಆದಷ್ಟು ಮಟ್ಟಿಗೆ ಹಿತಕರವಾದ ಮತ್ತು ನೈತಿಕ ವಾತಾವರಣದಲ್ಲಿ ವಿದ್ಯಾರ್ಥಿಗಳು ಇರುವಂತೆ ಪ್ರಯತ್ನ ಮಾಡಲ್ಪಟ್ಟಿದೆ.

ದೃಶ್ಯಗಳ ಮೂಲಕ ಶಿಕ್ಷಣ

೨೫ ತಾ॥ ೧-೭-೧೯೨೭ ರಿಂದಾ ಒಂದು ಮಾಜಿಕ್ ಲ್ಯಾಂಟರ್ನ ಬೋರ್ಡಿನ ಒಬ್ಬ ಸುಪರವ್ಹಾಯಿಜರರಿಗೆ ಕೊಡಲ್ಪಟ್ಟಿತ್ತು. ಆದರೆ ಅವರು ಹೊಸಬರಾದ್ದರಿಂದ ಸೀನಿಯರ ಇನ್ಸಪೆಕ್ಟಿಂಗ ಆಫೀಸರ ಧಾರವಾಡ ಇವರಿಂದ ಅದರ ಉಪಯೋಗವನ್ನು ಕಲಿತುಕೊಂಡು ಕಳೆದ ಡಿಶೆಂಬರ ತಿಂಗಳ ಮಧ್ಯಭಾಗದಿಂದ ವ್ಯಾಖ್ಯಾನಗಳನ್ನು ಪ್ರಾರಂಭಮಾಡಿ ಒಟ್ಟು ೫ ವ್ಯಾಖ್ಯಾನಗಳನ್ನು ಕೊಟ್ಟಿರುವರು. "ಬಂಗಾಲದ ಇತಿಹಾಸ" ಈ ವಿಷಯದ ಮೇಲೆ ಮ್ಯಾಜಿಕ್ ಲ್ಯಾಂಟರ್ನ ತೋರಿಸಲ್ಪಟ್ಟಿತು. ಈ ಎಲ್ಲ ವ್ಯಾಖ್ಯಾನಗಳಿಗೆ ಸಾಕಷ್ಟು ಜನರು ನೆರೆದಿದ್ದ

ರೆಂದೂ ಶಾಲೆಯ ವಿದ್ಯಾರ್ಥಿಗಳಲ್ಲಿಯೂ ಹಳ್ಳಿಯ ಜನರಲ್ಲಿಯೂ ಒಳ್ಳೇ ಉತ್ಸುಕತೆಯು ಕಂಡು ಬಂತೆಂದು ರಿಪೋರ್ಟ ಅದೆ.

೨೬. **ಪುಸ್ತಕಾಲಯಗಳು**:—ಹೋದವರ್ಷದಂತೆ ಈ ವರ್ಷವಾನರೂ ೨೬ ರಜಿಸ್ಟರಾದ ಪುಸ್ತಕಾಲಯಗಳು ಇರುವವು. ಇವುಗಳ ಮೇಲ್ವಿಚಾರಣೆಯನ್ನು ಸೀನಿಯರ ಇನ್ಸಪೆಕ್ಟಿಂಗ ಗವ್ಹರ್ನಮೆಂಟ ಆಫೀಸರ ಇವರು ಮಾಡುವರು.

(ಸಹಿ) ಚೇರಮನ್

ಸರಕ್ಯೂಲರ ನಂ. ೫೫

ಧಾರವಾಡ ಜಿಲ್ಲೆಯೊಳಗಿನ ಮುಲ್ಕಿಪರೀಕ್ಷೆ ಪಾಸಾಗಿ ಹೆಂಣುಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಹೋಗಲಿಚ್ಛಿಸುವ ಯಾವತ್ತೂ ಉಮೇದವಾರರಿಗೆ:—

ಮೆ॥ ಚೇಅರಮನ್ ಡಿ. ಸ್ಕೂ. ಬೋ. ಧಾರವಾಡ ಇವರ ಕಡೆಯಿಂದಾಃ—ಸನ್ ೧೯೨೮ನೇ ಡಿಶಂಬರ ೧ನೇ ತಾರೀಖಿಗೆ ಪ್ರಾರಂಭವಾಗುವ ಹೆಂಣುಮಕ್ಕಳ ಟ್ರೇನಿಂಗ ಕಾಲೇಜದ ೧ನೇ ವರ್ಷಕ್ಕೆ ಬರಲಿಚ್ಛಿಸುವ ಉಮೇದವಾರರು ಕೆಳಗೆ ಕೇಳಿದ ಯಾವತ್ತು ಮಾಹಿತಿಯನ್ನು ಕೊಟ್ಟು ತಾ॥ ೨೫-೯-೨೮ ರೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಅರ್ಜಿಗಳನ್ನು ಕಳಿಸಬೇಕು.

(೧) ಪೂರ್ಣಹೆಸರು (೨) ವಾಸಮಾಡಿದ ಸ್ಥಳ (೩) ಮುಲ್ಕಿಪರೀಕ್ಷೆಪಾಸಾದ ಇಸ್ವಿ, ಸೆಂಟರ, ಒಟ್ಟು ಗುಣಗಳಲ್ಲಿ ದೊರೆತ ಗುಣಗಳು ಹಾಗೂ ೧೦೦ ಕ್ಕೆ ಯಾವ ಪ್ರಮಾಣದಿಂದ ಗುಣಗಳು ದೊರೆತವೆ. (೪) ಜಾತಿ ಹಾಗು ಒಳಭೇದ (೫) ಜನ್ಮ ತಾರೀಖು (೬) ಕಲಿಸುವ ಅನುಭವ, ಶಿಕ್ಷಕಿಯಾಗಿದ್ದ ಒಟ್ಟು ನವಕರಿ ಮುದ್ದತು ಅದರಲ್ಲಿ ಕಾಯಂ ನವಕರಿ ಮುದ್ದತನ್ನು ಬಿಡ್ಲಿತರೀಕ ಮಾಡಿದ ನವಕರಿಯ ಮುದ್ದತನ್ನು ಬೇರೆಬೇರೆ ತೋರಿಸಬೇಕು. ನವಕರಿಯನ್ನು ಮಾಡಿದ ಊರುಗಳ ಹೆಸರುಗಳನ್ನು ತೋರಿಸಬೇಕು. ಯಾವಯಾವ ಊರಲ್ಲಿ ಎಷ್ಟೆಷ್ಟು ದಿವಸಗಳಿದ್ದರೆಂಬದನ್ನು ನೆನಪಿದ್ದ ಮಟ್ಟಿಗೆ ತೋರಿಸಬೇಕು. (೭) ಸ್ಕಾಲರಸಿಪ್ ಇಲ್ಲದೆ ಕಾಲೇಜದಲ್ಲಿ ಕಲಿಯಲಿಕ್ಕೆ ಕಬೂಲ ಇರುವರೋ ಹೇಗೆ!

(೮) ಲಗ್ನವಾಗಿದೆಯೋ ಇಲ್ಲವೋ ಅಥವಾ ವಿಧವೆಯೊ (೯) ಲಗ್ನವಾಗಿದ್ದಲ್ಲಿ ಗಂಡನು ಉಮೇದ್ವಾಳನ್ನು ಕಾಲೇಜಕ್ಕೆ ಕಳಿಸಲಿಕ್ಕೆ ಕಬೂಲಿಯಿದ್ದ ಬಗ್ಗೆ ಲೇಖವನ್ನು ಲಗತಯಿಡಬೇಕು. (೧೦) ಲಗ್ನವಾಗದೆಯಿದ್ದಲ್ಲಿ ಪಾಲಕರ ಅಥವಾ ಗಂಡನ ಪೂರ್ಣ ಹೆಸರು ಮತ್ತು ಉದ್ಯೋಗ, ಇವುಗಳನ್ನು ಕೊಡಬೇಕು.

(ಸಹಿ) ಚೇರಮನ್

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಅಗಸ್ಟ ೧೯೨೮ | ಸಂಚಿಕೆ ೫

ಶಿಕ್ಷಕರೂ ಪಾಲಕರೂ.

ಲೇಖಕರು:—ಶಿ. ಶಿ. ಬಸವನಾಳ, ಎಮ್. ಎ. ಧಾರವಾಡ.

ಚಿಕ್ಕ ಮಕ್ಕಳಲ್ಲಿ ಸ್ವಾಭಾವಿಕವಾಗಿ ಮಾನಸಿಕ ಹಾಗೂ ಬೌದ್ಧಿಕ ಪ್ರವೃತ್ತಿಗಳುಂಟು. ಅವು ಪರಿಸ್ಥಿತಿಗನುಗುಣವಾಗಿ ಸಹಜ ರೀತಿಯಿಂದ ಏರ್ಪಾಡು ಹೊಂದುತ್ತಲಿರುವವು. ಈ ಬಗೆಯ ಸಹಜ ಶಿಕ್ಷಣಕ್ಕೆ ಅನುಭವವೆಂಬ ಹೆಸರು. ಆದರೆ ಜಗತ್ತಿನಲ್ಲಿ ಮನುಷ್ಯನಿಗೆ ಗೊತ್ತಾಗಬೇಕಾದ ವಿಷಯಗಳೆಲ್ಲವು ಈ ರೀತಿಯಿಂದಲೇ ತಿಳಿಯಬೇಕಾದರೆ ಶ್ರಮವೂ ವೇಳೆಯೂ ಹತ್ತುವದಲ್ಲದೆ ಅನೇಕ ಅನಿಷ್ಟ ಪರಿಣಾಮಗಳಾಗುವ ಸಂಭವವೂ ಉಂಟು. ಆದುದರಿಂದ ಚಿಕ್ಕಂದಿನಲ್ಲಿಯೇ ಬಾಲಕರಲ್ಲಿಯ ಕೆಟ್ಟ ಪ್ರವೃತ್ತಿಗಳನ್ನು ತಡೆದು ಒಳ್ಳೆಯವುಗಳನ್ನು ಬಲಪಡಿಸುವದೇ "ಶಿಕ್ಷಣ" ದ ಮುಖ್ಯ ಧ್ಯೇಯವು. ಈ ಕಾರ್ಯವು ಸಮಾಧಾನಕರವಾಗಿ ಈಡೇರಬೇಕಾದರೆ ಕೇವಲ ಶಿಕ್ಷಕರಿಂದ ಸಾಧ್ಯವಾಗುವ ಮಾತಲ್ಲ. ಪಾಲಕರ ನೆರವೂ ಬಹುಮಟ್ಟಿಗೆ ಬೇಕಾಗುವದು. ಬಾಲ್ಯವೆಲ್ಲವೂ ಒಂದಿಲ್ಲೊಂದು ಮಾದರಿಯ ಶಿಕ್ಷಣದ ಕಾಲವಾಮದರಿಂದ ಶಿಕ್ಷಣದ ಹೆಚ್ಚಿನ ಭಾರವು ಜನನೀ ಜನಕರ ಮೇಲೆ ಇದ್ದಂತೆ ಶಿಕ್ಷಕರ ಮೇಲೆ ಇರಲಾರದು. ಶಿಕ್ಷಕರು ಹುಡುಗರ ಸಂಪರ್ಕದಲ್ಲಿ ದಿವಸದ ೧೫ ತಾಸಿನ ದುಡಿಯುವ ಅವಧಿಯಲ್ಲಿ ೬ ತಾಸುಗಳವರೆಗೆ ಮಾತ್ರ ಇರುವರು. ವರ್ಷದ ೩೬೫ ದಿವಸಗಳಲ್ಲಿ ಇಂಥ ೬ ತಾಸಿನ ೨೧೦ ದಿವಸ

ಗಳಿಗೆ ಮಾತ್ರ ಶಾಲೆಯ ಒಂದು ವರ್ಷವಾಗುವದು. ಅಲ್ಲದೆ, ಮೊದಲಿನ ೫ ವರ್ಷಗಳಲ್ಲಿಯೇ ಬಾಲಕರಲ್ಲಿ ಪ್ರವೃತ್ತಿಗಳು ಮೂಡಿ ಹೋಗಿರುವದರಿಂದ ಮುಂದಿನ ಶಿಕ್ಷಣವೆಲ್ಲ ಶಿಕ್ಷಕರಿಗೆ ಮತ್ತಿಷ್ಟೂ ಗಡಚಾಗುತ್ತದೆ.

ಪ್ರತ್ಯಕ್ಷ ಶಿಕ್ಷಣದ ಕಾರ್ಯವನ್ನು ಬಹುಮಟ್ಟಿಗೆ ಹೊತ್ತುಕೊಂಡಿದ್ದ ಶಿಕ್ಷಕರು ಶಾಲೆಯಲ್ಲಿದ್ದ ವೇಳೆಯಲ್ಲಿ ತಾವು ವಿದ್ಯಾರ್ಥಿಗಳ ಪಾಲಕರಾಗಿರುವರೆಂಬುದನ್ನು ಮರೆಯಲಾಗದು. ಶ್ರಮವಿಭಾಗ ತತ್ವಕ್ಕನುಸರಿಸಿ ಚಿಕ್ಕ ಮಕ್ಕಳ ಶಿಕ್ಷಣದ ಮಹತ್ವದ ಭಾಗವಾದ ವಿದ್ಯಾಭ್ಯಾಸ ಕ್ರಮವನ್ನು ಪಾಲಕರು ಶಿಕ್ಷಕರ ಮೇಲೆ ಹಾಕಿರುತ್ತಾರೆ. ಈ ಪರಿಯನ್ನು ಪೊತ್ತ ಶಿಕ್ಷಕರು ತಮ್ಮ ಕರ್ತವ್ಯವನ್ನು ದುರ್ಲಕ್ಷಿಸುತ್ತಾರೆಂತಲ್ಲ; ಆದರೆ ತಾವು ಮಾಡುವ ಶಿಕ್ಷಣ ಕಾರ್ಯದ ಬಗ್ಗೆ ಅತಿಶಯವಾದ ಅಭಿಮಾನವನ್ನು ವಹಿಸಿ ಪಾಲಕರ ಕರ್ತವ್ಯವನ್ನು ಮರೆಯುವ ಅಥವಾ ಅವರ ಭಾರವನ್ನು ಅಲ್ಲಗಳೆಯುವ ಸಂಭವವು ಬಹಳವಾಗಿರುತ್ತದೆ. ಆದುದರಿಂದ ಪಾಲಕರೂ ಶಿಕ್ಷಕರೂ ಒಂದೇ ಧ್ಯೇಯವನ್ನು ಇಟ್ಟುಕೊಂಡು ಒಮ್ಮನಸ್ಸಿನಿಂದ ಬಾಲಕರ ಶಿಕ್ಷಣವನ್ನು ಕೈಕೊಳ್ಳಬೇಕು. ಅಂತೆಯೇ ಒಬ್ಬರು ಇನ್ನೊಬ್ಬರ ಪ್ರಯತ್ನವನ್ನು ತಿಳಿದುಕೊಳ್ಳಬೇಕಲ್ಲದೆ, ಒಬ್ಬರಿಗೊಬ್ಬರು ನೆರವಾಗಬೇಕು.

ಇನ್ನು ತಮ್ಮ ವಶದಲ್ಲಿದ್ದ ಎಲ್ಲ ವಿದ್ಯಾರ್ಥಿಗಳ ಪಾಲಕರಿಗೆ ಶಿಕ್ಷಕರು ಪ್ರತ್ಯಕ್ಷವಾಗಿ ನೆರವಾಗುವ ಸಂಭವವು ಅಷ್ಟೊಂದಿಲ್ಲ. ಆದರೆ ತಮ್ಮ ಮಕ್ಕಳು ಕಲಿಯುತ್ತಿದ್ದ ಶಾಲೆಯ ಶಿಕ್ಷಕರಿಗೆ ಪಾಲಕರು ಸಹಾಯ ಮಾಡುವದು ಅಷ್ಟು ಪ್ರಯಾಸದ ಕಾರ್ಯವಲ್ಲ. ಪಾಲಕರ ನೆರವಿನಿಂದ ಹಿತವು ಹೆಚ್ಚಾಗುವದೆಂಬುವದು ಇತ್ತೀಚೆಗೆ ಎಲ್ಲ ಸುಧಾರಿಸಿದ ರಾಷ್ಟ್ರಗಳಲ್ಲಿ ಅಂಗೀಕೃತವಾಗಿದೆ; ಅದರಲ್ಲಿಯೂ ಸ್ಕಾಟಲಂಡ ದೇಶವು ಮಾದರಿಯದಾಗಿರುವದೆಂದು ಸರ್ವಸಮ್ಮತವಾಗಿದೆ. ಸ್ಕಾಟಲಂಡದಲ್ಲಿಯ ಪಾಲಕರು ತಮ್ಮ ಮಕ್ಕಳು ಶಿಕ್ಷಣ ಹೊಂದುತ್ತಿದ್ದ ಶಾಲೆಗೆ ಹಾಗೂ ಅಲ್ಲಿಯ ಶಿಕ್ಷಕರಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡಲು ಬೇಸರಪಡುವದಿಲ್ಲ. ಅದೆಲ್ಲವು ಅವರ ಕರ್ತವ್ಯವೆಂದೇ ಭಾವಿಸುತ್ತಾರೆ. ಇದೇ ಮಾದರಿಯ ಕರ್ತವ್ಯದಕ್ಷತೆಯು ನಮ್ಮಲ್ಲಿಯ ಪಾಲಕರಲ್ಲಿಯೂ ಹುಟ್ಟುವದು ಅತ್ಯವಶ್ಯವಾಗಿದೆ. ಆ ಬಗ್ಗೆ ಶಿಕ್ಷಣವಿರಹಿತರಾದ ನಮ್ಮ ಬಹುಜನ ಸಮಾಜಕ್ಕೆ ತಿಳುಹಿಸಿ ಕೊಡತಕ್ಕ ಭಾರವು ಶಿಕ್ಷಕರದೇ ಆಗಿರುತ್ತದೆ. ಪಾಲಕರು ಶಿಕ್ಷಕರಿಗೆ ಹೇಗೆ ಸಹಾಯಕಾರಿಗಳಾಗಬಹುದೆಂಬುದನ್ನು ಕೆಲಮಟ್ಟಿಗೆ ಇಲ್ಲಿ ವಿವರಿಸಲಾಗುವದು.

೧. ಶಾಲೆಗೆ ಹೊಸದಾಗಿ ಹುಡುಗನೊಬ್ಬನನ್ನು ಸೇರಿಸಬೇಕಾದರೆ ಅವನ ಜನಕನಾಗಲಿ, ಪಾಲಕನಾಗಲಿ ಅವನನ್ನು ಕರೆದುಕೊಂಡು ಶಾಲೆಯ ಮುಖ್ಯಾಧ್ಯಾಪಕರಿಗೆ ಭೆಟ್ಟಿಯಾಗಬೇಕು. ಶಾಲೆಯ ಅಧ್ಯಾಪಕರಾದರೂ ಈ ಬಗ್ಗೆ ಆವಶ್ಯ

ಸಾಗರೂಕರಾಗಿರಬೇಕು; ಪಾಲಕರು ಬರದ ಹೊರತು ಹುಡುಗರನ್ನು ಶಾಲೆಯಲ್ಲಿ ಕರೆದುಕೊಳ್ಳಲು ಒಪ್ಪಬಾರದು. ಈ ರೀತಿಯಾಗಿ ಪಾಲಕರು ಹುಡುಗರನ್ನು ಕರೆದುಕೊಂಡು ಹೆಸರು ಹಚ್ಚಿಸಲು ಬಂದಾಗ ಶಾಲಾಧ್ಯಾಪಕರು ಅವರಿಗೆ ಅವರ ಕರ್ತವ್ಯವನ್ನು ತಿಳಿಹೇಳಿ ಅವಶ್ಯ ಬಿದ್ದಾಗ ಹುಡುಗನ ಬಗ್ಗೆ ಅವರ ಸಹಾಯವನ್ನು ಕೇಳುವೆವೆಂತಲೂ, ಅವರು ಶಾಲೆಗೆ ವೇಳಗೆ ಸರಿಯಾಗಿ ಬರುವಂತೆ, ರಜೆಯ ದಿನಗಳು ಮುಗಿದ ಕೂಡಲೆ ಶಾಲೆಗೆ ಹಾಜರ ಆಗುವಂತೆ ನೋಡಿಕೊಳ್ಳಬೇಕೆಂದು ಹೇಳಬೇಕು. ಅಲ್ಲದೆ ಹುಡುಗರ ನಡತೆಯ ಬಗ್ಗೆ ಏನಾದರೂ ಕೊರತೆಗಳು ಪಾಲಕರ ದೃಷ್ಟಿಗೆ ಬಿದ್ದರೆ ಕೂಡಲೆ ಅದನ್ನು ಶಿಕ್ಷಕರಿಗೆ ಅರುಹಬೇಕೆಂದೂ ತಿಳುಹಿಸಬೇಕು. ಅದೇ ಮೇರೆಗೆ ಹುಡುಗನ ಅಭ್ಯಾಸದ ಪ್ರಗತಿ, ಮನೆಯೊಳಗಿನ ಅಭ್ಯಾಸ ಇವೆಲ್ಲವುಗಳ ಬಗ್ಗೆಯೂ ಪೂರ್ಣ ಲಕ್ಷ ಪೂರೈಸಬೇಕೆಂದು ಪಾಲಕರಲ್ಲಿ ಬಿಂಬಿಸಬೇಕು.

೨. ಆ ನಂತರ ಮುಖ್ಯೋಪಾಧ್ಯಾಯರು ಪಾಲಕರನ್ನು ಸಂಗಡ ಕರೆದುಕೊಂಡು ವಿದ್ಯಾರ್ಥಿಯು ಓದತಕ್ಕ ಇಯತ್ತೆಯ ಶಿಕ್ಷಕರಿಗೆ ಭೆಟ್ಟಿ ಮಾಡಿಸಿ, ವಿದ್ಯಾರ್ಥಿಗೆ ಕೇಳುವಂತೆ ಅತನ ಅಭ್ಯಾಸ, ನಡತೆ, ನಿಯಮಿತತನ ಇವುಗಳ ಬಗೆ ಶಿಕ್ಷಕರು ಪಾಲಕರಿಗೆ ಆಗಾಗ ಭೆಟ್ಟಿಯಾಗಿ ಹೇಳುತ್ತಿರಬೇಕೆಂದೂ ಆ ಶಿಕ್ಷಕರಿಗೆ ತಿಳುಹಿಸಬೇಕು.

೩. ಯಾವದಾದರೊಂದು ದಿನವನ್ನು ನೇಮಿಸಿ ವರ್ಷಕ್ಕೊಂದಾವರ್ತಿ ಯಾದರೂ ಇನಾಮುಗಳನ್ನು ಹಂಚುವ ಸಮಾರಂಭಗಳನ್ನು ನೆರವೇರಿಸಬೇಕು. ಆ ಕಾಲಕ್ಕೆ ಪಾಲಕರೆಲ್ಲರನ್ನು ಬರಮಾಡಿಕೊಳ್ಳಲು ಶಿಕ್ಷಕರು ಪ್ರಯತ್ನ ಮಾಡಬೇಕು. ಅದೇ ಮೇರೆಗೆ ಕಾಲಕಾಲಕ್ಕೆ ಮ್ಯಾಜಿಕ್ ಲ್ಯಾಂಟರ್ನದ ದ್ವಾರಾ ವ್ಯಾಖ್ಯಾನಗಳನ್ನೂ, ಕುಸ್ತಿ ಮೊದಲಾದ "ಶರ್ಯತ್ತು" ಗಳನ್ನೂ, ಆಟನೋಟಗಳನ್ನೂ ನೇಮಿಸಿ ಪಾಲಕರನ್ನು ಭೆಟ್ಟಿಯಾಗುವ ಸುಯೋಗಗಳನ್ನು ಶಿಕ್ಷಕರು ಹೆಚ್ಚಿಸಿಕೊಳ್ಳಬೇಕು. ಇಂಥ ಸಂಧಿಗಳನ್ನು ಪಾಲಕರು ಎಂದೂ ವ್ಯರ್ಥ ಹೋಗಗೊಡಬಾರದು.

೪. ಶಾಲೆಯ ಅಭ್ಯಾಸಕ್ರಮಗಳು ನಡೆಯುತ್ತಿದ್ದಂತಹ ಯಾವದಾದರೊಂದು ದಿವಸವನ್ನು ಗೊತ್ತು ಮಾಡಿ ಆ ಹೊತ್ತು ಪಾಲಕರು ಬಂದು ತಮ್ಮ ತಮ್ಮ ಮಕ್ಕಳು ಹೇಗೆ ಶಿಕ್ಷಣವನ್ನು ಹೊಂದುತ್ತಿರುವರೆಂಬದನ್ನು ಪ್ರತ್ಯಕ್ಷ ನೋಡುವಂತೆ ಶಾಲಾಧ್ಯಾಪಕರು ವ್ಯವಸ್ಥೆಯನ್ನು ಮಾಡತಕ್ಕದ್ದು. ಇದರಿಂದ ಶಿಕ್ಷಣದ ಬಗ್ಗೆಯೂ, ಶಾಲೆಯ ಬಗ್ಗೆಯೂ ಯೋಗ್ಯ ಜ್ಞಾನವು ಪಾಲಕರಿಗೆ ಲಭಿಸುವದು: ಶಿಕ್ಷಣದ ಸಂಬಂಧವಾಗಿದ್ದ ಪಾಲಕರಲ್ಲಿದ್ದ ಅನೇಕ ತಪ್ಪು ತಿಳುವಳಿಕೆಗಳು

ದೂರಾಗಬಹುದು. ಇಂಥ ಸಂಧಿಗಳನ್ನು ವರ್ಷಕ್ಕೆ ಎರಡು ಸಾರಿಯಾದರೂ ತಂದು ಕೊಡುವಂತೆ ಶಾಲಾಧಿಕಾರಿಗಳು ಪ್ರಯತ್ನಿಸತಕ್ಕದ್ದು.

೫. ಶಿಕ್ಷಕರು ವಿದ್ಯಾರ್ಥಿಗಳ ಪ್ರಗತಿ, ನಡತೆ, ಮೊದಲಾದವುಗಳ ಬಗ್ಗೆ ಲೇಖನ ಮೂಲಕ ಆಯಾ ಪಾಲಕರಿಗೆ ತಿಂಗಳಿಗೆ, ಮೂರು ತಿಂಗಳಿಗೆ, ಅಥವಾ ಆರು ತಿಂಗಳಿಗೆ ಒಮ್ಮೆ—ಅನುಕೂಲವಾದಂತೆ—ತಿಳಿಸತಕ್ಕದ್ದು. ಈ ಪದ್ಧತಿಯು ಈಗ ಇಂಗ್ಲೀಷ ಹಾಯಸ್ಕೂಲಗಳಲ್ಲಿ ಬಹು ಮಟ್ಟಿಗೆ ಬಳಿಕೆಯಲ್ಲಿ ಬಂದಿದೆ. ಈ ಪದ್ಧತಿಯು ವ್ಯಾಥಮಿಕ ಶಾಲೆಗಳಲ್ಲಿಯೂ ಬರಲು ಯಾವ ಆತಂಕವೂ ತೋರುವದಿಲ್ಲ. ಮೇಲಾಗಿ ಪ್ರಾಥಮಿಕ ಶಾಲೆಗಳಲ್ಲಿಯ ವಿದ್ಯಾರ್ಥಿಗಳೂ ಪಾಲಕರೂ ಅದೇ ಊರಲ್ಲಿರುವದರಿಂದ "ಪ್ರಗತಿ ಪತ್ರಿಕೆ" ಯನ್ನು ನೋಡಿ ಪಾಲಕರು ಯೋಗ್ಯ ವ್ಯವಸ್ಥೆಯನ್ನು, ಶಿಕ್ಷಕರ ಅಭಿಪ್ರಾಯ ತಕ್ಕೊಂಡು ಆಗಿಂದಾಗ ಮಾಡಲು ಅನುಕೂಲವಾಗುವದು. ಏನೇ ಇರಲಿ, ಪತ್ರಿಕೆಯನ್ನು ಕಳುಹಿಸಿ ಯಾಗಲಿ ಬೇರೆ ವಿಧದಿಂದಾಗಲಿ ಈ ಕಾರ್ಯವನ್ನು ಮಾಡಲು ಶಿಕ್ಷಕರು ಸಿದ್ಧರಿರುವದು ಒಳ್ಳೆಯದು. ಇದು ಹೆಚ್ಚಿನ ಕೆಲಸವೆಂದಾಗಲಿ, ವೃಥಾಯಾಸವೆಂದಾಗಲಿ ಭಾವಿಸಿದರೆ ಮಾತ್ರ ಇದರಿಂದ ಯಾವ ಲಾಭವೂ ಆಗಲಾರದು. ಅದರಂತೆ ಪಾಲಕರಾದರೂ "ಪ್ರಗತಿ ಪತ್ರಿಕೆ"ಗೆ ಮಹತ್ವ ಕೊಟ್ಟು ಶಿಕ್ಷಕರ ಸಲಹೆಗಳನ್ನು ಅಂಗೀಕರಿಸಿದಲ್ಲಿ ವಿಶೇಷಲಾಭವು ಸಂಜನಿಸುವದರಲ್ಲಿ ಸಂದೇಹವಿಲ್ಲ.

೬. ಪಾಲಕರಾದರೂ ಶಿಕ್ಷಕರ ಕೂಡ ಮೇಲ್ಕಂಡ ರೀತಿಯಿಂದ ನೆರವಾಗುವದಲ್ಲದೆ ತಮ್ಮ ಮಕ್ಕಳು ಕಲಿಯುವ ಶಾಲೆಯ ಬಗ್ಗೆ, ಅದರ ಶಿಕ್ಷಕರ ಬಗ್ಗೆ ಸದಭಿಮಾನವನ್ನು ತಾಳಿ ಆ ಬಗ್ಗೆ ಮಕ್ಕಳೊಡನೆ ಹಾಗೂ ಎರಡನೆಯವರ ಕೂಡ ಸಾದರಭಾವದಿಂದ ಮಾತಾಡಬೇಕು ಶಿಕ್ಷಕರು ಮಾಡುವ ಕಾರ್ಯವು ಪವಿತ್ರವಾದುದೆಂದು ಎಲ್ಲರೂ ಭಾವಿಸಿದರೂ ಶಿಕ್ಷಕರನ್ನು ಆದರಪೂರ್ವಕವಾಗಿ ಕಾಣುವ ಜನರು ಬಹು ವಿರಳ. ಇದು ಕೇವಲ ಅಜ್ಞ ಜನರ ಮಾತಷ್ಟೇ ಅಲ್ಲ; ವಿದ್ವಂತರಲ್ಲಿಯೂ ಕಾಣಬರುವಂತಹ ಸಂಗತಿ. ತಮ್ಮ ಮಕ್ಕಳ ಶಿಕ್ಷಕರ ಬಗ್ಗೆ ಜನನೀಜನಕರು ಆದರವನ್ನು ವಹಿಸದಿದ್ದರೆ ಅನುಕರಣಶೀಲರಾದ ಎಳೆಮಕ್ಕಳಲ್ಲಿ ಶಿಕ್ಷಕರ ಗುರುತ್ವದ ಬಗ್ಗೆ ಕಲ್ಪನೆಯು ಬರುವದಾದರೂ ಹೇಗೆ? "ಪಂಚಪಿತೃ"ಗಳಲ್ಲಿ ಶಿಕ್ಷಕರೂ ಒಬ್ಬರಾದುದರಿಂದ ಪಾಲಕರು ಶಿಕ್ಷಕರನ್ನು ತಮ್ಮಂತೆಯಾದರು ಭಾವಿಸುವದು ಹಿತಕರವೆಂದು ತಾನೇ ಗೊತ್ತಾಗುತ್ತದೆ.

ಶಿಕ್ಷಕರ ಸಮ್ಮೇಲನಗಳು.

ಲೇಖಕರು :—ಸಂಪಾದಕರು

ಶಿಕ್ಷಕರ ಹೋರೆಯು ಬಹು ಹೆಗುರು ಎಂದು ಬಹು ಜನರ ಅಂಬೋಣವದೆ. ಕಲಿತಂಥ ಬೇಕಾದವನು ಶಿಕ್ಷಕನಾಗಬಹುದೆಂದು ತಿಳಿಯುವರು. ವಕೀಲನಾಗ ಬೇಕಾದರೆ, ಕಾಯಿದೆಯನ್ನು ಓದಿ ಪರೀಕ್ಷೆ ಕೊಟ್ಟವನಿರಬೇಕು. ಡಾಕ್ಟರ, ಇಂಜನಿಯರ ಮೊದಲಾದವರು ಆಯಾಯ ಪರೀಕ್ಷೆಗಳನ್ನು ಕೊಟ್ಟವರಿರಬೇಕು. ಆದರೆ ಶಿಕ್ಷಕನು ಮಾತ್ರ ಶಿಕ್ಷಣ ಪರೀಕ್ಷೆಯು ಇಲ್ಲದೇ ಶಿಕ್ಷಕನ ಹೋರೆಯನ್ನು ಜನ್ಮಾಗಿ ಸಾಗಿಸಬಹುದು ಎಂಬ ತಪ್ಪು ತಿಳುವಳಿಕೆಯು ಎಲ್ಲಿಡೆಯಲ್ಲಿಯುಂಟು. ಆದ್ದರಿಂದ ಸಿಕ್ಕಸಿಕ್ಕವರು ಯಾವದೊಂದು ಪರೀಕ್ಷೆ ಪಾಸಾದ ಮಾತ್ರಕ್ಕೆ ಶಿಕ್ಷಕರಾಗಲು ಸಮರ್ಥರಾಗುವರು. ಬೇರೆ ಯಾವ ಕೆಲಸವು ದೊರೆಯದೇ ಇದ್ದಲ್ಲಿ, ಇಲ್ಲವೆ ಯಾವ ಕೆಲಸವನ್ನು ಮಾಡಲಿಕ್ಕೆ ಬಾರದಿದ್ದಲ್ಲಿ ಶಿಕ್ಷಕನ ಕೆಲಸಕ್ಕೆ ವಾಡಿಕೆಯಾಗಿ ಉಮೇದವಾರರು ಬರುವರು. ಆದ್ದರಿಂದ ನೂರು ಮಂದಿ ಶಿಕ್ಷಕರಲ್ಲಿ ಒಬ್ಬಿಬ್ಬರು ಮಾತ್ರ ಈ ಹೋರೆಯನ್ನು ಮನಸ್ಸಿನಿಂದ ಮಾಡುವರು. ಉಳಿದವರು ಬೇರೊಂದು ಉಪಾಯವಿಲ್ಲದೆ ಮತ್ತು ಮನಸ್ಸಿಲ್ಲದೆ ಈ ಹೋರೆಯಲ್ಲಿ ತೊಡಗುವರು. ಇದರಿಂದ ಶಿಕ್ಷಣ ಕಾರ್ಯವು ಸಾಕಷ್ಟು ತೃಪ್ತಿಕರವಾಗಿ ಸಾಗುವದಿಲ್ಲ. ಈ ದೋಷವು ನೀಗ ಬೇಕಾದರೆ ಯಾವತ್ತು ಶಿಕ್ಷಕರಿಗೆ ಟ್ರೇನಿಂಗ ದೊರೆಯಲೇ ಬೇಕು. ಟ್ರೇನಿಂಗ ಹೊಂದುವಾಗ್ಗೆ ಅಧಿಕಾರಿಗಳು ಅವರಲ್ಲಿ ಈ ಹೋರೆಯಲ್ಲಿ ಸಹಜವಾದ ಒಲುಮೆ ಇದೆಯೋ ಎಂಬದನ್ನು ಕಂಡು ಹಿಡಿಯಬೇಕು. ಶಿಕ್ಷಕನು ಶಿಕ್ಷಣ ಶಾಸ್ತ್ರವನ್ನು ತಕ್ಕ ಮಟ್ಟಿಗಾದರೂ ಬಲ್ಲವನೂ, ಶಿಕ್ಷಣದಲ್ಲಿ ನಿಜವಾದ ಪ್ರೇಮವುಳ್ಳವನೂ ಇರಲೇ ಬೇಕು. ತಾನು ತನ್ನ ವಿದ್ಯಾರ್ಥಿಗಳಿಗೆ ಆದರ್ಶಭೂತನಾಗಿರಬೇಕು. ಹೆಸುಮಕ್ಕಳಲ್ಲಿ ಅನುಕರಣ ಶಕ್ತಿಯೇ ಪ್ರಬಲವಾಗಿರುವದು. ಶಿಕ್ಷಕರಿಗೂ ಪಾಲಕರಿಗೂ ಗೊತ್ತಿಲ್ಲದೆ ಅನೇಕ ಮಾತುಗಳನ್ನು ಅವರು ದಿನಾಲು ತಮ್ಮ ಸುತ್ತುಮುತ್ತಲಿರುವ ಇರುವಿಕೆಯಿಂದ ಕಲಿಯುವರು. ಇದು ಒಳ್ಳೆಯದು, ಇದು ಕೆಟ್ಟದ್ದು ಎಂಬದನ್ನು ತಿಳಿಯುವ ಹವಣು ಅವರಲ್ಲಿರುವದಿಲ್ಲ. ಕೆಟ್ಟ ವಿಷಯಗಳ ಸೆಳವು ಬಲವಾದದ್ದು. ಆದ್ದರಿಂದ ಶಿಕ್ಷಕರು ತಮ್ಮ ಚಟಗಳನ್ನೂ ನ್ಯೂನತೆಗಳನ್ನೂ ಹುಡುಗರ ಕಣ್ಣಿಗೆ ಬೀಳಗೊಡದೆ ಅವರಿಗೆ ಒಳ್ಳೆಯ ಹಾದಿಯನ್ನು ತೋರಿಸುವ ಗುರುಗಳಾಗಿರಬೇಕು. ಇಲ್ಲದಿದ್ದರೆ, ಕಾಯದೆಯನ್ನು ಓದದ, ಓದಿದರೂ ತಿಳಿಯಕೊಳ್ಳಲು ಬಾರದ ವಕೀಲ

ನಂತೆ ಶಿಕ್ಷಕನಾದರೂ ನಗೆಗೂ, ಹಳಿತಕ್ಕೂ ಈಡಾಗುವನು. ಹುಡುಗರೇ ಅವನನ್ನು ಹಿಂದುಮುಂದು ಹಳಿಯಹತ್ತುವರು.

ಶಿಕ್ಷಕರಲ್ಲಿ ಶಿಕ್ಷಕರ ಸುಲಕ್ಷಣಗಳು ಉಂಟಾಗುವ ಹಾಗೆ ಮೇಲಧಿಕಾರಿಗಳು ಜಾಗ್ರತರಾಗಬೇಕಾಗುತ್ತದೆ. ಈಗ ಸರಕಾರದ ಖೊಕ್ಕಸದಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಮುಡ್ಡು ಇಲ್ಲವಂತೆ. ಶಿಕ್ಷಕರೆಲ್ಲರಿಗೆ, ಟ್ರೇನಿಂಗ ಕೊಡುವದು ಸಾಧ್ಯವಿಲ್ಲ. ಕೊಟ್ಟ ಮೇಲೆ ಪಚ್ಚು ಸಂಬಳವನ್ನು ಶಿಕ್ಷಕರು ಬೇಡುವದಾದರೂ ನಿಜ. ಆದರೆ ಇದ್ದವರಲ್ಲಿ ತಿದ್ದಿಕೊಳ್ಳುವದು ಲೇಸು.

ಶಿಕ್ಷಕರಲ್ಲಿ ಶಿಕ್ಷಣ ವಿಷಯದ ಜ್ಞಾನ ಅಂದರೆ, ಓದು ಬರಹವನ್ನು ಹೇಗೆ ಕಲಿಸಬೇಕು, ಗಣಿತ, ಇತಿಹಾಸ, ಭೂಗೋಲ, ಭಾಷೆ, ಆರೋಗ್ಯವಿಜ್ಞಾನ, ಚಿತ್ರಕಲೆ, ವ್ಯಾಯಾಮ, ಆಟ ಮೊದಲಾದ ವಿಷಯಗಳನ್ನು ಹೇಗೆ ಕಲಿಸಬೇಕು, ಕ್ಲಾಸುಗಳನ್ನು ಹೇಗೆ ನಡಿಸಬೇಕು, ಹುಡುಗರೊಡನೆ ಹೇಗೆ ವರ್ತಿಸಬೇಕು ಇತ್ಯಾದಿ ವಿಷಯಗಳ ಜ್ಞಾನವು ಅವರಿಗೆ ಆಗುವ ಬಗ್ಗೆ ಶಿಕ್ಷಕರ ಸಮ್ಮೇಲನಗಳನ್ನು ತಾಲೂಕಿಗೊಂದರಂತೆ ಪ್ರತಿ ವರ್ಷ ಏರ್ಪಡಿಸಬೇಕು. ಆ ಕಾಲಕ್ಕೆ ಶಿಕ್ಷಣತಜ್ಞರು ಆದರ್ಶ ಪಾಠಗಳನ್ನು ನಡಿಸಿ ತೋರಿಸಬೇಕು. ಶಿಕ್ಷಣದ ವಿಷಯದ ಚರ್ಚೆಯನ್ನು ಮಾಡಬೇಕು. ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕೈಗಾರಿಕೆಯ ಪ್ರದರ್ಶನವನ್ನು ಮಾಡಬೇಕು. ಹುಡುಗರಲ್ಲಿ ಶರ್ಯತ್ತು, ಸ್ಕೌಟಿಂಗದ ಆಟ ಮೊದಲಾದವನ್ನು ಜರುಗಿಸಬೇಕು. ಇದರಿಂದ ಶಿಕ್ಷಕರಲ್ಲಿ ಜಾಗ್ರತೆಯುಂಟಾಗುವದು; ಅನುಭವಿಕರಾದ ಶಿಕ್ಷಕರು ಹೇಗೆ ಅಧ್ಯಾಪನ ಕಾರ್ಯವನ್ನು ಸಾಗಿಸುವರೆಂಬದನ್ನು ಕೆಲಮಟ್ಟಿಗಾದರೂ ಕಂಡುಕೊಳ್ಳುವರು. ತಮ್ಮಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಸಂಧಿಯನ್ನು ಪಡೆಯುವರು. ಶಿಕ್ಷಣ ವಿಷಯದಲ್ಲಿ ನಿಷ್ಣಾತರಾದ ಶಿಕ್ಷಕರಿಗೆ ತಮ್ಮ ವಿದ್ವತ್ತ್ವೆಯನ್ನು ವ್ಯಕ್ತಪಡಿಸಲು ಸಮಯ ದೊರೆಯುವದು. ಸ್ಪರ್ಧೆಯಿಂದ ದುಡಿಯಲು ಉತ್ತೇಜನ ದೊರೆಯುವದು. ಹೀಗೆ ಶಿಕ್ಷಕರ ಸಮ್ಮೇಲನಗಳಿಂದ ಅನೇಕ ಬಗೆಯ ಲಾಭಗಳುಂಟು. ಪಾಶ್ಚಿಮಾತ್ಯ ದೇಶಗಳಲ್ಲಿ ಈ ತರದ ಸಮ್ಮೇಲನಗಳು ಧಾರಾಳವಾಗಿ ಜರುಗುವವು.

ಈ ಸಂದರ್ಭದಲ್ಲಿ ಹೋದ ವರುಷದ ಚಟುವಟಿಕೆಗಳು ನೆನಪಾಗುವವು :—

೧. ದ. ಭಾ. ಇನ್ಸಪೆಕ್ಟರರಾಗಿದ್ದ ಮೆ॥ ಸದರಂಗಾಣಿಯವರು ಧಾರವಾಡದಲ್ಲಿ "ಎಜ್ಯುಕೇಶನ್ ವೀಕ" ಎಂದು ಇದೇ ಸುಮಾರಕ್ಕೆ ಏರ್ಪಡಿಸಿದ್ದರು. ಆ ಕಾಲಕ್ಕೆ ಮಾದರಿಯ ಪಾಠಗಳು, ಕಲಾಕೌಶಲ್ಯ ಪ್ರದರ್ಶನ ಮುಂತಾದ ಮೇಲೆ ವಿವರಿಸಿದ ವಿಷಯಗಳು ನಡೆದವು. ಈ ಸಾರೆ ವಿದ್ಯಾಖಾತೆಯಿಂದ ಈ ಸುಸಂಧಿಯು ಜರುಗುವ ಲಕ್ಷಣವಿಲ್ಲ.

ಶಿಕ್ಷಕರ ಸಮ್ಮೇಲನಗಳು.

೨. ಮುಂಬಯಿ ಇಲಾಖೆಯ ೨ನೆಯ ತರಗತಿಯ ಶಾಲೆಗಳ ಶಿಕ್ಷಕರ ಸಮ್ಮೇಲನವು ಶ್ರೀ. ಎಮ್. ಆರ್. ಸಾಖರೆ, ಶ್ರೀ. ಕೆ. ಎಸ್. ಜೋಶಿ, ಶ್ರೀ. ಎಸ್. ಎಸ್. ಬಸವನಾಳ ಇವರ ಪರಿಶ್ರಮದಿಂದ ಧಾರವಾಡದಲ್ಲಿ ಜರುಗಿತ್ತು. ಈ ಸಾರೆ ಅದು ಮುಂಬಯಿ ಶಹರದಲ್ಲಿ ಜರುಗುವದು.

೩. ಹುಬ್ಬಳ್ಳಿಯಲ್ಲಿ ಶ್ರೀ. ಆನೇಗುಂದಿ, ಶ್ರೀ. ಕೆಂಪಣ್ಣನವರ ಇವರಿಂದ ಮುನಸೀಪಾಲಿಟಿ ಶಾಲೆಗಳ ಶಿಕ್ಷಕರ ಸಮ್ಮೇಲನವು ನೆರವೇರಿಸಲ್ಪಟ್ಟಿತ್ತು. ಡಿ. ಜಜ್ಜರಾದ ಮೆ॥ ಫೆರರ್ಸ ಸಾಹೇಬರವರಿಂದ ಕಲಾಕೌಶಲ್ಯದ ಪ್ರದರ್ಶನವನ್ನು ತೆರೆಯುವ ಸಮಾರಂಭವಾಯಿತು. ಅವರು ಇಂಥ ಪ್ರದರ್ಶನಗಳ ಮಹತ್ವವನ್ನು ತಿಳುಹಿಸಿ, ಚಾಲಕರನ್ನು ಅಭಿನಂದಿಸಿದರು. ಆದರೆ ಈಗ ಮು. ಸ್ಕೂಲಬೋರ್ಡಿನಲ್ಲಿ ಬದಲಾವಣೆಯಾಗಿದ್ದು ಹೊಸ ಬೋರ್ಡಿನ ಕಾರ್ಯವನ್ನು ನಿರೀಕ್ಷಿಸಬೇಕಾಗಿದೆ.

ಅಂತೂ ಹೋದ ವರ್ಷ ಶಿಕ್ಷಣ ಪ್ರಪಂಚದಲ್ಲಿ ನಮ್ಮ ಜಿಲ್ಹೆಯಲ್ಲಿ ನಡೆದ ಅಪೂರ್ವವಾದ ಚಟುವಟಿಕೆಗಳು ಈ ವರ್ಷ ಜರುಗುವ ಲಕ್ಷಣಗಳು ಇನ್ನೂ ತಲೆದೋರಿಲ್ಲ. ಇಂಥ ಕಾರ್ಯಕ್ರಮಗಳು, ಸ್ವೇಚ್ಛೆಯ ಕಾರ್ಯಗಳಾಗಿರದೆ ಆಯಾಯ ಅಧಿಕಾರಿಗಳ ಅವಶ್ಯವಾದ ಕಾರ್ಯಗಳಾಗಲೇ ಬೇಕು. ಅಂದರೆ ಮಾತ್ರ ತಕ್ಕಮಟ್ಟಿಗೆ ಲಾಭ ಉಂಟಾಗುವದು; ಶಿಕ್ಷಣಕ್ಕೆ ನೂತನ ಜೀವಕಳೆ ಬರುವದು. ಕಳೆದ ೬೦ ವರ್ಷಗಳಿಂದ ಸರಕಾರವು ಆಡಳಿತೆಯನ್ನು ಮಾಡುತ್ತ ಬಂದಿತ್ತು. ಆದರೆ ಆ ಅವಧಿಯಲ್ಲಿ ಇಂಥ ಯಾವ ಕಾರ್ಯವನ್ನೂ ಆಸ್ಥೆಯಿಂದ ನಡೆಯಿಸಲಿಲ್ಲ. ಇದರ ಶ್ರೇಯಸ್ಸು ನಮ್ಮ ಸ್ಥಾನಿಕ ಸಂಸ್ಥೆಗಳಿಗೆ ಸಲ್ಲುವದೆಂದು ಆಶಿಸುತ್ತೇವೆ. ಇದರಂತೆ ಕೆಲವೊಂದು ಜಿಲ್ಹೆಗಳಲ್ಲಿ ನಡೆದಿರುವವು. ಬೆಳಗಾವ ಜಿಲ್ಹೆಯ ಚೀರಮನ್ನರು ಪ್ರತಿ ತಾಲೂಕಿಗೊಂದು ಸಮ್ಮೇಲನವು ವರ್ಷಕ್ಕೊಂದಾವರ್ತಿ ಜರುಗುವ ಸಾಹಸವನ್ನು ಸುಪರನಾಯಿಝರ ಮೊದಲಾದವರು ಮಾಡಬೇಕೆಂದು ಸರಕ್ಯೂಲರ ತೆಗೆದಿರುವರೆಂದುಕೇಳಿರುವೆವು. ಸರಕಾರದವರಾದರೂ ಈ ಯೋಜನೆಗೆ ಉತ್ತೇಜನ ಕೊಡುವರೆಂದು ಹಾರೈಸುತ್ತೇವೆ.



ಲೇಖಕರು:—ಸಂಪಾದಕರು.

೧. ಓದು ಇದು ಒಂದು ಕಲೆಯದೆ. ಕೇವಲ ಅಕ್ಷರ, ಶಬ್ದ, ವಾಕ್ಯಗಳನ್ನು ಗುರ್ತಿಸಿ ಓದಿದರೆ ಅದು ಓದು ಎನಿಸದು. ಓದುವ ವಿಷಯದ ಅರ್ಥವನ್ನೂ ಭಾವವನ್ನೂ ಪೂರ್ವಾಪರ ಸಂಬಂಧವನ್ನೂ ತಿಳಿದುಕೊಳ್ಳುತ್ತ ಓದುವದೇ ಓದು ಎನಿಸುವದು. ಇದಕ್ಕೆ ರೂಢಿಯೂ ಜಾಣತನವೂ ಬೇಕಲ್ಲದೆ ತೀಕ್ಷ್ಣ ದೃಷ್ಟಿಯೂ ವಿಶಾಲ ಮನಸ್ಸೂ ಬೇಕು. ಮಂದ ದೃಷ್ಟಿಯುಳ್ಳವರು ತಪ್ಪದೆ ಸರಿಯಾಗಿ ಒತ್ತರದಿಂದ ಓದಲಾರರು. ಹರಿಪಾಡುವ ಮನಸ್ಸುಳ್ಳವರು ಓದಿದ ವಿಷಯದ ಅರ್ಥಭಾವಾದಿಗಳನ್ನು ಏನೂ ಗ್ರಹಣ ಮಾಡದೆ ಹಾಡುವ ಯಂತ್ರ (ಗ್ರಾಮಾಫೋನ) ದಂತೆ ಓದಿ ಬಿಡುವರು. ಆದುದರಿಂದ—ದೃಷ್ಟಿದೋಷವಿದ್ದವರಿಗೂ, ಚಂಚಲ ಮನಸ್ಸಿನವರಿಗೂ ಓದುವದು ಅತಿ ಗಡುಚಾದ ಹೋರೆಯು. ಆದರೂ ಏಕಾಗ್ರಚಿತ್ತವನ್ನೂ ಮನಸ್ಸಿನ ಸ್ಥಿರತೆಯನ್ನೂ ಅಭ್ಯಾಸಿಸಲು ಓದುವದು ಒಳ್ಳೇ ಸಾಧನವು. ಆದುದರಿಂದ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಈ ಗುಣಗಳು ಸಂವರ್ಧನೆಯಾಗುವ ಹಾಗೆ ಓದುವವನ್ನು ಕಲಿಸಬೇಕು.

೨ ಬಿನ್ ಇಯತ್ತೆಯನ್ನು ಕಲಿಸುವ ಶಿಕ್ಷಕರು ಬಹು ಶ್ರಮದಿಂದಲೂ, ಜಾಣತನದಿಂದಲೂ ಓದು ಬರಹವನ್ನು ಕಲಿಸಬೇಕಾಗುತ್ತದೆ. ಬಾಲಬೋಧಿನಿ ಮೊದಲಾದ ಕ್ರಮಿಕ ಪುಸ್ತಕಗಳು ಓದು ಬರಹವನ್ನು ಕಲಿಸಲಿಕ್ಕೆ ಸಾಕಷ್ಟು ಇರದೆ ಅವು ಕೇವಲ ಶಿಕ್ಷಕನಿಗೆ ಮಾದರಿಯ ಪಾಠಗಳಾಗಿರುವವು. ಅವುಗಳ ಸಹಾಯದಿಂದ ಶಿಕ್ಷಕನು ತನ್ನ ಜಾಣತನದಿಂದಲೂ, ಅನುಭವದಿಂದಲೂ ಅಲ್ಲಲ್ಲಿ ಹೆಚ್ಚು ವಿಷಯಗಳನ್ನು ಸರಿಯಾಗಿ ಸೇರಿಸಿ ಕಲಿಸಬೇಕು. ಈಗಿನ ಬಾಲಬೋಧಿನಿಯಲ್ಲಿ ಬರಹಕ್ಕೆ ಮಹತ್ವ ಕೊಟ್ಟು ಬರೆಯುವದಕ್ಕೆ ಸುಲಭವಾಗುವಂತೆ ಸಾಮ್ಯವುಳ್ಳ ರ ತ ಈ ಕ ಇತ್ಯಾದಿ ಅಕ್ಷರಗಳ ಗುಂಪು ಮಾಡಿ ಆರಂಭದ ಪಾಠಗಳನ್ನು ಕೊಟ್ಟಿದ್ದಾರೆ. ಆದರೆ ಹುಡುಗರಿಗೆ ಬರೆಯುವದಕ್ಕಿಂತ ಮೊದಲು ಕೇವಲ ಓದುವದನ್ನು ಕಲಿಸುವದು ಸರಿಯಾದದ್ದು.

೩. ಆದ್ದರಿಂದ ಉಚ್ಚಾರದಲ್ಲಿ ಸಾಮ್ಯವುಳ್ಳ ಅಕ್ಷರಗಳನ್ನು ಅಂದರೆ ಸ್ವರಗಳೂ, ವರ್ಗೀಯ ಅವರ್ಗೀಯ ವ್ಯಂಜನಗಳೂ, ಗುಣಿತಾಕ್ಷರಗಳೂ, ಒತ್ತಕ್ಷರ

ಗಳೂ ಈ ಗುಂಪುಗಳು ಭಾಷೆಯನ್ನು ಅನ್ವಯಿಸುವದರಿಂದ ಅವುಗಳನ್ನು ಕ್ರಮವಾಗಿ ಓದಲಿಕ್ಕೆ ಬಾಲಕರಿಗೆ ಶಿಕ್ಷಕರು ಕಲಿಸಿ ಅಕ್ಷರಗಳ ಗುರುತು ಅವರಿಗೆ ಸರಿಯಾಗಿ ಆದಮೇಲೆ ಬರಹವನ್ನು ಕಲಿಸಬೇಕು ಪೆನ್ಸಿಲ್ ಸಹ ಸರಿಯಾಗಿ ಹಿಡಿಯಲಿಕ್ಕೆ ಬಾರದ ಹಸುಮಕ್ಕಳಿಗೆ ಒಮ್ಮೆಲೆ ಬರಹವನ್ನು ಕಲಿಸುವದರಲ್ಲಿ ಕಾಲಹರಣವಾಗುವದು ಬಾಲಬೋಧಿನಿಯಲ್ಲಿ ಕೊಟ್ಟ **ರ** ಅಕ್ಷರವನ್ನು **ರ ರ ರಕ್ಷ** ಎಂದು ಚಿತ್ರವನ್ನು ನೋಡಿ ಹುಡುಗರು ಅನ್ನುವರು. ಅಷ್ಟರಿಂದಲೇ ಅವರು **ರ**ಕ್ಕೂ **ರಕ್ಷ**ಕ್ಕೂ **ರ ರ ರಥ**ವೆಂದೇ ಕರೆಯುವರು. ಅದರಿಂದ **ರ** ಎಂಬದು ಬಾಯಿಂದ ಉಚ್ಚರಿಸುವ ಒಂದು ವಿಶಿಷ್ಟ ಧ್ವನಿಯ ಗುರ್ತಿಂಬುದು ಅವರಿಗೆ ತಿಳಿಯುವದಿಲ್ಲ. ಆದ್ದರಿಂದ ಅದರಂತೆ ಬೇರೆ ಶಬ್ದಗಳನ್ನು ಬರೆದು ವಸ್ತುಗಳನ್ನು ತೋರಿಸಿ ಆಯಾಯ ಅಕ್ಷರವು ಆಯಾಯ ಉಚ್ಚಾರದ ಗುರ್ತಿಂಬದನ್ನು ಕಾಲವಿಲಂಬನವಿಲ್ಲದೆ ಅನಾಯಾಸವಾಗಿ ತಿಳಿಸುವದು ಅವಶ್ಯವು. **ರಕ್ಕೆ ರ ರ ರವಿ, ರ ರ ರಕ್ತ, ರ ರ ರವಿ** ಇತ್ಯಾದಿ ಶಬ್ದಗಳನ್ನು ಶಿಕ್ಷಕನು ಮಾಡಿಕೊಳ್ಳಬೇಕು. ಮುದ್ರಣದಲ್ಲಿ ಸಾಕಷ್ಟುವಿಷಯವನ್ನು ಸಂಗ್ರಹಿಸಲಾಗುವದಿಲ್ಲ. ಆದ್ದರಿಂದ ಪುಸ್ತಕಗಳು ಶಿಕ್ಷಕರಿಗೆ ಮಾದರಿಯ ಪಾಠಗಳಂತಿದ್ದು ಅವುಗಳ ಮೇಲಿಂದ ಹೆಚ್ಚಿನ ಆವಶ್ಯಕ ವಿಷಯಗಳನ್ನು ಅವರೇ ಮಾಡಿಕೊಳ್ಳಬೇಕು. ಇನ್ನು ಅಕ್ಷರ ಜ್ಞಾನವಾದ ಮೇಲೆ ಹುಡುಗರಿಗೆ ಶಬ್ದಗಳ ಜ್ಞಾನವಾಗಬೇಕು. ಆದ್ದರಿಂದ ಮಾತಾಡಿದಂತೆ ಅಕ್ಷರಗಳನ್ನು ಹೇಗೆ ಕೂಡಿಸುತ್ತ ವಾಕ್ಯಗಳನ್ನು ರಚಿಸಬೇಕೆಂಬುವದು ಅವರಿಗೆ ಗೋಚರವಾಗಬೇಕು.

ಇದಕ್ಕಾಗಿ ಶಿಕ್ಷಕರು ಅವರಿಗೆ ಮಾದರಿಯ ಸುಲಭ ಪಾಠಗಳನ್ನು ಸಾಬಿನಯ ಓದಿ ಒಂದೆರಡಾವರ್ತಿ ತೋರಿಸಬೇಕು. ಆ ಮೇಲೆ ಹುಡುಗರಿಗೆ ಆ ಪಾಠಗಳನ್ನು ಓದಲಿಕ್ಕೆ ಹಚ್ಚಬೇಕು. ಹೀಗೆ ಮಾಡದೆ ಒಮ್ಮೆಲೆ ಅದರಲ್ಲಿರುವ ವಿಷಯವು ಅವರಿಗೆ ಗೊತ್ತಿಲ್ಲದೆ ಓದಲಿಕ್ಕೆ ಹಚ್ಚಿದರೆಅವರು ತಾವು ಏನು ಓದುತ್ತೇವೆಂಬದು ತಿಳಿಯದೆ ಅಪದ್ಧವಾಗಿ ಓದುವರು. ಮೊದಲು ಸುಲಭ ಕಥೆಗಳನ್ನು ಹೇಳಿ ಆ ಕಥೆಗಳನ್ನು ದೊಡ್ಡ ಅಕ್ಷರಗರಲ್ಲಿ ಬೋರ್ಡಿನ ಮೇಲೆ ಬರೆದು ಓದಲಿಕ್ಕೆ ಹಚ್ಚಬೇಕು. ಉದಾ :—

ಕಾಮಿಯ ಕಥೆ.

* ಆಕಳು ಹಾಲು ಕರೆಯುವದು. ಹಾಲು ಗಡಿಗೆಯೊಳಗೆ ಇರುವದು. ಗಡಿಗೆಯು ಒಲೆಯ ಮೇಲೆ ಇರುವದು. ಅದರ ಕೆಳಗೆ ಬೆಂಕಿ ದಣ ದಣ ಉರಿಯುವದು. ಗಡಿಗೆಯೊಳಗಿನ ಹಾಲು ಸುಡುವದು. ಕಿಡಿಕೆಯೊಳಗಿಂದ ಕಾಮಿಯು

* ಈ ಕಥೆಯಲ್ಲಿ ಒತ್ತಕ್ಷರಗಳನ್ನು ತಂದಿಲ್ಲ.

ಬರುವದು. ಹಾಲಿನ ವಾಸನೆಯು ಕಾಮಿಗೆ ಬಡಿಯುವದು. ಕಾಮಿಯು ಹಾಲ
ಕುಡಿಯಬೇಕೆಂದು ಓಡಿ ಬರುವದು. ಅದು ಓಡಿ ಬಂದು ಗಡಿಯೊಳಗೆ ಮೋ
ಹಾಕುವದು. ಅದರ ಮೋರೆಯು ಒಳಿತಾಗಿ ಸುಡುವದು. ಕಾಮಿಯು ಮೆಂ
ಮೆಂವ ಅಂತ ಒದರಿ ಓಡುವದು.

ಇಂತಹ ಚಿಕ್ಕ ಕಥೆಯನ್ನು ಮೊದಲು ಹೇಳಿ, (ಪ್ರಶ್ನೆ) ಆಕಳು ಏನ
ಮಾಡುವದು? (ಉತ್ತರ) ಆಕಳು ಹಾಲು ಕರೆಯುವದು. ಇಂತಹ ಪ್ರಶ್ನೋ
ತ್ತರಗಳಿಂದ ಹುಡುಗರಿಗೆ ಕಲಿಸಿ ಆ ಮೇಲೆ ಈ ಕಥೆಯನ್ನು ಓದಿಸಬೇಕು
ಅದರಿಂದ ಹುಡುಗರಿಗೆ ತಾವು ಏನೇನು ಓದುತ್ತೇವೆಂಬುದು ಗೊತ್ತಾಗುತ್ತ ಸು
ಭವಾಗಿ ಅಕ್ಷರಗಳ ಗುರ್ತು ಹಿಡಿಯುತ್ತ ಶಬ್ದಗಳನ್ನು ಜೋಡಿಸುತ್ತ ಓದುವರು

ಮುಂಗಸ ಕಥೆ.

ಆಳುಮಗನು ಜೋಳಾ ಬೀಸಿ ತಂದನು. ಶಂಕರನ ಅವ್ವನು ಸಾಣಿಸಿದಳು
ಅವಳು ಜಿಗಟು ಮಾಡಿ ನಾದಿದಳು. ಆ ಮೇಲೆ ಅಚ್ಚೀ ಮಾಡಿದಳು ಶಂಕರ
ತಂಗಿಯು ಸಣ್ಣ ಚಿಕ್ಕಾಲಿ ತಿಂದಳು ಶಂಕರನು ದೊಡ್ಡ ಚಿಕ್ಕಾಲಿ ತಿಂದನು
ಅವನ ತಾಯಿಯು ಉಳಿದ ರೊಟ್ಟಿಯನ್ನು ಒಟ್ಟಿಯಲ್ಲಿ ಇಟ್ಟಳು. ಬುಟ್ಟಿಯನ್ನು
ನೆಲವಿನ ಮೇಲೆ ಇಟ್ಟಳು ಒಂದು ಸೊಲಗ ಮುಂಗವು ಹಿಂದಿನ ಬಾಗಿಲಿನಿಂ
ಬಂದಿತು. ಬುಟ್ಟಿಯೊಳಗಿನ ರೊಟ್ಟೀ ಕಂಡಿತು. ಒಂದನ್ನು ತೆಗೆದುಕೊಂಡು ಓಡಿತು
ಶಂಕರನ ತಂಗಿಯು ನೋಡಿ ಅಂಜಿ ಚೀರಿದಳು. ಅದನ್ನು ಕೇಳಿ ಶಂಕರನು ಓ
ಬಂದನು. ಮುಂಗವು ಗಿಡದ ಮೇಲೆ ಏರಿ ಕುಳಿತಿತು. ಶಂಕರನು ಹೊಡೆಯ
ಹೋದನು. ಅದು ಅವನಿಗೆ ಘೂಕ, ಘೂಕ ಅಂತ ಅಣಕಿಸಿ ರೊಟ್ಟಿ-
ತಿಂದು ಬಿಟ್ಟಿತು

ಇಂತಹ ಸುಲಭ ಕಥೆಗಳನ್ನು ಕಲ್ಪಿಸುವದರಲ್ಲಿ ಶಿಕ್ಷಕರು ತುಂಬಾ ಜಾ
ರಿದ್ದು, ಇಂತಹ ಕಥೆಗಳನ್ನು ಕಲಿಸಿದ ಮೇಲೆ ಬಾಲಬೋಧಿನಿಯೊಳಗಿ
ಅಂಗಡೀ ಆಟ, ಬಣ್ಣಗಳು, ಅಂಕೆಗಳು ಮುಂತಾದ ಕಠಿಣ ಪಾಠಗಳನ್ನು ಕಲಿ
ವದು ನಮಗೆ ಸರಿಯೆಂದು ತೋರುವದು. ಹೀಗೆ ಶಿಕ್ಷಕರು ಹುಡುಗರಿಗೆ ಮೊದ
ಅವರು ಓದುವ ಪಾಠಗಳ ವಿಷಯವನ್ನು ತಿಳಿಸಿ ಓದಿದರೆ ಅವರು ಅರ್ಥವನ
ತಿಳಿಯುತ್ತ ಓದುವದನ್ನು ಕಲಿಯುವರು ಮತ್ತು ಅವರ ಮನಸ್ಸಾದರೂ ಅವ
ಓದುವ ವಿಷಯದಲ್ಲಿ ಮಗ್ನವಾಗುವದು ಹುಡುಗರಿಗೆ ಚಿತ್ತವನ್ನು ಆಕರ್ಷಿಸ
ಪಾಠಗಳನ್ನು ಓದಿಸುವದು ಲೇಸು.

ಶಿಕ್ಷಕರು ಓದುವ ರೀತಿಯನ್ನು ಕಲಿಸಬೇಕು ಮಾತಾಡಿದಂತೆ, ಅರ್ಥ
ಚನ್ನಾಗಿ ತಿಳಿಯುವಂತೆ ಸಾಭಿನಯ ಓದಿ ತೋರಿಸಬೇಕು. ಹುಡುಗರು ಅನು
ರಣಶಾಲಿಗಳಾದುದರಿಂದ ಆಯಾಸವಿಲ್ಲದೆ ಸಾಭಿನಯ ಓದಲು ಕಲಿಯುವರ

ಅವರಿಂದ ಅವರಿಗೆ ಓದುವದರ ಮಹತ್ವವೂ ತಿಳಿದು ಬರುವದು. ಆದರೆ ಚನ್ನಾಗಿ ಓದುವದಕ್ಕೆ ಸರಿಯಾದ ದೃಷ್ಟಿಯೂ, ನಿಶ್ಚಲ ಮನಸ್ಸೂ ಅವಶ್ಯವೆಂದು ಮೇಲೆ ಹೇಳಿದ್ದೇವೆ. ಮೊದಲನೆಯದು ಪ್ರಾಕೃತಿಯನ್ನು ಅವಲಂಬಿಸಿರುವದು ಎರಡನೆಯದು ಸ್ವಭಾವವನ್ನು ಅವಲಂಬಿಸಿರುವದು ಆದರೂ ಓದುವ ಅಭ್ಯಾಸದಿಂದ ದೃಷ್ಟಿದೋಷವನ್ನೂ ಚಂಚಲ ಸ್ವಭಾವವನ್ನೂ ಕ್ರಮೇಣ ಹೋಗಲಾಡಿಸಬಹುದು. ಹುಡುಗರಲ್ಲಿ ಏಕಾಗ್ರ ಚಿತ್ತವು ನೆಲಿಸಬೇಕಾದರೆ ಹೇಗೆ ಓದಬೇಕು? ಮನಸ್ಸಿನಲ್ಲಿ ಓದಬೇಕೋ? ಒದರಿ ಓದಬೇಕೋ? ಎಂಬ ವಾದಗ್ರಸ್ತ ಪ್ರಶ್ನೆಯು ಉದ್ಭವಿಸುವದು

ಮನಸ್ಸಿನಲ್ಲಿ ಓದುವದರಿಂದ ಹುಡುಗರು ಹೊರಗಿನ ಸದ್ದುಗಳಿಗೆ ಲಕ್ಷ್ಯ ಕೊಡದೆ ತಾವು ಓದುವ ವಿಷಯದಲ್ಲಿ ಚಿತ್ತವನ್ನು ನಿಲ್ಲಿಸಬೇಕಾಗುವದು ಹುಡುಗರು ಸ್ವಾಭಾವಿಕವಾಗಿ ಚಂಚಲ ಸ್ವಭಾವದವರಾದ್ದರಿಂದ ಮನಸ್ಸಿನಲ್ಲಿ ಓದುವದು ಕಷ್ಟಕರವಾಗುವದು ಅಕ್ಷರಗಳನ್ನು ಗುರ್ತಿಸುತ್ತ, ಅವುಗಳನ್ನು ಜೋಡಿಸುತ್ತ, ಶಬ್ದಗಳನ್ನು ಓದುವಾಗ ಶಿಶುವರ್ಗದ ಹುಡುಗರು ಸ್ವಾಭಾವಿಕವಾಗಿ ಒದರಿ ತಟ್ಟಿಸುತ್ತ ಓದುವರು. ಒದರಿ ಓದುವಾಗ ಹೊರಗಿನ ಸದ್ದುಗಳ ಕಡೆಗೆ ಲಕ್ಷ್ಯ ಹೋಗುವದಿಲ್ಲ ಆದರೆ ಅನ್ಯರಿಗೆ ತೊಂದರೆ ಮಾತ್ರ ಉಂಟಾಗುವದು. ಮನಸ್ಸಿನಲ್ಲಿ ಓದುವದು, ಮನಸ್ಸನ್ನು ಬಿಗಿ ಹಿಡಿಯಲಿಕ್ಕೂ ಏಕಾಗ್ರ ಚಿತ್ತಕ್ಕೂ ಬಲವಾದ ಸಾಧನವಿರುವದು ಪೂರ್ವಾಪರ ಅರ್ಥವನ್ನು ತಿಳಿದುಕೊಳ್ಳಲು ಅನುಕೂಲವಾಗುವದು ಮತ್ತು ಶೀಘ್ರದಿಂದ ಓದಲಿಕ್ಕೆ ಬರುವದು. ಆದರೆ ಇದು ಪ್ರೌಢ ವಿದ್ಯಾರ್ಥಿಗಳಿಗೆ ಮಾತ್ರ ಸಾಧ್ಯವು. ಇದು ಚಿಕ್ಕ ಬಾಲಕರಿಗೆ ಕಷ್ಟಸಾಧ್ಯವು ಮತ್ತು ಇದರಿಂದ ಬಾಯಿಂದ ಉಚ್ಚರಿಸುವ ರೂಢಿಯಾಗುವಲ್ಲ. ಮನಸ್ಸಿನಲ್ಲಿಯೇ ಯಾವಾಗಲೂ ಓದುವವರಿಗೆ ಮಾತಾಡಲಿಕ್ಕೂ ಭಾಷಣ ಮಾಡಲಿಕ್ಕೂ ತೊಂದರೆಯಾಗುವದು. ಪರಭಾಷೆಯನ್ನು ಕಲಿಯುವವರು ಪದೇ ಪದೇ ಗಟ್ಟಿಯಾಗಿ ಉಚ್ಚಾರ ಮಾಡಿ ಓದಬೇಕಾಗುವದು. ಅಂದರೆ ಬಾಯಿಗೆ ಹಿಯಾಯ ಉಚ್ಚಾರಗಳು ಕೂಡುವವು ಮನಸ್ಸಿನಲ್ಲಿಯೇ ಓದುವವರಿಗೆ ಮಾತಾಡುವಾಗ ಅವರ ಮನಸ್ಸಿನಲ್ಲಿ ಇರುವದೊಂದು, ಬಾಯಿಂದ ಹೊರಡುವದೊಂದು ಹೀಗೆ ಬಾಯಿಗೂ ಮನಸ್ಸಿಗೂ ಮೇಳ ಬೀಳುವದಿಲ್ಲ. ಆದ್ದರಿಂದ ಬಾಯಿಗೆ ರೂಢಿಯಾಗುವದಕ್ಕೂ ಹೊರಗಿನ ಗೊಂದಲದ ತೊಂದರೆಯನ್ನು ತಪ್ಪಿಸುವದಕ್ಕೂ ಕೇಳುವವರಿಗೆ ಅರ್ಥವು ಚನ್ನಾಗಿ ತಿಳಿಯುವಂತೆ ಸಾಭಿನಯ ಓದುವದಕ್ಕೂ ಒದರಿ ಓದಬೇಕು. ಇದು ಮುಸಲ್ಮಾನರ ಪ್ರಾರ್ಥನಾ ಪದ್ಧತಿಯನ್ನು ಹೋಲುವದು. ಇದರಿಂದ ಓದುವದು ಬಹಳ ಒತ್ತರದಿಂದಾಗುವದಿಲ್ಲ; ಬಾಯಿಯು ಮನಸ್ಸಿನಷ್ಟು ಬೇಗ ಹೋಗಲಾರದು. ಏಕಾಗ್ರ ಚಿತ್ತಕ್ಕೂ, ಪೂರ್ವಾಪರ ಅರ್ಥವನ್ನು ತಿಳಿದುಕೊಳ್ಳುವದಕ್ಕೂ, ಬೇಗನೆ ಓದುವದಕ್ಕೂ ಶಾಂತವಾಗಿ ಮನ

ಸ್ಸಿನಲ್ಲಿ ಓದುವದು ಸರಿಯಾದದ್ದು; ಇದರಿಂದ ಪರರಿಗೆ ತೊಂದರೆಯಾಗುವದಿಲ್ಲ. ಆದರೆ ಪರರ ತೊಂದರೆಯು ಸಹನವಾಗುವದಿಲ್ಲ ಇದು ಹಿಂದೂ ಧ್ಯಾನ ಪದ್ಧತಿಯನ್ನು ಹೋಲುವದು.

ಎರಡೂ ಪದ್ಧತಿಗಳನ್ನು ಸಮೀಚೀನವಾಗಿ ಬೆರಸಿ ಓದಿಸುವ ಜಾಣತನವು ಶಿಕ್ಷಕರನ್ನೇ ಅವಲಂಬಿಸಿರುವದು

ಭಾವೀ ಶಿಕ್ಷಣಾಲಯಗಳು

ಲೇಖಕರು ಃ—ಕ ರಾ. ಅಡಬಡ್ಡಿ, ಹೆ. ಮೂ. ನಾಗಾವಿ.

ಸದ್ಯದ ಶಿಕ್ಷಣವು ಸದ್ಯೋಷವಾದದ್ದೂ, ದೇಶದ ವ್ಯವಹಾರ, ಉದ್ಯೋಗಗಳಿಗೆ ಅನನುರೂಪವಾದದ್ದೂ ಇದೆಯೆಂಬದು ಸರ್ವಸಮ್ಮತವಾಗಿದೆ ಶಿಕ್ಷಣದಲ್ಲಿ ತಿದ್ದುಪಡೆಯು ಅತ್ಯಾವಶ್ಯವಾಗಿದ್ದು ಭಾವೀ ಶಿಕ್ಷಣಾಲಯಗಳ ವಿಷಯದಲ್ಲಿ ಸಂಕ್ಷಿಪ್ತ ಯೋಜನೆಯನ್ನು ಇಲ್ಲಿ ಕೊಡುವೆವು.

೧ ಪ್ರಾಥಮಿಕ ಶಿಕ್ಷಣಾಲಯಗಳು.
೨ ಮಧ್ಯ ತರಗತಿಯ ಶಿಕ್ಷಣಾಲಯಗಳು
೩. ಉಚ್ಚ ಶಿಕ್ಷಣಾಲಗಳು

ಹೀಗೆ ಮೂರು ತರಗತಿಗಳು.

೧. ಪ್ರಾಥಮಿಕ ಶಿಕ್ಷಣಾಲಯಗಳು

೧ ಹಳ್ಳಿಯ ಶಾಲೆಗಳು
೨. ಮಧ್ಯವರ್ತಿಯ ಶಾಲೆಗಳು.
೩. ಪಟ್ಟಣದ ಶಾಲೆಗಳು.

೧. ಹಳ್ಳಿಯ ಶಾಲೆಗಳು:—ಇಲ್ಲಿ ಮೂರು ವರ್ಗಗಳು. ೩ ವರ್ಷದ ಅಭ್ಯಾಸಕ್ರಮವು.

ಮೊದಲನೆಯ ವರ್ಗ:—ಓದು-ಬರಹ; ಅಂಕಿ-ಮಗ್ಗಿಗಳು.

ಎರಡನೆಯ ವರ್ಗ :—ವಾಚನ ಪಾಠದಲ್ಲಿಯೇ ಇತಿಹಾಸ, ಭೂಗೋಲ, ಧಾರ್ಮಿಕ, ಸಾಮಾಜಿಕ, ನೈತಿಕ ಪಾಠಗಳ ಸಮಾವೇಶ, ಹಾಗೂ ಹಳ್ಳಿಯ ಉದ್ಯೋಗಗಳ ಸಾಮಾನ್ಯ ಮಾಹಿತಿಯ ಪಾಠಗಳು, ಇವುಗಳ ಸಂಬಂಧದ ಕವಿತೆಗಳು, ಬರಹ, ವ್ಯವಹಾರೋಪಯೋಗೀ ಕೋಷ್ಟಕ, ಬೇರೀಜು, ವಜಾಬಾಕಿ ಗುಣಾಕಾರ, ಭಾಗಾಕಾರ, ಲಕ್ಷದವರೆಗೆ ಸಂಖ್ಯೆ.

ಮೂರನೆಯ ವರ್ಗ :—ವಾಚನದಲ್ಲಿಯೇ ಇತಿಹಾಸ ಮೊದಲಾದ ಹೆಚ್ಚಿನ ಮಾಹಿತಿಯ ಪಾಠಗಳು, ಬರಹ, ಕೋಷ್ಟಕಗಳಿಂದಾಗತಕ್ಕ ಲೆಖ್ಖಗಳು, ಭೂಮಿ, ಬೀಜ, ಗೊಬ್ಬರಗಳ ಮಾಹಿತಿ, ಕೈಗಾರಿಕೆಯ ಸಾಮಾನ್ಯ ಮಾಹಿತಿ (ಬಡಿಗತನ, ಕಂಬಾರ, ಕುಂಬಾರ, ಸಿಂಪಿಗ, ನೇಯಿಗೆ ಮುಂತಾದ ಹಳ್ಳಿಯ ಉದ್ಯೋಗಗಳು).

ಒಕ್ಕಲಿಗರ ಮಕ್ಕಳು ಪ್ರಾತಃಕಾಲದಲ್ಲಿ ದನಗಳನ್ನು ಹೂಡದುಕೊಂಡು ಹೋಗುವರು. ಹೊಲಗಳಲ್ಲಿರುವವರಿಗೆ ರೊಟ್ಟಿ-ಬುತ್ತಿಗಳನ್ನು ಕೊಡುವರು. ಹೊಲದಲ್ಲಿ ಸಹಾಯವಾಗುವರು. ಇತರ ಕಸಬುದಾರರ ಮಕ್ಕಳು ತಮ್ಮ ಕಸಬುಗಳ ಮಾಹಿತಿಯನ್ನು ಮಾಡಿಕೊಳ್ಳುವರು. ಆದ್ದರಿಂದ ಹಳ್ಳಿಯ ಶಾಲೆಗಳು ಪ್ರಾತಃಕಾಲದಲ್ಲಿ ಪ್ರಾರಂಭಿಸಲ್ಪಡದೆ, ಮಧ್ಯಾನ್ಹದ ೨ರಿಂದ ೬ರವರೆಗೆ ಹಾಕಲ್ಪಡುವವು. ಈ ಶಾಲೆಗೆ ಬರುವ ಬಾಲಕರ ವಯಸ್ಸು ೬ ವರ್ಷದೊಳಗೆ ಇರಕೂಡದು. ಸ್ವಭಾವತಃ ಇವರಿಗೆ ವ್ಯಾಯಾಮವಾಗುತ್ತಿರುವದರಿಂದ ವ್ಯಾಯಾಮದ ಕಡೆಗೆ ಅಷ್ಟು ಲಕ್ಷಗೊಡದಿದ್ದರೂ ನಡೆಯುವದು.

೨. ಮಧ್ಯವರ್ತಿಯ ಶಾಲೆಗಳು :—ಇಲ್ಲಿಯೂ ೩ ವರ್ಗಗಳು. ೩ ವರ್ಷದ ಅಭ್ಯಾಸಕ್ರಮವು. ಇವು ಸಮೀಪದ ಹಳ್ಳಿಗಳಿರುವ ಹಾಗೂ ಹುಡುಗರು ಹೋಗಿ ಬರಲು ಅನುಕೂಲವಿರುವಂಥ ದೊಡ್ಡ ಹಳ್ಳಿಗಳಲ್ಲಿರುವವು. ದೊಡ್ಡ ಹಳ್ಳಿಯಿದ್ದರೆ ಹಳ್ಳಿಯ ಶಾಲೆಗಳಿದ್ದ ಹಳ್ಳಿಗಳಲ್ಲಿಯೂ ಈ ಶಾಲೆಗಳಿರಬಹುದು.

ನಾಲ್ಕನೆಯ ವರ್ಗ :—ವಾಚನದಲ್ಲಿಯೇ ಕರ್ನಾಟಕದ ಪೂರ್ಣ ಮಾಹಿತಿ, ಪ್ರಾಂತಗಳ ಕಲ್ಪನೆ, ಮುಂಬೈ ಇಲಾಖೆಯ ಸಾಮಾನ್ಯ ಜ್ಞಾನ, ಸತ್ಪುರುಷರ ಚರಿತ್ರೆಗಳು, ಬರಹ, ತ್ರೈರಾಸಿಕ ಸಂಬಂಧದ ಲೆಖ್ಖಗಳು, ಕೈಗಾರಿಕೆಯ ಹಾಗೂ ಒಕ್ಕಲತನದ ಪ್ರತ್ಯಕ್ಷ ಮಾಹಿತಿ, ರಾಷ್ಟ್ರಭಾಷೆಯಾದ ಹಿಂದೀ ಭಾಷೆಯ ಪ್ರಾರಂಭ.

ಐದನೆಯ ವರ್ಗ :—ಮುಂಬಯಿ ಇಲಾಖೆಯ ಸಂಪೂರ್ಣ ಮಾಹಿತಿ, ಹಿಂದುಸ್ಥಾನದ ಸಾಮಾನ್ಯ ಜ್ಞಾನ, ದೇಶೀಯರ ಮಹತ್ವದ ಆಳಿಕೆಯ ಭಾಗ, ಇಂಗ್ಲಿಷರಾಡಳಿತದ ಪ್ರಾರಂಭ, ಇವೆಲ್ಲ ವಿಷಯಗಳು ವಾಚನ ದ್ವಾರದಿಂದಲೇ ಸಾಗತಕ್ಕವು. ಬರಹ, ತ್ರೈರಾಸಿಕ, ಪಂಚರಾಸಿಕಗಳಿಂದ ಬಿಡುವ ವ್ಯವಹಾರೋ

ಪಯೋಗೀ ಲಾಭ-ಹಾನಿಗಳ ಲೆಖ್ಖಗಳು, ಹಿಂದೀ ಭಾಷಾಜ್ಞಾನ, ಸ್ವತಃ ಕೈಗಾರಿಕೆಯ ಕೆಲಸಗಳನ್ನು ಪ್ರಾರಂಭಿಸುವದು.

ಆರನೆಯ ವರ್ಗ: ೫ನೆಯ ವರ್ಗದ ವಿಷಯಗಳಲ್ಲದೆ, ಹಿಂದೀ ಭಾಷೆಯ ವಿಶೇಷ ಜ್ಞಾನ, ಇಂಗ್ಲಿಷ ರಾಜ್ಯ ಕಾರಭಾರದ ಮಾಹಿತಿ, ಪರದೇಶದ ತೂಕ ಮಾಪುಗಳ ಕೋಷ್ಟಕ, ಬಜ್ಜಿಯ ಲೆಖ್ಖಗಳು, ಕೈಗಾರಿಕೆಯ ಪರೀಕ್ಷೆ.

೩. ಪಟ್ಟಣದ ಶಾಲೆಗಳು:—(೧) ಪಟ್ಟಣದ ಸ್ವತಂತ್ರ ಶಾಲೆಗಳಿಂತಲೂ (೨) ಮಧ್ಯವರ್ತೀ ಶಾಲೆಗಳ ಮೇಲ್ಪಟ್ಟ ಪಟ್ಟಣದ ಶಾಲೆಗಳಿಂದೂ ಎರಡು ಭಾಗಗಳು.

೧. ಪಟ್ಟಣದ ಸ್ವತಂತ್ರ ಶಾಲೆಗಳು:—ಇಲ್ಲಿಯೂ ೬ ವರ್ಗಗಳು. ೬ ವರ್ಷದ ಅಭ್ಯಾಸಕ್ರಮವು. ಈ ಶಾಲೆಗಳಲ್ಲಿ ಕೈಗಾರಿಕೆಯ ಹಾಗೂ ವ್ಯವಹಾರೋಪಯೋಗೀ ಶಿಕ್ಷಣವು ನಡೆಯತಕ್ಕದ್ದು. ೩ನೆಯ ವರ್ಗದಿಂದ ಹಿಂದೀ ಭಾಷೆಯೂ, ೫ನೆಯ ವರ್ಗದಿಂದ ಇಂಗ್ಲಿಷ ಭಾಷೆಯೂ, ಯಂತ್ರಗಳ ಸಾಮಾನ್ಯ ಮಾಹಿತಿಯೂ ನಡೆಯುವದಲ್ಲದೆ, ಇತರ ವಿಷಯಗಳಿಲ್ಲಿ ಹಳ್ಳಿಯ ಶಾಲೆಗಳಂತೆಯೇ ನಡೆಯುವದು.

೨ ಮಧ್ಯವರ್ತಿ ಶಾಲೆಯ ಮೇಲ್ಪಟ್ಟ ಪಟ್ಟಣದ ಶಾಲೆಗಳು:—ಇಲ್ಲಿ ೨ ವರ್ಗಗಳು; ೨ ವರ್ಷದ ಅಭ್ಯಾಸಕ್ರಮವು

ಏಳನೆಯ ವರ್ಗ:—ವಾಚನ ದ್ವಾರದಿಂದಲೇ ಇತಿಹಾಸ, ಭೂಗೋಲ, ಇತರ ಧಾರ್ಮಿಕ ಮೊದಲಾದವುಗಳ ಜ್ಞಾನ, ಇಂಗ್ಲಿಷ, ಹಿಂದೀ ಭಾಷೆ, ಗಣಿತ, ಕೈಗಾರಿಕೆಯ ಹೆಚ್ಚಿನ ಜ್ಞಾನ

ಎಂಟನೆಯ ವರ್ಗ:—ಸಂಪೂರ್ಣ ಕೈಗಾರಿಕೆ, ಒಕ್ಕಲತನದ ವಿಷಯಗಳು ವಾರದಲ್ಲಿ ೪-೬ ತಾಸು, ಇತರ ವಿಷಯಗಳು, ಪರೀಕ್ಷೆಯ ಸರ್ಟಿಫಿಕೇಟ.

ಇಲ್ಲಿ ಪಾಸಾದವರು ಹಳ್ಳಿಯ ಶಾಲೆಗಳಲ್ಲಿ ಶಿಕ್ಷಕರಾಗಬಹುದು. ಸ್ವತಂತ್ರ ಉದ್ಯೋಗ ಮಾಡಿಕೊಂಡು ಉಪಜೀವಿಸಬಹುದು. ಸ್ವತಂತ್ರ ಪಟ್ಟಣದ ಶಾಲೆಗಳಲ್ಲಿ ಕಲಿತವರು ಈ ಶಾಲೆಯ ೭ನೆಯ ವರ್ಗಕ್ಕೆ ದಾಖಲಾಗಬಹುದು. ಪ್ರಾಥಮಿಕ ಶಾಲೆಗಳಲ್ಲಿ ಇತಿಹಾಸ, ಭೂಗೋಲ ಎಂಬ ಸ್ವತಂತ್ರ ವಿಷಯಗಳಿರದೆ ಎಲ್ಲವೂ ವಾಚನ ಪಾಠಗಳಲ್ಲಿಯೇ ಸಮಾವೇಶವಾಗಿರುವವು. ಸ್ವತಂತ್ರ ಉದ್ಯೋಗದಿಂದ ಜೀವಿಸಲು ಸಮರ್ಥರಾಗುವಂತೆಯೂ, ಪೃಷ್ಠಕಾಯರಾಗಿರುವಂತೆಯೂ ಪ್ರಾಥಮಿಕ ಶಿಕ್ಷಣಾಲಯಗಳ ಅಭ್ಯಾಸಕ್ರಮದಲ್ಲಿ ಜೋಡಣೆಯಾಗಿರುವದೇ ಬಾವೀ ಸುಧಾರಣೆಯ ಮಹತ್ವವಾಗಿದೆ.

೨. ಮಧ್ಯ ತರಗತಿಯ ಶಿಕ್ಷಣಾಲಯಗಳು:—ಇವರಲ್ಲಿ (೧) ಕೈಗಾರಿಕೆಯ ಶಾಲೆಗಳೆಂತಲೂ, (೨) ಜ್ಞಾನಾರ್ಜನೆಯ ಶಾಲೆಗಳೆಂತಲೂ ಎರಡು ವಿಧವಾಗಿರುವವು. ಇವು ನಾಲ್ಕು ವರ್ಷದ ಅವಧಿಯ ಶಿಕ್ಷಣಾಲಯಗಳು

೧. ಕೈಗಾರಿಕೆಯ ಶಾಲೆಗಳು:—ಇವೊಂದು ಬಗೆಯ ನೂಲುವ, ನೇಯುವ, ಬಡಿಗ, ಕಂಬಾರ, ಕುಂಬಾರ, ಶಿಲ್ಪಿಗ, ಸಿಂಪಿಗ ಮೊದಲಾದ ಕಾರಖಾನೆಗಳಂತಿರುವವು. ಇಲ್ಲಿ ಪರೀಕ್ಷಿಸಲ್ಪಟ್ಟು ಪಾಸಾಗಿ ಸ್ವತಂತ್ರ ಉದ್ಯೋಗ ಮಾಡಬಹುದು; ಇಲ್ಲವೆ ಪ್ರಾಥಮಿಕ ಶಿಕ್ಷಣಾಲಯಗಳಲ್ಲಿ ಶಿಕ್ಷಕರಾಗಬಹುದು.

೨ ಜ್ಞಾನಾರ್ಜನೆಯ ಶಾಲೆಗಳು:—ಇತಿಹಾಸ, ಭೂಗೋಲ, ರಸಾಯನ, ಪ್ರಾಣಿಶಾಸ್ತ್ರ, ಯಂತ್ರಶಾಸ್ತ್ರ, ವೈದ್ಯಶಾಸ್ತ್ರಗಳ ಜ್ಞಾನವನ್ನು ಮಾಡಿಕೊಳ್ಳಬಹುದು. ಮುಲ್ಕಿ, ದಿವಾಣಿ ಖಾತೆಗಳ ಮಾಹಿತಿಯನ್ನು ಮಾಡಿಕೊಳ್ಳುವದು. ಇಲ್ಲಿ ಕಲಿತವರು ಸರಕಾರದ ನೌಕರಿಯಲ್ಲಿಯೂ, ಪ್ರಾಥಮಿಕ ಶಾಲೆಗಳಲ್ಲಿಯೂ ಸೇರಬಹುದು; ಸ್ವತಂತ್ರ ಉದ್ಯೋಗ ಮಾಡಬಹುದು.

೩. ಉಚ್ಚ ತರಗತಿಯ ಶಿಕ್ಷಣಾಲಯಗಳು:—ನಾಲ್ಕು ವರ್ಷದ ಅಭ್ಯಾಸಕ್ರಮ; ಇಲ್ಲಿ (೧) ಕಾಯದೆ, (೨) ವೈದ್ಯಕಿ, (೩) ಕಾರಭಾರ, (೪) ಯಾಂತ್ರಿಕ, (೫) ಕೈಗಾರಿಕೆ, (೬) ರಸಾಯನ ಹೀಗೆ ಆರು ವರ್ಗಗಳು; ಅಲ್ಲದೆ ದಂಡಿನ ಹಾಗೂ ಹಡಗುಪಡೆಯ ಮತ್ತು ವೈಮಾನಿಕ ವಿಶೇಷಜ್ಞಾನ, ಇಲ್ಲಿಯ ಅಭ್ಯಾಸವು ನಹದೇಶ ಭಾಷೆಯಿಂದಲೇ ನಡೆಯುವದು; ಇತರ ಪ್ರಮುಖ ಭಾಷೆಗಳನ್ನೂ ಕಲಿಯಬಹುದು. ವ್ಯಾಪಾರ ವಿಷಯಕ ಹೆಚ್ಚಿನ ಜ್ಞಾನ.

ಇಲ್ಲಿ ಪರೀಕ್ಷಿಸಲ್ಪಟ್ಟವರು ವಕೀಲರು, ಡಾಕ್ಟರರು, ಸರಕಾರದ ಅಮಲದಾರರಾಗಬಹುದು. ಮಧ್ಯ ತರಗತಿಯ ಶಿಕ್ಷಣಾಲಯಗಳಲ್ಲಿ ಶಿಕ್ಷಕರಾಗಬಹುದು. ಕಾರಖಾನೆಗಳನ್ನು ನಡೆಯಿಸಬಹುದು

ಹೀಗೆ ಮೂರು ಬಗೆಯ ಭಾವೀ ಶಿಕ್ಷಣಾಲಯಗಳಾಗುವವು. ಪ್ರತಿಯೊಂದು ಶಿಕ್ಷಣಾಲಯಗಳಲ್ಲಿಯೂ ಶರೀರ ಬೆಳವಣಿಗೆಯ ಕಡೆಗೆ ಹೆಚ್ಚು ಲಕ್ಷ ಕೊಡುವರು. ಕೈಗಾರಿಕೆ ಹಾಗೂ ಒಕ್ಕಲತನದವಿಷಯಗಳನ್ನು ಹೆಚ್ಚಾಗಿ ಕಲಿಸುವರು. ರಾಷ್ಟ್ರ ಭಾಷೆಯಾದ ಹಿಂದೀ ಭಾಷೆಯನ್ನು ಪ್ರಚಾರದಲ್ಲಿ ತರುವರು ಇಂತಹ ಶಿಕ್ಷಣವಾವರೇ ರಾಷ್ಟ್ರವು ಸುಸಂಪನ್ನ ಸ್ಥಿತಿಗೆ ಬರುವದೆಂಬದನ್ನು ಬೇರೆ ಹೇಳಲಿಕ್ಕೆ ಬೇಡ.

ಸಿಟ್ಟು ತನ್ನವ್ಯೆರಿ ಶಾಂತಿ ಪರರ ವೈರಿ.

ಲೇಖಕರು—ಬ. ವಿ. ಮಠ, ಮಾಸ್ತರ, ಮಾರಡಗಿ

ಕಾರ್ಯದಲ್ಲಿ ವಿ.ತಿವೋರಿ ಖರ್ಚಾಗುವ ಚೈತನ್ಯವನ್ನು ತಡೆದು ಸುಖಪ್ರ ಸಮತೋಲನ ಸ್ಥಿತಿಯಲ್ಲಿಡುವ ಒಂದಾನೊಂದು ಗುಪ್ತ ಕರ್ತೃತ್ವ ಶಕ್ತಿಗೆ ಶ ಎಂದು ಹೇಳಬಹುದು. ಶಾಂತಿಯಿಂದ ತ್ರಿಕರಣಗಳಲ್ಲಿ ನಡೆದ ಅವ್ಯವಸ್ಥೆಯ ತಣ್ಣಗಾಗಿ ಜೀವನಿಗೆ ಸುಖವಾಗುವದು ಕಾರ್ಯಾಕಾರ್ಯಗಳ ಮರ್ಮ ಗೋಚರವಾಗುವದು. ಕರ್ಮದ ತಳತುದಿಗಳು ತೋರುವವು ಇಚ್ಛಿತ ಫ ವು ಬೇಗ ಕೈಸೇರುವದು. ಆದ್ದರಿಂದ ಮಂತ್ರಕಾರರು ಮಂತ್ರಪಾಠಕರಿಗೆ ಮೇ ಲಿಂದ ಮೇಲೆ ಓಂ ಶಾಂತಿಃ ! ಓಂಶಾಂತಿಃ !! ಓಂಶಾಂತಿಃ !!! ಎಂದು ಹೇಳಕೊ ಡುವರು ದಯಾ, ಕ್ಷಮಾ, ಶಾಂತಿ ಇರುವಲ್ಲಿ ದೇವರು ವಾಸಿಸುತ್ತಾನೆಂದು ಸಾಧುವರ್ಯ ತುಕಾರಾಮರು ಬೋಧಿಸಿದ್ದಾರೆ ಅಂದಮೇಲೆ ನಮ್ಮ ಧ್ಯೇಯವು ಸಾಧಿಸಲಿಕ್ಕೆ ಶಾಂತಿಯು ಅವಶ್ಯವಾಗಿ ಬೇಕು.

ಕೆಲವರು ಹುಟ್ಟಾ ಶಾಂತರಿರುವರು. ಇದಕ್ಕೆ ಒಂದು ಮೂಲಕಾರಣವೇ ನೆಂದರೆ ಹಿಂದಿನ ಜನ್ಮದಲ್ಲಿ ಸೂಕ್ಷ್ಮ ಶರೀರಕ್ಕೆ ಅಂಟಿಕೊಂಡ ಶಾಂತಿ ಕಣಗಳ ಸಂಯೋಗದ ಫಲವು ಈ ಜನ್ಮದಲ್ಲಿ ಈ ರೀತಿ ತೋರುತ್ತಿರುವದು- ಇನ್ನೊಂ ದು ಕಾರಣವೇನೆಂದರೆ ಮಾತಾಪಿತರುಗಳು ಗರ್ಭಧಾರಣ ಸಮಯದಲ್ಲಿ ಶಾಂತಮನಸ್ಕರಾಗಿದ್ದರೆ ಜನಿಸುವ ಕೂಸು ಶಾಂತಿಯುಳ್ಳದ್ದಾಗುವದು. ಎಂದು ಸಂತಾನಶಾಸ್ತ್ರದ ನಿಶ್ಚಿತ ಸಿದ್ಧಾಂತವದೆ. ಈ ಸಿದ್ಧಾಂತದಂತೆ ಜೀವನು ಗರ್ಭಾ ವಸ್ಥೆಯನ್ನು ಹೊಂದುವಾಗ್ಗೆ ತಾಯಿತಂದೆಗಳ ಸಪ್ತಧಾತು ಗುಣಕ್ರಿಯಾದಿಗಳು ಕೂಸಿನ ಮೇಲೆ ಒಳ್ಳೇ ಪರಿಣಾಮವಾಗುವವು. ಈ ತತ್ವಾನುಗುಣದಂತೆ ಹುಟ್ಟಾ ಶಾಂತರಾಗಿರುವರು.

'ಶಾಂತಿ ತುಲ್ಯೋ ತಪೋನಾಸ್ತಿ ಶಾಂತಿರೇವಹಿ ಕಾಮುಧುಕ್' ಶಾಂತಿ ಸಮಾನ ತಪವಿಲ್ಲ. ಶಾಂತಿಯೇ ಕಾಮಧೇನು ಅಂದಮೇಲೆ ಶಾಂತಿಯೊಂ ದಿದ್ದರೆ ದೊಡ್ಡತಪಸ್ವಿಯೂ, ಬೇಕಾದದ್ದನ್ನು ಕೊಡುವ ಸಮರ್ಥನೂ ಆಗುವದರಲ್ಲಿ ಸಂದೇಹವೇನು? ಅಂತೇ ನೀತಿಕಾರರು 'ಶಾಂತಿಯ ಪೊರ್ದು' ಎಂದು ವಿಧಿ ಸಿರುವರು. ಅವ್ಯತಕರನು ಸದಾ ಶಾಂತನಾಗಿರುವದರಿಂದ ಆತನುದಯಿಸಿದಾಗ್ಗೆ

ರಜನಿಯಲ್ಲೆಲ್ಲ ಮಂಗಳತ್ವವು ತೋರುತ್ತಿರುವದು. 'ಶಾಂತಿ' ಎಂದು ಉಚ್ಚರಿಸಿದಾಗಲೇ ಒಂದು ಪ್ರಕಾರದ ಆನಂದವೃತ್ತಿಯು ತಲೆದೋರುವದು. ಕೇವಲ ಶಾಂತಿಸಾಗರದಲ್ಲಿ ಇದ್ದವರಿಗೆ ಯಾವತರಹದ ಆನಂದ, ಫಲಗಳು ಒದಗುತ್ತಿದ್ದಾವೆಂಬದರ ಗುರುತನ್ನು ಶಾಂತವೃತ್ತಿಯನ್ನು ಧಾರಣಮಾಡಿ ವಾಚಕರು ನಿರ್ಧರಿಸಿತಕ್ಕದ್ದಾಗಿದೆ. ಶಾಂತನಾದ ಮನುಷ್ಯನು ತನ್ನಲ್ಲಿಯ ಅವಧಾನ ಶಕ್ತಿಯನ್ನು ಕ್ಷಿಪ್ರದಲ್ಲಿ ಕಳೆದುಕೊಳ್ಳಲಾರನು. ಶರೀರ ಪೋಷಕಗಳಾದ ವಿಶೇಷ ದ್ರವ್ಯಗಳನ್ನು ಹೊಂದಿ ಜಗತ್ತಿನ ಜನರ ಸ್ತುತಿಗೆ ಪಾತ್ರನಾಗುವನು. ಮಹಾತ್ಮರು ಹೆಚ್ಚಾದ ಶಾಂತಿಯನ್ನು ಹೊಂದಿರುವದರಿಂದ ಜಗತ್ತಿನ ಜನರಿಗೆ ಹಿತವನ್ನು ಇಚ್ಛಿಸಲಿಕ್ಕೆ ತಕ್ಕವರಾಗಿರುವರು. ಶಿಕ್ಷಕನು ಶಾಂತಿಯಿಂದ ಶಿಕ್ಷಣದ ಧ್ಯೇಯವನ್ನು ಅಲ್ಪ ಕಾಲದಲ್ಲಿ ಸಾಧಿಸುವನು.

ಎಷ್ಟೋ ಶಿಕರಲ್ಲಿ ಶಾಂತಿ ಎಂಬ ಗುಣವು ಇದ್ದದ್ದು ಕಂಡುಬರುವದಿಲ್ಲ, ಇದರಿಂದ ಹಲವು ವಿದ್ಯಾರ್ಥಿಗಳು ಸಿಟ್ಟಿನ ಶಿಕ್ಷಕರ ಕೈಯಲ್ಲಿ ಸಿಕ್ಕು ಶಾಲೆಯನ್ನು ಬಿಟ್ಟು ವಿದ್ಯಾವಿಹೀನರಾಗಿ ಜಾಳು ಆಗುತ್ತಿರುವರು. ಹಾಯ್! ಹಾಯ್!! ಅಷ್ಟಿಷ್ಟಮಾತಿಗೆ ಸಿಟ್ಟಾಗುವ ಶಿಕ್ಷಕ. ಸನ್ಯಾಸಿ, ಸಂಸಾರಿಕರು ಯಾವ ಯಾವ ದುರ್ಗತಿಗಳನ್ನು ಹೊಂದಬೇಕಾಗುವದೆಂಬದನ್ನು ಹೇಳಲಸಾಧ್ಯ.

'ಅಶಾಂತಸ್ಯ ಕುತಃ ಸುಖಂ' ಅಶಾಂತನಿಗೆ ಎಂದೂ ಸುಖವಾಗುವದಿಲ್ಲೆಂಬವನ್ನು ಚನ್ನಾಗಿ ಲಕ್ಷದಲ್ಲಿಟ್ಟುಕೊಳ್ಳಬೇಕು. ಶರೀರವಿಜ್ಞಾನ ದೃಷ್ಟಿಯಿಂದ ಈ ಪ್ರಶ್ನೆಯನ್ನು ವಿಚಾರಿಸಿ ನೋಡಲು ಕೆಳಗಿನಂತೆ ಅನರ್ಥಗಳೇ ಕಂಡುಬರುವವು. ಸಿಟ್ಟಿನ ವಶವಾದ ಸಮಯದಲ್ಲಿ ಶರೀರ ಪೋಷಕದ್ರವ್ಯಗಳು ಲಯವಾಗಿ ವಿಷದ್ರವ್ಯಗಳು ಹೆಚ್ಚಾಗಿ ಸಂಗ್ರಹವಾಗುವವು. ಇದರಿಂದ ಲಾಲಾಜಲ, ರಕ್ತ, ಬೆವರುಗಳು ದೂಷಿತವಾಗುವವು. ಇಂಥ ಮನುಷ್ಯನ ಒಂದು ಬೆವರಿನ ಹನಿಯನ್ನು ತಕ್ಕೊಂಡು ಸಣ್ಣ ಪ್ರಾಣಿಯ ದೇಹದಲ್ಲಿ ಹಾಕಿದ್ದಾದರೆ ಆ ಪ್ರಾಣಿಯು ಕೂಡಲೇ ಮರಣ ಹೊಂದುವದು. ಎಂದು ಪ್ರೋ. ಎಲ್ಮರಗಟ್ಸ ರೆಂಬವರು ಹೇಳಿದ್ದಾರೆ. ಈ ಸಮಯದಲ್ಲಿ ರಕ್ತದ ವೇಗ ಹೆಚ್ಚಾಗಿ ಸ್ನಾಯುಗಳಿಗೆ ಧಕ್ಕೆ ಕೂಡ್ರುವದು. ಯೋಗಶಾಸ್ತ್ರಮತದಪ್ರಕಾರ ಹಾಗು ಸಧ್ಯದ ಡಾಕ್ಟರರ ನಿಯಮಾನುಸಾರವಾಗಿ ನಾಡಿಯ ವೇಗದ ಮೇಲಿಂದ ಆಯುಷ್ಯಮಾನವನ್ನು ವಿಚಾರಿಸಿದರೆ ಇಂಥ ಮನುಷ್ಯನ ಆಯುಷ್ಯವು, ೧೦೦ ವರ್ಷ ೫ ತಿಂಗಳಲ್ಲಿ ೫ ನಿಮಿಷ ಕಡಿದು ಹೋಗುವದು. ಐಹಿಕ ಬೆಲೆಯುಳ್ಳ ವಸ್ತುಗಳಲ್ಲೆಲ್ಲ ಆರೋಗ್ಯ ಆಯುಷ್ಯಗಳೇ ಎಲ್ಲಕ್ಕೂ ಬೆಲೆಯುಳ್ಳವುಗಳಾಗಿವೆ. ಅಂತೇ ವೇದಾಂತಿಗಳು ಕ್ರೋಧವನ್ನು ಅರಿಷಡ್ವರ್ಗಗಳಲ್ಲಿ ಎಣಿಸುವರು. ಹಲವರು ಸಿಟ್ಟಿನ ಕೈಯಲ್ಲಿ ಸಿಕ್ಕು ಸ್ವ-ಪರ ಪ್ರಾಣಘಾತಕ ಕಾರ್ಯ ಮಾಡುವದನ್ನು ನಾವು ಪದೇ ಪದೇ ಕಾಣುತ್ತೇವೆ. 'ಬಡವನ ಸಿಟ್ಟು

ದವಡಿಗೆ ಮೂಲ" ಎಂಬ ಗಾದೆಯ ವಚನದ ಪ್ರಕಾರ ನಮ್ಮ ವ್ಯವಸಾಯ ಬಂಧುಗಳಾದ ಬಡಶಿಕ್ಷಕರು ಮರೆಯಬಾರದು. ಅನನುಭವಿಕರ ಸಿಟ್ಟಿನ ಬಿರಿನುಡಿಗಳನ್ನು ಜುಲುಮೆಯಿಂದಾದರೂ ತಡೆಯುಜೇಕು. ಅವರ ಸಿಟ್ಟು ಇಳಿದ ಕೂಡಲೆ ಅವರ ತಪ್ಪನ್ನು ಶಾಂತಮನಸ್ಸಿನಿಂದಲೂ ಪರ್ಯಾಯದಿಂದಲೂ ಇಟ್ಟ ಅವರಿಂದ ಪುನಃ ಆ ತರಹದ ತಪ್ಪು ಆಗದಂತೆ ವಿಷಯದಲ್ಲಿ ವ್ಯವಸ್ಥೆಯ ಎಚ್ಚರವನ್ನು ತರಿದುಕೊಡಬೇಕು. ಈ ತರಹದ ವರ್ತನದಿಂದ ನಿಶ್ಚಯವಾಗಿ ಎಲ್ಲೆಡೆಯಲ್ಲಿ ಸುಖವಾಗುವದು. ಈ ಪ್ರಸಂಗದಲ್ಲಿ ಮುಸಲ್ಮಾನ ಗುರುವೆನಿಸಿ ಮಹಮ್ಮದ ಪೈಗಂಬರರ ಶಾಂತಿಯನ್ನೂ ಅವರ ವೈರಿಗಳ ಸಿಟ್ಟನ್ನೂ ಲಕ್ಷದಲ್ಲಿ ತರುವದು ತಕ್ಕದ್ದಾಗಿದೆ—ಮಹಮ್ಮದರ ವೈರಿಗಳು ಸಿಟ್ಟಿನ ಆವೇಶದಿಂದ ಚನ್ನಾಗಿ ಥಳಿಸಿದರೂ ಅವರು ಅಲ್ಲಾದರೂ ಸಿಟ್ಟಿಗೆ ಆಶ್ರಯವನ್ನು ಕೊಡದೆ ಸಿಟ್ಟಿನ ಬದಲಾಗಿ ಮನಸ್ಸಿನಲ್ಲಿ ಶಾಂತಿಯೆಂಬ ಅಲೆಯನ್ನು ಎಬ್ಬಿಸುತ್ತ ನಡೆದಿರಲು ಅವರ ಅತುಲ ಶಾಂತಿಗೆ ದೇವರು ಮೆಚ್ಚಿ ತನ್ನ ದೂತನನ್ನು ಆ ಸ್ಥಳಕ್ಕೆ ಕಳುಹಿಸಿದನು. ಆ ದೂತರು ವೈರಿಗಳನ್ನು ಶಿಕ್ಷಿಸಲು, ಮಹಮ್ಮದರನ್ನು ರಕ್ಷಿಸಲು ಸಿದ್ಧರಿದ್ದರು. ಆದರೂ ಮಹಮ್ಮದ ಪೈಗಂಬರರು ದೇವದೂತರಿಂದಲೂ ವೈರಿಗಳನ್ನು ಶಿಕ್ಷಿಸದೆ ವೈರಿಗಳಿಗೆ ಶಾಂತಿ ಜ್ಞಾನಗಳನ್ನು ಕೊಡುವ ಬಗ್ಗೆ ದೇವರನ್ನು ಪ್ರಾರ್ಥಿಸಿಕೊಳ್ಳ ಹಚ್ಚಿದರು. ಇದರ ಮೇಲಿಂದ ವಾಚಕರು ಹಲವು ಸಂಗತಿಗಳನ್ನು ಬೋಧತೆಗೆದುಕೊಳ್ಳತಕ್ಕದ್ದಾಗಿದೆ. ಈ ತರಹದ ಶಾಂತಿಯಿಂದಲೇ ಅವರ ಕೀರ್ತಿ ಧರ್ಮ ಇಂದಿಗೂ ಸ್ಥಿರವಾಗಿದೆ. ಈ ಬಗ್ಗೆ ಪಾಶ್ಚಾತ್ಯ ಪಂಡಿತರ ಅಭಿಪ್ರಾಯಗಳನ್ನು ಅವಲೋಕಿಸಿದಲ್ಲಿ ಸಹ ಕೆಳಗಿನ ಸಂಗತಿಗಳು ಸಿದ್ಧವಾಗುತ್ತವೆ.

(೧) ಸುಖವು ಶಾಂತಿಯಿಂದ ಉಂಟಾಗುವದು. (೨) ಹೈನದ ದನಗಳು ಸಿಟ್ಟಿನಿಂದ ಹಾಲನ್ನು ಕಡಿಮೆ ಕರೆಯುವವು. ಶಾಂತಿರಾಗಾದಿ ಮೋಹದಿಂದ ಹೆಚ್ಚು ಹಿಂಡುವವು. (೩) ಸಿಟ್ಟಿನಿಂದ ಕುದುರೆಗಳ ನಾಡಿಯು ವೇಗವು ೧ ಮಿ. ಗೆ ೧೦ ಪಟ್ಟು ಹೆಚ್ಚಾಗುವದು.

ಯಾರೂ ಸಿಟ್ಟನ್ನು ಇಚ್ಛಿಸುವದಿಲ್ಲ. ಅದರೂ ೧೦೦ಕ್ಕೆ ನೂರು ಮಂದಿಯಲ್ಲಿ ಸಿಟ್ಟಿದ್ದದ್ದು ಕಂಡುಬರುತ್ತದೆ. ಇವರ ಮೂಲಕಾರಣವೇನೆಂದರೆ, ರೋಗ, ಕೆಟ್ಟ ಪರಿಸ್ಥಿತಿ, ಅಶಕ್ತತೆ, ತಾಮಸ ಆಹಾರ, ಕುಜನ ಸಂಗಗಳೇ ಮುಖ್ಯಕಾರಣಗಳಾಗಿವೆ. ಆದ್ದರಿಂದ ಬಲ್ಲಿದರು ಇವುಗಳಿಂದ ದೂರಿರುವದು ಅವಶ್ಯವಾಗಿದೆ ಯಾಕೆಂಬ ಬಗ್ಗೆ ನಾನು ಬರೆದ * ವಜ್ರ-ಶರೀರ ಶಿಕ್ಷಕ ಎಂಬ ಗ್ರಂಥವನ್ನು ಅವಲೋಕಿಸಿದಲ್ಲಿ ಚನ್ನಾಗಿ ತಿಳಿದು ಬರುವದು. ಅದರಲ್ಲಿ ಕೊಟ್ಟ ಸಾಧನ ಬಲದಿಂ

* ಮುದ್ರಣದಲ್ಲಿ ಅದೆ.

ದ ವಜ್ರಕಾಯಿಗಳಾಗುವರಲ್ಲದೆ, ಸಂಪೂರ್ಣ ಶಾಂತಿಯನ್ನು ಹೊಂದುವದರಲ್ಲಿ ಸಂದೇಹವಿಲ್ಲೆಂದು ನನ್ನ ಸ್ವಾನುಭವವೇ ಸಾಕ್ಷಿ.

ಅಸ್ತು ! ಶಾಂತಿ ಉತ್ಪನ್ನವಾಗಲಿಕ್ಕೆ ಏಕಾಂತವಾಸವೂ ಸಾತ್ವಿಕ ಆಹಾರವೂ ಶಾಂತರ ಒಡನಾಟವೂ, ಶಾಂತಮುಖಕಾಲದ ಪಯಣ ವ್ಯಯಾವುಗಳೂ ಅವಶ್ಯವಾಗಿವೆ. ಇದರಿಂದ ನಾಡಿಶುದ್ಧಿಯಾಗುವವು. ಮನಸ್ಸು ಶಾಂತಿಯನ್ನು ಹೊಂದಿ ಸಿಟ್ಟನ್ನು ತೊರೆಯುವದು. ಶಾಂತಿಯ ಬಗ್ಗೆ ಭಗವದ್ಗೀತೆಯು ಹೀಗೆ ಹೇಳಿದೆ.

ಶ್ಲೋ॥ ಶಾಂತಿ ಖಡ್ಗಂ ಕರೇ ಯಸ್ಯ ದುರ್ಜನಃ ಕಿಂ ಕರಿಷ್ಯತಿ ॥
ಅತೃಣೋ ಪತಿತೋ ವನ್ಹಿಃ ಸ್ವಯ ಮೇವೋಪ ಶಾಮ್ಯತಿ ॥ ೧ ॥

ಅರ್ಥ—ಯಾವನ ಕೈಯಲ್ಲಿ ಶಾಂತಿ ಎಂಬ ಖಡ್ಗವು ಇರುತ್ತದೆಯೋ ಅವನಿಗೆ ಯಾವ ದುರ್ಜನನೂ ಏನು ಮಾಡಲಾರನು. ಹುಲ್ಲು ಇರದ ಸ್ಥಳದಲ್ಲಿ ಯಾವ ಪ್ರಕಾರ ಬೆಂಕಿಯು ಬಿದ್ದು ನಾಶ ಹೊಂದುವದೋ ಅದರಂತೆ ದುರ್ಜನನ ಸಿಟ್ಟಿನ ಬೆಂಕಿಯೂ ಈ ಶಾಂತಮುಖರ ಸ್ಥಳದಲ್ಲಿ ನಾಶಹೊಂದುವದು. ಆದ್ದರಿಂದ *'ಶಾಂತಿ ಪರರ ವೈರಿ ಸಿಟ್ಟು ತನ್ನ ವೈರಿ ಎಂಬ ನಾಣ್ನುಡಿಯು ಪ್ರಸಿದ್ಧವಾಗಿದೆ.

ಸಾರಾಂಶ—ಶಾಂತಿ ಸ್ವಧರ್ಮದ ಬಟ್ಟಿ ಸಿಟ್ಟು ಅಧರ್ಮದ ಮಟ್ಟಿ, ಶಾಂತಿ ಪುಣ್ಯದ ಆಗರ, ಸಿಟ್ಟು ಪಾಪದ ಸಾಗರ, ಶಾಂತಿ ಸುಶಿಕ್ಷಣದ ಆಧಾರ ಸಿಟ್ಟು ಶಿಕ್ಷಣಕ್ಕೆ ಕುಠಾರ.

ಆದ್ದರಿಂದ ಎಲ್ಲರಲ್ಲಿ ಶಾಂತಿ ನಲಿದಾಡಲಿ !! ಒಲಿದಾಡಲಿ !! ಸುಳಿದಾಡಲಿ !!!

" ಓಂ ಶಾಂತಾಯ ಯಶಸ್ವಿನೇ ನಮಃ " ॥

---

* ನಾನು ಮುದ್ರಿಸಿದ " ಸಾವಿರ ಮಾತಿನ ಸರದಾರ " ಎಂಬ ಗಾದೆಯ ಗ್ರಂಥದಲ್ಲಿಯ ಇದೊಂದು ನುಡಿಯು.

ಕನ್ನಡ ನಾಡಿನ ಮಹಿಮೆ.

ವೀ ಗು. ಮುತ್ತಿಗಟ್ಟಿ. ಹೆ. ಪೂ. ಹೊನಪೇಟ.

ವರ್ತಕರು.

ಚಿತ್ರದುರ್ಗದಲ್ಲಿ ಅಂಧ್ರಭೃತ್ಯದ ಸೀಸರನಾಣ್ಯಗಳು ದೊರೆತಿರುವದೆಂದ. ಹಿಂದಿ ಹೇಳಿದ್ದೇವೆ. ಅದೇ ಸ್ಥಳದಲ್ಲಿ ಕ್ರಿ. ಶ ಪೂ. ೨ನೆಯು ಶತಮಾನದಲ್ಲಿದ್ದ ಹನ್ ವೃತಿ ಎಂಬ ಚೀನದೇಶದ ಚಕ್ರವರ್ತಿಯು ಹಿತ್ತಾಳೆಯ ನಾಣ್ಯವೂ, ಕ್ರಿ. ಶ, ೧ಳರಲ್ಲಿ ಗತಿಸಿದ ಅಗಸ್ಟಸ್ ಎಂಬ ರೋಮ್ ಚಕ್ರವರ್ತಿಯ ಡಿನೇರಿಯಸ್ ಎಂಬ ಬೆಳ್ಳಿಯ ನಾಣ್ಯಗಳೂ ದೊರೆತಿರುವದರಿಂದ ಪೂರ್ವ ಕಾಲದಲ್ಲಿ ಕನ್ನಡನಾಡಿನ ವಾಣಿಜ್ಯಕ್ಕೆ ಎಷ್ಟರಮಟ್ಟಿಗೆ ವ್ಯಾಪ್ತಿಯಿದ್ದಿತು ಎಂಬಂಶವನ್ನು ಸ್ಪಷ್ಟಪಡಿಸುವಷ್ಟಿಗೆ ಊಹಿಸಬೇಕಾಗಿದೆ. ಪ್ರಬಲರಾದ ವರ್ತಕರಿಗೆ ವಡ್ಡವ್ಯವಹಾರಿ, ರಾಜಶ್ರೇಷ್ಠಿ ಎಂಬ ಹೆಸರುಗಳು ಶಾಸನೆಗಳಲ್ಲಿಯೂ, ಗ್ರಂಥಗಳಲ್ಲಿಯೂ ಹೇಳಿವೆ. ಸುಮಾರು ೧೧೨೦ರಲ್ಲಿ ಹೊಯ್ಸಳಪೆಟ್ಟ, ನೇವಿಪೆಟ್ಟ ಎಂಬ ವರ್ತಕರು ಹೊಯ್ಸಳರಾಜನಾದ ವಿಷ್ಣುವರ್ಧನನ ರಾಜಶ್ರೇಷ್ಠಿ ಗಳಾಗಿದ್ದಂತೆಯೂ, ೧೩೮ರಲ್ಲಿ ಚಿಟ್ಟಪಪೆಟ್ಟಿ ಎಂಬವನು ಇಂದ್ರನ ಉಚ್ಚೈಶ್ರವಸ್ಸಿಗೆ ಸಮವಾದ ಕುದುರೆಗಳನ್ನೂ, ಐರಾವತಕ್ಕೆ ಸದೃಶವಾದ ಆನೆಗಳನ್ನೂ, ಶ್ರೇಷ್ಠವಾದ ಮುತ್ತುಗಳನ್ನೂ ಹಡಗುಗಳಲ್ಲಿ ತಂದು ದೊರೆಗಳಿಗೆ ಮಾರುತಿದ್ದಂತೆಯೂ, ಅದೇ ಕಾಲದಲ್ಲಿ ದಾಸಯ್ಯನೆಂಬ ವರ್ತಕನು ಪೂರ್ವದೇಶದ ವಸ್ತುಗಳನ್ನು ಪಶ್ಚಿಮ ದೇಶಕ್ಕೂ ಪಶ್ಚಿಮದೇಶದ ವಸ್ತುಗಳನ್ನು ಪೂರ್ವದೇಶಕ್ಕೂ, ಉತ್ತರ ದೇಶದ ಭಂಡಗಳನ್ನು ದಕ್ಷಿಣ ದೇಶಕ್ಕೂ, ದಕ್ಷಿಣ ದೇಶದ ಭಂಡಗಳನ್ನು ಉತ್ತರ ದೇಶಕ್ಕೂ ಕಳುಹಿಸುತ್ತಿದ್ದಂತೆಯೂ; ೧೨೨೫ರಲ್ಲಿ ಕುಂಜನಂಬಿಸೆಟ್ಟಿ ಎಂಬುವನು ಮಾಳವ, ಕಳಿಂಗ, ಚೋಳ, ಪಾಂಡ್ಯ ಈ ರಾಜರುಗಳ ಸಮಯಕ್ಕೆ ಬೇಕಾದ ವಸ್ತುಗಳನ್ನು ಒದಗಿಸಿಕೊಡುತ್ತ ಹೊಯ್ಸಳರಾಜ್ಯದಲ್ಲಿ ಕೀರ್ತಿಯನ್ನು ಪಡೆದಿದ್ದಂತೆಯೂ ಕೆಳಗಣ ಶಾಸನ ಪದ್ಯಗಳಿಂದ ತಿಳಿದುಬರುತ್ತದೆ.

ಧರಣೀಪಾಳಕನಪ್ಪ ಪೊಯ್ಸಳನ ರಾಜಶ್ರೇಷ್ಠಿಗಳ್ ತಮ್ಮುತಿ
ರ್ಪರಿನಲ್ ಪೊಯ್ಸಳಸೆಟ್ಟಿಯುಂ ಗುಣಗಣಾಂಭೋರಾಶಿಯೆಂಬೊಂದು ಸುಂ॥
ದರಗಂಭೀರದ ನೇಮಿಸೆಟ್ಟಿಯುವಿವರ್ ಶ್ರೀ ಜೈನಧರ್ಮಕ್ಕೆ ತಾ।
ಯ್ಗರಿಗಳ್ ತಾಮೆನೆ ಸಂದ ಪೆಂಪಸದಳಂ ಪರ್ವಿತ್ತು ಭೂಭಾಗದೋಳ್ ॥೧॥
ಹರಿಯ ಹಯಕ್ಕೆ ತೋಡೆನಿಸಿ ಹೇಷಿತಯಂಗಳನಿಂಪ್ರಬಂತಿಯೋಳ್ ।
ದೊರೆಯೆನಿಸಿರ್ಪ ದಂತಿಗಳನಭ್ರದೊಳಾದ ಸುಪಾಣಿಮುತ್ತಿನೋಳ್॥
ಸರಿಯೆನಿಸಿರ್ಪ ಮುತ್ತುಗಳನೆಯ್ದಿ ಬಹಿತ್ರದೆ ತಂದು ಮಾರುವಂ ।
ಧರಣಿಪಗರ್ಘ್ಯಮಲ್ತು ಕಮ್ಮಟದ ಉರುಚಿಟ್ಟಪಸೆಟ್ಟಿ ಸಂತತಂ ॥೨॥

ಕರಿದಾಶಾಭಾಂಡಮುಂ ವಾರುಣಿಗೆ ನಡಸ ವಂ ವಾರುಣೀವಸ್ತುವಂವಿ ।
ತ್ತರದಿಂದಿಂದ್ರಾಶೆಯೋಳ್ ಪೆರ್ಚಿಸುವನೊಸೆವು ಕೌಬೇರಿಯಿಂದ್ಯಮ್ನಮುಂನೋ॥
ಕರೆಯಾವ್ಯಾಭಾಗದೊಳ್ ಸಂದಿಳುವನೆಸೆವ ಮೂಲ್ಯಂಗಳಂ ಯಾಮ್ಯದಿಂದು ।
ತ್ತರದಿಕ್ಕಿಂಗಟ್ಟುವಂ ನೋಡನುಪಮವಣಿಜಂ ದಾಸೆಯಂ ದೋಷದೂರಂ ॥ ೨ ॥

ವೀರನ ಮಾಳವೇಂದ್ರನ ಕಳಿಂಗನ ಜೋಳನ ಪಾಂಡ್ಯಭೂತಳಾ ।
ಧಾರನ ಮುಟ್ಟಿದೊಂದವಸರಂಗಳನಾಗಳೆ ಪೊಣ್ದಮಾಪ್ಪ ವಿ ॥
ಸ್ತಾರದ ಪುಣ್ಯಸಂಪದದಿನೊಪ್ಪುವ ಸೆಟ್ಟಿಗೆ ಕುಂಜನಂಬಿಗ ।
ನ್ನಾರಿಣೆಯೆಂಬಿನಂ ನೆಗಳ್ದನಗ್ಗದ ಹೊಯ್ಸಳರಾಯರಾಜ್ಯದೋಳ್ ॥ ೪ ॥

ಶಿಲ್ಪಗಳು

ಸಕಲ ಸಂಪತ್ತುಗಳಿಗೆ ತವರುನುನೆಯಾದ ನಮ್ಮೀ ಕರ್ನಾಟಕ ಮಾತೆಯೊಡಲಲ್ಲಿ ವಿದ್ಯಾವಿಶಾರದರಾದ ಶಿಲ್ಪಿಗಳು ಎಲ್ಲೋರ, ಇಟ್ಟಗಿ, ಬೇಲೂರ, ಹಳೆಯಬೀಡು, ಸೋಮನಾಥಪುರಿ, ನಂದಿ, ಶೃಂಗೇರಿ, ಶ್ರವಣಬೆಳಗೊಳ, ಹಂಪೆ ಮೊದಲಾದ ಸ್ಥಳಗಳಲ್ಲಿ ತಮ್ಮ ಅದ್ವಿತೀಯವಾದ ಹಸ್ತಕೌಶಲ್ಯವನು ಹೃದಯಂಗಮವಾಗುವಂತೆ ಪೂರ್ತಿಗೊಳಿಸಿ ಯಶೋಶಾಲಿಗಳಾಗಿದ್ದರು. ಇವರ ಕೆತ್ತಿಗೆಯ ದೇವಾಲಯಗಳೂ, ವಿಗ್ರಹಗಳೂ ವಿದೇಶಿಯರಾದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯಸಾಗರದಲ್ಲಿ ಮುಳುಗಿಸಿಯವೆ. ಈ ಶಿಲ್ಪಗಳಲ್ಲಿ ಹಲವರು ತಾವು ಕೆತ್ತಿದ ವಿಗ್ರಹಗಳ ಬುಡದಲ್ಲಿ ತಮ್ಮ ಹೆಸರುಗಳನ್ನು ಬರೆದುಕೊಂಡಿದ್ದಾರೆ. ಈ ಪದ್ಧತಿಯು ಮೈಸೂರು ದೇಶದಲ್ಲಿ ಮಾತ್ರ ಇದ್ದಂತೆ ತಿಳಿಯು ಬರುತ್ತದೆ. ಶೃಂಗೇರಿಯಲ್ಲಿ ಸುಮಾರು ೧೩೫೭ರಲ್ಲಿ ಕಟ್ಟಿದ ವಿದ್ಯಾಶಂಕರ ದೇವಸ್ಥಾನವೆಂಬ ಒಂದು ಕಟ್ಟಡದ ವೈಚಿತ್ರ್ಯವನ್ನು ಮಾತ್ರ ಸ್ವಲ್ಪಮಟ್ಟಿಗೆ ಇಲ್ಲಿ ಸೂಚಿಸಿರುತ್ತದೆ. ಇದರಂಥ ಸಂವಿಧಾನವು ಭರತಖಂಡದಲ್ಲಿ ಎಲ್ಲಿಯೂ ಇಲ್ಲ. ಈ ಕಟ್ಟಡವು ಸಮತೆಯಕಾಯುಂತೆ ಎರಡೂ ತುದಿಗಳಲ್ಲಿಯೂ ವರ್ತುಲಾಕಾರವಾಗಿದೆ. ಇಂತಹ ಕಟ್ಟಡಕ್ಕೆ ಬಸಲಿಕಾ ಎಂದ ಸಂಜ್ಞೆಯು. ಇದನ್ನು ನೋಡಬೇಕಾದರೆ ರೋಮ ಪಟ್ಟಣಕ್ಕೆ ಹೋಗಬೇಕು. ಭರತವರ್ಷದಲ್ಲಿ ಎಲ್ಲಿಯೂ ದೃಗ್ಗೋಚರವಾಗದ ಇಂತಹ ಸಂವಿಂಧಾನವನ್ನು ಏರ್ಪಡಿಸಿ, ಈ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳ ಚಾತುರ್ಯವು ಸ್ತೋತ್ರಾರ್ಹವಾಗಿದೆ. ಅಲ್ಲದೆ ಈ ದೇವಸ್ಥಾನ ಪ ನವರಂಗದಲ್ಲಿ ಮೇಷಾದಿ ದ್ವಾದಶಗಳ ಚಿನ್ನಗಳಿಂದ ಅಂಕಿತವಾಗಿರುವ ೧೨ ಕಂಭಗಳನ್ನು ಆ ಆ ಚಿನ್ನಕ್ಕನುಣವಾಗಿ ಆ ಆ ಕಂಭದಮೇಲೆ ಆ ಆ ತಿಂಗಳಲ್ಲಿ ಸೂರ್ಯರಶ್ಮಿ ಬೀಳುವಂತೆ ನಿಲ್ಲಿಸಿರುವ ಶಿಲ್ಪಕೌಶಲ್ಯವು ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡಲಿಕ್ಕಿಲ್ಲ. ಎಂಬಿನೇ ಉದಾಹರಣಗಳಿಂದ ಕರ್ನಾಟಕದ ಕೌಶಲ್ಯವು ವ್ಯಕ್ತವಾಗುವದು.

ಜೂನ ತಿಂಗಳ ೩೨ನೆಯ ಪುಟದಲ್ಲಿ ಹಾಕಿದ ಪ್ರಶ್ನಗಳಿಗೆ ಅಭಿಪ್ರಾಯಗಳು.

೧ನೆಯ ಪ್ರಶ್ನಕ್ಕೆ.

ಕನ್ನಡ ಬಾಲಬೋಧಿನಿಯಲ್ಲಿ ಒನೇ ಪಾಠವು ನೀತಿಯುಕ್ತವಾದದ್ದು ನೀತಿವಂತನೇ ದೇವಭಕ್ತನಾಗಿ ಸುಖಿಯಾಗುವನು.

೨ನೆಯ ಪ್ರಶ್ನಕ್ಕೆ.

ಕಲಿಸುವ ವಿಷಯಗಳಲ್ಲಿ "ಭಾಷಾವಿಷಯವು" ಅತ್ಯಂತ ಮಹತ್ವವಾದದ್ದು. ಗಣಿತಾದಿ ವಿಷಯಗಳು ಇದಕ್ಕೂ ಮಹತ್ವಕಂಡರೂ ಭಾಷಾಜ್ಞಾನವಿಲ್ಲದಿರೆ ಗಣಿತದ ಅರ್ಥವೂ ಆಗುವದಿಲ್ಲ. ಇತಿಹಾಸ, ಭೂಗೋಲ ಯಾವದೇ ಇರಲಿ ಮೊದಲು ಭಾಷಾ ಬೇಕು. ಅಂತೇ ಕೇಶಿರಾಜ ಕವಿಯು

ಕಂದಃ—ವ್ಯಾಕರಣದಿಂದೆ ಪದಮಾ ।
ವ್ಯಾಕರಣದ ಪದದಿನರ್ಥ ಮರ್ಥದೆ ತತ್ವಾ ॥
ಲೋಕಂ ತತ್ವಾಲೋಕದಿ ॥
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥೧॥

ಜ್ಯೋ. ಶಿರೂರ, ಅ। ಮಾಸ್ತರ ಶಿರೂರ.

೧ನೆಯ ಪ್ರಶ್ನಕ್ಕೆ

ಬಾಲಬೋಧಿನಿಯ ಮೂಲಾಕ್ಷರಗಳ ಪದ್ಯವು ನಮಗೆ ಒಳ್ಳೇ ಚನ್ನಾಗಿ ತೋರುವದು. ಹುಡುಗರು ಹಾಡುತ್ತಲೆ ಮೂಲಾಕ್ಷರಗಳನ್ನು ಕಲಿಯುವದು ಗದ್ಯದಕಿಂತ ಪದ್ಯವೇ ಪ್ರಾಚೀನದ್ದು. ಹುಡುಗರಿಗೆ ಹಾಡು ಬಹಳ ರುಚಿಸುವದು ಅವಂಗೆ ವಚನವನ್ನು ಪಡಿಸುವದು ಕಷ್ಟಕರವು. ವಿಷಯಗಳನ್ನು ಆದಷ್ಟು ಹಾಡಿನ ರೂಪದಲ್ಲಿ ಕಲಿಸುವದು ಲೇಸು. ಹಾಡುಗಳನ್ನು ಹುಡುಗರು ಅಯಾಸ ವಿನೋದದಿಂದಲೂ ಲವಲವಿಕೆಯಿಂದಲೂ ಕಲಿಯುವರು. ಮರಾಠೀ, ಬಂಗಾಲೀ ಇಂಗ್ಲಿಷ ಭಾಷೆಗಳಲ್ಲಿ ಅತಿ ಸುಲಭವಾದ, ಮತ್ತು ಮನೋರಂಜಕ ಕವಿತೆಗಳು ಚಿಕ್ಕ ಚಿಕ್ಕ ಬಾಲಕರಿಗಾಗಿ ಪ್ರಕಟವಾಗುತ್ತಿರುವವು ಕರ್ನಾಟಕ ವಾಙ್ಮಯ ಸೇವಕರು ಕನ್ನಡ ಚಿಕ್ಕ ಬಾಲಕರಿಗೋಸುಗ ಸವಿಯಾದ ಮತ್ತು ಬೋಧಪರವಾದ ಸುಲಭ ಕವಿತೆಗಳನ್ನು ರಚಿಸುವರೆಂದು ಹಾರೈಸುತ್ತೇವೆ.

೨ನೆಯ ಪ್ರಶ್ನೆಕ್ಕೆ.

ಶಾಲೆಗಳಲ್ಲಿ ಕಲಿಸಲ್ಪಡುವ ಭಾಷೆ, ಗಣಿತ, ಇತಿಹಾಸ, ಭೂಗೋಲ ವರ್ಣನೆ, ಆರೋಗ್ಯ ವಿಜ್ಞಾನ, ಚಿತ್ರಕಲೆ ಮುಂತಾದ ಯಾವಶ್ತು ವಿಷಯಗಳಲ್ಲಿ ಇತಿಹಾಸವೇ ನಮಗೆ ಅತ್ಯಂತ ಮಹತ್ವದ್ದೆಂದು ತೋರುತ್ತದೆ.

(೧) ವಿದ್ಯಾರ್ಥಿಗಳು ಇತಿಹಾಸವನ್ನು ಓದಲಿಕ್ಕೂ ಕೇಳಲಿಕ್ಕೂ ಯಾವಾಗಲೂ ಉತ್ಸಾಹಪಡುವರು. ರಾಮ-ರಾವಣರಯುದ್ಧ, ಅಲೇಕ್ಸಾಂಡರನ ದಿಗ್ವಿಜಯ ಯಾತ್ರೆ. ಮಹಾರಾಷ್ಟ್ರರ ಉದಯ, ಜಗಪ್ರಸಿದ್ಧರಾದ ವೀರ ಪುರುಷರ ಚರಿತ್ರ ಮೊದಲಾದ ವಿಷಯಗಳನ್ನು ಹುಡುಗರು ಬೇಸರಿಲ್ಲದೆ ಓದುವರು.

(೨) ವಿದ್ಯಾರ್ಥಿಗಳನ್ನು ಇತಿಹಾಸವು ಅತ್ಯದ್ಭುತವಾದ ಸಂಗತಿಗಳಿಂದ ನಂದಗೊಳಿಸುವದು. ಶ್ರೀರಾಮನು ಸಮುದ್ರ ಸೇತುವೆಯನ್ನು ಕಟ್ಟಿ ಲಂಕೆಗೆ ಹೋದದ್ದು, ಫಿನೀಸಿಯನ್ನರ ದಳವಾಯಿಯಾದ ಹ್ಯಾನಿಬಾಲನು ಸೇನೆ ಸಹಿತ ಆಲ್ಪ್ಸ ಪರ್ವತವನ್ನು ದಾಟಿ ರೋಮನ್ನರ ರಾಜ್ಯವನ್ನು ಅಭಿಯೋಗಿಸಿದ್ದು ಇತ್ಯಾದಿ ಐತಿಹಾಸಿಕ ಸಂಗತಿಗಳು ಮಹಾಶ್ಚರ್ಯವನ್ನುಂಟು ಮಾಡುವವು.

(೩) ವಿದ್ಯಾರ್ಥಿಗಳಿಂದ, ಪೂರ್ವದ ಪ್ರಸಿದ್ಧಪುರುಷರ ಚರಿತ್ರಗಳನ್ನು ವರ್ಣಿಸಿ ಅವರ ಅನುಕರಣಮಾಡಿಸುವದು. ರಾಮಾಯಣ ಮಹಾಭಾರತದ ಕಥೆಗಳನ್ನು ಕೇಳಿ ಶಿವಾಜಿಯು ಆರ್ಯಧರ್ಮೋದ್ಧಾರಕ್ಕಾಗಿ ಸಾಮ್ರಾಜ್ಯವನ್ನು ಸ್ಥಾಪಿಸಿದನು ನೆಪೋಲಿಯನ್ ಬೋನಾಪಾರ್ಟನು ಜೂಲಿಯಸ್ ಸೀಝರ, ಹ್ಯಾನಿಬಾಲ ಚಾರ್ಲಸ ದಿ ಗ್ರೇಟ ಇವರಂತೆ ಅನೇಕ ಸಾಹಸ ಕೃತ್ಯಗಳನ್ನು ಎಸಗಿದನು.

(೪) ವಿದ್ಯಾರ್ಥಿಗಳಿಗೆ ಆಯಾಯ ದೇಶದ ಆಯಾಯ ಕಾಲದ ಸ್ಥಿತಿಗಳನ್ನು ತೋರಿಸಿ ರಾಷ್ಟ್ರೋದ್ಧಾರ, ಅತ್ಯುದ್ಧಾರಗಳ ವ್ಯವಹಾರ್ಯ ಮಾರ್ಗವನ್ನು ತೋರಿಸುವದು. ಪಾಂಡವರ ಧರ್ಮಯುದ್ಧ, ಲೂಥರನ ಧರ್ಮಸುಧಾರಣೆ, ಅಮೇರಿಕದವರ ಸ್ವಾತಂತ್ರ್ಯಯುದ್ಧ, ತುರ್ಕರ ರಾಷ್ಟ್ರೀಯ ಜಾಗ್ರತೆ ಇತ್ಯಾದಿ ಸಂಗತಿಗಳು ಜಾಗ್ರತೆಯನ್ನುಂಟುಮಾಡುವವು.

(೫) ವಿದ್ಯಾರ್ಥಿಗಳಿಂದ ಚಿತ್ತವನ್ನು ಸೆಳೆದು, ಧಾರ್ಮಿಕ, ಸಾಮಾಜಿಕ, ರಾಜಕೀಯ ಔದ್ಯೋಗಿಕ ಮುಂತಾದ ವಿಷಯಗಳ ಉನ್ನತಿಯ ಉಪಾಯಗಳಲ್ಲಿ ತೊಡಗಿಸುವದು. ವಿಜಯನಗರದ ರಾಯರ ಇತಿಹಾಸ, ಅಕಬರನ ಮುತ್ಸದ್ದಿತನ, ಪಾಶ್ಚಿಮಾತ್ಯದೇಶಗಳ ವ್ಯಾಪಾರ ವ್ಯವಸಾಯ, ಜಲಪರ್ಯಟನ, ದೇಶಶೋಧ, ವಸಹಾತು ಮುಂತಾದ ಬಗ್ಗೆ ಸಾಹಸಕೃತ್ಯಗಳು ಮನದಟ್ಟಾಗುವವು.

(೬) ವಿದ್ಯಾರ್ಥಿಗಳ ವಿಷಯ ಸಂಗ್ರಹವನ್ನು ಬೆಳಿಸಿ ವ್ಯವಹಾರ ಜಾತುರ್ಯವನ್ನು ಅವರಲ್ಲಿ ನೆಲೆಗೊಳಿಸುವದು. ಇತಿಹಾಸದಿಂದ ಉಪಯುಕ್ತ ವಿಷಯ ಸಂಗ್ರಹ ಮತ್ತು ವ್ಯವಹಾರಜ್ಞಾನವಾದಷ್ಟು ಬೇರೆ ಯಾವ ವಿಷಯದಿಂದಲೂ ಆಗುವದಿಲ್ಲ. ಇತಿಹಾಸವನ್ನು ಚನ್ನಾಗಿ ಓದದ ಮನುಷ್ಯನು ಎಷ್ಟು ಪಂಡಿತನಿದ್ದರೂ ವಾಸ್ತವಿಕೆಯಾಗಿ ವ್ಯವಹಾರಶೂನ್ಯನಾಗುವನು.

(೭) ವಿದ್ಯಾರ್ಥಿಗಳಲ್ಲಿ ಸ್ವಾನುಭವವನ್ನೂ, ಸಾರಾಸಾರ ವಿಚಾರಶಕ್ತಿಯನ್ನೂ ಚಿಕಿತ್ಸಿಕ ಬುದ್ಧಿಯನ್ನೂ, ಚರ್ಚಾತ್ಮಕ ವಿಚಾರವನ್ನೂ ಉಂಟು ಮಾಡುವದು.

ಆರ್ಯಸಾರ್ವಭೌಮ ಅಶೋಕನು ಹೆಚ್ಚಿನವನೋ? ರೋಮ ಸಾರ್ವಭೌಮ ಮಾರ್ಕಸ್ ಅರೇಲಿಯನನು ಹೆಚ್ಚಿನವನೊ?; ಅಕಬರನು ಹೆಚ್ಚಿನ ಮುತ್ಸದ್ದಿಯೋ ? ಔರಂಗಜೇಬನೋ ?; ಬುದ್ಧನು ಹೆಚ್ಚಿನವನೋ ? ಕ್ರೈಸ್ತನು ಹೆಚ್ಚಿನವನೋ?; ಶಿವಾಜಿ ಹೆಚ್ಚಿನವನೊ ? ರಣಜಿತಸಿಂಗನು ಹೆಚ್ಚಿನವನೊ ? ಇತ್ಯಾದಿ ಚರ್ಚೆಯಿಂದ ನಿರ್ಣಯಶಕ್ತಿಯೂ, ಅನುಭವವೂ ಬಲಪಡುವವು.

ವಿದ್ಯಾರ್ಥಿಗಳೇ ಇತಿಹಾಸವನ್ನೇ ನೀವು ಹೆಚ್ಚು ಪ್ರೀತಿಸುವದಿಲ್ಲವೋ ?

ಒಪ್ಪಿಸ ಬೇಲೆ ಇತಿಹಾಸದ ಅಧ್ಯಯನದಿಂದ ಆಗುವ ಅನುಭವವೂ, ಸಂಸ್ಕೃತಿಯೂ ಬೇರೆ ಯಾವ ವಿಷಯದಿಂದಲೂ ಆಗುವದಿಲ್ಲ. ಇತಿಹಾಸವು ಅನೇಕ ದೃಷ್ಟಾಂತಗಳಿಂದ ಭಾವೀ ಜೀವನಕ್ರಮವನ್ನು ತಿದ್ದಿಕೊಳ್ಳುವ ಜ್ಞಾನೋಪಾಯಗಳನ್ನು ತೋರಿಸುವದು. ರಾಷ್ಟ್ರದ ವೃತ್ತಾಂತ ಪರಂಪರೆಯನ್ನು ವರ್ಣಿಸಿ ರಾಷ್ಟ್ರೀಯ ವೈಶಿಷ್ಟ್ಯವನ್ನೂ, ಸಂಸ್ಕೃತಿಯನ್ನೂ ಜತನ ಮಾಡುವದು. ರಾಮಾಯಣ ಮಹಾಭಾರತಗಳೇ ಆರ್ಯರ ಸರ್ವ ಸಂಸ್ಕೃತಿಯ ಮೂಲಾಧಾರಗಳು. ಇವುಗಳು ಉದಯ ಹೊಂದದೇ ಇದ್ದಲ್ಲಿ ಪರಮತೀಯರ ಅಭಿಯೋಗದಿಂದ ಹಿಂದೂ ಧರ್ಮವು ನಾಮಶೇಷವಾಗುತ್ತಿತ್ತು. ಇಂಗ್ಲಂಡದ ಇತಿಹಾಸದಿಂದ, ರಾಷ್ಟ್ರೀಯ ಭಾವನೆ, ಸ್ವಾತಂತ್ರ್ಯ ಪ್ರೇಮ, ರಾಜಕಾರಣ ನಿಪುಣತೆ, ಮೊದಲಾದ ಉಜ್ವಲ ಗುಣಗಳ ಪ್ರಭಾವವು ತಿಳಿದು ಬರುವದು.

ಈ ಕಾರಣಗಳಿಂದ ಇತಿಹಾಸವು ಅತ್ಯಂತ ಮಹತ್ವದ ವಿಷಯವಿದ್ದು ಒತ್ತಾಯದ ವಿಷಯವಾಗಿ ಎಲ್ಲ ವಿಷಯಗಳಲ್ಲಿ ಅಗ್ರಸ್ಥಾನವನ್ನು ಹೊಂದಲು ಅರ್ಹವಾಗಿದೆ. ಭಾವೀ ಶಿಕ್ಷಣಕ್ರಮದಲ್ಲಿ ಭೂಮಂಡಲದಲ್ಲೆಲ್ಲ ಇದೇ ಪ್ರಾಮುಖ್ಯ ವಿಷಯವಾಗುವದೆಂದು ನಮಗೆ ತೋರುತ್ತದೆ

ಈ ಬಗ್ಗೆ ಭಿನ್ನಾಭಿಪ್ರಾಯಗಳನ್ನು ನಿರೀಕ್ಷಿಸುವೆವು.

ಸಂಪಾದಕ.

ಶಿಕ್ಷಣ ಪ್ರಪಂಚ

ಸ್ಕಾಟಲಂಡದಲ್ಲಿ ಗೃಹಶಿಕ್ಷಣಕ್ಕೆ ಮಹತ್ವ.

೧ ಸ್ಕಾಟಲಂಡದಲ್ಲಿ ಗೃಹಶಿಕ್ಷಣಕ್ಕೆ ಬಹಳ ಮಹತ್ವ ಕೊಡುತ್ತಿದಾರೆ. ಾಲಕರು ತಮ್ಮ ಬಾಲಕರ ಶಿಕ್ಷಣದ ಭಾರವನ್ನು ಪೂರ್ಣ ಶಿಕ್ಷಕರ ಮೇಲೆ ಇರಿಸ ತಾವೇ ಬಹು ಭಾಗವನ್ನು ಹೊಂದುವರು. ಸರಾಸರಿ ಶಿಕ್ಷಣವನ್ನು ಹುಡು ರು ಶಾಲೆಯಲ್ಲಿ ಹೊಂದಬಹುದು. ಆದರೆ ಕಲಾಶಿಕ್ಷಣವನ್ನೂ ನೀತಿನಡಾವಳಿ ಳನ್ನೂ ಪಾಲಕರು ಆಸ್ಥೆಯಿಂದ ತಮ್ಮ ಬಾಲಕರಿಗೆ ಕಲಿಸುವ ಯೋಜನೆ ಾಡುವರು. ಅವರವರ ಬುದ್ಧಿ,ಶಕ್ತಿ, ಒಲವ್ರ, ಮುಂತಾದ್ದನ್ನು ಕಂಡು, ಆಗಾ ಶಿಕ್ಷಕರ ಸಲಹೆಯನ್ನು ತಕೆಸ್ಕಂಡು ಯಾವ ಬಗೆಯ ಉಚ್ಚ ಶಿಕ್ಷಣವು ತಮ್ಮ ಾಲಕರಿಗೆ ದೊರೆಯಬೇಕೆಂಬುದನ್ನು ನಿರ್ಧರಿಸುವರು. ತಮ್ಮ ಬಾಲಕನು ಯಾಂತ್ರಿಕ ವಿದ್ಯೆಯಲ್ಲಿ ಕುಶಲನಾಗುವನೆಂದು ಕಂಡುಬಂದರೆ ಚಿಕ್ಕಂದಿನಿಂದಲೇ ಪ್ರವೃತ್ತಿಗೆ ಉತ್ತೇಜನವನ್ನು ಕೊಡುತ್ತಾರೆ. ಶ್ರೀಮಂತರಿದ್ದವರು ಬಗೆ ಗೆಯ ಆಟದ ಯಾಂತ್ರಿಕ ಸಾಮಾನುಗಳನ್ನು ತರಿಸಿ ಆಡಲಿಕ್ಕೆ ಕೊಡುವರು. ಮ್ಯುಲ್ಲತೆಯ ಬ್ಯಾಟರಿಗಳು, ಅವುಗಳಿಂದ ನಡಿಯುವ ಉಗೆಬಂಡಿ, ಮೋಟರ, ಮಾನ, ಟಿಲಿಫೋನ, ಟಿಲಿಗ್ರಾಫ, ಹಡಗ ಮುಂತಾದ ಸಾಮಾನುಗಳನ್ನು ಆಡ ಲಿಕ್ಕೆ ತಂದುಕೊಡುವರು. ಮನಿಗಳನ್ನು ಕಟ್ಟುವ, ಇಂಜನ ಮೊದಲಾದ ಯಂ ತ್ರಗಳನ್ನು ಜೋಡಿಸುವ, ಚಿಕ್ಕ ಚಿಕ್ಕ ಪೆಟ್ಟಿಗೆಗಳನ್ನು ಕೊಡಿಸುವರು. ಇದರಂತೆ ಹುಡುಗರಲ್ಲಿ ಚಿತ್ರಕಲೆಯಲ್ಲಿ ಅಭಿರುಚಿಯು ಕಂಡುಬಂದರೆ ತರತರದ ನೂರಾರು ಚಿತ್ರಗಳನ್ನೂ, ಬಣ್ಣಗಳನ್ನೂ,ಒದಗಿಸಿ ಕೊಡುವರು. ಬಣ್ಣಗಳನ್ನು ಕೂಡಿಸುವ, ಪಶುಪಕ್ಷಿಗಳ ಆಕೃತಿಗಳನ್ನು ಮಾಡುವ, ಬಣ್ಣದ ಕಟ್ಟಿಗೆಯ ತುಂಡುಗಳ ಪೆಟ್ಟಿ ಗೆಗಳನ್ನು ಒದಗಿಸಿ ಕೊಡುವರು. ಹಿಗೆ ಗೃಹಶಿಕ್ಷಣವೇ ಮಹತ್ವದ್ದೆಂಬದನ್ನು ಚನ್ನಾ ಗಿ ಮನಗಂಡು ಪಾಲಕರು ತಮ್ಮ ತಮ್ಮ ಬಾಲಕರ ಶಿಕ್ಷಣದ ಕಡೆಗೆ ತುಂಬಾ ಲಕ್ಷವನ್ನು ಪೂರೈಸುವರು. ನಮ್ಮ ದೇಶದ ಶ್ರೀಮಂತರಾದರೂ ತಮ್ಮ ಹುಡು ಗರು ಮನೆಯಲ್ಲಿ ಸ್ವೇಚ್ಛೆಯಿಂದ ವರ್ತಿಸಿದಂತೆ ಅವರವರ ಪ್ರವೃತ್ತಿಗಳಿಗನುಗು ಣವಾಗಿ ಗೃಹಶಿಕ್ಷಣದ ತಕ್ಕ ಯೋಜನೆಯನ್ನು ಮಾಡುವರೆಂದು ಆಶಿಸುವೆವು. ಸ್ಕಾಟಲಂಡ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ದೇಶದ ಯುವಕರ ಬುದ್ಧಿಯ ನ್ನು ವೃಥಾ ವ್ಯಯಮಾಡಗೊಡುವದಿಲ್ಲ. ನಮ್ಮದೇಶದಲ್ಲಿ ಪ್ರಸಿದ್ಧ ಯಾಂತ್ರಿ ಕರು, ಕವಿಗಳು, ಶಾಸ್ತ್ರಜ್ಞರು, ಗಣಿತಜ್ಞರಾಗಲು ದೇವದತ್ತ ಉತ್ಕೃಷ್ಟ ಗುಣ ಗಳುಳ್ಳ ಯುವಕರು ಬೇಕಾದಷ್ಟು ಇರುವರು. ಆದರೆ ಅವರ ಆಯಾ ಗುಣಗಳು

ವಿಕಾಸಹೊಂದಲು ಯೋಗ್ಯ ಗೃಹ ಶಿಕ್ಷಣ ಮತ್ತು ಶಾಲಾಶಿಕ್ಷಣವಿಲ್ಲದ್ದರಿಂ ಅವರು ಬೆಳಕಿಗೆ ಬರದೆ, ದೇಶಕ್ಕೆ ಅಪಾರವಾದ ಹಾನಿಯುಂಟಾಗುತ್ತಿರುವದು.

* * *

ವಿದ್ಯುತ್‌ತರಂಗಗಳ ಮೂಲಕ ಶಿಕ್ಷಣ

೨, ಗ್ರಾಮಾಫೋನ, ಸಿನೇಮಾ, ಮ್ಯಾಜಿಕ ಲ್ಯಾಂಟರ್ನ ಟೆಲಿಫೋನ ವಿಶೇಷತಃ ತಂತಿಯಲ್ಲದೆ. ವಿದ್ಯುತ್ ತರಂಗಗಳಿಂದ ಧ್ವನಿಯು ಸಾವಿರಾರು ಮೈಲ ದೂರ ಕೇಳಬರುವಯಂತ್ರಗಳು (Broad Casting) ಇವೇ ಮೊದಲಾದವುಗಳ ಸಹಾಯದಿಂದ ಶಿಕ್ಷಣವನ್ನು ಕೊಡುವ ಕಾರ್ಯವು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರದಲ್ಲಿ ಬರಹತ್ತಿದೆ. ಇಂಗ್ಲಂಡದಲ್ಲಿ ಫ್ರೆಂಚ ಭಾಷೆಯನ್ನು ಕಲಿಸಬೇಕಾದರೆ, ಕೇವಲ ಶುದ್ಧ ಫ್ರೆಂಚ ಜನರ ಉಚ್ಚಾರವು ಗೊತ್ತಾಗುವಂತೆ ಗ್ರಾಮಾಫೋನ ರಿಕಾರ್ಡುಗಳಿಂದಲೂ, ವಾಯರಲೆಸ್ ಯಂತ್ರಗಳಿಂದಲೂ ಈ ಕಾರ್ಯವನ್ನು ಸುಲಭವಾಗಿಯೂ, ಸರಿಯಾಗಿಯೂ ಅಲ್ಪ ವೆಚ್ಚದಲ್ಲಿ ನಡೆಯಿಸುವರು. ಇನ್ನು ಮುಂದೆ ಜಗತ್ತಿನ ಯಾವದೊಂದು ಭಾಗದಲ್ಲಿದ್ದ ಯಾವದೊಂದು ವಿಷಯದಲ್ಲಿ ನಿಷ್ಣಾತನಾದ ವಿದ್ವಾಂಸನು ತಾನು ಕೂತಲ್ಲಿಯೇ ಇಡೀ ಭೂಮಂಡಲದಲ್ಲಿ ಆ ವಿಷಯವನ್ನು ಅಧ್ಯಯನವನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯುತ್ ತರಂಗಗಳ ಮೂಲಕ ಉಪನ್ಯಾಸವನ್ನು ಕೊಡುವನು. ಜಗತ್ತಿನ ಪ್ರಸಿದ್ಧ ವಿದ್ವಾಂಸರ ಲಾಭವು ಸರ್ವರಿಗೂ ಪ್ರತ್ಯಕ್ಷ ದೊರೆಯುವದು.

* * *

ಅಮೇರಿಕದ ನಿಗ್ರೋ ಜನರ ಶಿಕ್ಷಣ.

ಆಫ್ರಿಕದಿಂದ ಅಮೇರಿಕಕ್ಕೆ ನಿಗ್ರೋ ಜನರನ್ನು ಹಿಡಿದೊಯ್ದು ಗುಲಾಮರನ್ನಾಗಿ ಮಡುವದು ಸುಮಾರು ೩೦೦ ವರ್ಷಗಳ ವರೆಗೆ ಪಾಶ್ಚಿಮಾತ್ಯ ರಾಷ್ಟ್ರಗಳ ದೊಡ್ಡ ಲಾಭದಾಯಕ ವ್ಯವಹಾರವಾಗಿತ್ತು. ಗಲಟೆಳರಲ್ಲಿ ಅಮೇರಿಕದಲ್ಲಿ ನಿಗ್ರೋ ಜನರು ಗುಲಾಮಗಿರಿಯಿಂದ ಸಾಮಾನ್ಯವಾಗಿ ಮುಕ್ತರಾದರು. ಅಂದಿನಿಂದ ನಿಗ್ರೋ ಜನರು ಒತ್ತರದಿಂದ ಶಿಕ್ಷಣ, ವ್ಯವಹಾರ, ಉದ್ಯೋಗಗಳಲ್ಲಿ ಮುಂದೆ ಬರಹತ್ತಿರುವರು. ಇವರಲ್ಲಿ ಗಲಟೆಳರಲ್ಲಿ ೧೦೦ಕ್ಕೆ ೨ರಂತೆ ತಕ್ಕಮಟ್ಟಿಗೆ ಓದುಬರಹ ಬಲ್ಲವರು ಸಿಗುತ್ತಿದ್ದರು. ಇಂದಿಗೆ ಅವರಲ್ಲಿ ೧೦೦ಕ್ಕೆ ೭೫ರಂತೆ ಶಿಕ್ಷಣವನ್ನು ಹೊಂದಿದವರು ದೊರೆಯುವರು. ಇದು ಸೋಜಿಗವೇ ಸರಿ.

ನಿಗ್ರೋ ಯುವಕರು ಉಚ್ಚ ತರಹದ ಶಿಕ್ಷಣ ಹೊಂದಲು ಲವಲವಿಕೆಯುಳ್ಳವರಿದ್ದಾರೆ. ನಿಗ್ರೋ ಜನರು ತೀರ ಅಲ್ಪ ಸಂಖ್ಯಾಕರಿದ್ದು, ಇನ್ನೂ ಅನೇಕ ಬಗೆಯ ಬಂಧನೆಗಳಿಗೆ ಗುರಿಯಾಗಿದ್ದರೂ ಆತ್ಮೋದ್ಧಾರದ ಕಾರ್ಯವನ್ನು ಬಹು ಜಾಗ್ರತೆಯಿಂದ ನಡೆಯಿಸಿರುವರು. ಅವರು ಸ್ವಂತ ಶಾಲೆಗಳನ್ನೂ, ಕಾಲೇಜುಗಳನ್ನೂ, ವಿಶ್ವವಿದ್ಯಾಲಯಗಳನ್ನೂ ಸ್ಥಾಪಿಸಿಕೊಂಡಿದ್ದಾರೆ. ರಾಖಫೆಲರ ಧನನಿಧಿಯವರು ನಿಗ್ರೋ ಜನರ ಶಿಕ್ಷಣಕ್ಕಾಗಿ ಸುಮಾರು ೩೦,೦೦,೦೦೦ ರೂ. ಗಳ

ಣಿಗೆ ಕೊಟ್ಟಿದ್ದಾರೆ. ಕೇವಲ ಉತ್ತರ ಕಾರೋಲಿನಾದಲ್ಲಿ ನಿಗ್ರೋ ಜನರ ಶಿಕ್ಷಣಕ್ಕಾಗಿ ಎತ್ತಿದ ಕರವೇ ಪ್ರತಿ ವರ್ಷ ೧। ಕೋಟಿ ರೂ. ಆಗುವದು. ಯುನೈಟೆಡ್ ಸ್ಟೇಟ್ಸಿದಲ್ಲಿ ಈಗ ನಿಗ್ರೋ ಜನರ ದೆಸೆಯಿಂದ ೫೦೦ಕ್ಕಿಂತ ಹೆಚ್ಚು ಹಾಯ್ಸ್ಕೂಲ, ಕಾಲೇಜುಗಳಿರುವವು. ೧,೦೦,೦೦೦ ವಿದ್ಯಾರ್ಥಿಗಳು ಇವುಗಳಲ್ಲಿ ಅಭ್ಯಾಸ ಮಾಡುತ್ತಿರುವರು. ಸಾರ್ವಜನಿಕ ಶಾಲೆಗಳಲ್ಲಿ ೩೦,೦೦,೦೦೦ ವಿದ್ಯಾರ್ಥಿಗಳು ಕಲಿಯುತ್ತಿರುವರು. ೪೦,೦೦೦ ಮೇಲ್ಪಟ್ಟು ನಿಗ್ರೋ ಶಿಕ್ಷಕರಿರುವರು. ಇವರಲ್ಲಿ ಅದ್ವಿತೀಯ ವಕೀಲರೂ, ಡಾಕ್ಟರರೂ, ಶಾಸ್ತ್ರಜ್ಞರೂ, ಇಂಜಿನಿಯರರೂ, ಕವಿಗಳೂ ಇರುವರಲ್ಲದೆ, ದೊಡ್ಡ ಜಮೀನುದಾರರೂ, ವರ್ತಕರೂ, ಕಾರಖಾನೆದಾರರೂ ಇರುವರು. ತಮ್ಮ ಎಲ್ಲ ಬಗೆಯ ಉನ್ನತಿಗಾಗಿ ಅಧುನಿಕ ಯಾವತ್ತೂ ಬಗೆಯ ಚಳವಳಿಗಳಲ್ಲಿ ಮುಂದಿರುವರು. ಅನೇಕ ವರ್ತಮಾನ ಪತ್ರಗಳನ್ನೂ ಮಾಸಿಕ ಪತ್ರಿಕೆಗಳನ್ನೂ ಉತ್ತಮ ರೀತಿಯಲ್ಲಿ ನಡೆಯಿಸುತ್ತಿರುವರು. ಕಾಡು ಜನರೂ, ಕುರೂಪಿಗಳೂ, ಅನೇಕ ಶತಮಾನ ದಾಸ್ಯತ್ವದಲ್ಲಿದ್ದವರೂ ಆದ ನಿಗ್ರೋ ಜನರು ಇಷ್ಟು ಮುಂದೊರೆದದ್ದನ್ನು ನೋಡಿದರೆ ಜಗತ್ಪ್ರಸಿದ್ಧ ಪ್ರಾಚೀನ ಸಂಸ್ಕೃತಿಯುಳ್ಳ ನಮ್ಮ ಹಿಂದೂ ಸಮಾಜದ ಈಗಿನ ಅವನತ ಸ್ಥಿತಿಯು ಎಷ್ಟು ಶೋಚನೀಯವೆಂಬುದು ವ್ಯಕ್ತವಾಗುವದು.

* * *

ಶಿಕ್ಷಣ ಉಪಮಂಡಲ

ಮುಂಬಯಿ ಕಾಯದೇ ಕೌನ್ಸಿಲಿನಿಂದ ಇಲಾಖೆಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಅನೆಯ ತರಗತಿಯ ಶಿಕ್ಷಣದಲ್ಲಿ ತಿದ್ದುಪಡೆಯಾಗುವ ಕುರಿತು ಆ ಬಗ್ಗೆ ಒಂದು ಉಪಮಂಡಲವು ನಿಯಮಿಸಲ್ಪಟ್ಟಿದ್ದು ಈ ಮಂಡಲದವರು ಕಳೆದ ಜೂನ ತಿಂಗಳಲ್ಲಿಯೇ ತಮ್ಮ ವರದಿಯನ್ನು ಕಳುಹಿಸಬೇಕಾಗಿತ್ತು. ಆದರೆ ಈ ಮಂಡಲದವರು ಇದೀಗ ತಮ್ಮ ಪ್ರಶ್ನಮಾಲಿಕೆಯನ್ನು ತೆಗೆದಿದ್ದಾರೆ. ತಾ॥ ೨೩—೯—೨೪ರ ಒಳಗಾಗಿ ಪ್ರಶ್ನಗಳಿಗೆ ಉತ್ತರಗಳು ಬರಬೇಕಾಗಿ ಸೂಚಿಸಿದ್ದಾರೆ.

* * *

ಹುಬ್ಬಳ್ಳಿ ಮ್ಯುನಿಸಿಪಲ್ ಸ್ಕೂಲ ಬೋರ್ಡಿನ ಶಾಲೆಗಳಲ್ಲಿ ಸೂರ್ಯ ನಮಸ್ಕಾರ.

ಸ್ಕೂಲ ಬೋರ್ಡಿನ ಉತ್ಸಾಹಿ ಸದಸ್ಯರಾದ ಮಿ॥ ಚ. ಸಿ. ಕೆಂಪಣ್ಣನವರ ಇವರ ಸೂಚನೆಯ ಪ್ರಕಾರ ಹುಬ್ಬಳ್ಳಿ ಮ್ಯುನಿಸಿಪಲ್ ಯಾವತ್ತು ಗಂಡು ಮತ್ತು ಹೆಣ್ಣು ಹುಡುಗರ ಶಾಲೆಗಳಲ್ಲಿ ಪ್ರತಿನಿತ್ಯ ಪ್ರಾತಃಕಾಲದ ಪ್ರಾರ್ಥನೆಯಾದ ಮೇಲೆ ಎಲ್ಲ ಹುಡುಗರು ೫—೧೦ ನಿನಿಟುಗಳ ವರೆಗೆ ಶಕ್ತ್ಯಾನುಸಾರ ಸೂರ್ಯ ನಮಸ್ಕಾರಗಳನ್ನು ಹಾಕಬೇಕೆಂದು ಸ್ಕೂಲ್ ಬೋರ್ಡ ಚೇಅರಮನ್‌ರಾದ ಮಿ॥ ಆನೆಗುಂದಿಯವರು ಸರಕ್ಯೂಲರ ನಂ. ೬೩ ತೆಗೆದಿರುವರು.

ವಿಕಾಸಹೊಂದಲು ಯೋಗ್ಯ ಗೃಹ ಶಿಕ್ಷಣ ಮತ್ತು ಶಾಲಾಶಿಕ್ಷಣವಿಲ್ಲದ್ದರಿಂ
ಅವರು ಬೆಳಕಿಗೆ ಬರದೆ, ದೇಶಕ್ಕೆ ಅಪಾರವಾದ ಹಾನಿಯುಂಟಾಗುತ್ತಿರುವದು.

* * *

ವಿದ್ಯುತ್ ತರಂಗಗಳ ಮೂಲಕ ಶಿಕ್ಷಣ

೨, ಗ್ರಾಮಾಫೋನ, ಸಿನೇಮಾ, ಮ್ಯಾಜಿಕ ಲ್ಯಾಂಟರ್ನ ಟೆಲಿಫೋನ ವಿಶೇ
ಷತಃ ತಂತಿಯಲ್ಲದೆ. ವಿದ್ಯುತ್ ತರಂಗಗಳಿಂದ ಧ್ವನಿಯು ಸಾವಿರಾರು ಮೈಲು
ದೂರ ಕೇಳಬರುವಯಂತ್ರಗಳು (Broad Casting) ಇವೇ ಮೊದಲಾದವುಗಳ
ಸಹಾಯದಿಂದ ಶಿಕ್ಷಣವನ್ನು ಕೊಡುವ ಕಾರ್ಯವು ಪಾಶ್ಚಿಮಾತ್ಯ ದೇಶಗಳಲ್ಲಿ
ಪ್ರಚಾರದಲ್ಲಿ ಬರಹತ್ತಿದೆ. ಇಂಗ್ಲಂಡದಲ್ಲಿ ಫ್ರೆಂಚ ಭಾಷೆಯನ್ನು ಕಲಿಸಬೇಕಾ
ದರೆ, ಕೇವಲ ಶುದ್ಧ ಫ್ರೆಂಚ ಜನರ ಉಚ್ಚಾರವು ಗೊತ್ತಾಗುವಂತೆ ಗ್ರಾಮಾ
ಫೋನ ರಿಕಾರ್ಡುಗಳಿಂದಲೂ, ವಾಯರಲೆಸ್ ಯಂತ್ರಗಳಿಂದಲೂ ಈ ಕಾರ್ಯ
ವನ್ನು ಸುಲಭವಾಗಿಯೂ, ಸರಿಯಾಗಿಯೂ ಅಲ್ಪ ವೆಚ್ಚದಲ್ಲಿ ನಡೆಯಿಸುವರು
ಇನ್ನು ಮುಂದೆ ಜಗತ್ತಿನ ಯಾವದೊಂದು ಭಾಗದಲ್ಲಿದ್ದ ಯಾವದೊಂದು ವಿಷಯ
ದಲ್ಲಿ ನಿಷ್ಣಾತನಾದ ವಿದ್ವಾಂಸನು ತಾನು ಕೂತಲ್ಲಿಯೇ ಇಡೀ ಭೂಮಂಡಲದಲ್ಲಿ
ಆ ವಿಷಯವನ್ನು ಅಧ್ಯಯನವನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯುತ್
ತರಂಗಗಳ ಮೂಲಕ ಉಪನ್ಯಾಸವನ್ನು ಕೊಡುವನು. ಜಗತ್ತಿನ ಪ್ರಸಿದ್ಧ
ವಿದ್ವಾಂಸರ ಲಾಭವು ಸರ್ವರಿಗೂ ಪ್ರತ್ಯಕ್ಷ ದೊರೆಯುವದು.

* * *

ಅಮೇರಿಕದ ನಿಗ್ರೋ ಜನರ ಶಿಕ್ಷಣ.

ಆಫ್ರಿಕದಿಂದ ಅಮೇರಿಕಕ್ಕೆ ನಿಗ್ರೋ ಜನರನ್ನು ಹಿಡಿದೊಯ್ದು
ಗುಲಾಮರನ್ನಾಗಿ ಮಡುವದು ಸುಮಾರು ೩೦೦ ವರ್ಷಗಳ ವರೆಗೆ ಪಾಶ್ಚಿಮಾತ್ಯ
ರಾಷ್ಟ್ರಗಳ ದೊಡ್ಡ ಲಾಭದಾಯಕ ವ್ಯವಹಾರವಾಗಿತ್ತು. ೧೮೬೪ರಲ್ಲಿ ಅಮೇರಿಕ
ದಲ್ಲಿ ನಿಗ್ರೋ ಜನರು ಗುಲಾಮಗಿರಿಯಿಂದ ಸಾಮಾನ್ಯವಾಗಿ ಮುಕ್ತರಾದರು
ಅಂದಿನಿಂದ ನಿಗ್ರೋ ಜನರು ಒತ್ತರದಿಂದ ಶಿಕ್ಷಣ, ವ್ಯವಹಾರ, ಉದ್ಯೋಗಗಳಲ್ಲಿ
ಮುಂದೆ ಬರಹತ್ತಿರುವರು. ಇವರಲ್ಲಿ ೧೮೬೪ರಲ್ಲಿ ೧೦೦ಕ್ಕೆ ೨ರಂತೆ ತಕ್ಕಮಟ್ಟಿಗೆ
ಓದುಬರಹ ಬಲ್ಲವರು ಸಿಗುತ್ತಿದ್ದರು. ಇಂದಿಗೆ ಅವರಲ್ಲಿ ೧೦೦ಕ್ಕೆ ೭೫ರಂತೆ ಶಿಕ್ಷಣ
ವನ್ನು ಹೊಂದಿದವರು ದೊರೆಯುವರು. ಇದು ಸೋಜಿಗವೇ ಸರಿ.

ನಿಗ್ರೋ ಯುವಕರು ಉಚ್ಚ ತರಹದ ಶಿಕ್ಷಣ ಹೊಂದಲು ಲವಲವಿಕೆಯ
ಳ್ಳವರಿದ್ದಾರೆ. ನಿಗ್ರೋ ಜನರು ತೀರ ಅಲ್ಪ ಸಂಖ್ಯಾಕರಿದ್ದು, ಇನ್ನೂ ಅನೇಕ
ಬಗೆಯ ಬಂಧನೆಗಳಿಗೆ ಗುರಿಯಾಗಿದ್ದರೂ ಆತ್ಮೋದ್ಧಾರದ ಕಾರ್ಯವನ್ನು ಬಹ
ಜಾಗ್ರತೆಯಿಂದ ನಡೆಯಿಸಿರುವರು. ಅವರು ಸ್ವಂತ ಶಾಲೆಗಳನ್ನೂ, ಕಾಲೇಜು
ಗಳನ್ನೂ, ವಿಶ್ವವಿದ್ಯಾಲಯಗಳನ್ನೂ ಸ್ಥಾಪಿಸಿಕೊಂಡಿದ್ದಾರೆ. ರಾಖಫೆಲರ ಧನ
ನಿಧಿಯವರು ನಿಗ್ರೋ ಜನರ ಶಿಕ್ಷಣಕ್ಕಾಗಿ ಸುಮಾರು ೩೦,೦೦,೦೦೦ ರೂ. ಗ

ಸೀಮೆಗೆ ಕೊಟ್ಟಿದ್ದಾರೆ. ಕೇವಲ ಉತ್ತರ ಕಾರೋಲಿನಾದಲ್ಲಿ ನಿಗ್ರೋ ಜನರ ಶಿಕ್ಷಣಕ್ಕಾಗಿ ಎತ್ತಿದ ಕರವೇ ಪ್ರತಿ ವರ್ಷ ೧। ಕೋಟಿ ರೂ. ಆಗುವದು. ಯುನೈಟೆಡ್ ಸ್ಟೇಟ್ಸದಲ್ಲಿ ಈಗ ನಿಗ್ರೋ ಜನರ ದೆಸೆಯಿಂದ ೫೦೦ಕ್ಕಿಂತ ಹೆಚ್ಚು ಹಾಯ ಸ್ಕೂಲ, ಕಾಲೇಜುಗಳಿರುವವು. ೧,೦೦,೦೦೦ ವಿದ್ಯಾರ್ಥಿಗಳು ಇವುಗಳಲ್ಲಿ ಅಭ್ಯಾಸ ಮಾಡುತ್ತಿರುವರು. ಸಾರ್ವಜನಿಕ ಶಾಲೆಗಳಲ್ಲಿ ೨೦,೦೦,೦೦೦ ವಿದ್ಯಾರ್ಥಿಗಳು ಕಲಿಯುತ್ತಿರುವರು. ೪೦,೦೦೦ ಮೇಲ್ಪಟ್ಟು ನಿಗ್ರೋ ಶಿಕ್ಷಕರಿರುವರು. ಇವರಲ್ಲಿ ಅದ್ವಿತೀಯ ವಕೀಲರೂ, ಡಾಕ್ಟರರೂ, ಶಾಸ್ತ್ರಜ್ಞರೂ, ಇಂಜಿನಿಯರರೂ, ಕವಿಗಳೂ ಇರುವರಲ್ಲದೆ, ದೊಡ್ಡ ಜಮೀನುದಾರರೂ, ವರ್ತಕರೂ, ಕಾರಖಾನೆದಾರರೂ ಇರುವರು. ತಮ್ಮ ಎಲ್ಲ ಬಗೆಯ ಉನ್ನತಿಗಾಗಿ ಆಧುನಿಕ ಯಾವತ್ತೂ ಬಗೆಯ ಚಳವಳಿಗಳಲ್ಲಿ ಮುಂದಿರುವರು. ಅನೇಕ ವರ್ತಮಾನ ಪತ್ರಗಳನ್ನೂ ಮಾಸಿಕ ಪತ್ರಿಕೆಗಳನ್ನೂ ಉತ್ತಮ ರೀತಿಯಲ್ಲಿ ನಡೆಯಿಸುತ್ತಿರುವರು. ಕಾಡು ಜನರೂ, ಕುರೂಪಿಗಳೂ, ಅನೇಕ ಶತಮಾನ ದಾಸ್ಯತ್ವದಲ್ಲಿದ್ದವರೂ ಆದ ನಿಗ್ರೋ ಜನರು ಇಷ್ಟು ಮುಂದೊರೆದದ್ದನ್ನು ನೋಡಿದರೆ ಜಗತ್ಪ್ರಸಿದ್ಧ ಪ್ರಾಚೀನ ಸಂಸ್ಕೃತಿಯುಳ್ಳ ನಮ್ಮ ಹಿಂದೂ ಸಮಾಜದ ಈಗಿನ ಅವನತ ಸ್ಥಿತಿಯು ಎಷ್ಟು ಶೋಚನೀಯವೆಂಬುದು ವ್ಯಕ್ತವಾಗುವದು.

* * *

ಶಿಕ್ಷಣ ಉಪಮಂಡಲ

ಮುಂಬಯಿ ಕಾಯದೇ ಕೌನ್ಸಿಲಿನಿಂದ ಇಲಾಖೆಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಅನೆಯ ತರಗತಿಯ ಶಿಕ್ಷಣದಲ್ಲಿ ತಿದ್ದುಪಡೆಯಾಗುವ ಕುರಿತು ಆ ಬಗ್ಗೆ ಒಂದು ಉಪಮಂಡಲವು ನಿಯಮಿಸಲ್ಪಟ್ಟಿದ್ದು ಈ ಮಂಡಲದವರು ಕಳೆದ ಜೂನ ತಿಂಗಳಲ್ಲಿಯೇ ತಮ್ಮ ವರದಿಯನ್ನು ಕಳುಹಿಸಬೇಕಾಗಿತ್ತು. ಆದರೆ ಈ ಮಂಡಲದವರು ಇದೀಗ ತಮ್ಮ ಪ್ರಶ್ನಮಾಲಿಕೆಯನ್ನು ತೆಗೆದಿದ್ದಾರೆ. ತಾ॥ ೨೩--೯--೨೪ರ ಒಳಗಾಗಿ ಪ್ರಶ್ನಗಳಿಗೆ ಉತ್ತರಗಳು ಬರಬೇಕಾಗಿ ಸೂಚಿಸಿದ್ದಾರೆ.

* * *

ಹುಬ್ಬಳ್ಳಿ ಮ್ಯುನಿಸಿಪಲ್ ಸ್ಕೂಲ ಬೋರ್ಡಿನ ಶಾಲೆಗಳಲ್ಲಿ ಸೂರ್ಯ ನಮಸ್ಕಾರ.

ಸ್ಕೂಲ ಬೋರ್ಡಿನ ಉತ್ಸಾಹಿ ಸದಸ್ಯರಾದ ಮಿ॥ ಚ. ಸಿ. ಕೆಂಪಣ್ಣನವರ ಇವರ ಸೂಚನೆಯ ಪ್ರಕಾರ ಹುಬ್ಬಳ್ಳಿ ಮ್ಯುನಿಸಿಪಲ್ ಯಾವತ್ತು ಗಂಡು ಮತ್ತು ಹೆಣ್ಣು ಹುಡುಗರ ಶಾಲೆಗಳಲ್ಲಿ ಪ್ರತಿನಿತ್ಯ ಪ್ರಾತಃಕಾಲದ ಪ್ರಾರ್ಥನೆಯಾದ ಮೇಲೆ ಎಲ್ಲ ಹುಡುಗರು ೫--೧೦ ಮಿನಿಟುಗಳ ವರೆಗೆ ಶಕ್ತ್ಯನುಸಾರ ಸೂರ್ಯ ನಮಸ್ಕಾರಗಳನ್ನು ಹಾಕಬೇಕೆಂದು ಸ್ಕೂಲ್ ಬೋರ್ಡ ಚೇಅರಮನ್ ರಾದ ಮಿ॥ ಆನೆಗುಂದಿಯವರು ಸರಕ್ಯೂಲರ ನಂ. ೬೩ ತೆಗೆದಿರುವರು.

ಜೂನ ಸಂಚಿಕೆಯ ಒಗಟುಗಳ ಉತ್ತರ.

ಕಂ:—ಗುಣಿಯೊರೆದ ಜೂನದೆರಡನೆ ।
ಯೆಣಿಕೆಯದಾದೊಗಟಿಗುತ್ತರಂ ಬಿತ್ತರದಿಂ ॥
ರಣ, ಮಣ, ಮರ, ಎಂಬರ್ಥವ ।
ನಣಿಯರ ಮಾಗೀವ "ಮರಣ" ಶಬ್ದಮವತ್ತೀ? ॥

ಎ. ಜ್ಯೋ. ಶಿರೂರ, ಅ। ವಾಸ್ತರ ಶಿರೂರ.

ಮಧ್ಯಾಕ್ಷರಮುಂ ಮೊದಲಿಡೆ
ಮುದ್ದೀಯುತೆ ಬರ್ಪ ತನ್ನ ವಧುವಂ ರಮಣಂ ।
ಇದ್ದೋಲಿಡದು ತೋರ್ಪುದ ।
ದೆದ್ದೋಡಲು ಜೀವ ಜೀವರಾಸಿಗೆ ಮರಣಂ ॥೧॥

ಸಿ. ಶ. ಕಟ್ಟೀಮನಿ, ಹುಬ್ಬಳ್ಳಿ.

(೧) ಕಡಲೊಳ್ ಸಾರುತೆ ಮಿಂಗಳ ॥
ಗಡಣವ ಚದರಿಸುತೆ ತನ್ನ ವೇಗದ ಭರದಿಂ ॥
ಒಡಲೊಳಗೆ ಪೊತ್ತು ಭಾರವ ।
ನಡೆಯುವದೇನೆಂದುಕೇಳಿ **ಹಡಗ** ವಿದೆಂಬರ್ ॥

(೨) ವೀರರ ಕಲೆಯೆಂದರೆ ರಣ ।
ಭಾರವು ಭೂರುಹ ಮೆನಲದು ಮಣವುಂ ಮರವುಂ॥
ಸೇರಿಸೆ ರಣಮಣಮರಗಳ।
ತೋರುವದೈತ್ರಿಪದಿಯಾದ **ಮರಣಂ** ಶಬ್ದಂ ॥

ನಾ. ನ. ಜವಳಿ, ಅಮೀನಭಾವಿ.

ಭಾ॥ ತರತರವ ಸರಕುಗಳಗಂಟನು ।
ಭರದೆ ತನ್ನಯ ಹೊಟ್ಟೆಯಲಿ ತಾ ।
ಧರಿಸಿ ಕಡಲದ ಮಧ್ಯಮಾರ್ಗದಿ ಜವದಿ **ನಾವಿಕರು** ॥
ಕರದಿ ಹುಟ್ಟನು ಹಾಕುತಿರಲಾ ।
ನೆರೆದ ಮೀನ್ಗಳು ಸರಿಯತೊಡಗಿರೆ ।
ಜರೆದು ಬಿರುಗಾಳಿಯನು " ಹಡಗವು " ತೀರ ಸೇರಿದುದು ॥೧॥

ಬಾಲಮಾರ್ತಾಂಡ.

ಹೊಸ ಸಮಸ್ಯೆ.

ಕಂ॥ ರಣದೋಳ್ ಪ್ರಾಣವನು ನೀಗಿ ದುರ್ಗತಿಗಿಳಿವರ್ ॥

ಶಂಕರಭಟ್ಟ ತೀರ್ಥಭಟ್ಟನವರ.

ರಜೆಯ ಸಮ್ಮಂಧಿ ಶಿಕ್ಷಕರು ನೆನಪಿನಲ್ಲಿಡತಕ್ಕ ಕೆಲವು ಮಹತ್ವದ ಸೂಚನೆಗಳು.

(೧) ಶಿಕ್ಷಕರು ಕಿರುಕಳ ರಜೆಯ ಹೊರ್ತಾಗಿ ಯಾವ ತರದ ರಜೆಯ ಮೇಲೆ ಹೋಗಬೇಕಾದರೆ ಒಂದು ತಿಂಗಳ ಅಥವಾ ಕನಿಷ್ಟ ಪಕ್ಷಕ್ಕೆ ೧೫ ದಿವಸಗಳ ಮೊದಲು ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(೨) ರಜೆಯ ಮಂಜೂರಿಯನ್ನು ಪಡಕೊಂಡು ರಜೆಯ ಮೇಲೆ ಹೋಗತಕ್ಕದ್ದು, ಮಂಜೂರಿಯನ್ನು ಪಡೆದುಕೊಳ್ಳದೆ ರಜೆಯ ಮೇಲೆ ಹೋಗಬಾರದು.

(೩) ಹೆಚ್ಚಾಗಿ ರಜೆಯು ಬೇಕಾದರೆ ಮೊದಲು ಮಂಜೂರಿಯನ್ನು ಪಡಕೊಂಡ ರಜೆಯ ಅವಧಿಯು ಮುಗಿಯುವದಕ್ಕಿಂತ ಮೊದಲು ೧೫ ದಿವಸಗಳ ಪೂರ್ವದಲ್ಲಿ ಪುನಃ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(೪) ೧೧ ತಿಂಗಳ ನೌಕರಿ ಮಾಡಿದಲ್ಲಿ ಮಾತ್ರ ಶಿಕ್ಷಕರು ೧ ತಿಂಗಳ ಹಕ್ಕಿನ ರಜೆಗೆ ಪಾತ್ರರಾಗುತ್ತಾರೆ.

(೫) ಹಕ್ಕಿನ ರಜೆಯನ್ನು ಅನುಭವಿಸಿ ಹಾಜರ ಆದ ನಂತರ ಆರು ತಿಂಗಳ ನೌಕರಿ ಆಗದ ಹೊರ್ತು ಶಿಲಕು ಉಳಿದ ಹಕ್ಕಿನ ರಜೆಗೆ ಪಾತ್ರರಾಗುವದಿಲ್ಲ. ರಜೆಯು ಶಿಲಕು ಇದ್ದಲ್ಲಿ ಮಾತ್ರ ಈ ರಜೆಯು ಸಿಗಬಹುದು; ಇಲ್ಲದಿದ್ದರೆ ಹನ್ನೊಂದು ತಿಂಗಳ ನೌಕರಿ ಮಾಡಲಿಕ್ಕೆ ಬೇಕು. ಹಕ್ಕಿನ ರಜೆಯ ಹೊರ್ತಾಗಿ ಯಾವದೇ ತರದ ರಜೆಯಮೇಲೆ ಇದ್ದು ರಜೆಯ ಮೇಲಿಂದ ಹಾಜರ ಆಗಿ ೧೧ ತಿಂಗಳ ನೌಕರಿ ಮಾಡದ ಹೊರ್ತು ಪುನಃ ಹಕ್ಕಿನ ರಜೆಗೆ ಪಾತ್ರರಾಗುವದಿಲ್ಲ.

(೬) ಶಿಕ್ಷಕರು ಕಿರುಕಳ ರಜೆಯ ಮೇಲೆ ಹೋಗಿ ಆ ರಜೆಯನ್ನೆಳಗೊಂಡು ಹಕ್ಕಿನರಜೆಗೆ ಅರ್ಜಿಯನ್ನು ಮಾಡಿಕೊಳ್ಳುತ್ತಾರೆ. ಹೀಗೆ ಮಾಡಬಾರದು. ಕಿರುಕಳ ರಜೆಯು ತೀರಿದ ಕೂಡಲೆ ಕೆಲಸದ ಮೇಲೆ ಹಜರ ಆಗಿ ಹಕ್ಕಿನ ರಜೆಯ ಅಥವಾ ನೌಕರದ ರಜೆಯ ಮಂಜೂರೀಯನ್ನು ಪಡಕೊಂಡು ರಜೆಯಮೇಲೆ ಹೋಗತಕ್ಕದ್ದು.

(೭) ಹಕ್ಕಿನ ರಜೆಯು ಬೇಕಾಗಿದ್ದರೆ ಯೋಗ್ಯ ಕಾರಣದೊಂದಿಗೆ ಗೊತ್ತು ಮಾಡಿದ ರಜೆಯ ಅರ್ಜಿಯ ಫಾರ್ಮಿನಲ್ಲಿ ತುಂಬಿ ಕಳಿಸತಕ್ಕದ್ದು. ಸದರೀ ಕಾರ

ಣವು ಅಜಾರೀಯ ಬಗ್ಗೆ ಇದ್ದರೆ ಆ ಸಂಬಂಧದಿಂದ ಸರಕಾರದಿಂದ ಮಾನ್ಯರಾ
ಡಾಕ್ಟರರ ಸರ್ಟಿಫಿಕೇಟನ್ನು ಹಾಜರ ಪಡಿಸತಕ್ಕದ್ದು ಬಹುಶಃ ಅನೇಕ ಶಿಕ್ಷಕರು
ಅಜಾರೀಕಾ ಣವನ್ನು ತೋರಿಸಿ ಹಕ್ಕಿನ ರಜೆಯನ್ನು ಬೇಡುತ್ತಾರೆ. ಆದರೆ ಆ
ಬಗ್ಗೆ ಡಾಕ್ಟರರ ಸರ್ಟಿಫಿಕೇಟನ್ನು ಕಳಿಸದೆ ಅವರ ಅವಶ್ಯಕತೆಯು ಇಲ್ಲವೆಂದು ತೀ
ಯುತ್ತಾರೆ, ಆದರೆ ಇದು ಅವರ ತಪ್ಪು ತಿಳುವಳಿಕೆ ಇರುತ್ತದೆ, ಹೀಗೆ ಎಂದಿಗೂ
ಮಾಡಕೂಡದು.

(೮) ಅಜಾರೀ ರಜೆಯು ಸರಕಾರೀ ಡಾಕ್ಟರ ಅಥವಾ ಸರಕಾರದಿಂ
ಮಾನ್ಯರಾದ ಡಾಕ್ಟರರ ಸರ್ಟಿಫಿಕೇಟನ್ನು ಹಾಜರ ಪಡಿಸಿದಲ್ಲಿ ಮಾತ್ರ ಮಂಜೂರ
ಮಾಡಲಾದೀತು. ಇಲ್ಲದಿದ್ದರೆ ಅಂಥವರ ಗೈರ ಹಜರಿಯನ್ನು ಬಿನ್ನ ಪಗಾರಿ
ರಜೆಯಲ್ಲಿ ಎಣಿಸಲಾದೀತು. ಖಾಸಗಿ ವೈದ್ಯರ ಅಥವಾ ಕಂಪೌಂಡರರ ಸರ್ಟಿ
ಫಿಕೇಟು ನಡೆಯಲಿಕ್ಕಿಲ್ಲ. ಅಜಾರೀ ರಜೆಯಬಗ್ಗೆ ಅರ್ಜಿಯನ್ನು ಕಳಿಸುವದಿದ್ದ
ಅದರಕೂಡ ಡಾಕ್ಟರರ ಸರ್ಟಿಫಿಕೇಟನ್ನು ಕಳಿಸತಕ್ಕದ್ದು. ಒಂದು ವೇಳೆ ಒಂ
ರಡು ದಿವಸ ತಡವಾಗಿ ಕಳಿಸಿದರೂ ಅಡ್ಡಿ ಇಲ್ಲ. ಇದಕ್ಕಿಂತಲೂ ತಡವಾ
ಸರ್ಟಿಫಿಕೇಟನ್ನು ಕಳಿಸಿದರೆ ಅದನ್ನು ಸ್ವೀಕರಿಸಲಿಕ್ಕಿಲ್ಲ ಮತ್ತು ಅಂಥ ಶಿಕ್ಷಕರಿ
ಬಿನ್ನ ಪಗಾರೀ ರಜೆಯನ್ನು ಮಂಜೂರ ಮಾಡುವದರಲ್ಲಿ ಬರುತ್ತದೆ.

**ಅಜಾರೀರಜೆಯ ೬, ಹಕ್ಕಿನರಜೆಯು ಶಿಲಕು ಇರದಿದ್ದರೆ ಮಾತ್ರ
ಡಾಕ್ಟರರ ಸರ್ಟಿಫಿಕೇಟಿನ ಪ್ರಕಾರ ಕೊಡಲಾದೀತು**

(೯) ಕೆಲವು ಶಿಕ್ಷಕರು ತಮಗೆ ಹಕ್ಕಿನರಜೆಯು ಶಿಲಕು ಇರದಿದ್ದರೆ ಒಂದು
ಅಥವಾ ೨ ತಿಂಗಳ ಫರ್ಲೋ ಅಥವಾ ಖಾಸಗಿ ಕೆಲಸದ ರಜೆಯನ್ನು ತೆಗೆದು ಕೊ
ಳ್ಳುತ್ತಾರೆ. ಆದರೆ ಇಷ್ಟು ಸ್ವಲ್ಪ ಅವಧಿಯ ರಜೆಯು ಸಿಗಲಾರದು. ಯಾಕಂ
ದರೆ ಒಮ್ಮೆ ಫರ್ಲೋ ರಜೆಯನ್ನು ತೆಗೆದುಕೊಂಡನಂತರ ೮ ವರ್ಷ ನಿವಳ ಸರ್ವಿ
ಸ ಆಗದ ವಿನಃ ಪುನಃ ಫರ್ಲೋರಜೆಯೂ ಮತ್ತು ೬ ವರ್ಷಗಳ ನೌಕರಿಯು
ಆಗದ ವಿನಃ ಖಾಸಗೀ ರಜೆಯೂ ಸಿಗಲಾರದು. ೬ ವರ್ಷಗಳ ನಿವಳ ಸರ್ವಿಸ
ಇದ್ದಲ್ಲಿಮಾತ್ರ ಆರು ತಿಂಗಳ ಖಾಸಗೀ ಕೆಲಸದ ರಜೆಯನ್ನು ಕೊಡಬಹುದು.
ಇದೇ ಪ್ರಕಾರ ಆರುವರ್ಷಗಳ ನೌಕರಿಯಾದ ಬಳಿಕ ಸರ್ತಿಗೆ ಆರು ತಿಂಗಳ
ರಜೆಕೊಡಬಹುದು.

(೧೦) ಖಾಸಗಿ ಕೆಲಸದ ರಜೆಯನ್ನು ತಕ್ಕೊಳ್ಳದೆ ಇದ್ದಂಥ ಮಾಸ್ತರ
ಕೆಳಗೆ ಬರದಂತೆ ಫರ್ಲೋ ರಜೆಯನ್ನು ಕೊಡಬಹುದು.

೧೧ ವರ್ಷ ನೌಕರಿಯಾದಬಳಿಕ ಒಂದು ವರ್ಷ ಅಥವಾ ಕಡಿಮೆ ಮುದ್ದತ್ತು
ಆ ಮೇಲೆ ೮ ವರ್ಷಗಳ ನೌಕರಿಯಾದಬಳಿಕ ಒಂದೊಂದುವರ್ಷ ಅಥವಾ ಕಡಿಮೆ

ಮುಟ್ಟದು; ಅಥವಾ, ೧೪ ವರ್ಷ ನೌಕರಿಯಾದ ಬಳಿಕ ೨ ವರ್ಷ ಅಥವಾ ಕಡಿಮೆ ಮುಟ್ಟದು ಮತ್ತು ಆ ಮೇಲೆ ಎಂಟೆಂಟು ವರ್ಷಗಳ ನೌಕರಿಯಾದ ಬಳಿಕ ೧ ವರ್ಷ ಅಥವಾ ಕಡಿಮೆ ಮುಟ್ಟದು:- ಆದರೆ ಈ ರಜೆಯು ಯಾವತ್ತೂ ನೌಕರಿಯ ಮುದ್ದತಿನಲ್ಲಿ ಎರಡು ವರ್ಷಕ್ಕಿಂತ ಹೆಚ್ಚಾಗಬಾರದು.

(೧೧) ರಜೆಯ ಮೇಲೆ ಹೋಗುವಾಗ್ಗೆ ಎಷ್ಟೋ ಮಾಸ್ತರರು ತಮ್ಮ ಕೆಲಸದ ವ್ಯವಸ್ಥೆಯಬಗ್ಗೆಯೂ ಬದಲಿ ಇಸವಿನ ಸಂಬಂಧದಿಂದಲೂ, ಒಂದು ಇಸವು ಇದ್ದರೆ ಸದರ ಇಸವು ಪಾಸ ಆಗಲಿ ಅಥವಾ ಅನ್‌ಪಾಸ ಎಂಬ ಬಗ್ಗೆ ಏನೂ ತಿಳಿಸುವದಿಲ್ಲ ಮತ್ತು ಬದಲೀ ಇಸವಿನ ಮಂಜೂರಿಯನ್ನು ಪಡೆದು ಕೊಳ್ಳುವದಿಲ್ಲ. ಇದರಿಂದ ಪಗಾರ ಆಕಾ ಮಾಡಲಿಕ್ಕೆ ಅತಿಶಯ ತೊಂದರೆ ಆಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ಈ ಎಲ್ಲ ಸಂಗತಿಗಳು ಬಾಧಿತವಾಗಿ ಸಾಗಿರುತ್ತವೆಂದು ಖಾತ್ರಿ ಮಾಡಿಕೊಂಡು ರಜೆಯಮೇಲೆ ಹೋಗತಕ್ಕದ್ದು ವಿನಃಕಾರಣ ತಮ್ಮ ಪಗಾರವು ತಹಕೂಬ ಬೀಳದಂತೆ ಮಾಡಿಕೊಳ್ಳಬಾರದು

(೧೨) ರಜೆಯಮೇಲೆ ಹೋಗುವಮುಂದೆ ಪ್ರತಿಯೊಬ್ಬ ಶಿಕ್ಷಕನ್ನು ತನ್ನ ಪೂರ್ಣ ಪತ್ತೆಯನ್ನು ತಮ್ಮ ಶಾಲೆಯ ಹೆಡ್ ಮಾಸ್ತರರಿಗೆ ತಿಳಿಸಿ ಹೋಗತಕ್ಕದ್ದು. ಮತ್ತು ತಮ್ಮ ರಜೆಯ ರಿಪೋರ್ಟ ವಗ್ಯೆರೆ ಆಯಾ ಶಾಲೆಗಳ ಹೆಡ್ ಮಾಸ್ತರ ವಿಶ್ವಮಾನ್ ರವಾನಿಸ ತಕ್ಕದ್ದು.

ಮೇಲ್ಕಂಡ ಸೂಚನೆಗಳ ವಿರುದ್ಧನಾಗಿ ಯಾರಾದರೂ ರಜೆಯಮೇಲೆ ಹೋದದ್ದು ಕಂಡು ಬಂದರೆ ಅವರಿಗೆ ಬಿನ್ನ ಪಗಾರೀ ರಜೆಯನ್ನು ಮಂಜೂರ ಮಾಡುವದಲ್ಲದೆ ಯೋಗ್ಯ ತಜವೀಜ ಮಾಡಲಾದೀತು. ಹಿಂದುಗಡೆಯಿಂದ ಈ ಬಗ್ಗೆ ತಕರಾರ ವಗ್ಯೆರೆ ನಡೆಯಲಿಕ್ಕಿಲ್ಲ.

ಟೀಪುಃ—ಬಿನ್ನ ಪಗಾರೀ ರಜೆಯಹೊರ್ತಾಗಿ ಉಳಿದ ಯಾವದೆ ತರದ ರಜೆಯ ಅವಧಿಯಲ್ಲಿ ಅರ್ಧ ಪಗಾರವು ಕೊಡಲ್ಪಡುತ್ತದೆಂಬದನ್ನು ಎಲ್ಲರೂ ನೆನಪಿನಲ್ಲಿಡತಕ್ಕದ್ದು.

Sd/-S K Hosamani,
Chairman, D. S. B.
Dharwar.

ಡಿ. ಎ ಇ ಉರ್ದು ಸ್ಕೂಲ ದ. ಭಾ. ಧಾರವಾಡ ಇವರ ಸರ್ಕ್ಯುಲರ ನಂಬರು ೪೨.

ಅಜಂ ಯಾವತ್ತೂ ಉರ್ದು ಶಾಲಾ ಮಾಸ್ತರರಿಗೆ ತಿಳಿಸುವದೇನಂದರೆ:—

ಸನ್ ೧೯೨೯ ನೇ ಇಸವಿ ಎಪ್ರಿಲ್ಲ ತಿಂಗಳಲ್ಲಾಗುವ ಉರ್ದು ಫಾಯನಲ್ ಪರೀಕ್ಷೆಯಲ್ಲಿಟ್ಟ ವಿಷಯಗಳು ಕೆಳಗೆ ತೋರಿಸಿದ ಪ್ರಕಾರ ಅವೆ:—

ಉರ್ದು—ವರ್ನ್ಯಾಕ್ಯುಲರ

೧ನೇ ಪದರು:— ಉರ್ದುವಾಚನಃ—

ಡಿಪಾರ್ಟಮೆಂಟ ಉರ್ದು ೭ನೇ ಬುಕ್ಕಿನ ೧ನೇ ಭಾಗದೊಳಗಿನ ಯಾವತ್ತೂ ವಾಚನ ಪಾಠುಗಳು

ಉರ್ದುಕವಿತೆ:—ಡಿಪಾರ್ಟಮೆಂಟ ೭ನೇ ಬುಕ್ಕಿನಲ್ಲಿ ೩, ೯, ೧೪, ೨೧, ೨೭, ಹಾಗೂ ೩೩ ನೇ ಪಾಠಗಳೊಳಗಿನ ಕವಿತೆಗಳನ್ನು ಬಾಯಿಪಾಠ ಅನ್ನಲಿಕ್ಕೂ ಅರ್ಥ ಹೇಳಲಿಕ್ಕೂ ಬರತಕ್ಕದ್ದು.

೬ನೇ ಪದರು:—ಕನ್ನಡ (ಐಚ್ಛಿಕ Voluntary)

ಸನ್ ೧೯೨೪ ನೇ ಆವೃತ್ತಿಯ ಡಿಪಾರ್ಟಮೆಂಟ ಕನ್ನಡ ೫ನೇ ಪುಸ್ತಕದೊಳಗಿನ ೨, ೩, ೪, ೧೦, ೧೪, ೧೫, ೨೯, ೩೫, ೪೦, ೪೨, ೫೬, ೬೧, ೬೨, ೬೯, ೭೧, ೭೨, ೭೯, ೮೨, ೮೬, ೮೭, ೮೯, ೯೨, ೯೬, ೯೯, ೧೦೮, ೧೧೨, ೧೧೬, ೧೧೯, ೧೨೨, ೧೨೫, ೧೨೮, ೧೩೨, ೧೩೫, ೧೩೮, ೧೪೨, ೧೪೫, ೧೪೮, ೧೫೨, ೧೫೫, ೧೫೮, ೧೬೨, ೧೬೫, ೧೬೮, ೧೭೨, ೧೭೫, ೧೭೮, ೧೮೨, ೧೮೫, ೧೮೮, ೧೯೨, ೧೯೫, ೧೯೮ ನೇ ಪಾಠಗಳು.

ವರ್ನ್ಯಾಕ್ಯುಲರ—ಉರ್ದು

೧ನೇ ಪದರು—ಕನ್ನಡ (ಅ) ೧೯೨೪ನೇ ಆವೃತ್ತಿಯ ಡಿಪಾರ್ಟಮೆಂಟ ಕನ್ನಡ ೭ ನೇ ಪುಸ್ತಕದೊಳಗಿನ ೧, ೪, ೬, ೯, ೧೨, ೧೬, ೧೮, ೨೨, ೨೬, ೨೮, ೩೯, ೪೪, ೪೮, ೪೯, ೫೧, ೫೩, ೫೪, ೫೭, ೫೯, ೬೦, ೬೨, ೬೪, ೬೫, ೬೭, ೬೮, ೭೧, ೭೪, ೭೫, ೭೯, ೮೧, ೮೪, ೮೫, ೮೯, ೯೧, ೯೪ ನೇ ಪಾಠಗಳು.

(ಬ) ಸನ್ ೧೯೨೪ನೇ ಆವೃತ್ತಿಯ ಡಿಪಾರ್ಟಮೆಂಟ ಕನ್ನಡ ೭ನೇ ಪುಸ್ತಕದೊಳಗಿನ ೭, ೧೧, ೧೯, ೩೨, ೫೩ನೇ ಪಾಠಗಳೊಳಗಿನ ಕವಿತೆಗಳನ್ನು ಬಾಯಿಪಾಠ ಅನ್ನಲಿಕ್ಕೂ ಅರ್ಥ ಹೇಳಲಿಕ್ಕೂ ಬರತಕ್ಕದ್ದು.

೬ನೇ ಪದರು—ಉರ್ದು ವಾಚನಃ— ಡಿಪಾರ್ಟಮೆಂಟ ಉರ್ದು ೭ ನೇ ಪುಸ್ತಕದೊಳಗಿನ ೧, ೪, ೫, ೭, ೧೦, ೧೧, ೧೩, ೧೪, ೧೭, ೧೯, ೨೦, ೨೨, ೨೩, ೨೫, ೨೯, ಮತ್ತೂ ೩೧ನೇ ಪಾಠಗಳು

ಉರ್ದು ಕವಿತೆಃ— ಡಿಪಾರ್ಟಮೆಂಟ ಉರ್ದು ೭ನೇ ಪುಸ್ತಕದೊಳಗಿನ ೩, ೬, ೧೨, ೧೫, ೨೧, ಮತ್ತೂ ೨೪ನೇ ಪಾಠಗಳೊಳಗಿದ್ದ ಕವಿತೆಗಳನ್ನು ಅನ್ನಲಿಕ್ಕೂ ಹಾಗೂ ಅರ್ಥ ಹೇಳಲಿಕ್ಕೂ ಬರತಕ್ಕದ್ದು.

(ಡಿ. ಇನ್ಸಪೆಕ್ಟರರ ಸಹಿ).

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧	ಸಪ್ಟಂಬರ ೧೯೨೮	ಸಂಚಿಕೆ ೬

ಅಂಕಗಣಿತ.

ಸಂಪಾದಕರು.

ಗಣಿತಾಧ್ಯಯನದ ಉದ್ದೇಶವು ಇಬ್ಬಗೆಯಾಗಿದೆ. ವಿಚಾರಶಕ್ತಿ, ತರ್ಕ ಶಕ್ತಿ ಮುಂತಾದ ಬೌದ್ಧಿಕ ಸಾಮರ್ಥ್ಯಗಳ ಬೆಳವಣಿಗೆಯಾಗಬೇಕೆಂಬುದು ಮೊದಲನೆಯದು. ಗಣಿತಾಧ್ಯಯನವು ನಿತ್ಯದ ವ್ಯವಹಾರಕ್ಕೂ, ಹೆಚ್ಚಿನ ಶಾಸ್ತ್ರೀಯ ಶೋಧಕ್ಕೂ ಉಪಯೋಗವಾಗಬೇಕೆಂಬುದು ಎರಡನೆಯದು. ಈಗ ಶಾಲೆಗಳಲ್ಲಿ ಅವಶ್ಯಕವಾಗಿ ಪ್ರತಿಯೊಬ್ಬನಿಗೆ ಕಲಿಸಲ್ಪಡುವ ಗಣಿತದ ಬಹು ಭಾಗವು ವ್ಯವಹಾರಕ್ಕೆ ಅನುಪಯುಕ್ತವೆಂದೂ ವೃಥಾಯಾಸವೆಂದೂ ಅನೇಕರು ಆಕ್ಷೇಪಿಸುವರು. ಇವರು ಗಣಿತಾಧ್ಯಯನದ ಮೊದಲನೆಯ ಉದ್ದೇಶವಾದ ಬೌದ್ಧಿಕ ಬೆಳವಣಿಗೆಗೆ ಗಣಿತದಷ್ಟು ಸುಪ್ರಯೋಜಕ ವಿಷಯವು ಬೇರೊಂದಿಲ್ಲವೆಂಬುದನ್ನು ಕಂಡು ಹಿಡಿದಿರುವದಿಲ್ಲ. ಹುಡುಗರಲ್ಲಿ ಸ್ವತಃ ವಿಚಾರ ಮಾಡುವ ರೂಢಿ, ತರ್ಕಜ್ಞಾನ, ಕಲ್ಪನಾ ಸಾಮರ್ಥ್ಯ, ನೆನಪಿನ ಶಕ್ತಿ ಮೊದಲಾದವುಗಳ ಸಂವರ್ಧನೆಗಾಗಿಯೇ ಗಣಿತದ ಬಹು ಭಾಗವು ಕಲಿಸಲ್ಪಡುತ್ತದೆ. ಶಿಕ್ಷಕರು ಈ ಗುರಿಯನ್ನು ಮರೆಯಲಾಗದು. ಕೊಡಕೊಳ್ಳುವ ವ್ಯವಹಾರ, ಅಂಗಡೀ ಲೆಕ್ಕ, ಬಡ್ಡೀ ವ್ಯವಹಾರ ಮೊದಲಾದ ಸಂಸಾರದ ಸಾಮಾನ್ಯ ವ್ಯವಹಾರಗಳಿಗೆ ಉಪಯೋಗವಾಗಬೇಕೆಂದಷ್ಟೇ ಆಕುಂಚಿತ ದೃಷ್ಟಿಯಿಂದ ಹಲ ಕೆಲವು ನಿಯಮಗಳನ್ನು, ರೀತಿಗಳನ್ನು

ಹುಡುಗರಿಗೆ ಅಭ್ಯಾಸ ಮಾಡಿಸಿದರಾಯಿತೆಂದು ಬಗೆದರೆ ಇದು ಸರ್ವಥಾ ತಪ್ಪು. ವ್ಯಾಯಾಮದಿಂದ ಶರೀರವು ಬಲಪಡುವಂತೆ, ಗಣಿತಾಧ್ಯಯನದಿಂದ ವಿಚಾರ ಶಕ್ತಿಯು ಬಲಪಡುವದು. ವಿಚಾರ ಮಾಡದೆ ಗಣಿತವಾದರೂ ಕೂಡ ಸರಿಯಾಗಿ ತಿಳಿಯಲಾರದು. ಯಾಂತ್ರಿಕ ಪದ್ಧತಿಯಿಂದ ಕಲಿಸಿದಲ್ಲಿ ಯಾವ ಲಾಭವಿಲ್ಲ.

ಈ ರೀತಿಯಲ್ಲಿ ಸಿದ್ಧರಾದ ವಿದ್ಯಾರ್ಥಿಗಳು ನಿಜವಾಗಿ ದುರ್ಬಲರಾಗಿ ಉಚ್ಚ ಶಿಕ್ಷಣಕ್ಕೆ ಎರವಾಗುವರು.

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಅಂಕಗಣಿತಕ್ಕೆ ಆದಷ್ಟು ಲಕ್ಷ್ಯ ಪೂರೈಸಬೇಕು. ಈ ವಿಷಯವು ಬಹು ಬಿಕ್ಕಟ್ಟಿಂದು ಸಾಮಾನ್ಯ ತಿಳುವಳಿಕೆ. ಆದ್ದರಿಂದ ಶಿಕ್ಷಕರು ಈ ತಿಳುವಳಿಕೆಗೆ ಅವಕಾಶ ಕೊಡದೆ ಆದಷ್ಟು ಸುಲಭ ಮಾಡಿ ಕಲಿಸಬೇಕು. ಬಡ್ಡೀ ಲೆಕ್ಕಗಳು, ಲಾಭ ಹಾನಿ, ತೇಪು ಮೊದಲಾದವು ಒಂದಕ್ಕೊಂದು ತೀರ ಭಿನ್ನವಾದವೆಂದೂ, ಅವುಗಳನ್ನು ಬಿಡಿಸುವ ರೀತಿಗಳೂ ಬೇರೆಯೆಂದೂ ವಿದ್ಯಾರ್ಥಿಗಳ ಕಲ್ಪನೆ ಇರುವದು. ಯಾವತ್ತು ಅಂಕಗಣಿತದ ಲೆಕ್ಕಗಳನ್ನು ಬಿಡಿಸುವಲ್ಲಿ ಕೆಲವು ಸಾಮಾನ್ಯ ನಿಯಮಗಳುಂಟೆಂಬದನ್ನು ತಿಳಿದುಕೊಂಡಿರುವದಿಲ್ಲ. ಕೂಡಿಸುವದು, ಕಳೆಯುವದು, ಗುಣಿಸುವದು, ಭಾಗಿಸುವದು, ಪ್ರಮಾಣ, ಪಾಲು, ಪಟ್ಟು ಇವುಗಳೇ ಗಣಿತದ ಬೇರುಗಳು. ಇವುಗಳಿಂದಲೇ ಬಹುಶಃ ಆಯಾಯ ಲೆಕ್ಕಗಳನ್ನು ಬಿಡಿಸಲಿಕ್ಕಾಗುವದು.

ಲೆಕ್ಕಗಳನ್ನು ಆದಷ್ಟು ಮನಸ್ಸಿನಲ್ಲಿಯೇ ಬಿಡಿಸುವದು ಲಾಭದಾಯಕವು. ಸಂಖ್ಯೆಯು ಬೆಳೆಯುತ್ತಿದ್ದರೆ ಕಾಗದದ ಮೇಲೆ ಮಾಡಬೇಕು. ಲೆಕ್ಕದ ಸಾಮಾನ್ಯ ಸ್ವರೂಪವನ್ನು ತಿಳಿದುಕೊಂಡು ಬಿಡಿಸಲಿಕ್ಕೆ ಆರಂಭಿಸಬೇಕು.

(೧) ಸಂಖ್ಯೆಯನ್ನು ಎರಡು ಮೂರಾವರ್ತಿ ಓದಿ ಚನ್ನಾಗಿ ನೆನಪಿನಲ್ಲಿ ಇಡಬೇಕು.

(೨) ಕೇಳಿದ ಪ್ರಶ್ನೆ ಯಾವದು?

(೩) ಕೊಟ್ಟ ಸಂಖ್ಯೆ ಯಾವದು?

(೪) ೩ರ ಮೇಲಿಂದ ೨ನೆಯದನ್ನು ಹೇಗೆ ಸಾಧಿಸಬೇಕೆಂದು ಆಲೋಚಿಸಬೇಕು.

೫ ಸಂಜ್ಞೆಯ ಅರ್ಥವು ಚನ್ನಾಗಿ ತಿಳಿದಿರಬೇಕು. ಸಂಜ್ಞೆಯನ್ನು ಚನ್ನಾಗಿ ಓದಿ ನೆನಪೀಡದೆ ಅರ್ಥವನ್ನು ತಿಳಿಯದೆ, ಕೊಟ್ಟದ್ದೀನು, ಕೇಳಿದ್ದೀನು ಎಂಬದನ್ನ ಹುಡುಕಿ ಕೊಳ್ಳದೆ ಯಾಂತ್ರಿಕ ರೀತಿಯಿಂದ ಲೆಕ್ಕ ಬಿಡಿಸುವದು ತಿಲಮಾತ್ರವು, ಸರಿಯಲ್ಲ.

ಉದಾ:—೧

ಒಬ್ಬನು ೩೬ ಕುರಿಗಳನ್ನು ೮ ರೂ. ೪ ಆ. ಗೆ ಒಂದರಂತೆ ಕೊಳ್ಳುತ್ತಾನೆ. ಮನೆಗೆ ಹೊಡಕೊಂಡು ಬರಲಿಕ್ಕೆ ೧೨ ಆ. ಕೊಡುತ್ತಾನೆ. ಅವನ್ನು ಮೇಸಲಿಕ್ಕೆ ತಿಂಗಳಿಗೆ ಪ್ರತಿಯೊಂದಕ್ಕೆ ೧ ರೂ. ೨ ಆ. ವೆಚ್ಚ ತಗಲುತ್ತದೆ. ತಿಂಗಳಾಂತ್ಯಕ್ಕೆ ಅತನಿಗೆ ಎಷ್ಟು ಖರ್ಚು ಬಂದಂತಾಯಿತು ?

ಇಲ್ಲಿ ಕೇಳಿದ್ದು ಒಟ್ಟು ಖರ್ಚು, ಕೊಟ್ಟಿದ್ದು ಒಂದು ಕುರಿಯ ಮೂಲ ಕ್ರಯ ಮತ್ತು ಸಾಕಿದ ಖರ್ಚು ಮತ್ತು ಎಲ್ಲ ಕುರಿಗಳ ಮೇಲೆ ಹೊಡಕೊಂಡು ಬಂದ ಖರ್ಚು.

ಒಟ್ಟು ಖರ್ಚು = ಕುರಿಗಳ ಮೂಲಕ್ರಯ + ಮನೆಗೆ ಹೊಡಕೊಂಡು ಬಂದ ಖರ್ಚು + ಸಾಕಿದ ಖರ್ಚು.

= ೩೬ (೮ ರೂ ೪ ಆ)+೧೨ ಆ. +೩೬(೧ರು ೨ಆ.)

=(೨೮೮ ರೂ+೯ರೂ)+೧೨ ಆ(೩೬ ರೂ+೪ ರೂ ೮ ಆ.)

= ೩೩೮ ರೂ. ೪ ಆ ಉತ್ತರ.

ಉದಾ:—೨.

೧೦೦ ಕ್ಕೆ ವರ್ಷಕ್ಕೆ ೬ ಬಡ್ಡೀದರದಂತೆ ೧೪೦ ರೂಪಾಯಿಗೆ ೨ $\frac{೧}{೨}$ ವರ್ಷಕ್ಕೆ ಎಷ್ಟು ರಕಮು ಆಗುದು ?

ಇಲ್ಲಿ ಕೇಳಿದ್ದು ರಾಸು; ಕೊಟ್ಟಿದ್ದು ಅಸಲು, ಬಡ್ಡೀದರ ಮತ್ತು ಮುದ್ದತ್ತು.

ರಾಸು = ಅಸಲು + ಬಡ್ಡಿ.

$= ೧೪೦ + \frac{೬}{೧೦೦} \times \frac{೫}{೨} \times ೧೪೦$

$= ೧೪೦ + ೨೧ = ೧೬೧$ ರೂ. ಉತ್ತರ.

ಉದಾ:—೩.

ಒಂದು ಹೌದಿಗೆ ೩ ನಳಗಳಿದ್ದು ೧ನೆಯದು ಅವನ್ನು ೨೪ ತಾಸಿನಲ್ಲಿ ತುಂಬುವದು ೨ನೆಯದು ೩೦ ತಾಸಿನಲ್ಲಿ ತುಂಬುವದು. ೩ನೆಯದು ೨೦ ತಾಸಿನಲ್ಲಿ ಅವನ್ನು ಬರಿದಾಗಿಮಾಡುವದು ಮೂರೂನಳಗಳನ್ನು ಸುರುವು ಇಟ್ಟರೆ ಆ ಹೌದು ಎಷ್ಟು ಹೊತ್ತಿನಲ್ಲಿ ತುಂಬುವದು?

ತುಂಬಲಿಕ್ಕೆ ಬೇಕಾದ ಹೊತ್ತು = ಪೂರ್ಣ ಹೌದು ÷ ಒಂದುತಾಸಿನಲ್ಲಿ ತುಂಬಬಹುದಾದ ಭಾಗ?

$= ೧ \div \left[\frac{೧}{೨೪} + \frac{೧}{೩೦} - \frac{೧}{೨೦}\right]$

$= ೧೨೦ \div \left[೫ + ೪ - ೬\right]$

$= ೧೨೦ \div ೩ = ೪೦$ ತಾಸು ಉತ್ತರ.

ಉದಾ:—೪

ಅ ನು ಬ ನಿಗೆ ಒಂದು ಕುದುರೆಯನ್ನು ೧೦೦ ಕ್ಕೆ ೫ ಲಾಭಕಟ್ಟಿ ಮಾರಿದನು. ಬ ನು ಕ ನಿಗೆ ಅದನ್ನು ೧೦೦ ಕ್ಕೆ ೪ ಹಾನಿ ಮಾಡಿಕೊಂಡು ೨೪೦ ರೂ ಪಾಯಿಗೆ ಮಾರಿದನು. ಆದರೆ ಕುದುರೆಯ ಮೂಲ ಬೆಲೆಯನು?

ಕುದುರೆಯ ಮೂಲ ಬೆಲೆ = ಕ ನು ಕೊಂಡಕ್ರಯ + ಬ ನ ಹಾನಿ — ಅ ನ ಲಾಭ.

ಬ ನ ಹಾನಿ ೯೬ ಕ್ಕೆ ೪] $= ೨೪೦ + \frac{೪}{೯೬} \times ೨೪೦ -$ ಅ ನ ಲಾಭ

ಅ ನ ಲಾಭ ೧೦೫ ಕ್ಕೆ ೫] $= ೨೫೦ + \frac{೫}{೧೦೫} \times ೨೫೦$

$= ೨೫೦ - ೧೧\frac{೧೯}{೨೧} = ೨೩೮\frac{೨}{೨೧}$ ರೂ. ಉ.

ಉದಾ:—೫

ಅ ನು ೪ $\frac{೧}{೨}$ ದರದಂ ಭಾವದ ೯೦೦ ರೂಪಾಯಿ ತೀವನ್ನು ತೆಗೆದು ೭೫ ಭಾವದ ೪ ದರದ ತೀವಿನಲ್ಲಿ ಹಾಕುವನು. ಆದರೆ ಅವನ ವಾರ್ಷಿಕ ಉತ್ಪನ್ನದಲ್ಲಿ ಏನು ಹೆಚ್ಚು ಕಡಿಮೆಯಾಯಿತು.

ಅಂತರ = ಮೊದಲನೆಯ ಉತ್ಪನ್ನ — ಎರಡನೆಯ ಉತ್ಪನ್ನ

$= ೪\frac{೧}{೨} \times ೯೦೦ - \frac{೪}{೭೫} \times ೯೦೦ \times \frac{೯೦}{೧೦೦}$

$= ೪೦ \frac{೧}{೨} - \frac{೪}{೭೫} \times ೬೧೦$

$= ೪೦ \frac{೧}{೨} - ೪\frac{೧}{೫} = ೨\frac{೭}{೧೦}$ ರೂ. ಹೆಚ್ಚು ಉತ್ತರ

ಹೀಗೆ ಯಾವ ಲೆಕ್ಕವೇ ಆಗಲಿ ಆ ಲೆಕ್ಕದ ಅರ್ಥ ತಿಳಿದ ಹೊರ್ತು ಬಿಡಿಸಲಿಕ್ಕೆ ಆಗುವದಿಲ್ಲ. ಅರ್ಥ ತಿಳಿದ ಮೇಲೆ ಕೇವಲ ಕೂಡಿಸುದು, ಕಳೆಯುವದು ಗುಣಿಸುವದು, ಭಾಗಿಸುವದು, ಪ್ರಮಾಣ ಇತ್ಯಾದಿ ಸಾಮಾನ್ಯ ಗಣಿತದ ನಿಯಮಗಳಿಂದಲೇ ಲೆಕ್ಕಗಳನ್ನು ಬಿಡಿಸಲಿಕ್ಕೆ ಬರುವದು. ಆದ್ದರಿಂದ ಗಣಿತದ ಬೇರಿನಂತಿರುವ ಈ ವಿಷಯಗಳನ್ನು ಕಲಿಸುವವರಲ್ಲಿಯೇ ಶಿಕ್ಷಕರು ವಿಶೇಷ ಶ್ರಮ ವಹಿಸಬೇಕಾಗುವದು. ಇವುಗಳನ್ನು ಕಲಿಸುವಾಗ ವ್ಯವಹಾರೋಪಯುಕ್ತತೆಯ ಕಡೆಗೆ ಲಕ್ಷವನ್ನು ಪೂರೈಸಬೇಕು.

ಓದು ಬರಹಗಳು.

ಲೇಖಕರು: —"ಕ್ಷ"

ಪ್ರಾಥಮಿಕ ಶಾಲೆಗಳಲ್ಲಿ ಕಲಿಸತಕ್ಕ ಅನೇಕ ವಿಷಯಗಳಲ್ಲಿ ಓದು, ಬರಹ ಮತ್ತು ಗಣಿತ ಈ ಮೂರು ಮುಖ್ಯವಾಗಿವೆ. ಇಂಗ್ಲಿಷಿನವರು ಇವಕ್ಕೇ ಥ್ರೀ ಆರ್‌ಸ (Three Rs.) ಎನ್ನುವರು. ಯಾವದೊಂದು ಬರೆದ ವಿಷಯವನ್ನು ಓದಿ ತಿಳಿದುಕೊಳ್ಳುವದು (ಅನ್ಯರಿಗೆ ತಿಳಿಯುವಂತೆ ಓದಿ ಹೇಳುವದೂ ಇದರಲ್ಲಿಯೇ ಬರುವದು) ತನ್ನ ಭಾವನೆಗಳನ್ನು ಅನ್ಯರಿಗೆ ತಿಳಿಯುವಂತೆ ಬರೆದು ತಿಳಿಸುವದು, ನಿತ್ಯದ ವ್ಯವಹಾರಕ್ಕೆ ಬೇಕಾಗುವಷ್ಟು ಗಣಿತ ವಿಷಯವನ್ನು ತಿಳಿದಿರುವದು ಈ ಮೂರು ಮುಖ್ಯ ಮಾತುಗಳು ಪ್ರಾಥಮಿಕ ಶಿಕ್ಷಣದ ಧ್ಯೇಯಗಳೆಂದರೂ ಸಲ್ಲುವೆಂತಿದೆ. ಪ್ರಾಥಮಿಕ ಶಿಕ್ಷಣದ ಕಾಯದೆಯ ಮೇರೆಗೆ ಒತ್ತಾಯಪಡಿಸುವ ೬ ರಿಂದ ೧೧ ವರ್ಷಗಳ ಅವಧಿಯಲ್ಲಿ ಬಾಲಕರು ಇಷ್ಟೇ ವಿಷಯಗಳನ್ನು ತಿಳಿದುಕೊಂಡರೆ ಸಾಕೆಂದು ಹಲವರ ಅಭಿಪ್ರಾಯ ವಿದೆ. ಈ ವಿಷಯಗಳನ್ನು ಈಗಿರುವ ಸಾಧನಗಳ ಸಹಾಯದಿಂದ ಹೇಗೆ ಸುಲಭವಾಗಿಯೂ ಸುಸಂಗತವಾಗಿಯೂ ಕಲಿಸಬಹುದೆಂಬದನ್ನು ವಿವೇಚಿಸುವುದು ನಮ್ಮ ಉದ್ದೇಶವಾಗಿದ್ದರೂ, ಈ ಮೂರರಲ್ಲಿ ಅವಳಿ ಮಕ್ಕಳಂತಿದ್ದ ಓದುಬರಹಗಳನ್ನು ಕುರಿತು ಮೊದಲು ವಿವೇಚಿಸುವ.

ಮೊದಲನೆಯ ಇಯತ್ತೆ—ಬಿನ್ ಇಯತ್ತೆಯನ್ನು ಬಿಟ್ಟು—ಮೊದಲೇ ಮೊದಲನೆಯ ಇಯತ್ತೆಯನ್ನು ಆರಂಭಿಸುವದನ್ನು ಓದಿ ವಾಚಕರಿಗೆ ತುಸು ಗೊಂದಲವಾಗಬಹುದು. ಇದರಲ್ಲಿ ಅಂತಹ ಗೊಂದಲವೇನೂ ಇಲ್ಲ, ಬಿನ್ ಇಯತ್ತೆಯೆಂದರೆ ಇಯತ್ತೆಯಲ್ಲದ್ದು; ಯಾವದು ಇಯತ್ತೆಯಲ್ಲವೋ ಅರ್ಥಾತ್ ಯಾವದಕ್ಕೆ ಅಸ್ತಿತ್ವವೇ ಇಲ್ಲವೋ ಅದರ ಗೊಡವೆ ನಮಗೇಕೆಂದು ಇಲ್ಲಿ ಅದನ್ನು ಬಿಟ್ಟುಬಿಟ್ಟೆವು. ಬಿನ್ ಇಯತ್ತೆಯೆಂದರೆ ಶಿಕ್ಷಕರು ತಮ್ಮ ಮೇಲಿನ (ಬಾಲಕರ ವಿಷಯದ) ಜವಾಬದಾರಿಯನ್ನು ಒಪ್ಪಿಕೊಳ್ಳಲಿಕ್ಕೆ ತಕ್ಕ ಕಾಲವನ್ನು ನಿರೀಕ್ಷಿಸುತ್ತ ಬಾಲಕರನ್ನು ಕೊಳೆ ಹಾಕುವ ಕೊಣೆಯೋ ಒಂದು ಅನಿಯಮಿತ ಕಾಲಾವಧಿಯೋ ಎಂದು ಹೇಳಬೇಕಾಗುವದೆಂಬದನ್ನು ಪ್ರಾಥಮಿಕ ಶಾಲೆಗಳ ಅನುಭವವುಳ್ಳವರೆಲ್ಲರೂ ಒಪ್ಪಿಕೊಳ್ಳಬೇಕಾಗುವದು. ಮಿಕ್ಕ ಇಯತ್ತೆಗಳಿಗೆಲ್ಲ ಒಂದೊಂದು ವರ್ಷದ ಅವಧಿಯಿದೆ. ಬಿನ್ ಇಯತ್ತೆಗೂ ಒಂದು ವರ್ಷದ ಅವ

ಧಿಯು ಸರಕಾರೀ ಕಾಯದೆಯಿಂದ ಗೊತ್ತಾಗಿದ್ದರೂ ಶಿಕ್ಷಕರ ದೃಷ್ಟಿಯಿಂದ ಇಷ್ಟ ಅನಿಯನಿತವಾಗಿಬೆ ಧೂಳಾಕ್ಷರ, ಸಣ್ಣ ಬಿನ್ ಇಯತ್ತಿ ಎಂಬ ಪಾವಟಿಗೆಗಳ ರಡು ಬಾಲಕರ ಪೆಸರು ಹಚ್ಚಿದಮೇಲಿನವು; ಅದಕ್ಕೂ ಮೊದಲು ಇನ್ನೆಷ್ಟು ಕಾಲ ಅವರು ಕಾಯ್ದು ರಬೇಕಾಗುವದೆಂಬದು ಶಾಲೆಯೊಳಗಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಅವಲಂಬಿಸಿರುವದು. ಇರಲಿ. ಮೊದಲನೆಯ ಇಯತ್ತಿಯಲ್ಲಿ ಬಾಲಕರು ಎಲ್ಲ ಮೂಲಾಕ್ಷರಗಳನ್ನೂ ಗುಣಿತಾಕ್ಷರಗಳನ್ನೂ ಒತ್ತಕ್ಷರಗಳನ್ನೂ ಇವುಗಳಿಂದಾವ ಶಬ್ದಗಳನ್ನೂ ವಾಕ್ಯಗಳನ್ನೂ ಓದುವದಕ್ಕೂ ಬರೆಯುವದಕ್ಕೂ ಕಲಿಯಬೇಕಾಗುವದು. ಇದಕ್ಕಾಗಿ ಸರಕಾರದವರು ಬಾಲಬೋಧಿನಿ, ಮೊದಲನೆಯ ಪುಸ್ತಕ ಇವೆರಡನ್ನೂ ಗೊತ್ತುಪಡಿಸಿರುವರು ನಮ್ಮ ಹೇಳಿಕೆಯಂತೆ ಇವೆರಡರ ನಡುವೆ ಇನ್ನೊಂದು ಪುಸ್ತಕವು ಬೇಕಾಗುವದು ಮತ್ತು ಮೊದಲನೆಯ ಪುಸ್ತಕದಲ್ಲಿ ವಾಚನ ಪಾಠಗಳು ಇನ್ನೂ ತುಸು ಹೆಚ್ಚು ಬೇಕಾಗುವವು.

ಮೂಲಾಕ್ಷರಗಳನ್ನು ಎರಡು ರೀತಿಯಿಂದ ಕ್ರಮಗೊಳಿಸಿ ಬರೆಯಬಹುದು ಒಂದು ಉಚ್ಚಾರಕ್ಕೆ ಸುಲಭವಾವ ಕ್ರಮದಿಂದ; ಇನ್ನೊಂದು ಬರಹಕ್ಕೆ ಸುಲಭವಾದ (ಆಕಾರನುಯಾಯಿಯಾದ) ರೀತಿಯಿಂದ ನಾವೆಲ್ಲರೂ ಕಲಿತ ಅ, ಆ, ಇ, ಈ, ಈ ಪದ್ಧತಿಯು ಉಚ್ಚಾರಕ್ಕೆ ಸುಲಭವಾವ ಪದ್ಧತಿಯು. ಇದೇ ಸ್ವಾಭಾವಿಕವಾದ ಪದ್ಧತಿಯು. ಓದಲಿಕ್ಕೆ ಕಲಿಸುವಾಗ ಈ ಪದ್ಧತಿಯು ಹೆಚ್ಚು ಅನುಕೂಲವೆಂದು ಅನುಭವದಿಂದ ಹೇಳಬೇಕಾಗಿದೆ ನಾವು ಕಲಿತದ್ದು ಹಳೆಯದೆಂದು ಕಳೆದು ಹೊಸದೆಂದು ಹೆಗಲಿಗೆ ಹಾಕಿಕೊಂಡ ರ, ಠ, ಈ, ಪದ್ಧತಿಯು ನೋಟಕ್ಕೆ ಅಂದವಾಗಿದ್ದರೂ ಪರಿಣಾಮದಲ್ಲಿ ಅಷ್ಟು ಸುಂದರವಾಗಿಲ್ಲ. ಮೊದಲು "ರ" ಅನ್ನಬೇಕಾದರೆ ನಾಲಿಗೆ ಹೊರಳದೆ ಒದ್ದಾಡುವ ಬಾಲಕರ ಮುಂದೆ ಹುರಿದುಂಬಿ ನಿಂತು ರಥ, ರವದಿ, ರಗಟೆ, ಎಂದು ಒಬರಿ ಒಬರಿ ಗಂಟಲು ಹರಿದುಕೊಂಡ ಹೊಸ ಶಿಕ್ಷಕನು ಕೊನೆಗೆ ಬೇಸತ್ತು ಬಾಲಕರನ್ನು ಬೆತ್ತ ಬಡಿಗೆಗಳಿಂದ ಸತ್ಕರಿಸುವದಲ್ಲದೆ ಅವರ ತಾಯಿತಂದೆಗಳನ್ನೂ ಕುಲಕುಟುಂಬಗಳನ್ನೂ ಉದ್ಧರಿಸುವದನ್ನು ಹಲವು ಸಾಲೆಗಳಲ್ಲಿ ಕಾಣಬಹುದು. ರ, ಠ, ಈ, ಕ್ರ ಕ್ರಮವು ಕೃತ್ರಿಮವಾದುದೆಂಬುದಕ್ಕೆ ಇದು ಬೇರೆ ಬೇರೆ ಲಿಪಿಗಳಿಗೆ ಬೇರೆ ಬೇರೆಯಾಗುವದೆಂಬದು ಇನ್ನೊಂದು ಆಧಾರವಾಗಬಹುದು. ಅ, ಆ, ಇ, ಈ, ಇತ್ಯಾದಿ ಅಕ್ಷರಗಳನ್ನು ಅಡಿಕೆ, ಆಕಳ, ಇಲಿ, ಈಳಿಗೆ ಮುಂತಾವ ಶಬ್ದಗಳ ಸಹಾಯದಿಂದ ಅನ್ನುವದಕ್ಕೆ ಕಲಿಸಿದ ಬಳಿಕ ಅವುಗಳನ್ನು ಗುರುತಿಸಲಿಕ್ಕೂ, ಓದುವದಕ್ಕೂ, ಬರೆಯುವದಕ್ಕೂ ಕಲಿಸಬೇಕು. ಈ ರೀತಿ ಮೂಲಾಕ್ಷರಗಳನ್ನು ಕಲಿತ ಬಳಿಕ ರ, ಠ, ಈ, ಕ, ಇತ್ಯಾದಿ ಅಕ್ಷರಗಳ ಹಾಗೂ ಈ ಎಲ್ಲ ಅಕ್ಷರಗಳನ್ನು ಅಸ್ತವ್ಯಸ್ತವಾಗಿ ಹೊಂದಿಸಿ ಬರೆವ ಪಟಗಳನ್ನು ಬಾಲಕರ ಎದುರಿಗೆ ಇಟ್ಟು ಅವರು ಅಭ್ಯಾಸಿಸಿರುವದನ್ನು ಪರೀಕ್ಷಿಸುವದಕ್ಕಾಗಿ ಇವನ್ನು ಉಪಯೋಗಿಸಬಹುದು.

ಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಕಿಂಡರಗಾರ್ಟನ್ ಮೊಂಟಿಸೊ ಯ ಪದ್ಧತಿ, ಡಾಲ್ಟನ್ ಪ್ಲ್ಯಾನ, ಕ್ರಮ ಮುಂತಾದ ಶಿಕ್ಷಣಶಾಸ್ತ್ರ ಪಾರಂಗತರು ಾಲ್ಪನಿಕ ವಾತಾವರಣದಲ್ಲಿ ಮಾತಾಡುತ್ತಿರುವಂಥ ಪದ್ಧತಿಗಳನ್ನು ನಾವು ಇಲ್ಲಿ ವರಿಸಲು ಹೊರಟಿಲ್ಲ. ಹತ್ತೆಂಟು ಹುಡುಗರನ್ನು ಸಂಗಡ ಹಲವರು ದಾಯಿಗ ೂಡನೆ ಕ್ಕೈಗಾಡಿಯಲ್ಲೋ ಮೂರು ಗಾಲಿಗಳ ಕಾಲುಗಾಡಿಯಲ್ಲೋ ಕುಳ್ಳಿರಿಸಿ ಕೊಂಡು ನಡುವೆ ಶಿಕ್ಷಿಕೆಯೊಬ್ಬಳು ಸಾಗಿರುವಂಥ ಪರಿಸ್ಥಿತಿಯು ಇಲ್ಲವೆ ಬಿನ್ ಇಯ ಶ್ರಿಯೊಂದಕ್ಕೆೀ ಮೂರು ಜನ ಶಿಕ್ಷಕರು, ಮೇಲೆ ತಪಾಸಣೆಗೆ ಹೆಡ್ ಮಾಸ್ತರರು, ವರ ಮೇಲೆ ಮಾರ್ಗದರ್ಶಿಗಳಾದ ಕಾಲೇಜದ ಶಿಕ್ಷಕರು, ಇವರೆಲ್ಲರನ್ನು ಮೀರಿದ ೫೦೦ ರೂಪಾಯಿ ಪಗಾರುಳ್ಳ ಯಾರಾದರೂ ನೋಡಲಿಕ್ಕೆ ಬಂದಾಗ ಫ್ರೊಬೆಲ್ ಮಾಂಟೆಸೋರಿ, ಡಾಲ್ಟನ್ ಮುಂತಾದ ಶಿಕ್ಷಣ ಶಾಸ್ತ್ರಜ್ಞರ ತತ್ವಗಳನ್ನು ಸೂರೆ ಮಾಡಲು ಸಮರ್ಥರಾದ ಪ್ರಿನ್ಸಿಪಾಲರೋ, ಲೇಡೀ ಸುಪರಿಂಟೆಂಡೆಂಟರೋ ಇಷ್ಟೆಲ್ಲ ವೈಭವವು, ನಮ್ಮ ಬಡ ಪ್ರಾಥಮಿಕ ಶಾಲೆಗಳಲ್ಲೆಲ್ಲ ದೊರೆಯಲಾರದು. ಆದುದರಿಂದ ಟ್ರೇನಿಂಗ ಕಾಲೇಜದ ನಾಟಕ ಶಾಲೆಯಲ್ಲಿ ನೋಡಿ ಬಂದ ಅಕ್ಷರ ಶಿಕ್ಷಣ ಕ್ರಮವು ಮೊದಲು ಹಲವು ವಸ್ತು ಚಿತ್ರಗಳನ್ನು ಸುತ್ತಲೂ ಹರಡಿಕೊಂಡು ದೊಡ್ಡದೊಂದು ಕಥೆಯನ್ನು ಆರಂಭಿಸಿ, "ರ" ಅನ್ನಿಸುವದು, ಹವೆಯಲ್ಲಿ ಕೈ ಬೆರಳಿನಿಂದ ಬರೆಯಿಸುವದು, ಉಸುಕಿನ ಕಾಗದವನ್ನು ಅಂಟಿಸಿ ಕತ್ತರಿಸಿಟ್ಟ "ರ" ಆಕೃತಿಯ ಮೇಲೆ ಕೈಯಾಡಿಸುವದು, "ರ" ದ ಪ್ಲಾಸ್ಟರಿನ ಮೊಡೆಲ್ಲಿನ ತಗ್ಗಿನಲ್ಲಿ ಬೆರಳಾಡಿಸುವದು, ಪಾಟಿಯ ಮೇಲೆ ಬೆರಳಿನಿಂದ ಬರೆಯಿಸುವದು, ತೊಯಿಸಿದ ನೂಲಿನಿಂದಲೂ, ಬೇಳೆ ಕಾಳುಗಳಿಂದಲೂ "ರ" ದ ಆಕೃತಿಯನ್ನು ಮಾಡಿಸುವದು ಇತ್ಯಾದಿ, ಇತ್ಯಾದಿ, ಆದ ಮೇಲೆ ಕೈಯಲ್ಲಿ ಪೆನ್ಸಿಲು ಹಿಡಿಯಿಸಿ ಶಿಕ್ಷಕನು ಬರೆಯಿಸುವದು, ಇಂತಹ ನೂರೊಂದು ಮೆಟ್ಟುಗಳಿಂದ ಸಾಗಲಿಕ್ಕೆ ನಮ್ಮ ಹಳ್ಳಿಯ ಸಾಲೆಗಳಲ್ಲಿ ಅವಕಾಶವೂ ಇಲ್ಲ; ಅನುಕೂಲತೆಯೂ ಇಲ್ಲ. ಟ್ರೇನಿಂಗ ಕಾಲೇಜದಲ್ಲಿ ನೋಡಿದ ನಾಟಕಕ್ಕೆ ಅವರು ಕೊಡುವ ಸರ್ಟಿಫಿಕೇಟೇ ಪ್ರತಿಫಲವು. ಅವರು ಕಲಿಸಿದ್ದನ್ನೆಲ್ಲ ವರ್ಷಾಂತ್ಯಕ್ಕೆ ಕೊಡುವ ಪ್ರಶ್ನಪತ್ರಕ್ಕೆ ಬರೆದುಕೊಡುವ ಉತ್ತರದ ಕಾಗದದಲ್ಲಿಯೇ ತಿರುಗಿ ಕೊಟ್ಟು ಬಿಟ್ಟು—"ಬಾಲಕ ರನ್ನು ಕಾಡಿ ಪೀಡಿಸದೆ ಒತ್ತಾಯಪಡಿಸದೆ ಅವರು ತಮ್ಮ ಉತ್ಸಾಹದಿಂದ ತಮ್ಮ ತಿಳುವಳಿಕೆಗೆ ತಂದುಕೊಂಡೇ ಎಲ್ಲ ವಿಷಯಗಳನ್ನು ಕಲಿಯುವಂತೆ ಶಿಕ್ಷಕನಾದ ವನು ಮಾರ್ಗದರ್ಶಿಯಾಗಿ, ಸಹಾಯಕನಾಗಿ ವರ್ತಿಸತಕ್ಕದ್ದು" ಎಂಬ ಒಂದೇ ಒಂದು ಬೀಜಮಂತ್ರವನ್ನು ಸದಾ ಸ್ಮರಿಸುತ್ತ ನಡೆದರೆ ಶಿಕ್ಷಕನು ಕೃತಕಾರ್ಯ ನಾಗುವನು, ಸಕಲ ಶ್ರೇಯಸ್ಸನ್ನೂ ಹೊಂದುವನು, ಅಂತಹ ಶಿಕ್ಷಕನಲ್ಲಿ ಕಲತ ವಿದ್ಯಾರ್ಥಿಗಳೂ ಧನ್ಯರಾಗುವರು ಎಂದು ನಮ್ಮ ಅಭಿಪ್ರಾಯವಿದೆ. ಈ ಲೇಖನ ವನ್ನು ಬರೆಯುವಾಗಲೂ ಈ ತತ್ವವನ್ನೇ ಮುಂದಿಟ್ಟುಕೊಂಡು ಬರೆದಿರುವೆವು.

ಕನ್ನಡ ವರ್ಣಮಾಲೆಯ ಗಾಳಿಯೂ ಕೂಡ ಸೋಂಕದ ಮುಂಬಯಿಯಂಥ ಊರಲ್ಲಿ ಹುಟ್ಟಿ ಬೆಳೆದ ೭ ವರುಷದ ಹುಡುಗನು ನಮ್ಮ ಸಾಲೆಗೆ ಬಂದ ಒಂದೂವರೆ ತಿಂಗಳಲ್ಲಿಯೇ ಬಾಲಬೋಧಿನಿ, ಸುಬೋಧಿನಿಗಳಿರಡನ್ನೂ ಓದಿ ಮುಗಿಸಿ ೧೦ ರವರೆಗೆ ಮುಗ್ಗಿಗಳನ್ನೂ ಕಲಿತ ಅನುಭವವು ಈಗ ನಮ್ಮ ಕಣ್ಣ ಮುಂದೆ ಕಟ್ಟಿರುವದು. ಶಿಕ್ಷಕನಿಗೂ ವಿದ್ಯಾರ್ಥಿಗಳಿಗೂ ಸ್ವಲ್ಪ ಶ್ರಮದಿಂದ ಹೆಚ್ಚು ಜ್ಞಾನವನ್ನು ಪೊರಕಿಸಲು ಸಾಧ್ಯವಾದ ಪದ್ಧತಿಯೇ ಹೆಚ್ಚು ಒಳ್ಳೆಯ ಹಾಗೂ ಸ್ವಾಭಾವಿಕವಾದ ಪದ್ಧತಿಯು. ಅಡಿಕೆ, ಆಕಳು, ಇತ್ಯಾದಿ ಶಬ್ದಗಳಿಂದ ಅ ಆ ಅಕ್ಷರಗಳ ಉಚ್ಚಾರಗಳನ್ನು ಕಲಿಸಬೇಕೆಂದು ಹೇಳುವವರಲ್ಲಿ ನಮ್ಮ ಉದ್ದೇಶವೇನೆಂದರೆ ಅ ಆ ಇತ್ಯಾದಿ ಅಕ್ಷರಗಳು ನಮ್ಮ ವ್ಯವಹಾರದೊಳಗಿನ ಪದಾರ್ಥಗಳನ್ನು ಸೂಚಿಸುವ ಪದಗಳಲ್ಲಿ ಸೇರಿರುವ ಅಕ್ಷರಗಳು; ಇವು ಬೇರೆ ಬೇರೆಯಾಗಿದ್ದಾಗ ಇವಕ್ಕೆ ಅರ್ಥವು ಇರದೆ ಇವ್ವರೂ ಇವುಗಳ ಯೋಗ್ಯವಾದ ಹೊಂದುವಿಕೆಯಿಂದ ಅರ್ಥವುಳ್ಳ ಪದಗಳು ಸಿದ್ಧವಾಗುತ್ತವೆ ಎಂಬ ಭಾವನೆಯನ್ನು ಹುಡುಗರಲ್ಲಿ ಹುಟ್ಟಿಸಿ ಅವರ ಬುದ್ಧಿಶಕ್ತಿ, ನಿಚಾರಶಕ್ತಿಗಳ ಬೆಳವಣಿಗೆಗೆ ಚಾಲನೆ ಕೊಡುವದು; ಒಂದು ಬರೇ ಪಾಟಿಯ ಮೇಲೆ ಅ ಆ ಗಳನ್ನು ಹಾಕಿ ಕೊಟ್ಟು ತೀಡಲಿಕ್ಕೆ ಹಚ್ಚುವದರಿಂದ ಬಾಲಕರಿಗೆ ಬೇಸರವುಂಟಾಗಿ ಸಾಲೆಯು ಬೇಸರದ ಸ್ಥಳವೆಂಬ ಕಲ್ಪನೆಯುಂಟಾಗದಂತೆ ನೋಡಿಕೊಳ್ಳುವದು; ಇನ್ನೊಂದು ಈ ಎರಡೂ ಮಾತುಗಳಿಗೆ ಆವಶ್ಯಕವೆನಿಸುವಷ್ಟೇ ಮುಖ್ಯ ವಿಷಯವಾದ ಅಕ್ಷರ ಜ್ಞಾನಕ್ಕೆ ಕೊರತೆಯುಂಟಾಗದಂತೆ ಕಾಲಾಪವ್ಯಯವಾಗದಂತೆ ಪಾಠ ಸಾಗಿಸಲಿಕ್ಕೆ ಸಾಕಷ್ಟೇ ಉಪಕರಣಗಳನ್ನು ಶಿಕ್ಷಕರು ಉಪಯೋಗಿಸಿಕೊಂಡರೆ ಸಾಕು ಆರು ವರುಷದ ಹಳ್ಳಿಯ ಹುಡುಗನ ಎದುರಿಗೆ ನಿಂತು " ರ, ರ, ರವದಿ" ಎಂದು ಒದರುವ. (ಹಳ್ಳಿಯಲ್ಲಿ ರಥವೆಲ್ಲಿಂದ ಬರಬೇಕು?) ಶಿಕ್ಷಕನು " ಇದೆಂಥ ಮಾಸ್ತರನೆಲೇ ರವದಿ ಮಾಸ್ತರ!" ಎಂದು ಹಳ್ಳಿಯ ಹೆಂಗುಸರಿಂದ ಹಾಸ್ಯ ಮಾಡಿಸಿಕೊಳ್ಳಲಿಕ್ಕೆ ತಕ್ಕವನಾಗುವದು ಸತ್ಯವೇ ಸರಿ.

ಅಕ್ಷರಗಳ ಉಚ್ಚಾರವನ್ನು ಕಲಿಸುವಾಗ ಶಿಕ್ಷಕರು ತುಂಬಾ ಎಚ್ಚರದಿಂದಿರಬೇಕು. ಬಾಲಕರು " ಅ ಸ ಸ " " ಅ ಸ ಸ ಸ " " ಇ ಸ ಸ ಈ ಸ ಸ ಸ " ಇತ್ಯಾದಿಯಾಗಿ ಎರಡೂ ಅಕ್ಷರಗಳನ್ನು ದೀರ್ಘವಾಗಿಯೇ, ಮೊದಲನೆಯದನ್ನು ಮೂರು ಮಾತ್ರೆಗಳಿಂದಲೂ, ಎರಡನೆಯದನ್ನು ೫—೬ ಮಾತ್ರೆಗಳಾಗಿಯೂ ಉಚ್ಚರಿಸಿ ಮೇಲಿನ ಷಡ್ಜವನ್ನೂ ವಿೂರಿ ಒನರಿ ರಾಗ ಮಾಡುತ್ತ ಬರೆಯುತ್ತಿರುವದನ್ನು ಹಲವು ಶಾಲೆಗಳಲ್ಲಿ ಕಾಣುವದು ಅಪರೂಪ. ಎಲ್ಲ ಬಾಲಕರು ಹ್ರಸ್ವವಾಗಿಯೇ ಒಂದೇ ಮಾತ್ರೆಯಿಂದ ಉಚ್ಚರಿಸುವಂತೆಯೂ ಅಲ್ಪಪ್ರಾಣ ಮಹಾಪ್ರಾಣಾಕ್ಷರಗಳನ್ನೂ ಋ, ರ, ಶ, ಷ, ಸ, ಲ, ಳ ಮುಂತಾದ ಉಚ್ಚಾರಕ್ಕೆ ಕಠಿಣವಾದ ಅಕ್ಷರಗಳನ್ನು ಬಾಲಕರು ತಕ್ಕಂತೆ ಉಚ್ಚರಿಸು

ವಂತೆಯೂ ನೋಡಿಕೊಳ್ಳುವದು ಶಿಕ್ಷಕನ ಜವಾಬುದಾರಿಯ ಕೆಲಸವು. ಉಚ್ಚಾರಕ್ಕೂ ಬರಹಕ್ಕೂ ನಿಕಟ ಸಂಬಂಧವಿದೆಯೆಂಬದನ್ನು ಮರೆಯಲಾಗದು.

ಮೂಲಾಕ್ಷರಗಳೂ ಅವುಗಳಿಂದಾಗುವ ಶಬ್ದಗಳ ರಚನೆಯೂ ಕೂಡಿಯೇ ಸಾಗತಕ್ಕದ್ದು. ಅಕ್ಷರಗಳನ್ನೂ ಶಬ್ದಗಳನ್ನೂ ಬರೆಯುವಾಗ ಅಕ್ಷರಗಳ ಸಣ್ಣ ದೊಡ್ಡ ಎಲ್ಲ ಅವಯವಗಳು ಸರಿಯಾಗಿರುವಂತೆ ನೋಡಿಕೊಳ್ಳತಕ್ಕದ್ದು. ಶಿಕ್ಷಕನು ಕರೀ ಹಲಿಗೆಯ ಮೇಲಾಗಲಿ, ಪಾಟಿಯ ಮೇಲಾಗಲಿ ಬರೆಯುವ ಅಕ್ಷರಗಳು ಮಾದರಿಯಾಗಿರತಕ್ಕದ್ದು. ತೀರ ಸಣ್ಣ ಹುಡುಗರ ವಿಷಯದಲ್ಲಿ ಮಾತ್ರ ಶಿಕ್ಷಕನ ಮಾದರಿಯ ಅಕ್ಷರದ ಮೇಲೆ ನಾಲ್ಕಾರು ಸಾರೆ ಮಾತ್ರ ಮೂಲ ಬರಹದ ರೂಪವು ಕೆಡದಂತೆ ತೀಡುವದು ಪ್ರಯೋಜನಕಾರಿಯಾಗಬಹುದು. ೫—೬ ವರ್ಷಗಳ ಹುಡುಗರ ಬೆರಳುಗಳೊಳಗಿನ ಸ್ನಾಯುಗಳು ತಕ್ಕಷ್ಟು ತಯಾರಾಗಿರುವದರಿಂದಲೂ ಅವರ ವೃಷ್ಟಿಯು ಸೂಕ್ಷ್ಮ ದೋಷಗಳನ್ನು ಕಂಡು ಹಿಡಿಯುವಷ್ಟು ಶಕ್ತಿಸಾಟವನ್ನು ಹೊಂದಿರುವವಾದ್ದರಿಂದಲೂ ಈ ತೀಡುವ ಪದ್ಧತಿಯು ಅನಾವಶ್ಯಕವೂ ಮಾದರಿಯ ಅಕ್ಷರಗಳನ್ನು ನೋಡಿ ಬರೆಯುವದೇ ಹೆಚ್ಚು ಪ್ರಶಸ್ತವೂ ಆಗಿದೆ.

ಮೂಲಾಕ್ಷರಗಳನ್ನು ಕಲಿಸುವದಕ್ಕೆ ಸಹಾಯಕವಾದ ಅ, ಆ, ಇ, ಈ ಪದ್ಧತಿಯನ್ನು ಅನುಸರಿಸಿ ಕಾರವಾರ ಜಿಲ್ಲೆಯ ಶಿಕ್ಷಕರೊಬ್ಬರು "ಸುಬೋಧಿನಿ" ಎಂಬ ಪುಸ್ತಕವೊಂದನ್ನು ತಯಾರಿಸಿದ್ದು ಸರಕಾರದವರು ಅದನ್ನು ಟೆಕ್ಸ್ಟ್ ಪುಸ್ತಕದಂತೆ ಉಪಯೋಗಿಸಲು ಮಂಜೂರಿಯನ್ನು ಸಹ ಕೊಟ್ಟಿರುವರೆಂದೂ ಕೇಳಿದ್ದೇವೆ. ಬಾಲಬೋಧಿನಿ, ಮೊದಲನೆಯ ಪುಸ್ತಕ ಇವೆರಡು ಪುಸ್ತಕಗಳು ಕೂಡಿದರೂ ಒಂದು ವರ್ಷದ ವಾಚನಕ್ಕೆ ಇವು ಸಾಲವೆಂಬದು ಸಹಜವೇ ಇದೆ. ಬಾಲಬೋಧಿನಿಯ ಪಾಠಗಳನ್ನೆಲ್ಲ ಮೊದಲಿನಿಂದ ಕೊನೆಯವರೆಗೆ ಪಾಠ ಅನ್ನುವ ಹುಡುಗರನ್ನು ನೋಡದೆ ಇದ್ದ ಶಿಕ್ಷಕನಿರಲಿಕ್ಕಿಲ್ಲ. ಈ ಕಾರಣದಿಂದಲೂ ಅ, ಆ, ಪದ್ಧತಿಯ ಅನುಕೂಲ್ಯಕ್ಕಾಗಿಯೂ "ಸುಬೋಧಿನಿ" ಯಂಥ ಬೇರೆ ಪುಸ್ತಕಗಳನ್ನು ಸಾಲೆಗಳಲ್ಲಿ ಉಪಯೋಗಿಸುವದು ಅತ್ಯವಶ್ಯವಾಗಿದೆ.

ಮೂಲಾಕ್ಷರಗಳನ್ನೂ, ಕಾಗುಣಿತಾಕ್ಷರಗಳನ್ನೂ ಕಲಿಸುವದಾದ ಬಳಿಕ ಒತ್ತಕ್ಷರಗಳನ್ನು ಕಲಿಸಬೇಕಾಗುವದು. ಗ, ತ, ನ, ಳ, ಮ, ಶ, ಋ (ಇದು ಗುಣಿತಾಕ್ಷರವೆಂದು ಹೇಳಬೇಕಾಗುವದು.) ರ, ಲ, ಇವುಗಳ ಒತ್ತರಕ್ಷರಗಳು ಮಾತ್ರ ತೀರ ವಿಕಾರವಾಗುವವು. ಈ ಒತ್ತಕ್ಷರಗಳನ್ನು ೧, ೨, ೩, ೪, ೫ (ತುಸು ವಿಕಾರವಾಗುವದು;) ೬, ೭ (ಇದು ್ಯ ಹೀಗೆ ತುಸು ಬದಲಾಗಬೇಕು) ೮, ೯, ೧೧ ಈ ಅಂಕಿಗಳಿಗೆ ಹೋಲಿಸಿ ಹೇಳಲಿಕ್ಕೆ ಬರುವದು. ಇಷ್ಟರಲ್ಲಿ ಬಾಲಕರು ಅಂಕಿಗಳನ್ನು ಕಲಿತಿರುವರೆಂಬದು ಸಹಜವು. ಮಿಕ್ಕ ಒತ್ತಕ್ಷರಗಳಲ್ಲಿ ಕೆಲವಕ್ಕೆ ತಲೆಕಟ್ಟು

ಹೋಗುವದು; ಮತ್ತೆ ಕೆಲವು ಇದ್ದಂತೆಯೇ ಇರುವವು. ಒತ್ತಕ್ಷರಗಳನ್ನು ಬರೆಯುವಾಗ ನಾವು ಉಚ್ಚರಿಸುವ ಕ್ರಮದಂತೆಯೇ ಬರೆಯಬೇಕಾಗುವದೆಂಬದನ್ನೂ ಕೊನೆಯ ಅಕ್ಷರದ ಸ್ವರವನ್ನು ಮೊದಲನೆಯ ಅಕ್ಷರಕ್ಕೆ ಸೇರಿಸಿ ಬರೆದು ಮಿಕ್ಕದ್ದನ್ನು ಒತ್ತಿನ ರೂಪದಿಂದ ಬರೆಯಬೇಕಾಗುವದೆಂಬದನ್ನೂ ತಿಳಿಸಬೇಕಾಗುವದು. ಮತ್ತು ಸೂರ್ಯ, ಸೂರ್ಯ ಈ ರೀತಿಯಾದ ಕೆಲವು ವಿಶಿಷ್ಟ ರೂಪಗಳನ್ನು ಬಾಲಕರಿಗೆ ತಿಳಿಯ ಹೇಳಬೇಕಾಗುವದು.

ಹುಡುಗರಿಗೆ ಬರಹದ ರೂಢಿಯನ್ನು ಮಾಡಿಸುವದರಲ್ಲಿ ಮೂರು ಮೆಟ್ಟುಗಳಿವೆ. ಶಿಕ್ಷಕನು ಬರೆದದ್ದನ್ನಾಗಲಿ ಪುಸ್ತಕಗಳನ್ನಾಗಲಿ ನೋಡಿ ಬರೆಯುವದು, ಒಂದು ಕೈಗೂ ಕಣ್ಣಿಗೂ ತಕ್ಕ ಚಾಲನೆ ಕೊಟ್ಟು ಸುಂದರವಾಗಿ ಬರೆಯುವ ರೂಢಿಯಾಗುವದಕ್ಕೆ ಇದರಿಂದ ಸಹಾಯವಾಗಬಹುದು. ಶಿಕ್ಷಕನು ಹೇಳಿದ್ದನ್ನು ಕೇಳಿ ಬರೆಯುವದು ಎರಡನೆಯ ಮೆಟ್ಟು; ಇದರಿಂದ ಕಿವಿಗೂ ಸ್ಮರಣಶಕ್ತಿಗೂ ಹೆಚ್ಚಿನ ಚಾಲನೆ ದೊರೆಯುವದು. ಈ ಪ್ರಸಂಗದಲ್ಲಿ ಶಿಕ್ಷಕನು ಒಂದೇ ಸಾರಿ ಸ್ಪಷ್ಟವಾಗಿ ಉಚ್ಚರಿಸಬೇಕೆಂಬದನ್ನೂ ಶಿಕ್ಷಕನು ಹೇಳುವಾಗ ಬಾಲಕರೆಲ್ಲರೂ ಆ ಕಡೆಗೇ ಲಕ್ಷ್ಯವಿಟ್ಟಿರಬೇಕೆಂಬದನ್ನೂ ಶಿಕ್ಷಕನು ಹೇಳುವದಾದ ಬಳಿಕ ಬಾಲಕರು ಅದನ್ನು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತ ಬರೆಯಬೇಕೆಂಬದನ್ನು ತುಂಬಾ ಲಕ್ಷ್ಯದಲ್ಲಿಡಬೇಕು. ಪದಾರ್ಥ, ಚಿತ್ರ, ಬೇರೆ ಬೇರೆ ಕೃತಿಗಳು ಇವುಗಳನ್ನು ನೋಡಿ ಶಬ್ದಗಳನ್ನೂ ವಾಕ್ಯಗಳನ್ನೂ ಬರೆಯುವ ರೂಢಿ ಮಾಡಿಸುವದು ಮೂರನೆಯ ಮಹತ್ವದ ಮೆಟ್ಟು, ಶಿಕ್ಷಕನು ಪುಸ್ತಕ, ಪಾತ್ರೆ, ಹಣ್ಣು ಮುಂತಾದ ಪದಾರ್ಥಗಳನ್ನೂ ಚಿತ್ರಗಳನ್ನೂ ತೋರಿಸಿ ಅವುಗಳ ಹೆಸರುಗಳನ್ನು ಪಾಟಿಯ ಮೇಲೆ ಬರೆಯಲಿಕ್ಕೆ ವಿದ್ಯಾರ್ಥಿಗಳಿಗೆ ಹೇಳುವದರಿಂದ ಬಾಲಕರ ಭಾಷಾಜ್ಞಾನವೂ ಶಬ್ದಸ್ವರೂಪಜ್ಞಾನವೂ ಬೆಳೆದು ದೃಢವಾಗಲಿಕ್ಕೆ ಸಹಾಯವಾಗುವದು. ಇದರಿಂದ ಬಾಲಕರ ನಿಜವಾದ ಯೋಗ್ಯತೆಯ ಪರೀಕ್ಷೆಗೆ ಸಹಾಯವಾಗುವದು. ಇದೇ ಮೇರೆಗೆ ಪುಸ್ತಕವು ಬಿದ್ದದ್ದನ್ನು ಇಲ್ಲವೆ ಕಾಗದವು ಗಾಳಿಯಿಂದ ಹಾರಿದ್ದನ್ನು ನೋಡಿ "ಪುಸ್ತಕವು ಕೆಳಗೆ ಬಿದ್ದಿತು" "ಕಾಗದವು ಗಾಳಿಯಿಂದ ಹಾರಿತು" ಮುಂತಾದ ವಾಕ್ಯಗಳನ್ನು ಬರೆಯಿಸುವ ರೂಢಿಯನ್ನು ಮಾಡಿಸಬೇಕು. ಬಾಲಕರು ಯಾವದಾದರೊಂದು ಪದಾರ್ಥವು ತಮಗೆ ಬೇಕೆನಿಸಿದಾಗ ಅದನ್ನು ಅವರು ಬರೆದು ತಿಳಿಸಬೇಕೆಂಬ ನಿಯಮವನ್ನು ಮಾಡಿಕೊಳ್ಳುವದರಿಂದಲೂ ಬಾಲಕರು ಮಾಡಬೇಕಾದ ಸಾಮಾನ್ಯ ಕೆಲಸಗಳನ್ನು ಸೂಚಿಸುವ ವಾಕ್ಯಗಳನ್ನು ಕರೀ ಹಲಿಗೆಯಮೇಲೆ ಬರೆಯುವದರಿಂದಲೂ ಈ ತರದರೂಢಿಗೆ ಹೆಚ್ಚು ಅನುಕೂಲವಾಗುವದು. ಇದರಿಂದ ಶಾಲೆಯ ಶಿಸ್ತಿಗೂ ಹೆಚ್ಚು ಸಹಾಯವಾಗುವದು. ಒಳ್ಳೇ ಶಿಸ್ತುಳ್ಳ ಶಿಕ್ಷಕನ ವರ್ಗದ ಬಾಲಕರು ಶಿಕ್ಷಕನು "ಸುಮ್ಮನಾಗಿರಿ" ಎಂದ ಕೂಡಲೆ ಸುಮ್ಮನೆ ಕೂಡ್ರುವಂತೆ ಅವೇ ಮಾತುಗಳನ್ನು ಕರೀ ಹಲಿಗೆಯ ಮೇಲೆ ಬರೆದ

ಕೂಡಲೆ ಅವನ್ನು ಓದಿ ಎಲ್ಲ ಬಾಲಕರು ಯಾಕೆ ಸುಮ್ಮನಾಗಬಾರದು? ಮುಂದಿನ ಇಯತ್ತೆಗಳಲ್ಲಿ ಗಣಿತ ಮುಂತಾದ ವಿಷಯಗಳ ಪ್ರಶ್ನೆಗಳನ್ನು ಕರೇ ಹಲಿಗೆಯ ಮೇಲೆ ಶಿಕ್ಷಕನು ಬರೆದದ್ದನ್ನು ಓದಿ ಬರೆದುಕೊಳ್ಳುವ ರೂಢಿಯಿರುವದಲ್ಲವೇ! ಅದರಂತೆ ಪ್ರತ್ಯಕ್ಷದಲ್ಲಿಲ್ಲದಾಗ ನಮಗೆ ಬೇಕಾದ ಯಾವದಾದರೊಂದು ಪದಾರ್ಥವನ್ನ ಪಡೆಯಬೇಕಾದರೆ ಹೀಗೆ ಬರಹದಿಂದಲೇ ತಿಳಿಸುವೆವಲ್ಲವೇ? ಬರಹವನ್ನು ಕಲಿಯುವ ಉದ್ದೇಶವೂ ಕೂಡ ನಮ್ಮ ಭಾವನೆಗಳನ್ನೂ ಬೇಡಿಕೆಗಳನ್ನೂ ಅನ್ಯರಿಗೆ ತಿಳಿಸಲಿಕ್ಕೆ ಸಹಾಯವಾಗಬೇಕೆಂಬುದೇ ಅಲ್ಲವೇ? ಹೀಗಿರುವದರಿಂದ ಈ ಮಾತುಗಳನ್ನು ಸಾಲೆಯಲ್ಲಿ ಆರಂಭದಿಂದಲೇ ಪ್ರಾರಂಭಿಸುವದು ಸ್ವಾಭಾವಿಕವೂ ಆವಶ್ಯಕವೂ ಆದ ಮಾತಾಗಿದೆ.

ಮೊದಲನೆಯ ಇಯತ್ತೆಯ ಬಾಲಕರು ಓದುವಾಗ ತಾವು ಏನು ಓದುತ್ತೇವೆಂಬದನ್ನು ತಿಳಿದುಕೊಂಡು ಓದಿದರೆ ಸಾಕು. ಅವರು ಓದಿದ ಪಾಠವನ್ನೇ ಕಥೆಯ ರೂಪದಿಂದ ತಿರುಗಿ ಹೇಳಲಿಕ್ಕೆ ಅವರಿಗೆ ಬರುವದೋ ಹೇಗೆಂಬದನ್ನು ನೋಡುವದೆಂಬ ಶಿಕ್ಷಕನು ಇದನ್ನು ಮನಗಾಣಬಹುದು. ವಾಚನಕ್ಕೆ ಸಂಬಂಧಿಸಿದ ಹೆಚ್ಚಿನ ವಿಚಾರಗಳಿಗೆ ಈ ಇಯತ್ತೆಯ ಅವಕಾಶವಿರಲಾರದು. ಆದುದರಿಂದಲೇ ಇಯತ್ತಾ ಪತ್ರಿಕೆಯಲ್ಲಿ ಇವರಿಗೆ ಅರ್ಥವಿವರಣೆಯ ವಿಚಾರವನ್ನು ಹೇಳಿಲ್ಲ.

ಮಕ್ಕಳ ಮಲಬದ್ಧತೆ.

ಲೇಖಕರು— ವಿ. ಸಿ. ರೇ. ಶಬರದ ಕ. ಸು ಡಿ ಸ್ಕೂ. ಬೆಳಗಾವ.

ದೇಹ ಪರೀಕ್ಷೆಯನ್ನು ಮಾಡುವದರಿಂದ ಮಕ್ಕಳ ಮಲಬದ್ಧತೆಯ ಕಾರಣವು ಬಹಳ ಕಡೆಗಳಲ್ಲಿ ಗೊತ್ತಾಗಿರುವದಿಲ್ಲ. ಅದರೆ ಅವರಿಗೆ ಕೊಡುವ ಪಥ್ಯೆಯನ್ನು ಪರೀಕ್ಷಿಸುವದರಿಂದ ಅದರ ಕಾರಣವು ಗೊತ್ತಾಗಿದೆ.

ಮಕ್ಕಳು ದಿನದಲ್ಲಿ ಎಷ್ಟುಸಾರೆ ಮಲವಿಸರ್ಜನೆ ಮಾಡಬೇಕೆಂಬದು ಅವರ ಪಥ್ಯೆ ಹಾಗು ಸಾಧಾರಣ ಸ್ವಾಸ್ಥ್ಯದ ಮೇಲೆ ಅವಲಂಬಿಸಿರುವದು. ಸಾಧಾರಣವಾಗಿ ಆಳಿನ ಹಾಲು ಕುಡಿಯುವ ಕೂಸಿಗಿಂತ ತಾಯಿಯ ಹಾಲು ಕುಡಿಯುವ ಕೂಸುಗಳು ತುಸು ಹೆಚ್ಚುಸಾರೆ ಮಲವಿಸರ್ಜನೆ ಮಾಡುತ್ತಿರುವವು. ತಾಯಿ

ಯ ಹಾಲು ಕುಡಿಯುವ ಕೂಸು ದಿವಸಕ್ಕೆ ಎರಡು ಮೂರು ಸಾರಿ, ಮತ್ತು ಆಕಳ ಹಾಲು ಕುಡಿಯುವ ಕೂಸು ದಿವಸಕ್ಕೆ ಒಂದೆರಡು ಸಾರಿ ಮಲವಿಸರ್ಜನೆ ಮಾಡುವದು ಸ್ವಾಭಾವಿಕವು. ಕೆಲ ಕೆಲವು ಸಾರಿ ತಾಯಿಯ ಹಾಲು ಕುಡಿಯುವ ಕೂಸು ದಿವಸಕ್ಕೆ ಆರೇಳು ಸಾರೆ ಮಲವಿಸರ್ಜನೆ ಮಾಡಿಯೂ ಸಂಪೂರ್ಣ ಸುಸ್ಥವಾಗಿರುವವು. ಮಕ್ಕಳ ಮಲದ ಪರಿಮಾಣವೂ, ಸಂಖೆಯೂ ತುಸು ಕಡಿಮೆಯಾದೊಡನೆಯೆ ಅವುಗಳ ತಾಯಿತಂದೆಗಳು ಚಿಂತಿತರಾಗಿ, ಅವುಗಳ ಕೋಷ್ಠ ಬದ್ಧತೆಯ ನಿವಾರಣೆಗಾಗಿ ಚಡಪಡಿಸತೊಡಗುವರು. ಅನೇಕ ಅನಾವಶ್ಯಕರವಾದ ಔಷಧಗಳನ್ನು ಮಕ್ಕಳಿಗೆ ಬಲಾತ್ಕಾರದಿಂದ ಕುಡಿಸಿ ಅವರ ದೇಹಾರೋಗ್ಯತೆಯನ್ನು ಕೆಡಿಸಿ ಬಿಡುವರು. ಹೀಗೆ ಮಾಡದೆ ' ಮಕ್ಕಳಿಗೆ ನಿಜವಾಗಿಯೆ ಮಲಬದ್ಧತೆಯುಂಟಾಗಿರುವದೋ ಹೇಗೆ? ಮತ್ತು ಅದು ಎಷ್ಟು ದಿವಸದಿಂದ ಸ್ಥಿರವಾಗಿದ್ದುಕೂಂಡಿರುವದು? ಹಾಗು ಅದರ ಕಾರಣವೇನು? ಎಂಬದರ ಬಗ್ಗೆ ತುಸು ಸಾವಧಾನದಿಂದ ಅಲೋಚಿಸಿ ನೋಡಿ ತಿಳಿದುಕೊಳ್ಳಬೇಕು. ತಾಯಿಯ ಹಾಲು ಕುಡಿಯುವ ಕೂಸು ದಿನಾಲು ಎರಡು ಮೂರು ಸಾರಿ ಮತ್ತು ಆಕಳ ಹಾಲು ಕುಡಿಯುವ ಕೂಸು ದಿವಸಕ್ಕೆ ಒಂದೆರಡುಸಾರಿ, ಮಲವಿಸರ್ಜನೆ ಮಾಡುವದೆಂಬದನ್ನು ಸಂಪೂರ್ಣ ಲಕ್ಷದಲ್ಲಿಟ್ಟುಕೊಂಡೇ ಮಕ್ಕಳಿಗೆ ನಿಜವಾಗಿ ಮಲಬದ್ಧತೆಯುಂಟಾಗಿರುವದೋ ಹೇಗೆಂಬದನ್ನು ವಿಚಾರಿಸಬೇಕು.

ಕಾರಣ—ಕೆಳಗೆ ಬರೆದ ಕೆಲವು ಕಾರಣಗಳಿಂದ ಮಕ್ಕಳಿಗೆ ಮಲಬದ್ಧತೆಯುಂಟಾಗುವದು. ಆದ್ದರಿಂದ ಮಲಬದ್ಧತೆಯ ಕಾರಣವನ್ನು ಕಂಡುಹಿಡಿದು, ಅದಕ್ಕೆ ತಕ್ಕ ಪ್ರತಿಕಾರವನ್ನು ಮಾಡುವದು ಅವಶ್ಯಕವಾದದ್ದರಿಂದ ಈ ಕಾರಣಗಳಕಡೆಗೆ ಲಕ್ಷಗೊಡುವದು ಉತ್ತಮವು.

೧ ಅನಿಯಮಿತ ಮಲವಿಸರ್ಜನೆ—ಅನೇಕ ಸಮಯದಲ್ಲಿ ಕೇವಲ ಅಭ್ಯಾಸದ ದೋಷದಿಂದಲೇ ಮಕ್ಕಳಿಗೆ ಮಲಬದ್ಧತೆಯುಂಟಾಗುವದು. ದಿನಾಲು ಗೊತ್ತುಮಾಡಿದ ಹೊತ್ತಿಗೆ ಮಕ್ಕಳಿಗೆ ಮಲವಿಸರ್ಜನೆ ಮಾಡಿಸುವ ರೂಢಿಯನ್ನಿಟ್ಟರೆ ಗಡಿಯಾರದ ಮುಳ್ಳಿನಂತೆ ನಿಯಮಿತ ಹೊತ್ತಿಗೆ ಮಕ್ಕಳು ತಮ್ಮಿಂದ ತಾವೇ ಮಲವಿಸರ್ಜನೆ ಮಾಡುವವು. ಮಕ್ಕಳು ನಿಯಮಿತ ಹೊತ್ತಿಗೆ ಮಲವಿಸರ್ಜನೆ ಮಾಡಬೇಕೆಂದು ತಾಯಿತಂದೆಗಳ ಅಪೇಕ್ಷೆಯಿದ್ದರೆ ಕೂಸುಗಳಿಗೆ ನಿಯಮಿತ ಹೊತ್ತಿಗೆ ಆಹಾರವನ್ನು ಕೊಡುವದು ಅವರ ಮುಖ್ಯ ಕರ್ತವ್ಯವು. ಮಲವಿಸರ್ಜನೆಯ ಸಮಯಕ್ಕೆ ಒಂದು ವೇಳೆ ಮಕ್ಕಳಿಗೆ ಯಾವದಾದರೊಂದು ಬಗೆಯ ಅಡ್ಡಿಯೊದಗಿದ್ದರೆ, (ಅಂದರೆ ಅತ್ಯಂತವಾದ ಹಸಿವೆ, ತಂಪುತಗಲುವಿಕೆ, ಅಥವಾ ಬೇರೆಯಾವದಾದರೊಂದು ಬಗೆಯ ಕಷ್ಟದಾಯಕ ವ್ಯಾಪಾರದಲ್ಲಿ ಅವರ ಮನಸು ತೊಡಗುವದು) ಅವರಿಗೆ ಮಲವಿಸರ್ಜನೆಯಾಗುವದಿಲ್ಲ. ಒಂದು

ವೇಳೆ ದಿನಾಲು ಈ ತರಹದ ಅನಿಯಮಿತತ್ವವು ಒದಗಹತ್ತಿದರೆ ಮಕ್ಕಳಿಗೆ ಬೇಗನೆ ಮಲಬದ್ಧತೆಯುಂಟಾಗುವದು. ಒಮ್ಮೊಮ್ಮೆ ತಾಯಿತಂದೆಗಳು ಮಕ್ಕಳ ಮಲಬದ್ಧತೆಯನ್ನು ಕಂಡೊಡನೆಯೆ ಬೇರೆ ಬೇರೆ ಪ್ರಕಾರದ ಔಷಧಗಳನ್ನು ಹಾಕತೊಡಗುವರು; ಇದರಿಂದ ಮಕ್ಕಳು ಕ್ರಮವಾಗಿ ತಮ್ಮಿಂದತಾವೇ ಮಲವಿಸರ್ಜನೆಮಾಡುವದನ್ನು ಮರೆತು ಬಿಡುವವು.

೯ ಆಹಾರವು ಪಚನವಾದನೆಮೇಲೆ ಮಲವನ್ನುಂಟುಮಾಡುವ ಅಸಾರ ದ್ರವ್ಯದ ಅಭಾವ—ಮಕ್ಕಳ ಆಹಾರವು ತಿಳುವಾಗಿರುವದು. ಈ ಆಹಾರದೊಳಗಿನ ನೀರಿನ ಭಾಗವು, ದೇಹದ ಆವಶ್ಯಕೀಯ ನೀರಿನ ಕೊರತೆಯನ್ನು ಪೂರೈಸಿ ಉಳಿದ ಹೆಚ್ಚಿನ ಭಾಗವು ಮೂತ್ರರೂಪದಿಂದ ದೇಹದಿಂದ ಹೊರಬಿದ್ದು ಹೋಗುವದು. ನೀರಿನ ಅಂಶವನ್ನು ಬಿಟ್ಟು ಮಕ್ಕಳ ಆಹಾರದಲ್ಲಿ ಇನ್ನೊಂದು ಬಗೆಯ ಪದಾರ್ಥವಿರುವದು; ಅದಾದರೂ ಒಂದು ವೇಳೆ ಮಕ್ಕಳ ದೇಹದ ಭಾರಹಾಗು ಬೆಳವಣಿಗೆ, ಮತ್ತು ವಯಸಿಗನುಸರಿಸಿ ಅನುಪಯುಕ್ತವೂ ಕಡಿಮೆಯೂ ಆಗಿದ್ದರೆ ಅದು ಪಚನವಾಗಿ ರಕ್ತವಾದಮೇಲೆ ಮಲವಾಗುವದಕ್ಕೆ ಬೇಕಾದ ಅಜೀರ್ಣ ಪದಾರ್ಥವು ಎಷ್ಟೂ ಉಳಿದಿರುವದಿಲ್ಲ. ಆದ್ದರಿಂದ ಮಕ್ಕಳ ವಯಸ್ಸಿಗನುಸರಿಸಿ, ಅವರ ಆಹಾರದಲ್ಲಿ ಸಾರ ಹಾಗು ಅಸಾರ ಅಂಶದ ಪರಿಮಾಣವು ಕಡಿಮೆಯಾದರೆ, ಅವರಿಗೆ ಮಲಬದ್ಧತೆಯುಂಟಾಗುವ ಸಂಭವವು ವಿಶೇಷವಾಗಿರುವದು.

೩ ಮಕ್ಕಳ ಕರಳುಗಳ ಕ್ಷೀಣತೆ—ಮಕ್ಕಳ ಕರಳುಗಳು ಒಳಮಗ್ಗಲು ತಿಳುವಾಗಿಯೂ, ಕ್ಷೀಣವಾಗಿಯೂ ಇರುವವು. ಆದ್ದರಿಂದ ಪಚನವಾಗಿ ಉಳಿದ ಅಸಾರವಾದ ಅಂಶವನ್ನು ಮಕ್ಕಳ ಕರುಳುಗಳು ಸಹಜವಾಗಿ ಹೊರಗೆ ಹಾಕಲಾರದೆಂದೇ ಅವರಿಗೆ ಮಲಬದ್ಧತೆಯುಂಟಾಗುವದರಲ್ಲಿ ಆಶ್ಚರ್ಯವಿಲ್ಲ ಇದರ ಮೇಲೆ ಮಕ್ಕಳು ಒಂದು ವೇಳೆ ರಕ್ತಹೀನರೂ ನಿಸ್ತೇಜ ಹಾಗು ದುರ್ಬಲರೂ ಆದರೆ ಅವರ ಕರಳುಗಳು ಮತ್ತಿಷ್ಟು ಕ್ಷೀಣವಾಗುವವು. ಇಂಥಲ್ಲಿ ಕರುಳುಗಳ ಕ್ರಿಮಿಗತಿಯು ಅಥವಾ ಆಕುಂಚನ ಪ್ರವಾಹವು ಅತಿಶಯ ಮೃದುವಾಗುವದು. ಆದ್ದರಿಂದ ಇಂಥ ಮಕ್ಕಳಿಗೆ ಮಲಬದ್ಧತೆಯು ಅತಿ ಸಹಜವಾಗಿ ಉಂಟಾಗುವದು.

ಮೊದಲೇ ಮಕ್ಕಳ ಕರಳುಗಳ ಸಂಚರಣಶೀಲತೆ ಅಥವಾ ಗತಿಶೀಲತೆಯು ಮೃದುವು, ಅದರಮೇಲೆ ಮತ್ತೆ ಜೀರ್ಣಾವಶಿಷ್ಟ ಅಸಾರ ಪದಾರ್ಥದ ಅಭಾವವು, ಈ ಎರಡೂ ಕಾರಣಗಳು ಒತ್ತಟ್ಟಿಗೆ ಸಮಾವೇಶವಾದರೆ ಮಲಬದ್ಧತೆಯು ಅವಶ್ಯವಾಗಿ ಆಗೇ ಆಗುವದು. ಇಂಥಲ್ಲಿ ದೊಡ್ಡ ಕರುಳಿನ ಕೆಳಭಾಗದಲ್ಲಿ ಸಾಮಾನ್ಯ ಪರಿಮಾಣದಿಂದ ಮಲವು ಸಂಚಿತವಾಗಿ ಕ್ರಮವಾಗಿ ಅದು ಒಣ

ಯ ಹಾಲು ಕುಡಿಯುವ ಕೂಸು ದಿವಸಕ್ಕೆ ಎರಡು ಮೂರು ಸಾರಿ, ಮತ್ತು ಆಕಳ ಹಾಲು ಕುಡಿಯುವ ಕೂಸು ದಿವಸಕ್ಕೆ ಒಂದೆರಡು ಸಾರಿ ಮಲವಿಸರ್ಜನೆ ಮಾಡುವದು ಸ್ವಾಭಾವಿಕವು. ಕೆಲ ಕೆಲವು ಸಾರಿ ತಾಯಿಯ ಹಾಲು ಕುಡಿಯುವ ಕೂಸು ದಿವಸಕ್ಕೆ ಆರೇಳು ಸಾರಿ ಮಲವಿಸರ್ಜನೆ ಮಾಡಿಯೂ ಸಂಪೂರ್ಣ ಸುಸ್ಥವಾಗಿರುವವು. ಮಕ್ಕಳ ಮಲದ ಪರಿಮಾಣವೂ, ಸಂಖೆಯೂ ತುಸು ಕಡಿಮೆಯಾದೊಡನೆಯೆ ಅವುಗಳ ತಾಯಿತಂದೆಗಳು ಚಿಂತಿತರಾಗಿ, ಅವುಗಳ ಕೋಷ್ಠ ಬದ್ಧತೆಯ ನಿವಾರಣೆಗಾಗಿ ಚಡಪಡಿಸತೊಡಗುವರು. ಅನೇಕ ಅಸಹ್ಯಕರವಾದ ಔಷಧಗಳನ್ನು ಮಕ್ಕಳಿಗೆ ಬಲಾತ್ಕಾರದಿಂದ ಕುಡಿಸಿ ಅವರ ದೇಹಾರೋಗ್ಯತೆಯನ್ನು ಕೆಡಿಸಿ ಬಿಡುವರು. ಹೀಗೆ ಮಾಡದೆ 'ಮಕ್ಕಳಿಗೆ ನಿಜವಾಗಿಯೆ ಮಲಬದ್ಧತೆಯುಂಟಾಗಿರುವದೋ ಹೇಗೆ? ಮತ್ತು ಅದು ಎಷ್ಟು ದಿವಸದಿಂದ ಸ್ಥಿರವಾಗಿದ್ದುಕೊಂಡಿರುವದು? ಹಾಗು ಅದರ ಕಾರಣವೇನು? ಎಂಬದರ ಬಗ್ಗೆ ತುಸು ಸಾವಧಾನದಿಂದ ಆಲೋಚಿಸಿ ನೋಡಿ ತಿಳಿದುಕೊಳ್ಳಬೇಕು. ತಾಯಿಯ ಹಾಲು ಕುಡಿಯುವ ಕೂಸು ದಿನಾಲು ಎರಡು ಮೂರು ಸಾರಿ ಮತ್ತು ಆಕಳ ಹಾಲು ಕುಡಿಯುವ ಕೂಸು ದಿವಸಕ್ಕೆ ಒಂದೆರಡುಸಾರಿ, ಮಲವಿಸರ್ಜನೆ ಮಾಡುವದೆಂಬದನ್ನು ಸಂಪೂರ್ಣ ಲಕ್ಷದಲ್ಲಿಟ್ಟುಕೊಂಡೇ ಮಕ್ಕಳಿಗೆ ನಿಜವಾಗಿ ಮಲಬದ್ಧತೆಯುಂಟಾಗಿರುವದೋ ಹೇಗೆಂಬದನ್ನು ವಿಚಾರಿಸಬೇಕು.

ಕಾರಣ—ಕೆಳಗೆ ಬರೆದ ಕೆಲವು ಕಾರಣಗಳಿಂದ ಮಕ್ಕಳಿಗೆ ಮಲಬದ್ಧತೆಯುಂಟಾಗುವದು. ಆದ್ದರಿಂದ ಮಲಬದ್ಧತೆಯ ಕಾರಣವನ್ನು ಕಂಡುಹಿಡಿದು, ಅದಕ್ಕೆ ತಕ್ಕ ಪ್ರತಿಕಾರವನ್ನು ಮಾಡುವದು ಅವಶ್ಯಕವಾದದ್ದರಿಂದ ಈ ಕಾರಣಗಳಕಡೆಗೆ ಲಕ್ಷಗೊಡುವದು ಉತ್ತಮವು.

೧ ಅನಿಯಮಿತ ಮಲವಿಸರ್ಜನೆ—ಅನೇಕ ಸಮಯದಲ್ಲಿ ಕೇವಲ ಅಭ್ಯಾಸದ ದೋಷದಿಂದಲೇ ಮಕ್ಕಳಿಗೆ ಮಲಬದ್ಧತೆಯುಂಟಾಗುವದು. ದಿನಾಲು ಗೊತ್ತುಮಾಡಿದ ಹೊತ್ತಿಗೆ ಮಕ್ಕಳಿಗೆ ಮಲವಿಸರ್ಜನೆ ಮಾಡಿಸುವ ರೂಢಿಯನ್ನಿಟ್ಟರೆ ಗಡಿಯಾರದ ಮುಳ್ಳಿನಂತೆ ನಿಯಮಿತ ಹೊತ್ತಿಗೆ ಮಕ್ಕಳು ತಮ್ಮಿಂದ ತಾವೇ ಮಲವಿಸರ್ಜನೆ ಮಾಡುವವು. ಮಕ್ಕಳು ನಿಯಮಿತ ಹೊತ್ತಿಗೆ ಮಲವಿಸರ್ಜನೆ ಮಾಡಬೇಕೆಂದು ತಾಯಿತಂದೆಗಳ ಅಪೇಕ್ಷೆಯಿದ್ದರೆ ಕೂಸುಗಳಿಗೆ ನಿಯಮಿತ ಹೊತ್ತಿಗೆ ಆಹಾರವನ್ನು ಕೊಡುವದು ಅವರ ಮುಖ್ಯ ಕರ್ತವ್ಯವು. ಮಲವಿಸರ್ಜನೆಯ ಸಮಯಕ್ಕೆ ಒಂದು ವೇಳೆ ಮಕ್ಕಳಿಗೆ ಯಾವದಾದರೊಂದು ಬಗೆಯ ಅಡ್ಡಿಯೊದಗಿದ್ದರೆ, (ಅಂದರೆ ಅತ್ಯಂತವಾದ ಹಸಿವೆ, ತಂಪುತಗಲುವಿಕೆ, ಅಥವಾ ಬೇರೆಯಾವದಾದರೊಂದು ಬಗೆಯ ಕಷ್ಟದಾಯಕ ವ್ಯಾಪಾರದಲ್ಲಿ ಅವರ ಮನಸು ತೊಡಗುವದು) ಅವರಿಗೆ ಮಲವಿಸರ್ಜನೆಯಾಗುವದಿಲ್ಲ. ಒಂದು

ವೇಳೆ ದಿನಾಲು ಈ ತರಹದ ಅನಿಯಮಿತತ್ವವು ಒದಗಹತ್ತಿದರೆ ಮಕ್ಕಳಿಗೆ ಬೇಗನೆ ಮಲಬದ್ಧತೆಯುಂಟಾಗುವದು. ಒಮ್ಮೊಮ್ಮೆ ತಾಯಿತಂದೆಗಳು ಮಕ್ಕಳ ಮಲಬದ್ಧತೆಯನ್ನು ಕಂಡೊಡನೆಯೆ ಬೇರೆ ಬೇರೆ ಪ್ರಕಾರದ ಔಷಧಗಳನ್ನು ಹಾಕತೊಡಗುವರು; ಇದರಿಂದ ಮಕ್ಕಳು ಕ್ರಮವಾಗಿ ತಮ್ಮಿಂದತಾವೇ ಮಲವಿಸರ್ಜನೆಮಾಡುವದನ್ನು ಮರೆತು ಬಿಡುವವು.

೧ ಆಹಾರವು ಪಚನವಾದನೇಲೆ ಮಲವನ್ನುಂಟುಮಾಡುವ ಅಸಾರ ದ್ರವ್ಯದ ಅಭಾವ—ಮಕ್ಕಳ ಆಹಾರವು ತಿಳುವಾಗಿರುವದು. ಈ ಆಹಾರದೊಳಗಿನ ನೀರಿನ ಭಾಗವು, ದೇಹದ ಆವಶ್ಯಕೀಯ ನೀರಿನ ಕೊರತೆಯನ್ನು ಪೂರೈಸಿ ಉಳಿದ ಹೆಚ್ಚಿನ ಭಾಗವು ಮೂತ್ರರೂಪದಿಂದ ದೇಹದಿಂದ ಹೊರಬಿದ್ದು ಹೋಗುವದು. ನೀರಿನ ಅಂಶವನ್ನು ಬಿಟ್ಟು ಮಕ್ಕಳ ಆಹಾರದಲ್ಲಿ ಇನ್ನೊಂದು ಬಗೆಯ ಪದಾರ್ಥವಿರುವದು; ಅದಾದರೂ ಒಂದು ವೇಳೆ ಮಕ್ಕಳ ದೇಹದ ಭಾರಹಾಗು ಬೆಳವಣಿಗೆ, ಮತ್ತು ವಯಸಿಗನುಸರಿಸಿ ಅನುಪಯುಕ್ತವೂ ಕಡಿಮೆಯೂ ಆಗಿದ್ದರೆ ಅದು ಪಚನವಾಗಿ ರಕ್ತವಾದಮೇಲೆ ಮಲವಾಗುವದಕ್ಕೆ ಬೇಕಾದ ಅಜೀರ್ಣ ಪದಾರ್ಥವು ಎಷ್ಟೂ ಉಳಿದಿರುವದಿಲ್ಲ. ಆದ್ದರಿಂದ ಮಕ್ಕಳ ವಯಸ್ಸಿಗನುಸರಿಸಿ, ಅವರ ಆಹಾರದಲ್ಲಿ ಸಾರ ಹಾಗು ಅಸಾರ ಅಂಶದ ಪರಿಮಾಣವು ಕಡಿಮೆಯಾದರೆ, ಅವರಿಗೆ ಮಲಬದ್ಧತೆಯುಂಟಾಗುವ ಸಂಭವವು ವಿಶೇಷವಾಗಿರುವದು.

೨ ಮಕ್ಕಳ ಕರಳುಗಳ ಕ್ಷೀಣತೆ—ಮಕ್ಕಳ ಕರಳುಗಳು ಒಳಮುಗ್ಗಲು ತಿಳುವಾಗಿಯೂ, ಕ್ಷೀಣವಾಗಿಯೂ ಇರುವವು. ಆದ್ದರಿಂದ ಪಚನವಾಗಿ ಉಳಿದ ಅಸಾರವಾದ ಅಂಶವನ್ನು ಮಕ್ಕಳ ಕರುಳುಗಳು ಸಹಜವಾಗಿ ಹೊರಗೆ ಹಾಕಲಾರದೆಂದೇ ಅವರಿಗೆ ಮಲಬದ್ಧತೆಯುಂಟಾಗುವದರಲ್ಲಿ ಆಶ್ಚರ್ಯವಿಲ್ಲ ಇದರ ಮೇಲೆ ಮಕ್ಕಳು ಒಂದು ವೇಳೆ ರಕ್ತಹೀನರೂ ನಿಸ್ತೇಜ ಹಾಗು ದುರ್ಬಲರೂ ಆದರೆ ಅವರ ಕರಳುಗಳು ಮತ್ತಿಷ್ಟು ಕ್ಷೀಣವಾಗುವವು. ಇಂಥಲ್ಲಿ ಕರುಳುಗಳ ಕ್ರಿಮಿಗತಿಯು ಅಥವಾ ಅಳುಂಚನ ಪ್ರವಾಹವು ಅತಿಶಯ ಮೃದುವಾಗುವದು. ಆದ್ದರಿಂದ ಇಂಥ ಮಕ್ಕಳಿಗೆ ಮಲಬದ್ಧತೆಯು ಅತಿ ಸಹಜವಾಗಿ ಉಂಟಾಗುವದು.

ಮೊದಲೇ ಮಕ್ಕಳ ಕರಳುಗಳ ಸಂಚರಣಶೀಲತೆ ಅಥವಾ ಗತಿಶೀಲತೆಯು ಮೃದುವು, ಅದರಮೇಲೆ ಮತ್ತೆ ಜೀರ್ಣಾವಶಿಷ್ಟ ಅಸಾರ ಪದಾರ್ಥದ ಅಭಾವವು, ಈ ಎರಡೂ ಕಾರಣಗಳು ಒತ್ತಟ್ಟಿಗೆ ಸಮಾವೇಶವಾದರೆ ಮಲಬದ್ಧತೆಯು ಅವಶ್ಯವಾಗಿ ಆಗೇ ಆಗುವದು. ಇಂಥಲ್ಲಿ ದೊಡ್ಡ ಕರುಳಿನ ಕೆಳಭಾಗದಲ್ಲಿ ಸಾಮಾನ್ಯ ಪರಿಮಾಣದಿಂದ ಮಲವು ಸಂಚಿತವಾಗಿ ಕ್ರಮವಾಗಿ ಅದು ಒಣ

ಗುತ್ತ ಹೋಗುವದು. ದೊಡ್ಡ ಕರುಳಿನ ಕೆಳಭಾಗದ ಗತಿಶೀಲತೆಯು ಕಡಿಮೆಯಾದರೆ ಮಲಬದ್ಧತೆಯುಂಟಾಗುವದು.

೪ ಆಹಾರದ ಗೊಂದಲ— ಆಹಾರದ ಗೊಂದಲದಿಂದಲೇ ಬಹಳ ಕಡೆಗಳಲ್ಲಿ ಮಕ್ಕಳಿಗೆ ಮಲಬದ್ಧತೆಯುಂಟಾಗುವದು. ಆದರೆ ಈ ಕಾರಣವು ಹೇಳುವದಕ್ಕೆ ಸುಲಭವಾದಷ್ಟು ನಿರ್ಣಯಿಸುವದಕ್ಕೆ ಸುಲಭವಲ್ಲ. ಮಕ್ಕಳ ಆಹಾರದಿಂದ ಮಲಬದ್ಧತೆಯುಂಟಾಗುವದೆಂದು ಎಲ್ಲರೂ ಕ್ಷಣಕ್ಷಣಕ್ಕೆ ಹೇಳುತ್ತಲಿದ್ದರೂ ಅದನ್ನು ಶಾಸ್ತ್ರಸಮ್ಮತವಾಗಿ ನಿರ್ಣಯಿಸಿಕೊಡುವ ಡಾಕ್ಟರರಾಗಲಿ, ಪರೀಕ್ಷಾಗಾರರಾಗಲಿ ನಮ್ಮ ದೇಶದಲ್ಲಿ ತೀರ ಕಡಿಮೆಯೆಂಬದರಲ್ಲೇನೂ ಸಂದೇಹವಿಲ್ಲ. ಕೂಸುಗಳ ಆಹಾರದಲ್ಲಿ ವಿಭಿನ್ನ ಪದಾರ್ಥಗಳು ಯಾವ ಪ್ರಮಾಣದಲ್ಲಿರುವವೆಂಬದನ್ನು ರಾಸಾಯನಿಕ ಪರೀಕ್ಷೆಯಿಂದ ನಿರ್ಣಯಿಸುವದರಿಂದ, ಒಂದು ವೇಳೆ ಯಾವದೊಂದು ಬಗೆಯ ಗೊಂದಲವು ಕಂಡುಬಂದರೆನೇ ಮಕ್ಕಳ ಆಹಾರದ ದೋಷವಿರುವದೆಂದು ಹೇಳಿಬಿಡುವರು. ಅವಕ್ಕೂ ಮೊದಲು ಆಹಾರ ದೋಷವಿರುವದೆಂದು ಶಾಸ್ತ್ರಸಮ್ಮತವಾಗಿ ಹೇಳುವ ಅಧಿಕಾರವು ಯಾರಿಗೂ ಇರುವದಿಲ್ಲ.

ತಾಯಿಯ ಹಾಲು ಕುಡಿಯುವ ಕೂಸಿನ ಮಲಕ್ಕಿಂತ ಆಕಳ ಹಾಲು ಕುಡಿಯುವ ಕೂಸಿನ ಮಲವು ಕಡಿಮೆಯಾಗಿರುವದೆಂದು ಮೊದಲೇ ಹೇಳಿರುವವು. ಇದರ ಕಾರಣವೇನೆಂಬದನ್ನು ಈಗ ನೋಡೋಣ.

ಆಕಳ ಹಾಲನ್ನೂ ತಾಯಿಯ ಹಾಲನ್ನೂ ಪೃಥಕ್ಕರಿಸಿ ನೋಡುವದರಿಂದ ಕಂಡುಬಂದಿರುವದೇನಂದರೆ—ತಾಯಿಯ ಹಾಲಿನಲ್ಲಿ ಶರ್ಕರೆ ಹಾಗು ಚರ್ಬಿಯ ಪರಿಮಾಣವು ಹೆಚ್ಚಿರುವದು. ಇವುಗಳ ಈ ಹೆಚ್ಚಿಗೆಯ ಕಾರಣದಿಂದ ತಾಯಿಯ ಹಾಲು ಕುಡಿಯುವ ಕೂಸು ಹೆಚ್ಚು ಮಲವಿಸರ್ಜನೆ ಮಾಡುವದು. ಪರೀಕ್ಷೆಯಿಂದ ನಿಶ್ಚಯಿಸಲ್ಪಟ್ಟಿರುವದೇನಂದರೆ ಆಕಳ ಹಾಲಿನಲ್ಲಿ ಶರ್ಕರೆ ಹಾಗು ಚರ್ಬಿಯ ಪ್ರಮಾಣವನ್ನು ಹೆಚ್ಚುಮಾಡಿಯೂ ಮತ್ತು ಪ್ರೋಟಿನದ ಪ್ರಮಾಣವನ್ನು ಕಡಿಮೆಮಾಡಿಯೂ ಉಂಟಾಗುವ ಹಾಲನ್ನು ಮಸ್ತಳಿಗೆ ಕೊಟ್ಟರೆ ಆವು ದಿವಸಕ್ಕೆ ಮೂರು ನಾಲ್ಕುಸಾರಿ ಮಲವಿಸರ್ಜನೆ ಮಾಡುವವು. ಅದರಂತೆಯೇ ಆ ಹಾಲಿನಲ್ಲಿಯ ಸಕ್ಕರಿಯ ಪ್ರಮಾಣವನ್ನು ಕಡಿಮೆ ಮಾಡಿ ಪ್ರೋಟಿನದ ಪ್ರಮಾಣವನ್ನು ಹೆಚ್ಚುಮಾಡಿದರೆ, ಆ ಹಾಲು ಕುಡಿಯುವದರಿಂದ ಕೂಸುಗಳು ಒಂದೆರಡುಸಾರಿ ಮಾತ್ರ ಮಲವಿಸರ್ಜನೆ ಮಾಡುವವು. ಕ್ರಮವಾಗಿ ಬಹುದಿವಸದಿಂದ ಕೂಸುಗಳು ಹಾಲಿನ ಸಿಗ್ನಧ್ದಜಾತಿಯ ಅಂಕವನ್ನು ಪಚನಮಾಡಲಾದವುಗಳಾದರೆ ಕೂಸುಗಳಿಗೆ ಮಲಬದ್ಧತೆಯುಂಟಾಗುವದು. ಮತ್ತು ಅವುಗಳ ಮಲವು ಚರ್ಬಿ ಹಾಗು ಸಾಬಾಯಣಯುಕ್ತವಾಗುವದು. ಇದರಿಂದ ಅವುಗಳ

ದೇಹ ಪುಷ್ಟಿಗೂ ಅಡ್ಡಿಯುಂಟಾಗುವದು. ಹಾಲಿನೊಡನೆ ಅಲ್ಪ ಪರಿಮಾಣದಿಂದ ಶ್ವೇತ ಸಾರವು ಮಿಶ್ರಿತವಾಗಿದ್ದರೆ ಅದು ಪಚನವಾಗುವದಿಲ್ಲ. ಇಂಥ ಹಾಲು ಕುಡಿಯುವದರಿಂದ ಮಕ್ಕಳಿಗೆ ಮಲಬದ್ಧತೆಯುಂಟಾಗುವದು, ಮತ್ತು ಮಲವು ಶುಷ್ಕವಾಗುವದು. ಅಕಳ ಹಾಲಿನೊಡನೆ ಹೆಚ್ಚು ಪರಿಮಾಣದಿಂದ ಮಲ್ಟೋಜ (ಒಂದು ಪ್ರಕಾರದ ಸಕ್ಕರೆ) ವನ್ನು ಮಿಶ್ರಿತಮಾಡಿ ಮಕ್ಕಳಿಗೆ ಕುಡಿಸಿದರೆ ಅವುಗಳಿಗೆ ದಿವಸಕ್ಕೆ ಮೂರು ನಾಲ್ಕು ಸಾರಿ ಮಲವಿಸರ್ಜನೆಯಾಗುವದು. ಶುದ್ಧವಾದ ಮಲ್ಟೋಜವು ದೊರೆಯುವದು ಕಷ್ಟವು. ಪೇಟೆಯಲ್ಲಿ ದೊರೆಯುವ ಮಲ್ಟೋಜಗಳಲ್ಲಿ ಡೆಕ್ಸ್ಟ್ರಿನ (ದ್ರಾಕ್ಷಿ ಶರ್ಕರೆ) ವು ಕೂಡಿಕೊಂಡಿರುವದು. ಹಾಲಿನಲ್ಲಿ ಹೆಚ್ಚು ಪ್ರಮಾಣದಿಂದ ಡೆಕ್ಸ್ಟ್ರಿನ ಕೂಡಿದ ಮಲ್ಟೋಜವನ್ನು ಕೂಡಿಸಿ ಮಕ್ಕಳಿಗೆ ಕುಡಿಸಿದರೆ ಅವುಗಳಿಗೆ ಮಲಬದ್ಧತೆಯುಂಟಾಗುವ ಸಂಭವವಿರುವದು.

ಮೇಲಿನ ವಿಷಯಗಳನ್ನು ನಿರೀಕ್ಷಿಸುವದರಿಂದ ಕಂಡು ಬರುವದೇನೆಂದರೆ— ಮಕ್ಕಳ ಆಹಾರದಲ್ಲಿ ಶರ್ಕರೆ ಹಾಗೂ ಚರ್ಬಿಯ ಭಾಗವು ಕಡಿಮೆ, ಪ್ರೋಟೀನದ ಭಾಗವು ಹೆಚ್ಚು ಮತ್ತು ಬಹು ದಿವಸದಿಂದ ಕೂಸು ಚರ್ಬಿಯನ್ನು ಪಚನ ಮಾಡಲಿಕ್ಕೆ ಅಸಮರ್ಥವಾದರೆ, ಅಥವಾ ಅವುಗಳ ಆಹಾರದಲ್ಲಿ ಅಲ್ಪ ಪರಿಮಾಣದಿಂದ ಶ್ವೇತಸಾರವನ್ನು ಮಿಶ್ರಿತ ಮಾಡಿದರೆ, ಅಥವಾ ಅದರಲ್ಲಿ ಹೆಚ್ಚು ಪರಿಮಾಣದಿಂದ ಡೆಕ್ಸ್ಟ್ರೀನ ಬೆರೆದ ಮಲ್ಟೋಜವನ್ನು ಕೂಡಿಸಿದರೆ, ಮಕ್ಕಳಿಗೆ ಮಲಬದ್ಧತೆಯುಂಟಾಗುವ ಸಂಭವವು.

ಅಕಸ್ಮಾತ್ ದೊಡ್ಡ ಕರುಳು ಸಂಪೂರ್ಣವಾಗಿ ಕಟ್ಟಿದರೆ ಮಲಬದ್ಧತೆಯುಂಟಾಗುವದು ಕಂಡು ಬಂದಿರುವದು. ಇದರೊಡನೆ ವಾಂತಿಯೂ, ಹೊಟ್ಟೆಯಲ್ಲಿ ಶೂಲಿಯೂ ಮೊದಲಾದ ಬೇರೆ ಬೇರೆ ತರದ ವಿಕಾರಗಳಿರುವವು. ಇದನ್ನು ಶಸ್ತ್ರಚಿಕಿತ್ಸೆಯಿಂದಲೇ ಗುಣಪಡಿಸಬೇಕಾಗುವದು.

ಚಿಕಿತ್ಸೆ:— ತಾಯಿಯ ಹಾಲು ಕುಡಿಯುವ ಕೂಸುಗಳಿಗೆ ಮಲಬದ್ಧತೆಯುಂಟಾದರೆ ಮೇಲೆ ಕುಡಿಸುವ ಅವಧಿಯ ಮಧ್ಯದಲ್ಲಿ ತುಸು ತುಸು ಕಾಯ್ದು ತಂಪಾದ ಶುದ್ಧ ನೀರು ಕುಡಿಯಿಸುವದು ಉತ್ತಮವು. ಬಹಳ ಕಡೆಗಳಲ್ಲಿ ಮಕ್ಕಳ ಮಲಬದ್ಧತೆಯು ಕಾಣುವದರೊಳಗಾಗಿಯೇ ತಾಯಿತಂದೆಗಳು ಕೂಸುಗಳಿಗೆ ತಾವಾಗಿಯೇ ಮಲತ್ಯಾಗ ಮಾಡುವದಕ್ಕೆ ಅವಕಾಶ ಕೊಡದೆ, ವಿರೇಚಕ ಔಷಧ, ಗ್ಲಿಸರಿನ ಸಪೋಜಿಟರಿ, ಎನಿಮಾ ಇತ್ಯಾದಿ ಪ್ರಯೋಗಗಳನ್ನು ಮಾಡಿ ಬಿಡುವರು. ಇಂಥ ಅಕ್ರಮ ಚಿಕಿತ್ಸೆಯ ಫಲದಿಂದ ಮಕ್ಕಳ ಮಲಬದ್ಧತೆಯು ದೂರವಾಗುವದಕ್ಕೆ ಬದಲು ಹೆಚ್ಚಾಗುವದು. ಇಂಥಲ್ಲಿ ಮಕ್ಕಳಿಗೆ ಮಲವಿಸರ್ಜನೆ ಮಾಡಿಸುವ ಪ್ರಯತ್ನವನ್ನೇ ಮಾಡದೆ, ಒಂದು ವೇಳೆ ಅವರನು ಔಷಧವಿ

ಲ್ಲದೆ ಇಟ್ಟಿದ್ದಾದರೆ ತಕ್ಕ ಸಮಯಕ್ಕೆ ತಮ್ಮಿಂದ ತಾವೇ ಮಲವಿಸರ್ಜನೆ ಮಾಡುವರ್ರ. ತಾಯಿಯ ಹಾಲು ಕುಡಿಯುವ ಕೂಸುಗಳಿಗೆ ಮಲಬದ್ಧತೆಯುಂಟಾದರೆ ಸುಮಾರು ೩೬ ತಾಸು ಔಷಧವಿಲ್ಲದೆ ಇರಿಸುವದು ಉಚಿತವಾದದ್ದು; ಇಷ್ಟರಲ್ಲಿ ಅನೇಕ ಸ್ಥಲಗಳಲ್ಲಿ ಸಹಜವಾಗಿ ಮಲವಿಸರ್ಜನೆಯಾದದ್ದು ಕಂಡು ಬರುವದು.

ಅನುಪಯೋಗವೂ ಪರಿಮಾಣದಲ್ಲಿ ಕಡಿಮೆಯೂ ಆದ ಆಹಾರ ದೊರೆಯುವ ಮಕ್ಕಳ ಕರುಳಿನಲ್ಲಿ ಮಲವನ್ನುಂಟು ಮಾಡುವ ಜೀರ್ಣಾವಶಿಷ್ಟ ಅಸಾರ ಪದಾರ್ಥದ ಅಭಾವವಾಗುವದು; ಇಂಥವರ ಆಹಾರದ ಪರಿಮಾಣವನ್ನು ಹೆಚ್ಚಿಸುವದೇ ಯೋಗ್ಯವು.

ಮಲಬದ್ಧತೆಯುಂಟಾಗುವದನ್ನು ತಡೆಯುವದಕ್ಕೆ ಮಕ್ಕಳಿಗೆ ಗೊತ್ತು ಮಾಡಿದ ಹೊತ್ತಿಗೆ ಮಲವಿಸರ್ಜನೆ ಮಾಡುವಂತೆ ಮಾಡಿಸುವದೂ ಅವಶ್ಯವಾದ್ದರಿಂದ ಈ ಬಗ್ಗೆ ವಿಶೇಷ ಲಕ್ಷಗೊಡುವದು ಹಿತಕರವು.

ಮಕ್ಕಳ ಆಹಾರವನ್ನು ನಿಯಮಿತಗೊಳಿಸುವದು ವಿಶೇಷ ಅವಶ್ಯವಾದದ್ದು. ಇದರಿಂದ ಬಹಳ ಕಡೆಗಳಲ್ಲಿ ಮಲಬದ್ಧತೆಯು ಇಲ್ಲವಂತಾಗಿರುವದು. ಮಕ್ಕಳ ಆಹಾರದಲ್ಲಿ ಶರ್ಕರೆಯ ಭಾಗವು ಕಡಿಮೆಯೂ ಪ್ರೋಟೀನ ಜಾತಿಯ ಪದಾರ್ಥದ ಹೆಚ್ಚಿಗೆಯೂ ಆದಲ್ಲಿ ಸಕ್ಕರೆಯ ಪರಿಮಾಣವನ್ನು ಹೆಚ್ಚಿಸಿಯೂ, ಪ್ರೋಟೀನವನ್ನು ಕಡಿಮೆ ಮಾಡಿಯೂ ಕೊಡುವದು ಒಳ್ಳೆಯದು. ಇದಕ್ಕಾಗಿ ಮಕ್ಕಳ ಆಹಾರದಲ್ಲಿ ದಿನಾಲು ಒಂದೆರಡು ಟೀಬಲ ಚಮಚಿಯಷ್ಟು ಲ್ಯಾಕ್ಟೋಜ ಅಥವಾ ಹಾಲಿನ ಸಕ್ಕರೆ (ಮಿಲ್ಕ್‌ಶೂಗರ) ಯನ್ನು ಕೂಡಿಸಿ ಕೊಟ್ಟರೆ ಉದ್ದೇಶವು ಸಫಲವಾಗುವದು. ಈ ಹಾಲಿನ ಸಕ್ಕರೆಯ ಕೆಲವೊಂದು ಭಾಗವು ಬೇಹದ ಪೋಷಣ ಕಾರ್ಯದಲ್ಲಿ ಖರ್ಚಾಗದೆ, ಕರುಳಿನಲ್ಲಿ ರಸಾಯನ ವ್ಯಾಪಾರದಿಂದ ಗ್ಯಾಸದ ಆಕಾರದಿಂದ ಪರಿಣತವಾಗುವದು; ಮತ್ತು ಕರುಳನ್ನು ಉತ್ತೇಜಿತಗೊಳಿಸಿ, ಅದರ ಗತಿಶೀಲತೆಯನ್ನು ಬೆಳಿಸಿ ಮಲಬದ್ಧತೆಯನ್ನು ದೂರ ಮಾಡಲಿಕ್ಕೆ ಸಹಾಯವಾಗುವದು. ಲ್ಯಾಕ್ಟೋಜ ತೆಗೆದುಕೊಳ್ಳುವ ರೂಢಿಯಿದ್ದ ಮಕ್ಕಳಿಗೆ ಅದರ ಬದಲಾಗಿ ಸಾಧಾರಣ ಸಕ್ಕರೆಯನ್ನು ಕೊಟ್ಟರೂ ನಡೆಯುವದು. ಮಕ್ಕಳ ಮಲಬದ್ಧತೆಯನ್ನು ದೂರ ಮಾಡುವದರಲ್ಲಿ ತರಲಮಲ್ಟೋಜದಂಥ ಉಪಕಾರಿಯಾದ ಪದಾರ್ಥವು ಬೇರೊಂದು ಇಲ್ಲವೇ ಇಲ್ಲ. ಮಕ್ಕಳ ಆಹಾರದೊಂದಿಗೆ ದಿನಾಲು ಒಂದೆರಡು ಟೀಬಲ ಚಮಚಿಯಷ್ಟು ತರಲಮಲ್ಟೋಜವನ್ನು ಕೂಡಿಸಿ ಕೊಡುವದರಿಂದ ವಿಶೇಷ ಉಪಕಾರವಾಗುವದು. ಒಂದು ವೇಳೆ ಅದರಿಂದ ಉಪಕಾರದೋರದಿದ್ದರೆ ಉಪಕಾರ ತೋರುವವರೆಗೂ ಅದರ ಪ್ರಮಾಣವನ್ನು ಹೆಚ್ಚಿಸುತ್ತ ಹೋಗಬೇಕು.

ಮಕ್ಕಳ ಆಹಾರದಲ್ಲಿ ಚರ್ಬಿಯ ಭಾಗವು ಕಡಿಮೆಯಾಗುವದರಿಂದ ಮಲಬದ್ಧತೆಯುಂಟಾಗುತ್ತಿದ್ದರೆ ಅದರ ಪ್ರತಿಕಾರಕ್ಕಾಗಿ ಆಹಾರದಲ್ಲಿ ಬೆಣ್ಣೆಯನ್ನು ಕ್ರಮವಾಗಿ ಹೆಚ್ಚಿಸುತ್ತ ಕೂಡಿಸಿ ಕೊಡುವದರಿಂದ ಸುಫಲವಾಗುವದು. ಚರ್ಬಿಯ ಭಾಗವಾದರೂ ನೂರಕ್ಕೆ ನಾಲ್ಕಕ್ಕಿಂತ ಹೆಚ್ಚಾಗದಂತೆ ವಿಶೇಷ ಲಕ್ಷ ಕೊಡುವದು ಒಳ್ಳೆಯದು. ಯಾಕಂದರೆ ಚರ್ಬಿಯ ಪ್ರಮಾಣವು ಹೆಚ್ಚಾದರೆ ಮಕ್ಕಳಿಗೆ ಅದು ಅಸಹ್ಯವಾಗಿ ಶರೀರದ ತೂಕವನ್ನು ಕಡಿಮೆ ಮಾಡುವದು.

ಆಹಾರದಲ್ಲಿ ಸ್ವೇತಸಾರದ ಭಾಗವು ಹೆಚ್ಚಾಗುವದರಿಂದ ಉಂಟಾದ ಮಲಬದ್ಧತೆಯನ್ನು ದೂರ ಮಾಡಲಿಕ್ಕೆ ಆಹಾರದಲ್ಲಿ ನೀರಿನ ಭಾಗವನ್ನು ಹೆಚ್ಚು ಹೆಚ್ಚು ಮಾಡಿ ಸ್ವೇತಸಾರದ ಭಾಗವನ್ನು ಕಡಿಮೆ ಮಾಡುವದು ಒಳ್ಳೆಯದು.

ಎಂಟು ತಿಂಗಳಿಗಿಂತ ಹೆಚ್ಚು ವಯಸ್ಸಿನ ಮಕ್ಕಳಿಗೆ ಹಣ್ಣಿನ ರಸವನ್ನು ಸೇವಿಸಿದರೆ ವಿಶೇಷ ಉಪಕಾರವಾಗುವದು. ಕಿತ್ತಳೆಯ ಹಣ್ಣಿನ ರಸದ ವಿರೇಚಕ ಕ್ರಿಯೆಯು ಅತಿ ಸಾಮಾನ್ಯವಾದದ್ದೆಂದು ಅವರ ಮೇಲೆಯೇ ಅವಲಂಬಿಸಬಾಗದು. ದ್ರಾಕ್ಷೆಯ ರಸವು ಈ ವಿಷಯದಲ್ಲಿ ಅತ್ಯಂತ ಉಪಕಾರಿಯ

ಆಹಾರದ ನಿಯಮಿತತನದಿಂದ ಮಲಬದ್ಧತೆಯು ದೂರವಾಗದಿದ್ದರೆ, ಬಹಳ ಕಡೆಗಳಲ್ಲಿ ಅತಿ ಮೃದು ವಿರೇಚಕದ ಸಹಾಯವನ್ನು ತೆಗೆದುಕೊಳ್ಳುವದು ಅವಶ್ಯವೆನಿಸುವದು. ಅದರಿಂದ ಕೆಳಗಿನ ಕೆಲವು ಔಷಧಗಳು ಹೆಚ್ಚು ಉಪಯೋಗಕ್ಕೆ ಬೀಳುವವು.

ಮಿಲ್ಕ ಆಫ್ ಮ್ಯಾಗ್ನೀಶಿಯಾ—ಕೂಸುಗಳಿಗೆ ಇದು ಅತಿ ಉತ್ಕೃಷ್ಟ ವಿರೇಚಕವು. ದಿವಸಕ್ಕೆ ಒಂದು ದ್ರಾಮದಂತೆ ಹಾಲಿನಲ್ಲಿ ಕುಡಿಸಬೇಕು.

ಸಿರಾಫ್‌ಸೇನಾ—ಒಂದು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ದಿವಸಕ್ಕೆ ಅರ್ಧದಿಂದ ಒಂದು ಡ್ರಾಮದ ವರೆಗೆ ರಾತ್ರಿಯಲ್ಲಿ ಮಲಗುವ ಮುಂದೆ ಕೊಡತಕ್ಕದ್ದು.

ಸಿರಾಫ್ ಆಫ್ ಕ್ಯಾಲಿಫೋರ್ನಿಯಾ ಫಿಗ್ :—ಒಂದು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿಗೆ ಅರ್ಧದಿಂದ ಒಂದು ಡ್ರಾಮದ ವರೆಗೆ ಮೇಲೆ ಹೇಳಿದ ಪ್ರಕಾರ ಕೊಡತಕ್ಕದ್ದು.

ಹರಳೆಣ್ಣೆಯನ್ನು ಸೇವಿಸುವದು ತಕ್ಕದ್ದಲ್ಲ. ಯಾಕಂದರೆ ಅದು ತೀಕ್ಷ್ಣ ಜುಲಾಬವು; ಮತ್ತು ಅದನ್ನು ಸೇವಿಸಿದ ತರುವಾಯದಲ್ಲಿ ಮಲಬದ್ಧತೆಯು ಹೆಚ್ಚಾಗುವದು.

ಲಿಕ್ವಿಡ ಫ್ಯಾರಾಫಿನ್—ಮಕ್ಕಳ ಮಲಬದ್ಧತೆಯನ್ನು ದೂರ ಮಾಡುವದರಲ್ಲಿ ಇದು ಅತ್ಯಂತ ಉಪಯುಕ್ತವಾದ ಔಷಧವು. ಒಂದೆರಡು ಡ್ರಾಮಿನಷ್ಟು ತೆರವಾದ ಹೊಟ್ಟೆಗೆ ದಿವಸಕ್ಕೆ ಎರಡು ಸಾರೆಯಂತೆ ಕೊಡುವದು ಉತ್ತಮವು.

ಅಲಿವ್ಹ ಆಯಿಲ—ಇದಾವದರೂ ಒಂದು ಉತ್ಕೃಷ್ಟ ಮೃದುವಿರೇಚಕ ಔಷಧವು. ಚರ್ಬಿ ಜಾತಿಯ ಆಹಾರ ರೂಪದಿಂದಲೂ ಇವನ್ನು ಉಪಯೋಗಿಲಿಕ್ಕೆ ಬರುವದು. ಇದನ್ನು ಆಹಾರದ ತರುವಾಯದಲ್ಲಿ ದಿವಸಕ್ಕೆ ಮೂರು ಸಾರಿ ಅರ್ಧದಿಂದ ಎರಡು ಡ್ರಾಮಿನವರೆಗೆ ಕೊಡತಕ್ಕದ್ದು. ವಲದ್ಯಾರದಿಂದ ಈ ಔಷಧವನ್ನು ದೊಡ್ಡ ಕರುಳಿನ ಕೆಳಭಾಗದಲ್ಲಿ ಪ್ರವೇಶಿಸಲಿಕ್ಕೂ ಬರುವದು. ರಬ್ಬರದ ನಲಿಕೆಯ ಸಹಾಯದಿಂದ ಮೂರುನಾಲ್ಕು ಔಂಸಿನಷ್ಟು ಅಲಿವ್ಹ ಆಯಿಲನ್ನು ಕರುಳಿನಲ್ಲಿ ಪ್ರವೇಶಿಸಿ ಇಡೀ ರಾತ್ರಿಯಲ್ಲೆಲ್ಲ ಇಟ್ಟರೆ, ಮರುದಿವಸ ಮುಂಜಾನೆ ಸಾಧಾರಣ ಮಲವಿಸರ್ಜನೆಯಾಗುವದು.

ಎಗಾರ—ಇದು ಚೂರ್ಣ ರೂಪದಿಂದಿರುವದು. ಇವನ್ನು ದಿವಸಕ್ಕೆ ಒಂದೆರಡು ಡ್ರಾಮಿನಷ್ಟು ಮಕ್ಕಳಿಗೆ ತಿನ್ನಿಸಲಿಕ್ಕೆ ಬರುವದು. ಕರುಳಿನ ರಸದೊಡನೆ ಕೂಡಿ ಇದು ಉಬ್ಬಿ ಕರುಳಿನ ಸಂಚರಣಶೀಲತೆಯನ್ನು ಉದ್ರೇಕಗೊಳಿಸುವದು ಮತ್ತು ಅದರಿಂದ ಮಲನಿಸ್ಸರಣಕ್ಕೆ ಸಹಾಯವಾಗುವದು.

ಕ್ಯಾಸ್ಕಾರಾ-ಸ್ಯಾಗ್ರಾಡಾ—ಇದೂ ಒಂದು ಉತ್ಕೃಷ್ಟ ವೃದುವಿರೇಚಕವು. ೧೫ರಿಂದ ೪೫ ಹನಿಯವರೆಗೆ ದಿವಸಕ್ಕೆ ಮೂರು ಸಾರಿ ಕೊಡಲಿಕ್ಕೆ ಬರುವದು.

ದೊಡ್ಡ ಕರುಳಿನ ಕೆಳಭಾಗವು ಕೆಲಸ ಮಾಡದಿರುವದರಿಂದ ಮಲಬದ್ಧತೆಯುಂಟಾಗಿದ್ದರೆ ಗ್ಲಿಸರಿನ ಉಪಯೋಗಿಸುವದರಿಂದ ಉಪಕಾರವಾಗುವದು. ಆದರೆ ಇದನ್ನು ಎಷ್ಟುಮಾತ್ರವೂ ದಿನಾಲು ಉಪಯೋಗಿಸುವದು ಒಳ್ಳೆಯದಲ್ಲ.

ಬಹಳ ಹೆಚ್ಚು ಮಲಬದ್ಧತೆಯುಂಟಾದರೆ ಸಾಬಾಣದ ನೀರಿನಿಂದ ಎನಿಮಾ ಪ್ರಯೋಗ ಮಾಡುವದು ಒಳ್ಳೆಯದು. ಮಲವು ಅತ್ಯಂತ ಕಠಿಣವಾಗಿದ್ದರೆ ರಾತ್ರಿಯಲ್ಲಿ "ಅಲಿವ್ಹ ಆಯಿಲ" ದ ಎನಿಮಾ ಕೊಟ್ಟು ಅದನ್ನು ಇಡೀ ರಾತ್ರಿಯಲ್ಲೆಲ್ಲ ಇಟ್ಟು ಮುಂಜಾನೆ ಸಾಬಾಣ ನೀರಿನ ಎನಿಮಾ ಕೊಡುವದು ಬಹಳ ಉತ್ತಮವು.

ಮೇಲೆ ಹೇಳಿದ ಔಷಧಗಳೆಲ್ಲವೂ ಮುಂಬಯಿಯ ಕೆಂಪ ಮೊದಲಾದ ಪ್ರಸಿದ್ಧ ಔಷಧ ವ್ಯಾಪಾರಿಗಳಲ್ಲಿ ದೊರೆಯುವವು.

ಬರಿಯ ತಿಳಿಗನ್ನಡದ ಹತ್ತು ಹಾಡುಗಳು.

ಲೇಖಕರು:—ಹ. ರಾ. ಕಾಲವಾಡ, ಹೆ ವಾ. ತಿರ್ಥಪೂರ.

॥ ಕಂದ ॥

ತಿಳಿಗನ್ನಡದೊಳ್ ಪಾಡ ।
ನ್ನಳವಡಿಸಲ್ಕಾರದಾರ್ಗಮೆಂಬರ ನುತಿ ತಾಂ ॥
ನೆಲದೊಳ್ ಕುಣಿಯಲ್ ಬರದಿರೆ ।
ನೆಲನಿದು ಕೊಂಕೆಂದು ಜರೆವ ನುತಿಯಂ ಪೋಲ್ಕುಂ ॥ ೧ ॥

ಬರಿಗನ್ನಡವಾಮೊಡ ಮೇ ।
ನೊರೆಯಲ್ ಬರದಿಹುದೊ ನಲ್ನುಡಿಗಳನ್ನದರೊಳ್ ॥
ನೆರಿಪಾಡುಗಳಂ ಕಟ್ಟುತ ।
ಬರೆಯಲ್ ಬರದಿಹುದೊ ತಿಳಿದು ಪೇಳಿರಿ ಪಳಿವರ್ ॥ ೨ ॥

ಇಂಗಡಲಿಂಪನು ಪೋಲಪೆ ? ।
ತಂಗದಿರನ ತೆರದಿ ತಣ್ಪನೀಯದೆ ? ನೆಲಕೆ ॥
ಪಿಂಗದೆ ? ಕೇಳ್ವರ ಪಸಿವಮ ।
ಹಂಗಿನ ಮಾತೇಕೆ ಕನ್ನಡದೆ ಕೊಂಕೇನಯ್ ॥ ೩ ॥

ರನ್ನನ ಪೊನ್ನನ ಜನ್ನನ ।
ಮುನ್ನಿನ ನಿಜಗುಣ ಷಡಕ್ಷರಿಗಳಂ ಪಡೆದು ॥
ಚನ್ನಾಗಿಯೆ ಪೆಸರ್ವಡೆದಿಹ ।
ಕನ್ನಡ ತಾಯ್ಗೀಗ ಕುಂದನೀವುದು ಸರಿಯೇ ॥ ೪ ॥

ಸುಲಿದಿರ್ಪ-ಬಾಳೆವಣ್ಗಳ ।
ಬಲಿದ ಸಿಬುರ್ಗಳೆದ ಕಬ್ಬಿನಂದದ ಸವಿಯ ॥
ತಿಳಿಗನ್ನಡ ತಾಯ್ನುಡಿಯಂ ।
ಬೆಳಿಸದೆ ಪಳಿವರ್ಕಳಿಂತು ಕನ್ನಡಿಗರೊ ತಾಂ ॥ ೫ ॥

ಕನ್ನಡವೆಮ್ಮಯ ತಾಯ್ನುಡಿ ।
ಕನ್ನಡವೇ ನಾಡ ಪೆರ್ಚಿಗೆಯ ತಾಯ್ವೀರುಂ ॥
ಕನ್ನಡವೇ ನುಡಿವೆಣ್ಣಂ ।
ಕನ್ನಡವೇ ಕಡಲಣುಗೆ ಕುಳಿರ್ವೆಟ್ಟಣುಗೆ ॥ ೬ ॥

ಕನ್ನಡಿಗರ ಕಯ್ಯಾಸರ ।
ವೆನ್ನಿರಿ ಕನ್ನಡವೆ ಕಳ್ತಲೆಯ ನೋಡಿಸುವ ॥
ಚೆನ್ನೀಸರಿಂಗದಿರರೆಂ ।
ದೆನ್ನಿರಿ ಕನ್ನಡವ ಪೊಗಳಿ ಪಾಡಿರಿ ಬಿಡದೆ ॥ ೬

ಮುನ್ನಿನ ಮಕ್ಕಳ ನೆನೆಸುತ ।
ಕನ್ನಡ ತಾಯಳುತ ಕುಳತಿರಲ್ ಸುಮ್ಮನೆ ನೀ ॥
ವಿನ್ನೀತಕಕಟ ನೋಳ್ಪಿರಿ ।
ಕುನ್ನಿಗಳೀ ಪೇಳಿರೀಳಿರೀಳ್ಗೆಗೆ ತೊಪಗಿ ॥ ೭

ಪೊಸನುಡಿಯ ಪುಡುಕಿ ತೆಗೆಯಿರಿ ।
ಕಸವಿಸಿಯಿಂದಗಲಿ ಪೋಗುವೊಳನಾಡುಗಳ ॥
ಕಸುವಿಂದೆಳಕೊಳ್ಳುತ ನೀ ।
ವೆಸಗುವದೇಳ್ಗೆಯನು ಪಗಲಿರುಳ್ಗಳ ಮರೆದು ॥ ೮

ಗೆಲ್ಗೀ ಕನ್ನಡ ನುಡಿಯುಂ ।
ಗೆಲ್ಗೀ ಕನ್ನಡವ ನಾಡುಮೂ ನೆಲದೊಳಗೆ ॥
ಗೆಲ್ಗೀ ಲೋಕಲ್ ಬೋರ್ಡುಂ ।
[ಗೆಲ್ಗೀ ಎಲ್ಲಾಳ್-ಕೂಟಂ । (ಕನ್ನಡ ಪಾಠಾಂತರಂ)]
ಗೆಲ್ಗೀ ಸ್ಕೂಲ್ ಬೋರ್ಡ ಪತ್ರಿಕೆಯುಮೂ ನೆಲದೊಳ್
[ಗೆಲ್ಗೀಯೋದಾಳಿವನೆಯ ಕೂಟದಿದೋಲೆ ॥
(ಕನ್ನಡ ಪಾಠಾಂತರಂ)] ॥ ೯

ಒಕ್ಕಲತನದ ಶಾಲೆಯ ಉಪಯುಕ್ತತೆಯು.

ಲೇಖಕರು:—ಕ. ಗೋ. ಗೋಲಪ್ಪನವರ, ಹುಲಕೋಟಿ.

ಹಳ್ಳಿಯ ಶಾಲೆಯಲ್ಲಿ ನೂರಕ್ಕೆ ೯೦—೯೫ ಒಕ್ಕಲಿಗರ ಮಕ್ಕಳಿರುವ
ಅವರಿಗೆ ಆ ಶಾಲೆಯಲ್ಲಿ ಸಾಮಾನ್ಯ ವಿಷಯಗಳ ಜ್ಞಾನವಿಷ್ಟೆ ಆಗುವದೇ ಹೊ
ಒಕ್ಕಲತನಕ್ಕೆ ಸಂಬಂಧಿಸಿದ ಯಾವ ವಿಷಯವೂ ಆಗುವದಿಲ್ಲ. ಇದರಿ
ಸಾಲೆಯ ಬಿಟ್ಟ ಆ ಹುಡುಗರು ಒಕ್ಕಲತನಕ್ಕೆ ನೀರೆರೆಯುವರು. ಹೀಗ

ಒಕ್ಕಲತನದ ಶಾಲೆಯ ಉಪಯುಕ್ತತೆಯು:

ಒಕ್ಕಲತನವು ಒಳ್ಳೇ ನಿಕೃಷ್ಟಾವಸ್ಥೆಗೆ ಬಂದದೆ. ಆದರೆ ಒಕ್ಕಲತನದ ಶಾಲೆಯಲ್ಲಿ ಸಾಮಾನ್ಯ ವಿಷಯಗಳನ್ನು ಕಲಿಸುವದಲ್ಲದೆ, ಒಕ್ಕಲತನದ ವಿಷಯಗಳನ್ನು ಕಲಿಸುವರು. ಈ ಒಕ್ಕಲತನದ ಶಾಲೆಯಲ್ಲಿ ಕಲಿಯುವ ಹುಡುಗರು ಪ್ರತಿ ದಿನ ೧—೨ ತಾಸು ಸಾಲೆಯ ಬೈಲು ಹವೆಯ ತೋಟದಲ್ಲಿ ಅಗಿಯುವದು, ಕೊಚ್ಚುವದು, ಬೀಜ ಬಿತ್ತುವದು, ನೀರೆರೆಯುವದು, ಸಸಿಗಳ ಹುಟ್ಟುವ ಕ್ರಮವನ್ನು ತಿಳಿಯುವದು, ಫಲಧಾರಣದ ಜ್ಞಾನ ಮಾಡಿಕೊಳ್ಳುವದು ಇವೇ ಮೊದಲಾದ ಕೆಲಸಗಳನ್ನು ಮಾಡಬೇಕಾಗುವದು. ಇದರಿಂದ ಈ ಶಾಲೆಯ ಹುಡುಗರ ಶಾರೀರಕ, ಮಾನಸಿಕ, ನೈತಿಕ ಸಾಮರ್ಥ್ಯಗಳು ಬಲಪಟ್ಟು ಹುಡುಗರಲ್ಲಿ ಚಟುವಟಿಕೆಯೂ, ನಿರೀಕ್ಷಣ ಬುದ್ಧಿಯೂ ತಲೆದೋರುವವು. ಹಾಗೂ ಶಾಲೆಯ ಬಿಟ್ಟನಂತರ ಒಕ್ಕಲತನದಲ್ಲಿ ಪೂರ್ಣ ಅಭಿಮಾನವುಳ್ಳವರಾಗಿ ತಾವು ಕಲಿತ ಬೀಜದ ಆರೈಕೆ, ಹವೆ, ಬೆಳಕಿನ ಮಹತ್ವ ಇವೆಲ್ಲವನ್ನು ಒಕ್ಕಲತನದಲ್ಲಿ ಉಪಯೋಗಿಸಿ ಹೆಚ್ಚು ಲಾಭ ಪಡೆಯುವರು. ಅಲ್ಲದೆ ತಾವು ಸಾಲೆಯಲ್ಲಿ ಕಲಿತ ಗುಡಾರ ನೇಯುವದು, ಹಗ್ಗ ಮಾಡುವದು, ಕಂಬಾರಿಕೆ ಬಡಿಗತನ ಇತ್ಯಾದಿ ಕೈಗಾರಿಕೆಯ ಧಂಧೆಯನ್ನು ಬಿಡಿ ವೇಳೆಯಲ್ಲಿ ಮಾಡಿ ತನ್ನ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವನು. ಈ ಸಾಲೆಯಲ್ಲಿ ಕಲಿತು ಹೋವ ಹುಡುಗರು ಒಕ್ಕಲತನಕ್ಕೆ ಒಳ್ಳೇ ಉಪಯೋಗ ಬೀಳುವರೆಂದು ಈಗ ಸಾಲೆಯ ಬಿಟ್ಟು ಒಕ್ಕಲತನ ಕೈಕೊಂಡ ಹುಡುಗರ ಪಾಲಕರಿಂದ ನಮಗೆ ತಿಳಿದು ಬಂದಿದೆ. ಹಾಗು ನಾವು ಪ್ರತ್ಯಕ್ಷ ನೋಡುತ್ತೇವೆ ಉದಾ—ನಮ್ಮ ಸಾಲೆಯಿಂದ ಕಲಿತು ಶೇತಕೀ ಮುಲಕೀ ಪರೀಕ್ಷೆ ಪಾಸಾದ ೧೭ ಹುಡುಗರಲ್ಲಿ ೪ ಹುಡುಗರು ಮಾತ್ರ ನೌಕರಿ ಮಾಡುವರು. ಉಳಿದವರೆಲ್ಲರೂ ಒಳ್ಳೇ ಆಸ್ತಿಯಿಂದ ಒಕ್ಕಲತನ ಮಾಡುವರು. ಇದರಿಂದ ಒಕ್ಕಲತನದ ಮೇಲೆ ಸುಪರಿಣಾಮವಾಗಿದೆ. ಕಾರಣ ಇಂಥ ಶಾಲೆಗಳನ್ನು ಎಲ್ಲ ಹಳ್ಳಿಪಳ್ಳಿಗಳಲ್ಲಿ ಆರಂಭಿಸಿ, ಹಿಂದುಸ್ಥಾನದ ಬೆನ್ನೆಲುವಿನಂತಿರುವ ಒಕ್ಕಲತನವನ್ನು ಪುನರುಜ್ಜೀವನಗೊಳಿಸಿದರೆ, ನಮ್ಮ ಒಕ್ಕಲತನದ ದೇಶವು ಸುಸ್ಥಿತಿಯುಳ್ಳದ್ದಾಗಿ ನಾವೆಲ್ಲರು ಸುಖವಾಗಿ ಬಾಳಲು ತಕ್ಕವರಾಗುವೆವು.

ಸಾಲೆಯ ಸುದ್ದಿಗಳು.

ಧಾರವಾಡ ತಾಲೂಕ ಮುಗದ ಗ್ರಾಮದ ಕನ್ನಡ ಸಾಲೆಗೆ ಅಲ್ಲಿಯ ವತನ ದಾರ ಪಾಟೀಲರೂ, ಕರ್ನಾಟಕ ಕಾಲೇಜಿನ ಪ್ರೊಫೇಸರರೂ ಆದ ಶ್ರೀ. ತಿಮ್ಮಪ್ಪ ಗೌಡರು ಪಾಟೀಲ ಇವರು ಸಾಲೆಯ ಇನಾರತಿಗಾಗಿ ತಮ್ಮ ಸ್ವಂತ ಜಾಗೆಯನ್ನು ಉಚಿತವಾಗಿ ಕೊಟ್ಟಿರುವರೆಂದೂ, ವಿದ್ಯಾರ್ಥಿಗಳಿಗೆ ಕೂಡ್ರಲಿಕ್ಕೆ ಚಾಪಿಗಳನ್ನೂ ಕೊಟ್ಟಿರುವರು—ಎಂದು ಅಲ್ಲಿಯ ಪೋಲೀಸ ಪಾಟೀಲ ಅಷ್ಟಪುತ್ರಿ ಹಣಮಂತಾಚಾರ್ಯರು ತಿಳಿಸುತ್ತಾರೆ.

* * *

ರಾಣೇಬೆನ್ನೂರ ತಾಲೂಕ ಕಸಗೂರ ಕನ್ನಡ ಶಾಲೆಯಲ್ಲಿ ಈ ಸಾರೆ ಗಣೇಶೋತ್ಸವವು ಬಹು ಅಂದವಾಗಿ ಜರುಗಿತು. ವಿದ್ಯಾರ್ಥಿಗಳು ನಾಟಕವನ್ನು ಆಡಿದರು. ಈ ಸುಸಂಧಿಯಲ್ಲಿ ಸ್ಕೂಲ ಪಂಚರಾದ ಶಿವಣ್ಣಾ ಲಕರಡ್ಡಿ ಮತ್ತು ಕರೇಗೌಡಾ ಕೆಂಚನಗೌಡ್ರ ಇವರು ಶಾಲೆಯ ಉಪಯೋಗಕ್ಕಾಗಿ ಒಂದು ಗಡಿಯಾರವನ್ನು ಸ್ಕೂಲ ಪಂಚ ಶ್ರೀ. ನಿಂಗಪ್ಪ ಕಚ್ಚರನಿ ಇವರು ಬಂದು ಜಾಂಗಟೆಯನ್ನು ಕೊಡಲೊಪ್ಪಿದ್ದಲ್ಲದೆ ಬೇರೆ ಸಭ್ಯಗೃಹಸ್ಥರು ಹಲಕೆಲವು ಉಪಕರಣಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು—ಎಂದು ಶ್ರೀ. ಫಕೀರಗವಡಾ ಲಿಂಗನಗವಡಾ ಪಾಟೀಲ ಇವರು ತಿಳಿಸುತ್ತಾರೆ.

* * *

ರೋಣ ತಾಲೂಕ ಮಾರಣಬಸರಿ ಕನ್ನಡ ಶಾಲೆಯಲ್ಲಿ ಈ ವರ್ಷವೂ ಗಣೇಶೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ರಾ॥ ರಾ॥ ಗಣೇಶಭಟ್ಟ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸದ್ಗೃಹಸ್ಥರ ಭಾಷಣಗಳಾದವು—ಎಂದು ಶ್ರೀ. ಮು. ವ. ಅತ್ತಾರ, ಸೆಕ್ರೆಟರಿ ಪ. ಸ. ಸಂಘ ಇವರು ತಿಳಿಸುತ್ತಾರೆ.

* * *

ಕಲಘಟಗಿ ತಾಲೂಕ ಹಿರೇಹೊನ್ನಿಹಳ್ಳಿ ಕನ್ನಡ ಸಾಲೆಯಲ್ಲಿ ಗಣೇಶೋತ್ಸವವು ಈ ವರ್ಷವೂ ಅತಿ ಸಂಭ್ರಮದಿಂದ ಜರುಗಿತು. ವಿದ್ಯಾರ್ಥಿಗಳ ಕೋಲಿನ ಮೇಳವು ಛಂದವಾಗಿತ್ತು. ಶ್ರೀ. ಕಟ್ಟೀ ಇವರು ೫ ದಿವಸ ವ್ಯಾಖ್ಯಾನಗಳನ್ನು ಏರ್ಪಡಿಸಿದರು. ವಿದ್ಯಾರ್ಥಿಗಳು ಶಿಬಿಚಕ್ರವರ್ತಿ ನಾಟಕವನ್ನು ಅಭಿನಯಿಸಿದರು. ಹುಬ್ಬಳ್ಳಿಯ ರಾ॥ ಸಾ॥ ಶಿರಹಟ್ಟಿಯವರೂ ಒನೆಯ ಸುಪರವಾಯಿಜರರೂ ಆಗ



ಸಾಲೆಯ ಸುದ್ದಿಸುರಬಿ. ಜಿ

ಮಿಸಿ ಭಾಷಣ ಮಾಡಿದರು--ಎಂದು ರಾ॥ ರಾ॥ ಬಸಪ್ಪ ಪಾತ್ರ, ಸೆ। ಕೊ। ಕೈ। ಸೊ। ಇವರು ತಿಳಿಸುತ್ತಾರೆ

*　　*　　*

ತಾ॥ ೯--೯--೩೮ನೆಯ ದಿವಸ ಗವಗ ತಾಲೂಕ ಕುರ್ತಕೋಟಿ ಕನ್ನಡ ಶಾಲೆಯ ವಾರ್ಷಿಕ ಇನಾಮಿನ ಸಮಾರಂಭವು ಶ್ರೀ. ಎಸ್. ಎಸ್. ಬಸವನಾಳ, ಎಮ್. ಎ ಪ್ರಿನ್ಸಿಪಾಲ, ಕ. ಲಿಂ. ಎ. ಸೊ. ಹಾ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಪ್ರೇಕ್ಷಣೀಯವಾಗಿ ಜರುಗಿತು. ವಿದ್ಯಾರ್ಥಿಗಳ ಮಲಕಂಬ, ಕುಸ್ತಿ, ಬರಹ, ಜಿದ್ದ ಮೊದಲಾದ ಶರ್ಯತ್ತುಗಳೂ, ಹುಡುಗರ ಕೈಗಾರಿಕೆಯ ಪ್ರದರ್ಶನವೂ ನೆರವೇರಿದವು. ಕರ್ನಾಟಕ ರಾಷ್ಟ್ರಗೀತೆ, ನಿಶಾನಿ ಡ್ರಿಲ್, ಇಂಗ್ಲಿಷ, ಕನ್ನಡ ಭಾಷಣ ಮೊದಲಾದವು ವಿದ್ಯಾರ್ಥಿಗಳಿಂದ ಜರುಗಿದವು ಶ್ರೀ. ರಾಯನಗವಡರು ಪಾಟೀಲ, ಬಿ ಎ. ಮೊದಲಾದವರ ಭಾಷಣಗಳಾದವು. ಹೊಲೆಯರು, ಮಾದಿಗರು, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅಂಗಿ, ಟೊಪ್ಪಿಗೆಗಳು ಕೊಡಲ್ಪಟ್ಟವು; ಅಧ್ಯಕ್ಷರು ಸರಸ ಭಾಷಣ ಮಾಡಿದರು. ಹೊಲೆಯರ ಹುಡುಗರನ್ನು ಸ್ವತಃ ಕೈಮುಟ್ಟಿ ಇನಾಮನ್ನು ಇತ್ತರು ಹೆಡ್ ಮಾಸ್ತರರಾದ ಫ ನಿ. ಕಾಳಪ್ಪನವರ ಇವ ು ಅಭ್ಯಾಗತರ ಆಭಾರ ಮನ್ನಿಸಿದರು--ಎಂದು ಚಿಕ್ಕಹನುಮಂತ ಪಾಟೀಲ ಇವರು ತಿಳಿಸುತ್ತಾರೆ.

*　　*　　*

ಬಂಕಾಪೂರ ತಾಲೂಕ ಇಂಗಳಿಗಿ ಗ್ರಾಮದ ಕನ್ನಡ ಶಾಲೆಯಲ್ಲಿ ಗಣೇಶೋತ್ಸವವು ಉತ್ಸವಪೂರ್ವಕವಾಗಿ ನೆರವೇರಿತು. ಈ ಶಾಲೆಯಿಂದ ಈ ಸಾರಿ ಮುಲ್ಕೀ ಪರೀಕ್ಷೆಗೆ ಕುಳಿತ ೭ ಜನ ವಿದ್ಯಾರ್ಥಿಗಳಲ್ಲಿ ೬ ಜನ ವಿದ್ಯಾರ್ಥಿಗಳು ಪಾಸಾಗಿದ್ದು, ಅವರಿಗೆ ಸರ್ಟಿಫಿಕೇಟ ಹಂಚುವ ಸಮಾರಂಭವು ಸ್ಕೂಲ ಪಂಚಕಮಿಟಿಯ ಚೇರಮನ್ನರಾದ ಮ॥ ರಾ॥ ರಾ॥ ಬಸಪ್ಪ ಕೋಟೆಣ್ಣನವರ ಅಧ್ಯಕ್ಷತೆಯಲ್ಲಿ ಜರುಗಿತು ಎಂದು--ಪು. ಚ. ಹಿರೇಮಠ ಅ. ನಾ ಇವರು ತಿಳಿಸುತ್ತಾರೆ.

ಸೂಚನೆ:--ಇನ್ನು ಮುಂದೆ ಶಾಲೆಗಳ ಬಗ್ಗೆ ಸುದ್ದಿಯನ್ನು ಪ್ರಕಟಿಸುವ ವಿಷಯದಲ್ಲಿ ನಮಗೆ ಮಹತ್ವದ ಮತ್ತು ವಿಶ್ವಸನೀಯ ಸಂಗತಿಗಳು ಮಾತ್ರ ಬೇಕು. ಕಾರಣ ಆಯಾ ಶಾಲೆಯ ಹೆಡ್ ಮಾಸ್ತರರಿಂದಾಗಲೀ, ಪಂಚರ ಸಭೆಯಿಂದಾಗಲೀ, ಮೇಲಧಿಕಾರಿಗಳಿಂದಾಗಲೀ ಬಂದ ವರದಿಯನ್ನಷ್ಟೇ ಸ್ವೀಕರಿಸಿ, ಯೋಗ್ಯ ಕಂಡಷ್ಟು ವಿಷಯವು ಪ್ರಕಟಿಸಲಾಗುವದು. ಓರ್ವ ಪ್ರೇಕ್ಷಕ, ಅಸಿ. ಮಾಸ್ತರ ಮೊದಲಾದವರಿಂದ ಬಂದ ವರದಿಯು ಸ್ವೀಕರಿಸಲರ್ಹವಾಗುವದಿಲ್ಲ.

ಸಂಪಾದಕ.

ಡಿ ಎಲ್ ಬಿ. ಅಧ್ಯಕ್ಷರ
ಅಭಿನಂದನ.

ಮ॥ ಕಾ॥ ರಾ॥ ಚನ್ನಪ್ಪ ಚನವೀರಪ್ಪ ಹುಲಕೋಟಿ, ಬಿ. ಎ, ಎಲ್. ಎಲ್. ಬಿ. ಇವರು ಧಾರವಾಡ ಜಿಲ್ಲಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮೊದಲನೆಯ ಲೋಕನಿಯುಕ್ತ ಪ್ರೆಸಿಡೆಂಟರಿದ್ದು, ಅವರು ಬೆಳಗಾಂವಿಗೆ ಅಸಿಸ್ಟಂಟ ಜಜ್ಜರಾಗಿ ಸರಕಾರದಿಂದ ನೇಮಿಸಲ್ಪಟ್ಟಿರುವರು. ಈ ದೊಡ್ಡ ಅಧಿಕಾರಕ್ಕೆ ಹೋದ ಅವರನ್ನು ಅಭಿನಂದಿಸುತ್ತೇವೆ. ಅವರು ಹೋದಂದಿನಿಂದ ವ್ಹಾಯಿಸ ಪ್ರೆಸಿಡೆಂಟರಾದ ಮ॥ ರಾ॥ ರಾ॥ ಡಿ. ಎಲ್. ಪಾಟೀಲ, ಬಿ ಎ., ಎಲ್. ಎಲ್ ಬಿ., ಇವರು ಪ್ರೆಸಿಡೆಂಟ ಕೆಲಸವನ್ನು ನೋಡುತ್ತಿರುವರು. ಇದೇ ತಿಂಗಳ ಆರಂಭದಲ್ಲಿ ಪ್ರೆಸಿಡೆಂಟರ ಜುನಾವಣೆಯಾಗಿ ಆ ಬಹುಮಾನವು ನಮ್ಮ ಸ್ಕೂಲ ಬೋರ್ಡಿನ ಚೇರಮನ್ನರಾದ ಮ॥ ರಾ॥ ರಾ॥ ಸಿದ್ಧಪ್ಪನವರು ಹೊಸಮನಿ, ಬಿ. ಎ., ಎಲ್. ಎಲ್. ಬಿ., ಇವರಿಗೆ ಕೊಡಲ್ಪಟ್ಟಿತು. ಅವರಿಗೂ ಕೋಸ್ಕರ ಅವರನ್ನೂ ಅಭಿನಂದಿಸುವೆವು.

ಶ್ರೀಮಾನ್ ಸಿ. ಸಿ. ಹುಲಕೋಟಿಯವರು ೧೯೧೩ರಲ್ಲಿ ಹಾಯಕೋರ್ಟ ವಕೀಲರಾಗಿ ಧಾರವಾಡದಲ್ಲಿ ನಿಂತು, ಅಲ್ಪಾವಧಿಯಲ್ಲಿಯೇ ನಾಮಾಂಕಿತ ವಕೀಲರಲ್ಲೊಬ್ಬರಾದರು. ಇವರು ಬಹಳ ಬುದ್ಧಿಶಾಲಿಗಳೂ, ಕಾರ್ಯದಕ್ಷರೂ, ಪ್ರಾಮಾಣಿಕರೂ, ಉತ್ಸಾಹಿಗಳೂ ಇದ್ದು ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಬಹು ದಕ್ಷತೆಯಿಂದ ಕೆಲಸ ಮಾಡಿ ಲೋಕಪ್ರಿಯರಾಗಿರುವರು. ಧಾರವಾಡ ನಗರ ಸಭೆಯ ಅಧ್ಯಕ್ಷರು, ಕರ್ನಾಟಕ ಸೆಂಟ್ರಲ್ ಬ್ಯಾಂಕಿನ ಉತ್ಪಾದಕರಲ್ಲೊಬ್ಬರು, ಕರ್ನಾಟಕ ಡಿವ್ಹಿಜನಲ್ ಕೋಆಪರೇಟಿವ್ಹ ಇನ್‌ಸ್ಟಿಟ್ಯೂಟದ ಅಧ್ಯಕ್ಷರು, ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು, ಕರ್ನಾಟಕ ಏಕೀಕರಣ ಸಂಘ, ಬ್ಯಾಂಚ ಧಾರವಾಡ ಇವರ ಚೇರಮನ್ನರು, ಪ್ರಥಮ ಕಾಯದೇ ಕೌನ್ಸಿಲ್ಲಿನ ಮೆಂಬರರೂ ಇತ್ಯಾದಿ ಅನೇಕ ಗೌರವ ಸ್ಥಾನಗಳಲ್ಲಿ ಮಂಡಿತರಾಗಿ ಅನೇಕ ಲೋಕೋಪಕಾರದ ಕೃತ್ಯಗಳನ್ನು ಮಾಡಿ ಹೆಸರುವಾಸಿಗಳಾಗಿರುವರು. ಇವರು ಜಜ್ಜರಾಗುವ ಪೂರ್ವದಲ್ಲಿ ಪಬ್ಲಿಕ್ ಪ್ರೊಸೆಕ್ಯೂಟರರಿದ್ದರು. ಇವರು ತಮ್ಮ ಈ ವಿಸ್ತಾರವಾದ ಕಾರ್ಯಕ್ಷೇತ್ರದಿಂದ ದೂರಾಗಿ (ಸಾರ್ವಜನಿಕ ಚಟವಟಿಕೆಗಳಿಗೆ ನಿಸ್ತೇಜ ಉಂಟಾಗಿರಿಂದಬಹಳೇ ಅಸಮಾಧಾನವಾಗಿದೆ). ಆದಾಗ್ಯೂ ಇವರು ಸರಕಾರದ

ಉನ್ನತ ಪದವಿಗೆ ಹೋಗಿದ್ದು ಕ್ರಮೇಣ ನ್ಯಾಯ ಖಾತೆಯಲ್ಲಿ ಅತ್ಯುನ್ನತ ಪದವಿಗೆ ಬರುವರೆಂಬ ದೃಢ ವಿಶ್ವಾಸದಿಂದ, ಸಂತೋಷದಿಂದ ಅವರ ಅಭಿನಂದನವನ್ನು ಮಾಡುತ್ತೇವೆ.

ಶ್ರೀಮಾನ್ ಸಿ. ಕೆ. ಹೊಸಮನಿ ಇವರಾದರೂ ಮೊದಲನೇ ಸ್ಕೂಲ ಬೋರ್ಡ ಚೇರಮನ್ನರಿದ್ದು, ಬಹು ದಕ್ಷತೆಯಿಂದ ಕೆಲಸ ಮಾಡುತ್ತ ಇದ್ದು, ಲೋಕ ಪ್ರಿಯರಾಗಿರುವರು. ಇವರಾದರೂ ತಮ್ಮ ಆಯುಷ್ಯವನ್ನೆಲ್ಲ ಸಾರ್ವಜನಿಕ ಕಾರ್ಯದಲ್ಲಿಯೇ ಕಳೆದಿದ್ದಾರೆ. ಯಾವಾಗಲೂ ಜನಹಿತವನ್ನೇ ಗುರಿಯಿಟ್ಟು ಕೊಂಡು ಕೆಲಸ ಮಾಡುತ್ತ ಬಂದಿದ್ದಾರೆ. ಈ ಮಹನೀಯರಿಗೆ ಡಿ. ಲೋ. ಬೋರ್ಡಿನ ಅಧ್ಯಕ್ಷಸ್ಥಾನವೂ ಸಹ ದೊರೆತದ್ದು ಸಹಜವೇ ಸರಿ. ಈ ಎರಡೂ ಬೋರ್ಡುಗಳ ಅಧ್ಯಕ್ಷಸ್ಥಾನವು ಇವರಲ್ಲಿ ಕೂಡಿದ್ದರಿಂದ ಸ್ಥಾನಿಕ ಸಂಸ್ಥೆಯ ಕೆಲಸವು ಬಹು ಹೊಂದಿಕೆಯಿಂದ ಜರುಗುವದರಲ್ಲಿ ಸಂದೇಹವಿಲ್ಲ. ಇನ್ನುಳಿದ ಅಲ್ಪ ಕಾಲದಲ್ಲಿ ಅನೇಕ ಮಹತ್ಕಾರ್ಯಗಳನ್ನು ನೆರವೇರಿಸಿ ಬೋರ್ಡಿನ ಗೌರವವನ್ನು ಹೆಚ್ಚಿಸುವರೆಂದು ನಂಬಿ ಇವರ ಅಭಿನಂದನವನ್ನು ಮನಮುಟ್ಟಿ ಮಾಡುವೆವು.

—ಸಂಪಾದಕ.

ಧಾರವಾಡ ಜಿಲ್ಹಾ ಸ್ಕೂಲ ಬೋರ್ಡಿನ

ಸರಕ್ಯೂಲರುಗಳು.

ಸರಕ್ಯೂಲರ ನಂ. ೬.

ಅಜಂ—ಯಾವತ್ತು ಲೋಕಲ್ ಬೋರ್ಡ ವ ನಾನ್ ಲೋಕಲ್ ಅಥಾರಿಟಿ ಮುನಿಸಿಪಾಲಿಟಿ ಮಾಸ್ತರ ಜನರಿಗೆ :—

ಹುಕುಂ :—" ಮಾಸ್ತರ ಕೋಡ " ಇನೇ ಪ್ರಕರಣದಲ್ಲಿಯ ಗನೇ ನೇಮದಂತೆ ದರ ತಿಂಗಳ ಯಾವತ್ತು ಹುಡುಗರ ಫೀಯನ್ನು ಗಂನೇ ತಾರೀಖಿನೊಳಗಾಗಿ ತಪ್ಪದೆ ವಸೂಲ ಮಾಡತಕ್ಕದ್ದು ಯಾವ ಕಾರಣದಿಂದಲೂ ಫೀ ಹಣವನ್ನು ಶಿಲಕು ಇಡಕೂಡದು ತಮ್ಮ ತಮ್ಮ ಶಾಲೆಗಳ ಫೀ ಹಣವನ್ನು ದರ ತಿಂಗಳ ೨೦ನೇ ತಾರೀಖಿನೊಳಗಾಗಿ ತಪ್ಪದೆ ತಾಲೂಕ ಶಾಳಾಮಾಸ್ತರ ಕಡೆಗೆ ಭರಣಾಕ್ಕೆ

ಕಳಿಸತಕ್ಕದ್ದು ಇದಕ್ಕೆ ಬಿಲ್‌ಕುಲ್ ಹೈಗೈ ಆಗಕೂಡದು ಪ್ರತಿ ವರ್ಷ ಮೇ ತಿಂಗಳ ಫೀಯನ್ನು, ಎಪ್ರೀಲ ೧೦ನೇ ತಾರೀಖಿನೊಳಗಾಗಿ, ಎಪ್ರೀಲ ತಿಂಗಳದ ಫೀ ಕೂಡ ವಸೂಲ ಮಾಡಿ ತಾಲೂಕ ಶಾಳಾ ಮಾಸ್ತರ ಕಡೆಗೆ ಭರಣಾಕ್ಕೆ ಕಳಿಸತಕ್ಕದ್ದು.

ಮೇಲೆ ವಿವರಿಸಿದ ಯಾವದಾದರೊಂದು ನೇಮಕ್ಕೆ ಯಾರಾದರೂ ಶಿಕ್ಷಕರು ತಪ್ಪಿದಲ್ಲಿ ಅಂಥವರ ಬಗ್ಗೆ ಯೋಗ್ಯ ತಜವೀಜ ಮಾಡಲಾದೀತು. ತಿಳಿಯುವದು. ತಾರೀಖು ೨೦—೯—೧೯೨೮.

(Sd) S. K. Hosamani,
ಚೇರಮನ್.

ಸರಕ್ಯೂಲರ ನಂ. ೮.

ಮೆ॥ ಚೇರಮನ್, ಡಿ। ಸ್ಕೂ। ಬೋರ್ಡ ಧಾರವಾಡ ಇವಂದ :—

ಅಜಂ—ಜಿಲ್ಲೆಯೊಳಗಿನ ಯಾವತ್ತು ಲೋಕಲ್ ಬೋರ್ಡ ಶಾಳಾ ಮಾಸ್ತರ ವ ಮಿಸ್ಟ್ರೇಸರಿಗೆ ಈ ಸರಕ್ಯೂಲರದ ಮೂಲಕ ತಿಳಿಯಪಡಿಸುವದೇನಂದರೆ :— ಬೋರ್ಡಿನ ಸುಪರವಾಯಿಜರರು ತಮ್ಮ ಶಾಲೆಯ ವಾರ್ಷೀಕ ಪರೀಕ್ಷೆಗಾಗಲಿ, ತಪಾಸಣೆಗಾಗಲಿ ಬಂದಾಗ್ಗೆ ಅವರಿಗೆ ಮಾಸ್ತರರು ಸರಬರಾಯಿ ವಗ್ಗೈರಿ ಏನೂ ಮಾಡಬಾರದು; ಮತ್ತು ತಮ್ಮ ಮನಿಯಲ್ಲಿ ಅವರನ್ನು ಇಳಕೊಳ್ಳಗೊಡಬಾರದು. ತಿಳಿಯುವದು ತಾ॥ ೧—೧೦—೧೯೨೮ ಇಸ್ವಿ

(Sd) S. K. Hosamani,
ಚೇರಮನ್.

ಸರಕ್ಯೂಲರ ನಂ ೯

ಮೆ॥ ಚೇರಮನ್ ಡಿ। ಸ್ಕೂ। ಬೋರ್ಡ ಧಾರವಾಡ ಇವರಿಂದ :—

ಬೋರ್ಡಿನ ಎಲ್ಲ ಸುಪರವಾಯಿಜರರಿಗೆ ಈ ಸರಕ್ಯೂಲರ ಮೂಲಕ ತಿಳಿಯಪಡಿಸುವದೇನಂದರೆ : — ಸುಪರವಾಯಿಜರರು ಶಾಲೆಗಳ ವಾರ್ಷಿಕ ಪರೀಕ್ಷೆಗಾಗಲಿ

ತಪಾಸಣಿಗಾಗಲಿ ಹೋದ ಕಾಲಕ್ಕೆ ಮಾಸ್ತರರ ಮನೆಗಳಲ್ಲಿ ಇಳಕೊಳ್ಳಬಾರದು; ಮತ್ತು ಅವರ ಕಡೆಯಿಂದ ಸರಬರಾಯಿ ವಗ್ಯೆರೆ ಏನೂ ತಕ್ಕೊಳ್ಳಬಾರದು. ತಿಳಿಯುವದು ತಾ॥ ೧—೧೦—೧೪೨೮

(Sd) S. K. Hosamani,
ಚೇರಮನ್.

ಸರಕ್ಯೂಲರ ನಂ. ೧೧,

ಅಜಂ—ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಲೋಕಲ್ ಬೋರ್ಡ ಮತ್ತು ನಾನ್ ಲೋಕಲ್ ಅಥಾರಿಟಿ ಮುನಿಸಿಪಾಲಿಟಿ ಶಾಲಾ ಶಿಕ್ಷಕ ಶಿಕ್ಷಿಕೆಯರಿಗೆ ತಿಳಿಸುವದೇನಂದರೆ:—

೧೯೨೫ನೇ ಮಾರ್ಚ ತಿಂಗಳಿನಿಂದ ೧೯೨೬ನೇ ಫೆಬ್ರುವರಿ ಪೂರಾ, ೧೯೨೬ನೇ ಮಾರ್ಚದಿಂದ ೧೯೨೭ನೇ ಫೆಬ್ರುವರಿ ಪೂರಾ, ೧೯೨೭ನೇ ಮಾರ್ಚದಿಂದ ೧೯೨೮ನೇ ಫೆಬ್ರುವರಿ ಪೂರಾ ಈ ಪ್ರಕಾರ ಮೂರು ವರ್ಷಗಳ ಬಾಬತ ನಿಮ್ಮ ಶಾಲೆಗಳ ವಿದ್ಯಾರ್ಥಿಗಳ ಹಾಜರಿ ಸರಾಸರಿಯನ್ನು ಏನೂ ತಪ್ಪಿಲ್ಲದಂತೆ ತಯಾರಿಸಿ ತೀವ್ರವಾಗಿ ನಿಮ್ಮ ತಾಲೂಕ ಮಾಸ್ತರರ ಕಡೆಗೆ ಕಳಿಸಿಕೊಡಬೇಕು; ನೀವು ಕಳಿಸಿದ ಮಾಹಿತಿಯು ನಿಮ್ಮಿಂದ ಪ್ರತಿ ತಿಂಗಳಲ್ಲಿ ಕಳಿಸಲ್ಪಟ್ಟ ನಮ್ಮ ಆಫೀಸಿನಲ್ಲಿರುವ ಮಾಹಿತಿಗೆ ಮೇಳಿರಲಿಕ್ಕೆ ಬೇಕು; ಯಾರ ಮಾಹಿತಿಯು ಮೇಳಾಗಲಿಕ್ಕಿಲ್ಲವೋ ಅವರ ತಪ್ಪಿಗೆ ಪೂರ್ಣವಾಗಿ ಅವರೇ ಜವಾಬದಾರರಾಗುವರು: ಕಾರಣ ಸ್ವಲ್ಪು ಸಹ ದುರ್ಲಕ್ಷವಾಗದಂತೆ ಮಾಹಿತಿ ತಯಾರಿಸಿ ಕಳಿಸಬೇಕು; ಪೋಟ ಶಾಲೆಗಳ ಹಾಜರಿ ಸರಾಸರಿಯನ್ನು ಮುಖ್ಯ ಶಾಲೆಯಲ್ಲಿ ಕೂಡಿಸಬಾರದು; ಪ್ರತ್ಯೇಕವಾಗಿ ತೋರಿಸಬೇಕು; ಈ ಮೂರು ವರ್ಷಗಳಲ್ಲಿ ಯಾವವಾದರೂ ಹೊಸ ಶಾಲೆಗಳಾಗಿದ್ದರೆ ಅವರು ಯಾವ ವರ್ಷ ಎಷ್ಟು ತಿಂಗಳ ಶಾಲೆ ನಡೆದಿರುವದೋ ಅಷ್ಟೇ ತಿಂಗಳಿನ ಸರಾಸರಿ ತೆಗೆಯತಕ್ಕದ್ದು; ಯಾವವಾದರೂ ಶಾಲೆಗಳು ಪ್ಲೇಗ ವಗ್ಯೆರೆ ಮೂಲಕ ಬಂದಾಗಲಿಕ್ಕೆ ಇತ್ತ ಕಡೆಯಿಂದ ಲೇಖೀ ಪರವಾನಿಗೆ ಪಡಕೊಂಡಿದ್ದರೆ ಶಾಲೆ ನಡೆದಷ್ಟು ದಿವಸಗಳ ಸರಾಸರಿ ತೆಗೆಯಬೇಕು; ಆದರೆ ಪರವಾನಿಗೆ ನಂಬರ ವ ಅವಧಿ ವಗ್ಯೆರೆ ಶರಾ ಕೋಷ್ಟಕದಲ್ಲಿ ಕಾಣಿಸಬೇಕು; ಹುಡುಗರ ಹಾಜರಿಯು ಕಡಿಮೆಯದೆಯೆಂದು ತಾವೇ ಮನಬಂದಂತೆ ಕಡಿಮೆ ದಿವಸಗಳ ಸರಾಸರಿ ತೆಗೆಯಬಾರದು: ತಿಳಿಯುವದು ತಾ॥ ೧೦—೧೦—೧೯೨೮

ತಾಲೂಕ ಮಾಸ್ತರರಿಗೆ ಸೂಚನೆ:—

ಸದರಿ ಮಾಹಿತಿಯನ್ನು ತೀವ್ರ ತರಿಸಿಕೊಂಡು ಶಾಲಾವಾರ ಒಟ್ಟು ಪತ್ರಿಕೆ ತಯಾರಿಸಿ ಬೇಗನೆ ನಮ್ಮ ಕಡೆಗೆ ಕಳಿಸಿಕೊಡಬೇಕು.

(Sd) S. K. Hosamani,
ಚೇರಮನ್,

ಸ್ಕೂಲ್ ಬೋರ್ಡ ಠರಾವ ನಂ. ೫೭. (೨೯-೮-೨೮)

[೧] ಅಣ್ಣಿಗೇರಿ, [೨] ಗರಗ, [೩] ಕರ್ಜಗಿ, [೪] ಹಾನಗಲ್ಲ ಈ ಊರ ಕನ್ನಡ ಶಾಲೆಗಳಿಗೆ ಇಂಗ್ಲಿಷ ಕ್ಲಾಸಗಳನ್ನು ಕೆಳಗಿನ ಶರ್ತಿನಿಂದ ಜೋಡಿಸಬೇಕೆಂದು ಠರಾಯಿಸಲ್ಪಟ್ಟಿತು.

೧. ೪೦೦೦ ರೂಪಾಯಿ ಕಾಯಮು ಫಂಡ ಅಂತಾ ಪ್ರತಿಯೊಂದು ಊರವರು ಸ್ಕೂಲಬೋರ್ಡಿನ ತಾಬಾಕ್ಕೆ ಕೊಡತಕ್ಕದ್ದು.

೨. ಮೊದಲಿನ ಐದು ವರ್ಷಗಳವರೆಗೆ ಇಂಗ್ಲಿಷ ಕ್ಲಾಸ ಹಾಕುವ ಬಗ್ಗೆ ಬಿನ್ ಭಾಡೆದಿಂದ ಯೋಗ್ಯ ಇಮಾರತಿಯನ್ನು ಪೂರೈಸಿ ಕೊಡಬೇಕು.

೩. ಇಂಗ್ಲಿಷ ಕ್ಲಾಸಿಗೆ ಬೇಕಾಗುವ ಅವಶ್ಯವಾದ ಫರ್ನೀಚರ, ಬುಕ್ಸು, ನಕಾಶ ವಗೈರೆ ಸಾಮಾನುಗಳನ್ನು ಕೊಡತಕ್ಕದ್ದು.

[Sd] S K. Hosamani,
ಚೇರಮನ್

ಪ್ರಾಥಮಿಕ ಶಿಕ್ಷಕರ ಪಗಾರ.

ಸಂಪಾದಕರು

ಸದ್ಯಕ್ಕೆ ಅಮಲಿನಲ್ಲಿ ಬಂದಿರುವ ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಕರ ಪಗಾರದ ಸ್ಕೇಲಿನ ಬಗ್ಗೆ ಸರಕಾರದ ಠರಾವುಗಳಲ್ಲಿ ತಾ॥ ೨೪—೩—೧೯೨೪ನೆಯ ಇಸ್ವಿ ನಂ. ೫೬೦ನೆಯ ಠರಾವು ಮತ್ತು ತಾ॥ ೧೦—೩—೧೯೨೬ನೆಯ ಇಸ್ವಿ ನಂ. ೫೬೦ನೆಯ ಠರಾವುಗಳು ಬಹಳ ಮಹತ್ವದವು ಇರುತ್ತವೆ. ಉಳಿದ ಠರಾವುಗಳು ಈ ಠರಾವುಗಳ ಪೋಟ ನಿಯಮಗಳನ್ನು ಮಾತ್ರ ಸ್ಪಷ್ಟೀಕರಣ ಮಾಡುತ್ತವೆ. ಈ ಎಲ್ಲ ಠರಾವುಗಳಿಂದ ನಿಶ್ಚಿತವಾದ ಸ್ಕೇಲು ಇಂಗ್ಲಿಷ ಭಾಷೆಯನ್ನರಿಯದ ಶಿಕ್ಷಕರ ಸಲುವಾಗಿ ಕನ್ನಡದಲ್ಲಿ ಕೊಟ್ಟಿದ್ದೇವೆ.

ಈಗ ಪ್ರಚಾರದಲ್ಲಿರುವ ಪಗಾರದ ಸ್ಕೇಲು

ಸೂಚನೆ:—ಪ್ರಪಂಚಕ್ಕೆ ಅವಶ್ಯವಾದ ವಸ್ತುಗಳ ಬೆಲೆಯ ಧಾರಣೆಯು ಳಿದ ಮೇಲೆ ಈ ಸ್ಕೇಲ ಕಡಿಮೆ ಮಾಡಲಿಕ್ಕೆ ಬರುವಂತಿದೆ.

(೧) ತಾರೀಖು ೩೩ ಜೂನ ೧೯೨೩ ಇಸ್ವಿ ದಿವಸ ಸರಕಾರದ ಶಿಕ್ಷಣ ಖಾತೆಯಲ್ಲಿ, ಲೋಕಲ್‌ಬೋರ್ಡಿನಲ್ಲಿ ಮತ್ತು ಮುನಿಸಿಪಾಲಿಟಿಯಲ್ಲಿ ಕಾಯಮು ಇದ್ದ ಶಿಕ್ಷಕರಿಗೆ ತಾರೀಖು ೧ನೇ ಮಾರ್ಚ ೧೯೨೩ನೆಯ ಇಸ್ವಿಯಿಂದ ಕೆಳಗೆ ಕೊಟ್ಟ ಸ್ಕೇಲಿನ ಪ್ರಕಾರ ಪಗಾರ ಕೊಡುವದರಲ್ಲಿ ಬರುವದು:—

	ತಿಂಗಳ ಪಗಾರ ರೂ				
	ಆರಂಭಕ್ಕೆ	ಬಡತಿ ದರ.	ಮಧ್ಯದಲ್ಲಿ	ಬಡತಿ ದರ.	ಕಡೆಗೆ
ಅನ್‌ಪಾಸ ಶಿಕ್ಷಕರಿಗೆ	೨೦	೦	೦	೦	೨೦
ಪಾಸ ಆದ ಶಿಕ್ಷಕರಿಗೆ	೨೫	೧/೫ (ಜ ವ. ಕ್ಕೆ ೧ ರೂ.)		೦	೩೦
೧ನೆಯ ವರ್ಗ ಟ್ರೇಂಡ ಶಿ	೩೦	೧/೩	೩೫	೧/೨	೪೦

೨ನೆಯ ವರ್ಷ ಟ್ರೇಂಡ ಶಿ. ೩೫	೧/೨	೪೫	೧/೧	೫೦
೩ನೆಯ ವರ್ಷ ಟ್ರೇಂಡ ಶಿ ೪೦	೨/೩	೫೦	೧/೧	೬೦

(G R. 560 24-3-24).

(೨) ಈ ಪಗಾರವಲ್ಲದೆ ಹೆಡ್ ಮಾಸ್ತರರಿಗೆ ಕೆಳಗೆ ಕೊಟ್ಟ ದರದಂತೆ ಅಲಾವನ್ಸ ಕೊಡುವದರಲ್ಲಿ ಬರುವದು. ಈ ಅಲಾವನ್ಸು ಸಾಲೆಯಲ್ಲಿಯ ಹುಡುಗರ ಕಳೆದ ಎರಡು ವರ್ಷದ ಸರಾಸರಿ ಹಾಜರೀ ಮೇಲಿಂದ ನಿಶ್ಚಯಿಸಲ್ಪಡುವದು. ಸಾಧಾರಣತಃ ಒಟ್ಟು ೧೦ ವರ್ಷ ನೌಕರೀ ಆಗದೇ ಇದ್ದ ೩ನೆಯ ವರ್ಷದ ಟ್ರೇಂಡ ಶಿಕ್ಷಕರೂ ಒಟ್ಟು ೫ ವರ್ಷ ನೌಕರಿಯಾಗದಿದ್ದ ೨ನೇ ವರ್ಷದ ಟ್ರೇಂಡ ಶಿಕ್ಷಕರೂ ಈ ಅಲಾವನ್ಸಿಗೆ ಭಾಜನರಾಗುವದಿಲ್ಲ.

*** ತಾ॥ ೧-೩-೧೯೨೩ರಿಂದ ೨೮-೨-೧೯೨೫ರ ವರೆಗೆ ಕೊಡತಕ್ಕ ಹೆಡ್ ಮಾಸ್ತರರ ಅಲಾವನ್ಸ.**

ಸರಾಸರಿ ಹಾಜರಿ, ಹುಡುಗರ ಸಂಖ್ಯೆ.				ಹೆ. ಮಾ. ಅಲಾವನ್ಸ ರೂಪಾಯಿ.
೫೦ರ ವರೆಗೆ	....	....	....	೩
೫೧—೧೦೦	....	....	....	೬
೧೦೧—೧೫೦	....	....	....	೯
೧೫೧ - ೨೦೦	....	....	....	೧೨
೨೦೧—೨೫೦	....	....	....	೧೫
೨೫೦ ರ ಮೇಲೆ	....	....	....	೨೦

(G. R. 560, 24-3-24 & 21-6-26).

ತಾ॥ ೧-೩-೧೯೨೫ರಿಂದ ಕೊಡತಕ್ಕ ಅಲಾವನ್ಸ.

೭೫ರ ವರೆಗೆ	....	....	....	೫
೭೬—೧೫೦	....	....	....	೧೦
೧೫೧ - ೨೨೫	....	....	....	೧೫
೨೨೬—೩೦೦	....	....	....	೨೦
೩೦೦ರ ಮೇಲೆ	....	....	....	೨೫

* ಮಂಥ ಪ್ರಾಂತದ ಸ್ಕೇಲ ಕೊಟ್ಟಿಲ್ಲ.

ಉರ್ದು ಶಾಲೆಗಳ ಮತ್ತು ಪಂಚಮರ ಶಾಲೆಗಳ ಬಗ್ಗೆ ಸ್ಪೆಶಲ್ ಅಲಾವನ್ಸು.

೪೦ರ ವರೆಗೆ	....	....	....	೫
೪೧—೬೦	....	....	....	೧೦
೬೧—೭೦	....	....	....	೧೫
೭೧—೭೬೦	....	....	....	೨೦
೭೬೦ರ ಮೇಲೆ	....	....	....	೨೫

ರಜಾ ಮತ್ತು ಪೆನ್‌ಶನ್ ವಿಷಯಗಳಲ್ಲಿ ಈ ಅಲಾವನ್ಸು ಪಗಾರದ ಹಾಗೆ ತಿಳಿಯಲ್ಪಡುವದು.

(G R. 560, 10-3-26 & 21-6-26)

(೩) ಪರೀಕ್ಷೆ ಪಾಸ ಆದ ಅನ್‌ಟ್ರೇಂಡ ಶಿಕ್ಷಕರಿಗೆ ಬಡತಿ ಕೊಡುವ ಬಗ್ಗೆ ಅವರ ನೌಕರಿ ತಾ॥ ೧ ಮಾರ್ಚ ೧೯೨೩ರಿಂದ ಆದಷ್ಟು ಗಣಿಸಲ್ಪಡುವದು; ಅಂದರೆ ೧ನೆಯ ಮಾರ್ಚ ೧೯೨೪ ಇಸ್ವಿ ದಿವಸ ಅವರಿಗೆ ಮೊದಲನೆಯ ಬಡತಿ ದೊರೆಯುವದು.

(G. R 560, 24-3-24)

(೪) ಒಮ್ಮೆ ಟ್ರೇಂಡ ಶಿಕ್ಷಕನು ೧ನೆಯ ಮಾರ್ಚ ೧೯೨೩ನೆಯ ಇಸ್ವಿ ದಿವಸ ಎಷ್ಟು ಪಗಾರ ದೊರಕಿಸಲಿಕ್ಕೆ ಪಾತ್ರನಾಗುವನೋ ಎಂಬವನ್ನು ನಿಶ್ಚಯಿಸುವಾಗ ಅವನು ದೊರಕಿಸಿದ ಕಡಿಮೆ ತರಗತಿಯ ಸರ್ಟಿಫಿಕೇಟಿನ ಪ್ರಕಾರ ಆಗತಕ್ಕ ಒಟ್ಟು ಪ್ರಮೋಶನ್ನು, ಅವನು ದೊರಕಿಸಿದ ಹೆಚ್ಚಿನ ತರಗತಿಯ ಸರ್ಟಿಫಿಕೇಟಿನ ಪ್ರಕಾರ ಆರಂಭದಲ್ಲಿ ದೊರೆಯತಕ್ಕ ಪಗಾರಕ್ಕೆ ಕೂಡಿಸಿ ಬಂದ ಈ ಪಗಾರದ ಆರಂಭದ ರಕಮು ಮೇಲಿನ ತರಗತಿಯ ಸರ್ಟಿಫಿಕೇಟಿನ ಪ್ರಕಾರ ದೊರೆಯತಕ್ಕ ಸ್ಕೇಲಿನ ಯಾವ ಗ್ರೇಡಿಗೂ ಹೊಂದಿಕೆಯಾಗದಿದ್ದಲ್ಲಿ ಮುಂದಿನ ಗ್ರೇಡು ಹಿಡಿಯಲ್ಪಡುವದು.

(G R. 560. 24-3-24).

(೫) ೧ನೆಯ ಮಾರ್ಚ ೧೯೨೩ನೆಯ ದಿವಸ ದೊರೆಯತಕ್ಕ ಟ್ರೇಂಡ ಶಿಕ್ಷಕರ ಪಗಾರವನ್ನೂ, ಪ್ರತಿ ವರ್ಷ ಮಾರ್ಚ ತಿಂಗಳಲ್ಲಿ ದೊರೆಯತಕ್ಕ ಅವರ ಪ್ರಮೋಶನ್‌ವನ್ನೂ ನಿಶ್ಚಯಿಸುವಲ್ಲಿ ಅವರ ಚಾಲೂ ಇದ್ದ ಸರ್ಟಿಫಿಕೇಟಿನ ಪ್ರಕಾರ ಆದ ಸರ್ವೀಸಿನ ಪೂರ್ಣ ವರ್ಷಗಳು ಗಣನೆಯಲ್ಲಿ ಹಿಡಿಯಲ್ಪಡುವವು. ಈ ಸಮಯದಲ್ಲಿ ೬ ತಿಂಗಳಕ್ಕಿಂತ ಹೆಚ್ಚು ಸರ್ವೀಸು ಆದಲ್ಲಿ ೧ ವರ್ಷ ಅಂತಾ ತಿಳಿಮು ಗಣನೆ ಮಾಡಲ್ಪಡುವದು.

ಉದಾ :—ಒಬ್ಬ ಶಿಕ್ಷಕನು ೧೯೧೪ನೆ ನವ್ಹಂಬರದಲ್ಲಿ ೩ನೆಯ ವರ್ಷದ ಸರ್ಟಿಫಿಕೇಟ ಪಡೆದನೆಂದು ತಿಳಿಯುವ. ಮತ್ತು ಆ ಕಾಲಕ್ಕೆ ಅವನ ೨ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ೫ ವರ್ಷ ೦ ತಿಂಗಳ ನೌಕರಿ ಆಗಿತ್ತು. ಈ ಶಿಕ್ಷಕನ ೩ನೇ ವರ್ಷದ ಸರ್ಟಿಫಿಕೇಟಿನ ಆರಂಭದ ಪಗಾರ ೪೦ ರೂ. ಇದಕ್ಕೆ ೨ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ೬ ವರ್ಷದ ಪ್ರಮೋಶನ್ ೩ ರೂ ಕೂಡಿಸಲ್ಪಡುತ್ತದೆ.

೩ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ೧೯೧೫ನೆಯ ಮಾರ್ಚ ೧೯೨೩ರ ವರೆಗೆ ಅವನ ಸರ್ವೀಸು ೮ ವರ್ಷ ೩ ತಿಂಗಳ ಆಗುತ್ತದೆ. ಆದ್ದರಿಂದ ೬ ವರ್ಷದ ಬಡತಿ ರಕಮು ೪ ರೂ. ಮೇಲಿನ ೪೩ ರೂ. ಕೂಡಿಸಲು ಒಟ್ಟು ೪೭ ರೂ. ಆಗುತ್ತದೆ. ಆದರೆ ಸ್ಕೇಲಿನಲ್ಲಿ ೪೭ ರೂ ಗ್ರೇಡ ಇಲ್ಲದ ಮೂಲಕ ಅವನ ಪಗಾರ ಮುಂದಿನ ಗ್ರೇಡ ೪೮ ರೂ. ತಾ॥ ೧—೩—೨೩ನೆಯ ದಿವಸ ಇಷ್ಟು ಪಗಾರ ಠರಾಯಿಸಲ್ಪಟ್ಟಿತು. ಆವನ ೩ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ಸರ್ವೀಸು ತಾ॥ ೧—೩—೨೪ನೆಯ ಇಸ್ವಿ ದಿವಸದೊಳಗಾಗಿ ೯ ವರ್ಷ ಪೂರ್ಣ ಆಗುವದರಿಂದ ಈ ಮುಂದಿನ ಪ್ರಮೋಶನ್ ಪಡೆಯುವದಕ್ಕೆ ಪಾತ್ರನಾದನು.

(G R 560, 24-3-24)

(೬) ಬಡತಿಯು ಮಾರ್ಚ ತಿಂಗಳ ೧ನೆಯ ತಾರೀಖಿನ ದಿವಸ ಕೊಡಲ್ಪಡುವದು; ನಡುವೆ ಕೊಡಲ್ಪಡುವದಿಲ್ಲ

(G. R 560, 24-3-24)

(೭) ಬಡತಿ ಕೊಡುವಾಗ್ಗೆ ಬಿನ್ ಪಗಾರೀ ರಜೆಯ ಹೊರ್ತು ಉಳಿದ ಎಲ್ಲ ನೌಕರಿಯು ಗಣನೆಯಲ್ಲಿ ಹಿಡಿಯಲ್ಪಡುವದು ಯಾವ ಶಿಕ್ಷಕನ ಬಡತಿಯ ಬಗ್ಗೆ ವಿಚಾರ ಮಾಡುವದದೆಯೋ ಅವನ ಯಾವತ್ತೂ ನೌಕರಿಯಲ್ಲಿ ಬಿನ್ ಪಗಾರೀ ರಜೆಯ ಯಾವತ್ತೂ ಅವಧಿಯು ಕಳೆಯಲ್ಪಡುವದು.

ಉದಾ :—ತಾ॥ ೧—೩—೨೩ರ ವರೆಗೆ ಒಬ್ಬ ಶಿಕ್ಷಕನ ನೌಕರಿಯು ೯ ವರ್ಷ ೨ ತಿಂಗಳ ಆಗಿತ್ತು. ಅವನು ೧೯೨೩—೨೪ ಸಾಲಿನಲ್ಲಿ ೯ ತಿಂಗಳ ಬಿನ್ ಪಗಾರೀ ರಜೆಯನ್ನು ತೆಗೆದುಕೊಂಡಿದ್ದನು. ಆದ್ದರಿಂದ ೧—೩—೨೪ನೆಯ ಇಸ್ವಿ ದಿವಸ ಪ್ರಮೋಶನ್ ಠರಾಯಿಸುವಾಗ್ಗೆ ಅವನ ಒಟ್ಟು ನೌಕರಿಯು ೯ ವರ್ಷ ೫ ತಿಂಗಳ ಎಂದು ಪೂರ್ಣ ೯ ವರ್ಷದ ಬಗ್ಗೆ ಬಡತಿ ಕೊಡುವದರಲ್ಲಿ ಬರುವದು

(G. R 560, 24-3-24).

[ಸಶೇಷ].

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಅಕ್ಟೋಬರ ೧೯೨೮. | ಸಂಚಿಕೆ ೪

ಇತಿಹಾಸ ಶಿಕ್ಷಣ.

ಲೇಖಕರು:—ಶ್ರೀ. ಎಚ್ ಸಿ. ಹಲಗಲಿ, ಬಿ. ಎ., ಬಿ. ಟಿ. ಬೆಳಗಾಂವ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಹೊಸ ಪದ್ಧತಿಗನುಸರಿಸಿ ಇತಿಹಾಸವನ್ನು ಹೇಗೆ ಕಲಿಸಬೇಕೆಂಬುದನ್ನು ಕುರಿತು ಈ ಚಿಕ್ಕ ಲೇಖನವನ್ನು ಆರಂಭಿಸಿದ್ದೇವೆ. ಇತಿಹಾಸ ಶಿಕ್ಷಕರು ಅದನ್ನೋದಿಕೊಂಡು ಅದರಲ್ಲಿ ವಿವರಿಸಿದ ಸೂಚನೆಗಳನ್ನು ವ್ಯವಹಾರದಲ್ಲಿ ತರಲು ಯತ್ನಿಸಿದರೆ ನಮ್ಮ ಶ್ರಮಕ್ಕೆ ಪ್ರತಿಫಲ ದೊರೆತಂತಾಗುವದು.

ಯಾವ ವಿಷಯವು ನಮಗೆ ಚನ್ನಾಗಿ ಗೊತ್ತಿದೆಯೋ ಆ ವಿಷಯವನ್ನು ಎರಡನೆಯವರ ಮನಸ್ಸಿನ ಮೇಲೆ ಪರಿಣಾಮಕಾರಕವಾಗುವಂತೆ ಚನ್ನಾಗಿ ಹೇಳಬಲ್ಲೆವೆಂದು ಪ್ರತಿಯೊಬ್ಬನಿಗೂ ತಿಳಿದ ಮಾತಾಗಿದೆ. ಆದುದರಿಂದ ಶಿಕ್ಷಕನು ಕಲಿಸಬಹುದಾದ ವಿಷಯವನ್ನು ಚನ್ನಾಗಿ ಅರಿತುಕೊಳ್ಳುವದು ಅತ್ಯವಶ್ಯವಿದೆ. ಇಲ್ಲದಿದ್ದರೆ ಬಾಲಕರ ಮನಸ್ಸಿನ ಮೇಲೆ ಪರಿಣಾಮಕಾರಕವಾಗುವಂತೆ ಆ ವಿಷಯವನ್ನು ಕಲಿಸುವದು ಅವನಿಂದ ಸರ್ವಥಾ ಆಗುವದಿಲ್ಲ. ಇತಿಹಾಸ ಶಿಕ್ಷಕರು ಈ ಸರ್ವಸಾಧಾರಣ ನಿಯಮವನ್ನು ನೆನಪಿನಲ್ಲಿಡತಕ್ಕದ್ದು. ಇತಿಹಾಸವನ್ನು ಕಲಿಸುವದಾದರೆ ಕೇವಲ ಒಂದೇ ಒಂದು ಇತಿಹಾಸ ಪುಸ್ತಕವನ್ನು ಓದಿಕೊಂಡರೆ ಸಾಕು ಎಂಬ ಅಲ್ಪ ಭಾವನೆಯಾಗಿದ್ದರೆ ಅದನ್ನು ತೆಗೆದು ಹಾಕಬೇಕು.

ಚನ್ನಾಗಿ ವಿಷಯಜ್ಞಾನ ಮಾಡಿಕೊಂಡ ಹೊರತು, ಪರಿಣಾಮಕಾರಕವಾಗುವಂತೆ ಕಲಿಸುವದಾಗುವದಿಲ್ಲ. ಎರಡು ಮೂರು ಪುಸ್ತಕಗಳನ್ನು ಓದಿಕೊಳ್ಳದ ಪಕ್ಷದಲ್ಲಿ ವಿಷಯಜ್ಞಾನವು ಚನ್ನಾಗಿ ಆಗುವಂತಿಲ್ಲ. ಇತಿಹಾಸದ ಸಂಗತಿ ಒಂದೇ ಇರಬಹುದು. ಅದೇ ಸಂಗತಿಯನ್ನು ಬೇರೆ ಬೇರೆ ಇತಿಹಾಸಕಾರರು ಬೇರೆ ಬೇರೆ ರೀತಿಯಿಂದ ವರ್ಣಿಸಿ ಭಿನ್ನಾಭಿಪ್ರಾಯಗಳನ್ನು ಕೊಡುವದುಂಟು. ಇತಿಹಾಸ ಶಿಕ್ಷಕನು ಒಂದೇ ಒಂದು ಇತಿಹಾಸ ಪುಸ್ತಕವನ್ನು ಓದಿದರೆ ಒಬ್ಬ ಇತಿಹಾಸಕಾರನ ಅಭಿಪ್ರಾಯವು ತಿಳಿದಂತಾಗುವದು. ಅದೇ ಸಂಗತಿಯ ವಿಷಯವಾಗಿ ಬೇರೆ ಇತಿಹಾಸಕಾರರ ಅಭಿಪ್ರಾಯಗಳು ಗೊತ್ತಾದಂತೆ ಆಗುವದಿಲ್ಲ. ಇದರಿಂದ ಇತಿಹಾಸ ಕಲಿಸುವವಕ್ಕಿಂತ ಮುಂಚೆ ವಿಷಯಜ್ಞಾನವನ್ನು ಮಾಡಿಕೊಳ್ಳುವದು ಅತ್ಯಾವಶ್ಯಕವೆಂಬ ಮಾತು ಸಿದ್ಧವಾಗುತ್ತದೆ.

ಶಿಕ್ಷಕರು ವಿಷಯಜ್ಞಾನವನ್ನು ಚನ್ನಾಗಿ ಮಾಡಿಕೊಂಡ ಬಳಿಕ ಅದನ್ನು ಬಾಲಕರ ಮನಸ್ಸಿನ ಮೇಲೆ ಪರಿಣಾಮಕಾರಕವಾಗುವಂತೆ ಕಲಿಸುವ ರೀತಿಯನ್ನು ಚನ್ನಾಗಿ ಅರಿತುಕೊಳ್ಳುವದು ಅವಶ್ಯವಿದೆ. ಪ್ರತಿನಿತ್ಯವೂ ಪ್ರಪಂಚದಲ್ಲಿ ಅನೇಕ ಸಂಗತಿಗಳು ಸಂಭವಿಸುವದುಂಟು. ಕೆಲಕಾಲ ಗತಿಸಿದ ಮೇಲೆ ಯಾರಾದರು ನಮ್ಮನ್ನು ಅವುಗಳ ವಿಷಯವಾಗಿ ಕೇಳಿದರೆ ಎಲ್ಲವನ್ನೂ ನೆನಪಿಗೆ ತಂದುಕೊಂಡು ಹೇಳುವದು ಅಶಕ್ಯವಾದದ್ದು. ಒಂದೆರಡು ಸಂಗತಿಗಳ ಬಗ್ಗೆ ನಾವು ಹೇಳಬಹುದು. ಹೀಗಾಗಲಿಕ್ಕೆ ಕಾರಣವೇನು? ಅಂದರೆ, ಮನಸ್ಸಿನ ಅವಸ್ಥೆಗಳೇ ಇದಕ್ಕೆ ಕಾರಣವೆಂದು ಹೇಳಬಹುದು. ಸಮಾಧಾನ ಮತ್ತು ಉಲ್ಲಾಸ ವೃತ್ತಿಯಲ್ಲಿ ಇದ್ದಾಗ ಸಂಭವಿಸಿದ ಸಂಗತಿಗಳು ಬಹಳ ದಿವಸಗಳವರೆಗೆ ನೆನಪಿನಲ್ಲಿ ಉಳಿಯುವವು. ದುಃಖದಾಯಕವಾದ ಸಂಗತಿಗಳನ್ನು ನಾವು ತೀವ್ರವಾಗಿ ಮರೆತು ಬಿಡಲಿಕ್ಕೆ ಯತ್ನಿಸುತ್ತೇವೆ. ಇಂಥ ಮನಸ್ಸಿನ ಪ್ರವೃತ್ತಿಯು ಚಿಕ್ಕ ಮಕ್ಕಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಸಂತೋಷದಲ್ಲಿ ಇದ್ದಾಗ ಸಂಭವಿಸಿದ ಸಂಗತಿಗಳನ್ನು ಚಿಕ್ಕ ಮಕ್ಕಳು ಚನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಶಿಕ್ಷಣ ಪದ್ಧತಿಯಲ್ಲಿ ಎಲ್ಲ ವಿಷಯಗಳನ್ನು ಕಲಿಸುವ ಶಿಕ್ಷಕರು ಈ ಮನಸ್ಸಿನ ಪ್ರವೃತ್ತಿಯನ್ನು ಉಪಯೋಗಿಸಿಕೊಳ್ಳುವಂತೆ ಇತಿಹಾಸ ಶಿಕ್ಷಕರಾದರೂ ಇತಿಹಾಸ ಕಲಿಸುವಾಗ್ಗೆ ಚಿಕ್ಕ ಮಕ್ಕಳ ಮನಸ್ಸಿನ ವೃತ್ತಿಯನ್ನು ಕಂಡು ಹಿಡಿದು ಕೊಂಡು ಅದರಂತೆ ಕಲಿಸುವದು ಒಳ್ಳೆಯದು. ಬಾಲಕರನ್ನು ಸಮಾಧಾನ ಹಾಗೂ ಉಲ್ಲಾಸವೃತ್ತಿಯಲ್ಲಿರಿಸಿ ಇತಿಹಾಸವನ್ನು ಕಲಿಸಿದರೆ ವಿವರಿಸಿದ ಸಂಗತಿಗಳು ಚನ್ನಾಗಿ ಮನಸ್ಸಿನಲ್ಲಿ ನಟ್ಟು, ಬಹಳ ದಿವಸಗಳವರೆಗೆ ನೆನಪಿನಲ್ಲಿ ಉಳಿಯುವವು.

ಇತಿಹಾಸದ ಸಂಗತಿಗಳು ಚನ್ನಾಗಿ ನೆನಪಿನಲ್ಲಿ ಉಳಿಯಬೇಕಾದರೆ ಹಾಗೂ ಅವುಗಳಿಂದ ಸುಪರಿಣಾಮ ಉಂಟಾಗಬೇಕಾದರೆ ಕೆಲವು ಉಪಕರಣಗಳನ್ನೂ

ಸಾಧನಗಳನ್ನೂ ಉಪಯೋಗಿಸಬೇಕು. ಅವುಗಳಲ್ಲಿ ಮೊದಲನೆಯ ಸಾಧನವೆಂದರೆ ಚಿತ್ರ. ಮನೆಯಲ್ಲಿ ಕೂಸುಗಳಿಗೆ ಚಿತ್ರದ ಪುಸ್ತಕವು ದೊರಿತರೆ ಅದನ್ನು ಎಷ್ಟು ಆಸ್ಥೆಯಿಂದ ನೋಡುತ್ತ ಕೂಡ್ರುವವೆಂಬ ಮಾತು ಮಕ್ಕಳಿದ್ದವರಿಗೆ ಮನವರಿಕೆಯಾಗಬಹುದು. ಇದೇ ವೃತ್ತಿಯನ್ನು ಇತಿಹಾಸ ಕಲಿಸುವವರಲ್ಲಿ ಉಪಯೋಗಿಸಿಕೊಳ್ಳಬೇಕು. ಇದರಿಂದ ಚಿತ್ರಗಳ ಮಹತ್ವವು ಎಷ್ಟರಮಟ್ಟಿಗಿದೆ ಎಂಬುದು ವಿದಿತವಾಗುತ್ತದೆ. ಕೇವಲ ಬಾಯಿಂದಲೇ ವರ್ಣನ ಮಾಡುತ್ತ ಹೋಗುವವರಿಂದ ನಡುವೆ ಸಂದರ್ಭಾನುಸಾರವಾಗಿ ಚಿತ್ರಗಳನ್ನು ತೋರಿಸುತ್ತ ಆ ಚಿತ್ರಗಳ ಮೇಲೆ ಪ್ರಶ್ನ ಮಾಡುತ್ತ ಹೋದರೆ ಬಾಲಕರ ಮನಸ್ಸಿಗೆ ಒಂದು ತರಹದ ಆನಂದ ಹುಟ್ಟಿ ಅವರು ಪಾಠದಲ್ಲಿಯೇ ತಲ್ಲೀನರಾಗಿ ಹೋಗುತ್ತಾರೆ ಉದಾಹರಣಾರ್ಥವಾಗಿ ನೆಪೋಲಿಯನ್ನನ ವಿಷಯವಾಗಿ ಒಂದು ಪಾಠ ಹೇಳುತ್ತೇನೆಂದು ಕಲ್ಪಿಸುವಾ. ಅವನ ವಿಷಯವಾಗಿ ಕೇವಲ ಶಬ್ದವರ್ಣನೆಯನ್ನು ಕೊಡದೆ ಪ್ರತ್ಯಕ್ಷವಾಗಿ ಅವನ ಚಿತ್ರವನ್ನು ಕಣ್ಣೆದುರಿಗಿರಿಸಿ ಚಿತ್ರದಲ್ಲಿಯ ನೆಪೋಲಿಯನ್ನನ ಮುಖಮುದ್ರೆಯಿಂದಲೇ ಅವನ ಗುಣಶೀಲಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಹುಡುಗರಿಂದಲೇ ತಕ್ಕೊಳ್ಳಬಹುದು. ಹೀಗೆ ಮಾಡುವದರಿಂದ ಕಲಿಸುವದು ಚನ್ನಾಗಿ ಬಾಲಕರ ಮನಸ್ಸಿನಲ್ಲಿ ನಟ್ಟ ನೆಪೋಲಿಯನ್ನನ ಚರಿತ್ರವು ನೆನಪಿನಲ್ಲಿ ಬಹಳ ದಿವಸಗಳವರೆಗೆ ಉಳಿಯುವದು.

ಎರಡನೆಯ ಉಪಕರಣ ಅಥವಾ ಸಾಧನವೆಂದರೆ ನಕಾಶ. ಇದಾದರೂ ಕಲಿಸುವಾಗ್ಗೆ ಬಹಳೇ ಮಹತ್ವವುಳ್ಳದ್ದು. ಮೇಲೆ ಕೊಟ್ಟ ಉದಾಹರಣೆಯನ್ನೇ ತಗೆದುಕೊಳ್ಳುವಾ ನೆಪೋಲಿಯನ್ನನು ಫ್ರಾನ್ಸಿನ ಚಕ್ರವರ್ತಿಯಾಗಿದ್ದನು. ನೆಪೋಲಿಯನ್ನನು ರಶಿಯಾ ದೇಶದ ರಾಜಧಾನಿಯಾದ ಮಾಸ್ಕಾವು ಪಟ್ಟಣಕ್ಕೆ ದಂಡೆತ್ತಿ ಹೋದನು. ಇದೇ ಅವನ ಅವನತಿಗೆ ಮುಂದೆ ಕಾರಣವಾಯಿತು. ಫ್ರಾನ್ಸ ಎಲ್ಲಿ ಅದೆ, ರಶಿಯಾ ಎಲ್ಲಿ ಅದೆ, ಪಾರೀಸ ಪಟ್ಟಣದಿಂದ ಮಾಸ್ಕಾವು ಎಷ್ಟು ದೂರವಲ್ಲಿ ಅದೆ, ರಶಿಯಾದಲ್ಲಿ ಚಳಿಗಾಲು ಯಾವ ರೀತಿಯಲ್ಲಿ ಬರುತ್ತದೆ ಮುಂತಾದ ಸಂಗತಿಗಳನ್ನು ನಕಾಶವಿಲ್ಲದೆ ಬಾಲಕರಿಗೆ ಸ್ಪಷ್ಟವಾಗುವಂತೆ ಮಾಡಲಿಕ್ಕೆ ಬರುವದಿಲ್ಲ. ಅದರಂತೆ ಯಾವದೇ ಯುದ್ಧದ ಸಂಗತಿಯ ವಿಷಯವಾಗಿ ರಣಭೂಮಿಯ ನಕಾಶವಿಲ್ಲದೆ ಹೋರಾಡುತ್ತಿದ್ದ ಪಕ್ಷಗಳ ಸೋಲು ಅಥವಾ ಗೆಲವು ಇವುಗಳ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಬರುವದಿಲ್ಲ. ರಣಭೂಮಿಯ ನಕಾಶವನ್ನು ಮುಂದಿರಿಸಿ, ಆಯಾ ಸೇನೆಗಳ ಸ್ಥಾನಗಳನ್ನು ಸ್ಪಷ್ಟವಾಗಿ ತೋರಿಸಿ ಕೆಲವು ಗುರುತುಗಳಿಂದ ತೋರಿಸಿ ವರ್ಣಿಸುತ್ತ ಹೋಗಿ ಕೊನೆಗೆ ಯಾವ ಪಕ್ಷಕ್ಕೆ ಜಯವು ದೊರೆಯಿತೆಂಬುದನ್ನು ಶಿಕ್ಷಕನು ಹೇಳದೆ ಹುಡುಗರನ್ನು ಕೇಳಿದರೆ ಅವರು ಯಾವ ಪಕ್ಷ ಜಯಶಾಲಿ ಆದೀತು ಅಥವಾ ಆಯಿತು ಎಂಬುದನ್ನು ತಾವಾಗಿಯೇ ಹೇಳುವರು. ಜಗತ್ತಿನ ಇತಿಹಾಸದಲ್ಲಿ ಅತಿ ಪ್ರಸಿದ್ಧವಾದ ಪಾನಿ

ಚನ್ನಾಗಿ ವಿಷಯಜ್ಞಾನ ಮಾಡಿಕೊಂಡ ಹೊರತು, ಪರಿಣಾಮಕಾರಕವಾಗುವಂತೆ ಕಲಿಸುವದಾಗುವದಿಲ್ಲ. ಎರಡು ಮೂರು ಪುಸ್ತಕಗಳನ್ನು ಓದಿಕೊಳ್ಳದ ಪಕ್ಷದಲ್ಲಿ ವಿಷಯಜ್ಞಾನವು ಚನ್ನಾಗಿ ಆಗುವಂತಿಲ್ಲ. ಇತಿಹಾಸದ ಸಂಗತಿ ಒಂದೇ ಇರಬಹುದು. ಅದೇ ಸಂಗತಿಯನ್ನು ಬೇರೆ ಬೇರೆ ಇತಿಹಾಸಕಾರರು ಬೇರೆ ಬೇರೆ ರೀತಿಯಿಂದ ವರ್ಣಿಸಿ ಭಿನ್ನಾಭಿಪ್ರಾಯಗಳನ್ನು ಕೊಡುವದುಂಟು. ಇತಿಹಾಸ ಶಿಕ್ಷಕನು ಒಂದೇ ಒಂದು ಇತಿಹಾಸ ಪುಸ್ತಕವನ್ನು ಓದಿದರೆ ಒಬ್ಬ ಇತಿಹಾಸಕಾರನ ಅಭಿಪ್ರಾಯವು ತಿಳಿದಂತಾಗುವದು. ಅದೇ ಸಂಗತಿಯ ವಿಷಯವಾಗಿ ಬೇರೆ ಇತಿಹಾಸಕಾರರ ಅಭಿಪ್ರಾಯಗಳು ಗೊತ್ತಾದಂತೆ ಆಗುವದಿಲ್ಲ. ಇದರಿಂದ ಇತಿಹಾಸ ಕಲಿಸುವದಕ್ಕಿಂತ ಮುಂಚೆ ವಿಷಯಜ್ಞಾನವನ್ನು ಮಾಡಿಕೊಳ್ಳುವದು ಅತ್ಯಾವಶ್ಯಕವೆಂಬ ಮಾತು ಸಿದ್ಧವಾಗುತ್ತದೆ.

ಶಿಕ್ಷಕರು ವಿಷಯಜ್ಞಾನವನ್ನು ಚನ್ನಾಗಿ ಮಾಡಿಕೊಂಡ ಬಳಿಕ ಅದನ್ನು ಬಾಲಕರ ಮನಸ್ಸಿನ ಮೇಲೆ ಪರಿಣಾಮಕಾರಕವಾಗುವಂತೆ ಕಲಿಸುವ ರೀತಿಯನ್ನು ಚನ್ನಾಗಿ ಅರಿತುಕೊಳ್ಳುವದು ಅವಶ್ಯವಿದೆ. ಪ್ರತಿನಿತ್ಯವೂ ಪ್ರಪಂಚದಲ್ಲಿ ಅನೇಕ ಸಂಗತಿಗಳು ಸಂಭವಿಸುವದುಂಟು. ಕೆಲಕಾಲ ಗತಿಸಿದ ಮೇಲೆ ಯಾರಾದರು ನಮ್ಮನ್ನು ಅವುಗಳ ವಿಷಯವಾಗಿ ಕೇಳಿದರೆ ಎಲ್ಲವನ್ನೂ ನೆನಪಿಗೆ ತಂದುಕೊಂಡು ಹೇಳುವದು ಅಶಕ್ಯವಾದದ್ದು. ಒಂದೆರಡು ಸಂಗತಿಗಳ ಬಗ್ಗೆ ನಾವು ಹೇಳಬಹುದು. ಹೀಗಾಗಲಿಕ್ಕೆ ಕಾರಣವೇನು? ಅಂದರೆ, ಮನಸ್ಸಿನ ಅವಸ್ಥೆಗಳೇ ಇದಕ್ಕೆ ಕಾರಣವೆಂದು ಹೇಳಬಹುದು. ಸಮಾಧಾನ ಮತ್ತು ಉಲ್ಲಾಸ ವೃತ್ತಿಯಲ್ಲಿ ಇದ್ದಾಗ ಸಂಭವಿಸಿದ ಸಂಗತಿಗಳು ಬಹಳ ದಿವಸಗಳವರೆಗೆ ನೆನಪಿನಲ್ಲಿ ಉಳಿಯುವವು. ದುಃಖದಾಯಕವಾದ ಸಂಗತಿಗಳನ್ನು ನಾವು ತೀವ್ರವಾಗಿ ಮರೆತು ಬಿಡಲಿಕ್ಕೆ ಯತ್ನಿಸುತ್ತೇವೆ. ಇಂಥ ಮನಸ್ಸಿನ ಪ್ರವೃತ್ತಿಯು ಚಿಕ್ಕ ಮಕ್ಕಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಸಂತೋಷದಲ್ಲಿ ಇದ್ದಾಗ ಸಂಭವಿಸಿದ ಸಂಗತಿಗಳನ್ನು ಚಿಕ್ಕ ಮಕ್ಕಳು ಚನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಶಿಕ್ಷಣ ಪದ್ಧತಿಯಲ್ಲಿ ಎಲ್ಲ ವಿಷಯಗಳನ್ನು ಕಲಿಸುವ ಶಿಕ್ಷಕರು ಈ ಮನಸ್ಸಿನ ಪ್ರವೃತ್ತಿಯನ್ನು ಉಪಯೋಗಿಸಿಕೊಳ್ಳುವಂತೆ ಇತಿಹಾಸ ಶಿಕ್ಷಕರಾದರೂ ಇತಿಹಾಸ ಕಲಿಸುವಾಗ್ಗೆ ಚಿಕ್ಕ ಮಕ್ಕಳ ಮನಸ್ಸಿನ ವೃತ್ತಿಯನ್ನು ಕಂಡು ಹಿಡಿದುಕೊಂಡು ಅದರಂತೆ ಕಲಿಸುವದು ಒಳ್ಳೆಯದು. ಬಾಲಕರನ್ನು ಸಮಾಧಾನ ಹಾಗೂ ಉಲ್ಲಾಸವೃತ್ತಿಯಲ್ಲಿರಿಸಿ ಇತಿಹಾಸವನ್ನು ಕಲಿಸಿದರೆ ವಿವರಿಸಿದ ಸಂಗತಿಗಳು ಚನ್ನಾಗಿ ಮನಸ್ಸಿನಲ್ಲಿ ನಟ್ಟು, ಬಹಳ ದಿವಸಗಳವರೆಗೆ ನೆನಪಿನಲ್ಲಿ ಉಳಿಯುವವು.

ಇತಿಹಾಸದ ಸಂಗತಿಗಳು ಚನ್ನಾಗಿ ನೆನಪಿನಲ್ಲಿ ಉಳಿಯಬೇಕಾದರೆ ಹಾಗೂ ಅವುಗಳಿಂದ ಸುಪರಿಣಾಮ ಉಂಟಾಗಬೇಕಾದರೆ ಕೆಲವು ಉಪಕರಣಗಳನ್ನೂ

ಸಾಧನಗಳನ್ನೂ ಉಪಯೋಗಿಸಬೇಕು. ಅವುಗಳಲ್ಲಿ ಮೊದಲನೆಯ ಸಾಧನವೆಂದರೆ ಚಿತ್ರ. ಮನೆಯಲ್ಲಿ ಕೂಸುಗಳಿಗೆ ಚಿತ್ರದ ಪುಸ್ತಕವು ದೊರೆತರೆ ಅದನ್ನು ಎಷ್ಟು ಆಸ್ಥೆಯಿಂದ ನೋಡುತ್ತ ಕೂಡುವವೆಂಬ ಮಾತು ಮಕ್ಕಳಿದ್ದವರಿಗೆ ಮನವರಿಕೆಯಾಗಬಹುದು. ಇದೇ ವೃತ್ತಿಯನ್ನು ಇತಿಹಾಸ ಕಲಿಸುವವರಲ್ಲಿ ಉಪಯೋಗಿಸಿಕೊಳ್ಳಬೇಕು. ಇದರಿಂದ ಚಿತ್ರಗಳ ಮಹತ್ವವು ಎಷ್ಟರಮಟ್ಟಿಗಿದೆ ಎಂಬುದು ವಿದಿತವಾಗುತ್ತದೆ. ಕೇವಲ ಬಾಯಿಂದಲೇ ವರ್ಣನ ಮಾಡುತ್ತ ಹೋಗುವವರಿಂದ ನಡುವೆ ಸಂದರ್ಭಾನುಸಾರವಾಗಿ ಚಿತ್ರಗಳನ್ನು ತೋರಿಸುತ್ತ ಆ ಚಿತ್ರಗಳ ಮೇಲೆ ಪ್ರಶ್ನ ಮಾಡುತ್ತ ಹೋದರೆ ಬಾಲಕರ ಮನಸ್ಸಿಗೆ ಒಂದು ತರಹದ ಆನಂದ ಹುಟ್ಟಿ ಅವರು ಪಾಠದಲ್ಲಿಯೇ ತಲ್ಲೀನರಾಗಿ ಹೋಗುತ್ತಾರೆ ಉದಾಹರಣಾರ್ಥವಾಗಿ ನೆಪೋಲಿಯನ್ನನ ವಿಷಯವಾಗಿ ಒಂದು ಪಾಠ ಹೇಳುತ್ತೇವೆಂದು ಕಲ್ಪಿಸುವಾ. ಅವನ ವಿಷಯವಾಗಿ ಕೇವಲ ಶಬ್ದವರ್ಣನೆಯನ್ನು ಕೊಡದೆ ಪ್ರತ್ಯಕ್ಷವಾಗಿ ಅವನ ಚಿತ್ರವನ್ನು ಕಣ್ಣಿದುರಿಗಿರಿಸಿ ಚಿತ್ರದಲ್ಲಿಯ ನೆಪೋಲಿಯನ್ನನ ಮುಖಮುದ್ರೆಯಿಂದಲೇ ಅವನ ಗುಣಶೀಲಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಹುಡುಗರಿಂದಲೇ ತಕ್ಕೊಳ್ಳಬಹುದು. ಹೀಗೆ ಮಾಡುವದರಿಂದ ಕಲಿಸುವದು ಚನ್ನಾಗಿ ಬಾಲಕರ ಮನಸ್ಸಿನಲ್ಲಿ ನಟ್ಟ ನೆಪೋಲಿಯನ್ನನ ಚರಿತ್ರವು ನೆನಪಿನಲ್ಲಿ ಬಹಳ ದಿವಸಗಳವರೆಗೆ ಉಳಿಯುವದು.

ಎರಡನೆಯ ಉಪಕರಣ ಅಥವಾ ಸಾಧನವೆಂದರೆ ನಕಾಶ. ಇದಾದರೂ ಕಲಿಸುವಾಗ್ಗೆ ಬಹಳೇ ಮಹತ್ವವುಳ್ಳದ್ದು. ಮೇಲೆ ಕೊಟ್ಟ ಉದಾಹರಣೆಯನ್ನೇ ಇಲ್ಲಿ ಪುನಃ ತೆಗೆದುಕೊಳ್ಳುವಾ ನೆಪೋಲಿಯನ್ನನು ಫ್ರಾನ್ಸಿನ ಚಕ್ರವರ್ತಿಯಾದನು. ನೆಪೋಲಿಯನ್ನನು ರಶಿಯಾ ದೇಶದ ರಾಜಧಾನಿಯಾದ ಮಾಸ್ಕಾವು ಪಟ್ಟಣಕ್ಕೆ ದಂಡೆತ್ತಿ ಹೋದನು. ಇದೇ ಅವನ ಅವನತಿಗೆ ಮುಂದೆ ಕಾರಣವಾಯಿತು. ಫ್ರಾನ್ಸು ಎಲ್ಲಿ ಅದೆ, ರಶಿಯಾ ಎಲ್ಲಿ ಅದೆ, ಪಾರೀಸ ಪಟ್ಟಣದಿಂದ ಮಾಸ್ಕಾವು ಎಷ್ಟು ದೂರವಲ್ಲಿ ಅದೆ, ರಶಿಯಾದಲ್ಲಿ ಚಳಿಗಾಲು ಯಾವ ರೀತಿಯಲ್ಲಿರುತ್ತದೆ ಮುಂತಾದ ಸಂಗತಿಗಳನ್ನು ನಕಾಶವಿಲ್ಲದೆ ಬಾಲಕರಿಗೆ ಸ್ಪಷ್ಟವಾಗುವಂತೆ ಮಾಡಲಿಕ್ಕೆ ಬರುವದಿಲ್ಲ. ಅದರಂತೆ ಯಾವದೇ ಯುದ್ಧದ ಸಂಗತಿಯ ವಿಷಯವಾಗಿ ರಣಭೂಮಿಯ ನಕಾಶವಿಲ್ಲದೆ ಹೋರಾಡುತ್ತಿದ್ದ ಪಕ್ಷಗಳ ಸೋಲು ಅಥವಾ ಗೆಲವು ಇವುಗಳ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಬರುವದಿಲ್ಲ. ರಣಭೂಮಿಯ ನಕಾಶವನ್ನು ಮುಂದಿರಿಸಿ, ಆಯಾ ಸೇನೆಗಳ ಸ್ಥಾನಗಳನ್ನು ಸ್ಪಷ್ಟವಾಗಿ ಅದರಲ್ಲಿ ಕೆಲವು ಗುರುತುಗಳಿಂದ ತೋರಿಸಿ ವರ್ಣಿಸುತ್ತ ಹೋಗಿ ಕೊನೆಗೆ ಯಾವ ಪಕ್ಷಕ್ಕೆ ಜಯವು ದೊರೆಯಿತೆಂಬುದನ್ನು ಶಿಕ್ಷಕನು ಹೇಳದೆ ಹುಡುಗರನ್ನು ಕೇಳಿದರೆ ಅವರು ಯಾವ ಪಕ್ಷ ಜಯಶಾಲಿ ಆದೀತು ಅಥವಾ ಆಯಿತು ಎಂಬುದನ್ನು ತಾವಾಗಿಯೇ ಹೇಳುವರು. ಜಗತ್ತಿನ ಇತಿಹಾಸದಲ್ಲಿ ಅತಿ ಪ್ರಸಿದ್ಧವಾದ ಪಾನಿ

ಪತ್ತದ ಮೂರನೆಯ ಯುದ್ಧ, ವಾಟರಲೂ ಹಾಗೂ ಪ್ಲಾಸಿ ಮುಂತಾದ ಕಾಳಗ ಗಳ ಮಹತ್ವವನ್ನೂ, ಅಲ್ಲಿ ಸೋತ ಅಥವಾ ಗೆದ್ದ ಪಕ್ಷಗಳ ಕಾರಣಗಳನ್ನೂ ರಣ ಭೂಮಿಯ ನಕಾಶವಿಲ್ಲದೆ ಸ್ಪಷ್ಟೀಕರಿಸಲಿಕ್ಕೆ ಬರುವದಿಲ್ಲ. ಕೇವಲ ಹುಡುಗರು ಸಾಲೆಯನ್ನು ಬಿಟ್ಟು ಮನೆಗೆ ಹೋದ ಕೂಡಲೆ ಮರೆತು ಬಿಡುವರೆಂಬುದರಲ್ಲಿ ಸಂದೇಹವಿಲ್ಲ. ಶಿಕ್ಷಕರು ಉಪಕರಣಗಳ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳದೆ ಕ್ಲಾಸಿಗೆ ಹೋದರೆ ಅವರು ಪವಿತ್ರವಾದ ಶಿಕ್ಷಣ ಕಾರ್ಯಕ್ಕೆ ಅಯೋಗ್ಯರೆಂದು ನನ್ನ ದೃಢವಾದ ನಂಬಿಗೆ ಅದೆ.

ಮೂರನೆಯ ಸಾಧನವೆಂದರೆ ಮ್ಯಾಜಿಕ ಲ್ಯಾಂಟರ್ನ. ಇದಾವರೂ ಶಿಕ್ಷಣ ಕಾರ್ಯದಲ್ಲಿ ಬಹಳ ಮಹತ್ವವುಳ್ಳದ್ದಾಗಿರುತ್ತದೆ. ಮ್ಯಾಜಿಕ ಲ್ಯಾಂಟರ್ನದ ಸಹಾಯದಿಂದ ಇತಿಹಾಸ ಹಾಗೂ ಭೂಗೋಲ ಇವೆರಡೂ ವಿಷಯಗಳನ್ನು ಕಲಿ ಸಲಿಕ್ಕೆ ಬರುತ್ತದೆ. ಸಂಪೂರ್ಣವಾಗಿ ಇದೊಂದೇ ಸಾಧನದ ಮೇಲೆ ಅವಲಂಬಿ ಸಬಾರದು. ಮ್ಯಾಜಿಕ ಲ್ಯಾಂಟರ್ನದ ಸಹಾಯದಿಂದ ಐತಿಹಾಸಿಕ ವ್ಯಾಖ್ಯಾನ ಗಳನ್ನು ಸರ್ವಸಾಧಾರಣ ರೀತಿಯಿಂದ ಆಗಾಗ್ಗೆ ಕೊಡುತ್ತ ಹೋಗಬೇಕು. ಇದರಿಂದ ಎರಡನೆಯ ಲಾಭವೆಂದರೆ ನೋಡುವ ಹಾಗೂ ಕೇಳುವ ಸಹಾಯದಿಂದ ಕೊಟ್ಟಂತಾಗುವದು. ಸಾಲೆಯಲ್ಲಿ ಕಲಿಸುವ ವಿಷಯಗಳ ಮೇಲೆ ಲ್ಯಾಂಟರ್ನ ವ್ಯಾಖ್ಯಾನ ಕೊಟ್ಟರೆ ಹುಡುಗರಿಗೆ ಉಪಯೋಗವಾಗುತ್ತವೆ. ಆರೋಗ್ಯ, ಶಿಶು ಸಂಗೋಪನ, ಮಾರಿಕಾ, ಪ್ಲೇಗ, ಸಹಕಾರ, ಅಸ್ಪೃಶ್ಯತೆಯಿಂದಾಗುವ ಹಾನಿ, ಒಕ್ಕಲತನ ಮುಂತಾದ ವಿಷಯಗಳ ಬಗ್ಗೆ ಸ್ಲಾಯಿಡ್ಸ ತಯಾರಿಸಿ ಸಾಲೆಗಳಲ್ಲಿಟ್ಟು ಆಗಾಗ್ಗೆ ವ್ಯಾಖ್ಯಾನ ರೂಪದಿಂದ ಇಡೀ ಹಳ್ಳಿಗಳ ಜನರಿಗೆ ಶಿಕ್ಷಣವನ್ನು ಕೊಟ್ಟು ಅಶಿಕ್ಷಿತರಾದವರನ್ನು ಸುಶಿಕ್ಷಿತರನ್ನಾಗಿ ಮಾಡುವದು ಸುಲಭ ಸಾಧ್ಯವದೆ.

ಅದರಂತೆಯೇ ಸಿನೇಮಾ ಮತ್ತು ಸ್ಟಿರಿಯೊ ಸ್ಕೋಪ ಇವುಗಳಾದರೂ ಇತಿ ಹಾಸ ಕಲಿಸುವವರಲ್ಲಿ ನಾಲ್ಕನೆಯ ಮತ್ತು ಐದನೆಯ ಸಾಧನಗಳೆಂದು ಹೇಳ ಬಹುದು. ಸಿನೇಮಾದಿಂದ ಮ್ಯಾಜಿಕ ಲ್ಯಾಂಟರ್ನದಂತೆ ಎರಡು ಲಾಭಗಳಾಗು ವವು. ಒಂದು-ಸಾಲೆಯ ಹುಡುಗರಿಗೆ ಶಿಕ್ಷಣ ಕೊಡುವದು, ಎರಡನೆಯದು-ಅಶಿ ಕ್ಷಿತರಾದ ಹಳ್ಳಿಗಾಡದ ಜನರನ್ನು ಸುಶಿಕ್ಷಿತರನ್ನಾಗಿ ಮಾಡುವದು. ಈ ಕೊನೆಯ ಉದ್ದೇಶವು ಶೇಫ್ರುದಲ್ಲಿಯೇ ಕೈಗೂಡುವಂತೆ ಮಾಡುವದು ಸಾಧ್ಯವಾಗಿದೆ.

(ಸಶೇಷ).

ಪ್ರಾಥಮಿಕ ಶಾಲೆಗಳಲ್ಲಿ ಭೂಗೋಲ ಕಲಿಸುವ ಪದ್ಧತಿಯೂ, ತರಗತಿಯೂ.

ಲೇಖಕರು:—ಶ್ರೀ. ಅ. ಹ. ಜಾಂಬಳೆ, ಹೆ. ಮಾ. ಕರ್ಜಗಿಟ್ಟಿ (ಶಿಗ್ಗಾವಿ).

ಪ್ರಪಂಚದಲ್ಲಿರತಕ್ಕ ಪ್ರತಿಯೊಬ್ಬ ಮನುಷ್ಯನು ತನ್ನ ಉಪಯೋಗಕ್ಕೆ ಬೇಕಾಗುವ ಎಲ್ಲ ಪದಾರ್ಥಗಳನ್ನು ತಾನೇ ಸಿದ್ಧಪಡಿಸಲು, ಪ್ರಯತ್ನ ಮಾಡುವದು ವಿಹಿತವು. ಆ ಕಾಲಕ್ಕೆ ಅಸಂಭವನೀಯವಾವವುಗಳ ಬಗ್ಗೆ ವಿಚಾರಣೆಯು ಹೊರಟು ಅವುಗಳನ್ನು ಸಿದ್ಧಪಡಿಸಿದವರ ಸ್ಮರಣೆಯಾಗುವದು. ಅವರ ಸ್ಥಳ ಕಾಲಗಳ ಗುಣ ಸ್ವಭಾವಗಳ ಕಲ್ಪನೆಯು ಒಮ್ಮೆಲೆ ಮನಸ್ಸಿನಲ್ಲಿ ಬಿಂಬಿಸಬೇಕಾದರೆ ಭೂಗೋಲ ಜ್ಞಾನದ ಆವಶ್ಯಕತೆ ಬೀಳುವದು.

ಈ ಭೂಗೋಲ ಜ್ಞಾನವನ್ನು ಪ್ರಾಥಮಿಕ ಶಾಲೆಗಳಲ್ಲಿ ಕ್ರಮೇಣ ಕೊಡುತ್ತ ಹೋಗತಕ್ಕದ್ದು. ಹ್ಯಾಗಂದರೆ—ವಿದ್ಯಾರ್ಥಿಗಳ ಬುದ್ಧಿ ವಿಕಾಶ ಹೊಂದಿದಂತೆ ದೂರ ದೂರದ ಪ್ರದೇಶಗಳ ಭೂಗೋಲ ಜ್ಞಾನವನ್ನು ಹೆಚ್ಚು ಹೆಚ್ಚು ವಿಶದವಾಗಿ ಕಲಿಸಲಿಕ್ಕೆ ಹಚ್ಚಬೇಕು. ಇದರಿಂದ ವಿದ್ಯಾರ್ಥಿಗಳು ಮುಂದೆ ಪ್ರಪಂಚದಲ್ಲಿ ಬುದ್ಧಿವಂತರಾಗಿ ಖ್ಯಾತಿಯನ್ನು ಹೊಂದುವರಲ್ಲದೆ, ಜಗತ್ತಿಗೆ ಉಪಯುಕ್ತವಾವ ಹೊಸ ಹೊಸ ಶೋಧಗಳನ್ನಾದರೂ ಮಾಡಿಕೊಟ್ಟು ಪ್ರಸಿದ್ಧ ವಿಭೂತಿಗಳೆನಿಸಿಕೊಳ್ಳಬಹುದು. ಈ ಭೂಗೋಲ ಶಿಕ್ಷಣವನ್ನು ಸಾಧಾರಣವಾಗಿ ೮—೯ ವರ್ಷದ ವಯಸ್ಸಿನವರಿಗೆ ಪ್ರಾರಂಭಿಸಬೇಕು. ಮತ್ತು ಶಿಕ್ಷಣದ ತತ್ವದಂತೆ ಗೊತ್ತಿದ್ದ ದಿಂದ ಗೊತ್ತಿಲ್ಲದ್ದಕ್ಕೆ ಹಾಗೂ ಸಮೀಪದಿಂದ ದೂರಕ್ಕೆ ಎಂಬುದಕ್ಕೆ ಸರಿಯಾಗಿ ಒಂದನೆಯ ಇಯತ್ತೆಯಿಂದಲೇ ಈ ಶಿಕ್ಷಣವನ್ನು ಸ್ವಲ್ಪ ಸ್ವಲ್ಪವಾಗಿ ಪ್ರಾರಂಭಿಸಲಿಕ್ಕೆ ಅಡ್ಡಿಯಿಲ್ಲ. ಹಾಗೂ ಮುಂದಿನ ಇಯತ್ತೆಗೆ ಅನುಕೂಲವಾಗುವಂತೆ ಕೇವಲ ಮುಖ್ಯ ದಿಕ್ಕುಗಳ ಜ್ಞಾನವನ್ನು ಮಾಡಿ ಕೊಟ್ಟರೆ ಸಾಕು. ಹಾಗೂ ವಿದ್ಯಾರ್ಥಿಗಳಿಗೆ ಊರಲ್ಲಿ ಗೊತ್ತಿದ್ದ ಗೌಡ, ಶಾನುಭೋಗ, ಓಲೇಕಾರ, ಮಾಸ್ತರ ಇವರ ಬಗ್ಗೆ ತಕ್ಕಮಟ್ಟಿಗೆ ಇದ್ದ ಮಾಹಿತಿಯನ್ನು ಕೇಳಿಕೊಂಡು ಹೇಳಲಿಕ್ಕೆ ಅಡ್ಡಿ ಕಾಣುವದಿಲ್ಲ.

ಇದರಂತೆ ಮುಂದೆ ಎರಡನೆಯ ಇಯತ್ತೆಯವರಿಗೆ ಶಾಲೆಯ ಕೋಣೆ ಗ್ರಾಮ, ತಾಲೂಕುಗಳ ಭೂಗೋಲ ಮಾಹಿತಿಯನ್ನು ತಿಳಿಸಿ ಹೇಳಿದ ಬಳಿಕ ಜಿಲ್ಲೆಯ ಅಲ್ಪಸ್ವಲ್ಪ ಭೂಗೋಲವನ್ನಾದರೂ ಕಲಿಸಬೇಕು.

ಹಾಗೆಯೇ ಸೂರನೆಯ ಇಯತ್ತ್ರಿಯವರಿಗೆ ತನ್ನ ಜಿಲ್ಹೆಯ ಮಾಹಿತಿಯ ಮೇಲಿಂದ ಕರ್ನಾಟಕದ ಭೂಗೋಲ ಮಾಹಿತಿಯನ್ನು ಮಾಡಿಸಿಕೊಂಡು ಇಲಾಖೆಯ ಭೂಗೋಲನ್ನು ಸಂಪೂರ್ಣ ಮುಗಿಸಿಕೊಳ್ಳಬೇಕು. ಕೊನೆಗೆ ಹಿಂದುಸ್ಥಾನದ ಸಾಮಾನ್ಯ ಕಲ್ಪನೆಯನ್ನು ತಂದು ಕೊಡುವದು ಅವಶ್ಯವು.

ಮುಂದೆ ನಾಲ್ಕನೆಯ ಇಯತ್ತ್ರಿಗೆ ಹಿಂದುಸ್ಥಾನದ ಭೂಗೋಲವನ್ನು ಪ್ರಾರಂಭಿಸಬೇಕು. ಇವರ ಬಗ್ಗೆ ವಿಷಯವು ಹೆಚ್ಚಿಗೆ ಎನಿಸಿದ ಪಕ್ಷದಲ್ಲಿ ಐದನೆಯ ಇಯತ್ತ್ರಿಗಾದರೂ ಸೇರಿಸಿಕೊಳ್ಳಬಹುದು.

ಮೇಲೆ ಹೇಳಿದ ರೀತಿಯಾಗಿ ಐದನೆಯ ಇಯತ್ತ್ರಿಗೆ ಹಿಂದುಸ್ಥಾನದ ವಿಶೇಷ ತರಹದ ವ್ಯಾಪಾರಿ ಭೂಗೋಲ ಶಿಕ್ಷಣವನ್ನು ಕಲಿಸಿಕೊಳ್ಳುವದಲ್ಲದೆ, ಏಶಿಯಾ ಖಂಡದ ಭೂಗೋಲವನ್ನೂ ಕಲಿಸಬೇಕು. ಯಾಗೂ ಜಗತ್ತಿನ ಭೂಜಲಗಳ ಕಲ್ಪನೆಯು ಕೂಡ ಇಯತ್ತ್ರಿಯವರಿಗೆ ಮಾಡಿ ಕೊಡಲು ಅಡ್ಡಿಯಿಲ್ಲ. ವಿಶೇಷವಾಗಿ ಪ್ರಾಕೃತಿಕ ಭೂಗೋಲವನ್ನೂ, ವ್ಯಾಪಾರೀ ವಿಷಯಕ ಭೂಗೋಲವನ್ನೂ ಕಲಿಸುವದರ ಕಡೆಗೆ ಈ ಇಯತ್ತ್ರಿಯಲ್ಲಿ ಹೆಚ್ಚು ಲಕ್ಷ ಕೊಡಬೇಕು. ಹಿಂದುಸ್ಥಾನದ ಸಂಬಂಧವಾಗಿ ಎಲ್ಲ ಮಾಹಿತಿಯನ್ನು ಹೇಳತಕ್ಕದ್ದು.

ಆರನೆಯ ಇಯತ್ತ್ರಿಗೆ ಏಶಿಯಾ, ಯುರೋಪ ಖಂಡಗಳ ಪ್ರಾಕೃತಿಕ, ರಾಜಕೀಯ, ಔದ್ಯೋಗಿಕ, ಸಾಂಕೇತಿಕ ಎಲ್ಲ ತರಹದ ವಿಷಯಗಳ ಭೂಗೋಲದ ಮಾಹಿತಿಯನ್ನು ಹಿಂದುಸ್ಥಾನಕ್ಕೆ ಸಂಬಂಧಿಸಿ ಕಲಿಸುವದು.

ಏಳನೆಯ ಇಯತ್ತ್ರಿಗೆ ಜಗತ್ತಿನ ಎಲ್ಲ ಖಂಡಗಳ ಎಲ್ಲ ತರಹದ ಭೂಗೋಲಿನ ಮಾಹಿತಿಯನ್ನು ನಕಾಶ, ಚಿತ್ರ, ಮಾಡೆಲ್ ಮೊದಲಾದವುಗಳ ಸಹಾಯದಿಂದ ಕಲಿಸತಕ್ಕದ್ದು. ಮುಂದೆ ವಿದ್ಯಾರ್ಥಿಗಳು ವ್ಯಾವಹಾರಿಕ ತಿಳುವಳಿಕೆಯುಳ್ಳವರಾಗುವದಕ್ಕಾಗಿ ಹಿಂದುಸ್ಥಾನಕ್ಕೆ ಸಂಬಂಧಪಟ್ಟ ವ್ಯಾಪಾರಿಯ ದೇಶಗಳ ಬಗ್ಗೆ ವಿಶೇಷ ಮಾಹಿತಿಯನ್ನು ಮಾಡಿ ಕೊಡುವದು ಅವಶ್ಯವುಂಟು.

ಹೀಗೆ ಭೂಗೋಲವನ್ನು ಕಲಿಸುವದರಲ್ಲಿ ಬಹುಶಃ ಮುಂದೆ ನಾನು ಹೇಳುವ ಪದ್ಧತಿಯಿಂದ ಪ್ರತಿಯೊಂದು ಕ್ಲಾಸಿನಲ್ಲಿ ಕಲಿಸುತ್ತ ಹೋಗುವದರಿಂದ ಈ ವಿಷಯವು ಹುಡುಗರಿಗೆ ಮನೋರಂಜನೆಯಾಗಿ ಚನ್ನಾಗಿ ಮನವರಿಕೆಯಾಗುವದೆಂಬುದನ್ನು ಅನುಭವದಿಂದ ಹೇಳುತ್ತೇನೆ. ಆದಷ್ಟು ಈ ವಿಷಯವನ್ನು ಕಲಿಸುವಾಗ್ಗೆ ಶಕ್ಯವಿದ್ದ ಉಪಕರಣಗಳನ್ನು ಉಪಯೋಗಿಸಬೇಕು. ಭೂಗೋಲ ಶಿಕ್ಷಣದ ಕಾಲಕ್ಕೆ ಒದಗಿದ್ದ ಉಪಕರಣಗಳಲ್ಲಿ ಸ್ವಲ್ಪ ಕುಂದುಕೊರತೆಗಳಿದ್ದರೂ ಶಿಕ್ಷಕನು ಚಾತುರ್ಯದಿಂದ ಅವುಗಳನ್ನು ಸುಧಾರಿಸಿಕೊಂಡು ಉಪಯೋಗಿಸಿಕೊಳ್ಳ

ಬೇಕು. ಯಾಕಂದರೆ ಆ ಕಾಲಕ್ಕೆ ಶಿಕ್ಷಣವು ಬರಿಯ ಬಾಯಿಂದ ಸಾಗತಕ್ಕದ್ದಿರುವದಿಲ್ಲ. ಆಗ್ಗೆ ಇದ್ದ ಉಪಕರಣಗಳಿಂದ ಹೆಚ್ಚು ಉಪಯೋಗವಾಗುವದು. ಅವಶ್ಯ ಸಮಯಾನುಸಾರವಾಗಿ ಬಾಲಕರಿಗೆ ವ್ಯಾಪಾರದ ಬಗ್ಗೆ ಹೆಚ್ಚಿಗೆ ಮಾಹಿತಿ ಹೊರೆಯುವಂತೆಯೂ, ಆಯಾ ಸ್ಥಳಗಳ ಸ್ಥಾನಿಕ ಅನುಕೂಲತೆ, ತೂಕ, ಅಳತೆ, ಇತ್ಯಾದಿಗಳನ್ನು ಭೂಗೋಲ ಶಿಕ್ಷಣದಲ್ಲಿ ಹೇಳುವಪನ್ನು ಶಿಕ್ಷಕರು ಎಂದೂ ಮರೆಯಬಾರದು. ಇದಕ್ಕೆ ಇಂಗ್ಲಿಷದಲ್ಲಿ ಕಮರ್ಶಿಯಲ್ ಜಾಗ್ರಫಿಯನ್ನು ನೋಡಿರು.

ಭೂಗೋಲದ ಪಾಠಗಳ ಆರಂಭ.

೧. ಮುಖ್ಯ ದಿಕ್ಕುಗಳು, ಉಪದಿಕ್ಕುಗಳು ಆದ ನಂತರ ಕಲಿಯತಕ್ಕ ವರ್ಗದ ಕೋಣೆಯ ದಿಕ್ಕುಗಳ ಬಗ್ಗೆಯೂ ನಂತರ ಇಡೀ ಸಾಲೆಯ ದಿಕ್ಕುಗಳ ಬಗ್ಗೆಯೂ ಜ್ಞಾನ ಮಾಡಿಕೊಟ್ಟು ತಮ್ಮ ತಮ್ಮ ಮನೆಗಳ ದಿಕ್ಕುಗಳ ಜ್ಞಾನವನ್ನು ಮಾಡಿಕೊಡಲು ಅಡ್ಡಿಯಿಲ್ಲ.

೨. ಊರ ವಿಷಯವಾಗಿ ಯಾವತ್ತೂ ಮಾಹಿತಿಯನ್ನು ಮಾಡಿಕೊಡುವದಕ್ಕಾಗಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಗ್ರಾಮ ಪ್ರದಕ್ಷಿಣೆಯನ್ನು ಮಾಡಿಸಬಹುದು. ಆ ಕಾಲಕ್ಕೆ ವಿದ್ಯಾರ್ಥಿಗಳ ಕೈಯಲ್ಲಿ ಪಾಟಿಗಳು ಇರುವದು ಅವಶ್ಯವು. ಯಾವ ಸ್ಥಳದಿಂದ ಹೊರಡುತ್ತೀವೆಯೋ ಅದರ ಗುರ್ತನ್ನು ಅವರಿಂದ ಮಾಡಿಸಿ ಮುಂದೆ ಯಾವ ದಿಕ್ಕಿಗೆ ಹೊರಟಿವೆಂಬುದನ್ನು ವಿಚಾರಿಸುತ್ತ ಆ ದಿಕ್ಕಿನ ಕಡೆಗೆ ರೇಖೆಯನ್ನು ತೆಗೆಯಿಸುತ್ತ ಸಾಗಬೇಕು. ಈ ಪ್ರವಾಸದ ಕಾಲಕ್ಕೆ ಕೆರೆ ಕಾಲುವೆಗಳು, ಹೊಳೆ-ಹಳ್ಳಗಳು ಬಂದರೆ ಅವುಗಳ ಬಗ್ಗೆ ಪ್ರತ್ಯಕ್ಷ ಚರ್ಚಿಸಿ, ತಿಳಿಸಿ ಹೇಳಬೇಕು. ಬಳಿಕ ಅದರ ಹೆಸರನ್ನು ತಕ್ಕ ಸ್ಥಳದಲ್ಲಿ ಬರೆಯಿಸಬೇಕು. ಹಾಗೆಯೇ ಮುಂದೆ ಸಾಗುತ್ತ ಗುಡ್ಡ ದಿಬ್ಬುಗಳು ಹತ್ತಿದರೆ ಅವುಗಳ ಬಗ್ಗೆಯೂ ಇದರಂತೆ ಚರ್ಚಿಸಿ ಮಾಹಿತಿಯನ್ನು ಹೇಳುತ್ತ ಪ್ರವಾಸವನ್ನು ಸಾಗಿಸಬೇಕು. ಯಾವ ಯಾವ ದಿಕ್ಕಿಗೆ ಹೇಗೆ ಹೇಗೆ ಹೋಗುತ್ತೀವೆಯೋ, ಆಯಾ ದಿಕ್ಕಿಗೆ ಪಾಟಿಯ ಮೇಲೆ ಗೀರು ಹಾಕುತ್ತ ಸಾಗಬೇಕು. ಸಾಧಾರಣ ಪಾಟಿಯ ಮೇಲೆ ಗ್ರಾಮದ ಕಲ್ಪನೆ ಬರುವಂತೆ ಆಕೃತಿ ಹೊರಟರೆ ಸಾಕು. ಹೀಗೆ ಗ್ರಾಮ ಪ್ರದಕ್ಷಿಣೆಯನ್ನು ಮಾಡಿ ಪ್ರತಿಯೊಂದು ದಿಕ್ಕಿಗೆ ಏನೇನು ನೋಡಿದೆವೋ ಅವನ್ನು ಅವರಿಂದಲೇ ಪಾಟಿಯ ಮೇಲೆ ತಕ್ಕ ಸ್ಥಳದಲ್ಲಿ ಸಂಕ್ಷೇಪವಾಗಿ ಬರೆಯಿಸಿ ಪ್ರವಾಸದ ಕೆಲಸವನ್ನು ಮುಗಿಸಿಕೊಂಡು ಶಾಲೆಗೆ ಬರಬೇಕು; ಆ ಮೇಲೆ ಪುನಃ ಶಾಲೆಯಲ್ಲಿ ಒಟ್ಟಾಗಿ ಕುಳಿತುಕೊಂಡು ಮೊದಲು ಹೊರಟ ಸ್ಥಳದಿಂದ ನೋಡಿದ ಸಂಗತಿಗಳನ್ನೂ ಅವುಗಳಲ್ಲಿ ಪಾಟಿಯ ಮೇಲೆ ತುಂಬಿದ ಮಾಹಿತಿಯನ್ನೂ ವಿಚಾರಿಸಬೇಕು. ಅಂದರೆ ಗ್ರಾಮದ ಬಗ್ಗೆ ಪ್ರತ್ಯಕ್ಷ ಪ್ರಾಕೃತಿಕ ಸ್ವರೂಪವನ್ನು ನೋಡಿ

ದ ಹಾಗಾಯಿತು. ಇದೇ ಕಾಲಕ್ಕೆ ದಾರಿಯಲ್ಲಿ ಖಣಿಗಳು ದೃಷ್ಟಿಗೆ ಬಿದ್ದರೆ ಅವು ಗಳ ಬಗ್ಗೆಯೂ, ಎರಿ, ಮಸಾರಿ ಹೊಲಗಳ ಬಗ್ಗೆಯೂ ಮಾಹಿತಿಯನ್ನು ಮಾಡಿ ಕೊಡಬೇಕು. ಮತ್ತು ನೀರು ಹರಿದು ಬರುವ ಹಾಗೂ ಹರಿದು ಹೋಗುವ ಸ್ಥಳ ಗಳ ಮಾಹಿತಿಯನ್ನು ಚನ್ನಾಗಿ ಮಾಡಿ ಕೊಡುವದರಿಂದ ಮುಂದಿನ ಮಾಡೆಲ್ ತಯಾರಿಗೆ ಅನುಕೂಲವಾಗುತ್ತದೆ. ಇದರಂತೆ ತಾಲೂಕಿನ ಬಗ್ಗೆ ಭೂಗೋಲ ವನ್ನಾದರೂ ಕಲಿಸಬಹುದು. ಶಕ್ಯವಿದ್ದಮಟ್ಟಿಗೆ ಒಂದೆರಡು ಪ್ರವಾಸಗಳನ್ನಾ ದರೂ ಮಾಡಿಸಬಹುದು. ಈ ಪ್ರವಾಸದ ಮಾಹಿತಿಯ ಮೇಲಿಂದಲೂ ವಿದ್ಯಾರ್ಥಿ ಗಳ ಉತ್ತರಗಳ ಮೇಲಿಂದಲೂ ವಿದ್ಯಾರ್ಥಿಗಳ ಎದುರಿಗೆ ಮಾಡೆಲ್ಲುವನ್ನು ಶಿಕ್ಷಕ ರು ತಯಾರಿಸತಕ್ಕದ್ದು.

ಆ ಮೇಲೆ ಯಾವ ಸ್ಥಳದ ಪ್ರಾಕೃತಿಕ ಸಂಗತಿಗಳನ್ನು ಕಲಿಸಿರುತ್ತೀವೆಯೋ ಆ ಸ್ಥಳದ ಅನುಕೂಲತೆಯ ಮೇಲಿಂದ ಅಲ್ಲಿ ಯಾವ ಯಾವ ಬೆಳೆಗಳು, ಯಾವ ಯಾವ ಉದ್ಯೋಗಗಳು ನಡೆಯುವವೋ, ಲೈನ ಮಾರ್ಗ, ರೇಲ್ವೆ ಮಾರ್ಗ, ಗಿರಣಿ ಇತ್ಯಾದಿಗಳ ಅನುಕೂಲತೆಗಳಿಂದ ನಡೆಯತಕ್ಕ ಎಲ್ಲ ತರಹದ ವ್ಯಾಪಾರದ ಮಾಹಿತಿ ಹಾಗೂ ಒಕ್ಕಲತನದ ಸೊಸಾಯಿಟಿಗಳ ಮಾಹಿತಿ ಅವುಗಳ ಉಪ ಯೋಗ ಇತ್ಯಾದಿಗಳ ಕಲ್ಪನೆಯೂ ಹಾಗೂ ಅದೇ ಸ್ಥಳದಲ್ಲಿ ವಾಸ ಮಾಡಿ ಕೊಂಡಿರತಕ್ಕ ಜನರ ಜಾತಿ, ನಡೆನುಡಿಗಳ ಬಗ್ಗೆ ಮಾಹಿತಿ ಇತ್ಯಾದಿ ಕಲಿಸ ಬೇಕು. ಇದೇ ಕ್ರಮದಿಂದ ಮೇಲಿನ ಕ್ಲಾಸಿನವರಿಗೆ ಪರಸ್ಥಳದ, ಪರದೇಶದ ಮಾಹಿತಿಯನ್ನು ಕೊಡುವಾಗ್ಗೆ ಶಕ್ಯವಿದ್ದಮಟ್ಟಿಗೆ ಚಿತ್ರ ನಕಾಶಗಳ ಉಪಯೋ ಗವನ್ನು ಮಾಡಿಕೊಳ್ಳಬಹುದು. ಈ ಯಾವತ್ತೂ ಮೇಲಿನ ಮಾಹಿತಿಯಿಂದ ಕೂಡಿದ ಸಂಗತಿಗಳಿಗೆ ಔದ್ಯೋಗಿಕ ಭೂಗೋಲವೆನ್ನುವರು.

ಆ ಮೇಲೆ ರಾಜ್ಯದಾಡಳಿತೆಯ ಸಂಬಂಧವಾಗಿ ಈ ಭೂಗೋಲ ವಿಷಯದಲ್ಲಿ ಆರಂಭದಿಂದ ಕ್ರಮವಾಗಿ ಎಲ್ಲ ಖಾತೆಗಳ ಬಗ್ಗೆ ಅಲ್ಪಸ್ವಲ್ಪ ಮಾಹಿತಿಯನ್ನು ಕೊಡುತ್ತ ಕ್ರಮೇಣ ಹೆಚ್ಚಿಸಬೇಕು. ಹ್ಯಾಗಂದರೆ—

೧. ರೆವ್ಹಿನ್ಯೂ ಖಾತೆ :—ಗ್ರಾಮದ ಓಲೇಕಾರ, ಮುಲ್ಕೀ ಪಾಟೀಲ, ಪೋಲೀಸ ಪಾಟೀಲ, ಸರ್ಕಲ್ ಇನಸ್ಪೆಕ್ಟರ, ಸಿರಸ್ತೇದಾರ, ಮಾಮಲೇದಾರ, ಇಲಾಖೆ ಸಾಹೇಬ (ಅಸಿ. ಕಲೆಕ್ಟರ), ಕಲೆಕ್ಟರ, ಕಮೀಶನರ ಇತ್ಯಾದಿ.

೨. ಜ್ಯುಡೀಸಿಯಲ್ ಖಾತೆ :—ಬೇಲೀಫರು, ನಾಝುರರು, ಮುನಸೂಫರು, ಅಸಿಸ್ಟಂಟ ಜಜ್ಜರು, ಜಜ್ಜರು ಇತ್ಯಾದಿ.

೩. ಶಾಳಾ ಖಾತೆ :—ಹಳ್ಳಿಯ ಶಾಲೆ, ಮಾಸ್ತರರು, ಫೀ, ತಾಲೂಕ ಶಾಲೆ, ತಾಲೂಕ ಸಿಪಾಯಿ, ತಾಲೂಕ ಶಾಲಾಮಾಸ್ತರರು, ಸುಪರವಾಯಿಝರರು, ಸ್ಕೂಲ ಬೋರ್ಡ ಚೇಅರಮನ್ನರು ಇತ್ಯಾದಿ.

ಇದರಂತೆಯೇ ಪೀ. ಡಬ್ಲ್ಯೂ. ಡಿಪಾರ್ಟಮೆಂಟ, ಮುನಸೀಪಾಲಟಿ, ಲೋಕಲ್ ಬೋರ್ಡ, ಫಾರೆಸ್ಟ ಖಾತೆ, ಪೋಲೀಸ ಖಾತೆ, ಪೋಷ್ಟ ಖಾತೆ, ದವಾ ಖಾನೆಗಳು ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಹೇಳಬೇಕಾಗುವದು. ಅಂದರೆ ಪ್ರತಿಯೊಬ್ಬ ಅಧಿಕಾರಿಯು ವಾಸ ಮಾಡಿಕೊಂಡಿರುವ ಸ್ಥಳ (ಕಚೇರಿ), ಅಧಿಕಾರ, ಅಧಿಕಾರದ ಹದ್ದು ಇತ್ಯಾದಿಗಳ ಮಾಹಿತಿಯನ್ನು ಸ್ಪಷ್ಟವಾಗಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾಡಿಸಿ ಕೊಡಲಿಕ್ಕೆ ಬೇಕು. ಇದರಿಂದ ಸರಕಾರವು ಏಕತಂತ್ರೀಯ ವಾಗಿರುವದೆಂದು ತಿಳಿದು ಬಾಲಕರು ರಾಜನಿಷ್ಠರೂ ವ್ಯವಹಾರಿಕ ಜ್ಞಾನವುಳ್ಳವರೂ ಆಗುವರು.

ವಿದ್ಯಾರ್ಥಿಗಳಿಗೆ ನಕಾಶ ತೆಗೆಯಲಿಕ್ಕೆ ಕಲಿಸುವದು :— ಆರಂಭಕ್ಕೆ ತೆಗೆಯಿಸತಕ್ಕ ನಕಾಶದ ಆಕೃತಿಯ ಕಟ್ಟುಗಳನ್ನು ಕತ್ತರಿಸಿ ಕ್ಲಾಸಿನ ಹುಡುಗರ ಕಡೆಗೆ ಕೊಡಬೇಕು. ಪ್ರತಿಯೊಬ್ಬರೂ ಪಾಟಿಯ ಮೇಲೆ ಹಲವು ಸಾರೆ ಅವನ್ನು ಶಿಕ್ಷಕರ ಹೇಳಿಕೆಯ ಪ್ರಕಾರ ಇಟ್ಟುಕೊಂಡು ತೀಡಿ ಆಕೃತಿಯನ್ನು ತೆಗೆಯಬೇಕು. ಬಳಿಕ ಇದರ ರೂಢಿ ಹೆಚ್ಚಾದಂತೆ ಕತ್ತರಿಸಿದ ಪಟ್ಟಿನ್ನು ಎದುರಿಗೆ ಇಟ್ಟುಕೊಂಡು ಪಾಟಿಯ ಮೇಲೆ ನಕಾಶವನ್ನು ತೆಗೆಯಲಿಕ್ಕೆ ಹಚ್ಚಬೇಕು. ಆ ನಂತರ ಕ್ರಮೇಣ ಕೇವಲ ಸ್ಮರಣದ ಶಕ್ತಿಯಿಂದ ಇಲ್ಲವೆ ನಕಾಶ ನೋಡಿ ತೆಗೆಯಿಸುವ ರೂಢೀ ಮಾಡಿಸಬೇಕು. ಈ ಪ್ರಕಾರ ತೆಗೆದ ನಕಾಶದ ಆಕೃತಿಯಲ್ಲಿ ಈ ವರೆಗೆ ಬಾಯಿಯಿಂದ ಹೇಳುತ್ತ ಬಂದ ಪ್ರಾಕೃತಿಕದ ಸಂಗತಿಗಳ ಮಾಹಿತಿಯನ್ನು ಕ್ರಮೇಣ ತುಂಬಿಸುತ್ತ ಸಂಕ್ಷಿಪ್ತ ಹೆಸರುಗಳನ್ನು ಬರೆಯಿಸುತ್ತ ಸಾಗಬೇಕು.

ಮೇಲೆ ಹೇಳಿದ ಪ್ರಕಾರದಿಂದ ನಕಾಶ ತೆಗೆಯಿಸುವದಕ್ಕೆ ಅನುಕೂಲವಾದ ನಕಾಶದ ಬುಕ್ಕುಗಳನ್ನು ಮುಂದೆ ಹೇಳುವ ಪ್ರಕಾರವಾಗಿ ಕಟ್ಟಿಸಬೇಕು. ಎಡಗಡೆಗೆ ಡ್ರಾಯಿಂಗ ಹಾಳಿಯೂ, ಬಲಗಡೆಗೆ ಫುಲಿಸ್ಕೇಪ ಹಾಳಿಯೂ ಬರುವಂತೆ ಆ ಬುಕ್ಕನ್ನು ಕಟ್ಟಿಸಬೇಕು. ಎಡಗಡೆಗೆ ಡ್ರಾಯಿಂಗ ಹಾಳಿಯ ಮೇಲೆ ನಕಾಶವನ್ನು ತೆಗೆದಿರಬೇಕು. ಮತ್ತು ಅದರಲ್ಲಿ ಯೋಗ್ಯ ಸಂಕ್ಷಿಪ್ತ ಮಾಹಿತಿಯನ್ನು ತುಂಬಿರಬೇಕು. ಮತ್ತು ಬಲಗಡೆಯ ಫುಲಿಸ್ಕೇಪ ಹಾಳಿಯ ಮೇಲೆ ಎಡಗಡೆಗೆ ಕಾಣುತ್ತಿರುವ ಎಲ್ಲ ಮಾಹಿತಿಯನ್ನು ವಾಕ್ಯರೂಪದಿಂದ ವಿರಳ ವಿರಳವಾಗಿ ವಿದ್ಯಾರ್ಥಿಗಳ ಕೈಯಿಂದ ಬರೆಯಿಸಬೇಕು. ಈ ಪ್ರಕಾರದ ಕ್ರಮದಿಂದ ಇಡೀ ವರ್ಷದಲ್ಲಿ ಆ ಪುಸ್ತಕದಲ್ಲಿ ಎಂಟು, ಹತ್ತು ನಕಾಶಗಳನ್ನು ತೆಗೆಯಿಸುವದಾಗಬಹುದು. ಪ್ರತಿಯೊಂದು ವಿಷಯದ ಮಾಹಿತಿಯ ಬಗ್ಗೆ ಒಂದೊಂದು ನಕಾಶವಿರತಕ್ಕದ್ದು. ಅಂದರೆ ಅದರಲ್ಲಿಯ ವಿಷಯಗಳನ್ನು ಕಣ್ಮುಟ್ಟಿ ನೋಡಿ, ಸ್ವತಃ ಕೈಮುಟ್ಟಿ ತುಂಬಿರುವದರಿಂದ ಆ ವಿಷಯವು ವಿದ್ಯಾರ್ಥಿಗಳಿಗೆ ದೃಢವಾಗುವದು ಹಾಗೂ ಕಲಿಯಲಿಕ್ಕೆ ಬೇಸರವೆನಿಸದು.

ಮೂರನೆಯ ಇಯತ್ತ್ತಿಯ ವಿದ್ಯಾರ್ಥಿಗಳಿಗೆ ಸ್ಕೇಲಿನ ಮಾಹಿತಿಯನ್ನು ಮಾಡಿ ಕೊಡಲಿಕ್ಕೆ ಅಡ್ಡಿ ಇಲ್ಲ. ಇದರಿಂದ ಬೇಕಾದ ಎರಡು ಸ್ಥಳಗಳ ನಡುಪಿ ಇರುವ ಅಂತರವನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುವದಲ್ಲದೆ ಬೇಕಾದಷ್ಟು ಸಣ್ಣ ದೊಡ್ಡ ನಕಾಶದ ಆಕೃತಿಯನ್ನು ಸಹ ವಿದ್ಯಾರ್ಥಿಗಳ ಕಡೆಯಿಂದ ತೆಗೆಯಿಸಲಿಕ್ಕೆ ಅನುಕೂಲವಾಗುತ್ತದೆ. ಐದು, ಆರು, ಏಳನೆಯ ಇಯತ್ತ್ತಿಯ ವಿದ್ಯಾರ್ಥಿಗಳಿಗೆ ಹಿಂದುಸ್ಥಾನದ ಹಾಗೂ ಬೇರೆ ಬೇರೆ ದೇಶಗಳ, ಬೇರೆ ಬೇರೆ ಮಾಹಿತಿಗಳುಳ್ಳ ನಕಾಶಗಳನ್ನು ಬೇರೆ ಬೇರೆ ಸ್ಕೇಲಿನಿಂದ ತೆಗೆಯಿಸಿ ಅನುಕೂಲತೆಯ ಮೇರೆಗೆ ಬಣ್ಣವನ್ನು ಸಹ ಕೊಡಿಸಲಿಕ್ಕೆ ಅಡ್ಡಿಯಿಲ್ಲ.

ಮಾಡೆಲ್ ಮಾಡಿಸುವದು :—ಆದಷ್ಟು ತೀವ್ರ ಒಣಗತಕ್ಕ, ಎಲ್ಲರಿಗೂ ಹಾಕಲನುಕೂಲವಾಗುವಂಥ, ಹೆಚ್ಚು ಬೆಲೆ ಬೀಳದಂಥ, ವಸ್ತುವಿನಿಂದ ಮಾಡೆಲ್‌ನ್ನು ಮಾಡಿಸಬೇಕು. ಬಹುಶಃ ಕೆಸರಿನ ಮುದ್ದಿಯಿಂದ ಮಾಡಿಸುವದೇ ಬಹಳ. ಬೇರೆ ಕೆಲವರು ಕಿಟ್ಟದಿಂದ ಮಾಡಿಸಬೇಕೆಂದು ಅನ್ನುತ್ತಾರೆ. ಆದರೆ ಒಮ್ಮೆ ಮಾಡಿದ ಮಾಡೆಲ್‌ನ್ನು ಕೆಡಿಸಿ ಪುನಃ ಕೂಡಲೆ ಮತ್ತೊಂದು ಮಾಡೆಲ್‌ನ್ನು ಹಾಕಲಿಕ್ಕೆ ಅದೇ ಮುದ್ದಿಯನ್ನು ಉಪಯೋಗಿಸಲಿಕ್ಕೆ ಬರುವದಿಲ್ಲ. ಇದರಂತೆ ಮಣ್ಣಿನದಾದರೂ ಸ್ವಲ್ಪ ತಾ,ಸದಾಯಕವೆನಿಸುವದಲ್ಲದೆ ತೀವ್ರ ಒಣಗುವ ವಸ್ತುವೂ ಅಲ್ಲವು. ಆರಂಭಕ್ಕೆ ಒಂದೆರಡು ಸಾರಿ ಶಿಕ್ಷಕರು ಸ್ವತಃ ಮಣ್ಣಿನಿಂದ ಮಾಡೆಲ್ಲನ್ನು ಮಾಡಿ ತೋರಿಸಬೇಕಾಗುವದು. ಮುಂದೆ ವಿದ್ಯಾರ್ಥಿಗಳ ಕಡೆಯಿಂದ ಮಾಡಿಸುವದಾದರೆ ಕಾಗದ ನೆನಿಸಿದ ಮುದ್ದೆಯಿಂದ ಮಾಡಿಸುವದು ವಿಹಿತವಾದದ್ದು. ಇದು ಬಹಳೀ ಉಪಯುಕ್ತವಾದದ್ದು. ಒಮ್ಮೆ ಹಾಕಿದ ಮಾಡೆಲ್‌ನ್ನು ಕೆಡಿಸಿ ಮುರಿದು ಹದಿನೈದು ಮಿನಿಟು ನೀರಿನಲ್ಲಿ ಹಾಕಿ ನೆನೆಯಿಸಿದರೆ ಬೇರೆ ಮಾಡೆಲ್ ಮಾಡಲಿಕ್ಕೆ ಹೊಸ ಮುದ್ದೆಯು ಸಿದ್ಧವಾಗುತ್ತದೆ. ಆದರೆ ಎಲ್ಲಕ್ಕೂ ಮೊದಲು ಶಾಲೆಯಲ್ಲಿ ಈ ಕಾಗದದ ಮುದ್ದೆಯನ್ನು ತಯಾರಿಸಲಿಕ್ಕೆ ಒಂದು ತಿಂಗಳೊಪ್ಪತ್ತು ಅವಧಿ ಬೇಕು. ದಿನಾಲು ಕಸದಲ್ಲಿ ಚಲ್ಲತಕ್ಕ ಹಾಗು ನಿರರ್ಥಕವಾದ ಸಣ್ಣ ದೊಡ್ಡ ಕಾಗದಗಳನ್ನೂ ಚೂರುಗಳನ್ನೂ ನೀರಿನಲ್ಲಿ ನೆನೆಹಾಕುತ್ತ ಹೋಗಬೇಕು. ಎರಡು ಮೂರು ವಾರಗಳ ನಂತರ ಆ ನೆನೆದ ಕಾಗದದ ಚೂರುಗಳನ್ನು ತೆಗೆದು ಕುಟ್ಟಿ, ಅರೆದು ಈ ಮುದ್ದೆಯನ್ನು ತಯಾರಿಸಬೇಕು. ಇದರಲ್ಲಿ ಬೇರೆ ಯಾವ ಹದವನ್ನೂ ಹಾಕಕೂಡದು. ಈ ಪ್ರಕಾರದ ಕಾಗದದ ಮುದ್ದೆಯನ್ನು ಒಮ್ಮೆ ತಯಾರಿಸಿಕೊಂಡರೆ ಇಡೀ ಶಾಲೆಯಲ್ಲಿ ಬೇಕಾದಾಗ್ಗೆ ಬೇಕಾದ ಕ್ಲಾಸಿಗೆ ಮಾಡೆಲ್‌ನ್ನು ತಯಾರಿಸಲಿಕ್ಕೆ ಬರುವದು. ಕ್ರಮೇಣ ವಿದ್ಯಾರ್ಥಿಗಳು ನಮಗೆ ತಿಳಿಯಿಸದಲೇ ಮನೆಯಲ್ಲಿ ಈ ತರದ ಕಾಗದದ ಮುದ್ದೆಯನ್ನು ತಯಾರಿಸಿ ಅದರಿಂದ ಯಾವದೊಂದು ಮಾಡೆಲ್‌ನ್ನು ಮಾಡಿ ತಂದು ತೋರಿಸುವರು; ಇದು ನಮ್ಮ ಅನುಭವಕ್ಕೆ ಬಂದಿದೆ. ಈ ವರೆಗೆ ಹೇಳಿದ ಮಾಹಿತಿಯಲ್ಲಿ

ಮಾಡೆಲ್‌ನ್ನು ಹೇಗೆ ಮಾಡಿಸಬೇಕೆಂಬುದನ್ನು ಹೇಳಿಲ್ಲ. ಸಾಧಾರಣವಾಗಿ ಅಖಂಡ ಹಲಿಗೆಯನ್ನು ತಕ್ಕೊಂಡು ಮಾಡೆಲ್ ಮಾಡುವ ಮುದ್ದೆಯಿಂದ ಅದರ ಮೇಲೆ ಜೌಕು ಸಪಾಟ ಪ್ರದೇಶವನ್ನು ಮಾಡಬೇಕು. (ನಕಾಶದ ಅಳತೆಗೆ ಸರಿಯಾಗಿ) ಆ ಮೇಲೆ ನಕಾಶದ ಕಾಗದವನ್ನು ಅದರ ಮೇಲಿಟ್ಟು ಸೂಜಿ, ಟಾಚಣೀ ಇತ್ಯಾದಿಗಳ ಸಹಾಯದಿಂದ ಬಾಹ್ಯರೇಷೆಯನ್ನು ಗುರ್ತು ಮಾಡಿಕೊಳ್ಳಬೇಕು. ಆ ಮೇಲೆ ಎತ್ತರದ ಪ್ರದೇಶಗಳನ್ನು ಅಂದಾಜಿನಿಂದ ಮುದ್ದೆಯನ್ನು ಹಚ್ಚಿ ಎತ್ತರಿಸಬೇಕು. ಹಳ್ಳ, ನದಿ, ಕೆರೆಗಳನ್ನು ತಗ್ಗಾಗಿ ಮಾಡಿಸಬೇಕು; ಸಮುದ್ರದ ಭಾಗವನ್ನು ಇಳಿಜಾರು ತಗ್ಗಿಸಬೇಕು. ಬಳಿಕ ಬಿಸಿಲಿಗೆ ಇಟ್ಟು ಒಣಗಿಸಬೇಕು. ಆ ಮೇಲೆ ಹಲಿಗೆಯ ಮೇಲಿಂದ ಅಖಂಡ ಚಕ್ಕಳಿಯೇ ಹೊರಡುವದು. ಅದನ್ನು ಅಂಟು ಹಚ್ಚಿ ಅದೇ ಅಳತೆಯ ರಟ್ಟಿಗೆ ಅಂಟಿಸಬೇಕು. ನಂತರ ನಕಾಶವನ್ನು ಎದುರಿಗೆ ಇಟ್ಟುಕೊಂಡು ಬಣ್ಣವನ್ನು ಸಿದ್ಧ ಮಾಡಬಹುದು.

ಈ ಪ್ರಕಾರ ಭೂಗೋಲ ವಿಷಯವನ್ನು ಕಲಿಸುವದರಿಂದ ವಿದ್ಯಾರ್ಥಿಗಳಿಗೆ ಎಲ್ಲ ಪ್ರಕಾರದ ಮಾಹಿತಿಯಿಂದ ಕೂಡಿದ ಜ್ಞಾನವಾಗುವದಲ್ಲದೆ ವಿದ್ಯಾರ್ಥಿಗಳ ಹಸ್ತಕೌಶಲ್ಯವೂ ಬೆಳೆಯುವದು. ವಿದ್ಯಾರ್ಥಿಗಳು ಪ್ರೀತಿಯಿಂದ ಈ ಭೂಗೋಲ ವಿಷಯವನ್ನು ಕಲಿಯುವರು. ಇದು ಅನುಭವಸಿದ್ಧ ಸಂಗತಿಯು.

ಈಗ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕಲಿಸಲ್ಪಡುವ ಕ್ರಮಿಕ ಪುಸ್ತಕಗಳು ಸುಮಾರು ೫೫ ವರ್ಷಗಳ ಪೂರ್ವದಲ್ಲಿ ಉದಯ ಹೊಂದಿದವು. ತತ್ಪೂರ್ವದಲ್ಲಿ ಇದ್ದ ಕ್ರಮಿಕ ಪುಸ್ತಕಗಳನ್ನು ರದ್ದುಪಡಿಸಿ ಪರಿಸ್ಥಿತಿಗೆ ಸರಿಯಾದ ಹೊಸ ಹೊಸ ವಿಷಯಗಳನ್ನೊಳಕೊಂಡ ಹೊಸ ಮಾದರಿಯ ಪುಸ್ತಕಗಳನ್ನು ನಿರ್ಮಿಸುವದು ಅನಶ್ಯವೆಂದು ಕಂಡು ಹಿಡಿದು ವಿದ್ಯಾಖಾತೆಯವರು ಈಗ ಪ್ರಚಲಿತವಿರುವ ಕ್ರಮಿಕ ಪುಸ್ತಕಗಳನ್ನು ಅಸ್ತಿತ್ವದಲ್ಲಿ ತಂದರು. ಆದರೆ ಕಳೆದ ೫೫ ವರ್ಷಗಳಲ್ಲಿ

ಶಿಕ್ಷಣ ಶಾಸ್ತ್ರದಲ್ಲಿ ವಿಶೇಷ ಪ್ರಗತಿಯಾಗಿರುವದಲ್ಲದೆ ವಾಙ್ಮಯ, ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮೊದಲಾದವುಗಳಲ್ಲಿ ಕೂಡ ಮಹತ್ವದ ಬದಲಾವಣೆಗಳೂ, ಶೋಧಗಳೂ ಆಗಿರುವವು. ೨೦--೩೫ ವರ್ಷಗಳ ಹಿಂದೆ ಗ್ರಾಹ್ಯವೆನಿಸಿದ ಎಷ್ಟೋ ವಿಷಯಗಳು ಈಗ ಅಗ್ರಾಹ್ಯವಾಗಿವೆ. ಮನುಷ್ಯನ ಜ್ಞಾನಾನುಭವಗಳಲ್ಲಿ ಸಂಸ್ಕಾರವಾದಂತೆ ಅಧ್ಯಯನ ಗ್ರಂಥಗಳಲ್ಲಿಯೂ, ತದನುಗುಣವಾದ ಸಂಸ್ಕಾರವಾಗತಕ್ಕದ್ದು ಅವಶ್ಯವದೆ. ಕಾರಣ ಕಳೆದ ೩೫ ವರ್ಷಗಳಿಂದ ಇದುವರೆಗೆ ಎಳ್ಳಷ್ಟೂ ಸಂಸ್ಕಾರವನ್ನು ಹೊಂದದೇ ಇದ್ದ ಅವೇ ಕ್ರಮಿಕ ಪುಸ್ತಕಗಳನ್ನು ಕಲಿಸುತ್ತ ಇದ್ದುದು ಮತ್ತು ಮುಂದೆ ಇನ್ನೂ ಅನೇಕ ವರ್ಷ ಅವುಗಳನ್ನೇ ಕಲಿಸುತ್ತ ಹೋಗುವದು ಶಿಕ್ಷಣ ಪದ್ಧತಿಯಲ್ಲಿ ಒಂದು ಬಲವಾದ ದೋಷವು ಎಂದು ಶಿಕ್ಷಣತಜ್ಞರು ಹೇಳದೆ ಇರಲಾರರು. ಈ ದೋಷವು ಆದಷ್ಟು ಬೇಗನೆ ಹೋಗುವದು ಅವಶ್ಯವದೆ.

ಅವಶ್ಯಕ ಸುಧಾರಣೆಗಳು.

೧. ಈಗಿರುವ ಕ್ರಮಿಕ ಪುಸ್ತಕಗಳನ್ನುಳಿದು ಬೇರೆ ಯಾವ ಪುಸ್ತಕಗಳನ್ನು ಶಾಲೆಗಳಲ್ಲಿ ಉಪಯೋಗಿಸಕೂಡದೆಂಬ ನಿರ್ಬಂಧವು ಇಲ್ಲದಂತಾಗುವದು:- ಇಂಗ್ಲಿಷ ಭಾಷೆಯಲ್ಲಿ ಪ್ರತಿ ವರ್ಷ ಹೊಸ ಹೊಸ ಪುಸ್ತಕಗಳು ಸಿದ್ಧವಾಗುತ್ತಿರುವವು. ಇಂಗ್ಲಿಷ ಶಾಲೆಗಳಲ್ಲಿ ಇಂಥದೊಂದೇ ಪುಸ್ತಕವು ಆಯಾ ಇಯತ್ತೆಗೆ ಕಲಿಸಲ್ಪಡಬೇಕೆಂಬ ನಿರ್ಬಂಧವಿಲ್ಲ. ಕಲಿಸಲಿಕ್ಕೆ ಯೋಗ್ಯವಾದುದೆಂದು ಸರಕಾರದ ಒಪ್ಪಿಗೆಯುಳ್ಳ ಅನೇಕಾನೇಕ ಪುಸ್ತಕಗಳಲ್ಲಿ ಬೇಕಾದ ಒಂದು ಪುಸ್ತಕವನ್ನು ಹಚ್ಚಲಿಕ್ಕೆ ಸ್ವಾತಂತ್ರ್ಯವುಂಟು. ಪುನಃ ಪುನಃ ಅದೇ ಪುಸ್ತಕವನ್ನೇ ಕಲಿಸುವದರಿಂದ ಕಲಿಯುವವರಿಗೂ ಕಲಿಸುವವರಿಗೂ ತುಂಬಾ ಬೇಸರಿಕೆಯುಂಟಾಗುವದು. ಕಲಿಸುವ ಕಾರ್ಯವು ಯಾಂತ್ರಿಕ ರೀತಿಯಿಂದ ಸಾಗುವದಲ್ಲದೆ ಅಭಿರುಚಿಯಿಂದ ಸಾಗುವದಿಲ್ಲ. ಆದ್ದರಿಂದ ಇಂಗ್ಲಿಷ ಶಾಲೆಗಳಲ್ಲಿ ಬೇರೆ ಬೇರೆ ಪುಸ್ತಕಗಳನ್ನು ಹಚ್ಚುವರು. ಲಾಂಗಮನ್ಸ, ಮ್ಯಾಕಮಿಲನ್ ಮೊದಲಾದ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಅನೇಕ ಬಗೆಯ ಕ್ರಮಿಕ ಪುಸ್ತಕಗಳನ್ನು ಪ್ರಕಟಿಸಿರುವರು. ಮೇಲಾದ ಅನೇಕ ಪುಸ್ತಕಗಳು ದೊರೆಯುವದರಿಂದ ಯಾವ ಕ್ರಮಿಕ ಮಾಲೆಯನ್ನು ಹಚ್ಚಬೇಕೆಂಬುವಲ್ಲಿ ದಿಗಿಲು ಬೀಳುವಂತಿದೆ.

ಆದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಪ್ರತಿ ವರ್ಷ ಅದೇ ಪಾರಾಯಣ. ಸರಕಾರದ ವಿದ್ಯಾಖಾತೆಯು ಬೇರೆ ಯಾವ ಪುಸ್ತಕಗಳನ್ನೂ ಶಾಲೆಗಳಲ್ಲಿ ಉಪಯೋಗಿಸಕೂಡದೆಂದು ನಿರ್ಬಂಧಿಸಿರುವದರಿಂದ ಬಗೆಬಗೆಯ ಪುಸ್ತಕಮಾಲೆಗಳು ಹುಟ್ಟಲಿಕ್ಕೆ ಅಸ್ಪದವೇ ಇಲ್ಲದಾಗಿದೆ. ಈ ನಿರ್ಬಂಧದಿಂದ ಭಾಷಾಭಿವೃದ್ಧಿಗೆ ಬಲವಾದ ಆತಂಕ ಉಂಟಾಗಿದೆ. ಇದು ಹೋದ ಹೊರ್ತು ಶಿಕ್ಷಣದಲ್ಲಿ ಯಾವ ಪ್ರಗತಿಯೂ ಆಗುವದಿಲ್ಲ.

ಇತ್ತೀಚೆಗೆ ಕನ್ನಡ ವಾಙ್ಮಯವು ಬಹಳವಾಗಿ ಬೆಳೆದಿದೆ. ನೂರಾರು ಪ್ರಾಚೀನ ಕವಿಗಳ ಮೇಲಾದ ಕಾವ್ಯಗ್ರಂಥಗಳು ದೊರೆತಿರುವವು. ಅವುಗಳ ಮೇಲಿಂದ ಹಲವು ಉತ್ಕೃಷ್ಟ ಕಾವ್ಯಮಾಲೆಗಳನ್ನು ಪ್ರಾಥಮಿಕ ಶಾಲೆಗೋಸುಗ ಸಿದ್ಧಪಡಿಸಲಿಕ್ಕೆ ಬರುವಂತಿದೆ. ವಾಙ್ಮಯ ಸೇವಕರು ಭಾಷೆಯ ಏಕರೂಪತೆಗಾಗಿ ಹೆಣಗುತ್ತಿರುವದರಿಂದಲೂ, ಆಂಗ್ಲಭಾಷಾದಿ ಪರಭಾಷಾ ಸಂಪರ್ಕದಿಂದ ನಮ್ಮ ನುಡಿಯಲ್ಲಿ ಉಂಟಾದ ಸಂಸ್ಕಾರದಿಂದಲೂ ಹೊಸ ಬಗೆಯ ಗದ್ಯಮಾಲೆಗಳು ಹುಟ್ಟುವದು ಅವಶ್ಯವದೆ. ಆದರೆ ಮೇಲಿನ ನಿರ್ಬಂಧದಿಂದ ಈ ಬಗ್ಗೆ ಆಸ್ಪದವೇ ಇಲ್ಲ. ಈ ದೋಷವನ್ನು ಹೋಗಲಾಡಿಸುವದಕ್ಕೆ ಶಿಕ್ಷಣತಜ್ಞರು ಪ್ರಯತ್ನಿಸಬೇಕಾಗಿದೆ.

೨. ವ್ಹರ್ನಾಕ್ಯುಲರ ಟಿಕ್ಸ್ಬ ಬುಕ್ ಕಮಿಟಿಯು :—ಪ್ರಾಥಮಿಕ ಶಾಲೆಗಳಲ್ಲಿ ಬೇಕಾದ ಕ್ರಮಿಕ ಪುಸ್ತಕಗಳನ್ನು ಉಪಯೋಗಿಸುವ ಸ್ವಾತಂತ್ರ್ಯವು ದೊರೆತಲ್ಲಿ ಅಧ್ಯಯನದಲ್ಲಿ ಏಕರೂಪತೆಯು ಇಲ್ಲದಂತಾಗುವದು; ಮತ್ತು ಕೆಲವೆಡೆಯಲ್ಲಿ ಅಯೋಗ್ಯವಾದ ಪುಸ್ತಕಗಳು ಕಲಿಸಲ್ಪಡಬಹುದು; ಆದಕಾರಣ ನಿಯಂತ್ರಣವು ಅವಶ್ಯವದೆ. ಈ ಬಗೆಯ ನಿಯಂತ್ರಣವು ಹಾಯಸ್ಕೂಲುಗಳಿಗೆ ಉಂಟು. ವಿದ್ಯಾಖಾತೆಯವರು ಕಲಿಸಲಿಕ್ಕೆ ಯೋಗ್ಯವಾದ ಪುಸ್ತಕಗಳ ಯಾದಿಯನ್ನು ಮೇಲಿಂದ ಮೇಲೆ ಪ್ರಕಟಿಸುವರು. ಅವರ ಯಾದಿಯಲ್ಲಿಯ ಯಾವದೊಂದು ಪುಸ್ತಕವನ್ನು ಹಚ್ಚುವ ಸ್ವತಂತ್ರತೆಯು ಹಾಯಸ್ಕೂಲಿನವರಿಗೆ ಉಂಟು. ಯೋಗ್ಯ ಪುಸ್ತಕಗಳೇ ಹಚ್ಚಲ್ಪಡುವ ಹಾಗೆ ಮತ್ತು ಶಿಕ್ಷಣ ಕ್ರಮವಲ್ಲಿ ಏಕರೂಪತೆಯುಂಟಾಗುವ ಹಾಗೆ ನಿಯಂತ್ರಣಾಧಿಕಾರವುಳ್ಳ ಒಂದು ಶಿಕ್ಷಣ ಮಂಡಲವು ಬೇಕು. ಈಗಿನ ವ್ಹರ್ನಾಕ್ಯುಲರ ಟಿಕ್ಸ್ಬ ಬುಕ್ ಕಮಿಟಿಯಲ್ಲಿ ಸರಿಯಾದ ಸುಧಾರಣೆಯಾದಲ್ಲಿ ಈ ಕಾರ್ಯವನ್ನು ಅದು ಮಾಡಬಹುದು. ಯಾವತ್ತೂ ಶಾಲೆಗಳಲ್ಲಿ ಒಂದೇ ಬಗೆಯ ಪುಸ್ತಕಗಳು ಒಂದೇ ಕಾಲದಲ್ಲಿ ಕಲಿಸಲ್ಪಡುವಂತೆ ಈ ಮಂಡಲವು ಸ್ಕೂಲ ಲಿವ್ಹಿಂಗ ಎಗ್ಜಾಮಿನೇಶನ್ ಕಮಿಟಿಯಂತೆ ವರ್ಷ ವರ್ಷ ಹಚ್ಚಲವಶ್ಯವಾದ ಪುಸ್ತಕಗಳನ್ನು ಒಂದೆರಡು ವರ್ಷ ಮುಂಚಿತವಾಗಿ ಗೊತ್ತುಪಡಿಸಬೇಕು. ಪುಸ್ತಕಗಳನ್ನು ಶಕ್ಯವಾದಂತೆ ಬದಲಿಸುತ್ತ ಹೋಗಬೇಕು. ಸರಿಯಾದ ಪುಸ್ತಕಗಳ ರಚನೆಗೆ ಮಾರ್ಗವನ್ನು ತೋರಿಸಿ ಪ್ರೋತ್ಸಾಹವನ್ನು ಕೊಡಬೇಕು.

೩. ಈಗಿರುವ ಕ್ರಮಿಕ ಪುಸ್ತಕಗಳಲ್ಲಿ ಅವಶ್ಯವಾದ ತಿದ್ದುಪಡೆ :—ಈ ಪುಸ್ತಕಗಳಲ್ಲಿ ಸಾಮಾನ್ಯ ಜ್ಞಾನದ ಪಾಠಗಳಲ್ಲದೆ ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮೊದಲಾದ ಹಲವು ವಿಷಯಗಳ ಜೋಡನೆಯಾಗಿದೆ. ಒಂದೇ ಒಂದು ಪುಸ್ತಕದಿಂದ ಹಲವು ವಿಷಯಗಳನ್ನು ಕಲಿಸಬೇಕೆಂಬ ಹವ್ಯಾಸವು

ಶಿಕ್ಷಣ ಶಾಸ್ತ್ರದಲ್ಲಿ ವಿಶೇಷ ಪ್ರಗತಿಯಾಗಿರುವದಲ್ಲದೆ ವಾಙ್ಮಯ, ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮೊದಲಾದವುಗಳಲ್ಲಿ ಕೂಡ ಮಹತ್ವದ ಬದಲಾವಣಿಗಳೂ, ಶೋಧಗಳೂ ಆಗಿರುವವು. ೨೦--೨೫ ವರ್ಷಗಳ ಹಿಂದೆ ಗ್ರಾಹ್ಯವೆನಿಸಿದ ಎಷ್ಟೋ ವಿಷಯಗಳು ಈಗ ಅಗ್ರಾಹ್ಯವಾಗಿವೆ. ಮನುಷ್ಯನ ಜ್ಞಾನಾನುಭವಗಳಲ್ಲಿ ಸಂಸ್ಕಾರವಾದಂತೆ ಅಧ್ಯಯನ ಗ್ರಂಥಗಳಲ್ಲಿಯೂ, ತದನುಗುಣವಾದ ಸಂಸ್ಕಾರವಾಗತಕ್ಕದ್ದು ಅವಶ್ಯವದೆ. ಕಾರಣ ಕಳೆದ ೨೫ ವರ್ಷಗಳಿಂದ ಇದುವರೆಗೆ ಎಳ್ಳಷ್ಟೂ ಸಂಸ್ಕಾರವನ್ನು ಹೊಂದದೇ ಇದ್ದ ಅವೇ ಕ್ರಮಿಕ ಪುಸ್ತಕಗಳನ್ನು ಕಲಿಸುತ್ತ ಇದ್ದುದು ಮತ್ತು ಮುಂದೆ ಇನ್ನೂ ಅನೇಕ ವರ್ಷ ಅವುಗಳನ್ನೇ ಕಲಿಸುತ್ತ ಹೋಗುವದು ಶಿಕ್ಷಣ ಪದ್ಧತಿಯಲ್ಲಿ ಒಂದು ಬಲವಾದ ದೋಷವು ಎಂದು ಶಿಕ್ಷಣತಜ್ಞರು ಹೇಳದೆ ಇರಲಾರರು. ಈ ದೋಷವು ಆದಷ್ಟು ಬೇಗನೆ ಹೋಗುವದು ಅವಶ್ಯವದೆ.

ಆವಶ್ಯಕ ಸುಧಾರಣೆಗಳು.

೧. ಈಗಿರುವ ಕ್ರಮಿಕ ಪುಸ್ತಕಗಳನ್ನು ಳಿದು ಬೇರೆ ಯಾವ ಪುಸ್ತಕಗಳನ್ನು ಶಾಲೆಗಳಲ್ಲಿ ಉಪಯೋಗಿಸಕೂಡದೆಂಬ ನಿರ್ಬಂಧವು ಇಲ್ಲದಂತಾಗುವದು:- ಇಂಗ್ಲಿಷ ಭಾಷೆಯಲ್ಲಿ ಪ್ರತಿ ವರ್ಷ ಹೊಸ ಹೊಸ ಪುಸ್ತಕಗಳು ಸಿದ್ಧವಾಗುತ್ತಿರುವವು. ಇಂಗ್ಲಿಷ ಶಾಲೆಗಳಲ್ಲಿ ಇಂಥದೊಂದೇ ಪುಸ್ತಕವು ಅಯಾ ಇಯತ್ತೆಗೆ ಕಲಿಸಲ್ಪಡಬೇಕೆಂಬ ನಿರ್ಬಂಧವಿಲ್ಲ. ಕಲಿಸಲಿಕ್ಕೆ ಯೋಗ್ಯವಾದುದೆಂದು ಸರಕಾರದ ಒಪ್ಪಿಗೆಯುಳ್ಳ ಅನೇಕಾನೇಕ ಪುಸ್ತಕಗಳಲ್ಲಿ ಬೇಕಾದ ಒಂದು ಪುಸ್ತಕವನ್ನು ಹಚ್ಚಲಿಕ್ಕೆ ಸ್ವಾತಂತ್ರ್ಯವುಂಟು. ಪುನಃ ಪುನಃ ಅದೇ ಪುಸ್ತಕವನ್ನೇ ಕಲಿಸುವದರಿಂದ ಕಲಿಯುವವರಿಗೂ ಕಲಿಸುವವರಿಗೂ ತುಂಬಾ ಬೇಸರಿಕೆಯುಂಟಾಗುವದು. ಕಲಿಸುವ ಕಾರ್ಯವು ಯಾಂತ್ರಿಕ ರೀತಿಯಿಂದ ಸಾಗುವದಲ್ಲದೆ ಅಭಿರುಚಿಯಿಂದ ಸಾಗುವದಿಲ್ಲ. ಆದ್ದರಿಂದ ಇಂಗ್ಲಿಷ ಶಾಲೆಗಳಲ್ಲಿ ಬೇರೆ ಬೇರೆ ಪುಸ್ತಕಗಳನ್ನು ಹಚ್ಚುವರು. ಲಾಂಗಮನ್ಸ್, ಮ್ಯಾಕಮಿಲನ್ ಮೊದಲಾದ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಅನೇಕ ಬಗೆಯ ಕ್ರಮಿಕ ಪುಸ್ತಕಗಳನ್ನು ಪ್ರಕಟಿಸಿರುವರು. ಮೇಲಾದ ಅನೇಕ ಪುಸ್ತಕಗಳು ದೊರೆಯುವದರಿಂದ ಯಾವ ಕ್ರಮಿಕ ಮಾಲೆಯನ್ನು ಹಚ್ಚಬೇಕೆಂಬುವಲ್ಲಿ ದಿಗಿಲು ಬೀಳುವಂತಿದೆ.

ಆದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಪ್ರತಿ ವರ್ಷ ಅದೇ ಪಾರಾಯಣ. ಸರಕಾರದ ವಿದ್ಯಾಖಾತೆಯು ಬೇರೆ ಯಾವ ಪುಸ್ತಕಗಳನ್ನೂ ಶಾಲೆಗಳಲ್ಲಿ ಉಪಯೋಗಿಸಕೂಡದೆಂದು ನಿರ್ಬಂಧಿಸಿರುವದರಿಂದ ಬಗೆಬಗೆಯ ಪುಸ್ತಕಮಾಲೆಗಳು ಹುಟ್ಟಲಿಕ್ಕೆ ಆಸ್ಪದವೇ ಇಲ್ಲದಾಗಿದೆ. ಈ ನಿರ್ಬಂಧದಿಂದ ಭಾಷಾಭಿವೃದ್ಧಿಗೆ ಬಲವಾದ ಆತಂಕ ಉಂಟಾಗಿದೆ. ಇದು ಹೋದ ಹೊರ್ತು ಶಿಕ್ಷಣದಲ್ಲಿ ಯಾವ ಪ್ರಗತಿಯೂ ಆಗುವದಿಲ್ಲ.

ಇತ್ತೀಚೆಗೆ ಕನ್ನಡ ವಾಙ್ಮಯವು ಬಹಳವಾಗಿ ಬೆಳೆದಿದೆ. ನೂರಾರು ಪ್ರಾಚೀನ ಕವಿಗಳ ಮೇಲಾದ ಕಾವ್ಯಗ್ರಂಥಗಳು ದೊರೆತಿರುವವು. ಅವುಗಳ ಮೇಲಿಂದ ಹಲವು ಉತ್ಕೃಷ್ಟ ಕಾವ್ಯಮಾಲೆಗಳನ್ನು ಪ್ರಾಥಮಿಕ ಶಾಲೆಗೋಸುಗ ಸಿದ್ಧಪಡಿಸಲಿಕ್ಕೆ ಬರುವಂತಿದೆ. ವಾಙ್ಮಯ ಸೇವಕರು ಭಾಷೆಯ ಏಕರೂಪತೆಗಾಗಿ ಹೆಣಗುತ್ತಿರುವದರಿಂದಲೂ, ಆಂಗ್ಲಭಾಷಾದಿ ಪರಭಾಷಾ ಸಂಪರ್ಕದಿಂದ ನಮ್ಮ ನುಡಿಯಲ್ಲಿ ಉಂಟಾದ ಸಂಸ್ಕಾರದಿಂದಲೂ ಹೊಸ ಬಗೆಯ ಗದ್ಯಮಾಲೆಗಳು ಹುಟ್ಟುವದು ಅವಶ್ಯವಿದೆ. ಆದರೆ ಮೇಲಿನ ನಿರ್ಬಂಧದಿಂದ ಈ ಬಗ್ಗೆ ಆಸ್ಪದವೇ ಇಲ್ಲ. ಈ ದೋಷವನ್ನು ಹೋಗಲಾಡಿಸುವದಕ್ಕೆ ಶಿಕ್ಷಣತಜ್ಞರು ಪ್ರಯತ್ನಿಸಬೇಕಾಗಿದೆ.

೨. ವ್ಹರ್ನಾಕ್ಯುಲರ ಟಿಕ್ಸ್ಬ ಬುಕ್ ಕಮಿಟಿಯು :—ಪ್ರಾಥಮಿಕ ಶಾಲೆಗಳಲ್ಲಿ ಬೇಕಾದ ಕ್ರಮಿಕ ಪುಸ್ತಕಗಳನ್ನು ಉಪಯೋಗಿಸುವ ಸ್ವಾತಂತ್ರ್ಯವು ದೊರೆತಲ್ಲಿ ಅಧ್ಯಯನದಲ್ಲಿ ಏಕರೂಪತೆಯು ಇಲ್ಲದಂತಾಗುವದು; ಮತ್ತು ಕೆಲವೆಡೆಯಲ್ಲಿ ಅಯೋಗ್ಯವಾದ ಪುಸ್ತಕಗಳು ಕಲಿಸಲ್ಪಡಬಹುದು; ಆದಕಾರಣ ನಿಯಂತ್ರಣವು ಅವಶ್ಯವಿದೆ. ಈ ಬಗೆಯ ನಿಯಂತ್ರಣವು ಹಾಯಸ್ಕೂಲುಗಳಿಗೆ ಉಂಟು. ವಿದ್ಯಾಖಾತೆಯವರು ಕಲಿಸಲಿಕ್ಕೆ ಯೋಗ್ಯವಾದ ಪುಸ್ತಕಗಳ ಯಾದಿಯನ್ನು ಮೇಲಿಂದ ಮೇಲೆ ಪ್ರಕಟಿಸುವರು. ಅವರ ಯಾದಿಯಲ್ಲಿಯ ಯಾವದೊಂದು ಪುಸ್ತಕವನ್ನು ಹಚ್ಚುವ ಸ್ವತಂತ್ರತೆಯು ಹಾಯಸ್ಕೂಲಿನವರಿಗೆ ಉಂಟು. ಯೋಗ್ಯ ಪುಸ್ತಕಗಳೇ ಹಚ್ಚಲ್ಪಡುವ ಹಾಗೆ ಮತ್ತು ಶಿಕ್ಷಣ ಕ್ರಮವಲ್ಲಿ ಏಕರೂಪತೆಯುಂಟಾಗುವ ಹಾಗೆ ನಿಯಂತ್ರಣಾಧಿಕಾರವುಳ್ಳ ಒಂದು ಶಿಕ್ಷಣ ಮಂಡಲವು ಬೇಕು. ಈಗಿನ ವ್ಹರ್ನಾಕ್ಯುಲರ ಟಿಕ್ಸ್ಬಬುಕ್ ಕಮಿಟಿಯಲ್ಲಿ ಸರಿಯಾದ ಸುಧಾರಣೆಯಾದಲ್ಲಿ ಈ ಕಾರ್ಯವನ್ನು ಅದು ಮಾಡಬಹುದು. ಯಾವತ್ತೂ ಶಾಲೆಗಳಲ್ಲಿ ಒಂದೇ ಬಗೆಯ ಪುಸ್ತಕಗಳು ಒಂದೇ ಕಾಲದಲ್ಲಿ ಕಲಿಸಲ್ಪಡುವಂತೆ ಈ ಮಂಡಲವು ಸ್ಕೂಲ ಲಿವ್ವಿಂಗ ಎಗ್ಜಾಮಿನೇಶನ್ ಕಮಿಟಿಯಂತೆ ವರ್ಷ ವರ್ಷ ಹಚ್ಚಲವಶ್ಯವಾದ ಪುಸ್ತಕಗಳನ್ನು ಒಂದೆರಡು ವರ್ಷ ಮುಂಚಿತವಾಗಿ ಗೊತ್ತುಪಡಿಸಬೇಕು. ಪುಸ್ತಕಗಳನ್ನು ಶಕ್ಯವಾದಂತೆ ಬದಲಿಸುತ್ತ ಹೋಗಬೇಕು. ಸರಿಯಾದ ಪುಸ್ತಕಗಳ ರಚನೆಗೆ ಮಾರ್ಗವನ್ನು ತೋರಿಸಿ ಪ್ರೋತ್ಸಾಹವನ್ನು ಕೊಡಬೇಕು.

೩. ಈಗಿರುವ ಕ್ರಮಿಕ ಪುಸ್ತಕಗಳಲ್ಲಿ ಅವಶ್ಯವಾದ ತಿದ್ದುಪಡೆ :—ಈ ಪುಸ್ತಕಗಳಲ್ಲಿ ಸಾಮಾನ್ಯ ಜ್ಞಾನದ ಪಾಠಗಳಲ್ಲದೆ ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮೊದಲಾದ ಹಲವು ವಿಷಯಗಳ ಜೋಡನೆಯಾಗಿದೆ. ಒಂದೇ ಒಂದು ಪುಸ್ತಕದಿಂದ ಹಲವು ವಿಷಯಗಳನ್ನು ಕಲಿಸಬೇಕೆಂಬ ಹವ್ಯಾಸವು

ಇವುಗಳ ರಚನೆಯಲ್ಲಿ ಕಂಡು ಬರುತ್ತದೆ. ಇದು ದೋಷಾರ್ಹವಾದದ್ದು. ಬೇರೆ ಬೇರೆ ವಿಷಯಗಳ ಮೇಲೆ ಸ್ವತಂತ್ರವಾದ ಕ್ರಮಿಕ ಪುಸ್ತಕಗಳು ಇರತಕ್ಕದ್ದು. ಒಂದೇ ಪುಸ್ತಕದಲ್ಲಿ ಎಲ್ಲ ವಿಷಯಗಳನ್ನು ಅಡಕಿಸುವದು ಸಾಧ್ಯವಿಲ್ಲ. ಭಾಷಾ ದೃಷ್ಟಿಯಿಂದ ಬರೆದ ಮತ್ತು ಸಾಮಾನ್ಯ ಜ್ಞಾನದ ಪಾಠಗಳೇ ಮುಖ್ಯ ಕ್ರಮಿಕ ಪುಸ್ತಕಗಳಲ್ಲಿ ಇರತಕ್ಕದ್ದು. ಗದ್ಯ ಪದ್ಯ ಭಾಗಗಳು ಬೇರೆ ಬೇರೆ ಇರುವದು ಲೇಸು. ಅಂದರೆ ಉತ್ಕೃಷ್ಟವಾದ ಹಲವು ಸ್ವತಂತ್ರ ಗದ್ಯ ಗ್ರಂಥಗಳೂ ಪದ್ಯ ಗ್ರಂಥಗಳೂ ಪ್ರಕಟವಾಗುವವು. ಇದರಿಂದ ಉತ್ತಮವಾದ ಅನೇಕ ಗ್ರಂಥಗಳು ಬಳಿಕೆಯಲ್ಲಿ ಬರುವವು. ಇನ್ನು ಭೂಗೋಲ, ಇತಿಹಾಸ, ವಿಜ್ಞಾನ ಮೊದಲಾದ ವಿಷಯಗಳು ಸ್ವತಂತ್ರ ಕ್ರಮಿಕ ಪುಸ್ತಕಗಳಿಂದಲೆ ಕಲಿಸಲ್ಪಡ ಬೇಕು. ಅಂದರೆ ಯಾವತ್ತು ವಿಷಯಗಳ ಬಗ್ಗೆ ಸರಿಯಾದ ಲಕ್ಷ್ಯವು ಪೂರೈಸಲ್ಪಡುವದು.

ಈಗಿರುವ ಕ್ರಮಿಕ ಪುಸ್ತಕಗಳಲ್ಲಿಯ ಇನ್ನುಳಿದ ನ್ಯೂನತೆಗಳನ್ನು ವಿವೇಚಿಸುವದು ಅವಶ್ಯವೆಂದು ತೋರುವದಿಲ್ಲ. ಇವುಗಳ ಬದಲು ಇಂದಿನ ಮಿತಿಗೆ ಸರಿಯಾಗಿ ಸಿದ್ಧವಾದ ಹೊಸ ಹೊಸ ಪುಸ್ತಕಗಳು ಪ್ರಚಾರದಲ್ಲಿ ಬರುವದು ಅತ್ಯಾವಶ್ಯವಿದೆ. ಸರಕಾರದ ವಿದ್ಯಾಖಾತೆಯವರೂ, ಆಯಾಯ ಸ್ಕೂಲ ಬೋರ್ಡಿನವರೂ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಅಧ್ಯಾಪಕರೂ ಇತ್ತ ಕಡೆಗೆ ಗಮನ ಕೊಡುವರೆಂದು ನಂಬಿದ್ದೇವೆ. ಬೇಗನೆ ಈ ಬಗ್ಗೆ ಸರಿಯಾದ ಯೋಜನೆಯನ್ನು ಕಲ್ಪಿಸುವದಕ್ಕೆ ಒಂದು ಮಂಡಲವನ್ನು ಸರಕಾರದವರು ನಿರ್ಮಿಸುವರೆಂದು ಆಶಿಸುವೆವು.

ಶಾಲೆಗಳಲ್ಲಿ ಕಲಿಸಲ್ಪಡುವ ವಿಷಯಗಳಲ್ಲಿ ಅತ್ಯಂತ ಮಹತ್ವದ ವಿಷಯ.

೧. ಕಲಿಸುವ ವಿಷಯಗಳಲ್ಲಿ ಇತಿಹಾಸವೇ ಅತ್ಯಂತ ಮಹತ್ವದ್ದೆಂದು ಹೇಳಬಹುದು. ಇತಿಹಾಸವೆಂದರೆ, ಸೃಷ್ಟಿಯ ಯಾವತ್ತೂ ಮುಖ್ಯ ಮುಖ್ಯ ಕಾರ್ಯಗಳ ಭಾವಪಟವು ಅಥವಾ ಎಲ್ಲ ವಿಷಯಗಳ ಬಗ್ಗೆ ಅನುಭವಿಕ ಆದಿ ಪುರುಷನೆಂತಲೂ ಅನ್ನಬಹುದು. ಈ ಹೆಳಬನು ಎಲ್ಲ ವಿಷಯಗಳನ್ನೊಳಗೊಂಡು ಕಲಿಸಬಹುದಾದ ಸಂಗತಿಗಳು ಹೇರಳವಾಗಿರುವವು. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—

(೧) ಸೃಷ್ಟಿಯ ಸ್ಥಿತ್ಯಂತರವನ್ನರುಹಿ ಶೋಧಕ ಬುದ್ಧಿಯನ್ನು ಜಾಗ್ರತ ಗೊಳಿಸುತ್ತ ಸಾನಂದಗೊಳಿಸುವನು.

(೨) ಉಚ್ಚ ನೀಚ ಗುಣಗಳ ತುಲನೆ ಮಾಡಿಸಿ, ಕಲಿಯತಕ್ಕ ಉದಾತ್ತ ಗುಣಗಳನ್ನು ಕಲಿಸುವನು.

(೩) ವಿಚಾರವಿನಿಮಯಗಳಿಂದಾದ ಸಿದ್ಧಾಂತಗಳ ಅನುಭವವನ್ನು ಮಾಡಿ ಕೊಟ್ಟು, ಪ್ರಗತಿಪರನನ್ನಾಗಿ ಮಾಡುವನು.

(೪) ವ್ಯವಹಾರಕುಶಲನನ್ನೂ, ಕಲಾಭಕ್ತನನ್ನೂ, ದೀರ್ಘೋದ್ಯೋಗಿಯನ್ನೂ, ಗುಣಗ್ರಾಹಿಯನ್ನೂ ಮಾಡಬಲ್ಲನು.

(೫) ಸೃಷ್ಟಿಕರ್ತನಲ್ಲಿ ಭಕ್ತಿಯನ್ನೂ, ಆದರ್ಶಭೂತರಲ್ಲಿ ಪೂಜ್ಯ ಬುದ್ಧಿಯನ್ನೂ ಹುಟ್ಟಿಸುವನು.

(೬) ಸ್ವಜನ, ಸ್ವಭಾಷೆ, ಸ್ವದೇಶ ಪ್ರೀತಿಯನ್ನು ನೆಲೆಗೊಳಿಸಿ, ರಾಷ್ಟ್ರೀಯತ್ವದ ಕಲ್ಪನೆ ಬೆಳೆಯಿಸಿ ವಿಶ್ವಕುಟುಂಬಿಯನ್ನೇ ಮಾಡುವನು.

ಇವೆಲ್ಲ ಭಾವನೆಯನ್ನುಂಟು ಮಾಡುವ ವಿಷಯಗಳು ಬೇರೆ ಯಾವವು ಇರುವವು ?

ರಾ ಕೃ. **ತಿಮ್ಮನಗೌಡರ,**
ಅದರಗುಂಚಿ.

---

೨. ಕಲಿಸುವ ವಿಷಯಗಳಲ್ಲಿ ನೈತಿಕ ವಿಷಯವೇ ಅತ್ಯಂತ ಮಹತ್ವವಾದದ್ದು. ಸಮಾಜ ಸುಧಾರಣೆಗೆ ನೀತಿಯೇ ಮೂಲಾಧಾರವು. ಪುರಾಣ ಕಾಲದಲ್ಲಿ ಸುಧಾರಣೆಯ ಅಗ್ರಸ್ಥಾನವನ್ನು ಹೊಂದಿದ ಹಿಂದುಸ್ಥಾನವು ನೀತಿಯ ಅಭಾವದಿಂದ ಮಧ್ಯಕಾಲದಲ್ಲಿ ಕೆಳಗಿಳಿಯಿತು. "ಜಾತಿಗೆ ಬೇಧವಿದ್ದರೂ, ನೀತಿಗೆ ಬೇಧವಿಲ್ಲ" ಎಂಬ ನಾಣ್ನುಡಿಯು ವಿಚಾರಾರ್ಹವಾಗಿದೆ. ಉದ್ಯೋಗ—ಸ್ಥಾನ ಮೊದಲಾದವುಗಳ ಬೇಧಾಬೇಧಗಳಿಗನುಸರಿಸಿ ಜಾತಿಜಾತಿಗಳಲ್ಲಿ ಬೇಧವಿದ್ದರೂ, ನೀತಿಯು ಎಲ್ಲ ಪಂಗಡಗಳಲ್ಲಿ ಸಮಾನವಾಗಿರುವದು. ನಡುನಡುವೆ (ಮಧ್ಯಕಾಲದಲ್ಲಿ) ನಮ್ಮ ಕುಲಗುರುಗಳು—ಆಳರಸರು ಧರ್ಮದ ಆಡಂಬರವನ್ನು ಬೆಳೆಸಿವ್ದರಿಂದ ಸಮಾಜದಲ್ಲಿ ದ್ವೇಷಾಸೂಯೆಗಳಿಗೆ ಕಳೆಯೇರಿತು. ಪ್ರತಿಯೊಬ್ಬನು ತನ್ನ ಧರ್ಮದ ಪ್ರತಿಷ್ಠೆಯನ್ನು ಬೆಳೆಯಿಸಬೇಕೆಂದು ದುರಭಿಮಾನಕ್ಕೊಳಪಟ್ಟು ನೀತಿ—ಅನೀತಿಗಳ ವಿಚಾರವನ್ನು ಮರೆತನು. ಹೀಗಾಗಿ ಇತಿಹಾಸ ಕಾಲದ ಹಲವು ಶತಮಾನಗಳು ಅನೀತಿಯ ದುರ್ದಶೆಗೆ ಶಿಲುಕಿ ನಮ್ಮನ್ನು ಅವ

ಇವುಗಳ ರಚನೆಯಲ್ಲಿ ಕಂಡು ಬರುತ್ತದೆ. ಇದು ದೋಷಾರ್ಹವಾದದ್ದು. ಬೇರೆ ಬೇರೆ ವಿಷಯಗಳ ಮೇಲೆ ಸ್ವತಂತ್ರವಾದ ಕ್ರಮಿಕ ಪುಸ್ತಕಗಳು ಇರತಕ್ಕದ್ದು. ಒಂದೇ ಪುಸ್ತಕದಲ್ಲಿ ಎಲ್ಲ ವಿಷಯಗಳನ್ನು ಅಡಕಿಸುವದು ಸಾಧ್ಯವಿಲ್ಲ. ಭಾಷಾ ದೃಷ್ಟಿಯಿಂದ ಬರೆದ ಮತ್ತು ಸಾಮಾನ್ಯ ಜ್ಞಾನದ ಪಾಠಗಳೇ ಮುಖ್ಯ ಕ್ರಮಿಕ ಪುಸ್ತಕಗಳಲ್ಲಿ ಇರತಕ್ಕದ್ದು. ಗದ್ಯ ಪದ್ಯ ಭಾಗಗಳು ಬೇರೆ ಬೇರೆ ಇರುವದು ಲೇಸು. ಅಂದರೆ ಉತ್ಕೃಷ್ಟವಾದ ಹಲವು ಸ್ವತಂತ್ರ ಗದ್ಯ ಗ್ರಂಥಗಳೂ ಪದ್ಯ ಗ್ರಂಥಗಳೂ ಪ್ರಕಟವಾಗುವವು. ಇದರಿಂದ ಉತ್ತಮವಾದ ಅನೇಕ ಗ್ರಂಥಗಳು ಬಳಿಕೆಯಲ್ಲಿ ಬರುವವು. ಇನ್ನು ಭೂಗೋಲ, ಇತಿಹಾಸ, ವಿಜ್ಞಾನ ಮೊದಲಾದ ವಿಷಯಗಳು ಸ್ವತಂತ್ರ ಕ್ರಮಿಕ ಪುಸ್ತಕಗಳಿಂದಲೆ ಕಲಿಸಲ್ಪಡ ಬೇಕು. ಅಂದರೆ ಯಾವತ್ತು ವಿಷಯಗಳ ಬಗ್ಗೆ ಸರಿಯಾದ ಲಕ್ಷ್ಯವು ಪೂರೈಸಲ್ಪಡುವದು.

ಈಗಿರುವ ಕ್ರಮಿಕ ಪುಸ್ತಕಗಳಲ್ಲಿಯ ಇನ್ನುಳಿದ ನ್ಯೂನತೆಗಳನ್ನು ವಿವೇಚಿಸುವದು ಅವಶ್ಯವೆಂದು ತೋರುವದಿಲ್ಲ. ಇವುಗಳ ಬದಲು ಇಂದಿನ ಮಿತಿಗೆ ಸರಿಯಾಗಿ ಸಿದ್ಧವಾದ ಹೊಸ ಹೊಸ ಪುಸ್ತಕಗಳು ಪ್ರಚಾರದಲ್ಲಿ ಬರುವದು ಅತ್ಯವಶ್ಯವಿದೆ. ಸರಕಾರದ ವಿದ್ಯಾಖಾತೆಯವರೂ, ಆಯಾಯ ಸ್ಕೂಲ ಬೋರ್ಡಿನವರೂ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಅಧ್ಯಾಪಕರೂ ಇತ್ತ ಕಡೆಗೆ ಗಮನ ಕೊಡುವರೆಂದು ನಂಬಿದ್ದೇವೆ. ಬೇಗನೆ ಈ ಬಗ್ಗೆ ಸರಿಯಾದ ಯೋಜನೆಯನ್ನು ಕಲ್ಪಿಸುವದಕ್ಕೆ ಒಂದು ಮಂಡಲವನ್ನು ಸರಕಾರದವರು ನಿರ್ಮಿಸುವರೆಂದು ಆಶಿಸುವೆವು.

ಶಾಲೆಗಳಲ್ಲಿ ಕಲಿಸಲ್ಪಡುವ ವಿಷಯಗಳಲ್ಲಿ ಅತ್ಯಂತ ಮಹತ್ವದ ವಿಷಯ.

೧. ಕಲಿಸುವ ವಿಷಯಗಳಲ್ಲಿ ಇತಿಹಾಸವೇ ಅತ್ಯಂತ ಮಹತ್ವದ್ದೆಂದು ಹೇಳಬಹುದು. ಇತಿಹಾಸವೆಂದರೆ, ಸೃಷ್ಟಿಯ ಯಾವತ್ತೂ ಮುಖ್ಯ ಮುಖ್ಯ ಕಾರ್ಯಗಳ ಭಾವಪಟವು ಅಥವಾ ಎಲ್ಲ ವಿಷಯಗಳ ಬಗ್ಗೆ ಅನುಭವಿಕ ಆದಿ ಪುರುಷನೆಂತಲೂ ಅನ್ನಬಹುದು. ಈ ಹಳಬನು ಎಲ್ಲ ವಿಷಯಗಳನ್ನೊಳಗೊಂಡು ಕಲಿಸಬಹುದಾದ ಸಂಗತಿಗಳು ಹೇರಳವಾಗಿರುವವು. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—

(೧) ಸೃಷ್ಟಿಯ ಸ್ಥಿತ್ಯಂತರವನ್ನರುಹಿ ಶೋಧಕ ಬುದ್ಧಿಯನ್ನು ಜಾಗ್ರತ ಗೊಳಿಸುತ್ತ ಸಾನಂದಗೊಳಿಸುವನು.

(೨) ಉಚ್ಚ ನೀಚ ಗುಣಗಳ ತುಲನೆ ಮಾಡಿಸಿ, ಕಲಿಯತಕ್ಕ ಉದಾತ್ತ ಗುಣಗಳನ್ನು ಕಲಿಸುವನು.

(೩) ವಿಚಾರವಿನಿಮಯಗಳಿಂದಾದ ಸಿದ್ಧಾಂತಗಳ ಅನುಭವವನ್ನು ಮಾಡಿ ಕೊಟ್ಟು, ಪ್ರಗತಿಪರನನ್ನಾಗಿ ಮಾಡುವನು.

(೪) ವ್ಯವಹಾರಕುಶಲನನ್ನೂ, ಕಲಾಭಕ್ತನನ್ನೂ, ದೀಘೋ್ದ್ಯೋಗಿಯನ್ನೂ, ಗುಣಗ್ರಾಹಿಯನ್ನೂ ಮಾಡಬಲ್ಲನು.

(೫) ಸೃಷ್ಟಿಕರ್ತನಲ್ಲಿ ಭಕ್ತಿಯನ್ನೂ, ಆದರ್ಶಭೂತರಲ್ಲಿ ಪೂಜ್ಯ ಬುದ್ಧಿಯನ್ನೂ ಹುಟ್ಟಿಸುವನು.

(೬) ಸ್ವಜನ, ಸ್ವಭಾಷೆ, ಸ್ವದೇಶ ಪ್ರೀತಿಯನ್ನು ನೆಲೆಗೊಳಿಸಿ, ರಾಷ್ಟ್ರೀಯತ್ವದ ಕಲ್ಪನೆ ಬೆಳೆಯಿಸಿ ವಿಶ್ವಕುಟುಂಬಿಯನ್ನೇ ಮಾಡುವನು.

ಇವೆಲ್ಲ ಭಾವನೆಯನ್ನುಂಟು ಮಾಡುವ ವಿಷಯಗಳು ಬೇರೆ ಯಾವವು ಇರುವವು ?

ರಾ ಕೃ. **ತಿಮ್ಮನಗೌಡರ,**
ಅದರಗುಂಚಿ.

---

೨. ಕಲಿಸುವ ವಿಷಯಗಳಲ್ಲಿ ನೈತಿಕ ವಿಷಯವೇ ಅತ್ಯಂತ ಮಹತ್ವವಾದದ್ದು. ಸಮಾಜ ಸುಧಾರಣೆಗೆ ನೀತಿಯೇ ಮೂಲಾಧಾರವು. ಪುರಾಣ ಕಾಲದಲ್ಲಿ ಸುಧಾರಣೆಯ ಅಗ್ರಸ್ಥಾನವನ್ನು ಹೊಂದಿದ ಹಿಂದುಸ್ಥಾನವು ನೀತಿಯ ಅಭಾವದಿಂದ ಮಧ್ಯಕಾಲದಲ್ಲಿ ಕೆಳಗಿಳಿಯಿತು. "ಜಾತಿಗೆ ಬೇಧವಿದ್ದರೂ, ನೀತಿಗೆ ಬೇಧವಿಲ್ಲ" ಎಂಬ ನಾಣ್ಣುಡಿಯು ವಿಚಾರಾರ್ಹವಾಗಿದೆ. ಉದ್ಯೋಗ--ಸ್ಥಾನ ಮೊದಲಾದವುಗಳ ಬೇಧಾಬೇಧಗಳಿಗನುಸರಿಸಿ ಜಾತಿಜಾತಿಗಳಲ್ಲಿ ಬೇಧವಿದ್ದರೂ, ನೀತಿಯು ಎಲ್ಲ ಪಂಗಡಗಳಲ್ಲಿ ಸಮಾನವಾಗಿರುವದು. ನಡುನಡುವೆ (ಮಧ್ಯಕಾಲದಲ್ಲಿ) ನಮ್ಮ ಕುಲಗುರುಗಳು--ಆಳರಸರು ಧರ್ಮದ ಆಡಂಬರವನ್ನು ಬೆಳೆಸಿದ್ದರಿಂದ ಸಮಾಜದಲ್ಲಿ ದ್ವೇಷಾಸೂಯೆಗಳಿಗೆ ಕಳೆಯೇರಿತು. ಪ್ರತಿಯೊಬ್ಬನು ತನ್ನ ಧರ್ಮದ ಪ್ರತಿಷ್ಠೆಯನ್ನು ಬೆಳೆಯಿಸಬೇಕೆಂದು ದುರಭಿಮಾನಕ್ಕೊಳಪಟ್ಟು ನೀತಿ--ಅನೀತಿಗಳ ವಿಚಾರವನ್ನು ಮರೆತನು. ಹೀಗಾಗಿ ಇತಿಹಾಸ ಕಾಲದ ಹಲವು ಶತಮಾನಗಳು ಅನೀತಿಯ ದುರ್ದಶೆಗೆ ಶಿಲುಕಿ ನಮ್ಮನ್ನು ಅವ

ನತಾವಸ್ಥೆಗೆ ತಂದಿಟ್ಟವು. ಆದರೆ ಕ್ರಿ. ಶ. ೧೮೫೭ನೆಯ ವರುಷವು ಈ ವಿಷಯದಲ್ಲಿ ಕ್ರಾಂತಿಯನ್ನು ಹುಟ್ಟಿಸಿತು. ಮಹಾರಾಣಿಯವರು ಪ್ರಕಟಿಸಿದ ಪ್ರಕಟನೆಯೇ ಇದಕ್ಕೆ ಸಾಕ್ಷಿಯು. ಬ್ರಿಟಿಶ ಸರಕಾರದ ಕಾಯದೆಗಳಲ್ಲಿ ನೀತಿಯು ಓತಪ್ರೋತವಾಗಿರುವದು. ಮತ್ತು ನೀತಿಯ ತಳಹದಿಯ ಮೇಲೆ ಸರಕಾರದ ಅಸ್ತಿತ್ವವು ಅಬಾಧಿತವಾಗಿ ನಿಂತಿರುವದು. ನೀತಿ ಶಾಸ್ತ್ರಕ್ಕನುಗುಣವಾಗಿ ಸರಕಾರದವರಿಂದ ಅಲ್ಲಲ್ಲಿ ಶಿಕ್ಷಣಾಲಯಗಳು ಸ್ಥಾಪಿಸಲ್ಪಟ್ಟವು. ಶಿಕ್ಷಣದಲ್ಲಿ ನೈತಿಕ ಪಾಠಗಳ ಸಮಾವೇಶವಾಯಿತು. ಎಲ್ಲ ಪಂಗಡದವರಿಗೆ ಸರಿಯಾದ ಶಿಕ್ಷಣ ದೊರೆತು, ಪದವೀಧರರಾಗಿ ಅವರು ಸಮಾಜ ಸುಧಾರಣೆಗೆ ಮುಂದಾಳುಗಳಾಗಿ ವಿಹರಿಸುತ್ತಿರುವರು. ಆದಾಗ್ಯೂ ಇವರಲ್ಲಿ ಕೆಲವರು ಸುಶಿಕ್ಷಿತರೆಂದು ಮೆರೆದಾಗ್ಯೂ ದುರ್ಮಾರ್ಗದಿಂದ ನಡೆದು ಆತ್ಮಘಾತ ಮಾಡಿಕೊಳ್ಳುತ್ತಲಿರುವರೆಂಬ ಕೂಗು ಕೇಳುತ್ತಿರುವದು. ಹೀಗಾಗಲಿಕ್ಕೆ ಇದೀಗಿನ ಶಿಕ್ಷಣದಲ್ಲಿ ನೈತಿಕ ಶಿಕ್ಷಣಕ್ಕೆ ಮಹತ್ವ ಕೊಟ್ಟಿಲ್ಲೆಂದು ನಿರುಪಾಯವಾಗಿ ಒಪ್ಪಬೇಕಾಗಿದೆ. ನೀತಿ ಶಾಸ್ತ್ರದ ಮೇಲೆ ಹಲವು ತರದ ನಿಬಂಧಗಳನ್ನು ಬರೆಯುವ ವಿದ್ವಾಂಸರುಂಟು; ನೈತಿಕ ವಿಷಯದ ಮೇಲೆ ಸುಶ್ರಾವ್ಯ ಭಾಷಣ ಮಾಡುವ ವಕ್ತೃಗಳುಂಟು ಆದರೆ ಆಚರಣೆಯಿಂದ ನೈತಿಕ ಮಾರ್ಗದರ್ಶಿಗಳು ವಿರಲ. ಪ್ರೌಢ ವಿದ್ಯಾರ್ಥಿಗಳಲ್ಲಿ ಗ್ರಂಥಾವಲೋಕನೆಯಿಂದ ಶಾಬ್ದಿಕ ಜ್ಞಾನವು ಬಲು ಬೇಗ ತಲೆದೋರುವದು. ನುಡಿಯಂತೆ ನಡೆಯುವದು ಅವರಿಗೆ ಜಡವೆನಿಸುವದು. ಚಿಕ್ಕ ಮಕ್ಕಳಿಗೆ ಈ ಚಟವನ್ನು ಸುಲಭವಾಗಿ ಹಚ್ಚಬಹುದು. ಪ್ರಾಥಮಿಕ ಪುಸ್ತಕಗಳಲ್ಲಿ ನೀತಿ ಪಾಠಗಳು ಅಡಕವಾಗಿವೆ. ಅವನ್ನು ಬರೇ ಓದಿಸಿ ಮುಗಿಸುವದರಿಂದ ಏನೂ ಪ್ರಯೋಜನವಾಗಲಾರದು. ಎಳೆಮಕ್ಕಳಿಗೆ ಮನನ ಮಾಡಿಕೊಟ್ಟು ನೀತಿಯನ್ನು ಅವರ ಆಚರಣೆಯಲ್ಲಿ ತಂದಿರಿಸುವದೇ ಮಹತ್ವವಾದ ಶಿಕ್ಷಣವು. ನೈತಿಕ ಆಚರಣೆಯಿಂದ ಮಾನವ ಪ್ರಾಣಿಗೆ ದೊರೆಯಬಹುದಾದ ಸರ್ವ ಸೌಖ್ಯವು ದೊರೆಯುತ್ತಿರುವದರಿಂದ ಶಿಕ್ಷಕನು ಕಲಿಸುವ ಎಲ್ಲ ವಿಷಯಗಳಲ್ಲಿ ನೈತಿಕ ಶಿಕ್ಷಣವೇ ಅತ್ಯಂತ ಮಹತ್ವದ್ದೆಂದು ಎದೆತಟ್ಟಿ ಹೇಳಬಹುದು.

ಶ್ರೀ ದ. ಋಜುಮುದಾರ,
ಸ್ಕೂ. ಮಾ. ಕುರನಕೊಪ್ಪ (ಕಲಘಟಗಿ).

ಬರಿಯ ತಿಳಿಗನ್ನಡದ ಹಾಡುಗಳು.

ಲೇಖಕರು :—ಶ್ರೀ. ಹ ರಾ. ಕಾಲವಾಡ, ಹಿ. ಮೂ. ಕನ್ನಡ ಶಾಳಾ, ತಿರ್ಥಪೂರ.

ನವ್ಯಕಲಿಸುವಿಕೆ [ಶಿಕ್ಷಣ].

[ಓದಿಪ (ಮಾಸ್ತರ) ರೊಬ್ಬರು ಕೇಳುವರು; ಒಕ್ಕಲಿಗನೊಬ್ಬನು ಹೇಳುವನು].

ತ್ರಿಪದಿಗಳು.

ಓದಿಪರು :—ಎಳೆಯ ಮಗು ಮುದ್ದನಂ । ಬೆಳಸೆನಿಂದೆದ್ದನಂ ।
ಗೆಳೆಯರೊಡನೋದುವನೆನೀಗ ಕಳಿಸದೆ ।
ಕಲಿಸದೀಮಗುವ ಕೆಡಿಸುವರೇ ॥ ೧ ॥

ಒಕ್ಕಲಿಗ :—ಹುಲಿಯಂತೆ ತೋರ್ಪ ಮಗು । ವಿಲಿಯಕ್ಕು ಕಲಿಸಲ್ಕೆ ।
ಎಳೆದೊಯ್ಯಲಳುಕಿ, ಕಸುವಳದು ಬಡವಕ್ಕು ।
ಕಲಿಸುತೀ ಮಗುವ ಕೆಡಿಸುವೆನೇ ॥ ೨ ॥

ಓದಿಪರು :— ಎಳೆಯರಿಗೆ ಕಲಿಸಿದಡೆ । ಬೆಳೆಯುವದು ತಿಳುವಳಿಕೆ ।
ಗಳಿಲನೋಲೆಗಳ ನೋದುವರ್ ಬರೆಯುವರ್ ।
ಕಲಿಸದೀಮಗುವ ಕೆಡಿಸುವರೇ ॥ ೩ ॥

ಒಕ್ಕಲಿಗ :—ಕಲಿಸುವುದು ಗಿಳಿಯೋದು । ಬೆಲೆಗೋಲೆ ಗೀಚುವುದು ।
ಹೊಲವೆನಲು ಮುಳ್ಳು । ಉಣಲುಡಲು ಬಲುಮುಳ್ಳು ।
ಕಲಿಸುತೀಮಗುವ ಕೆಡಿಸುವೆನೇ ॥ ೪ ॥

ಓದಿಪರು :—ಅಳುಕದಾಳರಸರಿಗೆ, ಸಲೆ ತೀರ್ಪುಗಟ್ಟಿಗೆ ।
ಕೆಲಸವಿರೆ ಪೋಗಿ ಗೆಲ್ವರೊಳ್ವಾತಿನಿಂ ।
ಕಲಿಸದೀಮಗುವ ಕೆಡಿಸುವರೇ ॥ ೫ ॥

ಒಕ್ಕಲಿಗ :—ಅಳುಕರೆಂದಿವರ ಬೆಂ । ಬಳಿವಿಡಿದ ಕಲಿಯದರ ।
ಬಳಿಯಗಂಟಳುಕಿ, ನಿಲದೋಡುವುದು ದಿಟವು ।
ಕಲಿಸುತೀಮಗುವ ಕೆಡಿಸುವೆನೇ ॥ ೬ ॥

ಒದಿಪರು :—ಕಲಿಸಲ್ಕ್ಕೆ ಕೇಳ್ತನವ । ಕಳೆದು ಮೇಲ್ಮೈಯ ತಳೆದು ।
ನಲಿದುಣ್ಣುತುಡುತ । ಸೊಗಸಿನಿಂ ಬಾಳುವರ್ ।
ಕಲಿಸದೀಮಗುವ ಕೆಡಿಸುವರೇ ॥ ೭ ॥

ಒಕ್ಕಲಿಗ :—ಕಲಿತವನು ಪೆರರಾಳು, ಗೆಲಸಕ್ಕೆ ಹುರಿಯಾಳು ।
ಕಲಿತವರೆ ಕೆಲರು ಕುಡಿದು ನಡೆಗೆಡುತಿಹರು ।
ಕಲಿಸುತೀಮಗುವ ಕೆಡಿಸುವೆನೇ ॥ ೮ ॥

ಒದಿಪರು :—ಕಲಿತಾಂಗ್ಲನುಡಿ ಜಾಣ್ಮೆಯೊಳು ಪಿರಿಯ ಕೆಲಸಗಳ ।
ಕೊಳುತ ಬಲುತರದಿ, ಗಳಿಸುವರ್ ಬೆಳಿಸುವರ್ ।
ಕಲಿಸದೀಮಗುವ ಕೆಡಿಸುವರೇ ॥ ೯ ॥

ಒಕ್ಕಲಿಗ :—ಕಲಿವರಾಂಗ್ಲರ ಸೋಗ, ಕಲಿಯವರರೊಳ್ನಡೆಯ ।
ಕೆಲಸವೇ ಸಿಗದು, ಕೂಳ್ಬೆಲ್ಲವಾಗುವದು ।
ಕಲಿಸುತೀಮಗುವ ಕೆಡಿಸುವೆನೇ ॥ ೧೦ ॥

ಒದಿಪರು :—ಚಲುವಿನಿಂ ತಮ್ಮಾಳ್ಮೆಗೆಲಸದೊಳ್ ನಡಕಟ್ಟಿ ।
ನೆಲದೇಳ್ಗೆಗಾಗಿ ಮುಡಿದೊಳಿತಗೆಯ್ಯುವರು ।
ಕಲಿಸದೀಮಗುವ ಕೆಡಿಸುವರೇ ॥ ೧೧ ॥

ಒಕ್ಕಲಿಗ :—ಕಲೆತೊಂದು ಕೂಟದೊಳೆ । ಮಲೆತು ಹೋರಾಡುವರು ।
ಕಲಿತವರೆ ? ನಾಡಿ, ನೇಳ್ಗೆಯಿವರಿಂದೆಂತೊ ।
ಕಲಿಸುತೀಮಗುವ ಕೆಡಿಸುವೆನೇ ॥ ೧೨ ॥

ಒದಿಪರು :—ಕಲಿವಬಗೆಯಲ್ಲೀಗ ಹಲವು ಕೊರತೆಗಳಿಹವು ।
ಕಲಿವ ಮನೆ-ಕೂಟ, ವೀಬಗೆಯ ತಿದ್ದುಗುಂ ।
ಕಲಿಸದೀಮಗುವ ಕೆಡಿಸುವರೇ ॥ ೧೩ ॥

ಒಕ್ಕಲಿಗ :—ನೆಲಸಿರುವ ಕೊರತೆಗಳ, ಕಳೆಯಲೀ ಕೂಟವಂ ।
ನಲುನಿಂದೆ ಹಾಡಿಹರಸುತ್ತೆ ಕಲಿಸುವೆನು ।
ಕಲಿಸದೀಮಗುವ ಕೆಡಿಸುವೆನೇ ॥ ೧೪ ॥

ಬಿಗಿನುಡಿಗಳ ಬಿಚ್ಚು (ಕಠಿಣ ಶಬ್ದಗಳ ಅರ್ಥ) :—೧. ಪಗಾರೀ ಕಾರಕೂನಿಕೆ ೨. ಷೋಹ; ೩. ಸರಕಾರದ ಅಧಿಕಾರಿಗಳು; ೪. ಕೋರ್ಟು; ೫. ಉಮೇದವಾರ; ೬. ಇಂಗ್ಲಿಷ (ಆಂಗ್ಲ ಶಬ್ದವು ಅನ್ಯ ಭಾಷೆಯದಿದ್ದರೂ ಅಂಕಿತ ನಾಮವಿದ್ದುದರಿಂದ ಪ್ರಯೋಗಿಸಿದೆ); ೭. ಸ್ವರಾಜ್ಯ; ೮. ಬೋರ್ಡ, ಸಂಘ; ೯. ಸ್ಕೂಲ ಬೋರ್ಡ.

ಅಭಿನಂದನ.

೮. ಧಾರವಾಡ ಶಹರ ಮುನಸಿಪಾಲಟಿಯ ಸ್ಕೂಲ ಬೋರ್ಡ ಜುನಾವಣಿಯಲ್ಲಿ ಶ್ರೀ. ವ್ಹಿ. ಬಿ. ಜೋಶಿ, ರಿಟಾಯರ್ಡ ಎಜ್ಯುಕೇಶನ್ ಇನಸ್ಪೆಕ್ಟರ ಇವರು ಚೇರಮನ್ನರಾಗಿ ಆರಿಸಲ್ಪಟ್ಟಿರುವರು. ಅದಕ್ಕಾಗಿ ಅವರನ್ನು ನಾವು ಅಭಿನಂದಿಸದೆ ಇರಲಾರೆವು. ಶ್ರೀ. ವಿನಾಯಕರಾಯರು ತಮ್ಮ ಇಡೀ ಆಯುಷ್ಯವನ್ನೀ ಶಿಕ್ಷಣ ಖಾತೆಯಲ್ಲಿಯೇ ಕಳೆದು ಎನ್ನಡ ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ, ದಕ್ಷಿಣಭಾಗದ ಇನ್ಸಪೆಕ್ಟರರೂ ಆಗಿ ಬಹುಕಾಲ ಕೆಲಸ ಮಾಡಿದವರಿರುವರು. ಅವರು ಕೆಲಸದಿಂದ ನಿವೃತ್ತರಾದಂದಿನಿಂದ, ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಮನಮುಟ್ಟಿ ದುಡಿಯುತ್ತಿರುವದು ಬಹುಶ್ರುತವದೆ. ದೇಶಕಲ್ಯಾಣಕ್ಕಾಗಿ ಅವರು ತಮ್ಮ ಪೆನಶನ್ ಸಹ ಕಳೆದುಕೊಂಡು ತಮಗೆ ಸರಕಾರವು ಕೊಟ್ಟಿದ್ದ ರಾವಬಹಾದ್ದೂರ ಪದವಿಯನ್ನು ಬಿಟ್ಟುಕೊಟ್ಟು ಕೀರ್ತಿ ಸಾಮ್ರಾಜ್ಯಕ್ಕೆ ಒಡೆಯರಾಗಿದ್ದಾರೆ. ಇಂಥ ಸ್ವಾರ್ಥತ್ಯಾಗಿಗಳೂ, ಶಿಕ್ಷಣತಜ್ಞರೂ ಧಾರವಾಡ ಮುನಸಿಪಾಲಿಟಿಯ ಸ್ಕೂಲ ಬೋರ್ಡಿನ ಚೇರಮನ್ನ ಪದವಿಗೆ ದೊರೆತದ್ದು ಅಲಭ್ಯ ಲಾಭವೇ ಸರಿ. ಇವರ ಆಳಿಕೆಯಲ್ಲಿ ಧಾ. ಮು ಸ್ಕೂಲ ಬೋರ್ಡು ಒಳ್ಳೇ ವಿಜಯಿಯಾಗುವದೆಂದು ನಮಗೆ ಭರವಸೆಯುಂಟು. ಅವರನ್ನೂ, ಅವರನ್ನು ಆರಿಸಿಕೊಂಡ ಬೋರ್ಡನ್ನೂ ಮನಃಪೂರ್ವಕವಾಗಿ ಅಭಿನಂದಿಸುವೆವು.

ಸ್ಕೌಟ ಅಬ್ದುಲ್‌ರಹಿಮಾನನೆಂಬ ವಿದ್ಯಾರ್ಥಿಗೆ
ನೇಕ ನಾಮದಾರ ಗವ್ಹರ್ನರ ಸಾಹೇಬರು
ಗಿಲ್ವಕ್ರಾಸ ಎಂಬ ಬಹುಮಾನದ ಪದಕವನ್ನು ಕೊಟ್ಟರು.

೨. ರಾಣೇಬೆನ್ನೂರ ತಾಲೂಕಿನ ತುಮ್ಮಿನಕಟ್ಟಿ ಗ್ರಾಮದ ಉರ್ದು ಶಾಲೆಯ ಸ್ಕೌಟ ಟ್ರೂಪಿನ ಸ್ಕೌಟ ಅಬ್ದುಲ್‌ರಹಿಮಾನನೆಂಬ ವಿದ್ಯಾರ್ಥಿಯು ತುಂಬಿ ಹರಿಯುವ ತುಂಗಭದ್ರಾ ನದಿಯಲ್ಲಿ ಮುಳುಗಿ ಮರಣೋನ್ಮುಖವಾದ ಹುಡಿಗೆಯನ್ನು ಹೊರಗೆತೆಗೆದು ಪ್ರಾಣವನ್ನು ಉಳಿಸಿದ ಧೈರ್ಯದ ಸಹಾನಕ್ಕಾಗಿ ಮುಂಬಯಿ ಇಲಾಖೆಯ ಗವ್ಹರ್ನರರೂ, ಚೀಫಸ್ಕೌಟರೂ ಆದ ನೇಕ ನಾಮದಾರ ಸರ ಲೆಸ್ಲಿ ವಿಲ್ಸನ್‌ರ ದೊರೆತನದು, ಮುಂಬಯಿಯಲ್ಲಿ ನೆರೆದ ಸ್ಕೌಟ ಕಮಿಶನರಿಯ ಉತ್ಸವಕಾಲಕ್ಕೆ ಆತನನನ್ನು ಕರೆಯಿಸಿಕೊಂಡು ಗಿಲ್ವಕ್ರಾಸ ಎಂಬ ಬಹುಮಾನದ ಪದಕವನ್ನು ದಯಪಾಲಿಸಿದರು.(೩೦-೧೦-೩೪) ಈ ಬಹುಮಾನವು ನಮ್ಮ ಇಲಾಖೆಯಲ್ಲಿ ಇದೇ ಮೊದಲನೆಯ ನಾರಿ ದೊರೆತದ್ದು. ಆದ್ದರಿಂದ ಇಂಥ ಘನತೆಯನ್ನು ಪಡೆದ ಸ್ಕೌಟ ಅಬ್ದುಲ್ ರಹಿಮಾನನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು. ಈ ವಿಷಯದಲ್ಲಿ ಇಡೀ ಕರ್ನಾಟಕವೇ ಅಭಿಮಾನವಹಿಸುವದರಲ್ಲಿ ಸಂದೇಹವಿಲ್ಲ. ಇದರಿಂದ ಕರ್ನಾಟಕದ ಸ್ಕೌಟಿಂಗಿಗೆ ಅಪೂರ್ವವಾದ ಕಳೆ ಬರುವದೆಂದು ನಂಬುವೆವು. ಮತ್ತು ನಮ್ಮ ಸ್ಕೌಟ ಭ್ರಾತೃಗಳು ಹುರುಪುಗೊಂಡು. ಸ್ಕೌಟುಗಳಿಂದಾಗುವ ಘನವಾದ ಸೇವೆಯನ್ನು ಲೋಕದ ನಿದರ್ಶನಕ್ಕೆ ಈ ರೀತಿಯಲ್ಲಿ ತಂದು ಕೊಡುವರೆಂದು ಆಶಿಸುವೆವು.

ಸಾಭಾರ ಸ್ವೀಕಾರ ಹಾಗು ಅಭಿಪ್ರಾಯ.

ನುಡಿಗನ್ನಡಿ :—ಧಾರವಾಡ ಗಂ. ಮು. ಟ್ರೇನಿಂಗ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದ ಪಂಡಿತ ಮಹದೇವ ಪ್ರಭಾಕರ ಪೂಜಾರರವರು **ನ.ಡಿಗನ್ನಡಿ** ಎಂಬ ಹೆಸರಿಟ್ಟು ಕನ್ನಡ ನುಡಿಯ ವ್ಯಾಕರಣವನ್ನು ಬರೆದಿರುವರು. ವ್ಯಾಕರಣ ದಷ್ಟು ಒಕ್ಕಟ್ಟಿನ ವಿಷಯವು ಬೇರೊಂದು ಇಲ್ಲ. ಆದ್ದರಿಂದ ಇಂಥ ವಿಷಯ ವನ್ನು ಬರೆಯುವದು ಶ್ರೀ. ಪೂಜಾರರಂತಹ ಪಂಡಿತರಿಗೆಯೇ ಸಾಧ್ಯವು. ಇವರು ಕನ್ನಡದಲ್ಲಿ ಮೊಡ್ಡ ಪಂಡಿತರಿದ್ದು ಟ್ರೇನಿಂಗ ಕಾಲೇಜಿನಲ್ಲಿ ಅನೇಕ ವರ್ಷ ಮೇಲ್ತರಗತಿಯ ವಿದ್ಯಾರ್ಥಿಗಳಿಗೆ ಭಾಷಾವಿಷಯವನ್ನು ಕಲಿಸಿ ಬಹಳ ಅನುಭವ ವನ್ನು ಪಡೆದಿರುವರು. ಆದ್ದರಿಂದ ಇವರು ಕನ್ನಡ ನುಡಿಯ ಹೊಸದಾದ ವ್ಯಾಕ ರಣವನ್ನು ಬರೆಯಲು ತುಂಬಾ ಸಮರ್ಥರಿದ್ದು ಇದೀಗ "ನುಡಿಗನ್ನಡಿ" ಯನ್ನು ಪ್ರಕಟಿಸಿರುವರು. ಇದರಲ್ಲಿ ಕನ್ನಡ ನುಡಿಯ ಏಕರೂಪತೆಗಾಗಿ ಪ್ರಚಾರದಲ್ಲಿ ಬರಬಹುದಾದ ಅನೇಕ ಪ್ರಯೋಗಗಳನ್ನು ಸಮರ್ಥಿಸಿರುವರು. ಇಂಗ್ಲಿಷ ಭಾಷೆಯ ಸಂಸರ್ಗದಿಂದ ಕನ್ನಡ ನುಡಿಯಲ್ಲಿ ಬಂದ ವಾಕ್ಯವಿಭಜನೆ ಮುಂತಾದ ವಿಷಯಗಳನ್ನು ಸೇರಿಸಿರುವರು. ಬರಹದ ಸರಳ ಶೈಲಿಗೆ ಕುಂದನ್ನುಂಟು ಮಾಡುವ ಕರ್ಮಣಿ ಹಾಗು ಭಾವೇ ಪ್ರಯೋಗಗಳನ್ನು ಅಲ್ಲಗಳೆದಿರುವರು. ಇಂತು ಅನೇಕ ತಿದ್ದುಪಡೆಗಳನ್ನೊಳಕೊಂಡ ಈ ನುಡಿಗನ್ನಡಿಯು **ಹೊಸಗನ್ನ** ಡಕ್ಕೆ, ಕೇಶಿರಾಜನ ಶಬ್ದಮಣಿದರ್ಪಣವು ಹಳೆಗನ್ನಡಕ್ಕೆ ಭೂಷಣವಾದಂತೆ ಭೂಷಣವಾಗುವದೆಂದು ಹಾರೈಸುತ್ತೇವೆ. ಕಡೆಯ ಭಾಗದಲ್ಲಿ ಕನ್ನಡ ಪದ್ಯ ಗ್ರಂಥಗಳಲ್ಲಿ ವಾಡಿಕೆಯಾಗಿ ಬರುವ ಪದ್ಯಗಳ ಲಕ್ಷಣಗಳನ್ನೊಳಕೊಂಡ ಸಂಕ್ಷಿಪ್ತ ಛಂದೋಮಂಜರಿಯನ್ನು ಅನುಬಂಧಿಸಿರುವದು. ಆದುದರಿಂದ ಈ ಗ್ರಂಥವು ಶಿಕ್ಷಕರಿಗೂ, ಮುಲ್ಕೀ ಪರೀಕ್ಷೆಯ ಹಾಗು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ವಿದ್ಯಾರ್ಥಿಗಳಿಗೂ ಬಹಳ ಉಪಯುಕ್ತವಾದದ್ದಾಗಿದೆ.

ಈ ಗ್ರಂಥವು ಬೇಗನೆ ಹೆಚ್ಚಿಗೆ ತಿದ್ದುಪಡೆಯನ್ನು ಹೊಂದಿದ, ಸರ್ವಾಂಗ ಸುಂದರವಾದ ಎರಡನೆಯ ಮುದ್ರಣವನ್ನು ಹೊಂದುವದೆಂದು ಆಶಿಸುವೆವು: ಮತ್ತು ಕೆಳಗಿನ ತಿದ್ದುಪಡೆಗಳು ಅದರಲ್ಲಿ ನೆಲೆಗೊಳ್ಳುವವೆಂದು ಬಯಸುವೆವು. [೧] ಸಂಧಿಯ ಪ್ರಕರಣವು ವಿಸ್ತಾರ ಹೊಂದಬೇಕು; [೨] ಸಮಸ್ತ ಪ್ರಕರಣವು ಇನ್ನಿಷ್ಟು ಸ್ಪಷ್ಟವಾಗಬೇಕು; [೩] ವಾಕ್ಯವಿಭಜನೆ ನೂರ್ಪಾಡು ಹೊಂದ ಬೇಕು; [೪] ವಿರಾಮ ಚಿನ್ಹಗಳ ಪ್ರಕರಣವು ಸೇರ್ಪಡೆಯಾಗಬೇಕು; [೫] ಸಂಸ್ಕೃತ ಸಂಕೇತ ಶಬ್ದಗಳಿಗಿಂತ ಕನ್ನಡ ಸಂಕೇತ ಶಬ್ದಗಳು ಹೆಚ್ಚಾಗಿ ಬಳಸಲ್ಪಡಬೇಕು; [೬] ಉದಾಹರಣೆಗಳು ಹೇರಳವಾಗಬೇಕು. ಇವೇ ಮೊದ ಲಾದ ತಿದ್ದುಪಡೆಗಳು ಎರಡನೆಯ ಆವೃತ್ತಿಯಲ್ಲಿ ಬಂದದ್ದಾದರೆ ಇದು ಕರ್ನಾಟಕ ಭಾಷಾಭೂಷಣವೆಂಬುದಕ್ಕೆ ಸಂದೇಹವಿಲ್ಲ. —ಸಂಪಾದಕ.

ಪ್ರಾಥಮಿಕ ಶಿಕ್ಷಕರ ಪಗಾರ.

(ಹಿಂದಿನಿಂದ ಸಾಗಿದ್ದು)

[೮] ಅಲಾವನ್ಸು ತರಾಯಿಸಲಿಕ್ಕೆ ಮೊದಲನೇ ಸಾರೆ ೩೧ ಮಾರ್ಚ ೧೯೩೩ ನೇ ಇಸ್ವಿ ದಿವಸ ಪಗಾರ ಆಗುವ ಕಳೆದ ೨ ವರ್ಷಗಳ ಅವಧಿಯಲ್ಲಿ ಶಾಲೆಯಲ್ಲಿ ಇದ್ದ ವಿದ್ಯಾರ್ಥಿಗಳ ಹಾಜರಿಯು ಸರಾಸರಿ ತೆಗೆಯುವವರಲ್ಲಿ ಬರುವದು. ಈ ಸರಾಸರಿ ಹಾಜರಿ ನೋಡಿ ಪ್ರತಿಯೊಂದು ಶಾಲೆಯ ಹೆಡ್‌ಮಾಸ್ತರ ಅಲಾವನ್ಸು ಎಷ್ಟಾಗುವದೆಂಬದನ್ನು ನಿರ್ಧರಿಸಲ್ಪಡುವದು. ಈ ಅಲವನ್ಸು ೩೧-೩-೩೩ನೇ ದಿವಸ ಅಮಲಿನಲ್ಲಿ ತಂದು ಮುಂದೆ ೨ ವರ್ಷ ನಡಿಸಲ್ಪಡುವದು. ಇದರಂತೆ ಮುಂದೆ ಪ್ರತಿ ಎರಡು ವರ್ಷದ ಸರಾಸರಿ ಹಾಜರಿ ನೋಡಿಕೊಂಡು ಅಲಾವನ್ಸು ಕೊಡಲ್ಪಡುವದು.

ಮತ್ತು ಹೀಗೆ ನಿರ್ಧರಿಸಲ್ಪಟ್ಟ ಅಲಾವನ್ಸು ಎರಡು ವರ್ಷ ನಡೆಯುವದು. ೧-೩-೩೩ ನೇ ದಿವಸ ಆರಂಭವಾದಂತೆ ಪುನಃ ೧-೩-೩೫ ನೇ ದಿವಸ, ಮತ್ತು ೧-೩-೩೭ ನೇ ದಿವಸ ಹೊಸದಾಗಿ ನಿಶ್ಚಯಿಸಲ್ಪಟ್ಟ ಅಲಾವನ್ಸು ಪ್ರಾರಂಭವಾಗುವದು. ಇದೇ ಕ್ರಮವು ಮುಂದೆ ಸಾಗುವದು.

೧ನೇ ಮಾರ್ಚ ೧೯೩೩ ನೇ ಇಸ್ವಿ ದಿವಸದನಂತರ ಸುರುವು ಆದ ಶಾಲೆಗಳ ಅಲಾವನ್ಸು ದರತಿಂಗಳ ೩ ರೂ. ಮತ್ತು ೧-೩-೩೫ ನೇ ದಿವಸದ ನಂತರ ಆರಂಭವಾದ ಶಾಲೆಗಳ ಅಲಾವನ್ಸು ರೂ. ೫ ಕೊಡುವದರಲ್ಲಿ ಬರುವದು. ಈ ಅಲಾವನ್ಸು ಮುಂದೆ ಹೊಸ ದರ ತರಾಯಿಸುವ ತಾರೀಖಿನವರೆಗೆ ನಡೆಯುವದು. ಮತ್ತು ಶಾಲೆಯು ಪ್ರಾರಂಭವಾದಂದಿನಿಂದ ಹೊಸ ದರವು ನಿಶ್ಚಯಿಸಲ್ಪಡುವ ವರೆಗೆ ಆದ ಮುದ್ದತಿನಲ್ಲಿ ಹಾಜರ ಇದ್ದ ಹುಡುಗರ ಸರಾಸರಿ ಹಾಜರಿ ತೆಗೆದು ಅದರ ಮೇಲಿಂದ ಶಾಲೆಯ ಹೆಡ್‌ಮಾಸ್ತರರ ಅಲಾವನ್ಸು ನಿರ್ಧರಿಸಲ್ಪಡುವದು.

ಉದಾ:—೧-೩-೨೩ರಿಂದ ೨೮-೨-೨೪ರ ನಡುವೆ ಯಾವದೇ ಒಂದು ಶಾಲೆಯು ಪ್ರಾರಂಭಿಸಲ್ಪಟ್ಟರೆ ಆ ಶಾಲೆಯ ಹೆಡ್‌ಮಾಸ್ತರರ ಅಲಾವನ್ಸು ೧-೩-೨೪ ರ ವರೆಗೆ ವರತಿಂಗಳಿಗೆ ೩ ರೂಪಾಯಿಯಂತೆ ಕೊಡಲ್ಪಡುವದು. ಆ ದಿವಸದಿಂದಾಚ ಸರಾಸರಿ ಹಾಜರಿಯ ಮೇಲಿಂಪ ಯಾವ ವರವು ಹೊರಡುವದೋ ಅದು ಕೊಡಲ್ಪಡುವದು.

ಮಾರಿಕಾ, ಪ್ಲೇಗ ಮುಂತಾದ ಪಿಡುಗುಗಳ ಮೂಲಕ ಶಾಲೆಯು ಕೆಲವು ಕಾಲ ಬಂದು ಇಡಲ್ಪಟ್ಟಿದ್ದರೆ ಆ ವರ್ಷ ಶಾಲೆಯು ಸುರುವು ಇದ್ದ ಮುದ್ದತ್ತಿನ ಸರಾಸರಿ ಹಾಜರಿಯಷ್ಟೇ ಗಣಿಸಲ್ಪಡುವದು.

(G. R. 560, 10-3-26 & D-P I.,S (c) d 18-10-26 para 2)

[೯] ಪ್ರಾಥಮಿಕ ಶಾಲೆಯು ವಾಡಿಕೆಯಾಗಿ ದಿವಸಕ್ಕೆ ಎರಡು ವೇಳೆ ಕೂಡುವದು. ಎರಡೂ ವೇಳೆ ಮೊದಲನೇ ವಿಷಯ ಸುರುವು ಇದ್ದಾಗ್ಗೆ ವಿದ್ಯಾರ್ಥಿಗಳ ಹಾಜರಿ ತುಂಬಲ್ಪಡಬೇಕು. ಈ ರೀತಿಯಿಂದ ತಿಂಗಳಲ್ಲಿ ಮುಂಜಾನೆ ಮತ್ತು ಮಧ್ಯಾನ್ಹದಲ್ಲಿ ತುಂಬಿದ ಹಾಜರಿಯ ಬೇರೀಜ ತಕ್ಕೊಂಡು ಬಂದ ಬೇರೀಜಿಗೆ ಆ ತಿಂಗಳಲ್ಲಿ ಶಾಲೆಯು ಸುರುವು ಇದ್ದ ವೇಳೆಯಿಂದ ಭಾಗಿಸಿದಲ್ಲಿ ಆ ತಿಂಗಳ ಸರಾಸರಿ ಹಾಜರೀ ತಯಾರಾಗುವದು. ೨ ವರ್ಷದ ಸರಾಸರಿ ಹಾಜರೀ ತೆಗೆಯುವದಕ್ಕೆ ೨೪ ತಿಂಗಳ ಅಥವಾ ಈ ಅವಧಿಯಲ್ಲಿ ಶಾಲೆಯು ಸುರುವು ಇದ್ದಷ್ಟು ತಿಂಗಳುಗಳ ಸರಾಸರಿ ಹಾಜರೀ ಹಿಡಿಯಲ್ಪಡುವದು

ಯಾವ ಶಾಲೆಯಲ್ಲಿ ಸಿಷ್ಟ ಸಿಸ್ಟಿಮ ಸುರುವು ಇರುವದೋ ಆ ಶಾಲೆಯು ೨ ವೇಳೆ ಕೂಡುತ್ತಿದ್ದರೂ ಒಂದು ವೇಳೆ ಕೂಡುತ್ತಿರುವದೆಂದು ತಿಳಿಯಲ್ಪಡುವದು ಮತ್ತು ಒಂದು ವೇಳೆ ಹುಡುಗನು ಎರಡೂ ವೇಳೆ ಹಾಜರ ಇದ್ದಾಗ್ಯೂ ಅವನು ಒಂದೇ ವೇಳೆ ಹಾಜರ ಇದ್ದಂತೆ ತಿಳಿದುಕೊಳ್ಳಲ್ಪಡುವದು.

(G R. 560, 10-3-26)

[೧೦] ಬದಲೀ ಕೆಲಸವನಾಡುತ್ತಿರುವ ಅಸಿಸ್ಟಂಟ, ಹೆಡ್‌ಮಾಸ್ತರನಿಗೆ ಯಾವ ಮುದ್ದತಿನಲ್ಲಿ ಬದಲೀ ಕೆಲಸ ನೋಡುತ್ತಿರುವನೋ ಆ ಮುದ್ದತಿನ ಹೆಡ್‌ಮಾಸ್ತರನ ಸಂಪೂರ್ಣ ಅಲಾವನ್ಸು ಕೊಡಲ್ಪಡುವದು.

(G. R. 560, 10-3-76)

[೧೧] ಶಾಲೆಯಲ್ಲಿಯ ಮೊದಲನೆಯ ಅಸಿಸ್ಟಂಟ ಮಾಸ್ತರನಿಗೆ ಕೆಳಗೆ ತೋರಿಸಿದ ದರದಂತೆ ಅಲಾವನ್ಸ ಕೊಡುವದರಲ್ಲಿ ಬರುತ್ತದೆ.

ಮೇಲೆ ವಿವರಿಸಿದ ಲನೇ ಕಲಮಿನಲ್ಲಿ ಹೆಡ್‌ಮಾಸ್ತರನ ಅಲಾವನ್ಸು ನಿರ್ಧರಿಸುವಾಗ್ಗೆ ಹೇಳಿದ ನಿಯಮಗಳು ಈ ಅಲಾವನ್ಸಿಗೂ ಹತ್ತುತ್ತವೆ. ಸಾಧಾರಣವಾಗಿ ಯಾವ ೩ನೇ ವರ್ಷ ಟ್ರೇಂಡ ಶಿಕ್ಷಕನ ಒಟ್ಟು ನೌಕರಿ ೧೦ ವರ್ಷಕ್ಕೆ ಕಡಿಮೆ ಇರುವದೋ ಮತ್ತು ಯಾವ ಎರಡನೇ ವರ್ಷ ಟ್ರೇಂಡ ಶಿಕ್ಷಕನ ಒಟ್ಟು ನೌಕರಿ ೫ ವರ್ಷಕ್ಕೆ ಕಡಿಮೆ ಇರುವದೋ ಆ ಶಿಕ್ಷಕರು ಈ ಅಲಾವನ್ಸಿಗೆ ಪಾತ್ರರಾಗುವದಿಲ್ಲ.

(G R. 560. 21 6-76)

ಯಾವ ಸಾಲೆಯ ಸರಾಸರಿ ಹಾಜರೀ ೨೦೦ ಕ್ಕಿಂತ ಹೆಚ್ಚು ಇರುವದೋ ಆ ಶಾಲೆಯ ಮೊದಲನೆಯ ಅಸಿಸ್ಟಂಟ ಮಾಸ್ತರನಿಗೆ ೧-೩-೧೯೨೫ ರಿಂದ ೩೧-೩-೧೯೩೫ ರ ವರೆಗೆ ದರತಿಂಗಳಿಗೆ ೩ ರೂಪಾಯಿಯಂತೆ ಅಲಾವನ್ಸು ಕೊಡುವದರಲ್ಲಿ ಬರುವದು.

(G R. 560. 10-3-26)

ತಾ॥ ೧-೩ ೧೯೩೫ರಿಂದ ಕೊಡತಕ್ಕ ಅಲಾವನ್ಸದ ದರ.

(ಇಡೀ ಇಲಾಖೆಯ ಸಲುವಾಗಿ)

ಸರಾಸರಿ ಹಾಜರಿ.	ಗಿನೆಯ ಅ. ಅಲಾವನ್ಸು.
೧೫೧ರಿಂದ ೨೦೦ರ ವರೆಗೆ	೫ ರೂ.
೨೦೦ಕ್ಕಿಂತ ಹೆಚ್ಚು	೧೦ ,,

ಉರ್ದು ಮತ್ತು ಅಸ್ಪೃಶ್ಯರ ಶಾಲೆಗಳ ದೆಸೆಯಿಂದ

ಸ್ಪೆಶಲ್ ಸ್ಕೇಲ.

ಸರಾಸರಿ ಹಾಜರಿ.	ಗಿನೆಯ ಅ. ಅಲಾವನ್ಸು.
೮೧ರಿಂದ ೧೫೦ರ ವರೆಗೆ	೫ ರೂ.
೧೫೦ಕ್ಕಿಂತ ಹೆಚ್ಚು	೧೦ ,,

ಇಂತಹ ಶಾಲೆಯ ಗಿನೆಯ ಅಸಿಸ್ಟಂಟನು ಒಂದು ವೇಳೆ ಬದಲಿ ಹೆಡ್‌ಮಾಸ್ತರನ ಕೆಲಸ ಮಾಡುತ್ತಿದ್ದರೆ ಅವನಿಗೆ ಬರೇ ಹೆಡ್‌ಮಾಸ್ತರನ ಅಲಾವನ್ಸು ಸಿಗುವದು ?

ಮತ್ತು ಅವನ ಸ್ವಂತ ಅಲಾವನ್ಸ ಬದಲಿ ಗನೆಯು ಅಸಿಸ್ಟಂಟನ ಕೆಲಸ ಮಾಡುವ ಅಸಿಸ್ಟಂಟ ಮಾಸ್ತರನಿಗೆ ಕೊಡಲಿಕ್ಕೆ ಅಡ್ಡೀ ಇಲ್ಲ.

ರಜಾ ಮತ್ತು ಪೆನ್‌ಶನ್ ಇದರ ನಿಸೆಯಿಂದ ಈ ಮೊದಲನೆಯ ಅಸಿಸ್ಟಂಟನ ಅಲಾವನ್ಸಕ್ಕೆ ಪಗಾರದಂತೆ ತಿಳಿಯಲಿಕ್ಕೆ ಬಂದೀತು.

(G R. 560, 10-3-26; 21-6-26; 17-12-26)

(೧೨) ತಾರೀಖು. ೧-೩-೧೯೨೩ನೆಯು ಇಸ್ವಿಯ ದಿವಸ ಒಬ್ಬ ಶಿಕ್ಷಕನು ಯಾವ ಪಗಾರ ತೆಗೆದುಕೊಳ್ಳುತ್ತಿರುವನೋ ಅದು ಅಥವಾ ಪಗಾರದಲ್ಲಿ ಕೂಡಿಸ ಬಹುದಾದ ವಾರಿಕಲಾವನ್ಸು ಇಲ್ಲವೆ ಬೇರೆ ಯಾವದೊಂದು ಅಲಾವನ್ಸು ಕೂಡಿ ಆಗುವ ಯಾವ ಪಗಾರದ ರಕಮನ್ನು ಅವನು ತೆಗೆದುಕೊಳ್ಳುತ್ತಿರುವನೋ ಅದು ಈ ಹೊಸ ನಿಯಮಗಳ ಪ್ರಕಾರ ಹೆಡ್‌ಮಾಸ್ತರನ ಅಲಾವನ್ಸು ಕೂಡಿ ಯಾವ ಪಗಾರವು ಅವನಿಗೆ ದೊರೆಯತಕ್ಕದ್ದೋ ಅದಕ್ಕಿಂತ ಹೆಚ್ಚು ಆಗುತ್ತಿದ್ದರೆ ಅವನ ಆ ಪಗಾರವು, ಅಥವಾ ಬೇರೆ ಯಾವದೊಂದು ಅಲಾವನ್ಸು ಕೂಡಿ ಆಗುವ ಪಗಾರವು, ಮುಂದೆ ಈ ಹೊಸ ನಿಯಮಗಳ ಪ್ರಕಾರ ದೊರೆಯತಕ್ಕ ಒಟ್ಟು ಪಗಾರವು ಅದಕ್ಕಿಂತ ಹೆಚ್ಚು ಆಗುವವರೆಗೆ ಹಾಗೆಯೇ ಸುರುವು ಇದ್ದೀತು.

ಅವನು ಈ ಯಾವತ್ತು ರಕಮು ತಕ್ಕೊಳ್ಳುತಿದ್ದರಿ ಅದರಲ್ಲಿ ಮೊದಲಿನ ನಿಯಮದ ಪ್ರಕಾರ ಪಗಾರ ಅಂತಾ ಸಿಗುವಂಥ ರಕಮು ಮತ್ತು ಹೊಸ ನಿಯಮದಂತೆ ಸಿಗುವ ರಕಮು ಇವುಗಳಲ್ಲಿ ದೊಡ್ಡ ರಕಮು ಪಗಾರ ಅಂತಾ ತಿಳಿದುಕೊಳ್ಳುವದು. ಮತ್ತು ಬಾಕಿ ರಕಮುಗಳಿಗೆ ಪರ್ಸನಲ್ [ವೈಯಕ್ತಿಕ]ಅಲಾವನ್ಸು ಅಂತ ತಿಳಿದುಕೊಳ್ಳುವದು. ಅವನ ಪೆನ್‌ಶನ್‌ದ ಆಕರಣಿ ಮಾಡುವಾಗ್ಗೆ ಈ ಪರ್ಸನಲ್ ಅಲಾವನ್ಸು ಲೆಕ್ಕದಲ್ಲಿ ಹಿಡಿಯಲ್ಪಡುವದಿಲ್ಲ.

ಉದಾ :—[೧] ೧೭ ವರ್ಷ ನೌಕರಿ ಮಾಡಿದವನು ಒಬ್ಬ ೩ನೆಯ ವರ್ಗದ ಅಸಿಸ್ಟಂಟನಿಗೆ ತಾ॥ ೧ ಮಾರ್ಚ ೧೯೨೩ನೆಯ ದಿವಸ ೪೪ ರೂಪಾಯಿ ಪಗಾರ ಮತ್ತು ೧೧ ರೂಪಾಯಿ ವಾರಿಕಲಾವನ್ಸು ಸಿಗುತ್ತಿತ್ತು. ಈ ಹೊಸ ನಿಯಮದ ಪ್ರಕಾರ ಅತನ ಪಗಾರ ೫೨ ರೂಪಾಯಿ ಆಗುವದು. ಆದರೆ ಅವನಿಗೆ ೫೫ ರೂ. ಸಿಗುವದು. ಆದರೆ ಅದರ ಪೈಕಿ ೩ ರೂಪಾಯಿ ಪರ್ಸನಲ್ ಅಲಾವನ್ಸು ಅಂತಾ ತಿಳಿದುಬಂದೀತು. ೧ ಮಾರ್ಚ ೧೯೨೪ರಿಂದ ಅತನ ಪಗಾರ ೫೩ ರೂಪಾಯಿ ಮತ್ತು ಪರ್ಸನಲ್ ಅಲಾವನ್ಸು ೨ ರೂಪಾಯಿ ಆಗುವದು. ೧ ಮಾರ್ಚ ೧೯೨೫ನೆಯ ದಿವಸ ಅತನ ಪಗಾರ ೫೫ ರೂಪಾಯಿ ಆಗುವದು. ಆಗ ಅವನಿಗೆ ಪರ್ಸನಲ್ ಅಲಾವನ್ಸು ಏನೂ ದೊರೆಯುವದಿಲ್ಲ.

ಉದಾ:—[೨] ಇಪ್ಪತ್ತಾರು ವರ್ಷ ನೌಕರಿ ಮಾಡಿದ ಒಬ್ಬ ೩ನೆಯ್ಯ ವರ್ಷದ ಹೆಡ್‌ಮಾಸ್ತರನಿಗೆ ಶಿಲೆಕ್ಯನ್ ಗ್ರೇಡಿನ ಪಗಾರ ೭೫ ರೂಪಾಯಿ ಮತ್ತು ವಾರಅಲಾವನ್ಸ ೧೨॥ ರೂಪಾಯಿ ಕೂಡಿ ೮೭॥ ರೂಪಾಯಿ ಸಿಗುತ್ತಿತ್ತು. ಅವನ ಶಾಲೆಯ ಆಜಮಾಸ ಸರಾಸರಿ ೧೭೫ ಇರುತ್ತಿದ್ದರೆ, ಹೊಸ ನಿಯಮದ ಪ್ರಕಾರ ಅವನಿಗೆ ೬೦ ರೂ. +೧೨ ರೂಪಾಯಿ (ಮೊದಲಿನ ಎರಡು ವರ್ಷದ ದರದ ಪ್ರಕಾರ) ಹೆಡ್‌ಮಾಸ್ತರನ ಅಲಾವನ್ಸ ಒಟ್ಟು ೭೨ ರೂಪಾಯಿ ಸಿಗುತ್ತಿತ್ತು. ಈ ರಕಮು ಅವನ ಮೊದಲಿನ ಪಗಾರಕ್ಕಿಂತ ಅಂದರೆ ೭೫ಕ್ಕಿಂತ ಕಡಿಮೆ ಇದ್ದುದರಿಂದ ಮೊದಲಿನಂತೆ ಪಗಾರ ಅಂತಾ ೪೯ದ, ೭೫ ರೂಪಾಯಿ ಮತ್ತು ಪರ್ಸನಲ್ ಅಲಾವನ್ಸ ಅಂತಾ ೧೨॥ ರೂಪಾಯಿ ಅವನಿಗೆ ಸುಗುವು ಇದ್ದೀತು.

(G R. 560, 24-3-24)

ಸ್ಪಷ್ಟೀಕರಣ.

೧ನೆಯ ಕಲಮು:—[A] ಯಾವ ಶಿಕ್ಷಕರನ್ನು G. R. ೨೦೦೭, ೨೯-೧೧-೨೩ಕ್ಕೆ ಅನುಸರಿಸಿ ೨೫ ರೂ. ಕ್ಕಿಂತ ಕಡಿಮೆ ಪಗಾರದ ಮೇಲೆ ನಿಯಮಿಸಲ್ಪಟ್ಟಿರುವದೊ ಅವರಿಗೆ ಅದೇ ಪಗಾರ ಚಾಲೂ ಇರತಕ್ಕದ್ದು. ಪ್ರಾಯಮರಿ ಎಜ್ಯು. ಆಕ್ಟಿನ ಮೊದಲನೆಯ ಸೆಕ್ಶನ್ ಪ್ರಕಾರ ಆ ವರ್ಗ ಆಗತಕ್ಕದಿರುವದರಿಂದ ಮತ್ತು ಅವರ ಪಗಾರದ ಮತ್ತು ನೌಕರಿಯ ವಿಷಯ ಲೋ. ಅಥಾರಿಟಿಯವರಿಂದ ತರಾಯಿಸಲ್ಪಡುವದರಿಂದ ಆವರನ್ನು ಯಾವ ಕಾರಣದಿಂದಲೂ ಕಾಯಂ ಮಾಡತಕ್ಕದ್ದಲ್ಲ.

(D. P I., S. 84 (*e*) *d* 1-3-24)

[B] ೧೯೩೩ನೆಯ ಇಸ್ವಿ ಮತ್ತು ಅನಂತರ ನಿಯಮಿಸಲ್ಪಟ್ಟ ಟ್ರೇಂಡ ಶಿಕ್ಷಕರಿಗೆ ಸರಕಾರದ ಒಪ್ಪಿಗೆಯಿಂದ ಲೋಕಲ್ ಅಥಾರಿಟಿಯವರು ಸ್ಕೇಲ ತರಾಯಿಸಿದ ಮೇಲೆ ಅವರ ಸರ್ಟಿಫಿಕೇಟಿನ ಪ್ರಕಾರ ಪಗಾರ ಸಿಗತಕ್ಕದ್ದಾದೆ.

(E. I. S 62 P. 2-10-28 para 4)

ಅಲ್ಲಿಯ ವರೆಗೆ ೧ನೆಯ, ೨ನೆಯ, ೩ನೆಯ ವರ್ಷದ ಟ್ರೇಂಡ ಶಿಕ್ಷಕರಿಗೆ ೨೫, ೩೦, ೩೫ ರೂ. ಹೀಗೆ ಸಂಬಳ ಕೊಡತಕ್ಕದ್ದು.

(E. I., V. 85-7209, 26-18-23)

ಕನು ಕೆಲಸ ನೋಡುತ್ತಿದ್ದಲ್ಲಿ ಆ ಶಿಕ್ಷನಿಗೆ ಆ ಸಾಲೆಯ ಅಲಾವನ್ಸ ಸಿಗುವದು. ಅನ್‌ಪಾಸ ಶಿಕ್ಷಕನಿದ್ದರೂ ಸಹ ಸಿಗುವದು.

[F] ತಾ॥ ೩೦-೬-೧೯೨೩ನೆಯ ಇಸ್ವಿಯ ದಿವಸ ಕಾಯಂ ನೌಕರಿಯ ಮೇಲೆ ಇಲ್ಲದ ಅಥವಾ ತದನಂತರ ನಿಯಮಿಸಲ್ಪಟ್ಟ ಶಿಕ್ಷಕರಿಗೆ ಈ ಅಲಾವನ್ಸ ದೊರೆಯಲಾರದು. ಸರಕಾರದ ಒಪ್ಪಿಗೆಯಿಂದ ಲೋಕಲ್ ಅಥಾರಿಟಿಯವರು ಮಂಜೂರ ಮಾಡಿದಾಗ್ಗೆ ಅಂಥ ಶಿಕ್ಷಕರಿಗೆ ಈ ಅಲಾವನ್ಸ ದೊರೆಯಲಾದೀತು.

(D. P. I., S.-84 (*e*) *d* 12-6-26)

[G] ೧೯೨೩ನೆಯ ಸಾಲಿನಲ್ಲಿ ಅಥವಾ ತದನಂತರ ನಿಯಮಿಸಲ್ಪಟ್ಟ ಟ್ರೇಂಡ ಶಿಕ್ಷಕನು ಎಷ್ಟು ಅಲಾವನ್ಸಿಗೆ ಪಾತ್ರನೆಂಬುವದನ್ನು ನಿರ್ಧರಿಸುವಲ್ಲಿ ಅವನ ಪಗಾರದ ಕಡೆಗೆ ಲಕ್ಷ್ಯ ಕೊಡದೆ ಅವನ ಸರ್ಟಿಫಿಕೇಟಿನ ಕಡೆಗೆ ಲಕ್ಷ್ಯ ಕೊಡಲ್ಪಡುವದು. ಸರಕಾರದ ಒಪ್ಪಿಗೆಯಿಂದ ಲೋ. ಅ. ಯವರು ಅಲಾವನ್ಸ ನಿರ್ಧರಿಸಿದ ನಂತರ ದೊರೆಯುವದು.

(E. I.,S. 62, 2-10-26)

[H] ೨ನೆಯ ವರ್ಷದ ಮತ್ತು ೩ನೆಯ ವರ್ಷದ ಟ್ರೇಂಡ ಶಿಕ್ಷಕರನ್ನು ಸಣ್ಣ ಸಾಲೆಗಳ ಹೆಡ್‌ಮಾಸ್ತರನನ್ನಾಗಿ ನಿಯಮಿಸದೆ, ದೊಡ್ಡ ಸಾಲೆಯಲ್ಲಿ ಅಸಿಸ್ಟಂಟನನ್ನು ಮಾಡಬೇಕು. ಇದಕ್ಕಾಗಿ ಹೆ. ಮಾ. ಅಲಾವನ್ಸ ದೊರೆಯಲಿಕ್ಕೆ ೫ ಮತ್ತು ೧೦ ವರ್ಷಗಳ ನೌಕರಿಯ ಕಟ್ಟು ಹಾಕಿದೆ. ಈ ಕಟ್ಟನ್ನು ಹೇಳುವಾಗ್ಗೆ "ಸಾಧಾರಣತಃ" ಎಂಬ ಶಬ್ದವನ್ನು ಉಪಯೋಗಿಸಿದೆ. ಈ ಶಬ್ದವನ್ನು ಹಾಕಿದ ಉದ್ದೇಶವೇನಂದರೆ ಶಿಕ್ಷಕಿಯರ ಬಗ್ಗೆ ಈ ನಿಯಮವು ಕಡಕ ರೀತಿಯಿಂದ ಪಾಲಿಸುವದರಲ್ಲಿ ಬರುವದಿಲ್ಲ.

(D. P., S. letter to Govt. No Ld-4240, 28-6-23 para 3)

[I] ಶಂಕಾ—೩ನೆಯ ಮತ್ತು ೨ನೆಯ ವರ್ಷದ ಟ್ರೇಂಡ ಶಿಕ್ಷಕರ ನೌಕರಿ ೧೦ ಹಾಗೂ ೫ ವರ್ಷ ಗಣಿಸುವಾಗ್ಗೆ ಅವರು ಅನ್‌ಟ್ರೇಂಡ ಶಿಕ್ಷಕನಿದ್ದಾಗ್ಗೆ ಮಾಡಿದ ನೌಕರಿ ಗಣಿಸಲ್ಪಡುವದೋ ಹೇಗೆ ?

ಸ್ಪಷ್ಟೀಕರಣ—" ಖಾತೆಯಲ್ಲಿ ಮಾಡಿದ ಯಾವತ್ತು ನೌಕರಿ ಗಣಿಸಲ್ಪಡತಕ್ಕದ್ದು" ಈ ಪ್ರಕಾರ ಉದ್ದೇಶವಿರುತ್ತದೆ.

(D. P. I., S. 84 (*e*) *d* 30-6-26)

[J] ಪಗಾರದ ಟಾಯಿಮ ಸ್ಕೇಲ ತರಾಯಿಸುವಾಗ್ಗೆ ಬಿನ್‌ಪಗಾರೀ ರಜೆ ಮತ್ತು ಟ್ರೇನಿಂಗ ಕಾಲೇಜದಲ್ಲಿದ್ದ ಅವಧಿ ಇವು ಒಟ್ಟು ನೌಕರಿಯಲ್ಲಿ ವಜಾ ಮಾಡಲ್ಪಡುವಂತೆ ಹೆ. ಮಾ. ಅಲಾವನ್ಸ ಮತ್ತು ೧೯ನೆಯ ಅಸಿಸ್ಟಂಟ ಅಲಾವನ್ಸ ಕೊಡುವ ಬಗ್ಗೆ ನೌಕರಿಯ ಗಣನೆಯನ್ನು ಮಾಡುವಾಗ್ಗೆ ಈ ಯಾವತ್ತೂ ಮುದ್ದತು ಕಳೆಯಲ್ಪಡಬೇಕು.

(D. P. I., S. 84 (*e*) *d* 11-12-26)

[K] ಪೆನಶನ್ನಿಗೆ ಗ್ರಾಹ್ಯವಾದ ಬಡತಿಯ ಮೇಲೆ ಪೆನಶನ್ನ ಕಾಂಟ್ರಿಬ್ಯೂಶನ್ ಆಕರಣೆ ಮಾಡತಕ್ಕದ್ದು.

(D. P I 6732, 18-8-23)

[L] ಈ ಅಲಾವನ್ಸು ಪಗಾರದ ಭಾಗವದೆಯೆಂಬ ಯಾವ ಅರ್ಥದಲ್ಲಿ ಪೆನಶನ್ನಿನ ಮೇಲೆ ಪೆನಶನ್ನ ಮತ್ತು ಪಗಾರ ಎರಡೂ ಕೂಡಿ ಹಣ ದೊರೆಯಲಿಕ್ಕೆ ಶಕ್ಯವೋ ಅಲ್ಲಿ ಅವನ ನೇಮಣೂಕೆಯ ಹುಕುಮಿನಲ್ಲಿ ಸ್ಪಷ್ಟ ಹೇಳದೆ ಇದ್ದರೂ ಸಹ ಅಲಾವನ್ಸ ಕೊಡಲಿಕ್ಕೆ ಅಡ್ಡಿಯಿಲ್ಲ.

(D. P. I., S. 84 (*e*) *d*, 14-5-27)

೫ನೆಯ ಕಲಮು :—ಉದಾಹರಣೆ :—[A] ಒಬ್ಬ ಶಿಕ್ಷಕನು ನವ್ಹಂಬರ ೧೯೧೪ರಲ್ಲಿ ೩ನೆಯ ವರ್ಷದ ಸರ್ಟಿಫಿಕೇಟ ದೊರಕಿಸಿದನು. ಆಗ ಅವನ ೩ನೆಯ ವರ್ಷದ ಸರ್ಟಿಫಿಕೇಟನ ಪ್ರಕಾರ ೫ ವರ್ಷ ೧೦ ತಿಂಗಳ ನೌಕರಿ ಆಗಿತ್ತು. ಹೆಚ್ಚಿನ ಸರ್ಟಿಫಿಕೇಟನ ಪ್ರಕಾರ ಸುರುವಾತಿನ ಪಗಾರ ೪೦ ರೂ. ಆದೆ. ೩ನೆಯ ವರ್ಷದ ಸರ್ಟಿಫಿಕೇಟನ ೬ ವರ್ಷದ ನೌಕರಿಯ ಬಗ್ಗೆ ೩ ರೂ. ಬಡತಿ ಆಗುತ್ತಿದ್ದು ಅದನ್ನು ೪೦ ರೂ. ಗೆ ಕೂಡಿಸಲು ೧-೩-೧೯೧೫ನೆಯ ದಿವಸ ಅವನ ಸುರುವಾತಿನ ಪಗಾರ ೪೩ ರೂ. ಆಗುವದು. ಆದರೆ ೩ನೆಯ ವರ್ಷದ ಸ್ಕೇಲ ೪೦-$\frac{೨}{೩}$-೫೦-೨-೬೦ ಇದರಲ್ಲಿ ೪೩ರ ಗ್ರೇಡ ಇಲ್ಲದ್ದರಿಂದ ಗವ್ಹರ್ನಮೆಂಟ ರೆಜ್ಯುಲೇಶನ್ ಪ್ರಕಾರ ಅವನ ಪಗಾರ ೪೪ ರೂಪಾಯಿ ಆಗುವದು.

೩ನೆಯ ವರ್ಷದ ಸರ್ಟಿಫಿಕೇಟನ ಪ್ರಕಾರ ೧-೩-೧೯೧೫ರ ವರೆಗೆ ಅವನ ನೌಕರಿ ೬ ವರ್ಷ ೩ ತಿಂಗಳ ಆಗುವದು. ಆದ್ದರಿಂದ ೬ ವರ್ಷದ ಬಗ್ಗೆ ಬಡತಿ ೪ ರೂ. ಮೇಲಿನ ರಕಮಿಗೆ ಕೂಡಿಸಲ್ಪಡುವದು. ೧-೩-೧೯೧೫ನೆಯ ದಿವಸ ಅವನಿಗೆ ೪೪ ರೂ. ಪಗಾರ ಆಗುವದು. ೧-೩-೧೪ನೆಯ ದಿವಸ ಪೂರ್ಣ ೯ ವರ್ಷ

ನೌಕರಿ ಆಗುವದೆಂದು ಅವನಿಗೆ ಆ ದಿವಸದಿಂದ ಮುಂದಿನ ಗ್ರೇಡ ೫೦ ರೂ. ಅವನಿಗೆ ದೊರೆಯುವದು. ಆ ನಂತರ ಅವನಿಗೆ ಪ್ರತಿ ವರ್ಷ ೧ ರೂ. ಬಡತಿ ದೊರೆಯುತ್ತ ಹೋಗುವದು.

ಉದಾಹರಣೆ ೫—[B] ಒಬ್ಬ ಶಿಕ್ಷಕನು ೧೯೧೪ನೆಯ ಸಾಲಿನಲ್ಲಿ ೩ನೆಯ ವರ್ಷದ ಸರ್ಟಿಫಿಕೇಟನ್ನು ದೊರಕಿಸಿದನು. ಆಗ ೩ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ೯ ವ. ೦ ತಿಂ. ನೌಕರಿ ಆಗಿತ್ತು. ೩ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ಸುರುವಾತಿನ ಪಗಾರ ೪೦ ರೂಪಾಯಿಗೆ ಅವನ ೦ ವರ್ಷದ ಬಡತಿ ೫ ರೂ. ಕೂಡಿಸಲ್ಪಡುವದು. ಮತ್ತು ಮುಂದಿನ ಗ್ರೇಡ ೪೬ ರೂ. ಅವನ ಸುರುವಾತಿನ ಪಗಾರ ಆಯಿತು ಮತ್ತು ೩ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ಅವನ ನೌಕರಿ ೩-೩-೧೩ನೆಯ ದಿವಸ ೪ ವ. ೩ ತಿಂ. ಆಗುವದು. ಆದರೆ ೬ ವರ್ಷ ಆದಾಗ್ಗೆ ಅವನು ೫೦ ರೂ ಪಗಾರಕ್ಕೆ ಮುಟ್ಟಿರುವನು. ಆದ್ದರಿಂದ ೧-೩-೧೫ಕ್ಕೆ ೪ ವರ್ಷ ಪೂರ್ಣ ನೌಕರಿ ಆಗಿದ್ದರಿಂದ ೫೨ ರೂ. ಪಗಾರ ಅತನಿಗೆ ದೊರೆಯುವದು. ೧-೩-೧೪ನೆಯ ದಿವಸ ಅವನಿಗೆ ಮುಂದಿನ ಪ್ರಮೋಶನ್ ದೊರೆಯುವದು.

(D P. I., S-84 (e) *d* 21-8-25 & 20-7-25 para 3)

೧ನೆಯ ವರ್ಷದ ಸರ್ಟಿಫಿಕೇಟಿನ ಪ್ರಕಾರ ಕೆಲವು ವರ್ಷ ಕೆಲಸ ಮಾಡಿ ನಂತರ ೩ನೆಯ ವರ್ಷದ ಸರ್ಟಿಫಿಕೇಟು ದೊರಕಿಸಿರುವ ಶಿಕ್ಷಕರ ಪಗಾರದ ಆಕರಣೇ ಹೀಗೆಯೇ ಮಾಡತಕ್ಕದ್ದು.

(E. I , S. 62 P. 18-9-25)

೭ನೆಯ ಕಲಮು—ಹೊಸ ಸ್ಕೇಲ ಪ್ರಕಾರ ಪಗಾರದ ಬಡತಿ ವಿಚಾರ ಮಾಡುವಾಗ್ಗೆ ಟ್ರೇನಿಂಗಿನಲ್ಲಿ ಕಳೆದ ಅವಧಿಯನ್ನು ಹಿಡಿಯತಕ್ಕದ್ದಲ್ಲ.

(E. I., V. 85. 7798, 14-11-23)

೮ನೆಯ ಕಲಮು—೧-೩-೩೩ರಿಂದ ಕೊಡತಕ್ಕ ಅಲಾವನ್ಸ ನಿರ್ಧರಿಸುವಾಗ್ಗೆ ೧೯೩೩ನೆಯ ಮಾರ್ಚ ತಿಂಗಳ ಸರಾಸರಿ ಹಾಜರಿ ಸಹ ಗಣಿಸತಕ್ಕದ್ದು. ಮತ್ತು ೧-೩-೩೫ರಿಂದ ಕೊಡತಕ್ಕ ಅಲಾವನ್ಸ ಬಗ್ಗೆ ೧೯೩೫ನೆಯ ಮಾರ್ಚ ತಿಂಗಳ ಸರಾಸರಿ ಹಾಜರಿ ಸಹ ಹಿಡಿಯಕ್ಕದ್ದು. ಇದೇ ಕ್ರಮವನ್ನು ಮುಂದೆ ಪಾಲಿಸತಕ್ಕದ್ದು.

(E. I., S.-62-P. 2-10-26 para 9)

೯ನೆಯ ಕಲಮು—[A] ಸರಾಸರಿ ಹಾಜರೀ ತೆಗೆಯುವಾಗ್ಗೆ ·೫ ಮತ್ತು ಅದಕ್ಕೂ ಕಡಿಮೆ ಅಪೂರ್ಣಾಂಕ ಬಂದಲ್ಲಿ ಅವನ್ನು ಬಿಡತಕ್ಕದ್ದು. ಮತ್ತು ·೫ಕ್ಕಿಂತ ಹೆಚ್ಚು ಅಪೂರ್ಣಾಂಕ ಬಂದರೆ ಅದಕ್ಕೆ ೧ ಪೂರ್ಣಾಂಕ ಹಿಡಿಯಬೇಕು. ಉದಾ—೭೫·೫ ಸರಾಸರಿ ಹಾಜರಿ ಇದ್ದರೆ ಅದು ೭೫ ಮಾತ್ರ ಅಂತ ತಿಳಿಯತಕ್ಕದ್ದು. ಮತ್ತು ೭೫·೬ ಸರಾಸರಿ ಇದ್ದಲ್ಲಿ ಅದು ೭೬ ಅಂತಾ ತಿಳಿಯತಕ್ಕದ್ದು.

(E. I., S. 62-P. 2-10-26 para (1)

[B] ಶಂಕಾ—ಶನಿವಾರ ಬಿಟ್ಟು ಉಳಿದ ದಿನಸ ವಿಶ್ರಾಂತಿ ಸೂಟಿ ವೇಳೆ ಹಿಡಿದು ಸಾಲೆಯು ೧೧ರಿಂದ ೬ ಗಂಟೆಯ ವರೆಗೆ ಇರುವದು. ಇಂಥ ಸಾಲೆಯು ವಿಶ್ರಾಂತಿ ಸೂಟಿಯ ಮೂಲಕ ದಿವಸದಲ್ಲಿ ಎರಡು ಸಾರೆ ಕೂಡುವದೆಂದು ತಿಳಿಯತಕ್ಕದ್ದೋ ಇಲ್ಲವೆ ಒಂದು ವೇಳೆ ಎಂದು ತಿಳಿಯತಕ್ಕದ್ದೋ ?

ಸ್ಪಷ್ಟೀಕರಣ—ಯಾವ ವರ್ಗವು ದಿವಸದಲ್ಲಿ ೧೧ರಿಂದ ೩ರ ವರೆಗೆ ಮತ್ತು ೭ರಿಂದ ೬ರ ವರೆಗೆ ಸುರುವು ಇರುವದೋ ಅದರ ಹಾಜರೀ ೨ ವೇಳೆ ತುಂಬತಕ್ಕದ್ದು.

(D. P. I., S. 84 (e) d 15-3-27)

[C] ಶಂಕಾ—ಒಂದು ಸಾಲೆಯಲ್ಲಿ ಶಿಶುವರ್ಗ ಮತ್ತು ೧ನೆಯ ವರ್ಗ ಇವು ಸಿಪ್ಪ ಪದ್ಧತಿಯಿಂದ ನಡೆಯುವದು. ಅಂಥಲ್ಲಿ ಸರಾಸರಿ ಹಾಜರಿ ತೆಗೆಯುವ ಬಗ್ಗೆ ಇಡೀ ಸಾಲೆಯು ೨ ವೇಳೆ ನಡೆಯುತ್ತಿದ್ದರೂ ಒಂದೇ ವೇಳೆ ನಡೆಯುವಂತೆ ತಿಳಿಯತಕ್ಕದ್ದೋ ಇಲ್ಲವೆ ಸಿಪ್ಪ ಸಿಸ್ಟಿಮದಿಂದ ನಡೆಯತಕ್ಕ ವರ್ಗಗಳು ಮಾತ್ರ ಒಂದು ವೇಳೆ ನಡೆಯುವವೆಂದು ತಿಳಿಯತಕ್ಕದ್ದೋ ?

ಸ್ಪಷ್ಟೀಕರಣ—ಇಂಥಲ್ಲಿ ಇಡೀ ಸಾಲೆಯ ಸರಾಸರಿ ಹಾಜರಿ ತೆಗೆಯುವ ಅತಿ ಸುಲಭ ಮಾರ್ಗವೇನಂದರೆ—ಪ್ರತಿಯೊಂದು ವರ್ಗದ ತಿಂಗಳ ಸರಾಸರಿ ಹಾಜರಿ ಪ್ರತ್ಯೇಕ ತೆಗೆಯತಕ್ಕದ್ದು. ಮತ್ತು ಯಾವತ್ತೂ ವರ್ಗಗಳ ಸರಾಸರಿ ಹಾಜರಿಯ ಬೇರೀಜ ತಕ್ಕೊಂಡರೆ ಇಡೀ ಸಾಲೆಯ ಸರಾಸರಿ ಹಾಜರಿ ಆಗುವದು.

(P. P. I , S. (e) d 15-3-27)

೧೦ನೆಯ ಕಲಮು—ಯಾವ ಹೆಡ್‌ಮಾಸ್ತರನು ರಜೆಯ ಮೇಲೆ ಹೋಗುವನೋ ಅವನಿಗೆ ರಜೆಯ ನಿಯಮಗಳ ಪ್ರಕಾರ ಪೂರ್ಣ ದರದಿಂದ ಹೆ. ಮಾ. ಅಲಾವನ್ಸ ದೊರೆಯುವದು. ಮತ್ತು ಯಾವ ಅಸಿಸ್ಟಂಟನು ಬದಲೀ ಹೆ. ಮಾ. ಕೆಲಸ ಮಾಡುವನೋ ಅವನಿಗೂ ಹೆ. ಮಾ. ಅಲಾವನ್ಸ ಪೂರ್ಣ ಸಿಗುವದು.

(E. I., S. 62-P. 2-10-28 para (2)

೧೧ನೆಯ ಕಲಮು—ಶಂಕಾ—ಒಂದು ಸಾಲೆಯಲ್ಲಿ ಒಂದೇ ಯೋಗ್ಯತೆಯ ಅಸಿಸ್ಟಂಟರಿದ್ದು ಅವರಲ್ಲಿ ಒಬ್ಬನನ್ನು ಫರ್ಸ್ಟ ಅಸಿಸ್ಟಂಟನ ಜಾಗೆಗೆ ನಿಯಮಿಸುವ ಬಗ್ಗೆ ಅವರ ಒಟ್ಟು ನೌಕರೀ ನೋಡತಕ್ಕದ್ದೋ ಅಥವಾ ಹೆಚ್ಚಿನ ಯೋಗ್ಯತೆಯ ಸರ್ಟಿಫಿಕೇಟ ದೊರೆತ ನಂತರ ಆದ ನೌಕರೀ ನೋಡತಕ್ಕದ್ದೋ?

ಉದಾ—ಒಂದು ಸಾಲೆಯಲ್ಲಿ ಅಸಿಸ್ಟಂಟರ ಅಲಾವನ್ಸ ಸಿಗಲಿಕ್ಕೆ ಯೋಗ್ಯರಾದ ೩ ಜನ ಅಸಿಸ್ಟಂಟ ಶಿಕ್ಷಕರಿರುವರು. ಒಬ್ಬನು ೧೯೧೩ನೆಯ ಸಾಲಿನಲ್ಲಿ ಪಾಸಾಗಿದ್ದು ೧೧ ವರ್ಷ ನೌಕರೀ ಆಗಿರುವದು. ಎರಡನೆಯವನು ೧೯೨೧ರಲ್ಲಿ ಪಾಸಾಗಿದ್ದು ೧೩ ವರ್ಷ ನೌಕರಿ ಮಾಡಿರುವನು. ಮತ್ತು ಮೂರನೆಯ ಶಿಕ್ಷಕನು ೧೯೨೩ರಲ್ಲಿ ಪಾಸಾಗಿದ್ದು ೧೪ ವರ್ಷ ನೌಕರಿ ಮಾಡಿರುವನು. ಇಂಥ ವೇಳೆಯಲ್ಲಿ ಹೆಚ್ಚು ನೌಕರೀ ಮಾಡಿರುವನೆಂದು ೩ನೆಯ ಶಿಕ್ಷಕನಿಗೆ ೧ನೆಯ ಅಸಿಸ್ಟಂಟನ ಜಾಗೆಯನ್ನು ಕೊಡಬೇಕೋ ಇಲ್ಲವೆ ಮೊದಲನೆಯವನು ಹೆಚ್ಚಿನ ಯೋಗ್ಯತೆಯ ಸರ್ಟಿಫಿಕೇಟನ್ನು ಮೊದಲು ಪಡೆದನೆಂದು ಅವನಿಗೆ ಆ ಜಾಗೆಯನ್ನು ಕೊಡಬೇಕೋ?

ಇದರಂತೆ ಒಂದೇ ಸಾಲೆಯಲ್ಲಿ ೩ನೆಯ ವರ್ಷದ ಟ್ರೇಂಡ ಮತ್ತು ೨ನೆಯ ವರ್ಷದ ಟ್ರೇಂಡ ಹೀಗೆ ಇಬ್ಬರು ಶಿಕ್ಷಕರಿದ್ದು ಅವರು ಇಬ್ಬರೂ ಯೋಗ್ಯತೆ, ನೌಕರೀ ಮತ್ತು ಪಗಾರ ಈ ಮೂರು ವಿಷಯಗಳಲ್ಲಿ ಸಮಾನವಾಗಿದ್ದರೆ ಅವರಲ್ಲಿ ೧ನೆಯ ಅಸಿಸ್ಟಂಟನ ಜಾಗೆಯನ್ನು ಯಾರಿಗೆ ಕೊಡಬೇಕು?

ಇದರಂತೆ ೨ನೆಯ ವರ್ಷದ ಟ್ರೇಂಡ ಶಿಕ್ಷಕನ ನೌಕರಿ ಮತ್ತು ಪಗಾರ ೩ನೆಯ ವರ್ಷದ ಟ್ರೇಂಡ ಶಿಕ್ಷಕನಕ್ಕಿಂತ ಹೆಚ್ಚು ಇದ್ದಲ್ಲಿ ೧ನೆಯ ಅಸಿಸ್ಟಂಟನ ಜಾಗೆಯನ್ನು ಯಾರಿಗೆ ಕೊಡಬೇಕು?

ಸ್ಪಷ್ಟೀಕರಣ—ಯಾವ ಶಿಕ್ಷಕನ ಪಗಾರ ಹೆಚ್ಚು ಇರುವದೋ ಆ ಶಿಕ್ಷಕನು ಸೀನಿಯರ ಎಂದು ತಿಳಿಯುತ್ತೇವೆ. ಆದಾಗ್ಯೂ ೧ನೆಯ ಅಸಿಸ್ಟಂಟನ ಜಾಗೆಯ ನೇಮಣೂಕಿಯ ಬಗ್ಗೆ ನೇಮಣೂಕ ಮಾಡಲ್ಪಡುವ ಶಿಕ್ಷಕನು ಸಮ್ಮತಿಸಬೇಕು.

(D. P. I., S. 84 (e) of 8-1-24)

ಸರಕ್ಯೂಲರಗಳು.

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ ಮುಲ್ಕೀ ಪರೀಕ್ಷೆಯು ವರೆಗೆ ಕಲಿಸುವ ಯಾವತ್ತೂ ಸಾಲೆಗಳಿಗೆ :—

ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಿಂದ ಬರೆದು. ಬಂದದ್ದೇನಂದರೆ, ಪ್ರತಿವರುಷ ವ್ಹರ್ನಾಕ್ಯುಲರ ಫಾಯನಲ್ (ಮುಲ್ಕೀ) ಪರೀಕ್ಷೆಯ ಬಹಳೇ ಉಮೇದವಾರರ ಅರ್ಜಿಗಳು ಸರಿಯಾಗಿ ತುಂಬದೇ ಇರುವ ಮೂಲಕ ನಾಮಂಜೂರ ಆಗುವವು. ಕಾರಣ ಕೆಳಗಿನ ನಿಯಮಗಳ ಕಡೆಗೆ ತುಂಬಾ ಗಮನ ಕೊಡಶಕ್ತದ್ದು.

೧. ಉಮೇದವಾರರ ಹೆಸರುಗಳನ್ನು ಸ್ಪಷ್ಟವಾಗಿಯೂ, ಸರಿಯಾಗಿಯೂ ತಿಳಿಯುವಂತೆ ಬರೆಯತಕ್ಕದ್ದು.

೨. ಯಾವ ಭಾಷೆಯಲ್ಲಿ ಉಮೇದವಾರನು ಪರೀಕ್ಷೆಯನ್ನು ಕೊಡಲಿಚ್ಛಿಸುವನೋ ಅದನ್ನು ಆ ಬಗ್ಗೆ ತೋರಿಸಿದ ಸ್ಥಳದಲ್ಲಿ **ದೊಡ್ಡ ಅಕ್ಷರದಿಂದ** ಬರೆಯಬೇಕು.

೩. ಯಾವದೊಂದು ವ್ಹರ್ನಾಕ್ಯುಲರ ಸಾಲೆಯಿಂದ ಕೂಡುವ ಉಮೇದವಾರನ ವಯಸ್ಸು ಆ ಸಾಲೆಯ ಹೆಡ್‌ಮಾಸ್ತರರು ಬರೆದು ಕೊಡಬೇಕು.

೪. ಹೊರಗಿನಿಂದ ಕೂಡುವ ವಿದ್ಯಾರ್ಥಿಗಳು ತಾವು ಹಿಂದೆ ಕಲಿಯುತ್ತಿದ್ದ ಸಾಲೆಯ ಲೀವ್ವಿಂಗ ಸರ್ಟಿಫಿಕೇಟನ್ನು ಇಲ್ಲವೆ ಆ ಸಾಲೆಯ ಹೆಡ್‌ಮಾಸ್ತರರಿಂದ ವಯಸ್ಸಿನ ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೫. ಯಾವದೇ ಸಾಲೆಗೆ ಎಂದೂ ಹೋಗದೇ ಇದ್ದ ಉಮೇದವಾರರ ವಿಷಯದಲ್ಲಿ (ಇಂಥ ಸಂಗತಿ ನು ಬಹಳ ಕ್ವಚಿತ್ತಾಗಿರುವದು) ವಯಸ್ಸಿನ ದಾಖಲೆಯು ಒಬ್ಬ ಪ್ರಸಿದ್ಧ ಸದ್ಗೃಹಸ್ಥನಿಂದಾಗಲೀ, ಸ್ಥಾನಿಕ ಅಮಲದಾರರಿಂದಾಗಲೀ ಸಹಿ ಮಾಡಿದ್ದಿರಬೇಕು.

ಈ ಸಂಗತಿಗಳನ್ನು ಜಸ್ತಾಗಿ ಲಕ್ಷ್ಯದಲ್ಲಿಟ್ಟು ಅರ್ಜಿಗಳನ್ನು ತುಂಬಿ ಶಿಕ್ಷಕರು ಪರೀಕ್ಷಿಸಿ, ಅವಶ್ಯವಾದ ವಯಸ್ಸಿನ ದಾಖಲೆಗಳನ್ನು ಜೋಡಿಸಿ ಅವಧಿಯ ಒಳಗಾಗಿ ಮುಟ್ಟುವಂತೆ ರವಾನಿಸಬೇಕು.

ಧಾರವಾಡ.
೩೧-೧೨-೩೮

ಚೇರಮನ್,
ಸ್ಕೂಲಬೋರ್ಡ.

ಮಿಡಲ್ ಸ್ಕೂಲುಗಳಲ್ಲಿ ಹಿಂದೂ-ಧರ್ಮದ ಇಂಟರ ಮಿಜಿಯೇಟ ಮತ್ತು ಬ್ಯಾಕವರ್ಡ ವರ್ಗಗಳ ಹಾಗು ಮುಸಲ್ಮಾನ ವಿದ್ಯಾರ್ಥಿಗಳಿಗೋಸುಗ ಕಾಯ್ದಿಡಲ್ಪಟ್ಟ ಸ್ಕಾಲರಸಿಪ್ಪುಗಳು

ದಕ್ಷಿಣ ಭಾಗ-

ಈ ಮೂಲಕ ನೋಟೀಸುಕೊಡಲ್ಪಡುವದೇನಂದರೆ—ಆಂಗ್ಲೋ-ವರ್ನಾಕ್ಯುಲರ ೧ನೇ ಇಯತ್ತೆಯಲ್ಲಿ ಕೊಡಲ್ಪಡುವ ಸ್ಕಾಲರಸಿಪ್ಪುಗಳಬಗ್ಗೆ ಮೇಲಾಟದ ಪರೀಕ್ಷೆಯು ಕೆಳಗೆ ವಿವರಿಸಿದಂತೆ ದಕ್ಷಿಣಭಾಗದ ಆಯ್ದಾಯ್ದ ಜಿಲ್ಲೆಗಳ ಬಾಂಬೆ ಗವರ್ನಮೆಂಟ ಗ್ಯಾಜೀಟ ಭಾಗ ೧ನೇ ಜುಲೈ ೧೯೨೫ ಪುಟ ೫೪೫-೧೬ ರಲ್ಲಿ ಪ್ರಕಟವಾಗಿರುವ ಗವರ್ನಮೆಂಟ ರೆಜ್ಯುಲೇಶನ್, ಎಜ್ಯುಕೇಶನ್ ಡಿಪಾರ್ಟಮೆಂಟ ನಂ. ೨೪೬೬, ೫ನೇ ಜುಲೈ ೧೯೨೫ ನೇ ಹುಕುಮಿನ ಪ್ರಕಾರ ಸೋಮವಾರ ಮಂಗಳವಾರ ತಾ- ೧೧ ಮತ್ತು ೧೨ ಮಾರ್ಚ ೧೯೨೬ ನೇ ದಿವಸ ಮಧ್ಯಾಹ್ನ ೧೨ ಘಂಟೆಗೆ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಜರಗುವದು

(೧) ಧಾರವಾಡ ಹಾಯಸ್ಕೂಲ
(೨) ಪರದಾರ ಹಾಯಸ್ಕೂಲ ಬೆಳಗಾವ
(೩) ವಿಜ್ಯಾಪೂರ ಹಾಯಸ್ಕೂಲ
(೪) ಕಾರವಾರ ಹಾಯಸ್ಕೂಲ

(೨) ಈ ನಾಲ್ಕು ಜಿಲ್ಲೆಗಳಲ್ಲಿ ಆಯಾಯ ಸಮಾಜಗಳಿಗೆ ಕಾಯ್ದಿಟ್ಟ ಸ್ಕಾಲರ ಸಿಪ್ಪಿನ ಸಂಖೆ ಕೆಳಗೆ ತೋರಿಸಿದಂತೆ—

	ಜಿಲ್ಲಾ	ಇಂಟರ ಮಿಜಿಯೇಟ	ಬ್ಯಾಕವರ್ಡ, ಮುಸಲ್ಮಾನ
(೧)	ಧಾರವಾಡ	೧೨	೧೦
(೨)	ಬೆಳಗಾವ	೧೨	೪
(೩)	ವಿಜ್ಯಾಪೂರ	೧೦	೪
(೪)	ಕಾರವಾರ	೪	೧

(೩) ಪರೀಕ್ಷೆಯ ಭಾಷೆಯು, ಧಾರವಾಡ, ಬೆಳಗಾವ ವಿಜ್ಯಾಪೂರ ಮತ್ತು ಕಾರವಾರ ಜಿಲ್ಲೆಗಳಲ್ಲಿ ಕನ್ನಡು ಮತ್ತು ಮರಾಠಿ ಇರುವವು. ಆದ ಮುಸಲ್ಮಾನ ವಿದ್ಯಾರ್ಥಿಗಳು ಉರ್ದು ಭಾಷೆಯನ್ನು ವರ್ನಾಕ್ಯುಲರ ಎಂದೂ ಪರೀಕ್ಷೆಯ ಭಾಷೆಯೆಂದೂ ತಿಳಿಸಬಹುದು

(೪) ವ್ಹರ್ನಾಕ್ಯುಲರ್ ಫೈನೇ ಇಯತ್ತ್ತಿಯ ವಿಷಯಗಳಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವದರಲ್ಲಿ ಬರುವದು.

(೫) ಪ್ರತಿಯೊಂದು ಸ್ಥಳದಲ್ಲಿ ಪರೀಕ್ಷೆಯು ಒಂದು ಪರೀಕ್ಷಾ ಕಮಿಟಿಯಿಂದ ನಡಿಸಲ್ಪಡುವದು. ಆಯಾಯ ಜಿಲ್ಲೆಯ ಗವರ್ನಮೆಂಟ ಹಾಯ್ಸ್ಕೂಲಿನ ಹೆಡ್‌ಮಾಸ್ತರರು ಆಯಾಯ ಪರೀಕ್ಷಾ ಕಮಿಟಿಯಿಂದ ಅಧ್ಯಕ್ಷರಿರುವರು. ಪರೀಕ್ಷೆಗೆ ಕೂಡ್ರಬೇಕೆಂಬುವ ಉಮೇದವಾರರು ತಮ್ಮ ಜಿಲ್ಲೆಯ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ೧೫ನೇ ಇಸ್ವಿ ಫೆಬ್ರುವರಿ ೧೫ನೇ ತಾರೀಖಿನ ಒಳಗಾಗಿ ಮುಟ್ಟುವಂತೆ ಫಾರೀ ನಮೂನೆಯ ಮೇಲೆ ಅರ್ಜಿಯನ್ನು ಬರೆದು ಕಳುಹಿಸಬೇಕು. ತದನಂತರ ಬಂದ ಅರ್ಜಿಗಳು ಹೆಡಿಯಲ್ಲಡುವದಿಲ್ಲ. ಈ ನಮೂನೆಗಳು ಬೆಲೆ ಇಲ್ಲದೆ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಬಳಿಯಲ್ಲಿ ದೊರೆಯುವವು ಪರೀಕ್ಷೆಯ ಫೀ ೧೫ ರೂ. ಯನ್ನು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ಅರ್ಜಿಯೊಡನೆ ಕಳಿಸಬೇಕು; ಇಲ್ಲವೆ ಪರೀಕ್ಷೆಯ ಕಾಲಕ್ಕೆ ಕೊಡಬೇಕು

(೬) ತಾರೀಖು ೧-೪-೧೯೦೯ನೇ ದಿವಸ ೧೫ ವರ್ಷ ವಯಸ್ಸು ಮಿಕ್ಕಿದ ಹುಡುಗನೂ, ೧೫ ವರ್ಷ ಮಿಕ್ಕಿದ ಹುಡುಗಿಯೂ ಉಮೇದವಾರರಾಗಲಿಕ್ಕೆ ಅರ್ಹರಿರುತ್ತಾರೆ.

(೭) ಪರೀಕ್ಷೆಯ ಪರಿಣಾಮದ ಮೇಲಿಂದ ಸ್ಕಾಲರಶಿಪ್ಪುಗಳು ಆಂಗ್ಲೋ ವ್ಹರ್ನ್ಯಾಕ್ಯುಲರ ಸಾಲೆಗಳಿಗೆನೇ ಇಯತ್ತ್ತಿಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ೧೫ನೇ ಜೂನ ೧೯೨೩ರಿಂದ ಕೊಡಲ್ಪಡುತ್ತವೆ. ಸರಿಯಾಗಿ ಸಾಲೆಗೆ ಹೋಗೋಣ, ಒಳ್ಳೇ ನಡತೆ, ಸ್ಥಪ್ರಿಂಟೆಂಡರ ಪ್ರಮಾಣಿಕ ಇವುಗಳು ಕಂಡು ಬಂದಲ್ಲಿ ಈ ಸ್ಕಾಲರಶಿಪ್ಪುಗಳು ೩ ವರ್ಷಗಳ ಪರೆಗೆ ನಡೆಯುವವು. ವ್ಹರ್ನ್ಯಾಕ್ಯುಲರ ೪ನೇ ಇಯತ್ತೆ ಮತ್ತು ಅದರ ಮೇಲಿನ ಇಯತ್ತೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಈ ಸ್ಕಾಲರಶಿಪ್ಪುಗಳಿಗೆ ಪಾತ್ರರಿರುವರು.

೮) ಬ್ರಿಟಿಶ ಜಿಲ್ಲೆಗಳಲ್ಲಿ ವಾಸವಾಗದೇ ಇದ್ದ ಮತ್ತು ದೇಶೀ ಸಂಸ್ಥಾನಗಳ ಸಾಲೆಗಳ ವಿದ್ಯಾರ್ಥಿಗಳು ಈ ಸ್ಕಾಲರಶಿಪ್ಪುಗಳಿಗೆ ಅರ್ಹರಲ್ಲ.

(೯) ಅರ್ಜಿಯಲ್ಲಿ ಜಾತಿ, ಒಳಪಂಗಡ, ಜನನ ತಾರೀಖು ಇವುಗಳನ್ನು ಸ್ಪಷ್ಟವಾಗಿ ಬರೆಯಬೇಕು. ಅರ್ಜಿಯ ನಮೂನೆಯ ಮೇಲೆ ಹೊಸ ಕಾಸೆಯನ್ನು ಮಾಡಿ, ಉಮೇದವಾರನ ಪಾಲಕನು ಕೊಡುತ್ತಿರುವ ಇನ್‌ಕಮ್‌ಟ್ಯಾಕ್ಸ ಜವಿನಿನ ತರಮಗಲು ಎಷ್ಟೆಂಬುದನ್ನು ಬರೆಯಬೇಕು.

ಯಾವ ಉಮೇದವಾರರ ಪಾಲಕರು ೨೦೦ ರೂ. ಇನ್‌ಕಮ್‌ಟ್ಯಾಕ್ಸ ಆಗಲಿ, ಜಮೀನಿನ ತರಮು ಆಗಲಿ ಅಥವಾ ಎರಡೂ ಬಾಬತಿಯು ಕೂಡಿ ೨೦೦ ರೂ ಕೊಡುತ್ತಿರುವರೋ, ಅವರು ಸ್ಕಾಲರಸಿಪ್ಪುಗಳಿಗೆ ಬಾಧ್ಯರಾಗುವದಿಲ್ಲ.

ದ. ಭಾ. ಎ. ಇ. ಧಾರವಾಡ
ಇವರ ಕಚೇರಿಯಿಂದ.
೧೫–೧೨–೩೮.

ಜೆ. ಎಸ್. ಕಾದ್ರಿ,
ಎಜ್ಯುಕೇಶನಲ್ ಇನ್ಸಪೆಕ್ಟರ,
ದಕ್ಷಿಣ ಭಾಗ.

ಮುನಿಸಲ್ಟಾನ ಬರ್ಸಾರಿ ಫಂಡ ಸ್ಕಾಲರಸಿಪ್ಪು
ದಕ್ಷಿಣ ಭಾಗ.

ಈ ಮೂಲಕ ಜಾಹೀರಪಡಿಸುವದರಲ್ಲಿ ಬರುವದೇನಂದರೆ:—೧೯೦೬ನೆಯ ಇಸ್ವಿಯ ಇಂನೆಯ ದಿವಸ ಬಾಂಬೆ ಗವ್ಹರ್ನಮೆಂಟ ಗ್ಯಾಜೀಟಿನ ೧ನೆಯ ಭಾಗ ೨೦೬೫—೬೭ ಪುಟದಲ್ಲಿ ಪ್ರಕಟವಾದ ನಿಯಮಗಳನ್ವಯ, ಧಾರವಾಡ ಜಿಲ್ಲೆಯಲ್ಲಿ ಬರ್ಸಾರಿ ಫಂಡಿನ ಒಂದು ಸ್ಕಾಲರಸಿಪ್ಪು ಕೊಡುವ ಬಗ್ಗೆ ಮೇಲಾಟದ ಪರೀಕ್ಷೆಯು ಸೋಮವಾರ ಮತ್ತು ಮಂಗಳವಾರ ತಾ|| ೧೧–೧೨ ಮಾರ್ಚ ೧೯೩೯ ಇಸ್ವಿ ದಿವಸಗಳಲ್ಲಿ ಧಾರವಾಡ ಗವ್ಹರ್ನಮೆಂಟ ಹಾಯಸ್ಕೂಲಿನಲ್ಲಿ ಜರುಗುವದು.

೨. ಶಿಕ್ಷಣ ಖಾತೆಯಿಂದ ಮಂಜೂರ ಆದ ಧಾರವಾಡ ಜಿಲ್ಲೆಯ ಯಾವದೇ ಶಾಲೆಯ ವಿದ್ಯಾರ್ಥಿಗಳು ಈ ಪರೀಕ್ಷೆಯ ಉಮೇದವಾರರಾಗಬಹುದು. ಆದರೆ ಸುಪ್ರಸಿದ್ಧ ಗೃಹಸ್ಥರ ಉಮೇದವಾರನು ಧಾರವಾಡ ಜಿಲ್ಲೆಯವನೆಂದೂ, ಎರಡನೆಯ ತರಗತಿಯ ಶಾಲೆಯಲ್ಲಿ ಶಿಕ್ಷಣ ಪಡೆಯಲು ತೀರ ಬಡವನಿರುವನೆಂದೂ ಬರಕೊಟ್ಟು ಸರ್ಟಿಫಿಕೇಟು ಹಾಜರ ಮಾಡಬೇಕು.

೩. ಪರೀಕ್ಷೆಯ ಭಾಷೆಯು ಕನ್ನಡ. ಆದರೆ ಉರ್ದು ಭಾಷೆಯಾದರೂ ನಡೆಯುವದು.

೪. ಪರೀಕ್ಷೆಯು ಒಂದು ಪರೀಕ್ಷಾ ಕಮಿಟಿಯಿಂದ ನಡಿಸಲ್ಪಡುವದು. ಧಾರವಾಡ ಹಾಯಸ್ಕೂಲಿನ ಹೆಡ್‌ಮಾಸ್ತರರು ಈ ಕಮಿಟಿಯ ಅಧ್ಯಕ್ಷರು. ಮಿಡಲ್ ಸ್ಕೂಲ ಸ್ಕಾಲರಸಿಪ್ಪಿನ ಪರೀಕ್ಷೆಗಾಗಿ ಮಾಡಲ್ಪಡುವ ಥಾಪಾ ಅರ್ಜಿ ನಮೂನೆಗಳ ಮೇಲೆ ಅರ್ಜಿ ಮಾಡಿಕೊಳ್ಳಬೇಕು. ಅರ್ಜಿಯೊಡನೆ ಅವಶ್ಯವಾದ ಸರ್ಟಿಫಿಕೇಟ ಕಳಿಸಬೇಕು. ಪರೀಕ್ಷಾ ಕಮಿಟಿಯ ಅಧ್ಯಕ್ಷರ ಬಳಿಯಲ್ಲಿ ಅರ್ಜಿ ನಮೂನೆಗಳು ಬೆಲೆಯಿಲ್ಲದೆ ದೊರೆಯುವವು. ಎಲ್ಲ ಅರ್ಜಿಗಳು ಪರೀಕ್ಷಾ ಕಮಿ

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

DHARWAR DISTRICT SCHOOL BOARD PATRIKE

ಸಂಪುಟ ೧.	ಡಿಶಂಬರ ೧೯೨೪	ಸಂಚಿಕೆ ೯

ಸಂಪಾದಕ ಮಂಡಲ.

೧. ಶ್ರೀ. ಎಸ್. ಕೆ. ಹೊಸಮನಿ, ಬಿ. ಎ, ಎಲ್ ಎಲ್. ಬಿ.
(ಚೇರಮನ್, ಡಿ. ಎಸ್. ಬಿ.)

೨. ,, ಜಿ. ಆರ್. ನಲವಡಿ, ಬಿ. ಎ., ಎಲ್ ಎಲ್. ಬಿ.
(ವ್ಹಾಯಿಸ್ ಚೇರಮನ್, ಡಿ. ಎಸ್. ಬಿ.)

೩. ,, ಡಿ. ಎಲ್. ಪಾಟೀಲ, ಬಿ ಎ., ಎಲ್ ಎಲ್. ಬಿ.
(ವ್ಹಾಯಿಸ್ ಪ್ರೆಸಿಡೆಂಟ, ಡಿ ಎಲ್. ಬಿ.)

೪. ,, ಪ್ಹಿ. ಬಿ. ಜೋಶಿ, ಬಿ ಎ. ರಿಟಾಯರ್ಡ ಎಜ್ಯುಕೇಶನಲ್ ಇನ್ಸಪೆಕ್ಟರ.

೫. ಮೌ॥ ಸೈಯ್ಯದ ಫಕರುದ್ದೀನ ಸಾಹೇಬ.

ಮ್ಯಾನೇಜಿಂಗ ಎಡಿಟರ.

ಶ್ರೀ. ಎಚ್. ಎಫ್ ಕಟ್ಟೀಮನಿ, ಬಿ. ಎ.

ಈ ಪತ್ರಿಕೆಯು ಶ್ರೀ. ಎಚ್. ಎಫ್. ಕಟ್ಟೀಮನಿ, ಇವರಿಂದ ತೋಂಟದಾರ್ಯ ಮುದ್ರಾಲಯ ಕಿಲ್ಲೆ ಧಾರವಾಡ ಇಲ್ಲಿ ಮುದ್ರಿಸಲ್ಪಟ್ಟು, ಧಾರವಾಡ ಜಿಲ್ಲಾ ಸ್ಕೂಲಬೋರ್ಡ ಕಚೇರಿಯಲ್ಲಿ ಪ್ರಸಿದ್ಧಿಸಲ್ಪಟ್ಟಿತು

ವಿಷಯಾನುಕ್ರಮಣಿಕೆ.

ವಿಷಯ.		ಲೇಖಕರು.
೨.	ಇತಿಹಾಸ ಶಿಕ್ಷಣ.	ಶ್ರೀ. ಎಚ್. ಸಿ ಹಲಗಲಿ, ಬಿ.ಎ., ಬಿ.ಟಿ. ಬೆಳಗಾಂವ
೩.	ಅಂಕಗಣಿತದ ಎರಡು ಪ್ರಶ್ನೆಗಳು.	,, ಹ. ವೆ. ಸಂಗನಾಳ, ಮಾಸ್ತರ, ಗಜೇಂದ್ರಗಡ
೪.	ಎಳ್ಳು–ಬಲ್ಲಂ.	,, ನಾ. ಗೋ. ದೇಸಾಯಿ, ಹೆ. ಮಾ. ಮುತ್ತಿಗಿ.
೪.	ರಾಷ್ಟ್ರಕಾರ್ಯಕ್ಕಾಗಿ ಶಿಕ್ಷಕರ ಕರ್ತವ್ಯ. (ಅಸೂರ್ಣ).	,, ಸಂಗನಬೇಶಶನಯ, ಹುಬ್ಬಳ್ಳಿ.
೫.	ಸಬಲ ಶರೀರ–ಪ್ರಬಲ ವ್ಯಾಯಾಮ	,, ಬ. ವಿ. ಮಠ, ಮಾಸ್ತರ, ಶಿವಳ್ಳಿ.
೬.	ಇಂಗ್ಲಿಷ ಕಲಿಯುವ ಹುಡುಗ, ಇಂಗ್ಲಿಷ ಕಲಿಸಿದ ಒಕ್ಕಲಿಗ.	,, ಹ. ರಾ. ಕಾಲವಾಡ, ಹೆ ಮಾಸ್ತರ, ತಿಲಕಾಪೂರ.
೭.	ಪಳ್ಳಿಗಳ ಸುಧಾರಣೆ.	,, ಸಂಪಾದಕರು.
೮.	ಸೂರ್ಯ ನಮಸ್ಕಾರ.	,, ,,
೯.	ಮೆ॥ ಎ. ಇನಸ್ಪೆಕ್ಟರ, ದ. ಭಾ, ಇವರ ಪ್ರಕಟನೆಗಳು.	,, ,,
೧೦.	ಸರಕ್ಯುಲರಗಳು	,, ,,
೧೧.	ನೋಟೀಸು	,, ,,

॥ ವಿದ್ಯಾ ಗುರೂಣಾಂ ಗುರುಃ ॥

ಧಾರವಾಡ ಜಿಲ್ಲಾ

ಸ್ಕೂಲ ಬೋರ್ಡ ಪತ್ರಿಕೆ

ಸಂಪುಟ ೧ | ಡಿಸಂಬರ ೧೯೩೮. | ಸಂಚಿಕೆ ೯

ಇತಿಹಾಸ ಶಿಕ್ಷಣ.

ಲೇಖಕ:—ಶ್ರೀ. ಎಚ್. ಬಿ. ಹಲಗಲಿ,
ಬಿ. ಎ., ಬಿ.. ಬಿ. ಬೆಳಗಾಂವ

(ಅಕ್ಟೋಬರ ಸಂಚಿಕೆಯಿಂದ ಮುಂದೆ ಸಾಗಿದ್ದು).

ಇತಿಹಾಸಕಾರರು ಉಪಯೋಗಿಸುವ ಸಾಧನಗಳನ್ನು ಕ್ಲಾಸಿನಲ್ಲಿ ಉಪಯೋಗಿಸಿ ಇತಿಹಾಸವನ್ನು ಕಲಿಸಿದರೆ ಹುಡುಗರಿಗೆ ಒಂದು ರೀತಿಯಿಂದ ಆನಂದ ಪಡಿಸುತ್ತದೆ. ಇದಕ್ಕೆ ಇಂಗ್ಲೀಷದಲ್ಲಿ ' ಸೋರ್ಸ ಮೆಥಡ್ ' ಎಂದು ಹೇಳುವ ಮಂಟು. ಹಾಗಾದರೆ ಮೊಗಲರ ಇತಿಹಾಸವನ್ನು ಕಲಿಸಬೇಕಾದರೆ ಯಾವ ಮೂಲ ಸಾಧನಗಳನ್ನು ಉಪಯೋಗಿಸಬೇಕು? ಬಾಬರನು ಸ್ವಂತ ಚರಿತ್ರವನ್ನು ಬರೆದಿಟ್ಟಿರುವನು. ಜಹಾಂಗೀರನ ಚರಿತ್ರ ಅದೆ. ಅಕಬರನ ಐನ್-ಇ- ಅಕಬರಿ ಎಂಬ ಗ್ರಂಥ ಉಪಲಬ್ಧವದೆ. ಮೊಗಲರ ಆಳಿಕೆಯಲ್ಲಿ ಕೆಲವು ಪ್ರವಾಸಿಕರು ಹಿಂದುಸ್ತಾನಕ್ಕೆ ಬಂದಿದ್ದರು. ಅವರು ಹಿಂದೂ ದೇಶದ ವಿಷಯವಾಗಿ ಬಹಳೀ ಮನೋಹರವಾದ ವೃತ್ತಾಂತವನ್ನು ಬರೆದಿಟ್ಟಿರುವರು. ಇವರಲ್ಲಿ ಸರ್ ಜಾನ ಹಾಕಿನ್ಸ, ಸರ ಥಾಮಸರೋ, ಜರ್ನಿಯರ್, ಪೀಟರಮಂಡಿ, ಗ್ಯಾಮಿಲ್ಲಿ ಡಿ ಕ್ಯಾರಿರಿ, ಮುಂತಾದವರು ಪ್ರಸಿದ್ಧ ಇರುವರು. ಇವರು ಬರೆದಿಟ್ಟ ವೃತ್ತಾಂ

ತವು ಇತಿಹಾಸಕ್ಕೆ ಮೂಲ ಸಾಧನವೆನಿಸುವದು. ಇತಿಹಾಸದ ಮೂಲಸಾಧನದ ಪದ್ಧತಿಯಿಂದ ಹುಡುಗರಿಗೆ ಇತಿಹಾಸ ಶೋಧನದ (Research) ಕಡೆಗೆ ಪ್ರೀತಿಯನ್ನು ಹುಟ್ಟಿಸಲಿಕ್ಕೆ ನಮಗೆ ಅನುವು ದೊರೆದಂತಾಗುವದು. ಈ ಪದ್ಧತಿಯಿಂದ ಇತಿಹಾಸವನ್ನು ಕಲಿಸಬೇಕಾದರೆ ಇತಿಹಾಸ ಶಿಕ್ಷಕರು ಚನ್ನಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಹಾಗು ಕ್ಲಾಸುಗಳಿಗೆ ಕಲಿಸಬೇಕಾದ ಇತಿಹಾಸದ ಎಲ್ಲ ವಿಷಯವು ಮುಗಿಯುವ ಸಂಭವವಿರುವದಿಲ್ಲ. ಆದುದರಿಂದ ಈ ಪದ್ಧತಿಯನ್ನು ಪ್ರತಿನಿತ್ಯವೂ ಉಪಯೋಗಿಸದೆ ಆಗಾಗ್ಗೆ ಉಪಯೋಗಿಸುತ್ತ ಹೋಗಬೇಕು. ಯಾವದೇ ರಾಷ್ಟ್ರದ ಉನ್ನತಿಯಾಗಬೇಕಾದರೆ ಕೇವಲ ಆಯಾ ರಾಷ್ಟ್ರದ ಇತಿಹಾಸದಿಂದಲೇ ಆಗಬೇಕಲ್ಲದೆ ಬೇರೆ ಇನ್ನಾವ ಸಾಧನಗಳಿಂದಲೂ ಆಗಲರಿಯದು. ಆದುದರಿಂದ ದೇಶದ ಇತಿಹಾಸನನ್ನು ಶೋಧಿಸುವವರ ಅವಶ್ಯಕತೆಯು ಹೆಚ್ಚಾಗಿರುವದು. ಮೂಲಸಾಧನಗಳಿಂದ ಇತಿಹಾಸ ಕಲಿಸುವ ಪದ್ಧತಿಯಿಂದ ಹುಡುಗರಲ್ಲಿ ಇತಿಹಾಸ ಶೋಧನದ ಲವಲವಿಕೆಯು ಹುಟ್ಟುವ ಸಂಭವವು ಇರುತ್ತದೆ.

ಬಾಲಕರಿಗೆ ನಾಟಕಗಳನ್ನು ನೋಡುವದು ಬಲು ಸೇರುತ್ತದೆ. ನಾಟಕಗಳಲ್ಲಿಯ ಪಾತ್ರಗಳಂತೆ ತಾವಾವರೂ ವೇಷಣಮಾಡಬೇಕು ಹಾಡಬೇಕು ಎಂಬುದು ಅವರ ಮನಸ್ಸಿನಲ್ಲಿರುತ್ತದೆ. ಹಳ್ಳಿಯಲ್ಲಿ ಬೈಲಾಟ ಆದ ಮರುದಿವಸ ನೋಡಿದರೆ ಹಳ್ಳಿಯ ದನಕಾಯುವ ಹುಡುಗರ ಬಾಯಲ್ಲಿ ರಾತ್ರಿ ಆಡಿದ ಆಟದ ಪದಗಳೇ ಪದಗಳು. ಪದಗಳು ಬರಲಿ ಅಥವಾ ಬಿಡಲಿ, ಪಾತ್ರಗಳ ಸಂಪೂರ್ಣ ಮಾತುಗಳು ಅವರಿಗೆ ಬರಲಿ, ಅಥವಾ ಬಿಡಲಿ, ಅವುಗಳನ್ನು ಮಾತಾಡಲಿಕ್ಕೆ ಪ್ರಯತ್ನಿಸುತ್ತಾರೆ. ಬಾಲಕರ ಇಂಥ ಮನಸ್ಸಿನ ಪ್ರವೃತ್ತಿಯ ಲಾಭವನ್ನು ಇತಿಹಾಸ ಶಿಕ್ಷಕರು ಹೊಂದಬೇಕು. ಐತಿಹಾಸಿಕ, ಲಾವಣಿ ಪದಗಳನ್ನು ಕಟ್ಟಿ ಅವುಗಳನ್ನು ಹುಡುಗರ ಬಾಯಿಂದ ಅನಿಸಬೇಕು. ಯಾವದೇ ಒಂದು ಇತಿಹಾಸ ಪಾಠವನ್ನು ನಾಟಕ ರೂಪದಿಂದ ಮಾಡಿಸಬೇಕು. ಸೀನರಿ, ಡ್ರೆಸ್ಸು, ಇತ್ಯಾದ್ಯಿ ಎಲ್ಲಿಂದ ತರಬೇಕೆಂದು. ಶಿಕ್ಷಕರು ಕೇಳಬಹುದು ಸಾಲಿಯಲ್ಲಿ ಕ್ಲಾಸಿನಲ್ಲಿ ಒಂದೇ ಒಂದು ತಾಸಿನ ಪೂರ್ತಿ ಮಾಡುವ ನಾಟಕಕ್ಕೆ ಸೀನರಿ ಮುಂತಾದದ್ದು ಅವಶ್ಯವಿಲ್ಲ. ಇಂಥ ನಾಟಕದಲ್ಲಿ ಒಮ್ಮೊಮ್ಮೆ ಇಡೀ ಸಾಲಿಯ ಹುಡುಗರು ಸೇರಿಕೊಂಡು ಕೆಲಸಮಾಡಲಿಕ್ಕೆ ಅನುವು ದೊರೆಯುತ್ತದೆ. ಉದಾಹಾರಣಾರ್ಥವಾಗಿ ಪಾನಿಪತ್ತದ ೩ನೆಯ ಯುದ್ಧವನ್ನು ನಾಟ್ಯ ರೂಪದಿಂದ ಮಾಡಿ ತೋರಿಸಬೇಕಾದರೆ ಎಷ್ಟು ಹುಡುಗರು ಬೇಕು. ಇದನ್ನು ಶಿಕ್ಷಕರೆ ತರ್ಕಿಸಬಹುದು. ಹುಡುಗರಲ್ಲಿ ಎರಡು ಪಾರ್ಟಿ ಮಾಡಿ, ಒಂದು ಮರಾಠರದು, ಇನ್ನೊಂದು ಅಬ್ದಾಲಿಯದು ಎಂದು ಹೆಸರು ಕೊಡಬೇಕು. ಸಾಲಿಯ ಬೈಲಿನಲ್ಲಿ ಹುಡುಗರನ್ನು ಯುದ್ಧ ಭೂಮಿಯ ನಕಾಶದಲ್ಲಿ ಸಿಪಾಯರು ನಿಂತಂತೆ ನಿಲ್ಲಿಸಬೇಕು. ಈ ಪದ್ಧತಿಗೆ

"ನಾಟಕ ಪದ್ಧತಿ" Method of Dramatisating ಎಂದು ಕರೆಯುವದುಂಟು. ಇದರಿಂದ ಧೈರ್ಯ ಸ್ಥೈರ್ಯಾದಿ ವೀರ ಗುಣಗಳು ಬಾಲಕರಲ್ಲಿ ಅಂಕುರಿಸುತ್ತವೆ. ಹೀಗೆ ಇತಿಹಾಸ ಕಲಿಸಬೇಕಾದರೆ ಚನ್ನಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಬಹಳಕಾಲ ವಿಲಂಬವಾಗುತ್ತದೆ. ಆದುದರಿಂದ ಈ ಪದ್ಧತಿಯಿಂದ ಇತಿಹಾಸವನ್ನು ಆಗಾಗ್ಗೆ ಕಲಿಸುತ್ತಿರಬೇಕು. ಪ್ರತಿ ದಿವಸ ಕಲಿಸುವಾಗ್ಗೆ ಈ ಪದ್ಧತಿಯನ್ನು ಉಪಯೋಗಿಸಬಾರದು.

ಕಾಲಕ್ರಮದ ವಿಷಯವಾಗಿ ಇತಿಹಾಸ ಕಲಿಸುವಾಗ್ಗೆ ಒಂದು ಪ್ರಶ್ನೆಯು ಉಪಸ್ಥಿತವಾಗುತ್ತದೆ. ಪ್ರಾಚೀನ ಕಾಲದ ಇತಿಹಾಸವನ್ನು ಮೊದಲು ಕಲಿಸಬೇಕೋ ಅಥವಾ ಅರ್ವಾಚೀನ ಕಾಲದ ಇತಿಹಾಸವನ್ನು ಮೊದಲು ಕಲಿಸಬೇಕೋ ಎಂಬುದು ವಾದಗ್ರಹಸ್ತ ವಿಷಯವಾಗಿದೆ. ಶಿಕ್ಷಣದ ತತ್ವ ಏನೇ ಇರಲಿ ಪ್ರಾಚೀನ ಕಾಲದ ಇತಿಹಾಸವನ್ನು ಮೊದಲು ಕಲಿಸುವದು ಸರಿ ವಾದದ್ದೆಂದು ನನ್ನ ಅಭಿಪ್ರಾಯ. ಏಕಂದರೆ ಅರ್ವಾಚೀನ ಕಾಲದ ಇತಿಹಾಸದಲ್ಲಿ ರಾಜಕೀಯ ಸಾಮಾಜಿಕ, ಆರ್ಥಿಕ ಮುಂತಾದ ವಿಷಯಗಳು ಅಡಕವಾಗಿರುವದರಿಂದ ಅರ್ವಾಚೀನ ಇತಿಹಾಸವನ್ನು ಮೊದಲು ಪ್ರಾರಂಭಿಸಿದರೆ ಬಾಲಕರ ಮನಸ್ಸಿನಲ್ಲಿ ಗೊಂದಲ ಹುಟ್ಟಿ ವಿಷಯಜ್ಞಾನವು ಚನ್ನಾಗಿ ಆಗುವದಿಲ್ಲ. ಪ್ರಾಚೀನ ಕಾಲದ ಇತಿಹಾಸದಲ್ಲಿ ಕೇವಲ ಒಂದೇ ಒಂದು ವಿಷಯವು ಹೇಳಲ್ಪಟ್ಟಿರುವದರಿಂದ ಅದು ಹುಡುಗರಿಗೆ ಸುಲಭವಾಗಿ ನೆನಪಿನಲ್ಲಿ ಉಳಿಯುತ್ತದೆ. ಆದರೆ ಯಾವದೇ ಒಂದು ದೇಶದ ರಾಜ್ಯಾಭಿವೃದ್ಧಿಯ ಇತಿಹಾಸವನ್ನು ಕಲಿಸಬೇಕಾದರೆ ಹುಡುಗರಿಗೆ ಗೊತ್ತಿದ್ದ ವಿಷಯದಿಂದ ಆರಂಭಿಸಬೇಕಾಗುತ್ತದೆ. ಹಿಂದುಸ್ತಾನದ ರಾಜ್ಯಭಾರದ ವಿಷಯವಾಗಿ ಕಲಿಸುವಾಗ್ಗೆ ತಾಲೂಕದಿಂದಲೇ ಆರಂಭಿಸಬೇಕು. ತಾಲೂಕದ ಅಧಿಕಾರಿಗಳು ಬಾಲಕರಿಗೆ ಕೇಳಿಕೆಯಿಂದ ಗೊತ್ತಾಗಿರುತ್ತಾರೆ. ಮುಂದೆ ಬರಬರುತ್ತ ಜಿಲ್ಲೆ, ಇಲಾಖೆ ಇತ್ಯಾದಿ ಭಾಗಗಳ ಆಡಳಿತವನ್ನು ಪ್ರಾರಂಭಿಸಬೇಕು.

ಇಡೀ ಒಂದು ತಾಸಿನಲ್ಲಿ ಕಲಿಸಿದ ವಿಷಯದ ಸಂಕ್ಷಿಪ್ತ ಜ್ಞಾಪಕ ಟಿಪ್ಪಣಿಗಳನ್ನು ಕಲಿಸುತ್ತಿರುವಾಗಲೇ ಕರಿಹಲಗೆಯ (Black board) ಮೇಲೆ ಬರೆಯುತ್ತ ಹೋಗಬೇಕು. ಈ ಟಿಪ್ಪಣಿಗಳನ್ನು ಶಿಕ್ಷಕರು ಸ್ವತಃ ತಾವೇ ಹೇಳದೆ ಹುಡುಗರಿಂದಲೇ ತೆಗೆದುಕೊಂಡು ಬೋರ್ಡಿನ ಮೇಲೆ ಬರೆಯಬೇಕು. ಒಂದು ಮುದ್ದೆಯನ್ನು ಬರಕೊಳ್ಳುವದು ತೀರಿದ ಮೇಲೆ ಮುಂದೆ ಮತ್ತೊಂದು ಮುದ್ದೆಯನ್ನು ಹೇಳಲು ಆರಂಭಿಸಬೇಕು ಹುಡುಗರು ಜ್ಞಾಪಕ ಟಿಪ್ಪಣಿಗಳನ್ನು ಬರೆಯುತ್ತಿರುವಾಗ ಬೇರೆ ವಿಷಯವನ್ನು ಹೇಳಬಾರದು. ಹುಡುಗರ ಮನಸ್ಸು ಬರಕೊಳ್ಳುವದರಲ್ಲಿ ವ್ಯಗ್ರವಾಗಿರುವದರಿಂದ ಶಿಕ್ಷಕರು ಹೇಳುವದು ತಿಳಿಯುವದಿಲ್ಲ. ಆದುದರಿಂದ ಸಮಾಧಾನದಿಂದ ಹೇಳುತ್ತ ಹೋಗಬೇಕು.

ಇತಿಹಾಸದ ಪಠ್ಯ ಪುಸ್ತಕ ಎಂಥಾದ್ದು ಇರಬೇಕು ಇದರ ಬಗ್ಗೆ ಈಗ ನಾವು ವಿಚಾರಿಸುವಾ. ಪುಸ್ತಕದೊಳಗಿನ ಅಕ್ಷರಗಳು ಕೆಲಮಟ್ಟಿಗೆ ದೊಡ್ಡ ವಿರತಕ್ಕದ್ದು. ಓದುವಾಗ್ಗೆ ಹುಡುಗರ ಕಣ್ಣಿಗೆ ಬಾಧೆ ಆಗತಕ್ಕದ್ದಲ್ಲ. ಅದರಲ್ಲಿ ನಕಾಶಗಳೂ ಚಿತ್ರಗಳೂ, ಎಗ್ಗಳವಾಗಿರತಕ್ಕದ್ದು. ವಿಷಯಾನುಕ್ರಮಣಿಕೆಯು ಸ್ಪಷ್ಟವಾಗಿರಬೇಕು. ವಂಶಾವಳಿಗಳನ್ನೂ, ಒಬ್ಬನ ಆಳಿಕೆಯ, ಅಥವಾ ಇಡೀ ಒಂದು ಮನೆತನದ ಕಾಲದ ಸಂಗತಿಗಳಿಂದೊಡಗೂಡಿನ ಪಟ್ಟಿ (Time chart) ಯನ್ನು ಕೊಟ್ಟಿರಬೇಕು. ಕೊನೆಗೆ ಮುಖ್ಯ ಸಂಗತಿಗಳ ಪಟ್ಟಿಯನ್ನು ಅವಶ್ಯವಾಗಿ ಕೊಡಬೇಕು. ಹೆಸರುಗಳ ಸೂಚಿ ಪತ್ರ ಕೊನೆಗೆ ಅವಶ್ಯವಾಗಿರತಕ್ಕದ್ದು. ಸಾಮಾಜಿಕ, ರಾಜಕೀಯ, ವಾಙ್ಮಯ ಮುಂತಾದ ವಿಷಯಗಳನ್ನು ಪಠ್ಯ ಪುಸ್ತಕವು ಅವಶ್ಯವಾಗಿ ಒಳಕೊಂಡಿರಬೇಕು. ಇಂಥ ಪುಸ್ತಕವನ್ನೇ ಪಠ್ಯ ಪುಸ್ತಕವನ್ನಾಗಿ ಉಪಯೋಗಿಸಬೇಕಲ್ಲದೆ ಬೇರೆ ಪುಸ್ತಕಗಳನ್ನು ಉಪಯೋಗಿಸಬಾರದು.

ಅಂಕಗಣಿತದ ಎರಡು ಪ್ರಶ್ನೆಗಳು

ಉದಾಹರಣೆ:—(೧) ಒಬ್ಬ ಕುರುಬನಲ್ಲಿ ಎರಡು ಕುರಿಯ ಹಿಂಡುಗಳವೆ. ಮೊದಲನೇ ಹಿಂಡಿನಲ್ಲಿ ಎರಡನೇ ಹಿಂಡಿಗಿಂತ ೧೩ ಕುರಿಗಳು ಹೆಚ್ಚು ಅವೆ. ಮೊದಲನೇ ಹಿಂಡಿನೊಳಗಿನ ಒಂದು ಕುರಿಯ ಬೆಲೆಯು ೨ನೇ ಹಿಂಡಿನಲ್ಲಿರುವ ಕುರಿಗಳ ಸಂಖೆಯಷ್ಟು ಆಣೆಗಳು; ೨ನೇ ಹಿಂಡಿನ ಒಂದು ಕುರಿಯ ಬೆಲೆಯು ಮೊದಲನೇ ಹಿಂಡಿನಲ್ಲಿರುವ ಕುರಿಗಳ ಸಂಖೆಯಷ್ಟು ಆಣೆಗಳಂತೆ ಮಾರಲು ಅವನಿಗೆ ೨೧೦ ರೂ ಗಳು ಬಂದರೆ ಪ್ರತಿಯೊಂದು ಹಿಂಡಿನಲ್ಲಿದ್ದ ಕುರಿಗಳೆಷ್ಟು?

ಉದಾ:—(೨) ಒಂದು ಗುಡ್ಡದ ಮೇಲೆ ಐದು ಕೋಟಗಳಿವೆ. ಅದನ್ನು ಮುತ್ತಲು ಪರರಾಯರ ದಂಡು ಬರಲು ಮೊದಲನೇ ಕೋಟೆಯವನು ತನ್ನಲ್ಲಿದ್ದ ದಂಡಿನಷ್ಟೇ ಜನರನ್ನು ಸಹಾಯಕ್ಕೆ ಕೊಡಿರಿಂದು ಬಾಕಿ ಕೋಟೆಯವರನ್ನು ಕೇಳಲು ಅವರು ಅದರಂತೆ ಸಹಾಯಮಾಡಿದರು. ಆಗ ಶತ್ರುಗಳು ಅಂಜಿ ಎರಡನೇ

ಕೋಟೆಗೆ ಮುತ್ತಿಗೆಯನ್ನು ಹಾಕಿದರು. ಇವನೂ ಮೊದಲಿನವನಂತೆ ಸಹಾಯವನ್ನು ಉಳಿದ ನಾಲ್ವರಿಂದ ತಕ್ಕೊಂಡನು ಇದರಂತೆ ಶತ್ರುಗಳು ಐದೂ ಕೋಟೆಗೆ ಬರಲು ಎಲ್ಲರೂ ಮೊದಲಿನವನಂತೆ ಸಹಾಯಕ್ಕೊಂಡು ಪರರಾಯರ ದಂಡನ್ನು ಓಡಿಸಿದರು. ಕಡೆಗೆ ನೋಡಲಾಗಿ ಪ್ರತಿಯೊಂದು ಕೋಟೆಯಲ್ಲಿ ಸರಿಯಾಗಿ ದಂಡಿದ್ದರೆ ಪ್ರತ್ಯೇಕ ಕೋಟೆಯಲ್ಲಿದ್ದ ಮೊದಲಿನ ಜನರೆಷ್ಟು ?

(೧) ಮಾರಾಟದ ನಾಣ್ಯಕ್ಕೆ ಕುರಿಬೆಲೆಯ ನಾಣ್ಯದ ರೂಪ ಕೊಟ್ಟು ಬಂದದ್ದರ ಎರಡಷ್ಟರಲ್ಲಿ ಹೆಚ್ಚಿನ ಕುರಿಯ ವರ್ಗ ಕೂಡಿಸಿ ಬಂದ ಬೇರೀಜಿನ ವರ್ಗ ಮೂಲ ತೆಗೆದರೆ ಒಟ್ಟು ಕುರಿಯ ಸಂಖೆಬರುವದು ∴ ೨೧೦ ರೂ. × ೧೬ = ೩೩೬೦ ಆಣೆ; ೩೩೬೦ × ೨ = ೬೭೨೦ ಹೆಚ್ಚಿನ ಕುರಿಯವರ್ಗ (೧೩ × ೧೩); ೧೬೯ ೬೭೨೦ + ೧೬೯ = ೬೭೮೯; ಇದರ (೮೩ × ೮೩)ರ ವರ್ಗಮೂಲ ೮೩. ೮೩ ಇದೇ ಒಟ್ಟು ಕುರಿಯಸಂಖೆ. ಇನ್ನು ಮೊದಲನೇ ಹಿಂಡಿನಲ್ಲಿ ೧೩ ಕುರಿ ಹೆಚ್ಚು ಅವೆ ಅವನ್ನು ತೆಗೆಯಲು (೮೩-೧೩ ; ಉಳಿದ ೭೦ ಕುರಿಯಲ್ಲಿ ೩೫ + ೧೩ = ೪೮ ಮೊ. ಹಿಂಡು. ೩೫ ಎರಡನೆಹಿಂಡು.

೪೮, ೩೫ ಉತ್ತರ.

(೨) ಕೋಟೆಗಳ ಸಂಖ್ಯೆಗೆ ಆದರಷ್ಟೆ ಘಾತ ಮಾಡಿ ಬಂದ ಘಾತವನ್ನು ಕೋಟೆಗಳ ಸಂಖ್ಯೆಯಿಂದ ಭಾಗಿಸಿ ಬಂದ ಭಾಗಾಕಾರವನ್ನು ಘಾತದಲ್ಲಿ ಮಿಶ್ರ ಮಾಡಬೇಕು. ಈ ಪ್ರಕಾರ ಎಷ್ಟು ಕೋಟೆಗಳಿರುವವೋ ಅಷ್ಟುಸಾರೆ ಮಾಡಿದರೆ ಕಡೆಯ ಭಾಗಾಕಾರವೇ ಮೊದಲಿನ ಕೋಟೆಯೊಳಗಿನ ಜನರ ಸಂಖ್ಯೆ. ∴ ೫ × ೫ × ೫ × ೫ × ೫ × ೫ = ೩೧೨೫.

ಉತ್ತರ. (೧) ಅಹಿಮುಕರ (೨) ಕೇದಗಿ.

೫)	೩೧೨೫ (	೬೨೫			೧೨೯೬ ಮೊ ಕೋ. ಜನರು
	+ ೬೨೫				
೫)	೬೨೫೦ (	೨೫೦	ಮೊ ಕೋ. ಜ	೧೨೯೬ + ೧೦೮೦ = ೨೩೭೬	ಎ. ಕೋ. ಜನರು
	+ ೨೫೦				
೫)	೪೫೦೦ (	೯೦೦	ಎ. ,, ,,	೨೩೭೬ + ೯೦೦ = ೩೨೭೬	ಮೂ. ಕೋ. ಜನರು
	+ ೯೦೦				
೫	೫೪೦೦ (	೧೦೮೦	ಮೂ. ,, ,,	೩೨೭೬ + ೨೫೦ = ೪೦೨೬	ನಾ. ಕೋ. ಜನರು
	+ ೧೦೮೦				
೫)	೬೪೮೦ (	೧೨೯೬	ನಾ ,, ,,	೪೦೨೬ + ೬೨೫ = ೪೬೫೧	ಐ. ಕೋ. ಜನರು

ಗಜೇಂದ್ರಗಡ (ಕೋಣ) } ಹ. ವೆ. ಸಂಗನಾಳ.
ಅ. ಮಾ.

ಇತಿಹಾಸದ ಪಠ್ಯ ಪುಸ್ತಕ ಎಂಥಾದ್ದು ಇರಬೇಕು. ಇದರ ಬಗ್ಗೆ ಈಗ ನಾವು ವಿಚಾರಿಸುವಾ. ಪುಸ್ತಕದೊಳಗಿನ ಅಕ್ಷರಗಳು ಕೆಲಮಟ್ಟಿಗೆ ದೊಡ್ಡವಿರತಕ್ಕದ್ದು. ಓದುವಾಗ್ಗೆ ಹುಡುಗರ ಕಣ್ಣಿಗೆ ಬಾಧೆ ಆಗತಕ್ಕದ್ದಲ್ಲ. ಅವರಲ್ಲಿ ನಕಾಶಗಳೂ ಚಿತ್ರಗಳೂ, ಎಗ್ಗಳವಾಗಿರತಕ್ಕದ್ದು. ವಿಷಯಾನುಕ್ರಮಣಿಕೆಯು ಸ್ಪಷ್ಟವಾಗಿರಬೇಕು. ವಂಶಾವಳಿಗಳನ್ನೂ, ಒಬ್ಬನ ಆಳಿಕೆಯ, ಅಥವಾ ಇಡೀ ಒಂದು ಮನೆತನದ ಕಾಲದ ಸಂಗತಿಗಳಿಂದೊಡಗೂಡಿದ ಪಟ್ಟಿ (Time chart) ಯನ್ನು ಕೊಟ್ಟಿರಬೇಕು. ಕೊನೆಗೆ ಮುಖ್ಯ ಸಂಗತಿಗಳ ಪಟ್ಟಿಯನ್ನು ಅವಶ್ಯವಾಗಿ ಕೊಡಬೇಕು. ಹೆಸರುಗಳ ಸೂಚಿ ಪತ್ರ ಕೊನೆಗೆ ಅವಶ್ಯವಾಗಿರತಕ್ಕದ್ದು. ಸಾಮಾಜಿಕ, ರಾಜಕೀಯ, ವಾಙ್ಮಯ ಮುಂತಾದ ವಿಷಯಗಳನ್ನು ಪಠ್ಯ ಪುಸ್ತಕವು ಅವಶ್ಯವಾಗಿ ಒಳಕೊಂಡಿರಬೇಕು. ಇಂಥ ಪುಸ್ತಕವನ್ನೇ ಪಠ್ಯ ಪುಸ್ತಕವನ್ನಾಗಿ ಉಪಯೋಗಿಸಬೇಕಲ್ಲದೆ ಬೇರೆ ಪುಸ್ತಕಗಳನ್ನು ಉಪಯೋಗಿಸಬಾರದು.

ಅಂಕಗಣಿತದ ಎರಡು ಪ್ರಶ್ನೆಗಳು

ಉದಾಹರಣೆಃ—(೧) ಒಬ್ಬ ಕುರುಬನಲ್ಲಿ ಎರಡು ಕುರಿಯ ಹಿಂಡುಗಳವೆ. ಮೊದಲನೇ ಹಿಂಡಿನಲ್ಲಿ ಎರಡನೇ ಹಿಂಡಿಗಿಂತ ೧೩ ಕುರಿಗಳು ಹೆಚ್ಚು ಅವೆ. ಮೊದಲನೇ ಹಿಂಡಿನೊಳಗಿನ ಒಂದು ಕುರಿಯ ಬೆಲೆಯು ೨ನೇ ಹಿಂಡಿನಲ್ಲಿರುವ ಕುರಿಗಳ ಸಂಖ್ಯೆಯಷ್ಟು ಆಣೆಗಳು; ೨ನೇ ಹಿಂಡಿನ ಒಂದು ಕುರಿಯ ಬೆಲೆಯು ಮೊದಲನೇ ಹಿಂಡಿನಲ್ಲಿರುವ ಕುರಿಗಳ ಸಂಖ್ಯೆಯಷ್ಟು ಆಣೆಗಳಂತೆ ಮಾರಲು ಅವನಿಗೆ ೨೧೦ ರೂ ಗಳು ಬಂದರೆ ಪ್ರತಿಯೊಂದು ಹಿಂಡಿನಲ್ಲಿದ್ದ ಕುರಿಗಳೆಷ್ಟು ?

ಉದಾಃ—(೨) ಒಂದು ಗುಡ್ಡದ ಮೇಲೆ ಐದು ಕೋಟಿಗಳವೆ. ಅದನ್ನು ಮುತ್ತಲು ಪರರಾಯರ ದಂಡು ಬರಲು ಮೊದಲನೇ ಕೋಟಿಯವನು ತನ್ನಲ್ಲಿದ್ದ ದಂಡಿನಷ್ಟೇ ಜನರನ್ನು ಸಹಾಯಕ್ಕೆ ಕೊಡಿರಿಂದು ಬಾಕಿ ಕೋಟಿಯವರನ್ನು ಕೇಳಲು ಅವರು ಅದರಂತೆ ಸಹಾಯಮಾಡಿದರು. ಆಗ ಶತ್ರುಗಳು ಅಂಜಿ ಎರಡನೇ

ಕೋಟೆಗೆ ಮುತ್ತಿಗೆಯನ್ನು ಹಾಕಿದರು. ಇವನೂ ಮೊದಲಿನವನಂತೆ ಸಹಾಯವನ್ನು ಉಳಿದ ನಾಲ್ವರಿಂದ ತಕ್ಕೊಂಡನು. ಇದರಂತೆ ಶತ್ರುಗಳು ಐದೂ ಕೋಟೆಗೆ ಬರಲು ಎಲ್ಲರೂ ಮೊದಲಿನವನಂತೆ ಸಹಾಯಕ್ಕೊಂಡು ಪರರಾಯರ ದಂಡನ್ನು ಓಡಿಸಿದರು. ಕಡೆಗೆ ನೋಡಲಾಗಿ ಪ್ರತಿಯೊಂದು ಕೋಟೆಯಲ್ಲಿ ಸರಿಯಾಗಿ ದಂಡಿದ್ದರೆ ಪ್ರತ್ಯೇಕ ಕೋಟೆಯಲ್ಲಿದ್ದ ಮೊದಲಿನ ಜನರೆಷ್ಟು ?

(೧) ಮಾರಾಟದ ನಾಣ್ಯಕ್ಕೆ ಕುರಿಬೆಲೆಯ ನಾಣ್ಯದ ರೂಪ ಕೊಟ್ಟು ಬಂದದ್ದರ ಎರಡಷ್ಟರಲ್ಲಿ ಹೆಚ್ಚಿನ ಕುರಿಯ ವರ್ಗ ಕೂಡಿಸಿ ಬಂದ ಬೇರೀಜಿನ ವರ್ಗ ಮೂಲ ತೆಗೆದರೆ ಒಟ್ಟು ಕುರಿಯ ಸಂಖೆಬರುವದು ∴ ೨೧೦ ರೂ. × ೧೬ = ೩೩೬೦ ಆಣೆ; ೩೩೬೦ × ೨ = ೬೭೨೦ ಹೆಚ್ಚಿನ ಕುರಿಯವರ್ಗ (೧೩ × ೧೩); ೧೬೯ ೬೭೨೦ + ೧೬೯ = ೬೮೮೯; ಇದರ (೮೩ × ೮೩)ರ ವರ್ಗಮೂಲ ೮೩. ೮೩ ಇದೇ ಒಟ್ಟು ಕುರಿಯಸಂಖೆ. ಇನ್ನು ಮೊದಲನೇ ಹಿಂಡಿನಲ್ಲಿ ೧೩ ಕುರಿ ಹೆಚ್ಚು ಅವೆ ಅವನ್ನು ತೆಗೆಯಲು (೮೩-೧೩) ಉಳಿದ ೭೦ ಕುರಿಯಲ್ಲಿ ೩೫ + ೧೩ = ೪೮ ಮೊ. ಹಿಂಡು. ೩೫ ಎರಡನೆಹಿಂಡು.

೪೮,೩೫ ಉತ್ತರ.

(೨) ಕೋಟೆಗಳ ಸಂಖ್ಯೆಗೆ ಅದರಷ್ಟೆ ಘಾತ ಮಾಡಿ ಬಂದ ಘಾತವನ್ನು ಕೋಟೆಗಳ ಸಂಖ್ಯೆಯಿಂದ ಭಾಗಿಸಿ ಬಂದ ಭಾಗಾಕಾರವನ್ನು ಘಾತದಲ್ಲಿ ಮಿಶ್ರ ಮಾಡಬೇಕು. ಈ ಪ್ರಕಾರ ಎಷ್ಟು ಕೋಟೆಗಳಿರುವವೋ ಅಷ್ಟುಸಾರೆ ಮಾಡಿದರೆ ಕಡೆಯ ಭಾಗಾಕಾರವೇ ಮೊದಲಿನ ಕೋಟೆಯೊಳಗಿನ ಜನರ ಸಂಖ್ಯೆ. ∴ ೫ × ೫ × ೫ × ೫ × ೫ × ೫ = ೩೧೨೫.

ಉತ್ತರ. (೧) ಅಹಿಮಕರ (೨) ಕೇವಗಿ.

೫) ೩೧೨೫ (೬೨೫ — ೧೨೯೬ ಮೊ ಕೋ. ಜನರು
+೬೨೫
೫) ೩೨೫೦ (೬೫೦ ಮೊ. ಕೋ. ೫ ೧೨೯೬+೧೦೮೦ = ೨೩೭೬ ಎ. ಕೋ. ಜನರು
+೨೫೦
೫) ೪೫೦೦ (೯೦೦ ಎ. ,, ,, ೨೩೭೬+ ೯೦೦ = ೩೨೭೬ ಮೂ. ಕೋ. ಜನರು
೯೦೦
೫) ೯೫೦೦ (೧೦೮೦ ಮೂ. ,, ,, ೩೨೭೬+ ೬೫೦ = ೪೦೨೬ ನಾ. ಕೋ. ಜನರು
೧೦೮೦
೫) ೧೮೦೦ (೧೨೯೬ ನಾ ,, ,, ೪೦೨೬+ ೬೨೫ = ೪೬೫೧ ಐ. ಕೋ. ಜನರು

ಗಜೇಂದ್ರಗಡ (ರೋಣ) } ಹ. ವೆ. ಸಂಗನಾಳ.
ಅ. ಮಾ.

ರಾಷ್ಟ್ರಕಾರ್ಯಕ್ಕಾಗಿ ಶಿಕ್ಷಕರ ಕರ್ತವ್ಯ.

ಲೇಖಕ:—ಸಂಗಮೇಶತನಯ, ಹುಬ್ಬಳ್ಳಿ.

ಬಡತನಕ್ಕೆ ಬೀಡಾವ ಹಿಂದುಸ್ತಾನದಿಂದ ಪ್ರತಿವರ್ಷ ಬಟ್ಟೆಗಳಿಗಾಗಿ, ಅರವತ್ತುಕೋಟಿ ರೂಪಾಯಿಗಳ ಪ್ರವಾಹವು ಪರದೇಶಕ್ಕೆ ಹರಿದು ಹೋಗುತ್ತದೆ ಈ ಪ್ರವಾಹವನ್ನು ತಡೆಯುವದಕ್ಕಾಗಿ ನಮ್ಮ ದೇಶದ ಮುಖಂಡರು ಅನೇಕ ರೀತಿಯಿಂದ ಪ್ರಯತ್ನ ಮಾಡುತ್ತಲಿರುವರು. ಅದರಂತೆ ರಾಷ್ಟ್ರದ ದಾರಿದ್ರ್ಯವನ್ನು ನೀಗುವದಕ್ಕಾಗಿ, ತನ್ನ ಕೈಲಾದ ಮಟ್ಟಿಗೆ ಸಾಹಸ ಪಡುವದು ಪ್ರತಿಯೊಬ್ಬ ಹಿಂದು ಪುತ್ರನ ಕರ್ತವ್ಯವಾಗಿದೆ.

" ಗುರುವಿನಂತೆ ಶಿಷ್ಯ " ನೆಂಬ ನಾಣ್ನುಡಿಯು ಪ್ರಸಿದ್ಧವಷ್ಟೇ? ಶಿಕ್ಷಕರ ಉಡುಪು ತೊಡಪುಗಳು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡದೆ ಬಿಡುವದಿಲ್ಲ ಅವರ ಲಕ್ಷ್ಯವು ಸ್ವಾಭಾವಿಕವಾಗಿ ಶಿಕ್ಷಕರ ಬಟ್ಟೆಗಳ ಕಡೆಗೆ ಹೋಗುವದು. ಹುಡುಗರು ಅನುಕರಣ ಪ್ರಿಯರೆಂಬದು, ಪ್ರತಿಯೊಬ್ಬ ಶಿಕ್ಷಕರಿಗೂ ಗೊತ್ತಿದ್ದ ಮಾತೇ ಸರಿ. ಕಾರಣ ವಿದ್ಯಾರ್ಥಿಗಳ ಅರ್ಥಾತ್ ಭಾವೀ ರಾಷ್ಟ್ರದ ಮಾರ್ಗದರ್ಶಕರಾದ ಶಿಕ್ಷಕರು ರಾಷ್ಟ್ರಕಲ್ಯಾಣಕ್ಕಾಗಿ ಖಾದಿಯ ಬಟ್ಟೆಗಳನ್ನು ಧರಿಸಬೇಕೆಂಬ ಮಾತನ್ನು ಒಡೆದು ಹೇಳುವ ಕಾರಣವಿಲ್ಲ. ಈ ಪ್ರಕಾರ ಖಾದಿಯ ವಸ್ತ್ರಗಳಿಂದ ಭೂಷಿತನಾದ ಶಿಕ್ಷಕನು ವಿದ್ಯಾರ್ಥಿಗಳಿಗೆ ಮಾದರಿಯ ಪುರುಷನೂ ಮಾರ್ಗದರ್ಶಕನೂ, ಆಗುವನೆಂಬದಕ್ಕೆ ಸಂದೇಹವಿಲ್ಲ. ಇಂಥ ಶಿಕ್ಷಕರು ವಿದ್ಯಾರ್ಥಿಗಳಿಗೆ ಖಾದಿಯನ್ನು ಧರಿಸಲಿಕ್ಕೆ ಹೇಳಿದರೆ ಅವರು ಆನಂದದಿಂದ ಧರಿಸುವರು.

ಆದರೆ, ಅರಂಭಕ್ಕೆ ಅಂಗಿ, ಚೊಣ್ಣ, ಟೊಪ್ಪಿಗೆಗಳನ್ನು, ಒಮ್ಮೆಲೆ ಕೊಳ್ಳಲು ಎಲ್ಲ ವಿದ್ಯಾರ್ಥಿಗಳಿಗೂ ಅನುಕೂಲ ವಾಗಲಿಕ್ಕಿಲ್ಲ. ಯಾಕಂದರೆ, ಕೆಲವರಿಗೆ ಮೊದಲು ಹೊಲಿಸಿದ ಅರಿವೆಗಳು ಇರುವಮಂಟು, ಕೆಲವರು ಬಡವರಿದ್ದು, ದೇಶೀ ಗಿರಣಿಯ ಅರಿವೆಗಳಿಗಿಂತ ಖಾದಿಯ ಉಡುಪುಗಳಿಗೆ ಹೆಚ್ಚು ಹಣಬೀಳುವದೆಂದು ಬಿಡಬಹುದು. ಆದರೆ ಶ್ರೀಮಂತರಿಂದ ಬಡವರ ವರೆಗೂ ಕಡಿಮೆ ಬೆಲೆಯ

ಸಬಲ ಶರೀರ–ಪ್ರಬಲ ವ್ಯಾಯಾಮ.

ಲೇಖಕರು:—ಬಿ. ವಿ. ಪುಟ್ಟ, ಮಾಸ್ತರರು, ಶಿವಳ್ಳಿ.

ಬಾಹ್ಯ ಹಾಗು ಆಂತರೀಯ ಆಘಾತಗಳನ್ನು ಸಹನ ಮಾಡಿಕೊಳ್ಳತಕ್ಕಂಥ ಸಶಕ್ತ ಶರೀರಕ್ಕೆ ಸಬಲ ಶರೀರವೆಂಬ ಸಜ್ಞೆಯು. ಇಂಥ ಶರೀರ ಸಂಪತ್ತ್ಯುದ್ದಾಯಕ ವ್ಯಾಯಾಮಕ್ಕೆ ಪ್ರಬಲ ವ್ಯಾಯಾಮವೆಂಬ ನಾಮವು. " ರೂಪ-ಲಾವಣ್ಯ-ಬಲ-ವಜ್ರಸಂಹನನತ್ವಾನಿ ಕಾಯಸಂಪತ್ " ಎಂಬ ಪಾತಂಜಲಿ ಸೂತ್ರ ಪ್ರಕಾರ ಸೌಂದರ್ಯ-ಕಾಂತಿ-ಶಕ್ತಿ-ವಜ್ರಸಮಾನ ಕಾಠಿಣ್ಯವಾದ ದೇಹವು ಕಾಯಸಂಪತ್ತಿನಿಸುವದು. ಇಂಥ ಮಾದರಿಯ ದೇಹವು ಆಬಾಲವೃದ್ಧ ಸ್ತ್ರೀಪುರುಷರಿಲ್ಲರಿಗೂ ಅತ್ಯಂತ ಅವಶ್ಯವು " ಬಲವಂತನೇ ಭಾಗ್ಯವಂತನು" ಎಂಬ ನುಡಿಯಂತೆ ಇಂಥವರೇ ನಿಜವಾದ ಸೌಭಾಗ್ಯ-ಸುಖವಂತರು. ಆದರೆ " ಆರೋಗ್ಯವಿಲ್ಲದವನ ಬಾಳು ಹಾಳು" ಎಂಬ ಗಾದೆಗನುಸರಿಸಿ ತನಗೆ ದೊರೆತ ವಿತ್ತವನಿತಾದಿ ಭೋಗ ವಸ್ತುಗಳಿಂದ ಭೋಗಪಡದೆ ನೆರಳುತ್ತ ಪ್ರಾಣ ಬಿಡುವನು. " ನಾಯಮಾತ್ಮಾ ಬಲಹೀನೇನ ಲಭ್ಯಃ " ಎಂಬ ಉಪನಿಷದ್ವಾಕ್ಯದ ಇಂಗಿತದ ಪ್ರಕಾರ ಮರಣಾಂತ್ಯದಲ್ಲಿ ಮೋಕ್ಷವೂ ಕೂಡಾ ದೊರೆಯದೆ ಹೋಗುವದು. " ದೇವೋ ದುರ್ಬಲ ಘಾತಕಃ " ಎಂಬ ಮುನಿಮತದಂತೆ ಈಶನ ಕೋಪಾಗ್ನಿಗೆ ಆಹುತಿಯಾಗಿ ಜನನ-ಮರಣ ರಾಟಾಳದಲ್ಲಿ ಸುತ್ತಿರುಗುವನು. ಈ ಎಲ್ಲ ಕಾರಣಗಳ ಮೂಲಕ ವಿತ್ತವನಿತಾದಿ ಭೋಗ ವಸ್ತುಗಳನ್ನು ಕಾಪಾಡಲು ಬೇಕಾದಷ್ಟು ಸಾಧನ ಸಾಮಗ್ರಿಗಳಿದ್ದರೂ ಸಹ ಅವುಗಳ ಮೇಲೆ ಭಾರ ಹಾಕಿ ಕೈಮುಚ್ಚಿಕೊಂಡು ಕೂಡ್ರಬಾರದೆಂದು " ಬಾಣವಿದ್ದರೂ ತ್ರಾಣವಿರಬೇಕೆಂಬ " ಗಾದೆಯು ಬೋಧಿಸುವದು.

ಈ ಬೋಧನ ಧ್ವನಿಗೆ ಮೆಚ್ಚಿ ಶರೀರಸಂಪತ್ತನ್ನು ಸಂಪಾದಿಸಲುಪಕ್ರಮಿಸಹತ್ತಲು ಹಲವು ವಿಘ್ನಗಳು ಬರುವದು ಸಹಜ. ಆಗ ಸಹ ಶರೀರಸಂಪತ್ತು ಸಂಪಾದನೆಗೆ ಅಡ್ಡ ಬರುವ ವಿಘ್ನಗಳನ್ನು ತುಂಡರಿಸಬೇಕು. " ಸರ್ವಮನ್ಯತ್ ಪರಿತ್ಯಜ್ಯ ಶರೀರಮನು ಪಾಲಯೇತ್ " ಎಂಬ ನುಡಿಯಂತೆ ಶರೀರವನ್ನು ಚನ್ನಾಗಿ ರಕ್ಷಿಸಿರಬೇಕು. ಮತ್ತು ಆಗುವ ಹಾನಿ-ವೃದ್ಧಿ ಸಹ ಲಕ್ಷಿಸಬಾರದು. ಜಗತ್ತಿನಲ್ಲಿ ಜೀವವು ಅತ್ಯಂತ ಪ್ರೀಯವಾದದ್ದು. " ಶರೀರ ರಕ್ಷತೋ ಧರ್ಮಃ'

ರಾಷ್ಟ್ರಕಾರ್ಯಕ್ಕಾಗಿ ಶಿಕ್ಷಕರ ಕರ್ತವ್ಯ.

ಲೇಖಕ.—ಸಂಗಮೇಶತನಯ, ಹುಬ್ಬಳ್ಳಿ.

ಬಡತನಕ್ಕೆ ಬೀಡಾದ ಹಿಂದುಸ್ತಾನದಿಂದ ಪ್ರತಿವರ್ಷ ಬಟ್ಟೆಗಳಿಗಾಗಿ, ಅರವತ್ತು ಕೋಟಿ ರೂಪಾಯಿಗಳ ಪ್ರವಾಹವು ಪರದೇಶಕ್ಕೆ ಹರಿದು ಹೋಗುತ್ತದೆ ಈ ಪ್ರವಾಹವನ್ನು ತಡೆಯುವದಕ್ಕಾಗಿ ನಮ್ಮ ದೇಶದ ಮುಖಂಡರು ಅನೇಕ ರೀತಿಯಿಂದ ಪ್ರಯತ್ನ ಮಾಡುತ್ತಲಿರುವರು. ಅದರಂತೆ ರಾಷ್ಟ್ರದ ದಾರಿದ್ರ್ಯವನ್ನು ನೀಗುವದಕ್ಕಾಗಿ, ತನ್ನ ಕೈಲಾದ ಮಟ್ಟಿಗೆ ಸಾಹಸ ಪಡುವದು ಪ್ರತಿಯೊಬ್ಬ ಹಿಂದು ಪುತ್ರನ ಕರ್ತವ್ಯವಾಗಿದೆ.

" ಗುರುವಿನಂತೆ ಶಿಷ್ಯ " ನೆಂಬ ನಾಣ್ನುಡಿಯು ಪ್ರಸಿದ್ಧವಷ್ಟೇ? ಶಿಕ್ಷಕರ ಉಡುಪು ತೊಡಪುಗಳು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡದೆ ಬಿಡುವದಿಲ್ಲ ಅವರ ಲಕ್ಷ್ಯವು ಸ್ವಾಭಾವಿಕವಾಗಿ ಶಿಕ್ಷಕರ ಬಟ್ಟೆಗಳ ಕಡೆಗೆ ಹೋಗುವದು. ಹುಡುಗರು ಅನುಕರಣ ಪ್ರಿಯರೆಂಬದು, ಪ್ರತಿಯೊಬ್ಬ ಶಿಕ್ಷಕರಿಗೂ ಗೊತ್ತಿದ್ದ ಮಾತೇ ಸರಿ. ಕಾರಣ ವಿದ್ಯಾರ್ಥಿಗಳ ಅರ್ಥಾತ್ ಭಾವೀ ರಾಷ್ಟ್ರದ ಮಾರ್ಗದರ್ಶಕರಾದ ಶಿಕ್ಷಕರು ರಾಷ್ಟ್ರಕಲ್ಯಾಣಕ್ಕಾಗಿ ಖಾದಿಯ ಬಟ್ಟೆಗಳನ್ನು ಧರಿಸಬೇಕೆಂಬ ಮಾತನ್ನು ಒಡೆದು ಹೇಳುವ ಕಾರಣವಿಲ್ಲ. ಈ ಪ್ರಕಾರ ಖಾದಿಯ ವಸ್ತ್ರಗಳಿಂದ ಭೂಷಿತನಾದ ಶಿಕ್ಷಕನು ವಿದ್ಯಾರ್ಥಿಗಳಿಗೆ ಮಾದರಿಯ ಪುರುಷನೂ ಮಾರ್ಗದರ್ಶಕನೂ, ಆಗುವನೆಂಬದಕ್ಕೆ ಸಂದೇಹವಿಲ್ಲ. ಇಂಥ ಶಿಕ್ಷಕರು ವಿದ್ಯಾರ್ಥಿಗಳಿಗೆ ಖಾದಿಯನ್ನು ಧರಿಸಲಿಕ್ಕೆ ಹೇಳಿದರೆ ಅವರು ಆನಂದದಿಂದ ಧರಿಸುವರು.

ಆದರೆ, ಅರಂಭಕ್ಕೆ ಅಂಗಿ, ಚೊಣ್ಣ, ಟೊಪ್ಪಿಗೆಗಳನ್ನು, ಒಮ್ಮೆಲೆ ಕೊಳ್ಳಲು ಎಲ್ಲ ವಿದ್ಯಾರ್ಥಿಗಳಿಗೂ ಅನುಕೂಲ ವಾಗಲಿಕ್ಕಿಲ್ಲ. ಯಾಕಂದರೆ, ಕೆಲವರಿಗೆ ಮೊದಲು ಹೊಲಿಸಿದ ಅರಿವೆಗಳು ಇರುವಮಂಟು, ಕೆಲವರು ಬಡವರಿದ್ದು, ದೇಶೀ ಗಿರಣಿಯ ಅರಿವೆಗಳಿಗಿಂತ ಖಾದಿಯ ಉಡುಪುಗಳಿಗೆ ಹೆಚ್ಚು ಹಣಬೀಳುವದೆಂದು ಬಿಡಬಹುದು. ಆದರೆ ಶ್ರೀಮಂತರಿಂದ ಬಡವರ ವರೆಗೂ ಕಡಿಮೆ ಬೆಲೆಯ

ಸಬಲ ಶರೀರ–ಪ್ರಬಲ ವ್ಯಾಯಾಮ.

ಲೇಖಕರು:—ಬ. ವಿ. ಮುಠ, ಮಾಸ್ತರರು, ಶಿವಳ್ಳಿ.

ಬಾಹ್ಯ ಹಾಗು ಆಂತರೀಯ ಆಘಾತಗಳನ್ನು ಸಹನ ಮಾಡಿಕೊಳ್ಳತಕ್ಕಂಥ ಸಶಕ್ತ ಶರೀರಕ್ಕೆ ಸಬಲ ಶರೀರವೆಂಬ ಸಜ್ಞೆಯು. ಇಂಥ ಶರೀರ ಸಂಪತ್ತ್ಯುದ್ದಾಯಕ ವ್ಯಾಯಾಮಕ್ಕೆ ಪ್ರಬಲ ವ್ಯಾಯಾಮವೆಂಬ ನಾಮವು. " ರೂಪ-ಲಾವಣ್ಯ-ಬಲ-ವಜ್ರಸಂಹನನತ್ವಾನಿ ಕಾಯಸಂಪತ್ " ಎಂಬ ಪಾತಂಜಲಿ ಸೂತ್ರ ಪ್ರಕಾರ ಸೌಂದರ್ಯ-ಕಾಂತಿ-ಶಕ್ತಿ-ವಜ್ರಸಮಾನ ಕಾಠಿಣ್ಯವಾದ ದೇಹವು ಕಾಯಸಂಪತ್ತಿನಿಸುವದು. ಇಂಥ ಮಾದರಿಯ ದೇಹವು ಆಬಾಲವೃದ್ಧ ಸ್ತ್ರೀಪುರುಷರೆಲ್ಲರಿಗೂ ಅತ್ಯಂತ ಅವಶ್ಯವು " ಬಲವಂತನೇ ಭಾಗ್ಯವಂತನು " ಎಂಬ ನುಡಿಯಂತೆ ಇಂಥವರೇ ನಿಜವಾದ ಸೌಭಾಗ್ಯ-ಸುಖವಂತರು. ಆದರೆ " ಆರೋಗ್ಯವಿಲ್ಲದವನ ಬಾಳು ಹಾಳು " ಎಂಬ ಗಾದೆಗನುಸರಿಸಿ ತನಗೆ ದೊರೆತ ವಿತ್ತವನಿತಾದಿ ಭೋಗ ವಸ್ತುಗಳಿಂದ ಭೋಗಪಡದೆ ನೆರಳುತ್ತ ಪ್ರಾಣ ಬಿಡುವನು. " ನಾಯಮಾತ್ಮಾ ಬಲಹೀನೇನ ಲಭ್ಯಃ " ಎಂಬ ಉಪನಿಷದ್ವಾಕ್ಯದ ಇಂಗಿತದ ಪ್ರಕಾರ ಮರಣಾಂತ್ಯದಲ್ಲಿ ಮೋಕ್ಷವೂ ಕೂಡಾ ದೊರೆಯದೆ ಹೋಗುವದು. " ದೇವೋ ದುರ್ಬಲ ಘಾತಕಃ " ಎಂಬ ಮುನಿಮತದಂತೆ ಈಶನ ಕೋಪಾಗ್ನಿಗೆ ಆಹುತಿಯಾಗಿ ಜನನ-ಮರಣ ರಾಟಾಳದಲ್ಲಿ ಸುತ್ತಿರುಗುವನು. ಈ ಎಲ್ಲ ಕಾರಣಗಳ ಮೂಲಕ ವಿತ್ತವನಿತಾದಿ ಭೋಗ ವಸ್ತುಗಳನ್ನು ಕಾಪಾಡಲು ಬೇಕಾದಷ್ಟು ಸಾಧನ ಸಾಮಗ್ರಿಗಳಿದ್ದರೂ ಸಹ ಅವುಗಳ ಮೇಲೆ ಭಾರ ಹಾಕಿ ಕೈಮುಚ್ಚಿಕೊಂಡು ಕೂಡ್ರಬಾರದೆಂದು " ಬಾಣವಿದ್ದರೂ ತ್ರಾಣವಿರಬೇಕೆಂಬ " ಗಾದೆಯು ಬೋಧಿಸುವದು.

ಈ ಬೋಧನ ಧ್ವನಿಗೆ ಮೆಚ್ಚಿ ಶರೀರಸಂಪತ್ತನ್ನು ಸಂಪಾದಿಸಲುಪಕ್ರಮಿಸಹತ್ತಲು ಹಲವು ವಿಘ್ನಗಳು ಬರುವದು ಸಹಜ. ಆಗ ಸಹ ಶರೀರಸಂಪತ್ತು ಸಂಪಾದನೆಗೆ ಅಡ್ಡ ಬರುವ ವಿಘ್ನಗಳನ್ನು ತುಂಡರಿಸಬೇಕು. " ಸರ್ವಮನ್ಯತ್ ಪರಿತ್ಯಜ್ಯ ಶರೀರಮನು ಪಾಲಯೇತ್ " ಎಂಬ ನುಡಿಯಂತೆ ಶರೀರವನ್ನು ಜನ್ಮಾಗಿ ರಕ್ಷಿಸಿರಬೇಕು. ಮತ್ತು ಆಗುವ ಹಾನಿ-ವೃದ್ಧಿ ಸಹ ಲಕ್ಷಿಸಬಾರದು. ಜಗತ್ತಿನಲ್ಲಿ ಜೀವವು ಅತ್ಯಂತ ಪ್ರೀಯವಾದದ್ದು. " ಶರೀರ ರಕ್ಷತೋ ಧರ್ಮಃ "

ಎಂಬ ಧರ್ಮ ಶಬ್ದಾರ್ಥದಂತೆ ಶರೀರವನ್ನು ರಕ್ಷಿಸುವದು ಧರ್ಮವಾಗಿದೆ. "ಧರ್ಮೋ ರಕ್ಷಿತ ರಕ್ಷಿತಃ" ಎಂಬ ವಿಧಿವಾಕ್ಯಗನುಸರಿಸಿ ಶರೀರವನ್ನು ರಕ್ಷಿಸಿದ್ದಾದರೆ ಶರೀರವು ಸಂಸಾರ-ಸನ್ಯಾಸ ಮಾರ್ಗದಲ್ಲಿಯ ಎಡರುಗಳನ್ನು ನಾಶ ಮಾಡಿ ಜೀವನನ್ನು ರಕ್ಷಿಸುವದು; ಒಂದು ವೇಳೆ ಆಲಸ್ಯ-ಅಜ್ಞಾನಗಳ ಮೂಲಕ ಶರೀರಸಂಪತ್ತು ಸಂರಕ್ಷಿಸದಿದ್ದರೆ, "ಧರ್ಮೋಹಂತಿ ಹತಃ" ಎಂಬ ಗೀರ್ವಾಣೋಕ್ತಿಗನುಸರಿಸಿ ಧರ್ಮಲಂಡರ ನಾಶವಾಗುವದು ನಿಶ್ಚಯ. ತಾನು ಮುಳುಗಿದ ಬಳಿಕ ಮೂರು ಲೋಕ ಮುಳುಗಿದರೇನು, ತೇಲಿದರೇನು?

ಪರಮಾತ್ಮನು ನಮಗಿತ್ತ ಅಮೌಲ್ಯ ಅತುಲ್ಯವಾದ ವಸ್ತುಗಳಲ್ಲಿ ಶರೀರದಂಥ ವಸ್ತು ಮತ್ತೊಂದಿಲ್ಲ. ಇದರಿಂದಲೇ ಭೋಗ-ಮೋಕ್ಷ ಸುಖ-ಸಂಪತ್ತುಗಳು. ಶರೀರವಿಲ್ಲದ ಆತ್ಮನು ತಾನೇ ಏನೂ ಮಾಡನು?

ಈ ಮೇಲೆ ಕೊಟ್ಟ ಸಬಲ-ದುರ್ಬಲ ಶರೀರಗಳಿಗೆ ಹತ್ತುವ ಎಲ್ಲ ಲಾಭ ಹಾನಿಗಳು ಕ್ರಮವಾಗಿ ಕುಟುಂಬ-ಸಮಾಜ-ರಾಷ್ಟ್ರಗಳಿಗೂ ಹತ್ತುವವು ನೋಡಿರಿ! ಎಲ್ಲಿಯವರೆಗೆ ಭಾರತ ಭೂಮಿಯಲ್ಲಿ ಭೀಮ, ರಾಮ-ಬಲಭೀಮರಂಥ ವೀರಾಧಿವೀರರಿದ್ದರೋ ಅಲ್ಲಿಯವರೆಗೆ ಸ್ವಾತಂತ್ರ್ಯ, ಸುಖ, ಶಾಂತಿ, ಸಕಲ ಸಂಪತ್ತುಗಳು ತುಂಬಿ ತುಳುಕುತ್ತಿದ್ದವು. ಇವರ ಮುಂದಿನವರು ಪೂರ್ವಿಕರು ಗಳಿಸಿಟ್ಟ ಸ್ಥಾವರ ಜಂಗಮ ಆಸ್ತಿಗಳಲ್ಲಿ ಮಗ್ನರಾಗಿ ಮುಂದಾಲೋಚನೆಯಿಲ್ಲದೆ, ಕಾಲ ಕಳೆಯ ಹತ್ತಲು ಅಶಕ್ತರಾದರು. ಇವರಲ್ಲಿ ಜಿಗಟು ಹಾರಿದ್ದನ್ನು ಕಂಡು ಉತ್ತರದ ಜಳಿನಾಡಿನ ಗಟ್ಟಿಗರು ಈ ದೇಶವನ್ನು ಅಭಿಗಮಿಸಿ ಎಲ್ಲ ಐಶ್ವರ್ಯವನ್ನೂ ಎತ್ತಿಕೊಂಡು ಒಳಹತ್ತಿದರು.

ಇಂಗ್ಲಂಡವು ಇಷ್ಟೊಂದು ಉಚ್ಚ ಸ್ಥಾನ ಪಡೆದದ್ದು ಆದೇಶಕ ವ್ಯಾಯಾಮ ಆಟಗಳೇ ಕಾರಣವೆಂದು ಅಲ್ಲಿಯ ಸುಪ್ರಸಿದ್ಧ ಮುತ್ಸದ್ದಿಗಳ ಮತ. ಈ ಬಗ್ಗೆ ಅವರು ಹಲವು ಹಂಚಿಕೆಗಳನ್ನೂ ಹಾಕಹತ್ತಿರುವರು. ಪೂರ್ವದ ಪ್ರಾಬಲ್ಯವನ್ನು ಪಡೆಯಲಿಕ್ಕೆ ಭಾರತೀಯರ ಶರೀರಸಂಪತ್ತೇ ಕಾರಣವೆಂಬದನ್ನು ಪುನಃ ಪುನಃ ಹೇಳಬೇಕಾಗಿಲ್ಲ ಎಲ್ಲಿ ಎತ್ತ ನೋಡಿದತ್ತ ಆರೋಗ್ಯದೇವತೆಗೆ ಗೋಳಾಟವೂ ಅನಾರೋಗ್ಯ ದೇವತೆಗೆ ಚಲ್ಲಾಟವೂ ವೈದ್ಯರಿಗೆ ಮೋಜಾಟವೂ ರೋಗಿಗಳಿಗೆ ಧನದ ಲೂಟಿಯೂ ನಡೆಯುತ್ತಿರುವದೋ ಅಲ್ಲಿ ಸ್ವರಾಜ್ಯ-ಸುರಾಜ್ಯಗಳಿಗೆ ಆಶ್ರಯವೆತ್ತ? ಶರೀರಸಂಪತ್ತೆಂಬ ಸೂರ್ಯನುದಿಸಿದರೆ ಪಾರತಂತ್ರ್ಯದ ಕತ್ತಲೆಯು ತಾನೇ ಅಳಿಯುವದು.

"ಜ್ಞಾನ-ತಪ-ಅಗ್ನಿ-ಆಹಾರ-ಮಣ್ಣು-ಮನಸ್ಸು-ನೀರು-ಗಂಧಾದಿ ಲೇಪನ ದ್ರವ್ಯಗಳು-ಗಾಳಿ-ಕರ್ಮ-ಅರ್ಕ-ಮಂಗಲ ಕಾಲಗಳೇ" ಶರೀರ ಶುದ್ಧೀಕರಣಾಂಗ

ಗಳು. ಇವುಗಳ ನೆರವಿನಿಂದ ಶರೀರದಲ್ಲಿ ಸಂಗ್ರಹವಾದ ವಿಜಾತಿಯ ದ್ರವ್ಯಗಳು ಲಯವಾಗಿ, ಶರೀರಪೋಷಕ ಧಾತು ದ್ರವ್ಯಗಳು ಸಂಗ್ರಹವಾಗುವವು. ಇವುಗಳ ಲ್ಲೆಲ್ಲ ಕರ್ಮಾರ್ಧದಲ್ಲಿ ಅಡಕಾಗುವ ಯೌಗಿಕ ಬಲವರ್ಧಕ ಕರ್ಮವೆಂದರೆ ಪ್ರಬಲ ವ್ಯಾಯಾಮವೇ ಶ್ರೇಷ್ಠವೆಂದು ನಾವು ಹೇಳುವೆವು. ಇಂಥ ವ್ಯಾಯಾಮ ಪರಿ ಪೂರ್ಣ ವಿಚಾರಪರಿಪೂರಿತ ಸ್ವತಂತ್ರ ಗ್ರಂಥಗಳು ಕನ್ನಡದಲ್ಲಿ ಇಲ್ಲವಾದ್ದರಿಂದ ನಾವೊಂದು *ವಜ್ರ-ಶರೀರ-ಶಿಕ್ಷಕ ಎಂಬ ಗ್ರಂಥವನ್ನು ಬರೆದಿರುವೆವು. ಕಾರಣ ವ್ಯಾಯಾಮ ಪ್ರೇಮಿಗಳು ಇದನ್ನು ಅವಶ್ಯವಾಗಿ ಸಂಗ್ರಹಿಸಬೇಕು ಅಸ್ತು! ಇನ್ನು ವ್ಯಾಯಾಮ ವಿಷಯದ ದಿಗ್ದರ್ಶನವನ್ನು ಇಲ್ಲಿ ಮಾಡಿ ಈ ವಿಷಯವನ್ನು ಪರಿಸಮಾಪ್ತಗೊಳಿಸುವಾ.

ವ್ಯಾಯಾಮಾಲ್ಲಭತೇ ಆಯುರ್ಬಲಂ ವೀರ್ಯಂ ಪರಾಕ್ರಮಂ।
ಶಾಂತಿ ಪುಷ್ಟಿಂ ಧೃತಿಂ ಕಾಂತಿ ಚಿರಾರೋಗ್ಯಂ ನ ಸಂಶಯಃ ॥ ೧ ॥

"ವ್ಯಾಯಾಮದಿಂದ ಆಯುಷ್ಯವು ಅಭಿವೃದ್ಧಿಸುವದು. ಬಲವು ಬೆಳೆಯುವದು. ಶುಕ್ಲ ಸಮೃದ್ಧಿಸುವದು ಪರಾಕ್ರಮವು ಪ್ರಬಲಿಸುವದು. ಶಾಂತಿ ಸೂಸುವದು. ಕಾಂತಿ ಕಳೆಯೇರುವದು. ಧೈರ್ಯ ದೊಡ್ಡದಾಗುವದು. ಆರೋಗ್ಯವು ಆರೋಹಣಗೊಳ್ಳುವದು". ಪುಪ್ಪುಸಾದಿ ಅಂತರಿಂದ್ರಿಯಗಳು ಸುಖಗೊಳ್ಳುವವು. ತಾರುಣ್ಯವು ನೆಲಿಸಿ ನಿಲ್ಲುವದು. ಮುಪ್ಪು ಮರಿಮಾಜುವದು. ಕ್ಷಯಾದಿ ತ್ರಿದೋಷಗಳುಂಟಾಗುವವು. ಮನಸ್ಸು ಸತೇಜವಾಗುವದು. ಪ್ರಾಣವಾಯುವಿನ ಸಂಗ್ರಹವು ಹೆಚ್ಚುವದು. ರಜ-ವೀರ್ಯಕಣಗಳು ಬೆಳೆದು ಉತ್ತಮ ಸಂತಾನಕ್ಕೆ ಆಶ್ರಯವಾಗುವವು ಮಲಮೂತ್ರಗಳ ಕಾರ್ಯವು ಸುರಳೀತವಾಗುವದು.

"ಹಸ್ತಿ ಬಲಾದಿನಿ ಬಲೀಷು" ಎಂಬ ಸೂತ್ರ ಪ್ರಕಾರ ಎಂಥ ಅಶಕ್ತನಿದ್ದರೂ ಆನೆ-ಸಿಂಹಗಳಂತೆ ಪ್ರಬಲವಾನ್‌ನಾಗಲು ಸಂದೇಹವಿಲ್ಲ. ಅಂತೆಯೇ ಮೋಷಾತ್ಮರ ಶಿಕ್ಷಣದ ಸೆಳವಿನಲ್ಲಿ ಸಿಕ್ಕು ಶಕ್ತಿಹೀನರಾಗಿದ್ದ ಸ್ವಾಮಿ ರಾಮತೀರ್ಥರು ಪ್ರಬಲ ವ್ಯಾಯಾಮದ ಆಶ್ರಯದಿಂದ ಅಕಳುಗಳನ್ನು ಹೊತ್ತುಕೊಂಡು

---

* ಈ ಗ್ರಂಥದ ಬಗ್ಗೆ ಡಾಕ್ಟರ ಸಿ ಎಸ್. ಪಾಟೀಲ, ಎಲ್. ಎಂ. ಆ್ಯಂಡ ಎಸ್. ರವರು ಪಟ್ಟ ಅಭಿಪ್ರಾಯವು—"ಬ. ವಿ. ಮಠದರವರಿಂದ ಬರೆಯಲ್ಪಟ್ಟ ವಜ್ರ ಶರೀರ ಶಿಕ್ಷಕವೆಂಬ ಗ್ರಂಥದ ಹಸ್ತಪತ್ರಿಕೆಯನ್ನು ಅವಲೋಕಿಸಿದೆನು. ಈ ಗ್ರಂಥವು ಶಾರೀರಿಕ, ಮಾನಸಿಕ ಶಕ್ತಿಗಳನ್ನು ಅಭಿವೃದ್ಧಿಗೊಳ್ಳಬೇಕೆನ್ನುವವರಿಗೆ ಬಹಳೇ ಉಪಯೋಗವಾಗುವದು. ಗ್ರಂಥಕರ್ತರು ಸ್ವಾನುಭವದ ನಂತರವೇ ಇದನ್ನು ಬರೆದಿದ್ದಾರೆ ಕಾರಣ ಸಾಧನ ಮಾಡಲಿಕ್ಕೂ, ಅಭ್ಯಾಸ ಮಾಡಲಿಕ್ಕೂ ತಕ್ಕದ್ದಾಗಿದೆ" ಎಂದು ಆಂಗ್ಲ ಭಾಷೆಯಲ್ಲಿ ಯೋಗ್ಯತಾ ಪತ್ರ ಬರೆದು ಕೊಟ್ಟಿರುವರು.— ಇಷ್ಟೇ ಅಲ್ಲದೆ ನೂರು ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟಿರುವರು.

ಹಿಮಾಲಯದ ಹಿಮನದಿಯನ್ನು ದಾಟಿ ನಮ್ಮೆಲ್ಲರಿಗೆ ಅನುಕರಣೀಯ ಪುರುಷರಾದರು. ಇವರು ಸ್ವರ್ಗವಾಸಿಗಳಾಗುವ ಪೂರ್ವದ ಎರಡು ತಾಸಿನಲ್ಲಿ ವ್ಯಾಯಾಮ ಮಾಡಿದ್ದರು.

ಸ್ವಾಮಿ ವಿವೇಕಾನಂದರು :—" ಗೀತೆಯ ಅಭ್ಯಾಸಕ್ಕಿಂತಲೂ ಫುಟ್ಬಾಲದ ಆಟದಿಂದ ಸ್ವರ್ಗವು ಹೆಚ್ಚು ಸಮೀಪಿಸುವದೆಂದು ಹೇಳಿರುವರು.

ಕಲಿಭೀಮ ಪ್ರೋ. ಪಿ. ಪಲನಿಮೂರ್ತಿಗಳು :—ವ್ಯಾಯಾಮ ವಿದ್ಯಾಸ್ವಸಾರವೇ ತಮ್ಮ ಧ್ಯೇಯವೆಂದು ತಿಳಿದು ದೇಶದಲ್ಲಿ ಸಂಚರಿಸುತ್ತಿರುವರು. ಇವರು ತಮ್ಮ ವಯಸ್ಸಿನ ೧೭ರಲ್ಲಿ ೪ ಸಾವಿರ ಪೌಂಡ ಭಾರವನ್ನು ಉಯ್ಯಾಲಿ ಆಡಿಸಿದರು. ಇವರ ಶಿಷ್ಯನಾದ ಕರ್ನಾಟಕ ಕಲಿ ಬಾಲಬಲಭೀಮ ಸದಾಶಿವ ರಾಶಿಯು ೧೪ನೆಯ ವಯಸ್ಸಿನಲ್ಲಿ ಇವನಂತೆ ನಾಲ್ಕು ಸಾವಿರ ಪೌಂಡು ಭಾರವಾದ ಕಲ್ಲನ್ನು ಎದೆಯ ಮೇಲೆ ಹೇರಿಸಿಕೊಂಡು ಮೂರು ಜನ ಬಲವಾದ ಪೈಲವಾನರ ಸುತ್ತಿಗೆಯಿಂದ ಕಲ್ಲನ್ನು ಒಡೆಯಿಸಿಕೊಳ್ಳುವದು, ಮೋಟಾರ ನಿಲ್ಲಿಸುವದು, ಸರಪಳಿ ಹರಿಯುವದೂ ಮೊದಲಾದ ಅತ್ಯದ್ಭುತ ದಿವ್ಯ ಶಕ್ತಿಯ ಸಾಹಸಗಳನ್ನು ಮಾಡಿ ತೋರಿಸುತ್ತಿರುವನು.

ಈ ಚಿತ್ರವು ಶ್ರೀ ಬಾಲಶ್ಯಾಂಡು ಸದಾಶಿವರಾಶಿ ಹಳ್ಳಿಗುಡಿ ಈತನು ಹದಿನಾಲ್ಕನೆಯ ವಯಸ್ಸಿನಲ್ಲಿ ಮೋಟಾರ ನಿಲ್ಲಿಸಿದುದನ್ನು ತೋರಿಸುವದು. ಈಗ



ಎರಡು ಮೋಟಾರ ಏಕಕಾಲಕ್ಕೆ ನಿಲ್ಲಿಸುವನು. ಸದ್ಯದ ಪ್ರಪಚಂಚದಲ್ಲಿ ಇವ ನಂಥ ಬಾಲಶ್ಯಾಂಡೂ ಯಾರೂ ಇಲ್ಲ.

ಅಕ್ಕು ! ಜಗದ್ವಂದ್ಯ ವ್ಯಾಯಾಮ ವಿಭುಗಳು ನಮ್ಮ ಕರ್ನಾಟಕ ಭೂಮಿ ಯಲ್ಲಿ ! ಹಿಂದೂ ಮಾತೆಯ ಉದರದಲ್ಲಿ !! ವಜ್ರ ಶರೀರ ಶಿಕ್ಷಕನು ಪ್ರವೇಶಿಸಿದ ಗೃಹಗಳಲ್ಲಿ !!!

ಜಯ ಬಲಭೀಮ ಸಮರ್ಥ.

ಭದ್ರಂ ! ಶುಭಂ !! ಮಂಗಲಂ !!!

ತಿಳಿಗನ್ನಡಂಗೆಲ್ಗೆ.

ಇಂಗ್ಲಿಷ ಕಲಿಯುವ ಹುಡುಗ : —

॥ ಭಾಮಿನಿ ॥

ಕಂದನಿಗೆ ಕಲಿಸುತ್ತ ಮಾಂಗ್ಲವ ।
ನಿಂದಿಗೇಳ್‌ಬೆಳೆ ಮುಗಿದು ಪೋದುವು ।
ಎಂದು ಬರುವನೊ ಕಾಂಬೆನೆಂದೋ ಮಗನ ಮೋರೆಯನು ॥

ಇಂದು ಪೋಗುತ ಧಾರವಾಡಕೆ ।
ಕಂದನಂ ಕಾಣುತ್ತೆ ನಲುವಂ ।
ಪೊಂದುವೆನು ತಾನೆಂದು ಹೊರಟನಪೂರ್ವನೊಕ್ಕಲಿಗಂ ॥ ೧ ॥

ಉರಟು ಬಟ್ಟೆಯನುಟ್ಟು ತೊಟ್ಟಿಹ ।
ಹರಕು ಕೋರಿಯ ಬಗಲೊಳಿಟ್ಟಿಹ ।
ನರೆಯ ಕೂದಲ ಮುದುಕನೊತ್ತರದಿಂದ ಮಗನೆಡೆಗೆ ॥

ಹೊರಟು ಬಂದನು ಮಗನು ಕೋಣೆಯೊ ।
ಳಿರುತ ಕಂಡನು ಮೈಗುಡಿಗಳಿ ।
ದ್ದಿರುವ ಬಲುನಲ್ಮೆಯೊಳು ನೋಡುತ ನಿಂತನವನಿದಿರ್ಗೆ ॥ ೨ ॥

ಅಲ್ಲಿ ನೋಡಿದಡಾರ ಕಯ್ಯೊಳ ।
ಗಿಲ್ಲ ವೋಲೆಯ ಕಟ್ಟು ಕನ್ನಡಿ[೧] ।
ಯಲ್ಲಿ ನೋಡುತ ಕುರುಳ ತೀಡುತ ಕತ್ತರಿಸಿಕೊಳುತ ॥

ಒಳ್ಳಿ ಕಂಪುಳ್ಳಿಣ್ಣೆ ಪೂಸುತ ।
ಬಿಳ್ಪರಿವೆಗಳನುಡುತ ಪಡುವಣ ।
ದಳ್ಳುರಿಯೊಲಿಗೆ ಜಹವ ಕಾಸುತ ಕುಡಿವರನೆ ಕಂಡ[೨] ॥ ೩ ॥

ತಂದೆ ಬಂದನೆಯೆನ್ನ ಮೇಲ್ಮೈಗೆ ।
ಕುಂದ ತಂದನೆ ಹರಕರಿನೆಯಿಂ ।
ನೊಂದೆನೆನ್ನಂ ಗೆಳೆಯರೆಣಿಪರು ಬಡವರೊಳಗೆನುತ ॥

ತಂದೆಯಿವನಲ್ಲೆಮ್ಮ ಮನೆಯಾ ।
ಳಿಂದು ವೇಳುತ ಬಂದ ಕುತ್ತಿನೊ ।
ಳಿಂದು ದಾಂಟುವೆನೆಂದುಬಗೆಯೊಳು ನೆನೆದನಾಮಗನು ॥ ೪ ॥

ಗೆಳೆಯರಿವನಾರೆಂದು ಮಗನಂ ।
ಕಲಿಯುವಿಂಗ್ಲಿಷದಿಂದ ಕೇಳಲು ।
ಹೊಲಮನೆಯ ದುಡಿವಾಳು ಬಿಡಿರೆಂದುತ್ತರವನವರ್ಗೆ ॥

ಸಲಿಸಿ ಕೆಲಸಕೆ ಹೊರಗೆ ಹೋದನು ।
ಗೆಳೆಯರಾಮುದುಕನಿಗೆ ನಮ್ಮಯ ।
ಗೆಳೆಯನೀವನದೆಷ್ಟು ತಲಬನ್ನೆಂದು ಕೇಳಿದರು ॥ ೫ ॥

ಇವನು ತಲಬನ್ನೀಕೆ ಕೊಡುವನು ? ।
ಇವನ ಹಡೆದಿಹ ತಂದೆಯಾನಿರೆ ।
ಇವನ ಪೊರೆದವರಾರು ? ಕಲಿಸಿದರಾರು ? ನೆನೆಸುತ್ತ ॥

ಇವನ ನೋಡಲು ಬಂದೆನಕಟಾ ।
ನಿವಗೆ ಮನೆಯಾಳೆಂದು ಪೇಳ್ದನೆ ।
ಇವನು ಕಲಿತದ್ದಿದುವೆ ಸಾಕೆಂದವನು ಕನಲಿದನು ॥ ೬ ॥

ಅಯ್ಯೋ ! ಏಕೆಂಗ್ಲಿಷವ ಕಲಿಸಿದೆ ।
ನಯ್ಯೋ ! ಮನೆಬದುಕೆಲ್ಲವಳಿಯಿತು ।
ಅಯ್ಯನೆನ್ನಲು ಮಗನು ನಾಣ್ಚುವನಯ್ಯೊ ಮುಂದೇನು ॥

---

೧. ಪುಸ್ತಕ; ೨. ವಿಲಾಯತಿಯ ಒಲೆ (ಸ್ಟೋವ್).

ಅಯ್ಯೋ ತಲೆಯೊಳು ಮುಗಿಲ ಕೊಡಲಿಯೆ ।
ಹೊಯ್ಯಿತಕಟಾ! ಹಡೆದ ಮಗನೇ ।
ಮುಯ್ಯವಂ ತೀರಿಪನೆ ತಾನೆನುತುರುಳಿದನು ನೆಲಕೆ ॥ ೭ ॥

ಇಂಗ್ಲಿಷ ಕಲಿಸಿದ ಒಕ್ಕಲಿಗ:-

॥ ಭಾವಿನಿ ॥

ಇಂತು ತಳಮಳಿಸುತ್ತ ಮುದುಕನು ।
ನಿಂತಿವನ ಕೀಳ್ಮಸುಡ ನೋಡೆನು ।
ಎಂತಿವನು ಮಗನೆನಗೆ ಸಾಕಿನ್ನೆನುತಲೊಡನೆದ್ದು ॥
ಪಿಂತೆ ನೋಡದೆ ನಡೆದನೂರಿಗೆ ।
ಮುಂಚೆಪೊಳಲನು ಕಂಡು ಪುಗಲೋ ।
ರಂತೆ ಮೆರೆದದು ಬರ್ದಿಲದೆರೆಯನ[೧] ಪೊಳಲ ಜರೆಯುತ್ತ ॥ ೧ ॥

ಒಂದುಕಡೆ ತರತರದ ಪಣ್ಗಳ ।
ನೊಂದುಕಡೆ ತರತರದ ಪೂಗಳ ।
ನೊಂದುಕಡೆ ಕಾಯ್‌ಸೊಪ್ಪು-ಕಾಳ್ಗಳನಂದವಟ್ಟಿಗಳ ॥
ಒಂದುಕಡೆಯೊಳ್ ಮಿಸುನಿಬೆಳ್ಳಿಯ ।
ದೊಂದುಕಡೆ ಹಿತ್ತಾಳೆ-ಕಂಚುಗ ।
ಳೊಂದುಕಡೆ ಬಳೆಗಾರರಂಗಡಿಯೆಸೆದವಲ್ಲಲ್ಲಿ ॥ ೨ ॥

ತಿನಿಸು-ಚಹದಂಗಡಿಯ ನೆಣಿಸಲು ।
ಎಣಿಕೆ ಹತ್ತದು ಪಲವು-ನಾಲಗೆ ।
ಯನಿಗೆ ಮಿಕ್ಕರಪಾಡೆ ಕಲಿವರೆ ಮಿಗಿಲು ಕುಡಿವರೊಳು ।।
ಎನುತೊಡೆದು ಕಾಣುತ್ತಮಿರ್ಪುದು ।
ನೆನೆದು ಮುದುಕನು ಬೆಚ್ಚಿಬೆರಗ ।
ಪ್ಪನಿತರೊಳ್ ಮಗನಲ್ಲಿ ಕುಡಿಯಲ್ ಬಂದನೊತ್ತರದಿ ॥ ೩ ॥

ಸುರ್ರನೇ ಚಹಕುಡಿದು ಮಗನುರೆ ।
ಭರ್ರನೇ ಕಲ್ಲೆಣ್ಣೆವಂಡಿಗೆ[೨] ।
ಸರ್ರನೇ ನಡೆದೈದಿದನು ತಾನೆಲ್ಲಿಯೋ! ನೋಡಿ ॥

---

೧. ದೇಶದಲ್ಲಿ ಹುಟ್ಟುವ ಬೆಳೆ (ಸಂಪತ್ತು); ೨. ದೇಶಮಾತೆಯು.

ಜರ್ರನಿಳಿದಂ ಮುದುಕನಾಗಳೆ ।
ಕರ್ರಗಾಗುತ ಮೋರೆ ಬಾಡಿತು ।
ಸುರ್ರನೇ ಮರುಗಿದನು ಮನೆ ಮುಳುಗಿತ್ತು ಹಾ ಎನುತ ॥ ೪ ॥

ಇವರು ಕಲಿವರೆ? ಚಹವ ಕುಡಿವರು ।
ಇವರ ಕಯ್ಯಲ್ಲಿಹುದು ಸಿಗರೇ ।
ಟಿವರ ಮೆಯ್ಯೊಳು ಬೆಲೆಯ ಪೆರನಾಡರಿವೆಗಳಿ ತೋರ್ಕು ॥

ಇವರು ಪೌಳ್-ಗೈವುದನೆ ಕಲಿವರೆ? ।
ಇವರು ಕಾಸಂ ಗಳಿಸಲರಿವರೆ? ।
ಇವರಿಗೆಲ್ಲರಿಗೆಲ್ಲಿ ಕೆಲಸವು? ಕೆಲಸ ಕೆಟ್ಟಿತು ಹಾ! ॥ ೫ ॥

ಹಿಂಡಿರೊಟ್ಟಿಯ ತಿಂದು ಹಿರಿಯರು ।
ಹಿಂಡಜಟ್ಟಿಗಳನ್ನು ಹಣಿದರು ।
ಗಂಡರೆನಿಸಿದರೆದುರು ಬಂದರ ಸದೆಬಡಿದು ಹಿಂದೆ ॥

ಕಂಡ ಮೈ-ಸವಿಗೊಲಿದು ಚಹ ಸೀ- ।
ಯುಂಡಿ-ಯವಲಕ್ಕಿಗಳ ಮೆಲ್ಲುವ ।
ಗಂಡಸರಿಗಿವರ್ಗೇನು ಬೆದರ್ವವೆ? ಜಿಟ್ಟಿಗಳ ಹಿಂಡು! ॥ ೬ ॥

ನಾಡತಾಯ್+ಮೊಲೆವಾಲ ಪೆರರಿಗೆ ।
ನೀಡಿ ಸುಮ್ಮನೆ ಸೊರಗೆದೆಮ್ಮನು ।
ನೋಡಿ ಮರುಗಳೆ? ಕರಗಳೇ? ಕಣ್ಣೀರ ಸೋನೆಯೊಳು ॥

ಓಡಿಬಂದೀ ತಾಯ್ಗೆ ನೀನಳ ।
ಬೇಡ ನಿನ್ನಯ ಪಾಲ ಕುಡಿವೆವು ।
ನೀಡವಿನ್ನಾರ್ಗೆಂದು ಪೇಳ್ವಿದೆಗಾರರಿಲ್ಲಕಟ ॥ ೭ ॥

ಓದುವನೆ-ಕೂಟಗಳ ಬೇಡುವೆ ।
ನೋದು-ಬರಹವ ಕಲಿಸೆ ತೀರದು ।
ಓದುಗರ ನಡೆ ತಿದ್ದಿ ಹಾಳ್ಗೈವುದನು ನಿಲ್ಲಿಸುತ ।

ಒಯ್ದು ಪೆರನಾಡತ್ತಣಿಂ ತಾ ।
ನೆಯ್ದಿದೆಮ್ಮಯ ಬದುಕನೆಳೆಯುವ ।
ಕಯ್ದುಡಿತದಂದವನು ಕಲಿಸುತ ಪೊರೆವುದಣುಗರನು ॥ ೮ ॥

ಎಂದು ಮೊರೆಯನ್ನಿಟ್ಟು ಮುದುಕನು ।
ಇಂದು ತಿರಳಿದನೊರ್ಗೆ ನಾಡಿನ ।
ಮುಂದೆ ನಿಂತಿದೆ! ದೊಡ್ಡ ಕೆಲಸವು ಮಾಳ್ಕೆತಾಂ ಬಿಡುಗೆ ॥
ಅಂದು ಬರಿಗನ್ನಡದಿ ಬರೆಯುವೆ ।
ನೆಂದು ಹೇಳಿದ ತೆರದಿ ಬರೆದೆ ।
ನ್ನಂವದೀ ನಾಲ್ವರಹಗಳ ನೋಡುತ್ತ ನೆಲಸೊಲೆಗೆ ॥ ೯ ॥

ಶ್ರೀ. ಹ ರಾ ಕಾಲಜ್ಞಾನ, ಹೆ. ಮಾ. ತಿರ್ಥಪೂತ.

ಹಳ್ಳಿಗಳ ಸುಧಾರಣೆ.

ಹಿಂದುಸ್ಥಾನದಲ್ಲಿ ನೂರಕ್ಕೆ ತೊಂಭತ್ತು ಜನರು ಹಳ್ಳಿಯ ನಿವಾಸಿಗಳೂ, ಹತ್ತು ಜನರು ನಗರವಾಸಿಗಳೂ ಇರುವರು, ಮತ್ತು ಹಳ್ಳಿಯ ನಿವಾಸಿಗಳ ಮುಖ್ಯ ಉದ್ಯೋಗವು ಒಕ್ಕಲತನವು. ಆದರೆ ಒಕ್ಕಲತನದ ಉದ್ಯೋಗವು ವರ್ಷದಲ್ಲಿ ಒಟ್ಟಿ ದಿವಸ ಒಂದೇ ಸವನೆ ನಡೆಯುವದಿಲ್ಲ. ಒಕ್ಕಲಿಗರಿಗೆ ವರ್ಷದಲ್ಲಿ ನಿಧಾನ ನಾಲ್ಕು ತಿಂಗಳು ಹೊಲದ ಕೆಲಸ ವಿಶೇಷವಿರುವದಿಲ್ಲ. ಆ ಕಾಲಕ್ಕೆ ಅವರು ಬೇರೊಂದು ಉದ್ಯೋಗದಲ್ಲಿ ತೊಡಗಲು ಶಕ್ಯವಿರುವದು. ಅದರಂತೆ ಪೂರ್ವದಲ್ಲಿ ಒಕ್ಕಲಿಗರು ವರ್ಷಾನುವರ್ಷ ಒಂದೇ ಸವನೆ ದುಡಿಯುತ್ತಿದ್ದರು; ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುತ್ತಿದ್ದರು, ಅವರು ತಮ್ಮ ಕುಟುಂಬಕ್ಕೆ ಬೇಕಾಗುವ ಅನೇಕ ವಸ್ತುಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು; ಅವರ ಕೊರತೆಗಳಾದರೂ ಬಹಳ ಕಡಿಮೆ ಇದ್ದವು. ಒಕ್ಕಲತನದಿಂದ ಯಾವತ್ತೂ ಆಹಾರದ ಧಾನ್ಯಗಳು ಅವರಲ್ಲಿ ಯಥೇಚ್ಛವಾಗಿರುತ್ತಿದ್ದವು. ಅಲ್ಲದೆ ಹೊದ್ದುಕೊಳ್ಳಲಿಕ್ಕೂ, ಉಟ್ಟುಕೊಳ್ಳಲಿಕ್ಕೂ ಅರಿವೆ ಅಂಚಡಿಗಳನ್ನು ವಿಶೇಷತಃ ಅವರೇ ತಯಾರಿಸಿಕೊಳ್ಳುತ್ತಿದ್ದರು. ಮನೆಮಾರುಗಳನ್ನೂ, ಛಾವಣಿಗಳನ್ನೂ ತಾವೇ ಕಟ್ಟಿಕೊಳ್ಳುತ್ತಿದ್ದರು. ಹೀಗೆ ಅವರು ಸ್ವಯಂಶೂರರೂ, ಸ್ವಾವಲಂಬಿಗಳೂ ಆಗಿದ್ದರು.

ಇತ್ತಿತ್ತಲಾಗಿ ಔದ್ಯೋಗಿಕ ಕ್ರಾಂತಿಯುಂಟಾಗಿ ಜಗತ್ತಿನ ಇರುವಿಕೆಯೇ ಬಹಳ ಹೆಚ್ಚುಕಡಿಮೆಯನ್ನು ಹೊಂದಿದೆ. ಯಂತ್ರಗಳ ಪ್ರಸಾರವಾದಂದಿನಿಂದ ಪ್ರತಿಯೊಂದು ಉದ್ಯೋಗದಲ್ಲಿ ಬಹಳ ವ್ಯತ್ಯಾಸವಾಗಿದೆ. ಕೈಗಾರಿಕೆಯ ಕೆಲಸ ಮಾಡಿ ಜೀವಿಸುವ ಜನರಿಗೆ ಬಹಳ ಗೋಳು ಉಂಟಾಗಿದೆ. ಪೂರ್ವದಲ್ಲಿ ಒಂದೊಂದು ಉದ್ಯೋಗವನ್ನು ವಿಶಿಷ್ಟ ವರ್ಗದವರೇ ವಂಶಪರಂಪರ ಮಾಡುತ್ತ ಬಂದಿದ್ದರು ಆದರೆ ಪಾಶ್ಚಿಮಾತ್ಯರ ಯಂತ್ರಗಳ ಪ್ರಚಾರದಿಂದ ಕೈಗಾರಿಕೆಯ ಉದ್ಯೋಗಗಳು ಈ ಯಂತ್ರಗಳೆಂಬ ಭೂತಗಳ ಬಲಿಗೆ ಸಿಲುಕಿ ಆಯಾಯ ವರ್ಗದವರ ಕೈಯನ್ನು ಸಂಪೂರ್ಣ ಬಿಡಹತ್ತಿವೆ. ಇವುಗಳ ಸಹಾಯದಿಂದ ಭಾಂಡವಲು ಗಾರರು ನಾನಾ ಬಗೆಯ ವಸ್ತುಗಳನ್ನು ನಿರ್ಮಿಸಿ ಯಥೇಚ್ಛವಾಗಿ ದೇಶದಲ್ಲೆಲ್ಲ ಹರಡುವದರಿಂದ ಮತ್ತು ಅವೆಲ್ಲವುಗಳು ಮೋಹಕರವಾಗಿಯೂ, ಅಗ್ಗವಾಗಿಯೂ ಇರುವದರಿಂದ, ಅವು ತಾಕೆಯಲ್ಲಿ ತೀರ ಎಡವಿದ್ದಾಗ್ಯೂ, ಜನರು ಅವುಗಳನ್ನೇ ಬಹಳವಾಗಿ ಉಪಯೋಗಿಸಹತ್ತಿದ್ದರಿಂದ ಕೈಕೆಲಸದ ಸಾಮಾನುಗಳಿಗೆ ಆಗ್ರಹವಿಲ್ಲದಾಗಿದೆ. ಫ್ಯಾಕ್ಟರಿಯಲ್ಲಿ ಸಿದ್ಧವಾದ ಜೀನಸುಗಳು ಬೇಕಾದಾಗ್ಗೆ ಬೇಕಾದಷ್ಟು ಬೇಕಾದಲ್ಲಿ ಈಗ ದೊರೆಯಹತ್ತಿದ್ದರಿಂದ ಎಲ್ಲರೂ ಅವುಗಳನ್ನೇ ಗ್ರಹಿಸುವರು. ಆದ್ದರಿಂದ ಹಳ್ಳಿಯಲ್ಲಿ ಒಕ್ಕಲತನದ ಹೊರತು ಉಳಿದ ಉದ್ಯೋಗಗಳು ನಾಶವಾಗಹತ್ತಿರುವವು. ನಗರಗಳಲ್ಲಿ ದೊಡ್ಡ ದೊಡ್ಡ ಗಿರಣಿಗಳು ಉಂಟಾಗಹತ್ತಿದ್ದರಿಂದ ಹತ್ತಿಯನ್ನು ಅರಿಯುವದು ಮೊದಲು ಮಾಡಿಕೊಂಡು ಯಾವತ್ತೂ ವ್ಯವಸಾಯಗಳು ನಗರಗಳನ್ನೇ ಆಶ್ರಯಿಸಹತ್ತಿದ್ದರಿಂದ ಹಳ್ಳಿಗಳನ್ನು ಜನರು ಬಿಟ್ಟು ನಗರಗಳನ್ನು ಸೇರಹತ್ತಿರುವರು. ನಗರಗಳಲ್ಲಿ ದಟ್ಟಣಿಯಾಗಿ, ಅಶುದ್ಧ ಹವೆ, ಅನಾರೋಗ್ಯಕರವಾದ ವಾಸಗೃಹ, ಅಯೋಗ್ಯ ವಾತಾವರಣ ಇತ್ಯಾದಿ ಅನೇಕ ಅನಿಷ್ಟಕಾರಕ ಪರಿಣಾಮಗಳು ಜನಿಸುವವು. ಸಶಕ್ತರೂ, ನಿರೋಗಿಗಳೂ ಆದ ಜನರ ಸಂಖ್ಯೆಯು ತೀರ ಕಡಿಮೆಯಾಗುತ್ತ ನಡೆದಿರುವದು. ಹಳ್ಳಿಯ ಜನರೂ ಹಳ್ಳಿಯ ಉದ್ಯೋಗಗಳೂ ನಗರಗಳನ್ನು ಸೇರಹತ್ತಿರುವವು.

ಯಂತ್ರಗಳ ಪ್ರಚಾರವು ಒಕ್ಕಲತನದ ವಿಷಯದಲ್ಲಿ ನಮ್ಮ ದೇಶದಲ್ಲಿ ಅಷ್ಟೊಂದು ಆಗಿಲ್ಲ. ಆದರೆ ಪರದೇಶಗಳಲ್ಲಿ ಮಾತ್ರ ಯಂತ್ರಗಳ ಉಪಯೋಗವನ್ನು ಒಕ್ಕಲಿಗರು ಸಾಕಷ್ಟು ಮಾಡಿಕೊಂಡಿರುವದು. ಆದ್ದರಿಂದ ಅದರ ಪರಿಣಾಮವು ನಮ್ಮ ಒಕ್ಕಲಿಗರ ಮೇಲೆ ಆಗುತ್ತಿರುವದು. ಈಗ ಉಗೆಹಡಗ, ಉಗೆಬಂಡಿ, ಸೊದಲಾದವುಗಳ ಸಹಾಯದಿಂದ ಒಂದು ದೇಶದ ಸರಕು ಮತ್ತೊಂದು ದೇಶಕ್ಕೆ ಆನಾಯಾಸವಾಗಿ ಅಲ್ಪ ಕಾಲದಲ್ಲಿಯೇ ತರಬಹುದಾದ್ದರಿಂದಲೂ, ಮತ್ತು ಜಗತ್ತಿನ ಯಾವ ದೇಶದ ಸುದ್ದಿಯನ್ನಾಗಲಿ ಒಂದು ಘಳಿಗೆಯಲ್ಲಿ ವಿದ್ಯುಲ್ಲತೆಯ ಸಹಾಯದಿಂದ ತಿಳಿದುಕೊಳ್ಳಬಹುದಾದ್ದರಿಂದ ಒಂದು ದೇಶದಲ್ಲಿ ಹೆಚ್ಚು

ಹುಟ್ಟುವಳಿಯಾದರೆ ಇನ್ನೊಂದು ದೇಶಕ್ಕೆ ಅದರ ಪರಿಣಾಮವಾಗದೇ ಉಳಿಯುವದಿಲ್ಲ. ಅಮೇರಿಕಾದವರು ಯಂತ್ರಗಳ ಸಹಾಯದಿಂದ ಹೆಚ್ಚು ಹತ್ತಿಯನ್ನು ಬೆಳೆದರೆ ಹಿಂದುಸ್ಥಾನದ ಹತ್ತಿಯನ್ನು ಬೆಳೆಯುವ ಒಕ್ಕಲಿಗರ ಹತ್ತಿಗೆ ಪೇಟೆಯಲ್ಲಿ ಸರಿಯಾದ ಕ್ರಯವು ಸಿಗುವದಿಲ್ಲ. ಹೀಗೆ ಯಂತ್ರಗಳ ಹಾವಳಿಯು ಕೇವಲ ಕೈಗಾರಿಕೆಯಿಂದ ಉಪಜೀವಿಸುವ ಜನರಿಗಲ್ಲದೆ ಒಕ್ಕಲಿಗರೂ ಕೂಡ ಬರಬರುತ್ತ ಬಹಳ ತಾಪದಾಯಕವಾಗಹತ್ತಿದೆ. ಇಂಗ್ಲಂಡ, ಜರ್ಮನಿ, ಜಪಾನ, ಅಮೇರಿಕಾ ಮೊದಲಾದ ರಾಷ್ಟ್ರಗಳಲ್ಲಿ ಯಂತ್ರಗಳ ಬೆಳವಣಿಗೆಯು ಮಿತಿಮೀರಿ ಆಗಿದ್ದು, ಅಲ್ಲಿಯ ಯಂತ್ರಗಳಲ್ಲಿ ತಯಾರಾದ ಮಾಲು ಜಗತ್ತಿನ ಎಲ್ಲ ಪೇಟೆಗಳನ್ನು ತುಂಬಿರುವದರಿಂದ ಕೈಯಿಂದ ತಯಾರಾಗುವ ಒಡವೆಗಳಿಗೆ ಪೇಟೆಯಲ್ಲಿ ಗ್ರಾಹಕರು ತೀರ ಕಡಿಮೆಯಾಗಹತ್ತಿರುವರು. ಕೈಗಾರಿಕೆಯ ಉದ್ಯೋಗದಿಂದ ಜೀವಿಸುವ ಜನರು ಬಹಳ ಗೋಳಾಟದಲ್ಲಿ ಬೀಳಹತ್ತಿರುವರು. ಹಿಂದುಸ್ಥಾನದ ಕೈಗಾರಿಕೆಯು ಬರಬರುತ್ತ ಕ್ಷೀಣದೆಸೆಯನ್ನು ಹೊಂದಹತ್ತಿರುವದು. ಅಪಾರವಾದ ಸಂಪತ್ತು ಪರದೇಶಗಳನ್ನು ಅವ್ಯಾಹತವಾಗಿ ಸೇರಹತ್ತಿರುವದು. ದೇಶದಲ್ಲಿ ಅತ್ಯಂತ ದಾರಿದ್ರತೆಯು ಮನೆ ಮಾಡಹತ್ತಿರುವದು. ಒಂದಾನೊಂದು ಕಾಲದಲ್ಲಿ ಸುವರ್ಣಭೂಮಿಯೆಂದು ಜಗತ್ತಿಗೆ ಪ್ರಸಿದ್ಧವಾದ ನಮ್ಮ ದೇಶವು ಈಗ ದರಿದ್ರ ದೇಶಗಳಲ್ಲಿ ಒಂದಾಗಿದೆ. ದೇವದತ್ತ ಸೌಕರ್ಯಗಳು ಹಿಂದುಸ್ಥಾನದಲ್ಲಿ ಇವ್ವಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲ. ಆದಾಗ್ಯೂ ಸದ್ಯದ ರೂಢಿಯಲ್ಲಿ ಬಂದಿರುವ (ಯಾಂತ್ರಿಕ) ಹುಟ್ಟುವಳಿಯ ಪದ್ಧತಿಯು ನಮ್ಮ ದೇಶದಲ್ಲಿ ಪ್ರಸಾರವಾಗಲಿಕ್ಕೆ ಅನೇಕ ತೊಂದರೆಗಳಿರುವದರಿಂದ ನಮ್ಮ ದೇಶವು ಕೇವಲ ಕಚ್ಚಾ ಮಾಲನ್ನು ಹುಟ್ಟಿಸುವ ದೇಶವಾಗಿದೆ. ಪ್ರಾಚೀನ ಕಾಲದಿಂದ ನಡೆದು ಬಂದ ಪದ್ಧತಿಯ ಒಕ್ಕಲತನದ ಉದ್ಯೋಗವು ಮಾತ್ರ ನಮ್ಮಲ್ಲಿ ಉಳಿದಿದೆ. ಉಳಿದ ಎಲ್ಲ ತರದ ಉದ್ಯೋಗಗಳು ಕೈಬಿಡಹತ್ತಿರುವವು. ಆದ್ದರಿಂದ ಅಸಂಖ್ಯಾಕ ಜನರು ನಿರುದ್ಯೋಗಿಗಳಾಗಿ ದೇಶದ ಕ್ಷೇಮಕ್ಕೆ ಮಾರಿಗಳಾಗಿರುವರು.

ನಾವು ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಲಿಕ್ಕೆ ಸತತ ಪ್ರಯತ್ನ ಮಾಡಬೇಕಾಗಿದೆ. ಪರದೇಶಗಳ ಕೂಡ ಹೋರಾಡುವಷ್ಟು ಬಲವು ನಮ್ಮಲ್ಲಿ ಉಂಟಾಗಲಾರದು. ಯಂತ್ರಗಳ ಕೆಲಸದಲ್ಲಿ ನಾವು ಅವರಷ್ಟು ಒತ್ತರದಿಂದ ಮುಂದೆ ಅಡಿಯನ್ನಿಡಲಾರೆವು. ಅದಕ್ಕೆ ನಮಗೆ ಅನೇಕ ಪ್ರತಿಕೂಲಗಳಿರುವವು. ಆದರೆ ನಮ್ಮನ್ನೂ ನಮ್ಮ ದೇಶವನ್ನೂ ರಕ್ಷಿಸಿಕೊಳ್ಳುವದಕ್ಕೆ ಒಂದೇ ಒಂದು ಉಪಾಯವುಂಟು. ನಮ್ಮಲ್ಲಿ ಸಂಘಶಕ್ತಿಯು ಬೆಳೆದು ನಮಗೆ ಬೇಕಾಗುವ ಒಡವೆಗಳನ್ನು ಅದಷ್ಟು ಮಟ್ಟಿಗೆ ನಾವೇ ತಯಾರಿಸಿಕೊಂಡು ಉಪಯೋಗಿಸಬೇಕು. ಅವುಗಳು ಎಷ್ಟು ತುಟ್ಟಿಯಾಗಲೀ, ಎಷ್ಟು ಉರುಟಾಗಲೀ ಅದಕ್ಕೆ ಹಿಂಜರಿಯದೆ ಈ ಕಾರ್ಯವು ದೇಶದಲ್ಲೆಲ್ಲ ಜನಿಸಿದರೆ ಜಗತ್ತಿನ ಯಾವ ರಾಷ್ಟ್ರಕ್ಕೂ ನಾವುಬಗ್ಗುವಂತಿಲ್ಲ.

ಹಳ್ಳಿಯ ನಿವಾಸಿಗಳ (ಅಂದರೆ ಹಿಂದುಸ್ಥಾನದ) ಮುಖ್ಯ ಉದ್ಯೋಗವ ಒಕ್ಕಲತನವು. ಈ ಉದ್ಯೋಗದಿಂದ ಪ್ರಪಂಚಕ್ಕೆ ಬೇಕಾಗುವ ಧಾನ್ಯ ಮೊದ ಲಾದ ಆವಶ್ಯವಾದ ಎಲ್ಲ ಬಗೆಯ ಆಹಾರ ಪದಾರ್ಥಗಳು ಲಭಿಸುವದೆಲ್ಲದೆ ಹತ್ತಿ, ನಾರು, ತಂಬಾಕ, ಎಣ್ಣೆಯ ಕಾಳು ಮೊದಲಾದ ಇತರ ಪದಾರ್ಥಗಳೂ ದೊರೆ ಯುವವು. ಆದರೆ ನೂಲುವದು, ನೇಯುವದು, ಮೊದಲಾದ ಉದ್ಯೋಗಗಳಿಂದ ನಮಗೆ ಹೊದಿಕೆ, ನಿವಾಸ ಮೊದಲಾದ ಅವಶ್ಯಕತೆಗಳನ್ನು ಒಕ್ಕಲತನವಲ್ಲದ ಬೇರೆ ದಂಧೆಯಿಂದ ಪೂರೈಯಿಸಿಕೊಳ್ಳ ಬೇಕಾಗುತ್ತವೆ. ಮತ್ತು ಒಕ್ಕಲತನದ ಉದ್ಯೋಗವು ವರ್ಷದಲ್ಲಿ ೩೬೫ ದಿವಸ ನಡೆಯದಿರುವದರಿಂದ ಒಕ್ಕಲಿಗನು ವರ್ಷ ದಲ್ಲಿ ನಿಧಾನ ನಾಲ್ಕು ತಿಂಗಳು ಉದ್ಯೋಗವಿಲ್ಲದೆ ಇರುವನು. ಆ ಕಾಲಕ್ಕೆ ಅವನು ತಮ್ಮ ಪ್ರಪಂಚಕ್ಕೆ ಬೇಕಾಗುವ ಅನೇಕ ವಸ್ತುಗಳನ್ನು ತಾನೇ ತಯಾರಿಸಿಕೊ ಳ್ಳಲಿಕ್ಕಾಗುವದು. ತಾನು ಸ್ವಂತ ಮಾಡಿದ ವಸ್ತುಗಳ ಉಪಭೋಗವನ್ನು ಆವು ಎಷ್ಟು ಉರುಟುತರಹದವಿದ್ದರೂ ಬಹು ಉತ್ಸಾಹದಿಂದ ಹೊಂದುವನು. ತನ್ನ ಬಟ್ಟೆಗಳಿಗಾಗಿ ಗಿರಣಿಗಳ ಮೇಲೆ ಅವಲಂಬಿಸದೆ ತನ್ನ ಹೊಲದ ಹತ್ತಿ ಯನ್ನು ತಾನೇ ಆರೆದು ತಾನೇ ನೂತುಕೊಂಡು ತನ್ನಿಂದಾಗದಿದ್ದರೆ ತನ್ನ ನೆರೆಯ ನೇಕಾರನಿಂದ ಬಟ್ಟೆಗಳನ್ನು ನೇಯಿಸಿಕೊಂಡು ಹೊದ್ದುಕೊಳ್ಳುವದು ತನಗೂ ತನ್ನ ದೇಶಕ್ಕೂ ಬಹು ಕ್ಷೇಮಕರವಾಗಿದೆ. ಹೀಗೆ ಅನೇಕ ಉದ್ಯೋಗಗಳನ್ನು ಒಕ್ಕಲಿಗನು ತಮ್ಮ ಪೂರ್ವಜರಂತೆ ಕಲಿತುಕೊಳ್ಳುವದು ಈಗಿನ ದುರ್ಭಿಕ್ಷದ ಮತ್ತು ದಾರಿದ್ರ್ಯದ ಕಾಲದಲ್ಲಿ ಅತ್ಯಾವಶ್ಯವದೆ. ಹತ್ತಿ ಆರೆಯುವದು, ನೂಲು ವದು, ನೇಯುವದು, ಅರಿವೆ ಹೊಲಿಯುವದು, ಹಗ್ಗ ಹುರಿ ಮಾಡುವದು, ಬಡಿಗ ತನ, ಉಪ್ಪಾರಿಕೆ ಮೊದಲಾದ ಉದ್ಯೋಗಗಳನ್ನು ತಕ್ಕಮಟ್ಟಿಗೆ ಬಲ್ಲವನಾಗಿರ ಬೇಕು. ಮತ್ತು ತನ್ನ ಕೈಯಿಂದ ನೀಗದ ಕಾರ್ಯಗಳನ್ನು ತನ್ನ ನೆರೆಯ ನೇಯಕಾರ, ಬಡಿಗ, ಉಪ್ಪಾರ, ಕಮ್ಮಾರ, ಕುಂಬಾರ, ಕಂಚುಗಾರ, ಚರ್ಮ ಕಾರ ಮೊದಲಾದವರಿಂದ ಪೂರೈಯಿಸಿಕೊಳ್ಳಲು ಯಾವಾಗಲೂ ಹವಣಿಸಬೇಕು. ಗಿರಣಿಗಳ ಪ್ರಸಾರದಿಂದ ನೇಯಕಾರರು ತಮ್ಮ ಉದ್ಯೋಗವನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಸ್ವೀಕರಿಸಹತ್ತಿರುವರು. ಅವರು ತಮ್ಮ ಉದ್ಯೋಗಗಳನ್ನು ಬಿಡದ ಹಾಗೆ ಅವರಿಗೆ ಸಾಕಷ್ಟು ಕೆಲಸವನ್ನು ಪೂರೈಸಬೇಕು.

ಇತ್ತೀಚೆಗೆ ಜರ್ಮನ್‌ಸಿಲ್ವರ ಮತ್ತು ಅಲ್ಯುಮಿನ ಪಾತ್ರೆಗಳು ಬಹಳ ಬಳಿಕೆಯಲ್ಲಿ ಬರಹತ್ತಿದ್ದರಿಂದ ಕಂಚುಗಾರರಿಗೂ, ಕುಂಬಾರರಿಗೂ ಉದ್ಯೋಗ ವಿಲ್ಲದಂತಾಗಿ ಅವರು ಸಾವಿರಾರು ವರ್ಷಗಳಿಂದ ಮಾಡಿಕೊಂಡು ಬಂದ ತಮ್ಮ ಕಲೆಗಳನ್ನು ತೀವ್ರದಲ್ಲಿಯೇ ಮರೆತು ಬಿಡುವರು. ಇದರಂತೆ ಪೂರ್ವಜರ ವನ ಸ್ಪತಿ [ಗಿಡಮೂಲಿಕೆ] ಯ ಔಷಧೋಪಚಾರ [ಆಯುರ್ವೇದ] ವನ್ನು ಪೂರ್ಣ

ಮರೆತು ಹಳ್ಳಿಯ ಜನರು ಕೂಡ ಅಲ್ಪಸ್ವಲ್ಪ ಬೇನೆಗೆ ಸಹ ಡಾಕ್ಟರರನ್ನು ಅವ
ಲಂಬಿಸಹತ್ತಿರುವರು. ಹೀಗೆ ಪ್ರತಿಯೊಂದು ವಿಷಯದಲ್ಲಿ ನಮ್ಮ ಪೂರ್ವಜರ
ಜ್ಞಾನಾನುಭವಗಳನ್ನು ನಾವೆಲ್ಲರೂ ಮರೆತು ಪರಕೀಯರ ಮೇಲೆ ತುಂಬಾ ಅವ
ಲಂಬಿಸಹತ್ತಿದ್ದರಿಂದ ನಮ್ಮ ದೇಶಕ್ಕೆ ದಾರಿದ್ರತೆಯೂ, ಸರ್ವ ವಿಧವಾದ
ಗುಲಾಮಗಿರಿಯೂ ಆವರಿಸಿಕೊಂಡಿವೆ. ನಮ್ಮಲ್ಲಿ ಇನ್ನೂ ಇರುವ ಕಲಾಕೌಶಲ್ಯ
ಜ್ಞಾನವನ್ನು ನಾವು ಕಾಯ್ದುಕೊಳ್ಳದೆ ಹೋಪಲ್ಲಿ ಒಮ್ಮೆ ಲಯ ಹೊಂದಿದ
ವಿದ್ಯೆಯನ್ನು ಪುನಃ ಹೊರಪಡಿಸುವ ದುಃಸಾಧ್ಯವೇ ಸರಿ. ಕುಂಬಾರರ ಆವಿ
ಗೆಯ ಶೋಧವು ಆಗಬೇಕಾದರೆ ಪೂರ್ವದಲ್ಲಿ ಎಷ್ಟು ಕಾಲವು ಗತಿಸಿರುವದೋ
ಏನೋ? ಆ ಕಲೆಯು ಈಗ ನಮಗೆ ಕೇವಲ ಸಾಮಾನ್ಯವೆಂದು ಕಂಡರೂ ಅದು
ನಿಜವಾಗಿ ಆಶ್ಚರ್ಯಕರವಾದ ಕಲೆಯೇ ಇರುವದು. ಅದನ್ನು ನಮ್ಮ ಕುಂಬಾರ
ರೆಲ್ಲರೂ ಮರೆತು ಬಿಟ್ಟರೆ ತಿರುಗಿ ಆ ವಿದ್ಯೆಯನ್ನು ಗಳಿಸಿ ಅಷ್ಟೊಂದು ನಿಪುಣತೆ
ಯನ್ನು ಹೊಂದಲಿಕ್ಕೆ ಅವಕಾಶವೇ ಉಳಿಯುವದಿಲ್ಲ. ಇದರಂತೆಯೇ ಉಳಿದ ಕಲೆ
ಗಳ ಹಾಡು. ಕಾಜು ಮಾಡುವ ಕಲೆಯು ನಮ್ಮಲ್ಲಿ ಪೂರ್ವದಲ್ಲಿ ಚನ್ನಾಗಿತ್ತು.
ಆದರೆ ಈಗ ಆ ಕಲೆಯೇ ಅಡಗಿ ಹೋಗಿದೆ, ಮತ್ತು ಆ ಕಲೆಯು ಕಲ್ಪನೆಗೆ
ಕೂಡ ನಮಗೆ ನಿಲುಕದಾಗಿದೆ. ಕಾಗದವನ್ನು ಮಾಡುವ ಕಲೆಯೂ ಹೋಗಿ
ಬಿಟ್ಟಿದೆ. ನೀಲಿಯಿಂದ ತರತರದ ಬಣ್ಣಗಳನ್ನು ಮಾಡುವ ಕಲೆಯೂ ಕೈಬಿಟ್ಟಿದೆ.
ಮದ್ದುಗುಂಡು ಕತ್ತಿಗಳನ್ನು ಮಾಡುವ ಕಲೆಯೂ ನಾಮಶೇಷವಾಗಿದೆ. ಇದರಂತೆ
ಇನ್ನೂ ಅನೇಕ ಉತ್ತಮವಾದ ಕಲೆಗಳ ಗುರುತು ಕೂಡ ನಮಗೆ ಇಲ್ಲದಾಗಿದೆ.
ಪ್ರತಿಯೊಂದುವಸ್ತುವನ್ನು ನಾವು ಪರದೇಶದ ಗಿರಣಿಗಳಿಂದ ಸಂಗ್ರಹಿಸುವದರಿಂದ
ನಾವು ಬರಬರುತ್ತ ಪರಿಪರಿಯ ಕಷ್ಟಕ್ಕೆ ಈಡಾಗುವ ದುರ್ಧರ ಪ್ರಸಂಗವು ಬರುವದು.
ನಾವು ಕೈನೂಲಿನ ಅರಿವೆಗಳನ್ನು ಬಿಟ್ಟು ಪರದೇಶದ ಗಿರಣಿಗಳಲ್ಲಿ ತಯಾರಾದ
ಅರಿವೆಗಳನ್ನು ತೊಟ್ಟುಕೊಳ್ಳುತ್ತೇವೆ. ನಮ್ಮಲ್ಲಿ ಹುಟ್ಟುವ ಹಚ್ಚಡ, ಕಂಬಳಿ
ಗಳನ್ನು ಬಿಟ್ಟು ರಗ್ಗುಗಳನ್ನು ಹೊದ್ದುಕೊಳ್ಳುತ್ತೇವೆ; ಹಾಸಿಕೊಳ್ಳಲಿಕ್ಕೆ ಗುಡಾ
ರಗಳನ್ನೂ, ಜ್ಯಾಡಿಗಳನ್ನೂ ಸಹ ಬಿಟ್ಟು ಗಿರಣಿಗಳಲ್ಲಿ ಹುಟ್ಟುವ ಜಮಕಾನ
ಗಳನ್ನೂ, ತಟ್ಟುಗಳನ್ನೂ ಉಪಯೋಗಿಸಹತ್ತಿರುವೆವು. ಹೀಗೆ ಕೈಯಿಂದ
ಹುಟ್ಟುವ ಒಡವೆಗಳ ಉಪಯೋಗವು ಪೂರ್ಣ ನಿಂತು ಹೋದರೆ ಒಂದೆರಡು ತಲೆ
ಗಳ ನಂತರ ಅರಿವೆ ನೇಯುವದು, ಗುಡಾರ ನೇಯುವದು, ಕಂಬಳಿ ನೇಯುವದು,
ಜಮಕಾನ ನೇಯುವದು ಮೊದಲಾದ ಕಲೆಗಳು ಮರೆತು ಹೋಗಿ, ಮುಂದೆ ಬರುವ
ಪೀಳಿಗೆಗೆ ಈ ಕಲೆಗಳ ಕಲ್ಪನೆ ಕೂಡ ಬರುವದಿಲ್ಲ. ಹಿಂದುಸ್ಥಾನವು ಜಗತ್ತಿಗೆ
ಆಯುರ್ವೇದವನ್ನು ಕಲಿಸಿದೆ. ಆದರೆ ಈಗ ಆ ವಿದ್ಯೆಯು ಪೂರ್ಣ ಮಾಜಿ
ಹೋಗಿದೆ. ಅದರಲ್ಲಿ ನಮ್ಮ ವಿಶ್ವಾಸ ಸಹ ಇಲ್ಲದಂತಾಗಿದೆ. ಪೂರ್ವದ ಜಗದ್ವಿ
ಖ್ಯಾತವಾದ ಮುಸಲಿಮುಗಳನ್ನು ಈಗ ಯಾರು ಕೈಯಿಂದ ತಯಾರಿಸುವರು?

ಧನುರ್ವಿದ್ಯೆಯು ಈಗ ಯಾರಿಗೆ ಬರುತ್ತದೆ? ಚಾಕು, ಚೂರಿ, ಕತ್ತರಿ, ಉಳಿ, ಬಾಚಿ, ಸುತಿಗಿ, ಅಲಗು, ಕತ್ತಿ, ಕೀಲಿ ಮೊದಲಾದವುಗಳನ್ನು ಮಾಡುವ ಉದ್ಯೋಗಗಳೂ ನಿಂತು ಹೋಗಹತ್ತಿವೆ. ಇವುಗಳಲ್ಲಿ ಅನೇಕ ಧಂದೆಗಳು ಪೂರ್ವದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ನಡೆಯುತ್ತಿದ್ದವು. ಈಗ ಹಳ್ಳಿಗಳಲ್ಲಿಯ ಜನರಿಗೆ ಸಾಕಷ್ಟು ಉದ್ಯೋಗವಿಲ್ಲದಾಗಿ ಅವರು ಪಟ್ಟಣಗಳನ್ನು ಸೇರಹತ್ತಿರುವರು. ಹತ್ತು ಹಳ್ಳಿಗಳು ಹಾಳಾಗಿ ಒಂದು ಪಟ್ಟಣವಾಗುವದು.

ಈಗಿನ ಪಟ್ಟಣಗಳಿಂದರೆ, ಪರದೇಶದ ಸಾಮಾನುಗಳ ಅಂಗಡಿಗಳು. ಚಹಾ ಕಾಫಿ, ಬೀಡಿ ಸಿಗಾರೆಟ್ ಮೊದಲಾದ ಮುಶ್ಟಟಗಳ ತವರುಮನೆಗಳು; ನಾಟಕ, ಸಿನೇಮಾ, ನರ್ತನ ಮೊದಲಾದ ಸೊಗಸುಗಾರಿಕೆಯ ಬೀಡುಗಳು; ನಿರುದ್ಯೋಗಿಗಳ, ರೋಗಿಗಳ ರಂಗಭೂಮಿಗಳು; ಅನೀತಿಯ ನೆಲಗಟ್ಟುಗಳು. ಆದ್ದರಿಂದ ಇವುಗಳ ಬೆಳವಣಿಗೆಯು ದೇಶಕ್ಕೆ ಕ್ಷೇಮಕರವಾಗಿಲ್ಲ.

ಗಿರಣಿಗಳಲ್ಲಿ ಕೆಲಸ ಮಾಡಲಿಕ್ಕೆಂದಾಗಲಿ, ವ್ಯಾಪಾರಕ್ಕೆಂದಾಗಲಿ, ನೌಕರಿಗೆಂದಾಗಲಿ, ವಿದ್ಯಾಭ್ಯಾಸಕ್ಕೆಂದಾಗಲಿ, ಆಯುಸ್ಯಾರಾನಿಗೆಂದಾಗಲಿ, ಕೋರ್ಟು-ಕಚೇರಿಗಳ ಕೆಲಸಕ್ಕೆಂದಾಗಲಿ, ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಜನರು ಸೇರಹತ್ತಿರುವದರಿಂದ ಒಕ್ಕಲತನವೂ, ಹಳ್ಳಿಯ ಇತರ ಧಂಧೆಗಳೂ ಹೀನಾವಸ್ಥೆಗೆ ಬರಹತ್ತಿರುವವು. ಆದುದರಿಂದ ದೇಶದ ನಿಜವಾದ ಕಲ್ಯಾಣವನ್ನು ಬಯಸುವವರು ಹಳ್ಳಿಗಳ ಉದ್ಯೋಗಗಳ ಬೆಳವಣಿಗೆಗೆ ಹೆಚ್ಚು ಗಮನ ಕೊಡಬೇಕಾಗಿದೆ ಈ ಕಾರ್ಯವು ಸರಿಯಾದ ಪದ್ಧತಿಯಲ್ಲಿ ಕಾರ್ಯತತ್ಪರವಾದ ಕೇತಕೀ ಖಾತೆಯಿಂದಲೂ, ಸಹಕಾರೀ ಖಾತೆಯಿಂದಲೂ, [ಔದ್ಯೋಗಿಕ] ವಿದ್ಯಾಖಾತೆಯಿಂದಲೂ ಈಡೇರಬೇಕಾಗಿದೆ. ಆದರೆ ಜನಸಮುದಾಯನಾದರೂ ಸರಕಾರವನ್ನೇ ಅವಲಂಬಿಸದೆ ತಮ್ಮ ಉದ್ಧಾರದ ಕಾರ್ಯದಲ್ಲಿ ತಾವೇ ಮುಂದರಿಯುವದು ಕ್ಷೇಮಕರವು ಈ ಮಹತ್ಕಾರ್ಯದಲ್ಲಿ ಸುಶಿಕ್ಷಿತ ವರ್ಗವಾದ ಶಿಕ್ಷಕ ಜನರು ಮನಸ್ಸು ಹಾಕಿದರೆ ಅಲ್ಪಾವಕಾಶದಲ್ಲಿಯೇ ಯಶಸ್ಸು ದೊರೆಯುವದರಲ್ಲಿ ಸಂದೇಹವಿಲ್ಲ 'ಶಿಕ್ಷಕರು, ತಾವು ಕೇವಲ ಶಿಕ್ಷಕರಿಂದು ಬಗೆಯದೇ ದೇಶಸೇವಕರೆಂದು ಭಾವಿಸಿಕೊಂಡು ಹಳ್ಳಿಗಳ ಆರ್ಥಿಕ, ಮತ್ತು ನೈತಿಕ ಸುಧಾರಣೆಯ ಕಾರ್ಯಕ್ಕೆ ತುಂಬಾ ನೆರವಾಗುವರೆಂದು ನಮ್ಮ ಆಶೆ.

ಹಳ್ಳಿಗಳಲ್ಲಿ ವಾಚನಾಲಯಗಳನ್ನು ಸ್ಥಾಪಿಸಿ, ವಾಚನಾಭಿರುಚಿಯನ್ನು ಹುಟ್ಟಿಸಿ, ಇಹಪರದೇಶಗಳ ಪ್ರಸ್ತುತದ ಪರಿಸ್ಥಿತಿಯನ್ನು ಹಳ್ಳಿಯ ಸಾಮಾನ್ಯ ಜನತೆಯ ನಿದರ್ಶನಕ್ಕೆ ತಂದು, ಜನಜಾಗ್ರತೆಯನ್ನು ಮಾಡುವ ಕಾರ್ಯದಲ್ಲಿ ಶಿಕ್ಷಕರು ನಿರಾಯಾಸದಿಂದ ಸ್ತುತ್ಯವಾದ ಕೆಲಸವನ್ನು ಮಾಡಬಹುದು. ವರ್ಷದಲ್ಲಿ ಕೆಲವು ಸಾರೆ ಅಂದರೆ ಗಣೇಶೋತ್ಸವ, ಬಸವಜಯಂತಿ, ವಿದ್ಯಾರಣ್ಯ ತಿಥಿ ಮುಂತಾದ

ಪ್ರಸಂಗಗಳಲ್ಲಿ ವಿದ್ವಾಂಸರನ್ನು ದೇಶಕಾರ್ಯನಿರತರಾದ ಅನುಭವಿಕ ಮಹಾನುಭಾವರನ್ನು ಬರಮಾಡಿಕೊಂಡು ಹಳ್ಳಿಯ ಜನರಿಗೆ ಬೋಧಮಾಡಿಸುವದು ಒಂದ ಕಾರ್ಯವಿಶೇಷವಾಗಿದೆ ಹಳ್ಳಿಯ ಯುವಕರಲ್ಲಿ ಶಾರೀರಕಬಲಸಂವರ್ಧನೆಗಾಗಿ ಜನಸಹಾಯದಿಂದ ಪಂದ್ಯಾಟಗಳನ್ನು ಏರ್ಪಡಿಸಿ, ಪಾರಿತೋಷಕಪ್ರದಾನ ಸಮಾರಂಭವನ್ನು ನೆರವೇರಿಸುವದಾದರೂ ಒಂದು ಸುಲಭ ಸಾಧ್ಯವಾದ ಲಾಭದಾಯಕ ಕಾರ್ಯವಪೆ ಇದರಂತೆ ತರತರದ ಕೈಗಾರಿಕೆಯ ಕಾರ್ಯಗಳಲ್ಲಿ ನಿಪುಣತೆಯನ್ನು ತೋರಿಸಿದ ಜನರಿಗೆ ಉತ್ತೇಜನ ದೊರೆಯುವ ಯೋಜನೆಗಳನ್ನು ಉಂಟುಮಾಡಿದರೆ ಹಳ್ಳಿಯ ಸಾಲೆಯ ಶಿಕ್ಷಕರು ರಾಷ್ಟ್ರೋದ್ಧಾರದ ಮಹಾತ್ಕಾರ್ಯವನ್ನು ಮಾಡಿದಂತಾಗುತ್ತದಲ್ಲದೆ ನಿಜವಾಗಿಸವರಾಜಕ್ಕೆ ಪ್ರಿಯರಾಗಿ ಸುಖಮಯವಾಗಿ ಹಳ್ಳಿಯ ನಿವಾಸಿಗಳಮಧ್ಯದಲ್ಲಿ ತಮ್ಮ ಪ್ರಪಂಚವನ್ನು ಸಾಗಿಸಬಹುದು. ಈ ಕಾರ್ಯದ ಬಹುಭಾರವು ಶಿಕ್ಷಕರನ್ನು ಅವಲಂಬಿಸಿರವದು. ಯಾಕಂದರೆ ಯಾವದೊಂದು ಕಾರ್ಯವು ದೇಶದಲ್ಲೆಲ್ಲ ಹರಡಿ ಧಾರಾಳವಾಗಿ ಪ್ರಗತಿಯನ್ನು ಹೊಂದಬೇಕಾದರೆ ಸಂಘಟಿತಕಾರ್ಯವೂ, ಸುಶಿಕ್ಷಿತ ಜನರ ಸೇವಾಸಂಘವೂ ಬೇಕು. ಶಿಕ್ಷಕವರ್ಗವು ಇದಕ್ಕೆ ಯೋಗ್ಯವಾದಷ್ಟು ಬೇರೆ ಯಾವವರ್ಗವೂ ಯೋಗ್ಯವಾಗಲರಿಯದು. ಆದ್ದರಿಂದ ಹುರುಪುಳ್ಳವರೂ ಅನುಭವಿಕರೂ, ಈಗಾಗಲೇ ಜನಪ್ರಿಯರೂ ಆದ ಶಿಕ್ಷಕರು ಮುಂದೆ ಬಂದು ಶಿಕ್ಷಕರ ಸಂಘಗಳನ್ನು ನಿರ್ಮಿಸಿ ಮೇಲೆಕಾಣಿಸಿದ ಕಾರ್ಯಭಾರವನ್ನೂ, ಅತ್ಯುದ್ಧಾರ ಕಾರ್ಯವನ್ನೂ ಸಾಂಘಿಕರೂಪದಿಂದ ಸಾಗಿಸುವದು ಭೂಷಣಾಸ್ಪದವಾಗಿದೆ ಹೀಗಾದಲ್ಲಿ ಶಿಕ್ಷಕವರ್ಗದಲ್ಲಿ ಈಗಿರುವ ಜನತೆಯ ಅನಾದರವು ದೂರಾಗಿ ನಿಜವಾದ ಭಕ್ತಿಯು ನೆಲೆಗೊಳ್ಳುವದು.

ಸಂಪಾದಕ.

ಸೂರ್ಯ ನಮಸ್ಕಾರ

ಸಂಪಾದಕರು.

ಸಾಲೆಯ ಚಿಕ್ಕನುಕ್ಕುಳ ಶಾರೀರಕ ಸುಧಾರಣೆಯ ವಿಷಯವು ಅತ್ಯಂತ ಮಹತ್ವದ್ದೆಂದು ಬೇರೆ ಹೇಳಬೇಕಾಗಿಲ್ಲ. ಈ ವಿಷಯದ ಕಡೆಗೆ ಶಿಕ್ಷಕರೂ, ಪಾಲಕರೂ, ಅಧಿಕಾರಿವರ್ಗದವರೂ ಹೆಚ್ಚು ಗಮನ ಕೊಡಬೇಕಾಗಿದೆ.

ಇತ್ತಿತ್ತಲಾಗಿ ಶಾಲೆಯ ಮಕ್ಕಳ ದೇಹಾರೋಗ್ಯತೆಯ ಅಭಾವವು ಹೆಚ್ಚುತ್ತ ನಡೆದದೆ. ವಿದ್ಯಾರ್ಥಿಗಳು ಬರಬರುತ್ತ ಬಲಗುಂದುತ್ತಿರುವದನ್ನು ಕಂಡು ಎಷ್ಟೋ ಜನರು ಈಗಿನ ಶಿಕ್ಷಣಕ್ರಮವನ್ನೇ ಹಳಿಯುತ್ತಿರುವರು. ವಿದ್ಯಾರ್ಥಿಗಳು ದುರ್ಬಲರೂ, ಚಟಿಯ ಬಲಿಗೆ ಬಿದ್ದವರೂ, ನಿರುದ್ಯೋಗಿಗಳೂ ಆಗಿ ಕರ್ತವ್ಯಹೀನರೂ, ಮುಖಹೀನರೂ ಆಗಹತ್ತಿರುವರು. ಈ ಪ್ರವಾಹವನ್ನು ತಡೆಯದೆ ಹೋದಲ್ಲಿ ದೇಶಕ್ಕೆ ಮಹದನರ್ಥವುಂಟಾಗುವದು. ಕಾರಣ ಈ ಬಗ್ಗೆ ದೇಶದಲ್ಲಿ ಅನೇಕ ಪ್ರಯತ್ನಗಳು ನಡೆದಿರುವವು.

ಸರಕಾರದವರು ಕೂಡ ಶಾರೀರಕ ಸುಧಾರಣೆಯ ಬಗ್ಗೆ ಒಂದು ಕಮಿಟಿಯನ್ನು ನಿಯಮಿಸಿರುವರು. ಆ ಕಮಿಟಿಯವರು ಯಾವ ಯೋಜನೆಯನ್ನು ಮಾಡಬೇಕೆಂಬ ವಿಷಯವನ್ನು ಕುರಿತು ಆಲೋಚಿಸತೊಡಗಿರುವರು. ಪುಣೆ ಮೊದಲಾದ ಪಟ್ಟಣಗಳಲ್ಲಿ ಶಾರೀರಕ ಸುಧಾರಣೆಯ ಸಂಘಗಳು ಅಸ್ತಿತ್ವದಲ್ಲಿ ಬಂದಿರುವವು ಸೂರ್ಯ ನಮಸ್ಕಾರ, ಶರ್ಯತ್ತು, ಸ್ಕೌಟಿನ ಆಟ ಮೊದಲಾದವನ್ನು ಯಾವತ್ತು ಶಾಲೆಗಳಲ್ಲಿ ಶಿಕ್ಷಣ ಕ್ರಮದಲ್ಲಿಯೇ ಸೇರಿಸಬೇಕೆಂದು ತಜ್ಞರ ಅಭಿಪ್ರಾಯ ಈ ಸೂರ್ಯನಮಸ್ಕಾರದ ಪದ್ಧತಿಯು ಪುಣೆ, ಖಾನದೇಶ ಮೊದಲಾದ ಜಿಲ್ಲೆಗಳ ಪ್ರಾಥಮಿಕ ಶಾಲೆಗಳಲ್ಲಿ ರೂಢಿಯಲ್ಲಿ ಬರಹತ್ತಿದೆ ನಮ್ಮ ಜಿಲ್ಲೆಯ ಕೆಲವೊಂದು ಶಾಲೆಗಳಲ್ಲಿ ಉತ್ಸಾಹಿಗಳಾದ ಶಿಕ್ಷಕರು ಸ್ವಪ್ರೇರಿತರಾಗಿ ಈ ಪದ್ಧತಿಯನ್ನು ರೂಢಿಯಲ್ಲಿ ತರಹತ್ತಿರುವರು. ಆದರೆ ಈ ಪದ್ಧತಿಯು ಸಾರ್ವತ್ರಿಕವಾಗಿ ಶಾಲೆಗಳಲ್ಲಿ ಬಳಿಕೆಯಲ್ಲಿ ಬಂದದ್ದಾದರೆ ಚಿಕ್ಕ ವಿದ್ಯಾರ್ಥಿಗಳ ಶಾರೀರಕ ಸುಧಾರಣೆಯ ವಿಷಯವು ಸುಲಭಸಾಧ್ಯವಾಗುವದು. ಇದಕ್ಕೆ ಯಾವ ವಿಶೇಷ ಹಣವಾಗಲೀ, ಶ್ರಮವಾಗಲೀ ತಗಲುವಂತೆ ಇಲ್ಲ ಆದ್ದರಿಂದ ಈದನ್ನು ಬಳಿಕೆಯಲ್ಲಿ ತರಲಿಕ್ಕೆ ಯಾವ ಅಭ್ಯಂತರವೂ ತೋರುವದಿಲ್ಲ. ಒಮ್ಮೆ ಈ ತರದ ವ್ಯಾಯಾಮಗಳಿಗೆ ಶಿಕ್ಷಕರೂ, ಪಾಲಕರೂ, ಚಾಲ

ಕರೂ, ಆಶ್ರಯಕೊಟ್ಟರೆ ಇದಕ್ಕೆ ಮಿಗಲಾದ ಬೇರೆ ಬೇರೆ ತರದ ಆಟಗಳಲ್ಲಿ ವಿದ್ಯಾರ್ಥಿಗಳಿಗೆ ಅಭಿರುಚಿಯು ಹುಟ್ಟಿ ಆರೋಗ್ಯ ರಕ್ಷಣೆಯ ಕಾರ್ಯವು ಧಾರಾಳವಾಗಿ ಸಾಗುವದು.

ಅನಾರೋಗ್ಯತೆಯ ಕಾರಣಗಳು:—

(೧) ವ್ಯಾಯಾಮದ ಅಭಾವ
(೨) ಅನಾರೋಗ್ಯಕರವಾದ ಆಹಾರ
(೩) ಅನಾರೋಗ್ಯಕರವಾದ ನಿವಾಸ
೪) ಅಳತೆಗೆಟ್ಟ ಊಟ
೫) ಅನಿಯಮಿತತನ
(೬) ಉಲ್ಲಾಸ ವೃತ್ತಿಯ ಅಭಾವ.

ಇವೇ ಮೊದಲಾದವು

ಇವುಗಳಲ್ಲಿ ಮೊದಲನೆಯ ದೋಷವನ್ನು ಸೂರ್ಯ ನ
ಯಿಂದ ಹೋಗಲಾಡಿಸುವದು ಸುಸಾಧ್ಯವದೆ.

ಸೂರ್ಯ ನಮಸ್ಕಾರವನ್ನು ಅಭ್ಯಾಸ ಮಾಡಲಿಕ್ಕೆ ಬಹಳ ಶ್ರಮವು ಹತ್ತುವದಿಲ್ಲ

ಸೂರ್ಯ ನಮಸ್ಕಾರವನ್ನು ಪ್ರತಿ ನಿತ್ಯ ಹಾಕಬೇಕು ಬಿಟ್ಟು ಬಿಟ್ಟು ಅನಿಯಮಿತತನದಿಂದ ನಡಿಸಿದರೆ ಇದರಿಂದ ಅಗತಕ್ಕ ಲಾಭವು ಆಗುವದಿಲ್ಲ. ಇದು ಸುಲಭವಾಗಿರುವದರಿಂದ ಚಿಕ್ಕ ಬಾಲಕರು ಬೇಸರಿಲ್ಲದೆ ಹಾಕಬಹುದು. ಕ್ಲಾಸಿನಲ್ಲಿ ಹುಡಗರಿಗೆ ಈ ವ್ಯಾಯಾಮವನ್ನು ಒಮ್ಮೆಲೆ ಮಾಡಿಸಿದರೆ, ಹುಡಗರು ಹುರುಪಿನಿಂದಲೂ, ಉಲ್ಲಾಸದಿಂದಲೂ, ಮಾಡುವರು. ಇದರಿಂದ ಶರೀರವು ಬಲಗೊಳ್ಳುವದಲ್ಲದೆ ಚಟವಟಿಕೆಯು ಸಹ ಪ್ರಾಪ್ತವಾಗುವದು ಪ್ರತಿ ನಿತ್ಯ ಬೆಳಿಗ್ಗೆ ಈ ಅಭ್ಯಾಸವನ್ನು ಇಡುವದು ಲೇಸು.

ಸೂರ್ಯ ನಮಸ್ಕಾರವನ್ನು ಹಾಕುವ ಬಗೆ —

॥ ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ।
ಪದ್ಭ್ಯಾಂ ಕರಾಭ್ಯಾಂ ಪ್ರಣಾಮೋಽಷ್ಟಾಂಗ ಈರಿತಃ ॥

ಎಂಬ ಶ್ಲೋಕದಿಂದ (೧) ಹಣೆ, (೨) ಎದೆ, (೩) ಅಂಗೈ, (೪) ತುದಿಕಾಲು, (೫) ಮೊಳಕಾಲು, (೬) ಕಣ್ಣು, (೭) ಮನಸ್ಸು, (೮) ಕಂಠ ಎಂಬ ಶರೀರದ ಎಂಟು ಅವಯವಗಳ ಕಾರ್ಯವನ್ನೊಳಕೊಂಡ ಪ್ರಣಾಮಕ್ಕೆ ಸಾಷ್ಟಾಂಗ ಪ್ರಣಾಮವೆನ್ನುವರು. ಇದರಂತೆ ಸೂರ್ಯ ನಮಸ್ಕಾರವನ್ನು ಪ್ರತಿನಿತ್ಯ ಸೂರ್ಯೋದಯ ಕಾಲಕ್ಕೆ ಹಾಕಬೇಕು ಅಂದರೆ ಪ್ರತಿನಿತ್ಯ ಬೆಳಿಗ್ಗೆ

೫॥ ಗಂಟಿಗೆ ಎದ್ದು ಮಲಮೂತ್ರ ವಿಸರ್ಜನೆಯಾದ ಕೂಡಲೆ ಸ್ನಾನಮಾಡಿ ಕೊಂಡು ಆಹಾರವಿಲ್ಲದೆ ನಿರ್ಮಲವಾದ ಬಟ್ಟೆಯನ್ನು ತೊಟ್ಟುಕೊಂಡು ಶುದ್ಧ ಜಪೆಯುಳ್ಳ ಮತ್ತು ಬರ್ರನೇ ಬಿಸುವ ಗಾಳಿಯಿಂದ ಮರೆಯಾದ ಸ್ಥಳದಲ್ಲಿ ಸೂರ್ಯ ನಮಸ್ಕಾರವನ್ನು ಹಾಕಬೇಕು

ಅವಸ್ಥೆ (೧):—೨ ಘೂಟ ಉದ್ದ ೨ ಘೂಟ ಅಗಲವಾದ ಒಂದು ಅರಿವೆಯ ತುಂಡನ್ನು ನೆಲದ ಮೇಲೆ ಹಾಸುವದು ಒಳ್ಳೇಯದು. ಇದರಿಂದ ತೊಟ್ಟ ಬಟ್ಟೆಗಳಾಗಲಿ ಮೈಯಾಗಲಿ ಹೊಲಸಾಗುವದಿಲ್ಲ ಸೂರ್ಯನ ಕಡೆಗೆ ಮೋರೆ ಮಾಡಿ ನಿಲ್ಲಬೇಕು. ಅಡಿಗಳನ್ನು ಜೋಡಿಸಬೇಕು. ತುದಿಬೆರಳುಗಳು ಮುಂದೆ ಹಾಸಿರುವ ಅರಿವೆಗೆ ಹತ್ತಿರಬೇಕು. ಅಂಗೈಗಳನ್ನು ಒಂದಕ್ಕೊಂದು ಕೂಡಿಸಿ ಎದೆಗೆ ಹಚ್ಚಿಹಿಡಿಯಬೇಕು. ಎದೆಯನ್ನು ಮುಂದೆ ಶಟಿಸಬೇಕು. ಮೈಯನ್ನೆಲ್ಲ ಬಿಗಿದು ಹಿಡಿಯಬೇಕು. ನೆಟ್ಟಗೆ ನೋಡುತ್ತ ದೀರ್ಘವಾದ ಉಸುರನ್ನು ಒಳಗೆ ತೆಗೆದುಕೊಳ್ಳಬೇಕು. (ಎದುರಿನಲ್ಲಿ ಸೂರ್ಯ ಇಷ್ಟ ದೇವತೆಯ ಅಥವಾ ಮಾತೃಭೂಮಿಯ ಚಿತ್ರವಿಟ್ಟುಕೊಳ್ಳುವದು ಲೇಸು.)

(೨) ಮೊಳಕಾಲು ಮಣಿಸದೆ ಬಾಗಬೇಕು ಅಂಗೈಗಳನ್ನು ಚಾಚಿ ನೆಲಕ್ಕೆ ಊರಬೇಕು. ಕಾಲಬೆರಳುಗಳಿಗೆ ಸಮಾಂತರವಾಗಿ ಇಡಬೇಕು ಮೂಗಿ ನಿಂದಾಗಲಿ ಹಣೆಯಿಂದಾಗಲಿ ಮೊಳಕಾಲನ್ನು ಮುಟ್ಟಬೇಕು.

(೩) ಬಲಗಾಲನ್ನು ಹಿಂದಕ್ಕೆ ಚಾಚಿತುದಿಬೆರಳಿನಿಂದ ಮತ್ತು ಮೊಳಕಾ ಲಿನಿಂದ ನೆಲವನ್ನು ಮುಟ್ಟಬೇಕು. ಆಗ ಎಡಗಾಲಿನ ಮೊಳಕಾಲು ಮುಂದಕ್ಕೆ ಮಣಿಯುವದು. ಕತ್ತನ್ನು ಮೇಲಕ್ಕೆತ್ತಿ ಸೂರ್ಯನನ್ನು ಅಥವಾ ಚಿತ್ರವನ್ನು ನೋಡುತ್ತ ಉಸುರನ್ನು ಒಳಕ್ಕೆ ಎಳೆದುಕೊಳ್ಳಬೇಕು.

(೪) ಎಡಗಾಲನ್ನು ಹಿಂದಕ್ಕೆ ಚಾಚಿ ಹೆಬ್ಬೆರಳುಗಳು ಮತ್ತು ಹದಡಗಳು ಹತ್ತುವಂತೆ ಇಡಬೇಕು. ಕೈಗಳನ್ನು ನೆಟ್ಟಗೆ ಶಟಿಸಬೇಕು. ಉಸುರನ್ನು ಬಿಗಿ ಹಿಡಿಯಬೇಕು.

(೫) ಮೊಳಕಾಲುಗಳನ್ನು ನೆಲಕ್ಕೆ ಊರಬೇಕು. ಗದ್ದವನ್ನು ಎದೆಯ ಮೆಲ್ಭಾಗಕ್ಕೆ ಒತ್ತುವಂತೆ ಹಿಡಿಯಲುಯತ್ನಿಸಬೇಕು. ಮತ್ತು ಎದೆಯನ್ನು ಹಣೆಯನ್ನು ಏಕ ಕಾಲಕ್ಕೆ ನೆಲಕ್ಕೆ ಹಚ್ಚಬೇಕು. ಹೊಟ್ಟೆಯನ್ನು ನೆಲಕ್ಕೆ ಮುಟ್ಟಿಸದೆ ಹಿಂದಕ್ಕೆ ಅಕಳಿಸಬೇಕು. ತಿಗವನ್ನು ಆದಷ್ಟು ಮೇಲಕ್ಕೆ ಎತ್ತಿ ಉಸುರನ್ನು ಹೊರಗೆ ಬಿಡಬೆಕು.

(೬) ಕೈಗಳನ್ನು ಶಟಿಸಬೇಕು. ಎದೆಯನ್ನು ಮುಂದಕ್ಕೆಉಬ್ಬಿ ಸಬೇಕು. ದೀರ್ಘವಾದ ಉಸುರನ್ನು ಒಳಗೆ ಎಳೆದುಕೊಳ್ಳಬೇಕು. ಮುಖವನ್ನು ಮೇಲಕ್ಕೆತ್ತಿ ಒಳಮಾಳಿಗೆಯನ್ನು ನೋಡಬೇಕು.

(೭) ನಾಲ್ಕನೆಯ ಅವಸ್ಥೆಗೆ ಪುನಃ ಬಂದು ಅಂಗಾಲುಗಳನ್ನು ನೆಲಕ್ಕೆ ಊರಿ ತಲೆಯನ್ನು ಕೆಳಗೆ ಬಾಗಿಸಿ ಹೊಟ್ಟೆಯನ್ನು ಸೈಲು ಬಿಡಬೇಕು. ಉಸುರನ್ನು ಬಿಗಿ ಹಿಡಿಯಬೇಕು.

೮ ಎಡಗಾಲನ್ನು ಮುಂದಕ್ಕೆ ತರಬೇಕು. ಅಂಗೈಗಳಿಗೆ ನೀಟಾಗಿ ತುದಿಬೆರಳುಗಳನ್ನು ಇಡಬೇಕು, ಎರಡನೆಯ ಮೊಳಕಾಲಿನಿಂದ ನೆಲವನ್ನು ಮುಟ್ಟಬೇಕು. ಮತ್ತು ಮೂರನೇ (೩) ಯ ಅವಸ್ಥೆಗೆ ಬರಬೇಕು. ಉಸುರನ್ನು ಬಿಗಿ ಹಿಡಿಯಬೇಕು.

(೯) ಎರಡನೆ (೨) ಯ ಅವಸ್ಥೆಗೆ ಬರಬೇಕು. ಉಸುರನ್ನು ತುಂಬಾ ಹೊರಗೆ ಬಿಡಬೇಕು.

(೧೦)—ಒಂದನೆ (೧) ಯ ಅವಸ್ಥೆಗೆ ಬರಬೇಕು. ಮೊಳಕಾಲುಗಳನ್ನು ನೆಟ್ಟಗೆ ಹಿಡಿದು ನೆಲದ ಮೆಲಿನ ಅಂಗೈಗಳನ್ನು ಏತ್ತಬೇಕು. ತುಂಬಾ ಉಸುರನ್ನು ಒಳಕ್ಕೆ ಜಗ್ಗಿ ಪುನಃ ಈ ಮೊದಲೆ ಮಾಡಿಂತೆ ನಮಸ್ಕಾರವನ್ನು ಹಾಕಬೇಕು. ಈ ಹತ್ತು ಅವಸ್ಥೆಗಳನ್ನು ಸರಯಾಗಿ ಹೊಂದಿದರೆ ೧ ನಮಸ್ಕಾರವಾಯಿತು.

ನಮಸ್ಕಾರಗಳನ್ನು ಹಾಕುವ ಪ್ರಮಾಣ.:—

೬-೭ ವರ್ಷದ ಚಿಕ್ಕ ಬಾಲಕರಿಗೆ ವಿಶೇಷ ವ್ಯಾಯಾಮವು ಬೇಡ. ಅವರು ೫-೧೦ ನಮಸ್ಕಾರಗಳನ್ನು ಹಾಕಿದರೆ ಸಾಕು. ೮-೧೦ ರ ವರೆಗಿನ ಹುಡಗರು ೨೦-೩೦ ನಮಸ್ಕಾರಗಳನ್ನು ಹಾಕತಕ್ಕದ್ದು. ೧೧-೧೨ ವರ್ಷದ ವಯಸ್ಸಿನ ಹುಡಗರು ೫೦ ರ ವರೆಗೆ ನಮಸ್ಕಾರ ಹಾಕತಕ್ಕದ್ದು. ೧೩-೧೬ ರ ವರೆಗಿನ ಹುಡಗರು ೫೦-೧೦೦ ರ ವರೆಗೆ ಹಾಕಬೇಕು. ೧೬ ರ ಮೇಲಿನ ವಿದ್ಯಾರ್ಥಿಗಳಾಗಲಿ, ಯುವಕರಾಗಲಿ ನಿಧಾನ ೨೦೦-೩೦೦ ನಮಸ್ಕಾರಗಳನ್ನು ಹಾಕಬೇಕು. ಈ ಪ್ರಮಾಣವನ್ನು ದಷ್ಟ ಮುಷ್ಟರಾದ ಸಾಮಾನ್ಯ ವಿದಾರ್ಥಿಗಳಿಗೆ ಹೇಳಿರುವದು. ಆದರೆ ದುರ್ಬಲರಾದ ಹುಡುಗರಿಗೆ ಕಡಿಮೆ ವ್ಯಾಯಾಮವನ್ನು ಮಾಡಿಸಬೇಕು. ಇದನ್ನು ಸರಿಯಾಗಿ ಲಕ್ಷವಲ್ಲಿಡಬೇಕು.

ಈ ಸೂರ್ಯ ನಮಸ್ಕಾರ ಪದ್ಧತಿಯ ಸಾಲೆಗಳಲ್ಲಿ ರೂಢಿಯಲ್ಲಿ ಬಂದರೆ ವೈಯಕ್ತಿತವಾಗಿ, ಆಯುರಾರೋಗ್ಯಗಳು ನೆಲೆಸುವದಲ್ಲದೆ ರಾಷ್ಟ್ರೀಯ ಶರೀರ ಸಂಪತ್ಸುಖಗಳು ಒದಗುವವು. ಜನರು ದೀರ್ಘಾಯುಷ್ಯವುಳ್ಳವರಾಗಿ ದಷ್ಟಮುಷ್ಟರಾಗಿ ದೇಶದ ಸಂಘಟಭಿವೃದ್ಧಿ ಮೊದಲಾದ ಕಾರ್ಯಗಳಲ್ಲಿ ಪರರಾಷ್ಟ್ರಗಳಿಗೆ ಹಿಂದಿಗೆಯದೆ ಜೀವನದ ಹೋರಾಟದಲ್ಲಿ ಮುಂದರೆಯುವರು.

ಸಂಪಾದಕರು.

ಗಂಡುಮಕ್ಕಳ ಮುಲ್ಕೀ (ವ್ಹರ್ನಾಕ್ಯುಲರ ಫಾಯನಲ್) ಪರೀಕ್ಷೆಯು.

ದಕ್ಷಿಣಭಾಗ

೧೯೩೦ನೇ ಎಪ್ರೀಲ್ ತಿಂಗಳಲ್ಲಿ ಆಗುವ ಗಂಡುಮಕ್ಕಳ ಮುಲ್ಕೀ ಪರಿಕ್ಷೆಗೆ ಕೆಳಗೆ ಕಾಣಿಸಿದ ಪುಸ್ತಕಗಳು ನಿಯಮಿಸಲ್ಪಟ್ಟವೆ:—

ಕನ್ನಡು.

ಮೊದಲನೆಯ ವಿಷಯ—

[ಅ] ಗದ್ಯ—ಡಿಪಾರ್ಟಮೆಂಟಿನ ಕ್ರಮಿಕ ೭ನೆಯ ಪುಸ್ತಕ[೧೯೨೯ ನೇ ಇಶ್ವಿಯ ಆವೃತ್ತಿ].

[ಬ] ಪದ್ಯ—ಕ್ರಮಿಕ ೭ನೆಯ ಪುಸ್ತಕದ ೩, ೭, ೧೧, ೧೫, ೧೯, ೨೪, ೨೮, ಪಾಠಗಳಲ್ಲಿ ಬಂದ ಕವಿತೆಗಳು.

ಮರಾಠಿ.

ಮೊದಲನೆಯ ವಿಷಯ—

[ಅ] ಗದ್ಯ—ಕ್ರಮಿಕ ೭ನೆಯ ಪುಸ್ತಕ [೧೯೨೮ನೆಯ ಆವೃತ್ತಿ] ಪೂರ್ಣ.

[ಬ] ಪದ್ಯ— ಕ್ರಮಿಕ ೭ನೆಯ ಪುಸ್ತಕ [೧೯೨೮ನೆಯ ಆವೃತ್ತಿ]ದ ೭, ೧೧, ೧೫, ೧೯, ೨೪, ೨೪, ೩೧, ೩೫, ಈ ಪಾಠಗಳಲ್ಲಿ ಬಂದ ಕವಿತೆಗಳು.

ಊರ್ದು—ವ್ಹರ್ನಾಕ್ಯುಲರ

ಮೊದಲನೆಯ ವಿಷಯ ಉರ್ದು—

ಗದ್ಯ—ಕ್ರಮಿಕ ೭ನೆಯ ಪುಸ್ತಕ [೧೯೨೮ನೆಯ ೨ನೆಯ ಆವೃತ್ತಿ] ದ ಎಲ್ಲ ಗದ್ಯ ಪಾಠಗಳು.

ಪದ್ಯ—ಕ್ರಮಿಕ ೭ನೆಯ ಪುಸ್ತಕದ [೧೯೨೮ನೆಯ ೨ನೆಯ ಆವೃತ್ತಿ] ೩, ೯, ೨೦, ೨೩, ೨೯, ೩೫, ಈ ಪಾಠಗಳಲ್ಲಿ ಬಂದ ಕವಿತೆಗಳನ್ನು ಅನ್ನುವದು, ಮತ್ತು ಅರ್ಥ ಹೇಳುವದು.

೭ನೆ ವಿಷಯ—ಕನ್ನಡು. [ಸ್ವೇಚ್ಛಾವಿಷಯ] ಕ್ರಮಿಕ ೫ನೆಯ ಪುಸ್ತಕದ [೧೯೨೪] ೩, ೫, ೬, ೮, ೧೧, ೧೩, ೧೬, ೨೨,

೨೫, ೨೬, ೩೨ ೩೫, ೩೭, ೪೧, ೪೫, ೪೦, ೪೧, ೪೧, ೪೪, ಮತ್ತು ೪೯, [ಅಂತು ೨೦] ಪಾಠಗಳು.

೬ನೆಯ ವಿಷಯ—ಮರಾಠಿ[ಸ್ವೀಚ್ಛಾ ವಿಷಯ] ಕ್ರಮಿಕ ೫ನೆಯ ಪುಸ್ತಕ [೧೯೨೭]ದ ೨, ೩, ೪, ೬, ೮, ೯, ೧೩, ೧೪, ೧೫, ೧೬, ೧೮, ೨೧, ೨೧, ೨೫, ೨೭, ೨೯, ೩೨, ೩೪, ೩೮, ೪೦, ೪೩, ಮತ್ತು ೪೪ [ಅಂತು ೨೦] ಪಾಠಗಳು.

ಪ್ಹಿನಲ್ ಕೋರ್ಸ್ ಲ —ಊರ್ದು.

ಮೊದಲನೆಯ ವಿಷಯ ಕನ್ನಡ—

[ಅ] ಗದ್ಯ—ಕ್ರಮಿಕ ೭ನೆಯ ಪುಸ್ತಕ [೧೯೨೯] ದ ೨, ೫, ೮, ೧೦, ೧೮, ೨೦, ೨೧, ೨೩; ೨೫, ೩೦, ೩೧, ೩೮, ೩೯, ೪೨, ೪೬, ೪೭, ೪೯, ೫೦, ೫೬, ೫೮, ೫೯, ೬೧, ೬೩, ೬೫, ೬೭, ೭೦, ೭೨, ೭೩, ೭೬, ೭೮, ೭೯, ೮೨, ೮೫, ೮೭, ೮೮, ೮೯, ಮತ್ತು ೯೬ ಈ ಪಾಠಗಳು.

[ಬ] ಪದ್ಯ—ಕ್ರಮಿಕ ಪುಸ್ತಕ [೧೯೨೯]ದ ೧೫, ೨೬, ೩೬, ೪೦, ೪೪, ಈ ಪಾಠಗಳಲ್ಲಿ ಬಂದ ಕವಿತೆಗಳ ಅರ್ಥ ಮತ್ತು ಅನ್ವಯ.

ಮೊದಲನೆಯ ವಿಷಯ ಮರಾಠಿ —

[ಅ] —ಕ್ರಮಿಕ ೭ನೆಯ ಪುಸ್ತಕ [೧೯೨೮] ದ ೧, ೪, ೬, ೮, ೧೨, ೧೬, ೧೮, ೨೨, ೨೬, ೨೯, ೩೧, ೩೨, ೩೮, ೪೧, ೪೪, ೪೭, ೪೯, ೫೦, ೫೨, ೫೪, ೫೫, ೫೬, ೫೮, ೬೦, ೬೨, ೬೪, ೬೬, ೬೮, ೭೦, ೭೨, ೭೪, ೭೬, ಮತ್ತು ೭೮ ಈ ಪಾಠಗಳು.

[ಬ] —ಕ್ರಮಿಕ ೭ನೆಯ ಪುಸ್ತಕದ ೭, ೨೪, ೪೦, ೫೧, ಮತ್ತು ೫೩, ಈ ಪಾಠಗಳಲ್ಲಿಯ ಕವಿತೆಗಳು.

೬ನೆಯ ವಿಷಯ—ಊರ್ದು

ಗದ್ಯ— ಕ್ರಮಿಕ ೭ನೆಯ ಪುಸ್ತಕ [೧೯೨೮ನೆ ಯ ೨ನೆಯ ಆವೃತ್ತಿ] ದ ೧, ೪, ೫, ೭, ೧೧, ೧೨, ೧೪, ೫, ೧೯, ೨೧, ೨೨, ೨೪ ೨೭, ೩೨, ೩೪, ೩೫, ಈ ಪಾಠಗಳು.

ಪದ್ಯ—ಕ್ರಮಿಕ ೭ನೆ ಯ ಪುಸ್ತಕ [೧೯೨೮ನೆ ಯ ೨ನೆ ಯ ಆವೃತ್ತಿ] ದ ೩, ೬, ೮, ೧೦, ೧೨, ೨೩, ೨೬, ಈ ಪಾಠಗಳಲ್ಲಿಯ ಕವಿತೆಗಳ ಅರ್ಥ ಮತ್ತು ಅನ್ವಯ.

ಧಾರವಾಡ,
೨೬-೧-೨೯

(ಸಹಿ) J. S. KADRI.
ಎ. ಇನ್ಸಪೆಕ್ಟರ, ದ. ಭಾ.

ಗಂಡುಮಕ್ಕಳ ಮುಲ್ಕೀ ಪರೀಕ್ಷೆ—ದಕ್ಷಿಣ ಭಾಗ.

ಕೆಳಗೆ ಕಾಣಿಸಿದ ಡಿಪಾರ್ಟಮೆಂಟಿನ ಉರ್ದು ೭ನೆಯ ಪುಸ್ತಕ [೧೧ನೆಯ ಮತ್ತು ೨ನೆಯ ಆವೃತ್ತಿ] ದಲ್ಲಿಯ ಪಾಠಗಳು ಈ ಆಫೀಸಿನ ೫ನೆಯ ಜೂನ ೧೯೩೮ನೆಯ ಇಸ್ವಿಯ ನೋಟೀಸಿನ ಪ್ರಕಾರ ೧೯೩೯ನೆಯ ಎಪ್ರೀಲ ತಿಂಗಳಲ್ಲಿ ಜರುಗ ತಕ್ಕ ಮುಲ್ಕೀ ಪರೀಕ್ಷೆಗೆ ಗೊತ್ತು ಮಾಡಿದ ಡಿಪಾರ್ಟಮೆಂಟಿನ ಉರ್ದು ೭ನೆಯ ಪುಸ್ತಕದಲ್ಲಿಯ ಗದ್ಯಪದ್ಯಗಳಿಗೆ ಸರಿ ಹೊಂದುವ

ಉರ್ದು—ಹೈಸ್ಕೂಲ್.

ಮೊದಲನೆಯ ವಿಷಯ—ಉರ್ದು—

ಗದ್ಯ—ಡಿಪಾರ್ಟಮೆಂಟಿನ ಉರ್ದು ೭ನೆಯ ಪುಸ್ತಕ [೧೯೩೮ನೆಯ ೧೧ನೆಯ ಮತ್ತು ೨ನೆಯ ಆವೃತ್ತಿ] ದಲ್ಲಿಯ ಎಲ್ಲ ಗದ್ಯ ಪಾಠಗಳು.

ಪದ್ಯ—ಡಿಪಾರ್ಟಮೆಂಟಿನ [೧೯೩೮ನೆಯ ೧೧ನೆಯ ಮತ್ತು ೨ನೆಯ ಆವೃತ್ತಿ] ೭ನೆಯ ಪುಸ್ತಕದಲ್ಲಿಯ ೩, ೯, ೧೦, ೨೦, ೨೩, ೨೯, ಮತ್ತು ೩೫ ಈ ಪಾಠಗಳಲ್ಲಿ ಬಂದ ಕವಿತೆಗಳ ಅರ್ಥ ಮತ್ತು ಅನ್ವಯವು.

ಹೈಸ್ಕೂಲ—ಉರ್ದು.

೬ನೆಯ ವಿಷಯ—ಉರ್ದು—

ಗದ್ಯ—ಡಿಪಾರ್ಟಮೆಂಟಿನ ಉರ್ದು ೭ನೆಯ ಪುಸ್ತಕ [೧೯೩೮ನೆಯ ೨ನೆಯ ಆವೃತ್ತಿ] ದ ೧, ೪, ೫, ೬, ೧೧, ೧೨, ೧೪, ೧೫, ೧೯, ೨೧, ೨೨, ೨೪, ೨೫, ೨೭, ೨೮ ಮತ್ತು ೩೩ ಈ ಪಾಠಗಳು.

ಪದ್ಯ—ಡಿಪಾರ್ಟಮೆಂಟಿನ ಉರ್ದು ೭ನೆಯ ಪುಸ್ತಕ [೧೯೩೮ನೆಯ ೨ನೆಯ ಆವೃತ್ತಿ] ದ ೩, ೬, ೧೩, ೧೬, ೧೮, ೨೩ ಮತ್ತು ೨೬ ಈ ಪಾಠಗಳಲ್ಲಿ ಬಂದ ಕವಿತೆಗಳನ್ನು ಅನ್ವಯವು ಮತ್ತು ಅರ್ಥ ಹೇಳುವದು.

ಎಜ್ಯುಕೇಶನಲ್ ಇನ್ಸಪೆಕ್ಟರ ದ. ಭಾ.
ಧಾರವಾಡ, ತಾ॥ ೩೦—೧—೩೯.

[ಸಹಿ] J. S. KADRI,
ಎ. ಇನ್ಸಪೆಕ್ಟರ, ದ. ಭಾ.

ಗಂಡುಮಕ್ಕಳ ಮುಲ್ಕೀ (ವ್ಹರ್ನ್ಯಾಕ್ಯೂಲರ ಫಾಯನಲ್) ಪರೀಕ್ಷೆಯು—ದಕ್ಷಿಣ ಭಾಗ.

೧ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೫೦ನೆಯ ಸಪ್ಟಂಬರ ೧೯೩೫ನೆಯ ಸಂಚಿಕೆಯ ೧ನೆಯ ಭಾಗದ ೧೯೩೫–೧೯೩೦ ಪುಟಗಳ್ಳಲ್ಲಿ ಮುಂಬಯಿ ಸರಕಾರದ ವಿದ್ಯಾಖಾತೆಯ ೧೯ ಸಪ್ಟಂಬರ ೧೯೩೫ನೆಯ ನಂ. ೩೫೫೦ನೆಯ ಪ್ರಕಟನೆಯ ಪ್ರಕಾರ ಗಂಡುಮಕ್ಕಳ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯು ಅನೆಯ ಎಪ್ರೀಲದಿಂದ ಮುಂದಿ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಜರುಗುವದು :—

೧. ಧಾರವಾಡ; ೨. ಬೆಳಗಾವ; ೩. ವಿಜಾಪೂರ; ೪ ಕಾರವಾರ; ೫. ಕೊಲ್ಹಾಪೂರ; ೬. ಹುಬ್ಬಳ್ಳಿ (ಧಾರವಾಡ ಜಿಲ್ಲೆಯ ಉರ್ದು ಉಮೇದವಾರರ ಬಗ್ಗೆ).

೨. ಪ್ರತಿಯೊಂದು ಸ್ಥಳದಲ್ಲಿ ಈ ಪರೀಕ್ಷೆಯು ಪರೀಕ್ಷಾ ಕಮಿಟಿಯಿಂದ ನಡಿಸಲ್ಪಡುವದು? ಮತ್ತು ಧಾರವಾಡ, ಕಾರವಾರ, ಬೆಳಗಾವ, ವಿಜಾಪೂರ ಮತ್ತು ಹುಬ್ಬಳ್ಳಿ ಇಲ್ಲಿಯ ಸರಕಾರೀ ಹಾಯಸ್ಕೂಲಗಳ ಹೆಡ್ ಮಾಸ್ತರರೇ ಈ ಕಮಿಟಿಗಳ ಅಧ್ಯಕ್ಷರಿರುವರು. ಕೊಲ್ಹಾಪೂರದ ಎಜ್ಯುಕೇಶನ್ನ ಇನಸ್ಪೆಕ್ಟರರು ಕೊಲ್ಹಾಪೂರ ಸೆಂಟರಿನ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವವರ ಅರ್ಜಿಗಳು ಆಯಾಯ ಕಮಿಟಿಯ ಅಧ್ಯಕ್ಷರ ಕಡೆಗೆ ೧ನೆಯ ಮಾರ್ಚ ೧೯೩೬ನೆಯ ದಿವಸದೊಳಗಾಗಿ ಮುಟ್ಟುವಂತೆ ಕಳಿಸಿ ಕೊಡಬೇಕು. ಆ ಮೇಲೆ ಬಂದ ಅರ್ಜಿಗಳನ್ನು ಹಿಡಿಯಲಾಗುವದಿಲ್ಲ. ಪ್ರತಿಯೊಬ್ಬ ಉಮೇದವಾರನ ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಮತ್ತು ಸಾಲೆಯ ಹೆಸರು (ಇದ್ದ ಪಕ್ಷದಲ್ಲಿ) ಕಾಣಿಸಲ್ಪಡಬೇಕು.

ಅರ್ಜಿಯ ನಮೂನೆಗಳು ಅಧ್ಯಕ್ಷರ ಬಳಿಯಲ್ಲಿ ಫೀ ಇಲ್ಲದೆ ಸಿಗುವವು.

೪. ಉಮೇದವಾರರು ೧ನೆಯ ಎಪ್ರೀಲ ೧೯೩೬ನೆಯ ದಿವಸ ೧೫ ವರ್ಷ ಪೂರ್ಣ ವಯಸ್ಸಿನ ಒಳಗಿರಬೇಕು. ಮತ್ತು ತಾವು ಪರೀಕ್ಷೆಗೆ ಕೂಡ್ರುವ ಜಿಲ್ಹೆಯಲ್ಲಿ ನಿದಾನ ೩ರು ತಿಂಗಳ ವಾಸಮಾಡಿರತಕ್ಕದ್ದು ಈ ಬಗ್ಗೆ ಉಮೇದವಾರರು ಯಾವನೊಂದು ಮಂಜೂರಿ ಪಡೆದ ಸಾಲೆಯ ಹೆಡ್ ಮಾಸ್ತರರ ಸರ್ಟಿಫಿಕೇಟ ಆಗಲಿ ಸಾಲೆಗೆ ಹೋಗದೆ ಇದ್ದ ಉಮೇದವಾರರು ಒಬ್ಬ ಸುಪ್ರಸಿದ್ಧ ಗೃಹಸ್ಥರ ಅಂದರೆ ಲೋಕಲ್‌ಬೋರ್ಡಿನ ಡಾಯರೆಕ್ಟರಿಯಲ್ಲಿ ಹೆಸರು ನಮೂದ ಇದ್ದ ಸಾಲೆಯ ಮಾಸ್ತರರು ಮುನಸೀಪಾಲಿಟಿಯ ಸರಕಾರಿ ಶಿಕ್ಷಕರು ಅಥವಾ ಪಾಟೀಲರಿಗಿಂತ ಕಡಿಮೆ ದರ್ಜೆ ಇಲ್ಲದ ಸರಕಾರಿ ನೌಕರ ಇವರ ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೫. ಧಾರವಾಡ ಮತ್ತು ಕಾರವಾರ ಈ ಜಿಲ್ಹೆಗಳ ಮಂಜೂರ ಆದ ದೇಶಭಾಷೆಯು ಕನ್ನಡ ಇರುವದು ಬೆಳಗಾವ ಮತ್ತು ವಿಜಾಪೂರ ದೇಶಭಾಷೆಗಳು ಕನ್ನಡ ಮತ್ತು ಮರಾಠಿ ಮತ್ತು ಕೊಲ್ಹಾಪೂರದ ಭಾಷೆಯು ಮರಾಠಿ.

ಧಾರವಾಡ ಮತ್ತು ಕಾರವಾರ ಜಿಲ್ಲೆಯ ಉಮೇದವಾರರು ಮುರಾತಿಯಲ್ಲಿ ಪರೀಕ್ಷೆ ಕೊಡಬೇಕೆಂದು ಬಯಿಸಿದರೆ ಬೆಳಗಾವಿ ಸೆಂಟರಿಗೆ ಪರೀಕ್ಷೆಕ್ಕೆ ಕೂಡ್ರಬೇಕು.

೬. ಪರೀಕ್ಷೆಗೆ ಹಚ್ಚಿದ ಪುಸ್ತಕಗಳು ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟಿನ ೨ನೆಯ ಭಾಗದ ೯ನೆಯ ಫೆಬ್ರುವರಿ ೧೯೨೫ನೆಯ ನಂಬಿಕೆಯ ೨೬ನೆಯ ಪುಟದಲ್ಲಿ ಮತ್ತು ೫ನೆಯ ಜೂನ ೧೯೨೫ನೆಯ ಸಂಬಿಕೆಯ ೧೦೭೨ನೆಯ ಪುಟದಲ್ಲಿ ಸ್ಪುಟವಾಗಿರುವವು.

೭ ಹೆಚ್ಚಿನ ಮಾಹಿತಿಯು—ಫೀ ಮುಂತಾದ್ದು—ಮತ್ತು ಪರೀಕ್ಷೆಯ ವಿಷಯಗಳ ಸೂರ್ಣ ಮಾಹಿತಿಯು ಮೇಲೆ ಹೇಳಿದ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟಿನಲ್ಲಿ ದೊರೆಯುವವು.

೮ ಕಲಾದಗಿ ತಾಲೂಕಿನ ಮತ್ತು ಬನವಾಸಿಯ (ಶಿರ್ಸಿ ತಾಲೂಕ), ಮತ್ತು ಸಾಂಗಲಿ ಸಂಸ್ಥಾನದ ಕುಚ್ಚಿ ತಾಲೂಕಿನ ಉಮೇದವಾರರು ಅನುಕ್ರಮವಾಗಿ ಧಾರವಾಡ ಮತ್ತು ಸಾತಾರಾ ಸೆಂಟರಿನಲ್ಲಿ ಕೂಡ್ರಬಹುದು. ಗುಂಡಳ ತಾಲೂಕಿನ (ಜಾಂಥ ಸಂಸ್ಥಾನ) ಉಮೇದವಾರರು ವಿಜಾಪೂರ ಸೆಂಟರಿನಲ್ಲಿ ಕೂಡ್ರಬಹುದು.

೯. ಅಗ್ರಿಕಲ್ಚರಲ್ ಬಾಯಾಸಜ ವಿಷಯವನ್ನು ತೆಗೆದುಕೊಂಡ ಉಮೇದವಾರರ ಪರೀಕ್ಷೆಯು ಅದೇ ಕಾಲಕ್ಕೆ ಧಾರವಾಡ, ಕಾರವಾರ, ಬೆಳಗಾವ ಮತ್ತು ವಿಜಾಪೂರ ಈ ಸ್ಥಳಗಳಲ್ಲಿ ಜರುಗುವದು. (ಗವ್ಹರ್ನಮೆಂಟ ರಿಜಲ್ಯೂಶನ್ ಎಜ್ಯುಕೇಶನ್ ಡಿಪಾರ್ಟಮೆಂಟ ನಂಬರ ೧೧೪೪; ತಾರೀಖು ೬—೩—೧೯೨೫).

ಧಾರವಾಡ.
ತಾ॥ ೬—೧—೧೯೨೯. }

J S KADRI,
ಎಜ್ಯುಕೇಶನ್ನ ಇನ್ಸಪೆಕ್ಟರ, ದಕ್ಷಿಣ ಭಾಗ

ಸರಕ್ಯೂಲರ ನಂಬರ ೧೬,

ಮೆ॥ ಎ ಇ ಸಾ. ಸ. ಡಿ. ಧಾರವಾಡ ಇವರ ಪತ್ರ.

ನಂಬರ ೪೭—ಪಿ.—ಖರ್ಚಿ ತಾ. ೧೯—೧೧—೨೯ನೆಯದರನ್ವಯ ಜಿಲ್ಲೆಯೊಳಗಿನ ಯಾವತ್ತೂ ಲೋ. ಬೋ. ಮತ್ತು ನಾನ್ ಲೋಕಲ್ ಅಥಾರಿಟಿ ಮುಸೀಪಾಲಿಟಿ ಉರ್ದು ಶಾಳಾ ಮಾಸ್ತರ ಮತ್ತು ಮಿಸ್ಟ್ರೆಸ್‌ರಿಗೆ ತಿಳಿಸುವದೇನಂದರೆ ಮೆಸರ್ಸ ಫಿರೋಜುದ್ದೀನ ಆ್ಯಂಡ ಸನ್ ಲಾಹೋರ ಇವರಿಂದ ಪ್ರಸಿದ್ಧಿಸಲ್ಪಟ್ಟ ಉರ್ದು ಟೆಕ್ಸ್ಟ ಬುಕ್ಕುಗಳನ್ನು ಈ ವರ್ಷದಿಂದ ಉಪಯೋಗಿಸತಕ್ಕದ್ದು. ತಿಳಿಯುವದು.

ಚೇರಮನ್.

ಸರಕ್ಯೂಲರ ನಂಬರು ೨೩.

ಯಾವತ್ತೂ ಲೋಕಲ್ ಬೋರ್ಡ ಮತ್ತು ನಾನ್ ಲೋಕಲ್ ಅಥಾರಿಟಿ ಮುನಸೀವಾಲಿಟಿ ಶಾಲೆಗಳ ಮಾಸ್ತರ ಮತ್ತು ಮಿಸ್ಟ್ರೆಸ್ ಜನರಿಗೆ:—

ಈ ಸರಕ್ಯೂಲರ ಮೂಲಕ ತಿಳಿಸುವದೇನಂದರೆ, ಯಾವತ್ತೂ ಮಾಸ್ತರ ಮತ್ತು ಮಿಸ್ಟ್ರೆಸ್ ಜನರು ತಾವು ಯಾವದೇ ಒಂದು ಅರ್ಜಿಯನ್ನಾಗಲಿ, ರಿಪೋರ್ಟನ್ನಾಗಲಿ ಅಥವಾ ಕಿರುಕಳ ರಜದ ಫಾರ್ಮನ್ನಾಗಲಿ ಹುಜೂರ ಆಫೀಸಿಗೆ ಕಳಿಸುವದಾದಲ್ಲಿ ತಪ್ಪದಲೆ ಯಾವಾಗಲೂ ತಮ್ಮ ರಿ। ನ ಮಾರ್ಜನದಲ್ಲಿ ಕೆಂಪು ಮಸಿಯಿಂದ ಮುಖ್ಯ ವಿಷಯ, ಶಾಲೆಯ ಹೆಸರು ಮತ್ತು ತಾಲೂಕ ಸ್ಪಷ್ಟವಾಗಿ ಬರೆಯಬೇಕು. ಇದಕ್ಕೆ ತಪ್ಪಿದಲ್ಲಿ ಅಂಥ ರಿ। ನ ವಿತಾರವಾಗಲಿಕ್ಕಿಲ್ಲ. ತಿಳಿಯುವದು.

ಚೇರಮನ್.

ನೋಟೀಸು.

ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣ ಭಾಗ ಇವರ ಅಪ್ಪಣೆಯ ಮೇರೆಗೆ ತಿಳಿಸುವದೇನಂದರೆ:—

೧೯೨೯ನೆಯ ಇಸವಿಯ ಜೂನ ತಿಂಗಳಲ್ಲಿ ಪ್ರಾರಂಭವಾಗುವ ಟ್ರೇನಿಂಗ ಸ್ಕೂಲಿನ ಮೊದಲನೆಯ ವರ್ಷದ ವರ್ಗಕ್ಕೆ ವಿದ್ಯಾರ್ಥಿಗಳನ್ನು ಆರಿಸುವದರ ಸಲುವಾಗಿ ಜೂನ ತಿಂಗಳ ೫ನೆಯ ತಾರೀಖಿನ ನಂತರ ಪ್ರವೇಶ ಪರೀಕ್ಷೆಯಾಗುವದು. ಆರಿಸಿದ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪಾಗಲಿ, ನೌಕರಿಯನ್ನು ಕೊಡುವ ಜವಾಬದಾರಿಯಾಗಲಿ ಇರುವದಿಲ್ಲ. ಹೀಗೆ ಪ್ರವೇಶ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ಬರುವ ಎಪ್ರೀಲ ತಿಂಗಳಲ್ಲಿ ನಮ್ಮ ಕಡೆಗೆ ಎಪ್ರೀಲ ತಿಂಗಳ ೧೦ನೆಯ ತಾರೀಖಿನೊಳಗಾಗಿ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು. ಉಮೇದವಾರರು ೧೮ರಿಂದ ೨೩ ವರ್ಷದ ಒಳಗಿನವರು ಇರತಕ್ಕದ್ದು. ಅರ್ಜಿಯಲ್ಲಿ ಪೂರ್ಣ ಹೆಸರು, ಮುಲ್ಕೀ ಪರೀಕ್ಷೆಯಲ್ಲಿ ಪಾಸಾದ ಇಸವಿ, ದೊರಕಿಸಿದ ಗುಣಗಳು, ಜನ್ಮ ತಾರೀಖು, ಜಾತಿ ಇವುಗಳನ್ನೂ ಪೋಷ್ಟಿನ ಸಂಪೂರ್ಣ ಪತ್ತೆಯನ್ನೂ ಸ್ಪಷ್ಟವಾಗಿ ಬರೆದಿರಬೇಕು. ಪರೀಕ್ಷೆಗೆ ಬರುವಾಗ್ಗೆ ವ್ಹ. ಫಾ ಪರೀಕ್ಷೆಯ ಸರಟೀಫಿಕೇಟು ತರತಕ್ಕದ್ದು. ಪ್ರವೇಶ ಪರೀಕ್ಷೆಯು ಗಣಿತ, ನಿಬಂಧ, ಕನ್ನಡ ಈ ವಿಷಯಗಳಲ್ಲಿ ತೆಗೆದುಕೊಳ್ಳಲ್ಪಡುವದು. ೭ನೆಯ ಪುಸ್ತಕದೊಳಗಿನ ಎರಡೂ ಭಾಗಗಳೊಳಗಿನ ಕವಿತೆಯ ಪಾಠಗಳನ್ನು ಓದಿಕೊಳ್ಳತಕ್ಕದ್ದು.

ತಾ।। ೨೧—೨—೨೯.
ಟ್ರೇನಿಂಗ ಸ್ಕೂಲ, ಧಾರವಾಡ.

(Sd.) H. G. DESHPANDE,
Head Master

REGD. NO. B. 2183.

DHARWAR DISTRICT SCHOOL BOARD PATRIKE.

DHARWAR.

ವಾರ್ಷಿಕ ವರ್ಗಣಿ ೨—೦—೦
ಬಿಡಿ ಸಂಚಿಕೆ ೦—೪—೦

ಮುದ್ರಾಪಮುದ್ರಣ! ಸುಲಭದ

ತೋಂಟದಯ್ಯ ಮುದ್ರಾಲಯ

ಕಲ್ಲೆ, ಧಾರವಾಡ.

—:೦:—

ಈ ಮುದ್ರಾಲಯವನ್ನು ಕರ್ನಾಟಕ
ಲಿಂಗಾಯತ ವಿದ್ಯಾಭಿವೃದ್ಧಿ ಸೊಸೈಟಿ
ಟಿಯವರು ಧಾರವಾಡದಲ್ಲಿ ನಡಿಸಿ
ಸುತ್ತಿರುವರು ಈ ಮುದ್ರಾಲಯದಲ್ಲಿ
ಕನ್ನಡ, ಇಂಗ್ಲೀಷ, ಮತ್ತು ಮರಾ
ಭಾಷೆಗಳಲ್ಲಿ ಎಲ್ಲ ಬಗೆಯ ಮುದ್ರಣವ
ಅಚ್ಚು ಕಟ್ಟಾಗಿಯೂ, ಅಂದವಾಗಿಯೂ
ಸುಲಭದರದಿಂದಲೂ ಪದವೀಧರರ ಮೇ
ಲ್ವಿಚಾರಣೆಯಲ್ಲಿ ಸಕಾಲದಲ್ಲಿ ನೆರವೇ
ಸಲ್ಪಡುವದು. ಇದರ ಲಾಭವು ವಿದ್ಯಾ
ಭಿವೃದ್ಧಿಯ ಪವಿತ್ರ ಕಾರ್ಯಕ್ಕೆ ಸಲ್ಲ
ವದರಿಂದ ವಿದ್ಯಾಪಕ್ಷಪಾತಿಗಳಾದ ಗ್ರಾ
ಹಕರು ಆಶ್ರಯವನ್ನು ಕೊಡಬೇಕಾ
ಕೋರಿಕೆ.

ಇಲ್ಲಿ ಕಡ್ಡಾಡ, ಶಾಲೆಗಳ, ೨-೩-೪
ಇಯತ್ತೆಗಳ ಕಾಪಿ ಪುಸ್ತಕಗಳು, ಎಸ್ಸ
ಸಾಯಿಜ ಬುಕ್ಕುಗಳು, ಮತ್ತು ನೋ
ಬುಕ್ಕುಗಳು ಸುಲಭದರದಿಂದ ಸ
ತ್ತವೆ.

ಎಚ್. ಎಫ್. ಕಟ್ಟೀಮನಿ, ಪ್ರ.

ಪ್ರಿಯ್ಯಾನೇಜರ.
3 MAR
15 R

To,
The Head Master,
Kanarese School,
AT
—AL

Telegraph.
T. Telegraph